# ಪರ್ಯೂಷಣಾಮೃತ

## (ದಶಲಕ್ಷಣ ಪರ್ವ)



ಉತ್ತಮ ಕ್ಷಮಾಧರ್ಮ

ಉತ್ತಮ ಮಾರ್ದವ ಧರ್ಮ

ಉತ್ತಮ ಆರ್ಜವ ಧರ್ಮ

ಉತ್ತಮ ಶೌಚ ಧರ್ಮ

ಉತ್ತಮ ಸತ್ಯ ಧರ್ಮ

ಉತ್ತಮ ಸಂಯಮ ಧರ್ಮ

ಉತ್ತಮ ತಪ ಧರ್ಮ

ಉತ್ತಮ ತ್ಯಾಗ ಧರ್ಮ

ಉತ್ತಮ ಆಕಿಂಚನ್ಯ ಧರ್ಮ

ಉತ್ತಮ ಬ್ರಹ್ಮಚರ್ಯ ಧರ್ಮ



ಮುನಿಶ್ರೀ 108 ಆರ್ಜವಸಾಗರ ಮುನಿಮಹಾರಾಜರು

# ಪರ್ಯೂಷಣಾಮೃತ

**ಪ್ರವಚನಕಾರರು**

ಮೂಲ ಹಿಂದಿ

**ಪ.ಪೂ.ಮುನಿಶ್ರೀ 108 ಆರ್ಜವಸಾಗರ ಮಹಾರಾಜರು**

**ಸಂಪಾದಕರು**

**ಡಾ॥ ಅಲ್ಪನಾ ಅಶೋಕ ಜೈನ ಮೋದಿ, ಗ್ವಾಲಿಯರ**

**ಕನ್ನಡ ಅನುವಾದ**

**ಪ್ರೊ.ಜೀವಂಧರಕುಮಾರ ಕೆ. ಹೋತಪೇಟಿ, ಶ್ರವಣಬೆಳಗೊಳ**

**ಪ್ರಕಾಶನ**

ಶ್ರೀ ಸಮ್ಮೇದ ಪ್ರಕಾಶನ

# 2030, 18ನೇ 'ಎ' ಮುಖ್ಯ ರಸ್ತೆ, 9ನೇ ಅಡ್ಡರಸ್ತೆ,

ಜೆ.ಪಿ. ನಗರ 2ನೇ ಹಂತ, ಬೆಂಗಳೂರು – 560 078.

| | | |
|---|---|---|
| ಗ್ರಂಥದ ಹೆಸರು | : | ಪರ್ಯೂಷಣಾಮೃತ |
| ಪ್ರವಚನಕಾರರು | : | ಮೂಲ ಹಿಂದಿ– ಪರಮ ಪೂಜ್ಯ ಆಚಾರ್ಯ<br>ಶ್ರೀ ಆರ್ಜವಸಾಗರ ಮಹಾರಾಜರು<br>ಕನ್ನಡಾನುವಾದ – ಪ್ರೊ. ಜೀವಂಧರಕುಮಾರ ಕುಬೇರಪ್ಪ<br>ಹೊತಪೇಟಿ, ಶ್ರವಣಬೆಳಗೊಳ |
| ಪಾವನ ಸಂದರ್ಭ | : | ಮುನಿಶ್ರೀ ಆರ್ಜವಸಾಗರ ಮಹಾರಾಜರ 25ನೇ ಮುನಿ<br>ದೀಕ್ಷಾ (ರಜತ ಜಯಂತಿ) ವರ್ಷದ ವರ್ಷಾಯೋಗದಲ್ಲಿ<br>ಆಯೋಜಿಸಿದ್ದ ಸಮವಸರಣ ಮಹಾಮಂಡಲವಿಧಾನ<br>ಮಹೋತ್ಸವದ ಸ್ಮರಣೆ. (ಹಿಂದಿ ಆವೃತ್ತಿ) |
| ಸಂಪಾದಕರು | : | ಡಾ. ಅಲ್ಪನಾ ಅಶೋಕ ಜೈನ ಮೋದಿ, ಗ್ವಾಲಿಯರ್ |
| ಪ್ರಕಾಶಕರು | : | ಶ್ರೀ ಸಮ್ಮೇದ ಪ್ರಕಾಶನ, ಜೆ.ಪಿ ನಗರ, ಬೆಂಗಳೂರು |
| ಸಂಸ್ಕರಣ | : | ದ್ವಿತೀಯ |
| ಪ್ರಕಾಶನ ವರ್ಷ | : | 2016 |
| ಬೆಲೆ | : | 150/– (ಮರು ಮುದ್ರಣಕ್ಕಾಗಿ) |
| ಪ್ರತಿಗಳು | : | 500 |
| ಡಿ.ಟಿ.ಪಿ | : | ಹಂಸು ಗ್ರಾಫಿಕ್ಸ್<br>ಶ್ರೀಮತಿ ರಮ್ಯ ಎ.ಎಂ. ಮತ್ತು ಶ್ರೀ ಕೆ. ಉಮಾಶಂಕರ<br>ಮೈಸೂರು. ದೂ: 9844157611, 8494907611 |
| ಡಿ.ಟಿ.ಪಿ ಅಳವಡಿಕೆ | : | ಎ. ಪ್ರಸನ್ನಕುಮಾರ, ಬೆಂಗಳೂರು |
| ಮುದ್ರಕರು | : | ಕೀರ್ತಿ ಪ್ರಿಂಟರ್ಸ್, ಗಿರಿನಗರ, ಬೆಂಗಳೂರು |

# ಮೊದಲಮಾತು

ಧಾರ್ಮಿಕ ಪರ್ವಗಳಿಂದ ಆತ್ಮನು ಶುದ್ಧ ಗುಣಗಳಿಂದ ಅಲಂಕೃತನಾಗುತ್ತಾನೆ. ಪರ್ವ ವ್ರತಗಳಿಂಥ ಕೂಡಿದ ಭಾದ್ರಪದಮಾಸದ ಸಂಬಂಧದಲ್ಲಿ ಆರ್ಷ ಪರಂಪರೆಯ ಆಚಾರ್ಯರು ಹೀಗೆ ಉಪದೇಶ ಮಾಡಿದ್ದಾರೆ–

**ಅಹೋ ಭಾದ್ರ ಪದಾಖ್ಯೋಯಂ ಮಾಸೋ ನೇಕ ವ್ರತಾಕರಃ।**
**ಧರ್ಮ ಪರೋ ಮಧ್ಯೇನ್ಯ ಮಾಸಾನಾಂ ನರೇಂದ್ರವತ್॥**

ಮನುಷ್ಯರಲ್ಲಿ ರಾಜ(ಚಕ್ರವರ್ತಿ)ನನ್ನು ಶ್ರೇಷ್ಠವೆಂದು ಭಾವಿಸಿರುವಂತೆ, ರತ್ನತ್ರಯ ಧರ್ಮದ ವೃದ್ಧಿಗಾಗಿ ಅನೇಕ ವ್ರತಗಳಿಗೆ ಸ್ಥಾನವಾಗಿರುವ ಭಾದ್ರಪದ ಮಾಸವನ್ನು ಮಾಸಗಳಲ್ಲಿ ಶ್ರೇಷ್ಠವೆಂದು ಭಾವಿಸಲಾಗಿದೆ.

ಜೈನಧರ್ಮದ ಮಹತ್ವಪೂರ್ಣ ಹಾಗೂ ಶ್ರೇಷ್ಠ ವ್ರತಗಳ ಸರ್ವಾಧಿಕ ಸಮಾಗಮವು ಭಾದ್ರಪದ ಮಾಸದಲ್ಲಿಯೇ ಇದೆ. ಹದಿನಾರು ಕಾರಣ ಭಾವನೆಗಳ ವ್ರತ, ದಶಲಕ್ಷಣವ್ರತ, ಪುಷ್ಪಾಂಜಲಿ ವ್ರತ, ರತ್ನತ್ರಯ ವ್ರತಗಳೊಂದಿಗೆ ಅನಂತ ವ್ರತ, ಕರ್ಮನಿರ್ಜರೆ ವ್ರತ ಹಾಗೂ ಶೀಲ ಸಪ್ತಮಿ ವ್ರತಗಳ ಪಾಲನೆ ಮಾಡುವ ಸೌಭಾಗ್ಯ ಶ್ರಾವಕರಿಗೆ ಇದೇ ಮಾಸದಲ್ಲಿ ದೊರೆಯುತ್ತದೆ.

ಇವೆಲ್ಲವುಗಳಲ್ಲಿ ಹದಿನಾರು ಕಾರಣ ಭಾವನೆಗಳು ಹಾಗೂ ಪರ್ಯೂಷಣ ಪರ್ವಗಳು ತಮ್ಮದೇ ಆದ ವಿಶೇಷ ಮಹತ್ವವನ್ನು ಪಡೆದಿವೆ. ಪರ್ಯೂಷಣ ಪರ್ವದ ಈ ಹತ್ತುದಿನಗಳಲ್ಲಿ ಮುಕ್ತಿಮಾರ್ಗದ ಶಿಕ್ಷಣ ನೀಡುವ ಉತ್ತಮ ಕ್ಷಮಾ ಇತ್ಯಾದಿ ಧರ್ಮಗಳ ಚಿಂತನೆ ಮಾಡಲಾಗುತ್ತದೆ.

ಪ್ರತಿಯೊಬ್ಬ ಮನುಷ್ಯನ ಗುರಿ ಶಾಶ್ವತಸುಖವಾಗಿದೆ ಹಾಗೂ ಈ ಶಾಶ್ವತಸುಖವು ಮೋಕ್ಷದಲ್ಲಿಯೇ ಸಿಗುತ್ತದೆ. ಮೋಕ್ಷಕ್ಕಾಗಿ ಆತ್ಮನು ಸ್ವಭಾವರೂಪ ಧರ್ಮದ ಅವಲಂಬನೆ ಮಾಡುವುದು ಅವಶ್ಯಕವಾಗಿದೆ. ಆತ್ಮಸ್ವಭಾವ ಪಡೆಯಲು ದಶಲಕ್ಷಣ ಪರ್ವವಿದೆ. ಉತ್ತಮ ಕ್ಷಮಾ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪ, ತ್ಯಾಗ, ಆಕಿಂಚನ್ಯ ಹಾಗೂ ಬ್ರಹ್ಮಚರ್ಯ ಇವು ಆತ್ಮನ ಶ್ರೇಷ್ಠಗುಣಗಳಾಗಿವೆ.

ಇಂತಹ ಮಹಾನ್ ಪರ್ಯೂಷಣ ಪರ್ವದಲ್ಲಿ ಶ್ರಾವಕರಿಗೆ ಸಾಧು/ಸಂತರ ಸುಯೋಗ ದೊರಕಿದರೆ ಚಿನ್ನಕ್ಕೆ ಮೆರುಗು ಬಂದಂತಾಗುತ್ತದೆ ಅಲ್ಲದೇ ಶ್ರಾವಕರ ಮೋಕ್ಷ ಮಾರ್ಗ ಪ್ರಶಸ್ತವಾಗುತ್ತದೆ.

ಇಂತಹ ಒಂದು ಸುಯೋಗ ಬುಂದೇಲಖಂಡದಲ್ಲಿರುವ ಒಂದು ಧರ್ಮನಗರ ಅಶೋಕನಗರ (ಗುನಾ, ಮಧ್ಯಪ್ರದೇಶ)ದ ಶ್ರಾವಕರಿಗೆ ಕ್ರಿ.ಶ.2005ರಲ್ಲಿ ಪ್ರಾಪ್ತವಾಯಿತು. ಭಗವಾನ್ ಕುಂದಕುಂದಾಚಾರ್ಯರ ಶ್ರಮಣ ಪರಂಪರೆಯ ಶ್ರೇಷ್ಠನಾಯಕ ಆಚಾರ್ಯ ಶ್ರೀವಿದ್ಯಾಸಾಗರ ಮಹಾರಾಜರ ಸುಶಿಷ್ಯ ತೀರ್ಥಂಕರರ ವಾಣಿಯ ಯಥಾರ್ಥ ಪ್ರತಿಪಾದಕ ಒಡೆಯ ಮುನಿಶ್ರೀ ಆರ್ಜವಸಾಗರ ಮಹಾರಾಜರ ಗಹನ, ಗಂಭೀರ ಜ್ಞಾನ ನಿರ್ದೋಷ, ನಿಸ್ಪೃಹ ಚರ್ಯೆ ಹಾಗೂ ಸಹಜ ಸರಳ ವೃತ್ತಿ ವ್ಯಕ್ತಿಗಳನ್ನು ಸಹಜವಾಗಿಯೇ ಅವರೆಡೆಗೆ ಆಕರ್ಷಿತ ಮಾಡಿಕೊಳ್ಳುತ್ತದೆ.

ಅಶೋಕನಗರದಲ್ಲಿ ಪರ್ಯೂಷಣ ಪರ್ವದಲ್ಲಿ ಪೂಜ್ಯ ಮುನಿಶ್ರೀ ಆರ್ಜವ ಸಾಗರ ಮಹಾರಾಜರ ಮುಖಚಂದ್ರದಿಂದ ದಶಧರ್ಮದ ಪ್ರವಚನಗಳ ಧಾರೆಯಿಂದ, ಕೂಡಿದ್ದ ಜನರು

ಪಾವನರಾದರು. ಮಹಾರಾಜ ಶ್ರೀಗಳ ವಾಣಿಯಲ್ಲಿ ಅದ್ಭುತವಾದ ಆಕರ್ಷಣೆ ಇದೆ. ಅವರು ತಮ್ಮ ಮಾತುಗಳನ್ನು ಸಹಜತೆ ಮತ್ತು ಸರಳತೆಯಿಂದ ಕೇಳುಗರ ಹೃದಯಗಳಲ್ಲಿ ಇಳಿಸುವಲ್ಲಿ ಸಿದ್ಧಹಸ್ತರಾಗಿದ್ದಾರೆ. ಈ ಕಾರಣದಿಂದಲೇ ಇಂದು ಜನರು ಮುನಿಶ್ರೀಗಳ ಹೆಸರನ್ನು ಕೇಳಿದ ಕೂಡಲೇ ಅವರ ಅಮೃತವಾಣಿಯ ರಸಪಾನ ಮಾಡಲು ಉತ್ಸುಕರಾಗುತ್ತಾರೆ.

ಅಶೋಕನಗರ ಸಮಾಜದ ಸಹಧರ್ಮಿಗಳು ಈ ಬಾರಿಯ ಪರ್ಯೂಷಣ ಪರ್ವದ ಪ್ರವಚನಗಳ ಲಾಭ ಸಂಪೂರ್ಣ ದೇಶದ ಶ್ರಾವಕರಿಗೂ ದೊರಕಲಿ ಎಂಬ ಭಾವನೆ ಹೊಂದಿದ್ದರು. ಈ ಉದ್ದೇಶದಿಂದ ಮಹಾರಾಜ ಶ್ರೀಗಳ ಪ್ರವಚನಗಳ ಶ್ರವ್ಯಟೇಪ(Audio magnetic)ನ್ನು ತಯಾರಿಸಲಾಯಿತು. ಈ ಟೇಪಗಳ ಕುಶಲ ಸಂಪಾದನಾಕಾರ್ಯವನ್ನು ಗ್ವಾಲಿಯರ್ ನಗರದ ಭವ್ಯ ಶ್ರಾವಿಕೆ ಡಾ. ಅಲ್ಪನಾ ಜೈನರ ಮೂಲಕ ಮಾಡಿಸಲಾಯಿತು ಹಾಗೂ ಸಂಶೋಧನೆಗಾಗಿ ಮಹಾರಾಜರಿಗೆ ಪ್ರಸ್ತುತ ಪಡಿಸಲಾಯಿತು. ಮಹಾರಾಜ ಶ್ರೀಗಳು ಸಂಘದಲ್ಲಿರುವ ಬ್ರಹ್ಮಚಾರಿ ವ್ರತಿಗಳು ಹಾಗೂ ಡಾ. ಅಜಿತ ಜೈನ, ಭೋಪಾಲ ಇವರುಗಳು Proof reading ಮಾಡಿ ಹಾಗೂ ಆವಶ್ಯಕ ಸಂಶೋಧನೆ ಮಾಡಿ ಅಮೃತಮಯ ಈ ಕೃತಿಗೆ "ಪರ್ಯೂಷಣ ಪಾನ" ಹೆಸರಿನಿಂದ ನಾಮಾಂಕಿತಗೊಳಿಸಿದರು. ಪ್ರಸ್ತುತ ಕೃತಿಯು ಧರ್ಮವನ್ನು ವ್ಯವಹಾರ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರೇರಣೆ ನೀಡುತ್ತದೆ ಹಾಗೂ ಆತ್ಮನನ್ನು ಪರಮಾತ್ಮನನ್ನಾಗಿ ಮಾಡಿಕೊಳ್ಳುವ ಅಂತರ್‌ಯಾತ್ರೆಯ ಮಾರ್ಗದರ್ಶನ ನೀಡುತ್ತದೆ. ಈ ಕೃತಿಯನ್ನು ಪ್ರಕಾಶಿತಗೊಳಿಸುವ ಸೌಭಾಗ್ಯ ಭಗವಾನ ಮಹಾವೀರ ಆಚರಣ ಸಂಸ್ಥೆಯ ಸಮಿತಿ, ಭೋಪಾಲ ಇವರಿಗೆ ಪ್ರಾಪ್ತವಾಯಿತು. ಈ ಸಮಿತಿಗೆ ಮಹಾರಾಜ ಶ್ರೀ ಆರ್ಜವಸಾಗರರ ಆಶೀರ್ವಾದ ನಿರಂತರ ಪ್ರಾಪ್ತವಾಗುತ್ತಿರುತ್ತದೆ. ಶ್ರೀ ಸುರೇಶ ಗಾಂಧಿ ಜೈನ್ ಹಾಗೂ ಶ್ರೀ ನವನೀತ ಭಾಯಿ ದೋಶಿ ಜೈನ, ಪಾರ್ತಿ ಪಾಯಿಂಟ್ ಸೂರತ್ ಇವರ ಸೌಜನ್ಯದಿಂದ ಈ ಕೃತಿಯು ಸೂರತನಗರ ಹಾಗೂ ಪೂರ್ಣ ದೇಶಕ್ಕೆ ಸ್ವಾಧ್ಯಾಯ ಮಾಡಲು ದೊರಕುತ್ತಲಿದೆ. ನಮ್ಮ ಸಮಿತಿಯು ಈ ಎಲ್ಲ ಮಹಾನುಭಾವರಿಗೆ ಹಾಗೂ ಶ್ರೀ ಹರ್ಷದ್‌ಭಾಯಿ ಮೆಹತಾ ಜೈನ್, ಸೂರತ್, ಶ್ರೀ ಪವನ ಜೈನ ಪಾರಸ ಪ್ರೆಸ್, ಭೋಪಾಲ ಹಾಗೂ ಶ್ರೀ ಮಹೇಂದ್ರ ಜೈನ ಇಂಜಿನಿಯರ್, ಭೋಪಾಲ ಹಾಗೂ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷವಾಗಿ ಕೃತಿಯನ್ನು ತಯಾರಿಸುವಲ್ಲಿ ಸಹಯೋಗ ನೀಡಿರುವ ಹಾಗೂ ಈ ಎಲ್ಲ ಮಿತ್ರರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

**ಮಹಾರಾಜಶ್ರೀಗಳ ಚರಣಗಳಲ್ಲಿ ನಮೋಸ್ತು, ನಮೋಸ್ತು, ನಮೋಸ್ತು.**
**ಭಗವಾನ ಮಹಾವೀರ ಆಚರಣ ಸಂಘ ಸಮಿತಿ, ಭೋಪಾಲ**

**ಅಧ್ಯಕ್ಷ**
**ಡಾ. ಸುಧೀರ ಜೈನ್**
**ಭೋಪಾಲ**

# ಸಂಪಾದಕೀಯ

ಸಾಂಸಾರಿಕ ಪ್ರಾಣಿಗಳು ಅನಾದಿಕಾಲದಿಂದ ಅಜ್ಞಾನಕ್ಕೆ ವಶೀಭೂತರಾಗಿ ತಮ್ಮನ್ನು ತಾವೇ ಮರೆತು ಬಿಟ್ಟಿದ್ದಾರೆ. ಆದ್ದರಿಂದ ಅವರು ಅಮೃತ ಸ್ವರೂಪರಾಗಿದ್ದರೂ ಸಹ ಸಾವಿಗೆ(ಮೃತ್ಯುವಿಗೆ) ಹೆದರುತ್ತಾರೆ ಅಥವಾ ಸುಖದ ಆರ್ಣವ ಸ್ವರೂಪ ಶಕ್ತಿವಂತರಾಗಿದ್ದರೂ ಸಹ ತಮ್ಮಷ್ಟಕ್ಕೆ ತಾವೇ ಆಕ್ರಾಂತರೆಂದು ಭಾವಿಸಿದ್ದಾರೆ ಹಾಗೂ ಕ್ಷಣಿಕವಾದ ಅಲ್ಪ ಸುಖಕ್ಕಾಗಿ ಹಾತೊರೆಯುತ್ತಿರುತ್ತಾರೆ ಆದರೆ ನಿಜವಾದ ಸುಖ ಈ ಜಗತ್ತಿನಲ್ಲಿ ಸಿಗುವುದಿಲ್ಲ. ತೀರ್ಥಂಕರ ಪ್ರಣೀತ ಧರ್ಮದ ಆರಾಧಕರ ಆಚಾರ್ಯರುಗಳು ಜಗತ್ತಿನ ಪ್ರಾಣಿಗಳನ್ನು ಈ ದುಃಖಸಾಗರದಿಂದ ಹೊರತಂದು ಸುಖದ ಕಡೆಗೆ ಸಾಗಿಸುವ ಉದ್ದೇಶದಿಂದ ಉಪಾಯಗಳನ್ನು ಹೇಳಿದ್ದಾರೆ. ಅವು ಸ್ವೀಕರಿಸಲು ಹಾಗೂ ಆಚರಿಸಲು ಯೋಗ್ಯವಾಗಿವೆ. ಅನಾದಿಕಾಲದಿಂದಲೇ ಪ್ರತಿಯೊಂದು ಆತ್ಮವು ಆತ್ಮನಲ್ಲಿಯೇ ಉತ್ಪನ್ನವಾಗುವ ಆತ್ಮನ ವಿಕಾರಗಳಾದ ಕ್ರೋಧ, ಮಾನ, ಮಾಯಾ, ಲೋಭ, ಅಸತ್ಯ, ಅಸಂಯಮ ಇತ್ಯಾದಿಗಳ ಕಾರಣಗಳಿಂದಲೇ ದುಃಖ ಮತ್ತು ಅಶಾಂತವಾಗಿದೆ. ಅಶಾಂತಿ ಮತ್ತು ದುಃಖಗಳಿಂದ ನಿವೃತ್ತಿ ಹೊಂದಲು ಆತ್ಮಾರಾಧನೆಯೊಂದೇ ಉಪಾಯವಾಗಿದೆ. ಆತ್ಮಸ್ವಭಾವವನ್ನು ತಿಳಿದು, ಸ್ವೀಕರಿಸಿ ಅದರಲ್ಲಿಯೇ ರಮಿಸುವ ಜೀವವು ಅದರಲ್ಲಿಯೇ ವಿಲೀನವಾದಾಗಲೇ ಸರ್ವೋಚ್ಚ ಆನಂದ ಹಾಗೂ ನಿಜವಾದ ಶಾಂತಿಯನ್ನು ಪಡೆಯಬಲ್ಲದು. ಆಚಾರ್ಯ ಪದ್ಮನಂದಿಗಳು ಈ ಬಗ್ಗೆ ಹೀಗೆ ಬರೆದಿದ್ದಾರೆ–

**ಸಮಪ್ರತ್ಯಸ್ತಿ–ನ ಕೇವಲೀ ಕಿಲಕಿಲೌ ತ್ರೈಲೋಕ್ಯ ಚೂಡಾಮಣಿಃ।**
**ತದ್ವಾಚಃ ಪರಮಾಸತೇಽನ್ನ ಭರತಕ್ಷೇತ್ರೇ ಜಗದ್ ಧ್ಯೋತಿಕಾಃ॥**
**ಸದ್‌ರತ್ನತ್ರಯ ಧಾರಿಣೊಯತಿ ವರಾಸ್ತಾಷಾಂ ಸಮಾಲಂಬನಂ।**
**ತತ್ಪೂಜಾ ಜಿನವಾಚಿ ಪೂಜನಮತಃ ಸಾಕ್ಷಾಜ್ಜಿನಃ ಪೂಜಿತಃ ॥1/68॥**

'ವರ್ತಮಾನದ ಈ ಕಲಿಕಾಲದಲ್ಲಿ ಮೂರು ಲೋಕದ ಪೂಜ್ಯ ಕೇವಲಿ ಭಗವಾನರು ಈ ಭರತಕ್ಷೇತ್ರದಲ್ಲಿ ಸಾಕ್ಷಾತ್ ರೂಪದಲ್ಲಿ ಇಲ್ಲ, ಆದರೂ ಸಮಸ್ತ ಭರತಕ್ಷೇತ್ರದಲ್ಲಿ ಜಗತ್ಪ್ರಕಾಶಿನಿ ಕೇವಲಿ ಭಗವಂತರ ವಾಣಿ ವಿದ್ಯಮಾನವಿದೆ ಹಾಗೂ ಆ ವಾಣಿಯ ಆಧಾರಸ್ತಂಭ ಶ್ರೇಷ್ಠ ರತ್ನತ್ರಯಧಾರಿ ಮುನಿರಾಜರು ವಿದ್ಯಮಾನರಿದ್ದಾರೆ. ಆದ್ದರಿಂದ ಆ ಮುನಿಗಳ ಪೂಜೆಯು ಸರಸ್ವತಿಯ ಪೂಜೆಯಾಗಿದೆ ಹಾಗೂ ಸರಸ್ವತಿಯ ಪೂಜೆಯು ಸಾಕ್ಷಾತ್ ಕೇವಲಿ ಭಗವಂತರ ಪೂಜೆಯಾಗಿದೆ'. ತೀರ್ಥಂಕರರುಗಳ ದಿವ್ಯಧ್ವನಿಯಿಂದ ನಿಃಸೃತವಾಣಿಯನ್ನು ಗಣಧರರು ಗ್ರಹಿಸಿದರು ಮತ್ತು ಆಚಾರ್ಯರುಗಳು ಅದನ್ನು ನಿಬದ್ಧಗೊಳಿಸಿದರು. ಅದು ಜಿನವಾಣಿಯ ರೂಪದಲ್ಲಿ ನಮ್ಮೆಲ್ಲರಿಗೂ ದೊರೆತಿದೆ. ಜಗತ್ ಪೂಜ್ಯ ಆರಾಧಕ ಆಚಾರ್ಯರು, ಉಪಾಧ್ಯಾಯರು ಹಾಗೂ ಸಾಧುಗಳು ಜಿನವಾಣಿಯ ಸ್ವಾಧ್ಯಾಯ, ಮನನ, ಚಿಂತನೆಗಳಲ್ಲಿ ಸದಾಕಾಲ ತೊಡಗಿರುತ್ತಾರೆ ಹಾಗೂ ಆ ಗುರುಗಳು, ತಪ, ಸಾಧನೆ, ಧ್ಯಾನಮಯ ಜೀವನದಿಂದ ಜ್ಞಾನಸುಧಾ ಸಿಂಧುವನ್ನು ಪಡೆಯುತ್ತಾರೆ. ಜ್ಞಾನಸಿಂಧುವಿನಿಂದ ಪಡೆದ ಜ್ಞಾನಸುಧೆಯು ಭವ್ಯ ಜೀವಗಳ ಕಲ್ಯಾಣಕ್ಕಾಗಿ ತಮ್ಮ ಪಾನೀಯ ವಾಣಿಯಿಂದ ವರ್ಣನೆ ಮಾಡುತ್ತಾರೆ ಹಾಗೂ ಎಲ್ಲ ಪ್ರಾಣಿಗಳ ಜ್ಞಾನರೂಪದ ದಾಹವನ್ನು ಸಂತೃಪ್ತಗೊಳಿಸುತ್ತಾರೆ. ಮಾನವರಿಗೆ ಧರ್ಮಮಾರ್ಗದಲ್ಲಿ ತೊಡಗಲು ಪ್ರೇರಣೆ ನೀಡಿ ಕಲ್ಯಾಣದ ಮಾರ್ಗವನ್ನು ತೋರಿಸುತ್ತಾರೆ. ಈ ವಿಶಿಷ್ಟತೆಯ ಕಾರಣದಿಂದಲೇ ಶಾಸ್ತ್ರಗಳಲ್ಲಿ ಮುನಿರಾಜರಿಗೆ ಧರ್ಮೋಪದೇಶಕರೆಂದು ಕರೆಯಲಾಗಿದೆ. ಆಚಾರ್ಯ ಶಿವಕೋಟಿಗಳು ಭಗವತಿ ಆರಾಧನೆ ಎಂಬ

ಜೈನಾಗಮದಲ್ಲಿ ಮುನಿರಾಜರ ವಾಣಿಯನ್ನು ಪ್ರಭಾವೋತ್ಪಾದಕತೆಯ ಕಾರಣಗಳ ಮೀಮಾಂಸೆ ಮಾಡುತ್ತಾ ಹೀಗೆ ಹೇಳಿದ್ದಾರೆ –

**ಣಾಣಾದೇಸೇ ಕುಸಲೋ, ಣಾಣಾದೇಸೇ–ಗದಾಣ ಸತ್ಥಾಣಂ।**
**ಅಭಿಲಾವ ಅತ್ಥಕುಸಲೋ, ಹೋದಿ ಯ ದೇಸಪ್ಪವೇಸೇಣ ॥150॥**

ಅರ್ಥಾತ್, ಮುನಿರಾಜರಿಗೆ ಹೊಸ ಹೊಸ ಪ್ರದೇಶಗಳಲ್ಲಿ ವಿಹಾರ ಮಾಡುವುದರಿಂದ ನಾನಾರಾಜ್ಯಗಳ ಅಲ್ಲಿಯ ಆಚರಣೆಗಳ ಹಾಗೂ ರೀತಿ ಪದ್ಧತಿಗಳ ಹಾಗೂ ತಮ್ಮ ಚಾರಿತ್ರ ಪಾಲನೆಯ ಯೋಗ್ಯತೆ, ಅಯೋಗ್ಯತೆಯ ಅನುಭವವಾಗುವದರೊಂದಿಗೆ ಆ ರಾಜ್ಯಗಳ ಶಾಸ್ತ್ರಗಳಲ್ಲಿಯೂ ಪ್ರಾವೀಣ್ಯತೆ ಉಂಟಾಗುತ್ತದೆ ಹಾಗೂ ಆ ದೇಶಗಳ ಭಾಷೆ ಹಾಗೂ ಅವುಗಳ ಅರ್ಥದ ವಿಶೇಷಜ್ಞತೆಯು ಅವರಲ್ಲಿ ಬರುತ್ತದೆ. ಆದ್ದರಿಂದ ತತ್ವಜ್ಞಾನದ ಹಿರಿಮೆಯೊಂದಿಗೆ ಮುನಿರಾಜರ ಪ್ರತಿಪಾದನಾ ಕೌಶಲ್ಯ ಸ್ವತಃ ವಿಶಿಷ್ಟ ಹಾಗೂ ಪ್ರಭಾವಿಯಾಗುತ್ತದೆ. ಇವೆಲ್ಲವುಗಳೊಂದಿಗೆ ಸಂಯಮ ಹಾಗೂ ತ್ಯಾಗದ ಪವಿತ್ರತೆಯು ಆಗುತ್ತದೆ. ಕವಿವರ ದೌಲತರಾಮರು ತಮ್ಮ ಛಹಢಾಲಾದಲ್ಲಿ ಹೀಗೆ ಬರೆದಿದ್ದಾರೆ–

**ಜಗ ಸುಹಿತ ಕರ ಸಬ ಅಹಿತ ಹರ, ಶ್ರುತಿ ಸುಖದ ಸಬಸಂಶಯ ಹರೈ ।**
**ಭ್ರಮ ರೋಗ ಹರ ಜಿನಕೇ ವಚನ, ಮುಖ ಚಂದ್ರತೈಂ ಅಮೃತ ಝರೈಂ ॥6/2॥**

ಸರ್ವತ್ಯಾಗಿಗಳಾದ ದಿಗಂಬರ ಮುನಿರಾಜರು ಸ್ವಾಭಾವಿಕವಾಗಿ ಆತ್ಮಾನುಭವಿ ಹಾಗೂ ಆತ್ಮ ವಿಶಾರದರಾಗಿರುತ್ತಾರೆ. ಆದ್ದರಿಂದ ಅವರ ಪದ್ಧತಿ ಹಾಗೂ ವಿವರಣಾ ಶೈಲಿಗಳೆರಡೂ ಆಧ್ಯಾತ್ಮರಸದಿಂದ ಓತ–ಪ್ರೋತವಾಗಿರುತ್ತವೆ, ಧರ್ಮ ತತ್ವಗಳನ್ನು ತಮ್ಮ ಜೀವನದಲ್ಲಿ ಆತ್ಮಗತ ಮಾಡಿಕೊಂಡು ನಡೆದಾಡುವ ಸಿದ್ಧ ಪರಮೇಷ್ಠಿಗಳಂತೆ ವಿಚಾರಣೆ ಮಾಡುವ ಮುನಿರಾಜರ ದರ್ಶನದಿಂದಲೇ "ಮೂರ್ತ್ತಮಿವ ಮೋಕ್ಷ ಮಾರ್ಗಮವಾಗ್ವಿಸರ್ಗಂ, ವಪುಷಾ ನಿರೂಯಂತಮ್" ಅರ್ಥಾತ್ ಏನನ್ನೂ ಹೇಳದೇ ತಮ್ಮ ಶರೀರದಿಂದಲೇ ಮೋಕ್ಷ ಮಾರ್ಗದ ನಿರೂಪಣೆ ಮಾಡುವ ಪ್ರಭಾವೋತ್ಪಾದಕರಾಗಿರುತ್ತಾರೆಂದು – ಆಚಾರ್ಯರು ಹೇಳಿದ್ದಾರೆ. ಹೀಗಿರುವಾಗ ಅವರು ಸಾಕ್ಷಾತ್ ಉಪದೇಶ ಮಾಡಿದರೆ ಅದನ್ನು ಕೇಳಲು ಸಂಪೂರ್ಣ ಜನ ಮಹಾಪೂರದಂತೆ ಉಕ್ಕಿ ಹರಿದರೆ ಅದರಲ್ಲಿ ಯಾವ ಆಶ್ಚರ್ಯಜನಕ ಸಂಗತಿಯೂ ಇಲ್ಲ, ಜೈನಗ್ರಂಥಗಳಲ್ಲಿ ಮುನಿರಾಜರ ಚರ್ಯೆಗಳ ವಿಷಯದಲ್ಲಿ ವಿಶಿಷ್ಟ ಉಲ್ಲೇಖ ಮಾಡಿದ್ದಾರೆ. ಜೈನಾಗಮಗ್ರಂಥ ಭಗವತಿ ಆರಾಧನೆಯ ಹಾಗೂ ಮೂಲಾರಾಧನೆಯ ಟೀಕಾಗ್ರಂಥಗಳಲ್ಲಿ ಆಚಾರ್ಯಪ್ರವರರು "ಪಜ್ಜೋಸಮಣ ಕಪ್ಪೋ" ಅಥವಾ "ಪಜ್ಜೋಸವಣಾ ಕಪ್ಪೋ ನಾಮ ದಶಮಃ ಕಲ್ಪಃ" ಎಂದು ಸ್ಪಷ್ಟ ನಿರ್ದೇಶನ ಮಾಡಿದ್ದಾರೆ.

ಮಳೆಗಾಲದ ನಾಲ್ಕು ತಿಂಗಳುಗಳಲ್ಲಿ ಬೇರೆಡೆಗೆ ಗಮನ ಮಾಡದೇ ಒಂದೇ ಸ್ಥಾನದಲ್ಲಿರುವುದು, ಜೈನಮುನಿಗಳ ಪರ್ಯೂಷಣ ಹೆಸರಿನ ಹತ್ತನೇ ಸ್ಥಿತಿಕಲ್ಪವಾಗಿದೆ ಈ ಪ್ರಕಾರ ಸಂಪೂರ್ಣ ಮಳೆಗಾಲವನ್ನು ಪರ್ಯೂಷಣವೆಂದು ಹೇಳುತ್ತಾರೆ.

ಆಧ್ಯಾತ್ಮಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಜೈನ ಪರಂಪರೆಯಲ್ಲಿ ಪರ್ಯೂಷಣದ ಮಹತ್ವ ಎಲ್ಲಕ್ಕಿಂತ ಹೆಚ್ಚಾಗಿದೆ. ಪರ್ಯೂಷಣವು ಎಲ್ಲ ಮಾನವರಿಗೆ ವಿಕಾರಿ ಭಾವಗಳ ತ್ಯಾಗ ಹಾಗೂ ಉದಾತ್ತ ಭಾವಗಳನ್ನು ಗ್ರಹಿಸುವ ಸಮೀಚೀನ ಪ್ರೇರಣೆಯನ್ನು ನೀಡುತ್ತದೆ. ಪರ್ಯೂಷಣದ ಶಿಕ್ಷಣ ಆತ್ಮನಲ್ಲಿ ಪರಿಶುದ್ಧತೆ ಮತ್ತು ಜೀವನದಲ್ಲಿ ಪಾರದರ್ಶಕತೆಯನ್ನು ತರುತ್ತದೆಂದು ಆಚಾರ್ಯರು

ಪರ್ಯೂಷಣ ಶಬ್ದದ ವ್ಯಾಖ್ಯಾನ ಮತ್ತು ಪರಿಭಾಷೆಯನ್ನು ಹೇಳಿದ್ದಾರೆ. ಉಷ್ ಧಾತುವಿನಲ್ಲಿ ಪರಿ ಉಪಸರ್ಗ ಸೇರಿದಾಗ ಸಂಸ್ಕೃತದ ಪರ್ಯೂಷಣ ಶಬ್ಧವಾಗಿದೆ. ಜೈನ ವ್ಯಾಕರಣಕಾರರು 'ಪರ್ಯೂಷಣ' ಶಬ್ದದ ಉತ್ಪತ್ತಿಯ ವಿಷಯದಲ್ಲಿ ಪರಿ ಆ ಸಮಂತಾತ್ ಉಷ್ಣಯಂತೇ ದಹ್ಯಂತೇ ಪಾಪ ಕರ್ಮಾಣಿ ಯಸ್ಮಿನ್ ತತ್ ಪರ್ಯೂಷಣಮ್ ಅರ್ಥಾತ್ ಪಾಪಕರ್ಮಗಳನ್ನು ಯಾವಾಗಲೂ ಸುಡುವಂತಹದು ಅಥವಾ ಸಮಸ್ತರೂಪದಿಂದ ಆತ್ಮನಲ್ಲಿರುವ ಕರ್ಮಗಳ ನಿರ್ಜರೆ ಮಾಡುವುದು ಪರ್ಯೂಷಣವೆಂದು ಹೇಳಿದ್ದಾರೆ. ಪರ್ಯೂಷಣ ಶಬ್ದ ಅಪಭ್ರಂಶವಾಗಿದ್ದು ಪ್ರಾಕೃತ ಭಾಷೆಯಲ್ಲಿ ಪಜ್ಜುಸಣ, ಪಜ್ಜೂಷಣ, ಪಜ್ಜೋಸವ, ಪಜ್ಜೋಸವಣ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಸಂಸ್ಕೃತ ಭಾಷೆಯಲ್ಲಿ ಪರ್ಯೂಷನ, ಪರ್ಯೂಷಣ, ಪರ್ಯುಶಮನಾಃ, ಪರ್ಯುಪವಾಸಃ, ಪರ್ಯುಪಾಸನಾಃ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ.

ಪೆಜ್ಜ ಇದರ ಅರ್ಥ ರಾಗ–ದ್ವೇಷ ಹಾಗು ಉಷಣದ ಅರ್ಥ ಸುಡುವುದು ಎಂದಿದೆ. ರಾಗ–ದ್ವೇಷಗಳನ್ನು ಸುಡುವುದು. ಹೀಗೆ ಯಾವ ವಿಧಿಯಿಂದ ರಾಗ–ದ್ವೇಷಗಳನ್ನು ಸುಡುವ ಸಂಕಲ್ಪ ಹಾಗೂ ಉಪಕ್ರಮ ಮಾಡಲಾಗುವುದೋ ಆ ವಿಧಿಯ ಹೆಸರು ಪರ್ಯೂಷಣ–ಪರ್ಯೂಷನದ ಅರ್ಥ ಪರಿ+ಊಷನ 'ಪರಿ' ಅರ್ಥಾತ್ ಪೂರ್ಣರೂಪದಿಂದ 'ಊಷನ' ಅರ್ಥಾತ್ ದಹಿಸು ಜ್ಞಾನಾವರಣಾದಿ ಕರ್ಮಗಳನ್ನು ಪೂರ್ಣರೂಪದಿಂದ ದಹಿಸು ವಿನಾಶ ಮಾಡುವುದು ಅಥವಾ ಕರ್ಮಾದಿ ವಿಕಾರಗಳನ್ನು ದಹಿಸುವುದು ಪರ್ಯೂಷಣವೆಂದು ಕರೆಯಲಾಗುತ್ತದೆ. ಪರ್ಯೂಷಣದ ಅರ್ಥ ಪರಿ+ಊಷಣ ಅರ್ಥಾತ್ 'ಪರಿ' ರೂಪದಿಂದ 'ಊಷಣ' ವಾಸ ಮಾಡುವುದು. ಒಂದೇ ಸ್ಥಾನದಲ್ಲಿ ಸ್ಥಿತ ರೂಪದಿಂದ ವಾಸ ಮಾಡುವುದು ಪರ್ಯೂಷಣವೆನ್ನುತ್ತಾರೆ. ಅಥವಾ ಪರಭಾವದಿಂದ ವಿರತಿಯಾಗಿ ಸ್ವಭಾವದಲ್ಲಿ ರಮಣನಾಗುವ ಅರ್ಥವಿದೆ. ಪರಿ+ಉಪಶಮನ ಅರ್ಥಾತ್ ಪೂರ್ಣರೂಪದಿಂದ ಕರ್ಮಗಳನ್ನು ಶಾಂತಗೊಳಿಸುವುದು ಅಥವಾ ಉಪಶಮನ ಮಾಡುವುದು ಪರ್ಯೂಪಶಮನಾಃ ಆಗಿದೆ. ಕ್ರೋಧ ಮುಂತಾದ ನಾಲ್ಕು ವಿಧದ ಕಷಾಯ ಭಾವಗಳ ಉಪಶಮನ ಮಾಡುವುದು ಪರ್ಯೂಶಮನಃ ಆಗಿದೆ. ಪರಿ+ಉಪವಾಸ ಅರ್ಥಾತ್ ಮಳೆಗಾಲ (ಚಾತುರ್ಮಾಸ)ದಲ್ಲಿ ಒಂದೇ ಸ್ಥಾನದಲ್ಲಿದ್ದು ತನ್ನ ಆತ್ಮನಲ್ಲಿಯೇ ಲೀನನಾಗಿರುವುದು ಅಥವಾ ನಿವಾಸ ಮಾಡುವುದನ್ನು ತಡೆದು ಆತ್ಮನ ವಿಷಯದಲ್ಲಿ ಚಿಂತನ ಮನನ ಮಾಡುವುದು, ಆತ್ಮಶೋಧನೆ–ಆತ್ಮನ ಶುದ್ಧಿ ಮಾಡುವುದು, ಆತ್ಮನ ಸಾಮಿಪ್ಯ ಹೊಂದುವುದು ಅಥವಾ ಸ್ವಯಂದ ಸಾಮಿಪ್ಯ ಹೊಂದುವುದಾಗಿದೆ. ಹೀಗೆ ಎಲ್ಲ ಅವಗುಣಗಳನ್ನು ದೂರಮಾಡಿ ಅಂತರ್‌ಜ್ಯೋತಿಯನ್ನು ಜಾಗೃತಗೊಳಿಸುವ ಸಾಧನೆಯಲ್ಲಿ ಸಂಲಗ್ನನಾಗಿರುವುದೇ ಪರ್ಯೂಷಣವಾಗಿದೆ. ಆಚಾರ್ಯಗುರುಗಳು ಈ ಭಾವಗಳನ್ನು ಅಭಿವ್ಯಕ್ತಿಗೊಳಿಸುತ್ತಾ ಹೀಗೆ ಹೇಳಿದ್ದಾರೆ –

**'ಪರಿಸಮಂತಾತ್ ಉಷಣಂ ನಿವಾಸಃ ಸರ್ವಜೀವೈಃ**
**ಸರ್ವಮೈತ್ರೀ ಭಾವನೇತಿ ಪರ್ಯೂಷಣಮ್'**

ಅರ್ಥಾತ್ ನಾಲ್ಕು ರೂಪಗಳಲ್ಲಿ ತನ್ನ ಕಷಾಯಗಳನ್ನು ಸಮಾಪ್ತಗೊಳಿಸಲು, ನಾಲ್ಕು ರೂಪಗಳಿಂದ ತನ್ನೊಳಗೆ ಮೈತ್ರಿಗೆ ಜನ್ಮ ನೀಡಲು, ನಾಲ್ಕು ರೂಪಗಳಿಂದ ತನ್ನೊಳಗೆ ವಾತ್ಸಲ್ಯವನ್ನೂ ಪ್ರದರ್ಶಿಸಲು, ನಾಲ್ಕು ರೂಪಗಳಿಂದ ತನ್ನ ಜೀವನದಲ್ಲಿ ಧರ್ಮವನ್ನು ಪ್ರಕಟಗೊಳಿಸಲು ಪರ್ಯೂಷಣವನ್ನು ಸ್ವೀಕರಿಸುತ್ತಾರೆ. ಪರ್ಯೂಷಣದ ಉಗಮ ಒಂದು ಅನಾದಿ ನಿಧನ ಪರಂಪರೆಯೊಂದಿಗಿದೆ ಹಾಗೂ ಇದು ಜೀವನದಲ್ಲಿ ಪಾನಮಾಡುವ–ಕಲಶೋತ್ಸವವಾಗಿದೆ.

ಇದರೊಂದಿಗೆ ಇದು ಋತುಪರಿವರ್ತನೆಯ ಕಾಲಾವಧಿಯಲ್ಲಿ ಆಹಾರ ಶುದ್ಧಿಯ ಮೂಲಕ ಶಾರೀರಕ ಸ್ವಾಸ್ಥ್ಯದ ಸಮತೋಲನದಲ್ಲಿ ಅದ್ಭುತ ವೈಜ್ಞಾನಿಕ ಮಹತ್ವ ಹೊಂದಿದೆ. ಯಾಕೆಂದರೆ ಈ ದಿನಗಳಲ್ಲಿ ವ್ರತ-ಉಪವಾಸಗಳ ಮಾಧ್ಯಮದಿಂದ ಶರೀರದ ಸಂಚಿತ ವಿಕಾರಗಳನ್ನು ಕ್ಷಯ ಮಾಡಿ ಅದನ್ನು ಹೊಸ ಹವಾಮಾನಕ್ಕೆ ಅನುಗುಣವಾಗಿರುವಂತೆ ಸಹಾಯ ದೊರೆಯುತ್ತದೆ. ವಿಚಾರ ಶುದ್ಧಿಯ ದೃಷ್ಟಿಯಿಂದ ಇದರ ಆಧ್ಯಾತ್ಮಿಕ ಮಹತ್ವ ಸುಪ್ರಮಾಣಿತವಾಗಿದೆ. ಪರ್ಯೂಷಣದಲ್ಲಿ ಆತ್ಮಮಂಥನದ ಪ್ರಕ್ರಿಯೆಯೂ ಇದೆ. ಇದರಲ್ಲಿ ಆತ್ಮನ ವೈಮನಸ್ಯತೆಯನ್ನು, ಕರ್ಮರೂಪಿ ಶತ್ರುಗಳನ್ನು ದೂರ ಮಾಡುವ ಪ್ರಯತ್ನ ಮಾಡುತ್ತಾರೆ. ಸಂಯಮ ಪಾಲನೆ, ಆಹಾರ ಶುದ್ಧಿ, ದರ್ಶನ, ಸ್ತವನ ಪೂಜೆ, ಭಜನೆ, ತತ್ವ ಚಿಂತನೆ ಹಾಗೂ ಮನನ ಇತ್ಯಾದಿಗಳನ್ನು ಮಾಡಲಾಗುತ್ತದೆ ಇವುಗಳಿಂದ ಮಾನವೀಯ ಭಾವನೆಗಳು ಪರಿಷ್ಕೃತವಾಗುತ್ತವೆ.

ಆತ್ಮನ ವಿಶುದ್ಧಿಗಾಗಿ ಉತ್ತಮ ಕ್ಷಮೆ, ಉತ್ತಮ ಮಾರ್ದವ, ಉತ್ತಮ ಆರ್ಜವ, ಉತ್ತಮ ಶೌಚ, ಉತ್ತಮ ಸತ್ಯ, ಉತ್ತಮ ಸಂಯಮ, ಉತ್ತಮ ತಪ, ಉತ್ತಮ ತ್ಯಾಗ, ಉತ್ತಮ ಆಕಿಂಚನ್ಯ ಮತ್ತು ಉತ್ತಮ ಬ್ರಹ್ಮಚರ್ಯ ಈ ದಶಲಕ್ಷಣ ಧರ್ಮಗಳ ಪಾಲನೆಯನ್ನು ಮಾಡಲಾಗುತ್ತದೆ. ಈ ದಶಲಕ್ಷಣ ಧರ್ಮಗಳೊಂದಿಗೆ ಉತ್ತಮ ಶಬ್ದದ ಅನುವೃತ್ತಿ ಇದೆ. ಆಚಾರ್ಯ ಪೂಜ್ಯಪಾದ ಸ್ವಾಮಿಗಳು ಸರ್ವಾರ್ಥಸಿದ್ಧಿ ಗ್ರಂಥದಲ್ಲಿ ಇಷ್ಟ ಪ್ರಯೋಜನದ ನಿವೃತ್ತಿಯ ಅರ್ಥದಲ್ಲಿ ಈ ಧರ್ಮಗಳೊಂದಿಗೆ ಉತ್ತಮ ವಿಶೇಷಣವನ್ನು ಹೇಳಿದ್ದಾರೆ. ಆಚಾರ್ಯ ಅಕಲಂಕ ದೇವರು ತತ್ತ್ವಾರ್ಥರಾಜವಾರ್ತಿಕ ಗ್ರಂಥದಲ್ಲಿ "ಉತ್ತಮ ವಿಶೇಷಣಂ ಇಷ್ಟ ಪ್ರಯೋಜನ ಪರಿವರ್ಜನಾರ್ಥಮ್" ಎಂದು ಬರೆದಿದ್ದಾರೆ. ಈ ಕ್ಷಮಾದಿ ಧರ್ಮಗಳು ಯಾವುದೇ ಇಷ್ಟ ಪ್ರಯೋಜನ (ಲೌಕಿಕ ಕಾರ್ಯಗಳು) ದ ಪ್ರಾಪ್ತಿಗಾಗಿ ಸ್ವೀಕರಿಸಲಾಗುವುದಿಲ್ಲ ಆದ್ದರಿಂದ ಇವು ಸಂವರದ ಕಾರಣವಾಗಿವೆ. ಈ ವಿಶಿಷ್ಟತೆಯ ಸೂಚನೆಗಾಗಿ ಉತ್ತಮ ವಿಶೇಷಣವಿದೆ. ದಶಲಕ್ಷಣ ಧರ್ಮವು ಆತ್ಮನ ಸ್ವಭಾವವಾಗಿದೆ. ಸ್ವಭಾವದ ಉಪಲಬ್ಧಿಯಾಗದಿರುವುದರಿಂದ ವಿಭಾವರೂಪ ಪರಿಣತವು ಈ ಆತ್ಮನನ್ನು ಅಜ್ಞಾನ-ಅಂಧಕಾರಗಳಿಂದ ರಕ್ಷಿಸಿಕೊಳ್ಳಲು ಪುನಃ ಸಂಸ್ಕಾರಿತಗೊಳಿಸುವ ಅವಶ್ಯಕತೆ ಉಂಟಾಗುತ್ತದೆ. ಪರ್ಯೂಷಣದಲ್ಲಿ ದಶಲಕ್ಷಣ ಧರ್ಮಗಳ ಸಂಕಲ್ಪಪೂರ್ವಕ ಪಾಲನೆಯು ವಿಭಾವವನ್ನು ಕ್ಷೀಣಗೊಳಿಸಿ ಸ್ವಭಾವದಲ್ಲಿ ವ್ಯಕ್ತಿಯನ್ನು ಸ್ಥಿರಗೊಳಿಸುವ ವಿಧಿಯಾಗಿದೆ. ಪರ್ಯೂಷಣದ ಪಾನ ಸಾರ್ವಭೌಮಿಕ ಮತ್ತು ಸಾರ್ವಕಾಲಿಕವಾಗಿದೆ. ಇದರೊಳಗೆ ಕ್ರೋಧ ಮುಂತಾದವು ಹೇಯವೆಂದು ಅಹಿತಕಾರಿ ಎಂದು ಮತ್ತು ಕ್ಷಮಾದಿ ಭಾವಗಳು ಶ್ರೇಷ್ಠ, ಹಿತಕಾರಿ ಎಂದು ಸ್ವೀಕರಿಸಲಾಗಿರುವುದರಿಂದ ಸಾರ್ವಭೌಮಿಕವಾಗಿವೆ. ಕ್ರೋಧ ಮುಂತಾದವುಗಳು ಹೇಯ ಮತ್ತು ಉತ್ತಮ ಕ್ಷಮಾ ಇತ್ಯಾದಿಗಳು ಉಪಾದೇಯವೆಂದು ಹೇಳದಿರುವ ಯಾವ ಕಾಲವು ಇಲ್ಲದಿರುವುದರಿಂದ ಇವು ಸಾರ್ವಕಾಲಿಕವೂ ಆಗಿವೆ. ಅನಂತಕಾಲದಿಂದ ವರ್ಷದಲ್ಲಿ ಭಾದ್ರ, ಮಾಘ ಮತ್ತು ಚೈತ್ರ ಈ ಮಾಸಗಳ ಶುಕ್ಲಪಕ್ಷದಲ್ಲಿ ಪಂಚಮಿಯಿಂದ ಚತುರ್ದಶಿಯವರೆಗೆ ಮೂರು ಬಾರಿ ಆಚರಿಸಲಾಗುವ ಪರ್ಯೂಷಣ ಪರ್ವ ಭಾದ್ರಪದ ಮಾಸದಲ್ಲಿ ಒಂದು ಹೊಸ ಉಲ್ಲಾಸದ ಪಾನವನ್ನು ತರುತ್ತದೆ. ಜೀವನವನ್ನು ಚಿರಂತನ ಸಾಕಾರಗೊಳಿಸವ ಈ ಪರ್ವ ಜೀವನದ ಪಾನ ಮಂತ್ರವಾಗಿದೆ.

ಸಮಸ್ತ ಜಗತ್ತು ಅಮೃತಪಾನ ಮಾಡಲು ಕಾತುರವಾಗಿದ್ದರೆ ಪರ್ಯೂಷಣ ದಶ ಧರ್ಮಗಳ ಅಮೃತವಾಗಿದೆ. ಉತ್ಕೃಷ್ಟರೂಪದಲ್ಲಿ ಇದು ಮುನಿಧರ್ಮದ ಪ್ರಾಣವಾಗಿದೆ. ಸ್ವಾನುಭೂತಿಯ ಕುಂಜ ಹಾಗೂ ಧ್ಯಾನದ ಆಧಾರಶಿಲೆಯಾಗಿದೆ. ಪರ್ಯೂಷಣದ ಮುಖ್ಯ ಉದ್ದೇಶ_ಕಷಾಯಗಳ ಸಮಾಪ್ತಿ, ಪಾಪಗಳ ವಿಸರ್ಜನೆ ಹಾಗೂ ಶೋಷಣೆ, ಪುಣ್ಯದ ಪೋಷಣೆ - ಸುಖದ ನಿಧಾನ,

ಆನಂದದ ಖಜಾನೆ ಮತ್ತು ಆತ್ಮಗುಣಗಳ ಪುಂಜವಾಗಿದೆ. ಶ್ರಾವಕರು ಸಹ ಶಕ್ತ್ಯಾನುಸಾರ ಹಾಗು ಆಗಮಮಿತಿಯ ಅನುಸಾರ ಪರ್ಯೂಷಣದ ಅನುಪಾಲನೆ ಮಾಡುತ್ತಾರೆ. ಪರ್ಯೂಷಣವು ನಿರ್ವಿರೋಧ ಪ್ರಗತಿಶೀಲ ಜೀವನದ ಮುಕ್ತವಾಗಿರುವ ಹತ್ತು ದಿಕ್ಕುಗಳ ರೂಪದಲ್ಲಿದೆ. ಮನುಷ್ಯನ ದೈನಿಕ ಹಾಗೂ ಆಯುಪರ್ಯಂತಗಾಮಿ ವ್ಯವಹಾರಗಳ ಮಣಿಕೋಷವಾಗಿದೆ. ಇವುಗಳ ಪಾಲನೆಯಿಂದ ಅಂತರ್‌ಬಾಹ್ಯ ಶಾಂತಿ ದೊರೆಯುತ್ತದೆ ಹಾಗೂ ಆತ್ಮನ ತಲಸ್ಪರ್ಶಿ ಗುಣ-ರತ್ನಗಳ ಉಪಲಬ್ಧಿಯು ಸಹಜವಾಗಿ ಬಿಡುತ್ತದೆ. ಪರ್ಯೂಷಣದ ಪಾವನ ದಿನಗಳಲ್ಲಿ ವ್ಯಕ್ತಿಯು ಸ್ವತಃ ಕ್ಷಮಾಶೀಲ, ಮೃದು ಸ್ವಭಾವಿ ಹಾಗೂ ಉದಾರ ಹೃದಯಿಯಾಗುವ ಪವಿತ್ರ ಪುನೀತ ವಾತಾವರಣ ನಿರ್ಮಿತವಾಗುತ್ತದೆ. 'ಸತ್ಯಂ-ಶಿವಂ-ಸುಂದರಮ್'ದ ಸಹಜ ಅನುಭೂತಿಯಾಗುತ್ತದೆ. ಪರ್ಯೂಷಣದ ಮೂಲ ಆಧಾರಶಿಲೆ ಅಹಿಂಸೆಯಾಗಿದೆ ಅದು ವ್ಯಕ್ತಿಯ ಚಾರಿತ್ರಿಕ ಏಳ್ಗೆ, ಕರುಣೆ, ದಯೆ, ತಪ, ತ್ಯಾಗ, ಅಪರಿಗ್ರಹ, ಬ್ರಹ್ಮಚರ್ಯ ಇತ್ಯಾದಿ ಭಾವನೆಗಳನ್ನು ಜಾಗೃತಗೊಳಿಸುವ ಸಂದೇಶ ನೀಡುತ್ತದೆ. ಈ ಕಾರಣದಿಂದ ಇದು ವಿಶ್ವಹಿತಕಾರಿ ಸರ್ವಗ್ರಾಹ್ಯವಾಗಿದೆ. ಅಂಧಕಾರದಿಂದ ಪ್ರಕಾಶ, ಅಜ್ಞಾನಾವಸ್ಥೆಯಿಂದ ಜ್ಞಾನವಸ್ಥೆ ಪರಮೋದಾತ್ತ ಭಾವನೆಗಳ ಪ್ರೇರಕ ವೀತರಾಗದ ಪೋಷಕ, ಸಂಯಮ ಹಾಗೂ ಆತ್ಮ ಸಾಧನೆಯ ಪಾನ ಹಾಗೂ ಜೀವನ ಸೃಜನತೆಯ ಪರ್ವವಾಗಿದೆ ಆತ್ಮನ ಸಂಧಿಯೇ ಪರ್ಯೂಷಣದ ಮೌಲಿಕತೆಯಾಗಿದೆ.

ಹಿಂದಿನ ಸತ್‌ಕರ್ಮಗಳ ಪುಣ್ಯ ಸಂಚಯದ ಫಲಸ್ವರೂಪದಿಂದ ಗ್ವಾಲಿಯರ್ ನಗರಕ್ಕೆ ಪರಮ ತಪಸ್ವಿ ಸಂತ ಶಿರೋಮಣಿ ವಿದ್ಯಾಸಾಗರ ಮಹಾರಾಜರ ಯೋಗ್ಯತಮ ಶಿಷ್ಯ ಪರಮ ಪೂಜ್ಯ ಮುನಿಶ್ರೀ ಆರ್ಜವಸಾಗರ ಮಹಾರಾಜರ ಸಸಂಘದ ಪರಮ ಪುನೀತ ಸಾನಿಧ್ಯ ಪ್ರಾಪ್ತವಾಯಿತು. ಅಭೀಕ್ಷ್ಣಜ್ಞಾನೋಪಯೋಗಿ ಮುನಿಶ್ರೀ ಆರ್ಜವಸಾಗರ ಮಹಾರಾಜರ ಗಹನ ಗಂಭೀರ ಜ್ಞಾನ, ನಿರ್ದೋಷ ನಿಸ್ಪೃಹ ಚರ್ಯೆ ಮತ್ತು ಸಹಜಸರಳ ವೃತ್ತಿ ಎಲ್ಲರಿಗೂ ಸ್ವತಹ ತನ್ನೆಡೆಗೆ ಆಕರ್ಷಿತವಾಗುವಂತೆ ಮಾಡುತ್ತದೆ. ಧರ್ಮ-ದರ್ಶನ, ಸಂಸ್ಕೃತ ಹಾಗೂ ಆಧ್ಯಾತ್ಮದಂತಹ ಅತಿಗೂಢ ವಿಷಯಗಳ ಆಗಮಿಕ ಸರಳ ಪ್ರಸ್ತುತಿ ಅವರ ಅನುಪಮ ವೈಶಿಷ್ಟ್ಯಗಳಾಗಿವೆ. ಚಾತುರ್ಮಾಸದ ಕಾಲಾವಧಿಯಲ್ಲಿ ನಿರ್ಜರ ಮತ್ತು ನಿರಾಪದ ಅಭೂತಪೂರ್ವ ಪ್ರಭಾವ ಉಂಟಾಗಿ ಜನ-ಜನಕ ಶ್ರದ್ಧೆ ಸಾಷ್ಟಾಂಗವಾಯಿತು ಹಾಗೂ ಮನಸ್ಸು ಅಭಿಭೂತರಾಗಿ ಧರ್ಮಾಚರಣೆಯ ಸರಿತದಲ್ಲಿ ಅವಗಾಹನೆಯಾಗಲಿ, ಧರ್ಮದ ವಿಕಾಸವಾಗಲಿ, ನವಚೇತನಗಳಲ್ಲಿ ಧಾರ್ಮಿಕ ಭಾವನೆಗಳು ಅಭಿವೃದ್ಧಿ ಹೊಂದಲಿ, ಸಮಾಜದಲ್ಲಿ ಸಮನ್ವಯ ಶೀಲತೆಯ ಮಧುರ ವಾತಾವರಣ ನಿರ್ಮಿತವಾಗಲಿ ಹಾಗೂ ಧರ್ಮಾಚರಣೆಯ ಭಾವ ಸ್ಥಾಪನೆಯಾಗಲಿ ಎನ್ನುವ ಭಾವನೆಗಳನ್ನು ಹೊಂದಿದ್ದರು.

ವರ್ಷಾವಾಸದಲ್ಲಿ ಚಾತುರ್ಮಾಸ ನಿಷ್ಠಾಪನೆಯ ನಂತರ ವಿಹಾರದ ಸಮಯದಲ್ಲಿ ಮುನಿಶ್ರೀಗಳ ಉಪಸ್ಥಿತಿಯಾದಾಗ ಸ್ನೇಹಿ ಬ್ರಹ್ಮಚಾರಣಿ ಸಹೋದರಿಯರು ಪರ್ಯೂಷಣ ಪರ್ವದ ಪ್ರವಚನಗಳ ಕಾಪಿ ತಯಾರಿಸಲು ಸಿ.ಡಿ ಹಾಗೂ ಕ್ಯಾಸೆಟ್ಟುಗಳನ್ನು ನನಗೆ ನೀಡಿದರು. ಪರಮ ಪೂಜ್ಯ ವಾತ್ಸಲ್ಯಮಯ ಗುರುಗಳು ಮುಗಳ್ನಗುತ್ತಾ ವಾತ್ಸಲ್ಯಮಯ ಮಂಗಳ ಆಶೀರ್ವಾದ ನೀಡಿದರು. ಮುನಿಶ್ರೀಗಳ ಮಂಗಳ ಆಶೀರ್ವಾದ ಮತ್ತು ನನ್ನ ಜೀವನ ಸಂಗಾತಿ ಶ್ರೀಮಾನ್ ಅಶೋಕಕುಮಾರ ಮೋದಿ, ಮಗಳು ಕುಮಾರಿ ಆರತಿ ಮೋದಿ, ಕುಮಾರಿ ಆರಾಧನಾ ಮೋದಿಗಳ ವಿಶಿಷ್ಟ ಸಹಯೋಗದಿಂದ ಅತಿಕಠಿಣ ಶ್ರಮಸಾಧ್ಯ ಲೇಖನ ಹಾಗೂ ಸಂಪಾದನ ಕಾರ್ಯ ಸಫಲತಾ ಪೂರ್ವಕ ಸಂಪೂರ್ಣವಾಯಿತು. ಆದ್ದರಿಂದ ಹೃದಯ ಪ್ರಫುಲ್ಲತವಾಗಿದೆ. ಇದಕ್ಕಾಗಿ ನಾವು ಈ

ಅವಕಾಶವನ್ನು ನೀಡಿ ಧರ್ಮಾರಾಧನೆಯಲ್ಲಿ ನಮ್ಮ ಸಮಯವನ್ನು ತೊಡಗಿಸಲು ಕಾರಣರಾದ ಮುನಿಶ್ರೀಗಳಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಪರಿವಾರದ ಅಪರಿಮಿತ ಸಹಯೋಗದಿಂದ ಪರ್ಯೂಷಣ ಪಾನ ಕೃತಿ ಮೂರ್ತರೂಪ ಪಡೆದಿರುವುದರಿಂದ ಅವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ ಈ ಸಂದರ್ಭದಲ್ಲಿ ಪರಿವಾರದ ಜನರಿಗೆ ಶಾಶ್ವತ ಕೃತಜ್ಞಳಾಗಿದ್ದೇನೆ ಹಾಗೂ ಎಲ್ಲರಿಗೂ ನನ್ನ ಹಾರ್ದಿಕ ವಾತ್ಸಲ್ಯ ಭಾವವನ್ನು ಪ್ರಕಟಿಸುತ್ತೇನೆ.

ಮುನಿಶ್ರೀಗಳ ಪಾನ ಮಾಡುವ ವಾಣಿಯಿಂದ ಹೇಳಲ್ಪಟ್ಟಿರುವ ಒಂದೊಂದು ಶಬ್ದ ಕೇಳುಗರ ಹೃದಯವನ್ನು ಹರ್ಷಗೊಳಿಸುವ ಪ್ರಭಾವೋತ್ಪಾದಕವಾಗಿರುತ್ತದೆ. ಅವರ ಪ್ರವಚನಗಳಲ್ಲಿ ವಿಷಯದ ಸುಬೋಧತೆ ಮತ್ತು ಪ್ರವಾಹಿ ಪ್ರಸ್ತುತತೆ ಸಹಜವಾಗಿ ಬೋಧಗಮ್ಯವಾಗಿರುತ್ತದೆ. ಈ ಕಾರಣದಿಂದಲೇ ಪ್ರವಚನಗಳಲ್ಲಿ ಅಪಾರ ಜನಸಮೂಹದಲ್ಲಿ ಸಹ ನಿರವತೆ ಇರುತ್ತದೆ ಮುನಿಶ್ರೀಗಳ ಪ್ರವಚನಗಳಲ್ಲಿ ಅನೇಕ ಉದಾಹರಣೆಗಳ, ವ್ಯಾಖ್ಯಾನಗಳು, ಪೌರಾಣಿಕ ಸಂದರ್ಭಗಳು ಪ್ರಸಂಗಗಳು ಮತ್ತು ಸೈದ್ಧಾಂತಿಕ ಚರ್ಚೆಗಳು ಸಹ ಪ್ರೇರಣೆದಾಯಕವಾಗಿರುತ್ತವೆ. ಇವೆಲ್ಲವೂ ಮಾನವನನ್ನು ಸಂಸಾರದ ಕಲ್ಮಶಗಳಿಂದ ದೂರವಿರುವ ಶಿಕ್ಷಣ ನೀಡುತ್ತವೆ.

'ಪರ್ಯೂಷಣಾಮೃತ' ಕೃತಿಯಲ್ಲಿ ಮುನಿಶ್ರೀಗಳಿಂದ ನೀಡಿರುವ ದಶಲಕ್ಷಣ ಧರ್ಮಗಳ ಉಪದೇಶವು–ಅಶೋಕನಗರ ಜಿಲ್ಲೆಯಲ್ಲಿ ಪರ್ಯೂಷಣ ಪರ್ವದ ಪಾವನ ಸಂದರ್ಭದಲ್ಲಿ ಸರಳತೆ ಹಾಗೂ ಭಾವ ಪ್ರಣತೆಯಿಂದ ಹೇಳಿದ್ದರು ಹಾಗೂ ತಿಳಿಸಿದ್ದರು. ಪ್ರಸ್ತುತ ಕೃತಿಯು ವ್ಯಕ್ತಿಯ ಜೀವನವನ್ನು ಗುಣಾತ್ಮಕ ಪರಿವರ್ತನೆಯ ಸಾರ್ಥಕ ಧರ್ಮಸಿಂಧುವಿನೊಂದಿಗೆ ದಶಧರ್ಮಗಳ ಅಮೃತವು ಜೀವನ ವ್ಯವಹಾರದಲ್ಲಿ ಪಾನ ಮಾಡುವ ಪ್ರಬಲ ಪ್ರೇರಣೆಯೂ ಇದೆ; ಹಾಗೂ ಮಾನವನಿಂದ ಮಹಾಮಾನವನಾಗುವ ಅಂತರ್‌ಯಾತ್ರೆಯ ಮಾರ್ಮಿಕ ಮಾರ್ಗದರ್ಶನವು ಇದೆ. ಈ ಕೃತಿಯನ್ನು ಓದಿ ಓದುಗರು ಆತ್ಮಕಲ್ಯಾಣದ ಮಾರ್ಗವನ್ನು ಅವಶ್ಯವಾಗಿ ಅನ್ವೇಷಣೆ ಮಾಡಿಕೊಳ್ಳಬಲ್ಲರು ಹಾಗೂ ಆತ್ಮೋದ್ಧಾರಕರಾಗಿ ದುಃಖರೂಪದ ಅನಂತ ಪರಿಭ್ರಮಣೆಯನ್ನು ನಾಶ ಮಾಡುವ ಸಫಲ ಪ್ರಯತ್ನವನ್ನು ಮಾಡಬಲ್ಲರು. ನಿಶ್ಚಯವಾಗಿ ಈ ಕೃತಿಯು ವ್ಯಕ್ತಿಯ ನಿಜವಾದ ಮಾರ್ಗದರ್ಶಕನಾಗಿ ಆತನ ಗುಣಾತ್ಮಕ ಪರಿವರ್ತನೆಯ ಆಧಾರವಾಗುತ್ತದೆ. ಈ ಭಾವನೆಗಳೊಂದಿಗೆ ಮುನಿವರರ ಶ್ರೀ ಚರಣಗಳಲ್ಲಿ ಪರಿವಾರ ಸಹಿತ ಮೂರು ಬಾರಿ ನಮೋಸ್ತುಗಳನ್ನು ಅರ್ಪಿಸುತ್ತಾ ಈ ಸುಬೋಧ ಕೃತಿಯನ್ನು ಓದುಗರಿಗೆ ಗುರು ಆಶೀರ್ವಾದವೆಂದು ಭಾವಿಸಿ ಸಮರ್ಪಿಸುತ್ತೇನೆ.

ಮುನಿಚರಣಾನುರಾಗಿ,

ತಾವು ಮಾಡಿವಿರಿ ಬಹಳ ಉಪಕಾರದ ಈ ಕೃತಿಯು ಅವುಗಳಲ್ಲಿ ಒಂದಾಗಿದೆ.

**ಡಾ. ಶ್ರೀಮತಿ ಅಲ್ಪನಾ ಅಶೋಕ ಜೈನ ಮೋದಿ, ಗ್ವಾಲಿಯರ್**

ಎಂ.ಎ. (ದ್ವಿ), ಎಮ್‌ಫಿಲ್., ಪಿ.ಎಚ್.ಡಿ

ತಮ್ಮದನ್ನು ತಮಗೆ ಅರ್ಪಸಲಾಗಿದೆ ಇದರಲ್ಲಿ ನನ್ನದೇನಿದೆ?

# ಅನುವಾದಕರ ಅನಿಸಿಕೆ

ಆಗಮ ಹಾಗೂ ಸಿದ್ಧಾಂತಕ್ಕನುಗುಣವಾಗಿ ತಮ್ಮ ಮುನಿಚರ್ಯೆಯನ್ನು ರೂಪಿಸಿಕೊಂಡಿರುವ, ಇತ್ತೀಚೆಗೆ ತಾನೇ ಆಚಾರ್ಯಪದವಿಯನ್ನು ಅಲಂಕರಿಸಿರುವ ಪ.ಪೂ. ಆಚಾರ್ಯ ಶ್ರೀ ಆರ್ಜವಸಾಗರ ಮಹಾರಾಜರನ್ನು ನಾನು ಪ್ರಥಮ ಬಾರಿಗೆ ದರ್ಶನ ಮಾಡಿದ್ದು ಶ್ರವಣಬೆಳಗೊಳದಲ್ಲಿ ಸಂದರ್ಭ: 1993ರ ಭಗವಾನ ಬಾಹುಬಲಿಯ ಮಹಾಮಸ್ತಕಾಭಿಷೇಕ. ಮಸ್ತಕಾಭಿಷೇಕದ ನಂತರ ಮುನಿಶ್ರೀಗಳು ವಿಹಾರ ಮಾಡುತ್ತಾ 1994ರಲ್ಲಿ ಶಿವಮೊಗ್ಗದ ವರ್ಧಮಾನ ವಿದ್ಯಾರ್ಥಿ ನಿಲಯದಲ್ಲಿ ಅವರ ದರ್ಶನ ಪಡೆದಾಗ ಅವರಿಂದ ಪ್ರಭಾವಿತನಾಗಿ ನಾನು ನನ್ನ ಪತ್ನಿ ಚರ್ಮ ಹಾಗೂ ರೇಶ್ಮೆಯ ವಸ್ತುಗಳನ್ನು ತ್ಯಾಗ ಮಾಡಿದೆವು. ನಂತರ ಅವರ ದರ್ಶನವಾದದ್ದು ಅವರು ದಕ್ಷಿಣ ಭಾರತದ ತಮಿಳುನಾಡಿನಲ್ಲಿ ಸುಮಾರು ಏಳು ವರ್ಷಗಳ ಕಾಲ ವಿಹಾರಮಾಡಿ ಅಪೂರ್ವ ಧರ್ಮ ಪ್ರಭಾವನೆ ಮಾಡಿ 2002ರಲ್ಲಿ ಭದ್ರಾವತಿಗೆ ಆಗಮಿಸಿದಾಗ. ಮುಂದೆ ಅದೇ ವರ್ಷ ಶಿವಮೊಗ್ಗದಲ್ಲಿ ವರ್ಷಾಯೋಗ ಮಾಡಿದರು ಆಗ ಅವರ ನಿಕಟ ಸಂಪರ್ಕ ಉಂಟಾಗಿ ಅವರ ಸಮ್ಮುಖದಲ್ಲಿ ಅವರು ಹಿಂದಿ ಭಾಷೆಯಲ್ಲಿ ರಚಿಸಿದ **'ಜೈನಾಗಮ ಸಂಸ್ಕಾರ'**ವನ್ನು ಅಧ್ಯಯನ ಮಾಡಿ ಅದನ್ನು ಮುಂದೆ ಕನ್ನಡ ಭಾಷೆಗೆ ಅನುವಾದ ಮಾಡಿ ಪ್ರಕಟಿಸಲಾಯಿತು ಮುಂದೆ ಅವರ ವಿಹಾರ ಉತ್ತರ ಭಾರತದ ಕಡೆಗೆ ಸಾಗಿತು. ಪೂಜ್ಯರು ತಮ್ಮ ವರ್ಷಾಯೋಗದ ಸಂದರ್ಭ ಹಾಗೂ ವಿಶೇಷ ಕಾರ್ಯಕ್ರಮಗಳ ಸಂದರ್ಭದಲ್ಲಿ ತಮ್ಮ ಶಿಷ್ಯರ ಮೂಲಕ ನನ್ನೊಡನೆ ಸಂಪರ್ಕದಲ್ಲಿದ್ದರು.

2013ರಲ್ಲಿ ನಾವು ಬೆಂಗಳೂರಿನ ಶ್ರೀ ಎ. ಪಸನ್ನಕುಮಾರರ ನೇತೃತ್ವದಲ್ಲಿ ಗುಜರಾತಿನ ತೀರ್ಥಕ್ಷೇತ್ರಗಳ ದರ್ಶನಕ್ಕೆ ತೆರಳಿದಾಗ ತಾರಂಗದಲ್ಲಿ ಅವರ ದರ್ಶನವಾಯಿತು ಮತ್ತೆ ಈ ವರ್ಷದ ಮಾರ್ಚ ತಿಂಗಳಲ್ಲಿ ಮಧ್ಯಪ್ರದೇಶದ ತೀರ್ಥಕ್ಷೇತ್ರಗಳ ದರ್ಶನದಲ್ಲಿ **'ಸಿದ್ಧವರಕೂಟ'**ದಲ್ಲಿ ಅವರ ದರ್ಶನವಾಯಿತು. ಆಗ ಅವರು ನೀಡಿದ ಪ್ರವಚನ ಅಮೋಘವಾದದ್ದು. ಆ ಸಂದರ್ಭದಲ್ಲಿಯೇ ಆಚಾರ್ಯಶ್ರೀಗಳು ಆಶೀರ್ವಾದ ಪೂರ್ವಕವಾಗಿ ಈ ಕೃತಿಯನ್ನು ನೀಡಿದರು. ಅವರ ಪ್ರವಚನದಿಂದ ಪ್ರಭಾವಿತರಾದ ನಮ್ಮ ಯಾತ್ರಾ ತಂಡ ಈ ಕೃತಿಯನ್ನು ಕನ್ನಡದಲ್ಲಿ ತರಲು ನಿರ್ಧರಿಸಿ ನನಗೆ ಅನುವಾದ ಮಾಡಿಕೊಡುವಂತೆ ಸೂಚಿಸಿದ್ದರಿಂದ ಈ ಕೃತಿ ಅನುವಾದಗೊಂಡು ನಮ್ಮ ಯಾತ್ರಾ ತಂಡದ ಉದಾರ ದಾನ ಹಾಗೂ ಸ್ವಾಧ್ಯಾಯ ಪ್ರೇಮದಿಂದ ಪ್ರಕಟಗೊಂಡಿದೆ.

ದಶಲಕ್ಷಣ ಪರ್ವ ಆತ್ಮನ ಆರಾಧನಾ ಪರ್ವವಾಗಿದ್ದು ಪರ್ಯೂಷಣ ಪರ್ವವೆಂದೂ ಪ್ರಸಿದ್ಧವಾಗಿದ್ದು ಆಚಾರ್ಯ ಶ್ರೀಗಳು 2005ರ ವರ್ಷಾಯೋಗವನ್ನು ಮಧ್ಯಪ್ರದೇಶದ ಅಶೋಕನಗರ ಜಿಲ್ಲೆಯಲ್ಲಿ ಮಾಡಿದ್ದು ಈ ಪರ್ವದ ಸಂದರ್ಭದಲ್ಲಿ ನೀಡಿದ್ದ ಪ್ರವಚನಗಳ ಸಂಗ್ರಹ ಈ ಕೃತಿಯಾಗಿದೆ. ಈ ಸಂಗ್ರಹದ ಸಂಪಾದನೆ ಮಾಡಿರುವ ಗ್ವಾಲಿಯರನ **ಶ್ರೀಮತಿ ಅಲ್ಪನಾ ಜೈನ ಮೋದಿ**ಯವರು ಅಭಿನಂದನಾರ್ಹರಾಗಿದ್ದಾರೆ. ಅವರು ಬರೆದಿರುವ ಸಂಪಾದಕೀಯ ಈ ಕೃತಿ ಹಾಗೂ ಪರ್ವದ ಬಗ್ಗೆ ಪೂರ್ಣವಿವರಗಳನ್ನು ಒಳಗೊಂಡಿರುವುದರಿಂದ. ನಾನು ಹೆಚ್ಚಾಗಿ ಏನನ್ನೂ ಹೇಳಲು ಇಚ್ಛೆಪಡುವುದಿಲ್ಲ. ಕೃತಿಯನ್ನು ಓದಿದಾಗ ಓದುಗರಿಗೆ ಎಲ್ಲವೂ ವಿದಿತವಾಗುತ್ತದೆ.

ಸುಮಾರು 28 ವರ್ಷಗಳಷ್ಟು ದೀರ್ಘವಾದ ಅವರ ಮುನಿಚರ್ಯೆಯ ಅನುಭವ, ಅಗಾಧವಾದ ಆಗಮ ಪಾಂಡಿತ್ಯ ಸಿದ್ಧಾಂತಗಳ ಚಿಂತನೆ ಈ ಕೃತಿಗೆ ಎಲ್ಲ ಮೆರಗನ್ನು ನೀಡಿದೆ.

ದಶಲಕ್ಷಣ ಧರ್ಮಕ್ಕೆ ಸಂಬಂಧಿಸಿದ ಅವರ ಪ್ರವಚನಗಳಲ್ಲಿ ಅಗಾಧವಾದ ಪಾಂಡಿತ್ಯವಿದೆ. ವಿಷಯದ ವಿಶ್ಲೇಷಣೆಯಲ್ಲಿ ಅಪಾರವಾದ ಅನುಭವವಿದೆ. ಆಗಮ–ಸಿದ್ಧಾಂತಗಳ ಪ್ರಖರವಾದ ವಿವೇಚನೆ ಇದೆ. ಉದಾಹರಣೆಗಳೊಂದಿಗೆ ದಶಧರ್ಮಗಳ ಅರ್ಥಗರ್ಭಿತ ಆಳವಾದ ಚಿಂತನೆ ಇದೆ. ಆತ್ಮಕಲ್ಯಾಣದ ಮಾರ್ಗವಿದೆ. ಸಂಸಾರದಿಂದ ವಿಮುಖರಾಗಿ ತ್ಯಾಗ ಮಾರ್ಗದಲ್ಲಿ ಪಾದಾರ್ಪಣೆ ಮಾಡಲು ಪ್ರೇರಣೆ ನೀಡುವಂತಹ ಮೋಕ್ಷ ಮಾರ್ಗದ ಸರಳ ನಿರೂಪಣೆ ಇದೆ. ಈ ಕೃತಿಯಲ್ಲಿ ಆಚಾರ್ಯರು ತಾವು ನಡೆದು ಬಂದ ಮುನಿ ಜೀವನದ ಮಾರ್ಗವನ್ನು ತೆರೆದಿಟ್ಟಿದ್ದಾರೆ. ಆತ್ಮ ಕಲ್ಯಾಣವನ್ನು ಬಯಸುವ ಪ್ರತಿಯೊಬ್ಬ ಶ್ರಾವಕರು ಓದಲೇ ಬೇಕಾದ ಕೃತಿ ಇದಾಗಿದೆ ಎಂದು ಹೇಳಿದರೆ ಅತಿಶಯೋಕ್ತಿ ಇಲ್ಲ.

ಇಂತಹ ಅಮೋಘವಾದ ಕೃತಿಯನ್ನು ಅನುವಾದ ಮಾಡಲು ಪ್ರೇರಣೆ ನೀಡಿದ ನಮ್ಮ ಯಾತ್ರಾ ತಂಡಕ್ಕೆ ಧನ್ಯವಾದಗಳು. ಪ್ರತಿ ಹಂತದಲ್ಲಿ ಇದನ್ನು ಓದಿ ತಿದ್ದಿ ಓದುಗರ, ಧರ್ಮಬಂಧುಗಳ ಕೈ ಸೇರುವಲ್ಲಿ ಕಾರಣರಾದ ನಮ್ಮ ಯಾತ್ರಾ ತಂಡದ ನಾಯಕ ಹಾಗೂ ಕೃತಿಯ ಮುಖಪುಟ ಹಾಗೂ ಒಟ್ಟಾರೆ ಪುಸ್ತಕದ ವಿನ್ಯಾಸಕ್ಕೆ ಕಾರಣರಾದ ಆತ್ಮೀಯ ಧರ್ಮಬಂಧು, ಮಿತ್ರರಾದ ಬೆಂಗಳೂರಿನ ಶ್ರೀ ಎ. ಪ್ರಸನ್ನಕುಮಾರರು ಅಭಿನಂದನಾರ್ಹರಾಗಿದ್ದಾರೆ. ಅವರಿಗೆ ಧನ್ಯವಾದಗಳು. ಕಳೆದ ಹತ್ತಾರು ವರ್ಷಗಳಿಂದ ಮಿತ್ರರಾಗಿ ನನ್ನ ಕೆಲವು ಪುಸ್ತಕಗಳು ಸೇರಿದಂತೆ ಈ ಪುಸ್ತಕದ ಹಸ್ತ ಪ್ರತಿಯಿಂದ ಡಿ.ಟಿ.ಪಿ. ಮಾಡಿದ ಮೈಸೂರಿನ ಹಂಸು ಗ್ರಾಫಿಕ್ಸ್‌ನ ಶ್ರೀ ಉಮಾಶಂಕರ ಕೆ. ಮತ್ತು ಶ್ರೀಮತಿ ರಮ್ಯ ಎ.ಎಂ. ರವರಿಗೆ, ಪುಸ್ತಕದ ಆಕರ್ಷಕ ಪ್ರಕಾಶನಕ್ಕೆ ಕಾರಣರಾದ ನಮ್ಮ ಯಾತ್ರಾತಂಡದ ದಾನಿಗಳಿಗೆ, ಆಕರ್ಷಕವಾಗಿ ಮುದ್ರಿಸಿ ಸಕಾಲದಲ್ಲಿ ಬಿಡುಗಡೆ ಮಾಡಲು ಸಹಕರಿಸಿದ ಶ್ರೀ............................ .... ಮಾಲೀಕರು ......................... ಪ್ರೆಸ್....................... ಇವರಿಗೂ, ಪುಸ್ತಕವನ್ನು ಅನುವಾದ ಮಾಡುವಾಗ ಅತ್ಯಂತ ಸಹನೆಯಿಂದ ಸಹಕರಿಸಿದ ನನ್ನ ಪತ್ನಿ, ಸೊಸೆ, ಮಗ, ಮೊಮ್ಮಗಳಾದ ಕುಮಾರಿ ಅವನಿಗೆ ಧನ್ಯವಾದಗಳು, ನಮಗೆಲ್ಲರಿಗೂ ಆಶೀರ್ವದಿಸಿ ಮೋಕ್ಷಮಾರ್ಗ ತೋರಿರುವ ಆಚಾರ್ಯ ಶ್ರೀ 108 ಆರ್ಜವ ಸಾಗರ ಮುನಿ ಮಹಾರಾಜರಿಗೆ ಅನಂತ ನಮೋಸ್ತುಗಳು

ಚಾತುರ್ಮಾಸ
ವರ್ಷಾಯೋಗ – 2015

**ಪ್ರೊ. ಜೀವಂಧರಕುಮಾರ ಕೆ. ಹೋತಪೇಟೆ**
ಶ್ರವಣಬೆಳಗೊಳ

# ಅನುಕ್ರಮಣಿಕೆ


| ಕ್ರಮ ಸಂಖ್ಯೆ | ವಿವರಣೆ | ಪುಟ ಸಂಖ್ಯೆ |
|---|---|---|
| 1. | ಉತ್ತಮ ಕ್ಷಮಾಧರ್ಮ | 1–19 |
| 2. | ಉತ್ತಮ ಮಾರ್ದವ ಧರ್ಮ | 20–43 |
| 3. | ಉತ್ತಮ ಆರ್ಜವ ಧರ್ಮ | 44–62 |
| 4. | ಉತ್ತಮ ಶೌಚ ಧರ್ಮ | 63–84 |
| 5. | ಉತ್ತಮ ಸತ್ಯ ಧರ್ಮ | 85–108 |
| 6. | ಉತ್ತಮ ಸಂಯಮ ಧರ್ಮ | 109–137 |
| 7. | ಉತ್ತಮ ತಪ ಧರ್ಮ | 138–158 |
| 8. | ಉತ್ತಮ ತ್ಯಾಗ ಧರ್ಮ | 159–182 |
| 9. | ಉತ್ತಮ ಆಕಿಂಚನ್ಯ ಧರ್ಮ | 183–201 |
| 10. | ಉತ್ತಮ ಬ್ರಹ್ಮಚರ್ಯ ಧರ್ಮ | 202–230 |
| 11. | ಕ್ಷಮಾವಾಣಿ | 231–239 |
| 12. | ಆಕರ ಗ್ರಂಥಗಳು | |

# ಣಮೋಕಾರ ಮಹಾ ಮಂತ್ರ

ಓಂ

ಣಮೋ ಅರಿಹಂತಾಣಂ

ಣಮೋ ಸಿದ್ಧಾಣಂ

ಣಮೋ ಆಇರಿಯಾಣಂ

ಣಮೋ ಉವಜ್ಝಾಯಾಣಂ

ಣಮೋ ಲೋಏ ಸವ್ವ ಸಾಹೂಣಂ

ಏಸೋ ಪಂಚಣಮೋಯಾರೋ

ಸವ್ವಪಾವಪಣಾಸಣೋ ।

ಮಂಗಲಾಣಂ ಚ ಸವ್ವೇಸಿಂ

ಪಢಮಂಹೊಯಿ ಮಂಗಲಂ ॥

# ಉತ್ತಮ ಕ್ಷಮಾ ಧರ್ಮ
## ಕ್ರೋಧದ ಶಮನ – ಕ್ಷಮೆಯ ಮಿಲನ

### ಮಂಗಲಾಚರಣೆ

**ಮಂಗಲಂ ಭಗವಾನ ವೀರೋ, ಮಂಗಲಂ ಗೌತಮೋ ಗಣೀ ।**
**ಮಂಗಲಂ ಕುಂದಕುಂದಾರ್ಯೋ, ಜೈನಧರ್ಮೋಽಸ್ತು ಮಂಗಲಮ್ ॥**
**ಸರ್ವಮಂಗಲ ಮಾಂಗಲ್ಯಮ್, ಸರ್ವಕಲ್ಯಾಣ ಕಾರಕಮ್।**
**ಪ್ರಧಾನಂ ಸರ್ವ ಧರ್ಮಾಣಾಂ, ಜೈನಂ ಜಯತು ಶಾಸನಮ್॥**

ಸದ್ಧರ್ಮ ಬಂಧುಗಳೇ,

ಭಾದ್ರಪದ ಪಂಚಮಿಯ ಈ ಪಾವನದಿನ ನಮ್ಮೆಲ್ಲರಿಗೂ ಉತ್ಸರ್ಪಿಣಿ ಮತ್ತು ಅವಸರ್ಪಿಣಿಯ ಪ್ರಾರಂಭದ ದಿನಗಳನ್ನು ಸ್ಮರಣೆಗೆ ತರುತ್ತದೆ. 49 ದಿನಗಳ ಪ್ರಶಸ್ತ ವರ್ಷಾಧಾರೆಗಳು ಈ ಭೂಮಿಯನ್ನು ನಿರ್ಮಲಗೊಳಿಸುತ್ತವೆ, ಆಗಲೇ ಈ ಸೃಷ್ಟಿಯ ಪುನಃ ಪ್ರಾರಂಭ ಮತ್ತು ಜೀವಗಳ ಉತ್ಪತ್ತಿ, ಅವುಗಳ ಸುಖ ಸೌಲಭ್ಯಗಳು ಪ್ರಾರಂಭವಾಗುತ್ತವೆ. ಬಹುಶಃ ಈ ಕಾರಣದಿಂದಲೇ ಈ ಕಾಲಗಳ ಪ್ರಾರಂಭ ಸಹ ಅನಾದಿ ನಿಧನವಿದೆ. ಈ ಪರ್ಯೂಷಣ ಪರ್ವ, ದಶಲಕ್ಷಣ ಪರ್ವ, ಅಷ್ಟಮಿ, ಚತುರ್ದಶಿ, 16 ಕಾರಣ ಭಾವನೆಗಳು, ಅಷ್ಟಾಹ್ನಿಕ ಪರ್ವ, ರತ್ನತ್ರಯ ಇತ್ಯಾದಿ ಪರ್ವಗಳೂ ಸಹ ಅನಾದಿನಿಧನವಾಗಿವೆ. ಎಂದಿನಿಂದ ಪ್ರಾರಂಭವಾದವು ಯಾರು ರೂಪಿಸಿದರು, ಇದನ್ನು ಹೇಳಲಾಗದು. ಇವುಗಳಿಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ ಆದ್ದರಿಂದ ಅನಾದಿನಿಧನವಾಗಿವೆ.

ಇಂದಿನಿಂದ ಪ್ರಾರಂಭವಾಗಿರುವ ದಶಲಕ್ಷಣ ಪರ್ವವು ಪ್ರತಿವರ್ಷವೂ ಬರುತ್ತದೆ. ವರ್ಷದಲ್ಲಿ ಈ ಪರ್ವವು ಮೂರು ಸಾರಿ ಬರುತ್ತದೆ. ವಿಶೇಷವಾಗಿ ಜನರು ಭಾದ್ರಪದ ಮಾಸದಲ್ಲಿ ವಿಶೇಷ ಉತ್ಸಾಹಪೂರ್ವಕವಾಗಿ ಆಚರಿಸುತ್ತಾರೆ. ಈ ಪರ್ವದಲ್ಲಿ ನಾವೆಲ್ಲರೂ ಸಾಧನೆ ಮಾಡುತ್ತಾ ಚಿಂತನ–ಮನನ ಮಾಡುತ್ತಾ ಮಹಾಮುನೀಶ್ವರರು ತಮ್ಮ ಜೀವನದಲ್ಲಿ ಹೇಗೆ ಈ ದಶಧರ್ಮಗಳ ಪಾಲನೆ ಮಾಡುತ್ತಾ ತಮ್ಮ ಜೀವನವನ್ನು ಮಂಗಲಮಯ ಮಾಡಿಕೊಳ್ಳುತ್ತಾ ತಮ್ಮ ಕರ್ಮಗಳ ನಿರ್ಜರೆಯ ಮಾಧ್ಯಮದಿಂದ ಮುಕ್ತಿಯನ್ನು ಪಡೆಯುತ್ತಾರೆಂದು ಯೋಚಿಸುತ್ತೇವೆ. ದಶಧರ್ಮಗಳು ಆತ್ಮಿಕ ನಿರ್ಮಲತೆಯ ಒಂದು ಪರಿಣತಿಗಾಗಿ ಕಾರಣವಾಗಿವೆ. ಈ ದಶಧರ್ಮಗಳನ್ನು ಈ ಹತ್ತು ದಿನಗಳೆಂದು ಮಾತ್ರ ಪಾಲನೆ ಮಾಡಬೇಕೆಂದೇನೂ ಇಲ್ಲ. ಹತ್ತು ದಿನಗಳು ಕಲಿಯಲು ಇವೆ, ಪಾಠಶಾಲೆಯಲ್ಲಿ ಓದಲು ಇವೆ. ಅವುಗಳ ಪಾಲನೆಯನ್ನು ಜೀವನದ ಪ್ರತಿ ಸಮಯ, ಪ್ರತಿ ಕ್ಷಣ ನಮ್ಮ ಚರ್ಯೆಯ ಸಮಯದಲ್ಲಿ ಮಾಡಬೇಕು. ಈ ಹತ್ತು ದಿನಗಳಲ್ಲಿ ನಾವು ಮಾಡುವ ದಶಧರ್ಮಗಳ ದಾರಣೆ, ಚಿಂತನೆಯ ಸಮಯದಲ್ಲಿ ನಮ್ಮ ಪರಿಣಾಮ ನಿರ್ಮಲವಾಗಿರಬೇಕು. ಆದ್ದರಿಂದ ನಮ್ಮ ಚರ್ಯೆಯನ್ನು ಸಹ ಆ ಧರ್ಮಗಳಂತೆ ಮಾಡಿಕೊಳ್ಳುತ್ತೇವೆ. ಧರ್ಮ ಚಿಂತನೆಗಾಗಿ ಸಹ ನಮ್ಮ ಮನೋಭಾವ ವಿಶುದ್ಧಿ ಮಾಡಿಕೊಳ್ಳುವುದು ಅವಶ್ಯವಾಗಿದೆ. ಶರೀರ ಶುದ್ಧವಾಗಿರಬೇಕು. ಬಟ್ಟೆಗಳು ಶುದ್ಧವಾಗಿರಬೇಕು ಹಾಗೂ ಭೋಜನವು ಶುದ್ಧವಾಗಿರಬೇಕು. ಇವೆಲ್ಲವೂ ಶುದ್ಧವಾಗಿದ್ದಾಗಲೇ

ಶ್ರಾವಕರಿಗೆ ಬಹಳ ಉತ್ತಮ ಆನಂದದ ಅನುಭವವಾಗುತ್ತದೆ. ಇವೆಲ್ಲವೂ ಶುದ್ಧವಾಗಿರದಿದ್ದರೆ ಕೇವಲ ಧರ್ಮದ ಚಿಂತನೆ ಅಪೂರ್ಣವೆನಿಸುತ್ತದೆ ಹಾಗೂ ಆನಂದದ ಅನುಭವವಾಗುವುದಿಲ್ಲ.

ಈ ದಶಧರ್ಮಗಳು ನಮಗೆ ಮುನಿ ಆಗುವ ಶಿಕ್ಷಣ ನೀಡುತ್ತವೆ. ಮುನಿಗಳ ಸಮೂಹ ಹೇಗೆ ಧರ್ಮದ ಚಿಂತನೆ ಮಾಡುತ್ತಾರೆ, ತಮ್ಮ ಜೀವನದಲ್ಲಿ ಹೇಗೆ ಈ ಕ್ಷಮೆ ಮುಂತಾದ ಗುಣಗಳನ್ನು ಪ್ರತಿಯೊಂದು ಕ್ಷಣದಲ್ಲಿ ಜೀವನ ಚರ್ಯೆಯಲ್ಲಿ ಅಳವಡಿಸಿಕೊಳ್ಳುತ್ತಾರೆ – ಈ ಶಿಕ್ಷಣ ಈ ಹತ್ತುದಿನಗಳಲ್ಲಿ ದೊರಕುತ್ತದೆ. ನಾವು ಸಹ ಇದೇ ರೂಪದಿಂದ ಇವುಗಳ ಪಾಲನೆ ಮಾಡುವಂತಾಗಲಿ ಎಂದು ಶ್ರಾವಕರು ತಮ್ಮೊಳಗೆ ಭಾವಿಸುತ್ತಾರೆ. ಈ ದಶಧರ್ಮಗಳಿಗಿಂತ ಬೇರೆನೂ ಉತ್ಕೃಷ್ಟವೆಂದು ತೋರುವುದಿಲ್ಲ. ಈ ಹತ್ತು ಧರ್ಮಗಳಲ್ಲಿಯೇ ಸಮಸ್ತ ಧರ್ಮವೂ ಗರ್ಭಿತವಾಗಿಬಿಡುತ್ತದೆ. ಈ ಪರ್ವಗಳನ್ನು ಸಮ್ಯಗ್‌ದೃಷ್ಟಿಯಾಗಿರುವ ಪ್ರತಿಯೊಬ್ಬ ಭವ್ಯಾತ್ಮರು ನಿಯಮದಿಂದ ಪಾಲನೆ ಮಾಡೇ ಮಾಡುತ್ತಾ ಹಾಗೂ ಈ ಜೀವಿಗಳಿಗೆ ಸಂಬಂಧಿಸಿದ ಅನ್ಯರು ಸಹ ಈ ಪರ್ವಗಳಲ್ಲಿ ಈ ಧರ್ಮಗಳ ಚಿಂತನೆ ಮಾಡುತ್ತಾರೆ.

ನಿಮ್ಮ ಮನೆ–ಕುಟುಂಬಗಳಲ್ಲಿ ಪ್ರತಿಯೊಬ್ಬ ವ್ಯಕ್ತಿ ಬಹುಶಃ ಈ ಹತ್ತು ದಿನಗಳಲ್ಲಿ ಶುದ್ಧ ಆಹಾರ ಮಾಡುತ್ತಿರಬಹುದು, ಪೂಜೆ ಮಾಡುತ್ತಿರಬಹುದು, ಧರ್ಮವನ್ನು ಕೇಳುತ್ತಿರಬಹುದು. ಇಂತಹ ಪಾವನ ಪ್ರಸಂಗಗಳಲ್ಲಿ ಸಾಧುಗಳ ಸಂಗ ದೊರೆತರೆ ಹೇಳುವುದೇನಿದೆ? ಪ್ರತಿಯೊಂದು ಕ್ಷಣ ಯಾರ ಜೀವನದಲ್ಲಿ ಈ ಹತ್ತು ಧರ್ಮಗಳು ನಮಗೆ ಕಂಡರೆ, ಅವರ ಮುಖಾರವಿಂದದಿಂದ (ಪಾನ ಮಾಡಬಹುದಾದ ವಾಣಿ) ಈ ಧರ್ಮಗಳ ಉಪದೇಶ ಬಹಳ ಅಮೃತ ಸಮಾನವೆನಿಸುತ್ತದೆ. ವಿವರಿಸಿರುವ ದಶಲಕ್ಷಣವು ಧರ್ಮದಲ್ಲಿ ಸ್ವೀಕರಿಸಲಾಗಿದೆ. ಧರ್ಮ ಅನೇಕ ಪ್ರಕಾರವಿದೆ. ಕಾರ್ತಿಕೇಯಾನುಪ್ರೇಕ್ಷೆಯಲ್ಲಿ ಆಚಾರ್ಯ ಕಾರ್ತಿಕೇಯ ಸ್ವಾಮಿಗಳು ಧರ್ಮದ ಸರ್ವ ಗ್ರಾಹಿ ಅಥವಾ ವ್ಯಾಪಕ ಸ್ವರೂಪದ ವಿಷಯದಲ್ಲಿ ಹೀಗೆ ಹೇಳಿದ್ದಾರೆ–

**ಧಮ್ಮೋ ವತ್ಥು ಸಹಾವೋ ಖಮಾದಿ ಭಾವೋಯ ದಸ ವಿಹೋ ಧಮ್ಮೋ ।**
**ರಯಣತ್ತಯಂ ಚ ಧಮ್ಮೋ ಜೀವಾಣಂ ರಕ್ಖಣಂ ಧಮ್ಮೋ ॥478॥**

**'ಧಮ್ಮೋ ವತ್ಥು ಸಹಾವೋ'** – ವಸ್ತುವಿನ ಸ್ವಭಾವವು ಧರ್ಮವಾಗಿದೆ. ಖಮಾದಿ ಭಾವೋಯ ದಸ ವಿಹೋ ಧಮ್ಮೋ' ಉತ್ತಮ ಕ್ಷಮೆ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪ, ತ್ಯಾಗ, ಆಕಿಂಚನ್ಯ ಮತ್ತು ಬ್ರಹ್ಮಚರ್ಯ ಇವು ಹತ್ತು ಪ್ರಕಾರದ ಭಾವಗಳು ಧರ್ಮರೂಪವಾಗಿವೆ. ಸಮ್ಯಗ್‌ದರ್ಶನ, ಸಮ್ಯಗ್‌ಜ್ಞಾನ, ಸಮ್ಯಕ್ ಚಾರಿತ್ರ ಇವು ರತ್ನತ್ರಯ ಧರ್ಮ ಸ್ವರೂಪವಾಗಿವೆ ಹಾಗೂ ಜೀವಗಳ ರಕ್ಷಣೆ ಮಾಡುವುದು ಧರ್ಮವಾಗಿದೆ. ಈ ಪ್ರಕಾರ ಇವು ಧರ್ಮದ ಪರಿಭಾಷೆಗಳಾಗಿವೆ. ಇವುಗಳ ಕ್ರಮಾನುಸಾರದ ಬಗ್ಗೆ ವಿಚಾರ ಮಾಡಿದರೆ ಜೀವಗಳ ರಕ್ಷಣೆಯ ಧರ್ಮ, ರತ್ನತ್ರಯದವರೆಗೆ ಕರೆದೊಯ್ಯುವ ಸಂಗತಿ ಗಮನಕ್ಕೆ ಬರುತ್ತದೆ. ರತ್ನತ್ರಯಗಳಿಂದ ನಾವು ದಶಲಕ್ಷಣ ರೂಪದ ಆತ್ಮತತ್ವವನ್ನು ಪಡೆಯುತ್ತೇವೆ ಹಾಗೂ ಇದೇ ದಶಲಕ್ಷಣ ರೂಪ ಆತ್ಮ ತತ್ವ ವಸ್ತುವಿನ ಪರಮ ಸ್ವಭಾವವಾಗಿದೆ. ಪ್ರತಿಯೊಂದು ವಸ್ತುವು ತನ್ನ–ತನ್ನ ಸ್ವಭಾವ ಗುಣ ಧರ್ಮಗಳಲ್ಲಿರುವುದು ಸಹ ಧರ್ಮವೇ ಆಗಿದೆ. ನಮಗೆ ಈ ಹತ್ತು ದಿನಗಳಲ್ಲಿ ದಶಧರ್ಮಗಳ ಬಗ್ಗೆ ತಿಳಿಯಬೇಕಾಗಿದೆ ಹಾಗೂ ದಶಧರ್ಮದೊಳಗಿರುವ ವಸ್ತುವಿನ ಸ್ವಭಾವವೆನ್ನಿ, ಜೀವಗಳ ರಕ್ಷಣೆ ಎನ್ನಿ, ರತ್ನತ್ರಯವೆನ್ನಿ ಎಲ್ಲವೂ ಬರುವಂತಹುವೇ ಆಗಿವೆ. ಇಂತಹ ದಶಧರ್ಮ ನಮ್ಮ ಜೀವನದಲ್ಲಿ

ಬರಬೇಕು. ಹಾಗೂ ಇದರ ಮಾಧ್ಯಮದಿಂದ ಸಮತೆ–ಶಾಂತಿಯ ಅನುಭವವಾಗಬೇಕು.

ಆಚಾರ್ಯ ಕುಂದ–ಕುಂದ ಸ್ವಾಮಿಗಳು ಸಹ ತಮ್ಮ ಬಾರಸಾಣುವೆಕ್ಖ ಹೆಸರಿನ ಗ್ರಂಥದಲ್ಲಿ ಆ ಹತ್ತು ಧರ್ಮಗಳು ಯಾವುವು ಎಂದು ಹೇಳಿದ್ದಾರೆ. ಅವರ ಶಬ್ದಗಳಲ್ಲಿಯೇ ನಾವು ಕೇಳೋಣ ಆಧ್ಯಾತ್ಮವನ್ನು ಅಮೃತ ಸಮಾನವೆಂದು ಭಾವಿಸಲಾಗಿದೆ. ನಾವು ಆಧ್ಯಾತ್ಮಿಕ ಗ್ರಂಥಗಳನ್ನೋದಿ ನಾವು ಧನ್ಯರೆಂದು ಭಾವಿಸುತ್ತೇವೆ. ಮೊಸರನ್ನು ಕಡೆದು ತುಪ್ಪವನ್ನು ಪಡೆಯುವಂತೆ, ನಮ್ಮ ಆತ್ಮನ ಮಂಥನದಿಂದ ಆಧ್ಯಾತ್ಮದ ಪ್ರಾಪ್ತಿ ಮಾಡಿಕೊಂಡಿದ್ದೇವೆ. ಹಾಗೂ ನಮ್ಮ ಕರ್ಮಗಳನ್ನು ನಷ್ಟ ಮಾಡಲು ಭೇದ ವಿಜ್ಞಾನವನ್ನು ಹೇಗೆ ಪಡೆಯುವುದು? ನಿಶ್ಚಯ ವ್ಯವಹಾರ ರತ್ನತ್ರಯಗಳ ಮಾಧ್ಯಮದಿಂದ ಪಡೆದ ಧರ್ಮವನ್ನೇ ಈ ಶಾಸ್ತ್ರಗಳಲ್ಲಿ ಬರೆಯಲಾಗಿದೆ_ಎಂದ ಮೇಲೆ ನಾವು ಸಹ ಆ ಧರ್ಮಗಳನ್ನು ಕೇಳೋಣ. ಆಗ ನಮ್ಮ ಅಂತರಂಗದಲ್ಲಿರುವ ಕರ್ಮರೂಪದ ಕಲ್ಮಶವೂ ದೂರವಾಗುತ್ತದೆ. ಹಾಲಿನಿಂದ ತುಪ್ಪವಾಗುವಾಗ ಅದರ ಎಲ್ಲ ಅಶುದ್ಧ ಅಂಶಗಳು ಹೊರಟು ಹೋದಾಗಲೇ ಅದು ತುಪ್ಪವಾಗುತ್ತದೆ. ಹಾಗೆಯೇ ನಮ್ಮ ಆತ್ಮನಲ್ಲಿರುವ ಅಶುದ್ಧತೆ ಹೋಗಬೇಕು. ಆಚಾರ್ಯರು ದಶಧರ್ಮಗಳ ಹೆಸರುಗಳನ್ನು ಹೇಳಿದ್ದಾರೆ.

ಮುನಿಧರ್ಮಗಳ ವಿವರಣೆ ಮಾಡುತ್ತಾ ಧರ್ಮಾನುಪ್ರೇಕ್ಷೆಯಲ್ಲಿ ಹೀಗೆ ಹೇಳಿದ್ದಾರೆ–

**ಉತ್ತಮಖಮ ಮದ್ದವಜ್ಜವ–ಸಚ್ಚ–ಸಉಚ್ಚ ಚ ಸಂಜಮಂ ಚೇವ।**
**ತವ–ಚಾಗ ಮಾಕಿಂಚಣ್ಹಂ ಬಮ್ಹಾ ಇದಿ ದಸವಿಹಂ ಹೋದಿ ॥70॥**

ಉತ್ತಮ ಕ್ಷಮೆ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪ, ತ್ಯಾಗ, ಆಕಂಚನ್ಯ ಮತ್ತು ಬ್ರಹ್ಮಚರ್ಯ ಇವು ಹತ್ತು ಪ್ರಕಾರದ ಧರ್ಮಗಳಿವೆ. ಇವು ಮುನಿಗಳು ಪಾಲನೆ ಮಾಡಲು ಯೋಗ್ಯ ಹತ್ತು ಪ್ರಕಾರದ ಧರ್ಮಗಳಾಗಿವೆ. ಶ್ರಾವಕರು ಸಹ ಇವುಗಳ ಏಕದೇಶ ರೂಪದಿಂದ ಪಾಲನೆ ಮಾಡುತ್ತಾರೆ. ಈ ಹತ್ತು ಧರ್ಮಗಳು ನಮ್ಮ ಜೀವನದಲ್ಲಿ ಹೇಗೆ ಬರುತ್ತವೆ ಎಂಬುದನ್ನು ತಿಳಿಯೋಣ.

ಕಷಾಯಗಳು ನಾಲ್ಕು ಪ್ರಕಾರವಾಗಿವೆ. ಬಹುಶಃ ನೀವು ತಿಳಿದು ಇದ್ದೀರಾ, ತಿಳಿದಿರುವುದಷ್ಟೇ ಅಲ್ಲಾ, ಮಾಡಿಯೂ ಇದ್ದಿರಾ, ಕ್ರೋಧ, ಮಾನ, ಮಾಯಾ, ಲೋಭ. ಕ್ರೋಧದ ಅಭಾವದಲ್ಲಿ ಉತ್ತಮ ಕ್ಷಮಾ ಧರ್ಮದ ಉತ್ಪತ್ತಿಯಾಗುತ್ತದೆ. ಮಾನ ಕಷಾಯದ ಅಭಾವದಲ್ಲಿ ಉತ್ತಮ ಮಾರ್ದವ ಧರ್ಮದ ಉತ್ಪತ್ತಿಯಾಗುತ್ತದೆ ಹಾಗೂ ಮಾಯಾ ಕಷಾಯದ ಅಭಾವದಲ್ಲಿ ಉತ್ತಮ ಆರ್ಜವ ಧರ್ಮದ ಉತ್ಪತ್ತಿಯಾಗುತ್ತದೆ ಹಾಗೂ ಇದೇ ಪ್ರಕಾರ ಲೋಭ ಕಷಾಯದ ಅಭಾವದಲ್ಲಿ ಉತ್ತಮ ಶೌಚಧರ್ಮ ನಮ್ಮ ಜೀವನದಲ್ಲಿ ಬರುತ್ತದೆ. ಯಾರಿಗೂ ತೊಂದರೆಯಾಗದಂತೆ ಆಗಮಕ್ಕನುಗುಣವಾಗಿ ಮಾತನಾಡುವುದು ನಮ್ಮ ಜೀವನದಲ್ಲಿ ಸತ್ಯಧರ್ಮ ಬರುತ್ತದೆ. ಇದರ ನಂತರ ಇಂದ್ರಿಯಗಳನ್ನು ನಮ್ಮ ವಶದಲ್ಲಿ ಹೊಂದಿರುವುದು ಹಾಗೂ ಜೀವಗಳಿಗೆ ಹಿಂಸೆಯಾಗದಂತೆ ರಕ್ಷಿಸುವುದುರಿಂದ ಸಂಯಮಧರ್ಮದ ಉತ್ಪತ್ತಿಯಾಗುತ್ತದೆ. ಹನ್ನೆರಡು ಪ್ರಕಾರದ ತಪಗಳಲ್ಲಿ ತಪಿಸುವುದರಿಂದ ಉತ್ತಮ ತಪ ಧರ್ಮ ಪ್ರಾಪ್ತವಾಗುತ್ತದೆ. ನಮಗೆ ಜಗತ್ತಿನಲ್ಲಿ ಸಂಯೋಗರೂಪದಿಂದ ದೊರಕಿಸರುವುದೋ ಅದರ ವಿಯೋಗ ನಿಶ್ಚಿತವೆಂದು ತಿಳಿದು ನಮ್ಮ ಇಚ್ಛೆಯಿಂದಲೇ ಶಕ್ತಿಯನ್ನು ಬಚ್ಚಿಡದೇ ಅದರ ತ್ಯಾಗ ಮಾಡುವುದರಿಂದ ಜೀವನದಲ್ಲಿ ಉತ್ತಮ ತ್ಯಾಗಧರ್ಮದ ಉತ್ಪತ್ತಿಯಾಗುತ್ತದೆ. ಒಂದು ದಿನ ತ್ಯಾಗ ಮಾಡುತ್ತಾ–ಮಾಡುತ್ತಾ ಹೊರಗಿನ ಸಂಯೋಗದಿಂದ ಎಲ್ಲ ಪದಾರ್ಥಗಳನ್ನು ನಮ್ಮಿಂದ ದೂರ

ಮಾಡುವುದರಿಂದ ಉತ್ತಮ ಆಕಿಂಚನ್ಯ ಧರ್ಮ ನಮ್ಮ ಜೀವನದಲ್ಲಿ ಬರುತ್ತದೆ ಹಾಗೂ ಇದರ ನಂತರ ಉತ್ತಮ ಆಕಿಂಚನ್ಯವಾದಾಗ ಈ ಆತ್ಮನು ತನ್ನಲ್ಲಿಯೇ ಲೀನನಾಗಿ ಬಿಡುತ್ತಾನೆ. ಎಲ್ಲಾ ಪರ ಪದಾರ್ಥಗಳಿಂದ ದೂರನಾಗಿ ಆತನು ಪರಚಿಂತನೆಗಳಿಂದಲೂ ದೂರನಾಗಿ ತನ್ನ ಅಂತಸ್ಸನಲ್ಲಿ ಲೀನನಾಗಿ ಬಿಡುತ್ತಾನೆ. ಆಗ ಅದರ ಹೆಸರೇ – "ಬ್ರಹ್ಮಣಿ ಆತ್ಮನಿ ಚರತಿ ಇತಿ ಬ್ರಹ್ಮಚರ್ಯಃ" ತನ್ನಾತ್ಮನಲ್ಲಿ ರಮಣ ಮಾಡುವುದರ ಹೆಸರೇ ಬ್ರಹ್ಮಚರ್ಯವಿದೆ. ಈ ಪ್ರಕಾರದಿಂದ ನಮಗೆ ಹತ್ತು ಧರ್ಮಗಳ ಪ್ರಾಪ್ತಿಯಾಗುತ್ತದೆ. ತೀರ್ಥೋದಯ ಕಾವ್ಯದಲ್ಲಿಯೂ ಸಹ ದಶಧರ್ಮಗಳ ಧಾರಣೆಯ ವಿಷಯದಲ್ಲಿ ಹೀಗೆ ಹೇಳಲಾಗಿದೆ–

**ಕ್ರೋಧ ತ್ಯಾಗತೇ ಕ್ಷಮಾ ಧಾರತೇ, ಮಾರ್ದವ ಧಾರೇ ಮಾನ ತಜೇಂ।**
**ಮಾಯಾ ತ್ಯಾಗೀ ಆರ್ಜವತಾ–ಸೇ, ಶೌಚಧಾರ ಅತಿ ಲೋಭ ತಜೇಂ॥**
**ಶಾಸ್ತ್ರ ಕಹೇಂ ವೇ, ಸತ್ಯಧರ್ಮ ಹೈ, ಇಂದ್ರಿಯ ಪ್ರಾಣೀಶಮೇಂ ಸಂಯಮ।**
**ಕರ್ಮ ಕಾಟತೇ ತಪ ಕರತೇ ವೇ, ತ್ಯಾಗ ಧಾರತೇ ಧರ್ಮೀಯಮ್ ॥556॥**

ಕ್ರೋಧವನ್ನು ತ್ಯಾಗ ಮಾಡಿದರೆ ಕ್ಷಮೆಯನ್ನು ಧಾರಣೆ ಮಾಡುತ್ತೀರಿ, ಮಾರ್ದವದ ಧಾರಣೆ ಮಾಡಿದಾಗ ಮಾನವನ್ನು ತ್ಯಜಿಸುತ್ತೇವೆ. ಆರ್ಜವತೆಯಿಂದ ಮಾಯಾದ ತ್ಯಾಗವಾಗುತ್ತದೆ. ಶೌಚವನ್ನು ಧಾರಣೆ ಮಾಡಿದಾಗ ಅತಿಲೋಭ ಸಹ ಬಿಟ್ಟುಹೋಗುತ್ತದೆ. ಶಾಸ್ತ್ರದ ಪ್ರಕಾರ ವಿವರಿಸಿದರೆ ಸತ್ಯಧರ್ಮದ ಉತ್ಪತ್ತಿಯಾಗುತ್ತದೆ ಹಾಗೂ ಇಂದ್ರಿಯ ಮತ್ತು ಪ್ರಾಣಿಯಲ್ಲಿ ಸಂಯಮ ಧಾರಣೆ ಮಾಡುವುದೇ ಉತ್ತಮ ಸಂಯಮಧರ್ಮವಾಗಿದೆ. ತಪಸ್ಸಿನ ಮೂಲಕ ಕರ್ಮಗಳನ್ನು ಕಳೆಯುತ್ತೇವೆ ಹಾಗೂ ಆ ಧರ್ಮ ಆತ್ಮರು ನಮ್ಮ ಜೀವನದಲ್ಲಿ ಎಲ್ಲ ಕಾಲದಲ್ಲಿಯೂ ಇರುವ ಪಂಚಪಾಪಗಳನ್ನು ಅಥವಾ ನಮ್ಮೊಳಗಿರುವ ವಿಭಾವವನ್ನು ಅವೆಲ್ಲವೂಗಳನ್ನು ಬಿಟ್ಟು ಬಿಡುತ್ತವೆ. ಅದುವೇ ತ್ಯಾಗವಾಗಿದೆ ಮುಂದೆ ಹೀಗೆ ಬರೆದಿದ್ದಾರೆ.

**ಪೂರ್ಣರೂಪಸೇ ಸಂಗ–ದೂರ–ವೇ, ಅಂತರಂಗ–ಬಹಿರಂಗ ಜಹಾ**
**ಆಕಿಂಚನ ಹೈ ಮಹಾವ್ರತೀ ವೇ, ಚೌಬಿಸೋಂ ನ ಸಂಗವಹಾ।**
**ಮನ–ವಚ–ತನ–ಕೃತ–ಕಾರಿತ ಅಥವಾ ಅನುಮೋದನ ಅಕ್ಷಾದಿಕ ಸಹ।**
**ಚೇತನ ಜಡ ಉನ ಮಹಿಲಾಓ ಕಾ, ಕರೇ ತ್ಯಾಗ ರಾಗಾದಿಕ–ಸಹ॥557॥**

ಪೂರ್ಣರೂಪದಿಂದ ಸಂಗ ದೂರವಾದವರು, ಅಂತರಂಗ–ಬಹಿರಂಗ ಪರಿಗ್ರಹಗಳನ್ನು ದೂರ ಮಾಡಿದಾಗ ಆಕಿಂಚನ್ಯರಾಗಿ ಮಹಾವ್ರತಿಗಳಾಗುತ್ತಾರೆ. ಹತ್ತು ಪ್ರಕಾರದ ಬಹಿರಂಗ ಹದಿನಾಲ್ಕು ಪ್ರಕಾರದ ಅಂತರಂಗ ಪರಿಗ್ರಹ ಸೇರಿ ಇಪತ್ನಾಲ್ಕು ಪರಿಗ್ರಹಗಳನ್ನು ದೂರ ಮಾಡಿದವರನ್ನು ಆಕಿಂಚನ್ಯ ಮಹಾವ್ರತಿ ಎಂದು ಕರೆಯುತ್ತಾರೆ. ಮನ–ವಚನ–ಕಾಯ, ಕೃತ–ಕಾರಿತ–ಅನುಮೋದನ ದಿಂದ ಹಾಗೂ ಯಾವುದೇ ಪಂಚೇಂದ್ರಿಯ ವಿಷಯಗಳನ್ನು ಅಥವಾ ಅವರು ಚೇತನ ಸ್ತ್ರೀಯರನ್ನು, ಅಚೇತನ ಸ್ತ್ರೀಯರನ್ನು ತ್ಯಾಗ ಮಾಡಿಬಿಡುತ್ತಾರೆ. ಇವುಗಳಲ್ಲಿ ರಾಗ–ದ್ವೇಷ ಮಾಡುವುದನ್ನು ತ್ಯಾಗ ಮಾಡಿ ಬಿಡುತ್ತಾರೆ. ಅರ್ಥಾತ್ ಅವರು ಸಚೇತನ ಸ್ತ್ರೀಯರಾಗಿರಲಿ ಅಥವಾ ಚಾತ್ರ, ಮತ ಇತ್ಯಾದಿಗಳ ಅಚೇತನ ಸ್ತ್ರೀಯರಿರಲಿ, ಅವುಗಳಲ್ಲಿಯೂ ರಾಗ ಮಾಡುವುದಿಲ್ಲ. ಅಂತರ ಮಾಡುವುದಿಲ್ಲ ಹೀಗೆ ಅವರು ಪೂರ್ಣರೂಪದಿಂದ ಬ್ರಹ್ಮಚರ್ಯದ ಧಾರಣೆ ಮಾಡುವ ಮಹಾವ್ರತಿಗಳೆಂದು ಕರೆಯಲ್ಪಡುತ್ತಾರೆ.

ನಾವು ಸಂಕ್ಷಿಪ್ತವಾಗಿ ಹತ್ತು ಧರ್ಮಗಳ ಬಗ್ಗೆ ತಿಳಿದೆವು. ಈಗ ನಾವು ಮುಂದೆ ಇಂದು ಯಾವ ಧರ್ಮದ ಪ್ರಸಂಗವಿದೆ, ಆಧರ್ಮದ ವಿಷಯ ಬಗ್ಗೆ ತಿಳಿಯೋಣ ಆಚಾರ್ಯ ಕುಂದ ಕುಂದ ಸ್ವಾಮಿಗಳು ಉತ್ತಮ ಕ್ಷಮಾಧರ್ಮ ಯಾವಾಗ ಬರುತ್ತದೆ, ಉತ್ತಮ ಕ್ಷಮಾ ಧರ್ಮದ ಪ್ರಾಪ್ತಿಗಾಗಿ ಈ ಆತ್ಮನಿಗೆ ಯಾವ ಪುರುಷಾರ್ಥ ಮಾಡಬೇಕು? ಮುನಿ ಮಹಾರಾಜರು ಉತ್ತಮ ಕ್ಷಮೆ ಧಾರಣೆ ಮಾಡಲು ತಮ್ಮ ಜೀವನದಲ್ಲಿ ಹೇಗೆ ಚಿಂತನೆ ಮಾಡುತ್ತಾರೆ ಎನ್ನುವುದರ ಬಗ್ಗೆ ಹೇಳಿದ್ದಾರೆ.

ಈ ಜಗತ್ತಿನಲ್ಲಿ ಈಗ ಈ ಆತ್ಮನು ವಿಭಾವ ಅವಸ್ಥೆಯಲ್ಲಿ ವಿವಿಧ ರೀತಿಯಿಂದ ದುಃಖ, ಅನೇಕ ತರಹದ ಅನುಕೂಲತೆ – ಪ್ರತಿಕೂಲತೆಗಳನ್ನು ಎದುರಿಸುತ್ತಿದ್ದಾನೆ. ನಾವು ಕರ್ಮಬಂಧದಿಂದ ರಕ್ಷಿಸಿಕೊಳ್ಳಬೇಕಾದರೆ–ನಮಗೆ ಅನೇಕ ಪ್ರಕಾರದ ನಿಮಿತ್ತಗಳಿದ್ದು ಆ ನಿಮಿತ್ತಗಳಿಂದ ಪ್ರಭಾವಿತರಾಗಿ ನಾವು ನಮ್ಮೊಳಗೆ ಕ್ರೋಧ ರೂಪದ ಅಗ್ನಿಯನ್ನು ಉತ್ಪನ್ನ ಮಾಡಿಕೊಳ್ಳುತ್ತೇವೆಂದು ಸದಾಕಾಲ ಚಿಂತನೆ ಮಾಡಬೇಕು. ಕ್ರೋಧವು ನಮ್ಮ ಎಲ್ಲ ಗುಣಗಳನ್ನು ಭಸ್ಮ ಮಾಡುವ ಅಗ್ನಿಯಾಗಿದೆ. ನೀತಿಕಾರರು ಕ್ರೋಧವನ್ನು ಚಾಂಡಾಲನಿಗೆ ಹೋಲಿಸಿದ್ದಾರೆ. ಕ್ರೋಧವು ಬಂದಾಗ ಅದು ಎಲ್ಲವನ್ನು ಅಲ್ಲೋಲಕಲ್ಲೋಲ ಮಾಡಿಬಿಡುತ್ತದೆ. ಯಾವುದಾದರೂ ತುಂಬಿದ ನಗರದಲ್ಲಿಯ ಉದ್ಯಾನವನದಲ್ಲಿ ಬೆಂಕಿ ಹತ್ತಿದರೆ ಎಲ್ಲವೂ ಅಲ್ಲೋಲಕಲ್ಲೋಲವಾಗಿಬಿಡುತ್ತದೆ. ಎಲ್ಲವೂ ಧ್ವಂಸವಾಗುತ್ತದೆ. ಎಲ್ಲವೂ ಉರಿದು ಹೋಗುತ್ತದೆ. ಹಾಗೆಯೇ ಕ್ರೋಧ ಬರುತ್ತಲೇ ಸಮಸ್ತ ಗುಣಗಳು ನಷ್ಟವಾಗಿ ಬಿಡುತ್ತವೆ ಎಂಬುದನ್ನು ನಾವು ತಿಳಿಯಬೇಕು.

ಬೆಂಕಿ ಹೇಗೆ ಇದೆ. ಬೆಂಕಿಯ ಸಂಪರ್ಕದಿಂದ ನೀರು ಇರಲಿ ಅಥವಾ ಹಾಲೇ ಇರಲಿ, ಬಿಸಿ ಆದಾಗ ನೀವು ಆ ಸಮಯದಲ್ಲಿ ಇದರ ಸ್ವಭಾವ ಎಲ್ಲಿ ಹೋಯಿತು? ಎಂದು ಚಿಂತನೆ ಮಾಡುತ್ತೀರಿ ಹಾಲು ಉಕ್ಕುತ್ತದೆ ಹಾಲು ಯಾಕೆ ಉಕ್ಕುತ್ತದೆ? ಇದರಲ್ಲಿ ಏನು ಕಾರಣವಿದೆ? ನೀರಿನ ಸ್ವಭಾವವೆನ್ನಿ, ಹಾಲಿನ ಸ್ವಭಾವವೆನ್ನಿ ಅದು ಶೀತಲವಿದೆ. ಆದರೆ ಈಗ ಅದು ಯಾಕೆ ಬಿಸಿಯಾಯಿತು. ಹಾಗೂ ಯಾಕೆ ಕುದಿಯುತ್ತಿದೆ. ಇದರ ಕಾರಣವೇನಿದೆ? ಅದರ ಕಾರಣ ವಿಭಾವದಲ್ಲಿ ಬಂದಿರುವುದಾಗಿದೆ. ವಿಭಾವದಲ್ಲಿ ಬರಲು ಕಾರಣ ಬೆಂಕಿಯಾಗಿದೆ. ನೀವು ಮೇಲಿನಿಂದ ಸ್ವಲ್ಪ ನೀರು ಹಾಕುತ್ತಿರಾ, ನೀರನ್ನು ಸಿಂಪಡಿಸುತ್ತಿರಾ ಆಗ ಕುದಿಯುವುದು ಸ್ವಲ್ಪ ನಿಲುಗಡೆಯಾಗುತ್ತದೆ. ಆದರೆ ಕೆಲವೇ ಕ್ಷಣಗಳಲ್ಲಿ ಪುನ: ಕುದಿಯ ತೊಡಗುತ್ತದೆ. ಹಾಗೆಯೇ ನಾವು ಈ ಸಂಸಾರದಲ್ಲಿ ವಿವಿಧ ರೀತಿಯ ನಿಮಿತ್ತಗಳಿಂದ ಕಷಾಯ ಮಾಡ ತೊಡಗುತ್ತೇವೆ, ಕ್ರೋಧ ಬಂದು ಬಿಡುತ್ತದೆ, ಕುದಿಯಲು ತೊಡಗುತ್ತೇವೆ. ಹೊರಗಿನ ಪದಾರ್ಥ ನಮಗೆ ಕ್ರೋಧಕ್ಕೆ ಕಾರಣವಾಗುತ್ತದೆ. ವಿಶೇಷವಾಗಿ ಹೊರಗಿನ ವಸ್ತುಗಳಲ್ಲಿ ಒಂದು ಮುಖ್ಯ ವಸ್ತುವಿದೆ ಅದೇ ಕ್ರೋಧಕ್ಕೆ ಕಾರಣವಾಗುತ್ತದೆ. ಅಗ್ನಿಯು ಅದರ ಸ್ವಭಾವವನ್ನು ವಿಭಾವದಲ್ಲಿ ಬದಲಿಸುವಂತೆ ಕ್ರೋಧ ಕಷಾಯದಿಂದ ನಮ್ಮ ಸ್ವಭಾವ ಬದಲಾಗುತ್ತದೆ. ಕ್ಷಮೆಯು ನಮ್ಮ ಸ್ವಭಾವವಾಗಿದೆ. ಆದರೆ ನಾವು ಆ ಸ್ವಭಾವದಿಂದ ದೂರವಾಗುತ್ತೇವೆ. ಈಗ ನೀವು ಅದರ ವಿಭಾವದ ಕಾರಣ ತಿಳಿಯಿರಿ ಅದನ್ನು ನಾವು ದೂರ ಮಾಡಬೇಕಾಗಿದೆ.

ನೀರನ್ನು, ಹಾಲನ್ನು ಬಿಸಿಮಾಡಲು, ಕುದಿಯಲು ಕಾರಣ ಬೆಂಕಿಯಾಗಿದೆ ನೀವು ಮೇಲಿನಿಂದ ಎಷ್ಟೇ ನೀರನ್ನು ಹಾಕುತ್ತಿದ್ದರೂ, ಅದು ಪುನಃ ಪುನಃ ಕುದಿಯುತ್ತಿರುತ್ತದೆ. ಹಾಗಾದರೆ ನಾವೇನು ಮಾಡಬೇಕು? ಆ ಬೆಂಕಿಯನ್ನು ದೂರ ಮಾಡಬೇಕಾಗಿದೆ. ಬೆಂಕಿಯನ್ನು ದೂರಮಾಡಿದರೆ ಅದು ತನ್ನಷ್ಟಕ್ಕೇ ತಾನೇ ನೀರನ್ನು ಹಾಕದೇ ಸಿಂಪಡಿಸದೇ ಆ ಹಾಲು ಅಥವಾ ನೀರು ತನ್ನ ಸ್ವಭಾವದಲ್ಲಿ

ಬರುತ್ತದೆ. ಯಾಕೆಂದರೆ ಅದರ ಸ್ವಭಾವ ಶೀತಲತೆ ಆಗಿದೆ. **'ಧಮ್ಮೋ ವತ್ಥು ಸಹಾವೋ'** ನಾವು ಕೇಳಿದ್ದೆವು, ಓದಿದ್ದೆವು ವಸ್ತುವಿನ ಸ್ವಭಾವ ಧರ್ಮವಿದೆ, ನೀರಿನ ಸ್ವಭಾವ ಶೀತಲತೆ ಇರುವಂತೆ, ಬೆಂಕಿಯ ಸ್ವಾಭಾವ ಉಷ್ಣತೆ ಇರುವಂತೆ, ನಮ್ಮ ಆತ್ಮನ ಸ್ವಭಾವ ಏನಿದೆ? ನಮ್ಮ ಆತ್ಮನ ಸ್ವಭಾವ ಸುಖ-ಶಾಂತಿ ಇದೆ ಜ್ಞಾನದರ್ಶನ ಗುಣವಿದೆ; ಆದರೆ ನಾವು ಈಗ ಅಶಾಂತಿ ಹಾಗೂ ದುಃಖ ಮಯ ವಿಭಾವದ ಅನುಭವ ಪಡೆಯುತ್ತಿದ್ದೇವೆ. ವಿವಿಧ ರೀತಿಯ ಅಶಾಂತಿಗಳು ಹಾಗೂ ದುಃಖ ನಮಗೆ ನಮ್ಮ ಜೀವನದಲ್ಲಿ ಕಾಣುತ್ತೇವೆ. ಇದಕ್ಕೆ ಕಾರಣವೇನು? ಅಲ್ಲಿ ಬೆಂಕಿ ಕಾರಣವಿದ್ದಿತು ಆದರೆ ಇದರಲ್ಲಿ ಏನು ಕಾರಣವಿದೆ?ಒಂದೇ ವಸ್ತು ಕಾರಣ ಹಾಗೂ ಒಂದೇ ವಸ್ತು ಬಿಡಲು ಯೋಗ್ಯವಾಗಿದೆ. ಅದೇ 'ಪರಿಗ್ರಹ'. ಪರಿಗ್ರಹದಲ್ಲಿ ಎಲ್ಲವೂ ಬಂದವು.

ಶರೀರದಿಂದ ಹಿಡಿದು ಧನ, ವೈಭವ, ಅಂಗಡಿ, ಮನೆ ಮುಂತಾದ ಎಲ್ಲವೂ ಹತ್ತು ಪ್ರಕಾರದ ಪರಿಗ್ರಹಗಳಲ್ಲಿ ಬರುತ್ತವೆ. ಇವು ನಮ್ಮ ವಿಭಾವಕ್ಕೆ ಮುಖ್ಯ ಕಾರಣವಾಗಿವೆ. ಅಂತರಂಗ ಮಿಥ್ಯಾತ್ವ ಮುಂತಾದ ಕಷಾಯಗಳು ಸಹ ಕಾರಣವಾಗಿವೆ, ಅವು ಅಂತರಂಗ ಪರಿಗ್ರಹಗಳಾಗಿವೆ. ಮೊದಲು ಬಹಿರಂಗ ಪರಿಗ್ರಹಗಳನ್ನು ಬಿಡಿ, ಬಹಿರಂಗ ಪರಿಗ್ರಹಗಳನ್ನು ಮೊದಲು ಬಿಟ್ಟು ನೋಡಿ ಇವುಗಳೊಂದಿಗೆ ಅಂತರಂಗ ಪರಿಗ್ರಹಗಳು ಬಿಡುತ್ತಾ ಹೋಗಿ ಬಿಡುತ್ತವೆ. ಎಲ್ಲಕ್ಕಿಂತ ಮೊದಲು ಅಧಿಕ ಕಷಾಯ ಮಾಡುವುದನ್ನು ಬಿಡಿ, ಯಾವುದೇ ವೈರ ಭಾವನೆಗಳು ಆರು ತಿಂಗಳುಗಳಿಗಿಂತ ಹೆಚ್ಚು ಕಾಲ ಮುಂದುವರಿದರೆ ಅನಂತಾನುಬಂಧ ಕಷಾಯದ ಉದಯದಿಂದ ಸಮ್ಯಗ್ ದರ್ಶನದ ಅಭಾವ ಉಂಟಾಗಿ ಮಿಥ್ಯಾತ್ವ ಬಂದು ಬಿಡುತ್ತದೆ ಹಾಗೂ ನಿಮ್ಮ ಅನಂತಾನುಬಂಧ ಕಷಾಯ ಹೊರಟು ಹೋದರೆ ಮತ್ತೆ ನಿಮ್ಮ ಸಮ್ಯಗ್ ದರ್ಶನ ಪ್ರಕಟವಾಗುತ್ತದೆ ಹಾಗೂ ಮಿಥ್ಯಾತ್ವ ರೂಪದ ಅಂತರಂಗ ಪರಿಗ್ರಹವು ಸಹ ಹೊರಟು ಹೋಯಿತೆಂದು ತಿಳಿಯಿರಿ.

ಬಹಿರಂಗ ಪರಿಗ್ರಹದ ಕಾರಣದಿಂದ ಆಗುತ್ತಿದ್ದ ಭಾವ ಅಷ್ಟು ಕಷಾಯಗಳು ತಾವು ಬಿಟ್ಟು ಬಿಟ್ಟಿರಿ, ಸಹೋದರನೇ ಮರೆತು ಬಿಡು, ಈಗ ಆಗಿ ಹೋಯಿತು, ಬಹಳಷ್ಟು ದಿನಗಳಾದವು. ಈಗ ಅಷ್ಟೊಂದು ಕಷಾಯ ಮಾಡಬೇಡ, ವೈರ ಭಾವ ಇಡಬೇಡ. ಬಿಟ್ಟು ಬಿಡು, ಆ ವಸ್ತುವಿನ ರಾಗವನ್ನು ಬಿಟ್ಟು ಬಿಡು, ಮೋಹವನ್ನು ಬಿಟ್ಟರೆ ತಾವು ಅಂತರಂಗ ಪರಿಗ್ರಹದ ಮಹತ್ವವನ್ನು ಬಿಟ್ಟಿರೆಂದು ತಿಳಿಯಿರಿ. ಬಹಿರಂಗ ಪರಿಗ್ರಹ ದೂರ ದೂರ ಹೋದ ಹಾಗೇ ಅಂತರಂಗ ಪರಿಗ್ರಹವು ದೂರವಾಗುತ್ತದೆ ಹಾಗೂ ಅಂತರಂಗ ಪರಿಗ್ರಹ ಹೋದ ಹಾಗೇ ಬಹಿರಂಗ ಪರಿಗ್ರಹವು ಹೋಗುತ್ತದೆ. ಎರಡರದೂ ನಿಮಿತ್ತ ನೈಮಿತ್ತಿಕ ಸಂಬಂಧವಿದೆ. ಆದ್ದರಿಂದ ನಾವು ಈ ಪರಿಗ್ರಹವೇ ನಮಗೆ ಅಶಾಂತಿಯ ಕಾರಣವಾಗಿದೆ ಎಂದು ವಿಚಾರ ಮಾಡಬೇಕು. ಇವು ಅಗ್ನಿಗೆ ಸಮಾನವಾಗಿವೆ. ನಾವು ನಮ್ಮ ಸ್ವಭಾವದಲ್ಲಿ ಬರಬೇಕೆಂದರೆ ಪರಿಗ್ರಹವನ್ನು ಕಡಿಮೆ ಮಾಡಿ, ಮೆಲ್ಲ-ಮೆಲ್ಲನೆ ಅವುಗಳನ್ನು ಬಿಟ್ಟೇ ಬಿಡಿ. ಆಗ ಪೂರ್ಣರೂಪದಿಂದ ನಮ್ಮ ಸ್ವಭಾವದಲ್ಲಿ ನಾವು ಬರುತ್ತೇವೆ. ನಾವು ಪೂರ್ಣರೂಪದಿಂದ ನಿರ್ಗ್ರಂಥರಾಗಿ ನಮ್ಮ ಆತ್ಮನಲ್ಲಿ ಲೀನರಾದಾಗ ಪೂರ್ಣರೂಪದಿಂದ ನಾವು ನಮ್ಮ ಸ್ವಭಾವದಲ್ಲಿ ಇರಲು ಸಾಧ್ಯ ಆದ್ದರಿಂದ ಬ್ರಹ್ಮಚರ್ಯ ಧರ್ಮವನ್ನು ಕೊನೆಯಲ್ಲಿಟ್ಟಿದ್ದಾರೆ. ಯಾಕೆಂದರೆ ಅದರ ನಂತರ ಯಾವ ಧರ್ಮವೂ ಇಲ್ಲ. ವಾಸ್ತವಿಕ ಧರ್ಮವೆಂದರೆ ತಮ್ಮಾತ್ಮನಲ್ಲಿ ಲೀನನಾದಾಗ ಬೇರೆ ಯಾವುದೇ ಧರ್ಮಮಾಡುವ ಅವಶ್ಯಕತೆ ಇಲ್ಲ, ಅದರ ಫಲ ನಿಮಗೆ ಸಿಕ್ಕಿ ಬಿಡುತ್ತದೆ. ಬ್ರಹ್ಮಚರ್ಯದ ಉತ್ಕೃಷ್ಟ ಪರಿಭಾಷೆ-**'ಬ್ರಹ್ಮಾಣಿ ಆತ್ಮನಿ ಚರತಿ ಇತಿ ಬ್ರಹ್ಮಚರ್ಯಃ'** ತನ್ನ

ಆತ್ಮನಲ್ಲಿ ಆಚರಣೆ ಮಾಡುವುದು. ಲೀನನಾಗುವುದು ಬ್ರಹ್ಮ ಸ್ವಭಾವದಲ್ಲಿ ಲೀನವಾಗುವುದಾಗಿದೆ.

ಒಂದೊಂದು ಧರ್ಮವನ್ನು ಪಾಲಿಸುತ್ತಾ ಸಾಗಿದಂತೆ ಮತ್ತು ನಮ್ಮ ಆತ್ಮನಲ್ಲಿ ಲೀನವಾಗುವುದಾದರೆ ಈಗ ಇದರ ನಂತರ ಪಡೆಯುವುದು ಏನೂ ಇಲ್ಲವೆಂದು ತಿಳಿಯಿರಿ. ಆತ್ಮನಲ್ಲಿ ಲೀನನಾಗುವುದು ಪೂರ್ಣರೂಪದಿಂದ ತನ್ನ ಸ್ವಭಾವದ ಪ್ರಾಪ್ತಿಯಾದಂತೆ. ವಿಭಾವವೆಲ್ಲವೂ ಹೋಗಿ ಬಿಟ್ಟಿದೆ. ತುಪ್ಪವಾದ ಮೇಲೆ ಮತ್ತೆ ಯಾವ ಕಾರ್ಯವನ್ನು ಮಾಡಬೇಕಾದ ಅವಶ್ಯಕತೆ ಇಲ್ಲ. ತುಪ್ಪವಾಗದೇ ಇರುವವರೆಗೆ ವಿವಿಧ ರೀತಿಯ ಸಾಧನೆಯನ್ನು ನಾವು ಮಾಡುತ್ತಿರುತ್ತೇವೆ. ಈಗ ನಮಗೆ ಚಿಕ್ಕ ಚಿಕ್ಕ ನಿಮಿತ್ತಗಳು, ಚಿಕ್ಕ ಚಿಕ್ಕ ಮಾತುಗಳಿಂದ ಕ್ರೋಧ ಬಂದು ಬಿಡುತ್ತದೆ. ಇದರ ಕಾರಣವೇನು?ಪರಿಗ್ರಹಗಳ ಬಗ್ಗೆ ಇರುವ ಮೋಹ ಇದಕ್ಕೆ ಕಾರಣವಾಗಿದ್ದು ಅದರಲ್ಲಿಯ ರಾಗ-ದ್ವೇಷಕ್ಕೂ ಇದೇ ಕಾರಣವಾಗಿದೆ. ಆಚಾರ್ಯ ಕುಂದ-ಕುಂದ ಸ್ವಾಮಿಗಳು ತಮ್ಮ ಬಾರಸಾಣುವೆಕ್ಖಾ ಗ್ರಂಥದಲ್ಲಿ ಉತ್ತಮ ಕ್ಷಮಾ ಧರ್ಮದ ಸ್ವರೂಪವನ್ನು ಹೇಳುತ್ತಾ ಹೀಗೆ ಹೇಳಿದ್ದಾರೆ-

**ಕೋಹುಪ್ಪತ್ತಿಸ್ಸ ಪುಣೋ ಬಹಿರಂಗಂ ಜದಿ ಹವೇದಿ ಸಕ್ಖಾದಂ।**
**ಣ ಕುಣದಿ ಕಿಂಚಿವಿ ಕೋಹೋ ತಸ್ಸ ಖಮಾ ಹೋದಿ ಧಮ್ಮೋತ್ತಿ॥71॥**

ಎಲ್ಲ ಪರಿಗ್ರಹಗಳನ್ನು ಬಿಟ್ಟಿರುವ ಮುನಿ ಮಹಾರಾಜರು ಹಾಗೂ ಜಗತ್ತಿನಲ್ಲಿ ಕ್ರೋಧವನ್ನುಂಟು ಮಾಡಲು ಸಿದ್ಧವಾಗುವಂತೆ ಮಾಡುವ ವಿವಿಧ ರೀತಿಯ ನಿಮಿತ್ತಗಳು ಇಂತಹ ನಿಮಿತ್ತಗಳಿಗೆ ಸಾಕ್ಷಾತ್ ಕಾರಣ ದೊರಕಿದ ನಂತರವೂ ಕ್ರೋಧದ ಉತ್ಪತ್ತಿಯ ಸಾಕ್ಷಾತ್ ಬಹಿರಂಗ ಕಾರಣವಿದ್ದರೂ ಸ್ವಲ್ಪವೂ 'ಕಿಂಚಿವಿ ಕೊವೋ' ಸ್ವಲ್ಪವು ಸಹ ಕ್ರೋಧ ಮಾಡದಿರುವ ಸಾಧು 'ತಸ್ಸ' ಅದರ 'ಖಮಾ ಹೋದಿ ಧಮ್ಮೋತಿ' ಅರ್ಥಾತ್ ಅವರ ಬಳಿ ಉತ್ತಮ ಕ್ಷಮಾ ಧರ್ಮವಾಗುತ್ತದೆ.

ಎಲ್ಲ ಧರ್ಮಗಳೊಂದಿಗೆ ಉತ್ತಮ, ಉತ್ತಮ ಶಬ್ಧ ಸೇರಿಸಿದೆ. ಒಂದು ಧರ್ಮವಿದ್ದರೆ ಅದರೊಂದಿಗೆ ಇನ್ನೊಂದು ಧರ್ಮವು ಇರುವುದನ್ನು ಗಮನಿಸಬೇಕು ಪ್ರತಿಯೊಂದು ಧರ್ಮದೊಂದಿಗೆ ಕ್ಷಮಾ ಸೇರಿಕೊಂಡಿದೆ ಹಾಗೂ ನಂತರದ ಧರ್ಮವು ಸಹ ಮೊದಲಿನ ಧರ್ಮದೊಂದಿಗೆ ಸೇರಿಕೊಂಡಿದೆ. ಹತ್ತು ಧರ್ಮಗಳಲ್ಲಿ ಪರಸ್ಪರ ಸಂಬಂಧವಿದೆ. ಮುಖ್ಯತೆ ಯಾವುದೇ ಒಂದು ಧರ್ಮದ್ದಿದೆ. ಆದರೆ ಅಲ್ಲಿ ಬೇರೆ ಧರ್ಮಗಳು ಸೇರಿವೆ. ಕ್ಷಮೆ ಇಲ್ಲದೇ ಯಾವುದೇ ಧರ್ಮ ಪ್ರಾರಂಭವಾಗಲಾರದು. ಇಲ್ಲಿ ಸೇರಿಸಿರುವ 'ಉತ್ತಮ' ಶಬ್ಧವು ಪ್ರತಿಯೊಂದು ಧರ್ಮದೊಂದಿಗೆ ಇದ್ದು ಅನೇಕರು ಸ್ವಾರ್ಥ ಭಾವನೆಯಿಂದ ಕ್ಷಮೆ ಕೇಳುತ್ತಾರೆ, ಮಾಡುತ್ತಾರೆಂಬ ಕಾರಣವಿದೆ. ಅರೇ ಸಹೋದರಾ ಅವರಿಂದ ಕ್ಷಮೆ ಕೇಳಿ ಬಿಡು ಯಾಕೆಂದರೆ ಅವರಿಂದ ಕೆಲಸವಾಗಬೇಕಿದೆ, ಅವರ ಅಂಗಡಿಗೆ ಹೋದರೆ ಅವರು ವಸ್ತುಗಳನ್ನು ಕೊಡಲಿಕ್ಕಿಲ್ಲ. ಅಥವಾ ದುಡ್ಡು ಕೇಳಿದರೆ ಕೊಡಲಿಕ್ಕಿಲ್ಲ. ಯಾವುದೇ ವಸ್ತುವಿನ ಅವಶ್ಯಕತೆ ಉಂಟಾಗಬಹುದಾದರೆ ಕೊಡದೇ ಇರಬಹುದು.ಆದ್ದರಿಂದ ಅವರಿಂದ ಅವಶ್ಯವಾಗಿ ಕ್ಷಮೆ ಕೇಳಿಕೊ. ಕ್ಷಮಾವಾಣಿ ಪತ್ರಗಳನ್ನು ಮುಂದಿರಿಸಿಕೋ ಅವರಿಗೆ ಕಳಿಸು ಅವರೊಂದಿಗೆ ನಮ್ಮ ಸಂಬಂಧವಿರುತ್ತದೆ. ಯಾರೊಂದಿಗೆ ನಮ್ಮ ಸಂಬಂಧವಿಲ್ಲ. ಅಲ್ಲಿಗೆ ಕಳಿಸಬೇಡ, ವೆಚ್ಚದ ಕೆಲಸ ಮಾಡಬೇಡ. ನೋಡಿ ಸಹೋದರರೇ ಇದರಲ್ಲಿಯೂ ಸ್ವಾರ್ಥವಿದೆ. ಆದ್ದರಿಂದ ಇಲ್ಲಿ ಸೇರಿಸಿರುವ 'ಉತ್ತಮ' ಶಬ್ಧದಿಂದ ಧರ್ಮವು ನಿಸ್ವಾರ್ಥ ಭಾವನೆಯಿಂದ ಮಾಡಬೇಕೆಂಬ ಅರ್ಥವಿದೆ. ಇದರ ಸಂಬಂಧ ಪರಮಾರ್ಥದೊಂದಿಗಿದೆ-ಅರ್ಥದೊಂದಿಗಿಲ್ಲ. ಕೇವಲ ನಾವು ಅರ್ಥದೊಂದಿಗಿರುತ್ತೇವೆ. ಆದರೆ ಇಲ್ಲಿ ಪರಮಾರ್ಥವನ್ನು ಹೇಳಿದೆ. ಇವೆಲ್ಲ

ಧರ್ಮಗಳ ಗುರಿ ಒಂದೇ ಇದೆ. ಅದು ಇವುಗಳ ಪಾಲನೆಯಿಂದ ನಮಗೆ ಮೋಕ್ಷ ದೊರಕಲಿ, ಕರ್ಮಗಳ ನಿರ್ಜರೆಯಾಗಲಿ, ಕರ್ಮಬಂಧದಿಂದ ನಾವು ಉಳಿಯೋಣ ಈ ಭಾವನೆಗಳಿಂದ ಈ ಧರ್ಮಗಳ ಪಾಲನೆಯಾದರೆ ಉತ್ತಮವಾಗಿದೆ. ನಿಮಗೆ ಮೋಕ್ಷ ಕೊಡಿಸುತ್ತವೆ. ಮತ್ತೆ ಸ್ವಾರ್ಥ ಭಾವನೆಯಿಂದ ಮಾಡುತ್ತಿದ್ದರೆ ಅದು ಔಪಚಾರಿಕವಾಗಿದೆ, ತೋರಿಕೆಯಾಗಿದೆ. ನಿಮ್ಮ ಸ್ವಾರ್ಥದ ಸಿದ್ಧಿಯಾಗಿದೆ ಬಹಳಷ್ಟು ಕೃತಕ ಧರ್ಮದ ನಕಲೀಯಾಗಿದೆ. ಯಾವತ್ತಾದರೂ ಬುದ್ಧಿ ಬಂದರೆ ಸುಧಾರಣೆಯು ಆಗಬಹುದು ಆದರೆ ಅನೇಕ ಸಾರಿ ಬುದ್ಧಿಯು ಬರಲಾರದು. ಇಂತಹ ಉಪಾದಾನವುಳ್ಳ ಜನರಿದ್ದು ಅವರು ಜೀವನವಿಡಿ ಸ್ವಾರ್ಥದಿಂದಲೇ ಧರ್ಮ ಮಾಡುತ್ತಿರುತ್ತಾರೆ. ಪರಮಾರ್ಥದೊಂದಿಗೆ ಸೇರುವುದೇ ಇಲ್ಲ. ಆದ್ದರಿಂದ ಸಹೋದರಾ ಯಾವಾಗ ಪರಮಾರ್ಥವು ಇವರೊಂದಿಗೆ ಸೇರಿದಾಗ ಉತ್ತಮ ರೀತಿಯಿಂದ ಒಳ್ಳೆಯ ಭಾವನೆಯಿಂದ ಈ ಧರ್ಮಗಳ ಪಾಲನೆ ಮಾಡಿದ್ದಾರೆಂದು ತಿಳಿಯಿರಿ. ಪ್ರತಿ ಆತ್ಮನನ್ನು ಸಮಾನ ಭಾವದಿಂದ ನೋಡಿರಿ. ಎಲ್ಲರನ್ನೂ ಸಮಾನ ಭಾವದಿಂದ ಕಂಡು ಈ ಧರ್ಮಗಳ ಪಾಲನೆ ಮಾಡಿರಿ. ಇವರಲ್ಲಿ ಕ್ಷಮೆ ಕೇಳಬೇಕು. ಅವರಿಂದ ಕೇಳಬಾರದು ಎಂದೇನೂ ಇಲ್ಲ. ಎಲ್ಲರೂ ನಮ್ಮ ದೃಷ್ಟಿಯಿಂದ ಭೇದ ಭಾವ ರಹಿತರಾಗಿದ್ದಾರೆ. ನಮ್ಮ ಬಂಧು ವರ್ಗವಿದ್ದಂತೆಯೇ ಎಲ್ಲ ಜೀವಗಳಿವೆ. ಹಾಗಿರುವುದರಿಂದಲೇ **"ಸತ್ವೇಷು ಮೈತ್ರಿ"** ಎಂದು ಹೇಳುತ್ತೇವೆ, ಮೈತ್ರಿಭಾವ ಎಲ್ಲರಲ್ಲಿಯೂ ಸಮಾನ ರೂಪದಿಂದ ಇರಬೇಕು. ಆಗಲೇ ಈ ಕ್ಷಮಾಧರ್ಮ ನಮ್ಮ ಜೀವನದಲ್ಲಿ ಬರುತ್ತದೆ. ಇಲ್ಲವಾದಲ್ಲಿ ಬಹಳ ಕಠಿಣವಿದೆ.

ಹೊರಗಿನ ಪರಪದಾರ್ಥಗಳು ಅರ್ಥಾತ್ ಪರಿಗ್ರಹಗಳ ಲಾಲಸೆ, ದೊಡ್ಡಸ್ತಿಕೆ ಮುಂತಾದ ಮೌನ, ಅಸೂಯೆ, ಇತರರ ಉನ್ನತಿಯನ್ನು ಸಹಿಸದಿರುವುದು, ತಾಮಸಿಕ ಆಹಾರ (ಮಾಂಸಾಹಾರ, ಕಂದಮೂಲ ಇತ್ಯಾದಿ ಅಭಕ್ಷ್ಯ ಆಹಾರ, ಹೆಚ್ಚು ಮಿರ್ಚ ಮಸಾಲೆಯ ಆಹಾರ, ಹೆಚ್ಚು ಜೀವ ಉತ್ಪತ್ತಿಯಾಗುವ ಆಹಾರ) ಮುಂತಾದವುಗಳ ಕಾರಣ ಕ್ರೋಧವು ಹೆಚ್ಚಾಗಿ ಬರುತ್ತದೆ. ಕ್ರೋಧದ ಕಾರಣದಿಂದಾಗಿ ಹಿತ-ಅಹಿತದ ವಿವೇಕ ಇರುವುದಿಲ್ಲ, ಕ್ರೋಧವು ಅಜ್ಞಾನತೆಯಿಂದ ಪ್ರಾರಂಭವಾಗುತ್ತದೆ ಹಾಗೂ ಪಶ್ಚಾತ್ತಾಪದವರೆಗೆ ಸಾಗಿ ಕೊನೆಗೊಳ್ಳುತ್ತದೆ. ಕ್ರೋಧದ ಪ್ರಾರಂಭದಲ್ಲಿ ಅಜ್ಞಾನತೆ, ಅವಿವೇಕತನವಿದ್ದು ಪಶ್ಚಾತ್ತಾಪದಿಂದ ಕೊನೆಗೊಳ್ಳುವುದು-ಇದು ನಮ್ಮೆಲ್ಲರ ಜೀವನದ ಅನುಭವವಾಗಿದೆ. ಕೊನೆಯಲ್ಲಿ ಸ್ವಯಂ ದುಃಖಿಗಳಾಗುತ್ತೇವೆ. ಸ್ವಯಂ ವೇದನೆಯಾಗುತ್ತದೆ. ಕಾರಣವು ಎದುರಿಗೆ ಇದ್ದರೂ ಸಹ, ಇತರರನ್ನು ಕ್ಷಮಿಸುವ ಆತ್ಮನು ಏನಾದರೂ ಆದರೆ ಯಾರದಾಗುತ್ತದೆ, ತನ್ನದೇ ಆಗುತ್ತದೆ ಎಂದು ಯೋಚಿಸುತ್ತಾನೆ. ನನ್ನ ಕರ್ಮದ ಹೊರ್ತಾಗಿ ಆಗುವುದಿಲ್ಲ. ನನ್ನ ಪಾಪಕರ್ಮ ಉದಯದಲ್ಲಿ ಬರುತ್ತಿದೆ, ಆದ್ದರಿಂದ ಹೀಗೆ ಆಗುತ್ತಲಿದೆ, ಒಳ್ಳೆಯದೇ ಆಯಿತು, ಸಾಲ ಮುಗಿಯುತ್ತದೆ ಇನ್ನೇನು ತಾನೇ ಅವರು ಮಾಡಬಲ್ಲರು? ಶರೀರಕ್ಕೆ ಏನಾದರೂ ಮಾಡಬಹುದೆ? ಹಾಗಾದರೆ ನಾನು ಶರೀರದ ಮೇಲಿನ ಮೋಹವನ್ನು ಬಿಟ್ಟು ಬಿಡುತ್ತೇನೆ. ಈ ಶರೀರ ಅನೇಕಬಾರಿ ದೊರೆತಿದೆ ಹಾಗೂ ಬಿಟ್ಟು ಹೋಗಿದೆ. ಆದ್ದರಿಂದ ನಾನು ಇದರ ಮೋಹವನ್ನು ಬಿಡುತ್ತೇನೆ ಹಾಗೂ ಇದರಿಂದ ನನ್ನ ಗೌರವಕ್ಕೆ ಹಾನಿಯಾಗುವುದಾದರೆ ಮಾನ, ಗೌರವವೂ ಒಂದು ಕಷಾಯವೇ ಆಗಿದೆ. ಇದು ಕರ್ಮದ ಸಂಯೋಗದಲ್ಲಿ ಆಗುತ್ತದೆ. ಅದರ ಘಾತವಾಗುವುದಾದರೆ ನನ್ನ ಆತ್ಮನ ಘಾತ ಏನೂ ಆಗುವುದಿಲ್ಲ. ಹೀಗೆ ವಿಚಾರ ಮಾಡುತ್ತಾ ಕ್ಷಮಿಸಿ ಬಿಡುತ್ತೇವೆ ಹಾಗೂ ಸಮತಾ ಭಾವದೊಂದಿಗೆ ಉಪಸರ್ಗಗಳನ್ನು ಸಹ ಸಹಿಸಿಕೊಳ್ಳುತ್ತೇವೆ. ಹೀಗೆಯೇ ಸಾಧು ಜನರ ಬಳಿಯೇ ಇಂತಹ ಉತ್ತಮ ಕ್ಷಮಾ ಧರ್ಮ ಬರುತ್ತದೆ. ಆದ್ದರಿಂದ

ನಾವು (ಸಾಧೂಗಳು) ಇಂತಹ ಉತ್ತಮ ಕ್ಷಮಾ ಧರ್ಮದ ಪಾಲನೆ ಮಾಡಲು ಸದಾಕಾಲ ವಿಚಾರ ಮಾಡುತ್ತಿರಬೇಕು. ಇಂತಹ ಕ್ಷಮಾಧರ್ಮ ನಮ್ಮ ಜೀವನದಲ್ಲಿ ಎಂದು ಬಂದೀತು ಎಂದು ಯೋಚಿಸುತ್ತಿರಬೇಕು.

ಕರ್ನಾಟಕ ಪ್ರದೇಶದ ವಿಷಯವಿದೆ. ನಾವು ವಿಹಾರ ಮಾಡುತ್ತಾ ಕರ್ನಾಟಕದ ಒಂದು ನಗರ ಆಳಂದವನ್ನು ತಲುಪಿದೆವು ಅಲ್ಲಿ ಅಹಿಂಸೆಯ ಬಗ್ಗೆ ಒಂದು ಕಾರ್ಯಕ್ರಮವಿದ್ದಿತು. ಅವರು ಅಹಿಂಸಾ ಧರ್ಮ ಸಮ್ಮೇಳನವನ್ನು ಏರ್ಪಡಿಸಿದ್ದರು. ಹಿಂದೂ ಧರ್ಮದ ಇಬ್ಬರು ಸಾಧುಗಳು ಬಂದರು– ಸಂಸ್ಕೃತದ ಒಳ್ಳೆಯ ಜ್ಞಾನಿಗಳಾಗಿದ್ದರು. ಅವರು ಜೈನಧರ್ಮವನ್ನು ಶ್ರೇಷ್ಠವೆಂದು ಸ್ವೀಕರಿಸಿದ್ದರು. ಜೈನಧರ್ಮದಂತಹ ಅಹಿಂಸೆ ಮತ್ತೆ ಯಾವ ಧರ್ಮದಲ್ಲಿಯೂ ಇಲ್ಲವೆಂದು ಅವರು ಹೇಳಿದರು. ಅವರು ದೃಷ್ಟಾಂತವಾಗಿ ಒಬ್ಬ ಜೈನ ಮುನಿಯ ಬಗ್ಗೆ ತಿಳಿಸಿದರು. ಅದರಲ್ಲಿ ಸಾಧುಗಳು ಎಷ್ಟು ಕ್ಷಮೆಯ ಧಾರಣೆ ಮಾಡಿರುತ್ತಾರೆ ಎಂಬ ಬಗ್ಗೆ ಒಳ್ಳೆಯ ಉದಾಹರಣೆಯಾಗಿದ್ದಿತು. ಅದರಲ್ಲಿರುವ ವಿಶಿಷ್ಟ ಸಂಗತಿ ಎಂದರೆ ನಮ್ಮ ಸಂಯಮ, ನಮ್ಮ ನಿಯಮ, ನಮ್ಮ ತಪಸ್ಸು, ನಮ್ಮ ತ್ಯಾಗ, ಎಂದಿಗೂ ಶರೀರ ಮುಂತಾದ ನಿಮಿತ್ತದಿಂದ ಅಥವಾ ಇನ್ನೂ ಏನೋ ನಮ್ಮ ಸುಖಕ್ಕಾಗಿ ಇವುಗಳ ತ್ಯಾಗವನ್ನು ಮಾಡುವುದಿಲ್ಲ ಯಾಕೆಂದರೆ ಇವು ಜೀವನದ ಆಧಾರಗಳಾಗಿವೆ. ಈ ನಿಯಮ, ಸಂಯಮ ನಮ್ಮ ಜೀವನದ ಆಧಾರಗಳಾಗಿವೆ, ಇವು ಹೋದರೆ ಎಲ್ಲವೂ ಹೋದಂತೆಯೇ ಶರೀರ ಹೋದರೆ ಮತ್ತೇ ಸಿಗುತ್ತದೆ, ಮೋಕ್ಷದಲ್ಲಿ ಇದು ಬಾಧಕವೇ ಆಗಿದೆ. ಆದ್ದರಿಂದ ಅವರು ಆತ್ಮನ ಚಿಂತನೆಯನ್ನು ಹೆಚ್ಚಾಗಿ ಮಾಡುತ್ತಾರೆ. ಈ ಮಾತುಗಳನ್ನು ನಾನು ನಿಮ್ಮ ಮುಂದೆ ಹೇಳುತ್ತಿದ್ದೇನೆ– ಹೀಗೆ ಯಾಕೆ ಆಯಿತು ಎಂದು ಒಂದು ಸಾರಿ ನಿಮಗೆ ತೊಂದರೆ ಎನಿಸಿತೂ ಆದರೆ ಇನ್ನೊಂದೆಡೆ ನೀವು ಕೇಳಿದಾಗ ನೀವು ನಿಮ್ಮ ಸಾಧುಗಳ ಬಗ್ಗೆ ಶ್ರದ್ಧೆ–ಭಕ್ತಿಯನ್ನು ಹೊಂದುವಿರಿ.

ಒಂದು ಊರು. ಅಲ್ಲಿಗೆ ಅನೇಕ ಸಾರಿ ಕಾಡಿನಿಂದ ಮುನಿ ಮಹಾರಾಜರು ಬರುತ್ತಿದ್ದರು. ಯಾವಾಗ ಈ ಅತಿಥಿಗಳು ಬರುತ್ತಿದ್ದರೋ ಗೊತ್ತಿಲ್ಲ. ಪ್ರತಿದಿನ ಶ್ರಾವಕರು ತಮಗಾಗಿ ಚೌಕಾ ಮಾಡುತ್ತಿದ್ದರು. ಮುನಿ ಮಹಾರಾಜರಿಗಾಗಿ ಅಲ್ಲ. ಜನರಿಗೆ ನಾವು ಈ ಮಹಾರಾಜರಿಗೆ, ಆ ಮಹಾರಾಜರಿಗೆ ಚೌಕಾ ಮಾಡಿದ್ದೇವೆ ಎಂದು ಹೇಳುವುದು ಸರಿಯಲ್ಲ ಹೀಗೆ ಭಾವಿಸುವವರ ಚೌಕಾದಲ್ಲಿ ಮಹಾರಾಜರು ಆಹಾರಕ್ಕೆ ಹೋಗುವುದಿಲ್ಲ ಮಹಾರಾಜರಿಗಾಗಿ ಎಂದು ಚೌಕಾ ಮಾಡಿದರೆ ಅದು ಉದ್ದಿಷ್ಟವಾಗುತ್ತದೆ, ಆದ್ದರಿಂದ ಈ ಭಾವನೆಗಳನ್ನು ತೆಗೆದು ಹಾಕಬೇಕು. ನಮಗಾಗಿಯೇ ಚೌಕಾ ಹಾಕ ಬೇಕೆ ವಿನಹ ಮಹಾರಾಜರಿಗಾಗಿ ಅಲ್ಲ. ಆ ಮಹಾರಾಜರು ಬಂದಾಗ ಕೆಲವು ದಿನಗಳಿಗಾಗಿ ಶುದ್ಧ ಆಹಾರ ಮಾಡುವ ನಿಯಮ ತೆಗೆದುಕೊಂಡಿದ್ದೇವೆ ಆದ್ದರಿಂದ ನಮಗಾಗಿ ಚೌಕಾ ಮಾಡಿದ್ದೇವೆ ಎಂದು ಹೇಳಬಹುದು. ಅಲ್ಲಿ ಎಲ್ಲರೂ ಮುನಿಗಳನ್ನು ಪಡಿಗಾಹನ ಮಾಡಲು ನಿಲ್ಲುತ್ತಿದ್ದರು. ಭಾಗ್ಯವಿದ್ದಾಗ ಕಾಡಿನಿಂದ ಮಹಾರಾಜರು ಬರುತ್ತಿದ್ದರು. ಬಂದು ಆಹಾರ ಮಾಡಿ ಮತ್ತೆ ಕಾಡಿನ ಕಡೆಗೆ ಸಾಗುತ್ತಿದ್ದರು.

ಬಹಳಷ್ಟು ದಿನಗಳ ನಿರೀಕ್ಷೆಯ ನಂತರ ಒಂದು ದಿನ ಮಹಾರಾಜರು ಬಂದರು. ಎಲ್ಲರೂ ಅವರನ್ನು ಆಹಾರಕ್ಕಾಗಿ ತಡೆಯಲು ನಿಂತಿದ್ದರು. ಭಕ್ತಿಭಾವ ಪೂರ್ವಕವಾಗಿ ಮುನಿರಾಜರ ಪಡಿಗಾಹನ ಮಾಡಲಾಯಿತು. ಮನೆಯ ಪ್ರವೇಶ ಮಾಡಿ ಭೋಜನ ಶಾಲೆಗೆ ಕರೆದೊಯ್ಯಲಾಯಿತು. ಅದರ ನಂತರ ಪಾದ ಪ್ರಕ್ಷಾಲನೆ ಮಾಡಲಾಯಿತು. ಪೂಜಿಸುವುದಕ್ಕಾಗಿ ಪಾತ್ರೆ ತರಲಾಯಿತು ಅದರಲ್ಲಿ ಬಹಳೇ ಒಳ್ಳೆಯ ಅಷ್ಟ ಮಂಗಲ ದ್ರವ್ಯಗಳು ಸುಸಜ್ಜಿತವಾಗಿದ್ದವು. ಪೂಜೆಯ ತಟ್ಟೆಯಲ್ಲಿ ಒಂದು

ವಿಶೇಷ ವಸ್ತು ರತ್ನದೀಪವೂ ಇದ್ದಿತು. ಅದು ಬೆಂಕಿಯ ಜ್ವಾಲೆ ಉರಿಯುತ್ತಿರುವಂತೆ ಕಾಣುತ್ತಿದ್ದಿತು, ಮುನಿರಾಜರ ಪೂಜೆಯನ್ನು ಮಾಡಲಾಯಿತು. ಪೂಜೆ ಆಗುತ್ತಿರುವಂತೆ ಮಹಾರಾಜರು ಎಲ್ಲವನ್ನು ನೋಡಿದರು. ಪೂಜೆಯ ನಂತರ ಎಲ್ಲ ಪಾತ್ರೆಗಳನ್ನು ಎತ್ತಿ ಬಾಗಿಲಿನ ಪಕ್ಕದಲ್ಲಿ ಇಡಲಾಯಿತು. ಎಲ್ಲರೂ ಕೈ ತೊಳೆಯಲು ನಡೆದರು, ಕೈ ತೊಳೆದುಕೊಂಡವರು ಅವರು ಸಾಮಾನುಗಳನ್ನು ತೆಗೆಯ ತೊಡಗಿದರು. ಅಷ್ಟರಲ್ಲಿ ಸಂಭವಿಸಿದ ಘಟನೆಯಲ್ಲಿ ಆ ರತ್ನದೀಪ ಕಾಣೆಯಾಗಿದ್ದಿತು.

ಎಲ್ಲರ ದೃಷ್ಟಿ ಬಿದ್ದು ರತ್ನದೀಪ ಎಲ್ಲಿ ಹೋಯಿತು? ಈಗ ಇಲ್ಲಿಯೇ ಇದ್ದಿತು. ಯಾರು ಒಯ್ದರು? ಈಗ ಮನೆಗೆ ಹೊರಗಿನಿಂದ ಯಾರು ಬಂದಿಲ್ಲ. ಮಹರಾಜರೇ ಹೊರಗಿನಿಂದ ಬಂದಿದ್ದಾರೆ ಮತ್ತೆ ಯಾರೂ ಬಂದಿಲ್ಲ. ನಾಲ್ಕೂ ಕಡೆಗೆ ನೋಡತೊಡಗಿದರು. ನಾಲ್ಕು ಕಡೆ ನೋಡಿದರೂ ಅದು ಸಿಗಲಿಲ್ಲ. ಈಗ ಮಹಾರಾಜರ ಮೇಲೆ ಸಂದೇಹ ಉಂಟಾಯಿತು. ಏನಾಯಿತು? ಮಹಾರಾಜರು ತೆಗೆದುಕೊಂಡರು, ಹೇಗೆ ತೆಗೆದುಕೊಂಡರು? ಇವರ ಬಳಿ ತಂತ್ರ-ಮಂತ್ರ ಇದೆಯಾ? ಅದರಿಂದ ಮಾಯ ಮಾಡಿದರೆ? ಸಹನೆಯಾಗದೆ ಗುಸುಗುಸಾಟ ಆಗುತ್ತಿದ್ದಿತು. ಈಗೇನು? ಮಹಾರಾಜರ ಆಹಾರ ಪ್ರಾರಂಭಿಸಬೇಕಾಗಿದೆ, ಆದರೆ ಅಲ್ಲಿ ವಿಕಲ್ಪಗಳುಂಟಾಗಿ ಅಶ್ರದ್ಧೆಯ ಭಾವಗಳು ಬರತೊಡಗಿದವು. ಆದರೆ ಅಂತಹ ಅಶ್ರದ್ಧೆಯ ಭಾವಗಳು ಬರಬಾರದು. ನೀವು ಪೂರ್ಣ ಶ್ರದ್ಧಾಭಾವದಿಂದ ಅವರ ಪಡಿಗಾಹನ ಮಾಡಿರುವಾಗ ಈ ಭಾವಗಳು ಬರಬಾರದು. ಆ ಸಮಯದಲ್ಲಿ ಏನೇ ಕಾರಣಗಳಿರಲಿ ನಂತರ ನೋಡಿಕೊಳ್ಳೋಣ ಎಂಬ ಭಾವವಿರಬೇಕು. ಮಹಾರಾಜರು ಬಹಳ ಜ್ಞಾನಿಗಳಾಗಿರುತ್ತಾರೆ. ನಂತರ ಅವರೊಂದಿಗೆ ಚರ್ಚೆ ಮಾಡಿಕೊಳ್ಳೋಣ ಎನ್ನುವಂತಿರಬೇಕು. ಆದರೆ ಮಧ್ಯದಲ್ಲಿಯೇ ಲೋಭದ ವಶಕ್ಕೊಳಕ್ಕಾಗಿ ಮಹಾರಾಜರ ಬಗ್ಗೆ ಅಶ್ರದ್ಧೆಯ ಭಾವ ಉತ್ಪನ್ನವಾಯಿತು. ದಾತಾರನಿಗೆ ಶ್ರದ್ಧೆ, ಸಂತೋಷ, ಭಕ್ತಿ, ವಿಜ್ಞಾನ, ಅಲುಬ್ಧತೆ, ಕ್ಷಮೆ, ಸತ್ಯ ಈ ಏಳು ಗುಣಗಳಿರುತ್ತವೆ. ಇವುಗಳಲ್ಲಿ ಮೊದಲ ಗುಣ ಶ್ರದ್ಧೆಯೇ ಇದೆ. ನಾವು ಆಹಾರ ನೀಡುತ್ತಿರುವ ಮುನಿಗಳು ನಿಜವಾದವರು, ಇವರ ಬಗ್ಗೆ ನಮ್ಮದು ಸಮಾನ ದೃಷ್ಟಿ ಒಳ್ಳೆಯ ಭಾವನೆಯಿಂದ ಕೂಡಿದ ಏಳುಗುಣಗಳ ಸಮೇತ ನವಧಾ ಭಕ್ತಿಯಿಂದ ಆಹಾರ ನೀಡಲಾಗುತ್ತದೆ.

ಶ್ರದ್ಧೆ ಏನೋ ಇದ್ದಿತು ಆದರೆ ಮಧ್ಯದಲ್ಲಿ ಯಾವುದೋ ನಿಮಿತ್ತದಿಂದ ಅದು ಮಾಯವಾಯಿತು. ಅಂದರೆ ಅಚಲವಾದ ಶ್ರದ್ಧೆ ಇರಲಿಲ್ಲ. ಈಗ ಏನು ಮಾಡಬೇಕು ಸರಿ ಮಹಾರಾಜರನ್ನೇ ಕೇಳೋಣ. ಮಹಾರಾಜರೇ ರತ್ನದೀಪ ಎಲ್ಲಿ ಹೋಯಿತು? ಮಹಾರಾಜರು ಸ್ವಲ್ಪ ಮುಗಳ್ನಕ್ಕು, ಏನೂ ಹೇಳಲಿಲ್ಲ. ಯಾವ ಸನ್ನೆಯನ್ನು ಮಾಡಲಿಲ್ಲ. ಅವರಿಗೆ ರತ್ನದೀಪ ಎಲ್ಲಿ ಹೋಯಿತೆಂದು ಎಲ್ಲವೂ ತಿಳಿದಿದ್ದರೂ, ಮೌನವಾಗಿದ್ದರು ಯಾವುದೇ ಕಾರಣದಿಂದ ಆಹಾರವಾಗದಿದ್ದರೂ ಸಹ ಆ ಮನೆಯಲ್ಲಿ ಹೇಳುವುದಿಲ್ಲ. ಹೊರಬಂದು ಅಥವಾ ಬೊಗಸೆಯನ್ನು ಬಿಟ್ಟಾಗ ಅವರ ಆಹಾರ ಚರ್ಯೆಯ ಸಂಕಲ್ಪ ಅಥವಾ ತೆಗೆದುಕೊಂಡಿದ್ದ ವೃತ್ತಿ ಪರಿಸಂಖ್ಯಾನವನ್ನು ಬಿಟ್ಟಾಗ ಅರ್ಥಾತ್ ವಿಧಿ ದೊರಕದಿದ್ದಾಗ ಈ ಕಾರಣಗಳಿಂದ ಇಂದು ಆಹಾರ ಸ್ವೀಕರಿಸುವುದಿಲ್ಲ ಎಂಬ ನಿರ್ಣಯ ತೆಗೆದುಕೊಂಡಾಗ ಪೂರ್ಣ ಮೌನರಾಗಿ ಬಿಡುತ್ತಾರೆ. ಈಗಂತೂ ಮೌನವಾಗಿದ್ದರು ಮತ್ತೆ ಅವರು ಈಗ ಉಪಸರ್ಗದ ಪ್ರಸಂಗ ಬರುತ್ತಲಿದೆ ಇಂತಹ ಉಪಸರ್ಗದ ಸಂದರ್ಭದಲ್ಲಿ ನಾವು ಇನ್ನೂ ಮೌನವಾಗಿರಬೇಕೆಂದು ಯೋಚಿಸಿದರು. ಈ ಉಪಸರ್ಗ ದೂರವಾಗುವವರೆಗೆ ಮೌನಧಾರಣೆ ಮಾಡುತ್ತೇನೆ, ಆಹಾರ ಜಲದ ತ್ಯಾಗವನ್ನು ಮಾಡುತ್ತೇನೆ. ಈಗ ಉಂಟಾದ ಸಮಸ್ಯೆ ಎಂದರೆ ಎದ್ದು ಹೊರಡುವುದು ಒಳ್ಳೆಯದಲ್ಲ. ಏನಾಗುತ್ತದೆ ಎಂದು ನೋಡುತ್ತಾರೆ. ಸ್ವಲ್ಪ ಹೊತ್ತು ಕುಳಿತಿರುತ್ತಾರೆ

ಹಾಗೂ ಅವರ ತಿಳುವಳಿಕೆಗೆ ಬರುತ್ತದೆಯೇ ಎಂದು ನೋಡುತ್ತಾರೆ, ಬಂದರೆ ಸರಿ ಇಲ್ಲವಾದಲ್ಲಿ ಇಲ್ಲಿಂದ ಹೊರಟು ಹೋಗಿ ಬಿಡೋಣ(ಎಂದು ಯೋಚಿಸುತ್ತಾರೆ).

ಮುನಿ ಮಹಾರಾಜರು ಕುಳಿತುಕೊಂಡೆ ನಾಲ್ಕು ದಿಕ್ಕಿನ ಕಡೆ ನೋಡಿದಾಗ ಎಲ್ಲರೂ ನಾಲ್ಕು ಕಡೆ ನಿಂತಿದ್ದಾರೆ, ಇವರು ಹೋಗಲು ಬಿಡುವುದಿಲ್ಲ. ಈಗ ಅಕ್ಕಪಕ್ಕದ–ನೆರೆಹೊರೆಯ ಜನರು ಸೇರಿಕೊಂಡರು. ಇಲ್ಲಿ ಏನು ನಡೆಯುತ್ತಿದೆ ಎಂದು ನೋಡತೊಡಗಿದರು. ಪರಿವಾರದ ಜನರಿಗೆ ಈಗ ಸಹಿಸಲಾಗುತ್ತಿರಲಿಲ್ಲ. ಆಗ ಅವರು ಜೋರಾಗಿ ಮಹಾರಾಜರನ್ನು ಯಾಕೆ ನೀವು ಹೇಳುತ್ತಿಲ್ಲ? ಎಂದು ಕೇಳಿದರು. ನಿಮಗೆ ಎಲ್ಲವೂ ತಿಳಿದಿದೆ. ನಿಮ್ಮನ್ನು ಬಿಟ್ಟು ಬೇರೆ ಯಾರೂ ಸಹ ಇಲ್ಲಿಗೆ ಬಂದಿಲ್ಲ ಇಲ್ಲಿ ನೀವೇ ಏನೋ ಮಾಡಿದ್ದಿರಾ. ಮೆಲ್ಲ ಮೆಲ್ಲನೆ ಆ ಎಲ್ಲ ಜನರು ಪ್ರಾರಂಭಿಸಿದರು, ಇಷ್ಟೇ ಅಲ್ಲ ನೋಡಿ ಆಚಾರ್ಯ ಕುಂದ ಕುಂದರು ಹೇಳಿರುವಂತೆ ಇಂತಹ ಉಪಸರ್ಗ ಬಂದರೂ ಸಹ ಮುನಿರಾಜರು ಕ್ರೋಧ ಮಾಡುವುದಿಲ್ಲ ಅವರು ಕ್ಷಮೆಯನ್ನೇ ಮಾಡುತ್ತಾರೆ. ಅದರಂತೆ ಮುನಿರಾಜರು ಶಾಂತಭಾವದಿಂದ ಅಲ್ಲಿಯೇ ಕುಳಿತು–ಸರಿ, ನನ್ನ ಕರ್ಮ ಹೋಗುತ್ತಲಿದೆ, ನಾನು ಸಾಲ ತೀರಿಸುತ್ತಿದ್ದೇನೆ, ಏನೂ ಮಾತನಾಡಬಾರದು, ನೋಡೋಣ, ನನ್ನ ಕರ್ಮ ಎಲ್ಲಿಯವರೆಗೆ ಸಾಗುತ್ತದೆ, ನಾನು ಏನೂ ತಪ್ಪು ಮಾಡಿಲ್ಲ–ಎಂದು ಯೋಚಿಸತೊಡಗಿದರು.

ಪರಿವಾರದ ಜನರು ಕ್ರೋಧದವಶರಾಗಿ ಭುಗಿಲೇಳುತ್ತಿದ್ದರಲ್ಲದೇ ಅವರಲ್ಲಿ ಒಬ್ಬರು ಮಹಾರಾಜರಿಗೆ ಹೊಡೆಯಲು ಕೋಲನ್ನು ಮೇಲೆ ಎತ್ತಿದರು. ಆದರೂ ಸಹ ಮಹಾರಾಜರು ಶಾಂತಭಾವ ಪೂರ್ವಕವಾಗಿ ಕುಳಿತಿದ್ದರು. ಜೋರಾಗಿ ಒಂದು ಹೊಡೆತ ಹೊಡೆದರೂ ಸಹ ಅವರು ಶಾಂತವಾಗಿಯೇ ಇದ್ದರು. ಇನ್ನೊಂದು ಸಾರಿ ಹೊಡೆದಾಗಲೂ ಅವರು ಕರ್ಮ ಹೋಗುತ್ತಲಿದೆ ಎಂದು ಯೋಚಿಸಿದರು, ಕರ್ಮಗಳ ನಿರ್ಜರೆಯಾಗುತ್ತಲಿದೆ. ಇದರ ನಂತರ ಅವರು ಕೋಲು ಮುರಿಯುವವರೆಗೆ ಹೊಡೆದರು ಮುರಿದ ಕೋಲಿನ ತುಂಡೊಂದು ಬಾಗಿಲಿನ ಹೊರಗೆ ಒಂದು ಮರದ ಮೇಲೆ ಕುಳಿತಿದ್ದ ಪಕ್ಷಿಗೆ ತಗುಲಿತು. ಕೋಲಿನ ತುಂಡು ಆ ಪಕ್ಷಿಗೆ ಬಡಿದಾಗ ಅದರ ಕೊಕ್ಕಿನಲ್ಲಿದ್ದ ರತ್ನದೀಪ ಕೆಳಗೆ ಬಿದ್ದಿತು. ರತ್ನದೀಪ ಕೆಳಗೆ ಬಿದ್ದೊಡನೆ–ಅರೇ ರತ್ನದೀಪ ಇಲ್ಲಿದೆ ಎಂಬ ಧ್ವನಿ ಬಂದಿತು. ಜನರು ಮೇಲೆ ನೋಡಿದಾಗ ಒಂದು ನವಿಲು ಆ ಮರದ ಮೇಲೆ ಕುಳಿತಿದ್ದಿತು ಅದರ ಕೊಕ್ಕಿನಲ್ಲಿ ಆ ರತ್ನದೀಪವಿದ್ದಿತು. ಎಲ್ಲರಿಗೂ ಆಶ್ಚರ್ಯ ಚಕಿತರಾದರು, ಇದೇನಾಯಿತು? ನಾವು ಏನು ಮಾಡಿದೆವು? ಮಹಾರಾಜರಿಗೆ ಎಷ್ಟೊಂದು ಹೊಡೆದೆವು ಹಾಗೂ ರತ್ನದೀಪ ಎಲ್ಲಿದ್ದಿತು? ರತ್ನದೀಪ ನವಿಲಿನ ಕೊಕ್ಕಿನಲ್ಲಿದ್ದಿತು. ನವಿಲು ಬಂದದ್ದು ಯಾರಿಗೂ ಗೋತ್ತಾಗಲೇ ಇಲ್ಲ, ಯಾಕೆಂದರೆ ಆ ಸಮಯದಲ್ಲಿ ಕೆಲವರು ಕೈ ತೊಳೆದುಕೊಳ್ಳುತ್ತಿದ್ದರು. ಕೆಲವರು ಸಾಮಾನುಗಳನ್ನು ತೆಗೆದಿಡುತ್ತಿದ್ದರು, ಕೆಲವರು ಶೋಧನೆಯಲ್ಲಿದ್ದರು ಆ ಸಮಯದಲ್ಲಿಯೇ ನವಿಲು ಬಂದು ಆ ರತ್ನದೀಪವನ್ನು ಒಯ್ದಿದ್ದಿತು ತನ್ನ ಕೊಕ್ಕಿನಲ್ಲಿ ಹಿಡಿದು ಮರದಲ್ಲಿ ಕುಳಿತಿದ್ದಿತು.

ಮುನಿ ಮಹಾರಾಜರು ಆ ನವಿಲನ್ನು ನೋಡಿದ್ದರು ಅದು ಬಂದು ರತ್ನದೀಪವನ್ನು ತನ್ನ ಕೊಕ್ಕಿನಿಂದ ಎತ್ತಿಕೊಂಡು ಗಿಡದ ಮೇಲೆ ಕುಳಿತಿದ್ದಿತು. ಆದರೂ ಅವರು ಹೇಳಲಿಲ್ಲ ಯಾಕೆ? ನೋಡಿ ಏಕಕಾಲದಲ್ಲಿ ಆ ಮುನಿರಾಜರಿಂದ ಎಷ್ಟೊಂದು ಧರ್ಮಗಳ ಪಾಲನೆಯಾಗುತ್ತದೆ. ಎಲ್ಲ ಧರ್ಮಗಳೊಂದಿಗೆ ಕ್ಷಮೆ ಸೇರಿಕೊಂಡಿದೆ. ಇಲ್ಲಿ ನಿಮಗೆ ಅನುಭವಕ್ಕೆ ಬಂದಿರಬೇಕು. ಮುನಿರಾಜರು ಆಗ ಹೇಳಿದ್ದರೆ ಅವರ ಮೌನವ್ರತಕ್ಕೆ ಧಕ್ಕೆ ಉಂಟಾಗುತ್ತಿದ್ದಿತು, ಅವರು ಉಪಸರ್ಗ ಸಹಿಸುತ್ತಿದ್ದು ಕರ್ಮಗಳ ನಿರ್ಜರೆಗೆ ತಡೆಯಾಗುತ್ತಿದ್ದಿತು. ಅವರು ಕರ್ಮಗಳ ಸಾಲವನ್ನು ತೀರಿಸಲು

ಆಗುತ್ತಿರಲಿಲ್ಲ. ಮುಖ್ಯವಾಗಿ ಹೇಳುವುದಾದರೆ ಕ್ಷಮಾಧರ್ಮ ಆಗುತ್ತಲೇ ಇದ್ದಿತು. ಜೊತೆಗೆ ಅವರ ಸಂಯಮ ಧರ್ಮವು ಸೇರಿದ್ದಿತು–ಇಂದ್ರಿಯ ಸಂಯಮ, ಪ್ರಾಣಿ ಸಂಯಮ, ಅವರು ಆ ಕಡೆ ಸನ್ನೆ ಮಾಡಿದ್ದರೆ ಆ ನವಿಲಿಗೆ ಹೊಡೆತ ಬಿಳುತ್ತಿತ್ತು. ಇದು ಹಿಂಸೆ ಆಗುತ್ತಿದ್ದಿತು ಹಾಗೂ ಸಾಧುವು ಹಿಂಸೆಯ ಭಾವವನ್ನು ಮಾಡಲಾರರು. ಈ ಜನರು ಆ ಪಕ್ಷಿಗೆ ಹೊಡೆಯುತ್ತಾರೆ. ಅದು ಸತ್ತು ಹೋಗುತ್ತದೆ. ನಾವೇ ಸ್ವತಃ ಹೊಡೆತ ತಿನ್ನುವುದೇ ಸರಿ ಎಂದು ಭಾವಿಸಿದರು. ನೋಡಿ ಮುನಿಗಳ ಜೀವನ ಹೇಗಿರುತ್ತದೆ. ನೀವು ವಿಚಾರ ಮಾಡಿ.

ಇಂತಹ ಜೀವನ ನಿಸ್ವಾರ್ಥಿ ಜೀವನವಾಗಿದೆ ಆದ್ದರಿಂದಲೇ 'ಉತ್ತಮ' ವಿಶೇಷಣವಿದ್ದು ಸ್ವಾರ್ಥಕ್ಕಾಗಿ ಇರದೇ ಪರಮಾರ್ಥಕ್ಕಾಗಿ ಇದೆ. ನೋಡಿ ಅವರಿಗೆ ತಮ್ಮ ಜೀವದ ಚಿಂತೆ ಇಲ್ಲ. ಅವರಿಗೆ ಆ ಪಕ್ಷಿಯ ಮೇಲೆಯೇ ಚಿಂತೆ ಇದ್ದಿತು. ಸಂಯಮದ ಪಾಲನೆ ಮಾಡಲು ಪ್ರಾಣಿ ಸಂಯಮ, ಪ್ರಾಣಿಯ ಹಿಂಸೆಯಾಗದಿರಲಿ, ಆದ್ದರಿಂದ ಅದರ ಕಡೆಗೆ ನೋಡಲೇ ಇಲ್ಲ. ಸ್ವಲ್ಪವಾದರೂ ಆ ಕಡೆಗೆ ನೋಡಿದ್ದರೆ, ಅವರಿಗೆ ತಿಳಿದು ಬಿಡುತ್ತಿದ್ದಿತು, ಯಾರಾದರೂ ಏನನ್ನಾದರೂ ತಿಳಿದರು ಎಂದು ಸನ್ನೆಯನ್ನು ಮಾಡಲಿಲ್ಲ ಏನನ್ನೂ ಮಾಡದೇ ಹೊಡೆತಗಳನ್ನು ಸಹಿಸಕೊಂಡಿದ್ದರು. ಇನ್ನೂ ಎಷ್ಟು ಹೊಡೆತಗಳು ಬೀಳುತ್ತಿದ್ದವೋ, ಆತ್ಮಘಾತವಾಗುವ ಸಾಧ್ಯತೆಯು ಇದ್ದಿತು. ಆದರೂ ಸಹ ಅವರು ಆ ಪ್ರಾಣಿಯ ಕಡೆಗೆ ಸಂಕೇತ ಮಾಡುತ್ತಿರಲಿಲ್ಲ. ಅವರ ಸಾಲ ಇಷ್ಟರಲ್ಲಿಯೇ ಮುಗಿದಿದ್ದಿತು. ಮೊದಲಿನ ಕರ್ಮ ಹೊರಟು ಹೋಯಿತು. ಆ ಪಕ್ಷಿಗೆ ಒಂದು ಮರದ ಕೋಲಿನ ತುಂಡು ತಗುಲಿತು; ತೊಂದರೆಯಾಗಿರದೇ ಇರಬಹುದು ಅದರೆ ಏನನ್ನು ಮುನಿರಾಜರು ಮಾಡಿರಲಿಲ್ಲ ಅದು ಕೋಲು ಮುರಿದಾಗ ಒಂದು ಕೋಲಿನ ತುಂಡು ಅದಕ್ಕೆ ಬಡಿಯಿತು ಹಾಗೂ ರತ್ನದೀಪ ಕೊಕ್ಕಿನಿಂದ ಕೆಳಗೆ ಬಿದ್ದಿತು ಹಾಗೂ ಎಲ್ಲಾ ರಹಸ್ಯ ಬಯಲಾಯಿತು.

ಈ 'ಎಲ್ಲ ರಹಸ್ಯ' ಬಯಲಾದಂತೆ ಎಲ್ಲ ಜನರು ರೋಧಿಸತೊಡಗಿದರು, ನಾವು ಏನು ಮಾಡಿದೆವು? ಒಂದು ರತ್ನದೀಪದ ಹಿಂದೆ, ಯಾರ ತಪ್ಪು ಇರದಿದ್ದರೂ, ಇಷ್ಟೊಂದು ಸಂಯಮಧಾರಿಗಳು ಆ ಪಕ್ಷಿಗೆ ಪೀಡೆಯಾಗದಿರಲೆಂದು ಸ್ವಯಂ ಉಪಸರ್ಗ, ಪೀಡೆ ಸಹಿಸುತ್ತಿದ್ದರು. ಎಂತಹ ನಿರ್ಮಲ ಹೃದಯ ಇವರದು. ಇಂಥ ಮುನಿಮಹಾರಾಜರು ನಮ್ಮ ಮನೆಗೆ ಬಂದಿದ್ದರು. ಅವರ ಚರಣಗಳು ನಮ್ಮಲ್ಲಿಗೆ ಬಂದಿದ್ದವು. ನಮ್ಮ ಮನೆ ಪವಿತ್ರವಾಗುತ್ತಿದ್ದಿತು. ಆದರೆ ನಾವು ಎಂತಹ ಅನರ್ಥ ಮಾಡಿಕೊಂಡೆವು. ಮುನಿ ಮಹಾರಾಜರ ಮೇಲೆ ಎಷ್ಟೊಂದು ಉಪಸರ್ಗ ಮಾಡಿದೆವು, ಎಷ್ಟೊಂದು ಹೊಡೆದೆವು, ಈಗ ನಮಗೆ ಕರ್ಮವು ಎಷ್ಟು ಹೊಡೆತಗಳನ್ನು ಹೊಡೆಯುತ್ತದೆ, ಯಾವ ಗತಿಗೆ ಹೋಗುತ್ತೇವೆ. ದುರ್ಗತಿಯಲ್ಲಿ ಎಲ್ಲಿ ಸ್ಥಾನ ಸಿಗುವುದು ನರಕದಲ್ಲೋ, ನಿಗೋಧದಲ್ಲೋ? ಈ ಪಾಪದ ಕ್ಷಯ ಎಲ್ಲಿ ಆಗುತ್ತದೆ? ಕ್ರೋಧದ ಕಾರಣ ವಿವೇಕ ಶೂನ್ಯರಾಗಿ ಇಷ್ಟೊಂದು ದೊಡ್ಡ ಅಕ್ಷಮ್ಯ ಅಪರಾಧ ಮಾಡಿಬಿಟ್ಟೆವು. ಕ್ರೋಧ ಕುರುಡು ಎಂಬುದು ಸತ್ಯ. ಕುರುಡನು ಏನು ಮಾಡುತ್ತಾನೆ ಎಂದು ಹೇಳಲಾಗದು. ಅವರನ್ನು ವಿವೇಕ ಶೂನ್ಯ, ಚೇತನಾ ಶೂನ್ಯನನ್ನಾಗಿ ಮಾಡಿದ್ದರಿಂದ ಅಕ್ಷಮ್ಯ ಅಪರಾಧ ಮಾಡಿ ಬಿಟ್ಟೆವು. ಗುರುಗಳ ಬಗ್ಗೆ ಎಷ್ಟೊಂದು ಶ್ರದ್ಧೆ ಇಡಬೇಕೆಂಬುದನ್ನು ನಾವು ವಿಚಾರ ಮಾಡುವುದಿಲ್ಲ. ಅಶ್ರದ್ಧೆಯ ಭಾವದಿಂದ ನಾವು ಏನೇನು ಮಾಡುತ್ತೇವೆ ಎಂಬುದು ತಿಳಿಯುವುದಿಲ್ಲ. ನಮ್ಮ ಸ್ವಾರ್ಥದಿಂದ ಅವರ ನಿಂದೆ, ಅವಜ್ಞೆ ತಿರಸ್ಕಾರ ಮಾಡಿ ಬಿಡುತ್ತೇವೆ. ಆದರೆ ಅವರೊಳಗಿರುವ ಮಹಾನ್ ಧರ್ಮವನ್ನು ಅದರ ರಹಸ್ಯವನ್ನು ತಿಳಿಯಲಾರೆವು. ಹತ್ತು ಧರ್ಮಗಳ

ಪಾಲನೆ ಮಾಡುತ್ತೇವೆ. ಒಂದು ಧರ್ಮವನ್ನಲ್ಲ ಎಲ್ಲ ಧರ್ಮಗಳು ಪರಸ್ಪರ ಕೂಡಿಕೊಂಡಿವೆ.

ಕ್ಷಮೆಯ ಒಂದು ಪ್ರಕರಣ ನಡೆಯುತ್ತಿದೆ, ಸಂಯಮ ಬಂದಿತು, ತ್ಯಾಗ ಬಂದಿತು. ಆಕಿಂಚನ್ಯ ಬಂದಿತು, ಎಲ್ಲ ಸಂಗತಿಗಳು ಬಂದವು. ಮುನಿಯಾಗಿದ್ದರೂ ಸಹ ತಮಗೆ ಹೊಡೆತಗಳು ಬೀಳುತ್ತಲಿವೆ ಎಂಬ ಮಾನ ಕಷಾಯ ಅವರಿಗೆ ಬರಲಿಲ್ಲ ಸ್ವಲ್ಪ ಸನ್ನೆ ಮಾಡಿ ಬಿಡೋಣವೆಂಬ ಮಾಯಾಚಾರವೂ ಬರಲಿಲ್ಲ. ನೋಡಿ ಕ್ಷಮೆಯೂ ಇದೆ, ಮಾನದ ಅಭಾವವಿರುವಾಗ ಮಾರ್ಧವವೂ ಇದೆ, ಸ್ವಲ್ಪ ಹತ ಮಾಡಬೇಕೆನ್ನುವ, ಹೇಳುವುದಿಲ್ಲ ಆದರೆ ಸನ್ನೆ ಮಾಡಬೇಕೆಂಬ ಮಾಯಾಚಾರವೂ ಇಲ್ಲ. ಏನಿಲ್ಲವೆಂದರೂ ಇವತ್ತು ಅಹಾರವಾಗಿ ಬಿಡಲಿ ಎನ್ನುವ ಲೋಭವೂ ಇಲ್ಲ. ಇಲ್ಲಿ ಎಲ್ಲವೂ ಸತ್ಯವೇ ಇದೆ. ಯಾವುದೇ ಪ್ರಾಣಿಗೆ ಕಷ್ಟವಾಗದಿರುವ ವಚನಗಳನ್ನಾಡುವುದರ ಹೆಸರೇ ಸತ್ಯ ಧರ್ಮವಿದೆ. ಮಾತುಗಳನ್ನು ಹೇಳಿ ಬಿಡುವುದಷ್ಟೇ ಅಲ್ಲ ಸಂಕೇತ ಸನ್ನೆ ಸಹ ವಚನವೇ ಆಗಿದೆ. ಹಾಗೇ ಮಾಡಬಹುದಾಗಿದ್ದಿತು ಆದರೆ ಹಾಗೇ ಮಾಡಲಿಲ್ಲ. ಬೇರೆಯವರಿಗೆ ಬಾಧೆಯನ್ನುಂಟು ಮಾಡುವ ವಚನವನ್ನಾಡದಿರುವುದು ಸತ್ಯ ಧರ್ಮವಾಗಿದೆ. ಕಾಯ ಕ್ಲೇಶವಾಗುತ್ತಿದ್ದು ಅದು ತಪಸ್ಸಾಗಿರುವುದರಿಂದ ಅಲ್ಲಿ ಉತ್ತಮ ತಪವೂ ಇದ್ದಿತು. ಶರೀರಕ್ಕೆ ಕಷ್ಟವಾಗುತ್ತಿದ್ದಿತು. ಅದನ್ನು ಅವರು ಸಹಿಸುತ್ತಿದ್ದರು. ಯಾಕೆಂದರೆ ಸಂಯಮದ ವಿರಾಧನೆಯಾಗಬಾರದು ಹಾಗೂ ಮುಂದೆ ತ್ಯಾಗವಿದೆ. ಹಿಂಸೆಯ ತ್ಯಾಗ ಮಾಡಿಯಾಗಿದೆ, ಅಹಿಂಸಾ ಮಹಾವ್ರತ ಸ್ವೀಕರಿಸಿಯಾಗಿದೆ. ಅದನ್ನು ಸಹ ಪಾಲಿಸಲಾಗುತ್ತಿದೆ. ಶರೀರದಿಂದ ನಸ್ಪೃಹ ಶರೀರ ಸಹ ನನ್ನದಲ್ಲ ಎಂಬ ಅಕಿಂಚನ್ಯದ ಚಿಂತನೆ ಮಾಡಿಯೇ ಕುಳಿತಿದ್ದರು. ಆಕಿಂಚನ್ಯದ ಪಾಲನೆಯೂ ಅಗುತ್ತಿದ್ದಿತು ಹಾಗೂ ಸ್ವಲ್ಪ ಹೊತ್ತಿಗೆ **"ಬ್ರಹ್ಮಾಣಿ ಚರ್ಯೇತಿ ಬ್ರಹ್ಮಚರ್ಯ:"** ಸಹ ಆಗಿಬಿಟ್ಟಿತು, ಎಲ್ಲವನ್ನು ಸಹಿಸುತ್ತಾ ಸಹಿಸುತ್ತಾ, ಶರೀರ ನನ್ನದಲ್ಲ ಎಂದು ಭಾವಿಸಿ ಆತ್ಮನಲ್ಲಿ ಲೀನರಾಗಿಬಿಟ್ಟರು. ಹೀಗೆ ಯೋಚಿಸಿದಾಗಲೇ ಉತ್ತಮ ಬ್ರಹ್ಮಚರ್ಯದ ಪ್ರಾಪ್ತಿಯಾಗುತ್ತದೆ. ಒಂದು ವೇಳೆ ಅವರು ಶರೀರಕ್ಕೆ ಏನೋ ಬಾಧೆಯಾಗುತ್ತಲಿದೆ. ನನ್ನ ಶರೀರದ ಘಾತವಾಗುತ್ತಲಿದೆ. ಅದರ ಮೋಹ ಬಿಡುತ್ತಿಲ್ಲ ಎಂದು ಭಾವಿಸಿದ್ದರೆ ಬ್ರಹ್ಮಚರ್ಯದಲ್ಲಿ ಲೀನರಾಗಲು ಆಗುತ್ತಿರಲಿಲ್ಲ. ಕೇವಲ ಸ್ತ್ರೀಯರ ತ್ಯಾಗ ಮಾಡುವುದು, ಕುಶೀಲವನ್ನು ತ್ಯಾಗ ಮಾಡುವುದಷ್ಟೇ ಬ್ರಹ್ಮಚರ್ಯವಲ್ಲ ಇವು ಬಹಳ ಮೊದಲೇ ಆಗುತ್ತವೆ. ಇವು ಬ್ರಹ್ಮಚರ್ಯ ವ್ರತ ಪಡೆಯುವಾಗಲೇ ಒಬ್ಬ ಬ್ರಹ್ಮಚಾರಿಯೆ ಆಗಿಬಿಡುತ್ತವೆ. ಮೊದಲ ಪ್ರತಿಮೆಯನ್ನು ಸ್ವೀಕರಿಸುವಾಗ ಹಾಗೂ ಏಳನೇ ಪ್ರತಿಮೆಯನ್ನು ಪಡೆಯುವಾಗ ಪೂರ್ಣರೂಪದಿಂದ ಆಗಿಬಿಡುತ್ತವೆ. ಇವು ಅಷ್ಟೊಂದು ಸಾಮಾನ್ಯವಲ್ಲ ಮುನಿಗಳ ಬ್ರಹ್ಮಚರ್ಯ ಮಹಾನ್ ಬ್ರಹ್ಮಚರ್ಯವಾಗಿದೆ. ಮುನಿಗಳ ಹದಿನೆಂಟು ಸಾವಿರ ಶೀಲಗಳಿರುತ್ತವೆ. ನೋಡಿರಿ ಮುನಿಗಳು ಎಷ್ಟು ಮಹಾನ್ ಆಗಿರುತ್ತಾರೆ.

ಇಲ್ಲಿಯವರೆಗೆ ರತ್ನದೀಪದ ಚಿಂತೆ ಇದ್ದಿತು, ಈಗ ತಮ್ಮ ಜೀವನದ ಚಿಂತೆಯಾಯಿತು ಇವರು ಮುನಿ ಮಹಾರಾಜರು, ಮಹಾನ್ ಸಾಧಕರಾಗಿದ್ದಾರೆ. ಇವರ ಮೇಲೆ ಇಂತಹ ಮಹಾನ್ ಉಪಸರ್ಗ ಮಾಡಲಾಗಿದೆ. ಇದರ ಫಲ ಸಾಮಾನ್ಯವಾಗಿರಲಾರದು. ನಾವು ಎಲ್ಲಿಗೆ ಹೋಗುತ್ತೇವೆ ನಿಶ್ಚಿತ ರೂಪದಿಂದ ನರಕ, ನಿಗೋದ ದುಃಖವೇ ಈಗ ಸಹಿಸಬೇಕು ಮತ್ತೆ ಬೇರೆ ದುಃಖವಿಲ್ಲ. ನಾವು ಅವರ ಅವಜ್ಞೆ ಮಾಡಿದ್ದೇವೆ.ಅವರಿಗೆ ಕಠೋರ ಶಬ್ಧಗಳನ್ನಾಡಿದ್ದೇವೆ.ಈಗ ಏನಾದೀತು? ಇದೇ ಜೀವನದಲ್ಲಿ ಇನ್ನೂ ಏನಾಗಬಹುದೆಂದು ತಿಳಿದಿಲ್ಲ. ಇಂತಹ ಬಹಳಷ್ಟು ಉದಾಹರಣೆಗಳನ್ನು ನೋಡಿದ್ದೇವೆ, ಕೇಳಿದ್ದೇವೆ. ಶ್ರೀಪಾಲರ ಕಥೆಯನ್ನು ಕೇಳಿದ್ದೇವೆ. ಸ್ವಲ್ಪವೇ ಅಪಶಬ್ದಗಳನ್ನು ಹೇಳಿ

ನಗ್ನತೆಯನ್ನು ನೋಡಿ ಮುನಿಗಳ ಅಪಹಾಸ್ಯ ಮಾಡಿದ್ದರು, ಅದರಿಂದಾಗಿ ಮುಂದಿನ ಭವದಲ್ಲಿ ಕುಷ್ಠದಂತಹ ಭಯಂಕರ ದುಃಖದಾಯಿ ರೋಗವಾಗಿದ್ದಿತು ಅವರಿಗೆ. ನಾವು ಎಂದಿಗೂ ಸದ್ ಗುರುಗಳ ಅಪಮಾನ ಮಾಡಬಾರದಾಗಿದ್ದಿತು. ಈ ಪದವಿ ಬಹಳ ಕಠಿಣವಾದ್ದು, ಪಂಚ ಪರಮೇಷ್ಠಿಗಳ ಪದವಿ ಪಡೆಯುವುದು ಬಹಳ ಕಠಿಣವಿದೆ. ಯಾರು ಪಡೆದಿದ್ದಾರೋ ಅವರಂತೂ ಈ ಸಂಸಾರದಿಂದ ಪಾರಾದರು. ಹೀಗಿರುವಾಗ ನಾವು ಎಂತಹ ಅಧರ್ಮಕಾರ್ಯ ಮಾಡಿದೆವು?

ಮತ್ತೇನು ಆತ್ಮ ಗ್ಲಾನಿಯಿಂದ ಮನಸ್ಸು ತೊಪ್ಪೆಯಾಗುತ್ತಿದ್ದಿತು. ಕಣ್ಣುಗಳಿಂದ ನೀರು ಹರಿಯತೊಡಗಿತು ಮುನಿರಾಜರ ಚರಣಗಳನ್ನು ಹಿಡಿದು ತಲೆ ಬಾಗಿದರು. ಕಣ್ಣೀರಿನಿಂದ ಮುನಿರಾಜರ ಚರಣಗಳ ಪಾದ ಪ್ರಕ್ಷಾಲನೆ ಆಗತೊಡಗಿತು, ದುಃಖದಿಂದ ಮೇಲಿಂದ ಮೇಲೆ ನಮ್ಮನ್ನು ಕ್ಷಮಿಸಿರಿ. ಮಹಾರಾಜರೇ ಕ್ಷಮೆ ಮಾಡಿರಿ ಎಂದು ಹೇಳುತ್ತಾ ಅವರ ಚರಣಗಳನ್ನು ಹಿಡಿದೇ ಇದ್ದರು. ಮುನಿರಾಜರು ಉಪಸರ್ಗದ ಸ್ಥಿತಿಯಲ್ಲಿ ಆಹಾರವನ್ನಂತೂ ತ್ಯಾಗ ಮಾಡಿದ್ದರು. ಉಪವಾಸ ಸ್ವೀಕರಿಸಿದ್ದರು. ಆಗ ಮಹಾರಾಜರು ಅಲ್ಲಿಂದ ಎದ್ದು ಹೊರಡುವ ಸಂಕೇತ ನೀಡಿದರು. ಆಗ ಆ ಜನರು ಇಲ್ಲಾ ಮಹಾರಾಜರೇ ನಾವು ನಿಮಗೆ ಹೋಗಲು ಬಿಡುವುದಿಲ್ಲ. ತಾವು ಇಲ್ಲಿಂದ ಆಹಾರ ಸ್ವೀಕರಿಸಿಯೇ ಹೋಗಬೇಕು ಎಂದು ಹೇಳಿದರು, ಮನೆಯ ಎಲ್ಲ ಜನರು ಅಳತೊಡಗಿದರು, ಊರಿನ ಜನರು ಅಳತೊಡಗಿದರು ಹಾಗೂ ನಮ್ಮ ಊರಿನ ಗೌರವ ಹಾಳಾಗಬಾರದು, ಊರಿನ ಎಲ್ಲ ಜನರಿಗೆ ಇದರ ಫಲ ದೊರಕಿದರೆ ಏನಾಗುತ್ತದೆ? ತಾವು ಕ್ಷಮಿಸಿರಿ ಎಂದು ಹೇಳತೊಡಗಿದರು. ನಾನು ಕ್ಷಮಿಸಿದ್ದೇನೆ ಎಂದು ಮುನಿ ಮಹಾರಾಜರು ಹೇಳಿದರು. ಇಲ್ಲ, ಕ್ಷಮಿಸಿರಿ ನಮಗೆ ಪ್ರಾಯಶ್ಚಿತ ಕೊಡಿ ಎಂದು ಎಲ್ಲ ಜನರು ಹೇಳಿದರು. ಏನೆಲ್ಲ ಪ್ರಾಯಶ್ಚಿತ ನೀವು ನೀಡುವಿರೋ ನಾವು ಅದನ್ನು ಪಾಲಿಸುತ್ತೇವೆ ಎಂದರು.

ಮುನಿರಾಜರು ಏನೂ ಹೇಳದೇ ಕಾಡಿನ ಕಡೆ ನಡೆದರು. ಆ ಪರಿವಾರದ ಯಜಮಾನರು ಹೇ, ಮಹಾರಾಜರೇ, ಹೇ ಮಹಾರಾಜರೇ, ನಿಲ್ಲಿರಿ, ನಾವು ಹೋಗಲು ಬಿಡುವುದಿಲ್ಲವೆಂದು ಅವರು ಮೇಲಿಂದ ಮೇಲೆ ಮಹಾರಾಜರ ಕಾಲುಗಳನ್ನು ಹಿಡಿಯುತ್ತಾರೆ. ಮಹಾರಾಜರು ಮುಂದೆ ಸಾಗುತ್ತಾ ಕಾಡಿನ ಕಡೆಗೆ ನಡೆದೇ ಬಿಟ್ಟರು. ಆ ವ್ಯಕ್ತಿಯು ಅವರ ಹಿಂದೆಯೇ ಸಾಗಿದರು. ಕಾಡನ್ನು ತಲುಪಿದ ಮುನಿರಾಜರು ಗುಹೆಯಲ್ಲಿ ಒಂದು ಶಿಲೆಯ ಮೇಲೆ ಕುಳಿತು ಏನನ್ನು ಮಾತನಾಡಲಿಲ್ಲ. ಆ ವ್ಯಕ್ತಿಯು ಸಹ ಅವರ ಸಮೀಪವೇ ಕುಳಿತರು ಹಾಗೂ ಈ ಕೃತ್ಯಕ್ಕೆ ಎಂತಹ ದೊಡ್ಡ ಪ್ರಾಯಶ್ಚಿತವಿರಬಹುದೆಂದು ಯೋಚಿಸಿದರು. ಮಹಾರಾಜರ ಚರಣಗಳಲ್ಲಿ ಎಂತಹ ಪ್ರಾಯಶ್ಚಿತ ಸ್ವೀಕರಿಸಲಿ, ಯಾಕೆ ನಾನು ಈ ಜೀವನದಲ್ಲಿ ನಾನು ವಿಭವಕ್ಕೆ ತೆರಳಲು ಕಾರಣವಾದ ಎಲ್ಲ ಪದಾರ್ಥಗಳನ್ನು, ವಸ್ತುಗಳನ್ನು, ವಿಭಾವಕ್ಕೆ ಕಾರಣವಾದ ಅವೆಲ್ಲವನ್ನು ಬಿಡುವ ಪ್ರಾಯಶ್ಚಿತ ತೆಗೆದುಕೊಳ್ಳಬಾರದು ಆಗಲೇ ನನಗೆ ಸ್ವಭಾವದ ಪ್ರಾಪ್ತಿ ಆಗುತ್ತದೆ. ಅಂದರೆ ಯಾವ ಕ್ರೋಧ ಬಂದಿದೆ ಅದಕ್ಕೆ ನಿಮಿತ್ತ ಪರಿಗ್ರಹವೇ ಇದೆ. ಅಲ್ಲಿ ಪರಿಗ್ರಹವೇ ವಿಭಾವಕ್ಕೆ ಕಾರಣವಾಗಿದೆ. ಹಾಲು ಉಕ್ಕಲು ಬೆಂಕಿಯೇ ಕಾರಣ, ಬೆಂಕಿಯನ್ನು ದೂರ ಮಾಡುತ್ತಲೇ ಹಾಲು ಸ್ವಭಾವದಲ್ಲಿ ಬಂದು ಬಿಡುತ್ತದೆ. ಹಾಗೆಯೇ ನಾವು ಸಹ ಈ ಪರಿಗ್ರಹವನ್ನು ಬಿಟ್ಟರೆ ನಿಯಮದಿಂದ ಸ್ವಭಾವದ ಪ್ರಾಪ್ತಿಯಾಗಬಲ್ಲದು ಇಲ್ಲವಾದಲ್ಲಿ ಈ ಪರಿಗ್ರಹವು ಅದೇಷ್ಟೋ ಭವಗಳಿಂದ ಅನರ್ಥ ಮಾಡುತ್ತಲೇ ಬಂದಿದೆ. ಏನೇನೂ ಇದು ಮಾಡಿಸಿರಬಹುದು, ಈಗಂತೂ ಜೈನ ಕುಲ, ಉತ್ತಮ ಪರಿವಾರ ದೊರೆತರೂ ಸಹ

ಅವಜ್ಞೆ ಮಾಡಿದ್ದೇನೆ. ಇನ್ನೂ ಇದ್ದಿರಬಹುದು ಯಾವುದೋ ಜಾತಿ ಮುಂತಾದವುಗಳಲ್ಲಿ ನಿಜವಾದ ಧರ್ಮದ ಅಪಮಾನ ಮಾಡಿರಬಹುದು. ಈಗ ಈ ಜೀವನದಲ್ಲಿ ಕರ್ಮಗಳು ಉಳಿಯಲು ಬಿಡಬಾರದು. ಆಗಲೇ ನಾನು ಇಂತಹ ಪಾಪಗಳನ್ನು ತೆಗೆಯಬಲ್ಲೆ. ಇಲ್ಲವಾದಲ್ಲಿ ಈ ಪಾಪ ಹಾಗೇ ಹೋಗುವಂತಹದಲ್ಲ. ಈ ಕರ್ಮಗಳನ್ನು ಕಡಿದು ಇವುಗಳಿಂದ ಮುಕ್ತಿ ಪಡೆಯಬೇಕಾಗಿದೆ, ಅದರಿಂದಾಗಿ ನನ್ನ ಜೀವನದಲ್ಲಿ ಹೀಗೆ ಎಂದಿಗೂ ಆಗದಿರಲಿ ಈ ಜನ್ಮ ಮರಣದ ಚಕ್ರವೇ ದೂರವಾಗಲಿ, ವೈರಾಗ್ಯದ ಧಾರೆ ಹರಿಯತೊಡಗಿತು ಹಾಗೂ ಆ ವ್ಯಕ್ತಿಯು ಅಲ್ಲಿಯೇ ಎಲ್ಲ ವಸ್ತ್ರಗಳನ್ನು ತ್ಯಾಗ ಮಾಡಿ ಕೇಶಲೋಚನೆ ಮಾಡಿಕೊಂಡು ಮುನಿರಾಜರಿಗೆ ದೀಕ್ಷೆಗಾಗಿ ನಿವೇದನೆ ಮಾಡಿಕೊಳ್ಳುತ್ತಾ–ಹೇ, ಮುನಿ ರಾಜರೇ ನನಗೆ ದೀಕ್ಷೆ ಕೊಡಿರಿ. ದೀಕ್ಷೆಯನ್ನು ಸ್ವೀಕರಿಸಿ ಮೌನ ಧಾರಣೆ ಮಾಡಿದರು ಹಾಗೂ ಕರ್ಮ ಕಡಿಯಲು ಪ್ರಾರಂಭಿಸಿದರು. ನೋಡಿ ಸಹೋದರರೇ ಅವರು ಮಾಡಿದ ಪ್ರಾಯಶ್ಚಿತಕ್ಕಿಂತ ದೊಡ್ಡದಾದ ಉತ್ತಮ ಪ್ರಾಯಶ್ಚಿತ ಮತ್ತೊಂದಿರಲಿಲ್ಲ.

ಭೋಪಾಲನಲ್ಲಿ ವರ್ಷಾಯೋಗದ ಪ್ರವಾಸದಲ್ಲಿ ಮುಖ್ಯಮಂತ್ರಿಗಳು ಬಂದಿದ್ದರು. ಅವರು ತಮ್ಮ ಮಾತುಗಳಲ್ಲಿ "ಇಂತಹ ಮುನಿಗಳ ತ್ಯಾಗ, ತಪಸ್ಸು ಪ್ರಶಂಸನೀಯವಾಗಿದೆ. ಅವರ ಬಳಿ ಯಾವ ಚೀಲವೂ ಇಲ್ಲ , ಜೇಬೂ ಇಲ್ಲ, ವಸ್ತ್ರವು ಇಲ್ಲ, ದುಡ್ಡೂ ಇಲ್ಲ, ವೈಭವವೂ ಇಲ್ಲ, ಮುನಿಗಳು ನಿಃಸ್ವಾರ್ಥಿಗಳಾಗಿರುತ್ತಾರೆ. ಅವರು ತಮ್ಮ ತಪಸ್ಸನ್ನು ನಿಸ್ವಾರ್ಥ ಭಾವನೆಯಿಂದ ಮಾಡುತ್ತಾರೆ. ಅವರಿಗೆ ಯಾವ ವಸ್ತುವಿನ ಬಯಕೆಯೂ ಇರುವುದಿಲ್ಲ" ವೆಂದು ಹೇಳಿದ್ದರು. ಯೋಚನೆ ಮಾಡಿ ಅಷ್ಟೊಂದು ಎತ್ತರಕ್ಕೆ ಅವರು ಹೋಗಿದ್ದರು, ಅವರು ಸ್ವಲ್ಪವಾದರು ತಿಳಿದಿದ್ದಾರೆ, ಅಷ್ಟೊಂದು ಓದು ಬರಹ ಬಲ್ಲವರು ಜ್ಞಾನಿಗಳಾಗಿರುತ್ತಾರೆ, ಅವರು ಸಹ ಜಿನ ದರ್ಶನದ ಮಹಾನತೆ, ತ್ಯಾಗವನ್ನು ತಿಳಿದಿದ್ದಾರೆ. ಅದರ ಪ್ರಶಂಸೆಯನ್ನು ಮಾಡುತ್ತಾರೆ.

ದಿಗಂಬರ ಮುನಿಗಳಲ್ಲಿ ಕರುಣೆ, ವಾತ್ಸಲ್ಯಗಳಿರುತ್ತವೆ. ಅವರು ತಮ್ಮ ಪ್ರಾಣವನ್ನೂ ನೀಡಬಲ್ಲರು ಆದರೆ ಯಾವುದೇ ಜೀವಕ್ಕೂ ಹೊಡೆಯುವುದಿಲ್ಲ. ಶರೀರಕ್ಕೆ ಎಷ್ಟೇ ಕಷ್ಟ ಕೊಟ್ಟರೂ, ಎಷ್ಟೇ ಉಪಸರ್ಗಗಳಾದರೂ ಅವರೊಳಗೆ ಕಲುಷತೆಯ ಉತ್ಪತ್ತಿಯಾಗುವುದಿಲ್ಲ ಅವರಲ್ಲಿ ಅಪೂರ್ವವಾದ ಕ್ಷಮೆ ಇರುತ್ತದೆ, ಕ್ರೋಧದ ಅಭಾವದಲ್ಲಿ ಕ್ಷಮೆಯಾಗುತ್ತದೆ. ಸುಕೌಶಲ, ಸುಕುಮಾಲ, ಗಜಕುಮಾರ, ಯಶೋಧರ, ಅಕಂಪನಾಚಾರ್ಯ ಮುಂತಾದ 700 ಮುನಿರಾಜರು, ಕ್ಷಮಾಮೂರ್ತಿ ಪಾರ್ಶ್ವನಾಥ, ಭಗವಾನ ಮಹಾವೀರ, ದೇಶಭೂಷಣ–ಕುಲಭೂಷಣ ಮುನಿರಾಜರು, ದಶರಥ, ಮರ್ಯಾದಾ ಪುರುಷೋತ್ತಮ ರಾಮಚಂದ್ರ, ಮುಂತಾದ ಮಹಾನ್ ಪುರುಷರು ಹಾಗೂ ಸೀತಾ, ಸೋಮಾ, ಅನಂಗಸರಾ, ಅನಂತಮತಿ, ಮೈನಾಸುಂದರಿ, ದ್ರೌಪದಿ, ಸುಭದ್ರೆ, ಜೇಲನಾ ಮುಂತಾದ ಸ್ತ್ರೀಯರು ಕ್ಷಮಾಧರ್ಮದ ಪಾಲನೆ ಮಾಡಿದರು.

ಆಚಾರ್ಯ ವೀರಸೇನ ಸ್ವಾಮಿಗಳು ಧವಲಾ ಗ್ರಂಥದ 1218ರ ಗಾಥೆಯಲ್ಲಿ ಹೀಗೆ ಹೇಳಿದ್ದಾರೆ–

**ಹೃದಯದಾಹಾಂಗಕಂಪಾಕ್ಷಿರಾಗೇಂದ್ರಿಯಾಪಾಟವಾದಿ ನಿಮಿತ್ತ ಜೀವ ಪರಿಣಾಮಃ ಕ್ರೋದಃ।**

ಅರ್ಥಾತ್ ಹೃದಯ ದಾಹ, ಅಂಗಕಂಪ, ನೇತ್ರ ರಕ್ತತೆ ಹಾಗೂ ಇಂದ್ರಿಯಗಳ ನಡುಗುವಿಕೆ ಮುಂತಾದವುಗಳ ನಿಮಿತ್ತ ಭೂತ ಜೀವದ ಪರಿಣಾಮವನ್ನು ಕ್ರೋಧವೆಂದು ಹೇಳಲಾಗುತ್ತದೆ.

ಕಣ್ಣು ಕೆಂಪಗಾಗುವುದು, ಹುಬ್ಬು ಗಂಟಿಕ್ಕುವುದು, ಚಹರೆಯಲ್ಲಿ ಹೊಳಪು ಬರುವುದು, ತುಟಿಗಳನ್ನು ಅಲ್ಲಾಡಿಸುವುದು ಹಾಗೂ ಶರೀರದಿಂದ ಬೆವರು ಹರಿಯ ತೊಡಗಿದರೆ ಇವು ಕ್ರೋಧದ ಬಾಹ್ಯ ಲಕ್ಷಣಗಳಾಗಿವೆ. ಅಪಶಬ್ಧಗಳ ಪ್ರಯೋಗ, ಬೈಗಳಗಳ ಕೂಗಾಟ, ಹೊಡೆದಾಟಕ್ಕಿಳಿಯುವುದು, ಸಾಯಲು ಸಾಯಿಸಲು ಸಹ ಸಿದ್ಧರಾಗಿ ಬಿಡುತ್ತಾರೆ. ತಾಯಿ–ತಂದೆ, ಸ್ತ್ರಿ, ಪುತ್ರ, ಪುತ್ರಿ, ಬಾಲಕ, ಸ್ವಾಮಿ, ನೌಕರ ಹಾಗು ಅನ್ಯ ಮಿತ್ರ, ಕುಟುಂಬ ಇತ್ಯಾದಿ ಯಾರನ್ನೂ ಬಿಡುವುದಿಲ್ಲ ತೀವ್ರ ಕ್ರೋಧದಲ್ಲಿ ವಿಷ ಸೇವಿಸಿ, ಶಸ್ತ್ರಗಳಿಂದ, ಚೂರಿ ಅಥವಾ ಚಾಕೂ, ಪಿಸ್ತೂಲ್ ಇತ್ಯಾದಿಗಳಿಂದ ತಮ್ಮ ಆತ್ಮಹತ್ಯೆ ಮಾಡಿಕೊಳ್ಳುವಲ್ಲಿ ಹಿಂದೆ ಸರಿಯುವುದಿಲ್ಲ. ಪರ್ವತದಿಂದ ನದಿ ಮುಂತಾದವುಗಳಲ್ಲಿ ಬಿದ್ದು ಪ್ರಾಣವನ್ನು ಬಿಡುತ್ತಾರೆ. ಯಾರಾದರೂ ಅವರಿಗೆ ತಿಳಿ ಹೇಳಲು ಹೋದರೆ ಅವರ ಘಾತವನ್ನೂ ಮಾಡುತ್ತಾರೆ ಕ್ರೋಧ ಪ್ರವೃತ್ತಿ ಇರುವ ವ್ಯಕ್ತಿಗಳು ಬೇರೆ ಯಾವುದೇ ವ್ಯಕ್ತಿಯ ಉಪಕಾರ, ದಯೆ ಅಥವಾ ಅನ್ಯ ಸೇವೆ ಸುಶ್ರೂಷೆಯನ್ನು ಸಹ ಮಾಡುವುದಿಲ್ಲ ದೊಡ್ಡ–ದೊಡ್ಡ ಮಹಾನ್ ತಪದಿಂದ ಕೂಡಿದ ತಪಸ್ವಿಗಳಿಗೂ ಕೂಡ ಈ ಕ್ರೋಧವು ಬಿಟ್ಟಿಲ್ಲ. ಅವರು ದ್ವೀಪಾಯನರಿರಬಹುದು ಅಥವಾ ಪರಶು ರಾಮರಂತಹ ತಪಸ್ವಿಗಳ ಕ್ರೊಧ ಜಗತ್ತಿನಲ್ಲಿ ಪ್ರಸಿದ್ಧವಾಗಿದೆ. ಆಚಾರ್ಯರು ಕ್ರೋಧದ ವಿಷಯದಲ್ಲಿ ಹೀಗೆ ಹೇಳಿದ್ದಾರೆ–

**ಕ್ರೋಧೋ ನಾಶಯತೇ ಧೈರ್ಯಂ, ಕ್ರೋಧೋ ನಾಶಯತೇ ಶ್ರುತಮ್।**
**ಕ್ರೋಧೋ ನಾಶಯತೇ ಸರ್ವಂ, ನಾಸ್ತಿ ಕ್ರೋಧ ಸಮೋ ರಿಪುಃ ॥**

ಅರ್ಥಾತ್ ಕ್ರೋಧವು ಧೈರ್ಯವನ್ನು ನಾಶ ಮಾಡಿ ಬಿಡುತ್ತದೆ, ಕ್ರೋಧವು ಶಾಸ್ತ್ರ ಜ್ಞಾನವನ್ನು ನಾಶ ಮಾಡುತ್ತದೆ, ಕ್ರೋಧವು ಎಲ್ಲವನ್ನು ನಾಶ ಮಾಡುತ್ತದೆ. ಕ್ರೋಧಕ್ಕೆ ಸಮನಾದ ಬೇರೆ ಶತ್ರುವಿಲ್ಲ ಕ್ರೋಧವು ವಿಕಾರ ಉತ್ಪನ್ನ ಮಾಡುವುದರಲ್ಲಿ ಮಧ್ಯದ ಮಿತ್ರನಾಗಿದೆ. ಈ ಕ್ರೋಧವು ಧೈರ್ಯವನ್ನು ನಷ್ಟ ಮಾಡಿಬಿಡುತ್ತದೆ. ಕ್ಷಣ ಮಾತ್ರದಲ್ಲಿ ಬುದ್ಧಿಯನ್ನು ಕೆಡಿಸುತ್ತದೆ, ಕ್ರೋಧದಿಂದ ಪ್ರೀತಿಯು ನಷ್ಟವಾಗುತ್ತದೆ. ಶರೀರವನ್ನು ಶೀಥಿಲಗೊಳಿಸುತ್ತದೆ, ಧರ್ಮವನ್ನು ಧ್ವಂಸ ಮಾಡಿ ಬಿಡುತ್ತದೆ. ಕ್ರೋಧವು ಸಂತೋಷ, ಶಾಂತಿ, ಕ್ಷಮಾ ಮುಂತಾದ ಗುಣಗಳನ್ನು ನಾಶಮಾಡುವಲ್ಲಿ ದಾವಾನಲದ ಸಮಾನವಾಗಿದೆ. ಕ್ರೋಧದೊಳಗೆ ಉತ್ಪನ್ನವಾಗುವ ಪದಾರ್ಥವು ಹೃದಯಾಘಾತ, ರಕ್ತದೊತ್ತಡಗಳಿಗೆ ಕಾರಣವಾಗುತ್ತದೆ. ಕ್ರೋಧದಿಂದ ಶಕ್ತಿ ಕ್ಷೀಣಿಸುತ್ತದೆ. ಇದರಿಂದ ಅನೇಕ ರೋಗಗಳಿಗೆ ಆಮಂತ್ರಣ ದೊರೆಯುತ್ತದೆ. ಕಲಹದ ಜನ್ಮ ಕ್ರೋಧದಿಂದಾಗುತ್ತದೆ, ಈ ಕ್ರೋಧದಿಂದಲೇ ವ್ಯಕ್ತಿಯು ಪಾಪದ ಆಚರಣೆ ಮಾಡುತ್ತಾನೆ. ಕ್ರೋಧ ಒಳಗಡೆ ಇರುವವರೆಗೆ ಎಲ್ಲ ಕ್ರಿಯೆಗಳು ಅಸ್ತವ್ಯಸ್ತವಾಗಿರುತ್ತವೆ. ಉತ್ಕೃಷ್ಟ ವ್ಯಕ್ತಿಯು ಕ್ರೋಧವು ಕ್ಷಣಮಾತ್ರ ವಿದ್ದರೆ, ಮಧ್ಯಮ ಕ್ರೋಧವು ಎರಡು ಘಳಿಗೆ(48 ನಿಮಿಷ) ಮತ್ತು ಜಘನ್ಯ ಕ್ರೋಧವು ಒಂದು ಹಗಲು–ರಾತ್ರಿಯದಾಗಿರುತ್ತದೆ. ಕ್ರೋಧವು ಬಹಳ ಘಾತಕವಾಗಿದೆ ಇದರ ಮಾಧ್ಯಮದಿಂದ ನಿಮ್ಮ ಆರೋಗ್ಯವು ಹಾಳಾಗುತ್ತದೆ, ಹಣವೂ ಹೋಗುತ್ತದೆ. ಧರ್ಮವೂ ಹೊರಟು ಹೋಗುತ್ತದೆ. ಕ್ರೋಧವನ್ನು ನಾವು ಗೆಲ್ಲಬೇಕಾಗಿದೆ, ಕ್ರೋಧದ ಮೇಲೆ ವಿಜಯ ಸಾಧಿಸಬೇಕಾಗಿದೆ.

ಸಹೋದರನೇ ಕ್ರೋಧವನ್ನು ಗೆಲ್ಲಲು ಎಲ್ಲಕ್ಕಿಂತ ಮೊದಲು ಎಲ್ಲಿಂದ ಕ್ರೋಧ ಬರುತ್ತಿದೆ. ಆ ದ್ರವ್ಯವನ್ನು ಪರಿವರ್ತಿಸಿ, ಎರಡನೆಯದಾಗಿ ಕ್ಷೇತ್ರವನ್ನು ಪರಿವರ್ತಿಸಬೇಕು, ಮೂರನೇದಾಗಿ ಕಾಲ ಪರಿವರ್ತನೆ ಮಾಡಬೇಕು, ನಾಲ್ಕನೇಯದಾಗಿ ಭಾವ ನಮ್ಮ ಪರಿಣಾಮಗಳನ್ನು

ಪರಿವರ್ತಿಸಿಕೊಳ್ಳಬೇಕು, ಇವುಗಳೊಂದಿಗೆ ಯಾವುದರ ಬಗ್ಗೆ ಆಸಕ್ತಿ ಇದೆ, ಪೂಜ್ಯತೆ ಇದೆ ಅವುಗಳಿಂದಲೂ ಕ್ರೋಧದ ಶಮನವಾಗುತ್ತದೆ ಹಾಗೂ ಯಾವುದರಿಂದ ನೀವು ಭಯ ಪಡುವಿರಿ ಅವುಗಳ ಸ್ಮರಣೆಯಿಂದ ಅಥವಾ ನೆನಪಿನಲ್ಲಿ ಹೋಗುವುದರಿಂದ ನೀವು ಭಯ ಪಡುವಿರಿ ಅವುಗಳ ಸ್ಮರಣೆಯಿಂದ ಅಥವಾ ನೆನಪಿನಲ್ಲಿ ಹೊಂದುವುದರಿಂದ ಅಂದರೆ ಪಾಪಗಳು, ಪೋಲಿಸರು, ಭಗವಂತ, ಗುರು, ಜಿನವಾಣಿಗಳಿಗೆ ಹೆದರುವಿರಾದರೆ ಅವುಗಳನ್ನು ಸ್ಮರಿಸಿಕೊಂಡರೆ ಅದೇ ಸಮಯದಲ್ಲಿ ಕ್ರೋಧದ ಶಮನವಾಗುತ್ತದೆ. ಕ್ರೋಧವನ್ನು ಗೆಲ್ಲಬೇಕೆಂದರೆ ನಿಮಗೆ ಕ್ರೋಧ ಬರುತ್ತಿರುವಾಗ ಆ ಸಮಯ ನಿಮ್ಮ ಕೈಯಲ್ಲಿ ಯವುದಾದರೂ ಆಯುಧಗಳಿದ್ದರೆ ಮೊದಲು ಅವುಗಳನ್ನು ದೂರಮಾಡಿ, ನಿಂತಿದ್ದರೆ ಕುಳಿತು ಬಿಡಿ, ಕುಳಿತಿದ್ದರೆ ಆರಾಮವಾಗಿ ಮಲಗಿ ಬಿಡಿ, ಕಣ್ಣು ಮುಚ್ಚಿಕೊಳ್ಳಿ, ನೀರಿನ ಬಟ್ಟಲನ್ನು ತುಂಬಿ ಕುಡಿಯಿರಿ, ಪಂಚ ನಮಸ್ಕಾರ ಮಂತ್ರ ಹೇಳಿಕೊಳ್ಳಿ, ಆಗ ಕ್ರೋಧ ನಿಮ್ಮನ್ನು ಆವರಿಸದೇ ಬಹು ಬೇಗನೆ ಓಡಿ ಹೋಗುತ್ತದೆ. ಯಾರು ಕ್ರೋಧವನ್ನು ಗೆದ್ದಿದ್ದಾರೋ ಅವರೇ ತಮ್ಮ ಕರ್ಮ ಶತ್ರುಗಳನ್ನು ಗೆದ್ದು ನಿರ್ವಾಣ ಪದವನ್ನು ಪಡೆಯಬಲ್ಲರು ಇಲ್ಲವಾದರೆ ಇಲ್ಲ.

**ಯಾರು ಕ್ರೋಧವನ್ನು ಕುಡಿದು ಬಿಡುವರೋ ಅವರು ಆಗುವರು ಮಹಾನ್।**
**ಯಾರು ಕ್ರೋಧವನ್ನು ಕುಡಿಯಲಾರರೋ ಅವರು ದುರ್ಬಲ ಇನ್ಸಾನ್.**

ಕ್ರೋಧದ ಕಾರಣದಿಂದ ಪಾಪ ಹೆಚ್ಚಾಗುತ್ತಾ ಸಾಗುತ್ತದೆ. ಅದು ಹುಳಿ ಪದಾರ್ಥಕ್ಕಿಂತ ಮುಂದೆ ಸಾಗಿ ಉಪ್ಪಿನಕಾಯಿಯಂತೆ ಆಗಿಬಿಡುತ್ತದೆ. ಆದ್ದರಿಂದ ಕ್ರೋಧವನ್ನು ನಷ್ಟಗೊಳಿಸುವ ಉಪಾಯ ಮಾಡಬೇಕು. ಪಾರ್ಶ್ವನಾಥ ಭಗವಂತರು, ಮಹಾವೀರ ಭಗವಂತರು ಇತ್ಯಾದಿ ಮಹಾನ್ ಆತ್ಮರನ್ನು ನೆನಪಿನಲ್ಲಿಡಿ, ಮುನಿಗಳ ಬಳಿ ಕ್ಷಮಾಧರ್ಮವಿರುತ್ತದೆ. ನಾವು ಇಟ್ಟಿಗೆಗೆ ಉತ್ತರವನ್ನು ಕಲ್ಲಿನಿಂದ ನೀಡಿ ಆ ಸಾಲವನ್ನು ಹೆಚ್ಚಿಸಿಕೊಳ್ಳುತ್ತೇವೆ.

ಒಬ್ಬ ದಂಪತಿಗಳು ಮನೆಯಲ್ಲಿ ಬಹಳ ಜಗಳವಾಡುತ್ತಿದ್ದರು. ಜಗಳದ ಕಾರಣ ಧರ್ಮ ಇತ್ಯಾದಿ ಏನನ್ನೂ ಮಾಡಲು ಆಗುತ್ತಿರಲಿಲ್ಲ. ಅದಕ್ಕೆ ಕಾರಣ ಆ ಮನೆಯಲ್ಲಿ ಪ್ರತಿರಾತ್ರಿ ಭೋಜನ ಮಾಡುತ್ತಿದ್ದು ತನಗೆ ವಿವಿಧ ಪ್ರಕಾರದ ಆಹಾರ ಪದಾರ್ಥಗಳನ್ನು ಬಿಸಿ-ಬಿಸಿಯಾಗಿ ಮಾಡಿಕೊಡುವಂತೆ ಬೇಡಿಕೆ ಇಡುತ್ತಿದ್ದ, ಆದರೆ ಪತ್ನಿ ರಾತ್ರಿ ನೀರನ್ನೂ ಸಹ ಕುಡಿಯುತ್ತಿರಲಿಲ್ಲ. ಪ್ರತಿದಿನ ಅವರ ಮನೆಯಲ್ಲಿ ವಿವಾದವಾಗುತ್ತಿದ್ದು ಜಗಳ ಹೆಚ್ಚಾಗುತ್ತಿದ್ದಿತು. ಇದರಿಂದಾಗಿ ಪತ್ನಿಗೆ ಬಹಳ ಹಿಂಸೆಯಾಗುತ್ತಿದ್ದಿತು. ಏನು ಮಾಡಲಿ ಎಂದು ಯೋಚಿಸುತ್ತಿದ್ದಳು. ಒಂದು ದಿನ ಬಸದಿಯಲ್ಲಿ ಒಬ್ಬ ಪಂಡಿತರು ಬಂದು ಶಾಸ್ತ್ರ ವಾಚನ ಮಾಡುತ್ತಿದ್ದರು. ಅವಳು ಸಹ ಬಸದಿಗೆ ಬಂದು ಶಾಸ್ತ್ರ ವಾಚನದ ನಂತರ ಪಂಡಿತರಿಗೆ ತನ್ನ ಸ್ಥಿತಿಯನ್ನು ತಿಳಿಸಿ ಉಪಾಯ ಕೇಳಿದಳು. ಅವಳ ಮಾತುಗಳನ್ನು ಕೇಳಿದ ಪಂಡಿತರು ಅವಳಿಗೊಂದು ಔಷಧಿ ಕೊಟ್ಟು, ಇದನ್ನು ರಾತ್ರಿ ಪತಿ ಬರುವ ಸ್ವಲ್ಪ ಮೊದಲು ಬಾಯಿಯಲ್ಲಿ ಹಾಕಿಕೊಂಡಿರಬೇಕು ಎಂದು ಸಲಹೆ ನೀಡಿದರು. ಆಗ ಅವಳು ನಾವು ರಾತ್ರಿಯಲ್ಲಿ ನೀರನ್ನು ಸಹ ತೆಗೆದುಕೊಳ್ಳುವುದಿಲ್ಲ ಔಷಧಿಯನ್ನು ಹೇಗೆ ತೆಗೆದುಕೊಳ್ಳಲಿ? ಎಂದು ಕೇಳಿದಳು. ಆಗ ಪಂಡಿತರು- ಶಾಂತಿ ಬಯಸುವುದಾದರೆ ಅದನ್ನು ತೆಗೆದುಕೊಳ್ಳಲೇಬೇಕು ನಂತರ ಪರಿಸ್ಥಿತಿ ಶಾಂತವಾದ ಮೇಲೆ ಬಾಯಿಂದ ಹೊರಗೆ ಹಾಕಬಹುದು-ಎಂದು ಹೇಳಿದರು. ಮನೆಯಲ್ಲಿ ಹೇಗಾದರೂ ಆಗಲಿ ಶಾಂತಿ ನೆಲಸಲಿ ಎಂದು ಒಪ್ಪಿಕೊಂಡಳು ರಾತ್ರಿ ಪತಿ ಮಹಾಶಯ ಬಂದು ಬಾಗಿಲು ತಟ್ಟಿದಾಗ, ಪತ್ನಿ

ಔಷಧಿ ಬಾಯಿಯಲ್ಲಿ ಹಾಕಿಕೊಂಡು ಬಾಗಿಲು ತೆಗೆದಳು ಪತಿ ಒಳ ಬರುತ್ತಲೇ ಪ್ರಶ್ನೆಗಳ ಮಳೆ ಸುರಿಸಿದ ಆದರೆ ಇಂದು ಪತ್ನಿ ಏನು ಹೇಳಲಿಲ್ಲ. ಪತಿ ಮಾತನಾಡಿ ಚಿಂತನೆಯಲ್ಲಿ ಮುಳುಗಿದ ಇವಳೇನು ಜಪ ಮಾಡುತ್ತಿಲ್ಲ. ಆದರೆ ಇಂದು ಮಾತನಾಡುತ್ತಿಲ್ಲವಲ್ಲ, ನನ್ನ ಮೇಲೆ ಏನಾದರೂ ಪ್ರಭಾವ ಉಂಟಾಗಲಿ ಎಂದು ಮಂತ್ರ ಹೇಳಿಕೊಳ್ಳುತ್ತಿರಬೇಕೆ? ಆತ ಸುಮ್ಮನಿರುವ ನಿರ್ಧಾರ ಮಾಡಿ ಮೌನವಾಗಿ ಭೋಜನ ಮಾಡಿ ಮುಗಿಸಿದ. ಹೀಗೆಯೇ ಪ್ರತಿದಿನ ಸಾಗಿತು. ಪತಿ ಬರುತ್ತಲೇ ಪತ್ನಿ ಏನೂ ಹೇಳುತ್ತಿರಲಿಲ್ಲ. ಕ್ರಮೇಣವಾಗಿ ಪತಿಯಲ್ಲಿ ಪರಿವರ್ತನೆ ಆಗತೊಡಗಿತು ಹಾಗೂ ಆತ ಸಂಜೆ ಮನೆಗೆ ಬಂದು ಭೋಜನ ಮಾಡತೊಡಗಿದ. ಸಂಜೆ 5 ಗಂಟೆಗೆ ಪತಿ ಮನೆಗೆ ಬಂದೊಡನೆ ಪತ್ನಿಯು ಬಿಸಿ-ಬಿಸಿ ಆಹಾರ ತಯಾರಿಸಿ ಬಡಿಸಿದಳು. ಇದಕ್ಕೆ ಮೊದಲು ಏನನ್ನು ಮಾತನಾಡದೆ ಆಹಾರ ಪದಾರ್ಥಗಳನ್ನು ತುಂಬಿ ಇಟ್ಟು ಬಿಡುತ್ತಿದ್ದಳು. ಸಾಯಂಕಾಲ ಬಿಸಿ ಬಿಸಿ ಭೋಜನ ದೊರಕಿದಾಗ ಆತ ಪ್ರತಿದಿನ ಸಂಜೆ ಬೇಗನೆ ಬರತೊಡಗಿದ. ಪಂಡಿತರನ್ನು ಭೇಟಿಯಾದ ಅವಳು-ಅವರು ನೀಡಿದ ಔಷಧಿಯ ಬಗ್ಗೆ ಹೇಳುತ್ತಾ-'ಇದರಿಂದ ಬಹಳ ಲಾಭವಾಯಿತು ಇನ್ನಷ್ಟು ಔಷಧಿ ಕೊಡಿ' ಎಂದಳು. ಪಂಡಿತರು-ಈಗ ಔಷಧಿಯ ಅವಶ್ಯಕತೆ ಇಲ್ಲ. ನಾನು ಬಾಟಲಿಯಲ್ಲಿ ನೀರು ತುಂಬಿ ಕೊಟ್ಟಿದ್ದೆ. ಅದನ್ನು ಕುಡಿದು ಬಾಯಲ್ಲಿಟ್ಟು ಕೊಂಡ ನೀವು ಮೌನವಾಗಿರುತ್ತಿದ್ದಿರಿ-ಮಾತನಾಡುತ್ತಿರಲಿಲ್ಲ-ಎಂದು ಹೇಳಿದರು. ಹೀಗೆ ಕ್ರೋಧ ಬಂದಾಗ ಮೌನಧಾರಣೆ ಮಾಡಬೇಕು. ಜಗಳವನ್ನು ದೂರ ಮಾಡುವ ಸರಳ ಉಪಾಯವೆಂದರೆ ಮೌನ.

ಯಾವುದೇ ವ್ಯಕ್ತಿ ಜಗಳ ಮಾಡಲೇಬೇಕು ಎನ್ನುವಂತಹ ಎಂತಹದೇ ಸ್ಥಿತಿಯಲ್ಲಿರಲಿ-ಆತನ ಮಾತುಗಳಿಗೆ ಉತ್ತರ ನೀಡದಿದ್ದರೆ ಎಲ್ಲವೂ ತನ್ನಷ್ಟಕ್ಕೆ ತಾನೇ ಶಾಂತವಾಗುತ್ತದೆ. ಆ ವ್ಯಕ್ತಿ ಏಕಾಂಗಿಯಾಗಿ ಎಲ್ಲಿಯವರೆಗೆ ಹೋರಾಡುತ್ತಾನೆ ಆದ್ದರಿಂದ ಕಲಹದ ಸ್ಥಿತಿಯಲ್ಲಿ ಮೌನಧಾರಣೆ ಮಾಡುವುದರಿಂದ ಮನಸ್ಸು ಶಾಂತವಾಗುತ್ತದೆ. ಮಾತನಾಡುವುದು ಚಿನ್ನವಾದರೆ ಮೌನವು ಚಿನ್ನದಿಂದ ಮಾಡಿದ ಆಭರಣವಾಗಿದೆ. ವಾದ ವಿವಾದದಿಂದ ಕಲಹವಾಗುತ್ತದೆ, ವೈಷಮ್ಯ ಹೆಚ್ಚಾಗುತ್ತದೆ. ಎಲ್ಲವನ್ನು ಸಹಿಸಿಕೊಂಡು ಮೌನ ಧಾರಣೆ ಮಾಡುವವರು ಕರ್ಮಗಳದನ್ನೇ ವಿಚಾರ ಮಾಡುತ್ತಾರೆ ಅವರು ನಿಶ್ಚಿತವಾಗಿಯೂ ಜೀವನ ನಡೆಸುತ್ತಾರೆ. ಮೌನವು ಅತಿರಥ-ಮಹಾರಥರಂತಹ ಶತ್ರುಗಳನ್ನು ಗೆಲ್ಲುತ್ತದೆ.

ನೀವೆಲ್ಲರೂ ಮಹಾತ್ಮಾ ಗಾಂಧಿಜೀಯ ಬಗ್ಗೆ ತಿಳಿದೇ ಇದ್ದಿರಾ. ಅವರ ಜೀವನದ ಮೇಲೆ ಜೈನಧರ್ಮದ ಆಳವಾದ ಪ್ರಭಾವವಿದ್ದಿತು. ಒಂದು ಸಾರಿ ಗಾಂಧೀಜಿಯವರ ಬಳಿ ಒಂದು ವಿಶೇಷ ಪತ್ರ ಬಂದಿತು. ಗಾಂಧೀಜಿ ಅದನ್ನು ನೋಡಿದರು ಹಾಗೂ ಓದಿದರು, ಅದನ್ನು ಓದಿ ಅವರಿಗೆ ಕ್ರೋಧ ಬಂದಿತು ಆದರೆ ಅವರು ಇದಕ್ಕೆ ಉತ್ತರವನ್ನು ಸಂಜೆಗೆ ಬರೆಯುವೆ ಎಂದು ಯೋಚಿಸಿ ಮತ್ತೆ ಸ್ವಲ್ಪ ಹೊತ್ತಿನಲ್ಲಿಯೇ ಸಂಜೆ ಯಾಕೆ ನಾಳೆ ಬರೆಯುವೆ ಎಂದು ಅಂದುಕೊಂಡರು ಮತ್ತೆ ಯೋಚಿಸಿ, ಈ ಪತ್ರ ಬರೆದವರಿಗೆ ಧರ್ಮ ಅಥವಾ ಒಳ್ಳೆಯ ಮಾತುಗಳ ಬಗ್ಗೆ ಅವರಿಗೇನು ಆಸಕ್ತಿ ಎಂದು ಭಾವಿಸಿ ಕಾಗದದಲ್ಲಿದ್ದ ಪಿನ್ನನ್ನು ತೆಗೆದು ಆ ಕಾಗದವನ್ನು ಕಸದ ಬುಟ್ಟಿಗೆ ಎಸೆದರು. ಪತ್ರ ಬರೆದ ವ್ಯಕ್ತಿ ಉತ್ತರ ಬಾರದಿದ್ದಾಗ ಸ್ವಯಂ ಗಾಂಧೀಜಿ ಬಳಿಗೆ ಬಂದು ಬೈಗಳು ಸೇರಿದಂತೆ ಅಪಶಬ್ಧಗಳನ್ನಾಡತೊಡಗಿದರು. ಗಾಂಧೀಜಿ ಸುಮ್ಮನೆ ಕೇಳುತ್ತಲಿದ್ದರು. ಕೊನೆಯಲ್ಲಿ ಆ ವ್ಯಕ್ತಿಯೇ ನಾಚಿಕೆಯಿಂದ ಅವರಿಗೆ ತಾವು ಮಹಾನ್ ವ್ಯಕ್ತಿಗಳು, ನಾವು ಅಪರಾಧ ಮಾಡಿದ್ದೇವೆ ಕ್ಷಮಿಸಬೇಕು ಎಂದು ಹೇಳಿದ ಇದಕ್ಕೂ ಗಾಂಧೀಜಿ ಏನೂ ಹೇಳಲಿಲ್ಲ. ಬೈಗುಳಕ್ಕೆ ಪ್ರತಿ ಬೈಗಳ ಎಂದಿಗೂ

ಸಲ್ಲದು. ಆದ್ದರಿಂದ ಬೈಗುಳಕ್ಕೆ ಉತ್ತರ ಶಾಂತಿಯೇ ಆಗಿದೆ ಅದನ್ನು ಸುಮ್ಮನೆ ಕೇಳಿಸಿಕೊಳ್ಳಬೇಕು, ಸಹಿಸಬೇಕು, ಅರಗಿಸಿಕೊಳ್ಳಬೇಕು, ಆ ಸಮಯದಲ್ಲಿ ಆತ್ಮನಿರೀಕ್ಷಣೆ, ಆತ್ಮ ಚಿಂತನೆ, ಅಂತರ ಮಂಥನ ಮಾಡಿಕೊಳ್ಳಬೇಕು ಗಾಂಧೀಜಿಯವರು ಸ್ವಲ್ಪ ಸಮಯದ ನಂತರ ಅವರಿಗೆ ಪಿನ್ನನ್ನು ಕೊಡುತ್ತಾ-ಯಾರಾದರೂ ಯಾರಿಗಾದರೂ ಒಂದು ವಸ್ತುವನ್ನು ಕೊಟ್ಟಾಗ ಅವರು ಅದನ್ನು ತೆಗೆದುಕೊಳ್ಳದಿದ್ದರೆ ಆ ವಸ್ತು ಅವರ ಬಳಿಯಲ್ಲಿಯೇ ಇರುತ್ತದಲ್ಲವೇ. ನಾನು ನಿಮ್ಮ ವಸ್ತುವನ್ನು ತೆಗೆದುಕೊಂಡೇ ಇಲ್ಲ ಈ ಪಿನ್ನು ನಿಮ್ಮದಾಗಿದೆ ಇದನ್ನು ತೆಗೆದುಕೊಂಡು ಹೋಗಿ ಎಂದು ಹೇಳಿದರು. ಇದನ್ನು ಕೇಳಿದ ಆ ವ್ಯಕ್ತಿ ಗಾಂಧೀಜಿಯವರ ಚರಣಗಳಲ್ಲಿ ತಲೆ ಬಾಗಿದನು.

ನಿಜವಾದ ಕ್ಷಮೆ ಬಲವಾನರದಾಗಿರುತ್ತದೆ, ದುರ್ಬಲದ ಕ್ಷಮೆ-ಕ್ಷಮೆಯಾಗಿರುತ್ತದೆ ಆದರೆ ಉತ್ತಮ ಕ್ಷಮೆ ಅಲ್ಲ. ಪ್ರತಿಕಾರ ಮಾಡುವ ಸಾಮರ್ಥ್ಯವಿದ್ದಾಗಲೂ ಪ್ರತಿಕೂಲ ಪರಿಸ್ಥಿತಿಗಳಲ್ಲಿಯೂ ಸಹ ತನ್ನ ಭಾವಗಳನ್ನು ಪರಿಣಾಮಗಳಲ್ಲಿ ಸಮತಾ/ಶಾಂತಿ ಉಳಿಸಿಕೊಳ್ಳುವುದು, ಸಹಿಸಿಕೊಳ್ಳುವುದು ನಿಜವಾದ ಕ್ಷಮೆಯಾಗಿದೆ.

**ಕ್ರೋಧ ಕುಡಿದು ಮುಗುಳ್ನಗುವವನು।**
**ಮಾನ ಅಪಮಾನಗಳಿಂದ ಆತ ಮೇಲೆ ಎಳುತ್ತಾನೆ॥**
**ಕ್ರೋಧ ಕುಡಿದು ಕ್ಷಮೆಯನ್ನು ಆಲಂಗಿಸುವವನು।**
**ಮನುಷ್ಯನಿಂದ ಮೇಲೆದ್ದು ದೇವರಾಗುತ್ತಾನೆ॥**

ನಿಮ್ಮ ಜೀವನದಲ್ಲಿ ಕ್ರೋಧದ ಮೇಲೆ ನಿಯಂತ್ರಣವಿರಬೇಕು. ಸಹನ ಶೀಲತೆ, ಸಮತೆ, ಧೈರ್ಯ ಮತ್ತು ಕ್ಷಮೆಯ ಶ್ರೇಷ್ಠಗುಣಗಳು ನಿಮ್ಮೊಳಗೆ ಬರಬೇಕು. ಪರಿಸ್ಥಿತಿಗಳ ಮೇಲೆ ವಿಚಾರ ಮಾಡಬೇಕು ಅವುಗಳನ್ನು ದೂರ ಸರಿಸಬೇಕು ಸ್ವಯಂ ಸಂಭಾಳಿಸಬೇಕು. ಉತ್ತರಿಸದಿರುವುದು ಸಹ ಅ ವಾತಾವರಣವನ್ನು ಶಾಂತ ಮಾಡುತ್ತದೆ. ಇದು ಆತ್ಮ ಶುದ್ಧಿಯ ರಸಾಯನವಾಗಿದೆ. ನಮ್ಮ ಜೀವನವನ್ನು ಪವಿತ್ರ. ಪಾವನಗೊಳಿಸುವ ಹಾಗೂ ಇದಕ್ಕಿಂತ ಉತ್ತಮ ರಸಾಯನ ಎಲ್ಲಿಯೂ ಸಿಗುವುದಿಲ್ಲ. ಕ್ಷಮೆಯ ಅಮೃತವನ್ನು ಪಾನ ಮಾಡಿರಿ. ನಿಮ್ಮ ಜೀವನದಲ್ಲಿ ಕ್ಷಮೆಯನ್ನು ಆತ್ಮ ಸಾಕ್ಷಾತ್ಕಾರ ಮಾಡಿಕೊಂಡರೆ ಉಳಿದ ದಿನಗಳ ಯಾತ್ರೆ ನಿರಾಪದ, ನಿಷ್ಕಂಟಕ ಹಾಗೂ ಆನಂದಮಯವಾಗಬಲ್ಲದು. ಕ್ಷಮೆಯ ಧರ್ಮಾಚರಣೆ ಎಲ್ಲರ ಜೀವನದಲ್ಲಿ ಬರಲಿ ಈ ಶುಭ ಭಾವನೆಗಳನ್ನು ಹಾರೈಸುತ್ತಾ ಧರ್ಮ ಭಾವನೆಯ ಶತಕದ ಪದ್ಯವನ್ನು ಹೇಳುತ್ತಾರೆ.

**ಹಾಲಿನ ರೂಪದ ಈ ಆತ್ಮಕ್ಕೆ, ಕ್ರೋಧ ರೂಪದ ಬೆಂಕಿ ಸಿಕ್ಕಾಗ।**
**ಸ್ವ-ಸ್ವಭಾವವ ಬಿಟ್ಟು ಕುದಿದು ಉಕ್ಕಿ; ಮಣ್ಣಿನಲಿ ಸೇರುವುದು॥**
**ಕ್ಷಮಾರೂಪದ ಜಲಬಿಂದು ಬಿದ್ದರೆ, ಸ್ವ ಸ್ವಭಾವದ ಕಡೆಗೆ ಜಾರುವುದು**
**ಕ್ರೋದಾನಲ ಸಂಪರ್ಕ ಸರಿದರೆ ವಿಭಾವದ ಕಡೆಗೆ ಜಾರಲ್ಲ॥3॥**
**'ಕ' ಮತ್ತು 'ಷ' ದ ಸಂಯೋಗವಾದಾಗ ಪೂರ್ಣ 'ಕ್ಷ' ಅಕ್ಷರವಾಗುವುದು।**
**ಇಲ್ಲಿ 'ಕ' ದ ಅರ್ಥ ಆತ್ಮ, "ಕ್ಷ" ದ ಅರ್ಥ ಉತ್ತಮತೆ॥**
**'ಮಾ' ದ ಅರ್ಥ ಜಿನವಾಣಿ ಮಾತೆ, ಎಲ್ಲರ ರಕ್ಷಣೆ ಮಾಡುವಳು।**
**ಇಂತಹ ಕ್ಷಮಾ ಮಾತೆ ಉತ್ತಮಾತ್ಮಾ ಕ್ರೋಧವ ಅಳಿಸಿ ರಕ್ಷಿಪಳು॥4॥**

# ಉತ್ತಮ ಮಾರ್ದವ ಧರ್ಮ
## ಮಾನದ ಗಲನ–ಸುಕೋಮಲ ಜೀವನ

### ಮಂಗಲಾಚರಣೆ

**ಮೋಕ್ಷ ಮಾರ್ಗಸ್ಯ ನೇತಾರಂ, ಭೇತ್ತಾರಂ ಕರ್ಮಭೂಭೃತಾಮ್।**
**ಜ್ಞಾತಾರಂ ವಿಶ್ವತತ್ವಾನಾಮ್, ವಂದೇ ತದ್ ಗುಣಲಬ್ಧಯೇ॥**

ದಶಲಕ್ಷಣ ಪರ್ವದ ದಿನಗಳಲ್ಲಿ ನಾವು ಕ್ರಮವಾಗಿ ಒಂದು ದಿನ ನಾವೂ ಸಹ ಪ್ರಭುವಿನ ಹಾಗೇ ಅನಂತಗುಣಗಳಿಂದ ಕೂಡಿದವರಾಗಿರುವಂತೆ ಪ್ರಯತ್ನಿಸೋಣ, ಇದಕ್ಕಾಗಿ ಇಂದು ಉತ್ತಮ ಮಾರ್ದವ ಧರ್ಮದ ಮೇಲೆ ಚರ್ಚೆ ಮಾಡುತ್ತಿದ್ದೇವೆ.ಮನುಷ್ಯರ ವಿಚಾರ ಮತ್ತು ವ್ಯವಹಾರದಲ್ಲಿರುವ ಸಹಜ ನಮ್ರತೆ ಮತ್ತು ಕೋಮಲತೆಯನ್ನೇ ಆಚಾರ್ಯರು ಮಾರ್ದವ ಧರ್ಮದ ಹೆಸರು ನೀಡಿದ್ದಾರೆ 'ಮೃದೋರ್ಭಾವೋ ಮಾರ್ದವಮ್' ಇದು ಸಂಕ್ಷಿಪ್ತವಾಗಿ ಮಾರ್ದವದ ಪರಿಭಾಷೆಯಾಗಿದೆ. ನೆನ್ನೆ ಹೇಳಿದಂತೆ ಕ್ರೋಧ ಸ್ವಾಭಾವಃ ಕ್ಷಮಾ ಅದೇ ಪ್ರಕಾರ ಮೃದುತ್ವ ಕೋಮಲತೆಯ ಭಾವವೇ ಮಾರ್ದವ ಧರ್ಮವಿದೆ. ಮಾರ್ದವದ ಅರ್ಥ ಮೃದುತ್ವ ಹಾಗೂ ಉತ್ತಮದ ಅರ್ಥ ಶ್ರೇಷ್ಠ ಅಂದರೆ ಎಲ್ಲಿ ಶ್ರೇಷ್ಠ ಮೃದುತ್ವವಿದೆ ಅದೇ ಮಾರ್ದವ ಧರ್ಮ. ಆಚಾರ್ಯ ಪೂಜ್ಯಪಾದ ಸ್ವಾಮಿಗಳು ತಮ್ಮ ಸರ್ವಾರ್ಥಸಿದ್ಧಿ ಹೆಸರಿನ ಗ್ರಂಥದ ಒಂಬತ್ತನೇ ಅಧ್ಯಾಯದ 6ನೇ ಸೂತ್ರದಲ್ಲಿ ಹೀಗೆ ಹೇಳಿದ್ದಾರೆ–

**ಜಾತ್ಯಾದಿ ಮದಾವೇಶಾದಭಿಮಾನಾ ಭಾವೋ ಮಾರ್ದವಂ ಮಾನ ನಿರ್ಹರಣಮ್।**

ಅರ್ಥಾತ್ ಜಾತಿ ಮುಂತಾದ ಮದಗಳ ಆವೇಶದ ವಶವಾಗುವ ಅಭಿಮಾನದ ಅಭಾವ ಮಾರ್ದವವಿದೆ. ತಳಹದಿಯ ಆಧಾರ ಶಿಲೆಯ ಅಭಾವದಲ್ಲಿ ಭವನ ನಿರ್ಮಾಣವಾಗುವುದು, ಬೇರಿನ ಅಭಾವದಲ್ಲಿ ವೃಕ್ಷದ ಸ್ಥಿರತೆ ಆಗುವುದು, ಮೇಘದ ಅಭಾವದಲ್ಲಿ ಮಳೆಯಾಗುವುದು ಅಸಂಭವವಾಗಿರುವಂತೆ ದಯೆಯ ಅಭಾವದಲ್ಲಿ ಮಾರ್ದವ ಧರ್ಮ ಹಾಗೂ ಸಮ್ಯಗ್ ದರ್ಶನದ ಉತ್ಪತ್ತಿಯಾಗುವುದು ಅಸಂಭವವಿದೆ. ಮೋಕ್ಷದ ಪ್ರಾಪ್ತಿಯು ವಿನಮ್ರತೆ ಮತ್ತು ಮೃದುತ್ವದಲ್ಲಿದೆ. ಹಾಗಾದರೆ ನಮ್ಮ ಪರಿಣಾಮಗಳು ಕೋಮಲ ಮತ್ತು ಮೃದುವಾಗಿರಬೇಕು. ಇದೇ ಮಾರ್ದವವಾಗಿದೆ. ಮಾರ್ದವ ಧರ್ಮದ ಅರ್ಥವೆಂದರೆ ಮಾನ ಕಷಾಯದ ಅಭಾವ, ವಿನಮ್ರತೆಯ ಸದ್ಭಾವ. ಮೃದುತ್ವವು ಹೇಗೆ ಬರುತ್ತದೆ ಹಾಗೂ ಕಠೋರತೆ ಹೇಗೆ ಬರುತ್ತದೆ ಈ ಎರಡೇ ಮಾತುಗಳನ್ನು ಇಂದು ತಿಳಿಯ ಬೇಕಿದೆ.

ಮೃದುತ್ವದ ಪ್ರಬಲ ಶತ್ರು ಮಾನ(ಕಷಾಯ) ಇದನ್ನು ಅಹಂಕಾರ, ಸೊಕ್ಕು, ಮದ ಅಥವಾ ಅಭಿಮಾನವೆಂದೂ ಹೇಳುತ್ತಾರೆ. ನಮ್ಮ ಹೃದಯದಲ್ಲಿರುವ ಕಠೋರತೆಯ ಕಾರಣ ಮಾನ ಕಷಾಯವಿದೆ. ಮಾನ ಕಷಾಯದಿಂದ ಗರ್ವ ಉತ್ಪನ್ನವಾಗುತ್ತದೆ. ಅದನ್ನೇ ಮದವೆನ್ನುತ್ತಾರೆ–

ಅದರಿಂದಲೇ ನಮ್ಮ ಹೃದಯ ಕಠೋರವಾಗುತ್ತದೆ. ನಾವು ಬಾಗಲು ಬಯಸುವುದಿಲ್ಲ. ವಿನಯ ಶೀಲತೆಯನ್ನು ಬಿಟ್ಟು ಬಿಡುತ್ತೇವೆ. ನಾವು ಯಾವುದನ್ನೂ ಏನೂ ತಿಳಿಯುವುದಿಲ್ಲ. ನಮ್ಮಷ್ಟಕ್ಕೆ ನಮ್ಮನ್ನು ಎಲ್ಲವನ್ನು ತಿಳಿಯುತ್ತದೆ, ಸಾಕು ಇದೇ ಮಾನವಾಗಿದೆ ಈ ಮಾನ ಕಷಾಯವೇ ಮಾರ್ದವ ಧರ್ಮದಿಂದ ವಿಚಲಿತಗೊಳಿಸಿ ಬಿಡುತ್ತದೆ. ಮಾರ್ದವಧರ್ಮ ದೂರವಿರುವಂತಹ ವಸ್ತುವೇನಲ್ಲ, ಇದು ಆತ್ಮನ ಗುಣವಾಗಿದೆ. ಪ್ರತಿಯೊಂದು ಆತ್ಮನ ಬಳಿ ಇದು ದೊರೆಯುತ್ತದೆ. ಆದರೆ ಭವ್ಯರು ಇದನ್ನು ಶಕ್ತಿ ರೂಪದಲ್ಲಿ ತಮ್ಮೊಳಗೆ ಇಟ್ಟು ಕೊಂಡಿರುತ್ತಾರೆ. ಬೀಜದೊಳಗೆ ವೃಕ್ಷದ ಶಕ್ತಿ ಅಡಗಿರುವಂತೆ ನಮ್ಮೊಳಗೆ ಉತ್ತಮ ಮಾರ್ದವವನ್ನು ಪಡೆಯುವ ಶಕ್ತಿ ಅಡಗಿದೆ. ನಾವು ಸ್ವಲ್ಪ ಪ್ರಯತ್ನಿಸಿದರೆ. ನಾವು ಬಹಳ ದೂರ ಹೋಗಬೇಕಾಗಿಲ್ಲ. ನಮ್ಮ ಸಮೀಪವೇ ಆ ವಸ್ತುವಿದೆ. ಇಂದು ನಾವು ಈ ವಿಷಯವನ್ನು ತಿಳಿಯೋಣ. ಉತ್ತಮ ಮಾರ್ದವ ಧರ್ಮ ಹೇಗೆ ಪ್ರಕಟವಾಗುತ್ತದೆ ಎಂಬ ವಿಷಯದಲ್ಲಿ ಆಚಾರ್ಯ ಕುಂದ ಕುಂದ ಸ್ವಾಮಿಗಳು ಬಾರಸಾಣುವೆಕ್ಖಾ ಗ್ರಂಥದಲ್ಲಿ ಧರ್ಮಾನುಪ್ರೇಕ್ಷಾ ದೊಳಗೆ ಹೀಗೆ ಹೇಳಿದ್ದಾರೆ–

**ಕುಲ ರೂಪಜಾದಿ ಬುದ್ಧಿಸು, ತವ ಸುದ ಸೀಲೇಸು ಗಾರವಂ ಕಿಂಚಿ।**
**ಜೋ–ಣವಿ ಕುವ್ವದಿ ಸಮಣೋ, ಮದ್ಧವ ಧಮ್ಮಂ ಹವೇ ತಸ್ಸ॥72॥**

ಕುಲ, ರೂಪ, ಜಾತಿ, ಬುದ್ಧಿ, ತಪ, ಶ್ರುತ ಮತ್ತು ಶೀಲ ಮುಂತಾದ ವಿಷಯಗಳಲ್ಲಿ ಸ್ವಲ್ಪವಾದರೂ ಗರ್ವ ಪಡದಿರುವವರು–ಇಂತಹ ಶ್ರಮಣರ ಬಳಿ ಮಾರ್ದವ ಧರ್ಮ ಪ್ರಕಟವಾಗುತ್ತಿದೆ. ಅಥವಾ ಅವರು ಮಾರ್ದವ ಧರ್ಮದ ಧಾರಿಗಳಾಗಿರುತ್ತಾರೆ. ಉತ್ಕಷ್ಟ ಜ್ಞಾನಿ ಮತ್ತು ಉತ್ಕೃಷ್ಟ ತಪಸ್ವಿಯಾಗಿದ್ದರೂ ಸಹ ಮದ ಪಡೆದಿರುವವರು ಮಾರ್ದವ ರೂಪಿ ರತ್ನದ ಧಾರಿಯಾಗಿದ್ದಾರೆ. ರತ್ನಕರಂಡಕ ಶ್ರಾವಕಚಾರದಲ್ಲಿ ಆಚಾರ್ಯ ಸಮಂತಭದ್ರ ಸ್ವಾಮಿಗಳು ಹೀಗೆ ಹೇಳಿದ್ದಾರೆ–

**ಜ್ಞಾನಂ, ಪೂಜಾಂ, ಕುಲಂ, ಜಾತಿಂ, ಬಲಮೃದ್ಧಿಂ ತಪೋ ವಪುಃ ।**
**ಅಷ್ಟಾವಾಶ್ರಿತ್ಯ ಮಾನಿತ್ವಂ, ಸ್ಮಯಮಾಹುರ್ಗತಸ್ಮಯಾಃ ॥25॥**

ಇಲ್ಲಿಯೂ ಸಹ ಇದೇ ಮಾತಿದೆ ಜ್ಞಾನ, ಪೂಜೆ, ಕುಲ, ಜಾತಿ, ಬಲ, ಋದ್ಧಿ, ತಪ, ಶರೀರ(ರೂಪ) ಈ ಎಂಟು ಸಂಗತಿಗಳನ್ನು ಆಶ್ರಯಿಸಿ ಗರ್ವ ಪಡುವುದನ್ನು ನಮ್ಮ ಪ್ರಭುವು ಮದವೆಂದು ಹೇಳಿದ್ದಾರೆ. ಮದದಿಂದಲೇ ಮಾನಕಷಾಯ ಪುಷ್ಟವಾಗುತ್ತದೆ ಅಲ್ಲಿ ಮಾರ್ದವ ಧರ್ಮ ಇರುವುದಿಲ್ಲ. ನಾವು ಯಾವುದಾದರೂ ದೊಡ್ಡ ವಸ್ತುವನ್ನು ನೋಡಿದಾಗ ನಮ್ಮ ಮಾನ ಖಂಡಿತವಾಗುತ್ತದೆ. ವ್ಯಕ್ತಿ ತನ್ನಷ್ಟಕ್ಕೆ ತಾನೇ ಎಲ್ಲರಿಗಿಂತ ದೊಡ್ಡದೆಂದು ಭಾವಿಸುತ್ತಾನೆ ಹಾಗೂ ಅನ್ಯರನ್ನು ಕೀಳಾಗಿ ತೋರಿಸಲು ಪ್ರಯತ್ನಿಸುತ್ತಾನೆ. ಅನ್ಯರ ಅಸ್ತಿತ್ವವನ್ನು ಗುರುತಿಸುವುದೇ ಇಲ್ಲ. ನಮಗಿಂತ ಹೆಚ್ಚು ಶ್ರೇಷ್ಠ ವಸ್ತುವನ್ನು ನಾವು ನೋಡಿದಾಗ ನಮ್ಮ ಮಾನ ಖಂಡಿತವಾಗುತ್ತದೆ.

ಮೊದಲು ಮಂದಿರಗಳ ಬಾಗಿಲು ಬಹಳ ಚಿಕ್ಕವಿರುತ್ತಿದ್ದ ವಿಷಯ ನಿಮಗೆ ತಿಳಿದಿರಬೇಕು, ಅದರಿಂದಾಗಿ ಭಕ್ತರು ತಲೆ ಬಾಗಿ ವಿನಯ ಪೂರ್ವಕವಾಗಿ ಪ್ರಭುವಿನ ಚರಣಕ್ಕೆ ನಮಸ್ಕರಿಸುತ್ತಿದ್ದರು ಅಲ್ಲಿ ಹೋಗಿ ವಿನೀತರಾಗಿ ಪ್ರಭುವಿಗೆ ಭಕ್ತಿ ತೋರಬೇಕಾಗಿದ್ದಿತು ಹಾಗೂ ಪ್ರಭುವಿನ ಗುಣಗಳನ್ನು ಪಡೆಯಬೇಕಾಗಿದ್ದಿತು. ಆಚಾರ್ಯ ಕುಂದ ಕುಂದ ಸ್ವಾಮಿಗಳು ಮೂಲಾಚಾರ ಮುಂತಾದವುಗಳಲ್ಲಿ

ಹಾಗು ಶಿವಕೋಟಿ ಮಹಾರಾಜರು ಭಗವತೀ ಆರಾಧನೆಯಲ್ಲಿ ವಿನಯವು ಮೋಕ್ಷದ ದ್ವಾರವಾಗಿದೆ, ವಿನಯದಿಂದಲೇ ಸಂಯಮವಿದೆ, ವಿನಯದಿಂದಲೇ ತಪವಿದೆ, ವಿನಯದಿಂದಲೇ ಜ್ಞಾನವಿದೆ. ವಿನಯವಿಲ್ಲದೇ ಜ್ಞಾನವೂ ಇಲ್ಲ ಸಂಯಮವು ಇಲ್ಲ, ತಪವೂ ಇಲ್ಲ ಹಾಗೂ ವಿನಯದಿಂದಲೇ ಆಚಾರ್ಯ ಮುಂತಾದ ಸರ್ವ ಸಂಘ ಹಾಗೂ ಪಂಚಪರಮೇಷ್ಠಿಗಳ ಆರಾಧನೆ ಸಂಭವವಿದೆ, ಗರ್ವದ ಮಾಧ್ಯಮದಿಂದ ಎಂದಿಗೂ ಭಕ್ತಿ ಪೂಜೆ, ಸ್ತುತಿ, ಅರ್ಚನೆ, ಉಪಾಸನೆ ಇತ್ಯಾದಿ ಕಾರ್ಯಗಳು ಆಗಲಾರವು" ಎಂದು ಹೇಳಿದ್ದಾರೆ. ನಮ್ಮಲ್ಲಿ ವಿನಯವೇ ಇರದಿದ್ದರೆ ಮಾರ್ದವ ಧರ್ಮದ ಪ್ರಾಪ್ತಿ ಸಾಧ್ಯವಿಲ್ಲ. ಪ್ರಭುವಿನ ಬಳಿ ಸಾಗಲು ವಿನಯದೊಂದಿಗೆ ಸಾಗುತ್ತಿದ್ದರು. ಆದರೆ ಇಂದು ಎಲ್ಲವು ವ್ಯತ್ಯಾಸವಾಗಿವೆ. ಬಾಗಿಲುಗಳು ಅತಿ ದೊಡ್ಡದಾಗಿ ರಚನೆಯಾಗಿವೆ, ಪಾಶ್ಚಿಮಾತ್ಯ ಪರಂಪರೆಯ ವಸ್ತ್ರಗಳ ಪ್ರಭಾವ ಹೆಚ್ಚಾಗಿ ತೋರುತ್ತಿದೆ, ಬಗ್ಗಲು ಹಿಂಸೆಯಾಗುವಷ್ಟು ಬಿಗಿ ಬಟ್ಟೆಗಳು ಬಂದಿರುವುದರಿಂದ ನಿಂತೇ ನಮಸ್ಕರಿಸುತ್ತಾರೆ. ನಿಂತು ಕೊಂಡೆ ತಮ್ಮ ಕೆಲಸ ಸಾಧಿಸುತ್ತಾರೆ, ಕೈ ಜೋಡಿಸಿ ಮುಗಿದರೆ ಮುಗಿಯಿತು. ನಮ್ಮ ವಿನಯ ಶೀಲತೆ ನಷ್ಟವಾಗುತ್ತಾ ಸಾಗಿದೆ.

ಇಂದು ಭೌತಿಕತೆಯ ಮೆರಗಿನಲ್ಲಿ ವಿಷಯ ಭೋಗದ ಸಾಮಾಗ್ರಿಗಳು ಹೆಚ್ಚುತ್ತಾ ಸಾಗಿವೆ. ಅಷ್ಟೇ ವೇಗದಲ್ಲಿ ನಮ್ಮ ಧರ್ಮ ನಮ್ಮಿಂದ ದೂರ ಸರಿಯುತ್ತಿದೆ. ವ್ಯಕ್ತಿ ಬಾಗುವುದನ್ನು ಕಲಿಯಲಿ ಎಂದು ಚಿಕ್ಕ ಚಿಕ್ಕ ಬಾಗಿಲುಗಳನ್ನು ರಚಿಸುವುದರ ಹಿಂದೆ ಬಹಳ ದೊಡ್ಡ ಕಾರಣವಿದ್ದಿತು. ಶಿಖರಗಳನ್ನು ಅತಿ ಹೆಚ್ಚು ಎತ್ತರಗಳಿಂದ ರೂಪಿಸುತ್ತಿದ್ದರು ಎತ್ತರದ ಗಗನ ಚುಂಬಿ ಗೋಪುರ ಶಿಖರಗಳಿಂದ ಕೂಡಿದ ಜಿನಾಲಯಗಳನ್ನು ನೋಡಿದಾಗ ನಮ್ಮ ಮಾನ ಖಂಡಿತವಾಗುತ್ತಿದ್ದಿತು. ನಮಗಿಂತ ಎತ್ತರ ಯಾವುದು ಇಲ್ಲಾ ಎನ್ನುವವರು ಸ್ವಲ್ಪ ಜಿನಾಲಯದ ಶಿಖರಗಳು ಎಷ್ಟು ಎತ್ತರವಾಗಿವೆ ಎಂದು ನೋಡಬೇಕು. ಗುರು ಮಹಾರಾಜರು ಹೀಗೆ ಹೇಳುತ್ತಿದ್ದರು–ನೀವು ಟೊಪ್ಪಿಗೆ ಧರಿಸಿ ಮೇಲೆ ಶಿಖರವನ್ನು ನೋಡಿದರೆ ಅನೇಕ ಟೊಪ್ಪಿಗೆಗಳು ಬೀಳುತ್ತಿದ್ದವು ಇಲ್ಲವೇ ನೋಡುವವರೇ ಬೀಳುವಷ್ಟು ಎತ್ತರದ ಗೋಪುರಗಳಿದ್ದವು. ಆದರೆ ಇಂದು ಜಿನಾಲಯಗಳು ಸಾಮಾನ್ಯ ಕಟ್ಟಡಗಳಂತೆ ನಿರ್ಮಿತವಾಗುತ್ತಲಿವೆ. ನೀವು ದೊಡ್ಡ ದೊಡ್ಡ ನಗರಗಳಲ್ಲಿ ಜಿನಾಲಯಗಳನ್ನು ನೋಡಿದರೆ ಅವುಗಳ ಗೋಪುರ ಕಾಣುವುದೇ ದುಸ್ತರವಾಗಿದೆ. ಎಷ್ಟೊಂದು ಎತ್ತರದ ಕಟ್ಟಡಗಳನ್ನು ಕಟ್ಟುತ್ತಾರೆಂದರೆ ಜಿನಾಲಯಗಳ ಗೋಪುರಗಳೇ ಕಾಣುವುದಿಲ್ಲ. ಜಿನಾಲಯದ ಮೇಲೆ ಹೋದಾಗ ಮಾತ್ರ ಶಿಖರ ಕಾಣಬಹುದು. ಇಲ್ಲವಾದಲ್ಲಿ ಕಾಣುವುದಿಲ್ಲ. ಅನೇಕ ಜಿನಾಲಯಗಳನ್ನು ಅತ್ಯಂತ ಪ್ರಶಸ್ತರೂಪದಲ್ಲಿ ಇಂದಿಗೂ ನಿರ್ಮಿಸಿದ್ದಾರೆ. ಮೊದಲು ಮಂದಿರದ ವ್ಯವಸ್ಥೆಗಳು ಬಹಳ ಚೆನ್ನಾಗಿದ್ದವು, ಅವುಗಳ ರಚನೆಯು ಬಹಳ ಮಂಗಲಮಯವಾಗಿದ್ದಿತು. ಇಂದು ಎಲ್ಲ ದಿಕ್ಕಿನಿಂದಲೂ ಪರಿವರ್ತನೆಯಾಗಿದೆ. ಅವು ಮೊದಲಿನಂತಿಲ್ಲ ಅವು ಈಗ ದಕ್ಷಿಣ ಭಾರತದಲ್ಲಿ ನೋಡಲು ಸಿಗುತ್ತವೆ.

ದಕ್ಷಿಣ ಭಾರತದಲ್ಲಿ ಮಂದಿರಗಳ ರಚನೆ ಬಹಳ ವಿಶೇಷವಾಗಿದೆ. ನೆಲಕ್ಕಿಂತ 5 ರಿಂದ 7 ಅಡಿ ಎತ್ತರದಲ್ಲಿ ಮಂದಿರ ನಿರ್ಮಿಸಿದ್ದಾರೆ. ಮೆಟ್ಟಲುಗಳು ಇರುತ್ತವೆ ಇದರ ನಂತರ ಸಂಗೀತ ಮಂಟಪದಂತಹ ಒಂದು ಸ್ಥಾನವಿದ್ದು ಅಲ್ಲಿ ಒಂದು ಬಾಗಿಲು ಇರುತ್ತದೆ. ಬಾಗಿಲಿನ ಎರಡೂ ಬದಿಯಲ್ಲಿ ಸಂಗೀತ ಬಾರಿಸುವವರು ಕೂಡುವಷ್ಟು ಸ್ಥಳವಿರುತ್ತದೆ. ಕಾಂಪೌಂಡ ಇದ್ದು ಸ್ವಲ್ಪ ಸ್ಥಳವು ಇರುತ್ತದೆ. ಮಾನಸ್ತಂಭ ಮತ್ತು ಬಾಗಿಲಿನ ಮಧ್ಯ 10–12 ಅಡಿಗಳ ಅಂತರವಿರುತ್ತದೆ. ಇಲ್ಲಿ ಅಕ್ಕ ಪಕ್ಕಗಳಲ್ಲಿ ಕೊಠಡಿಗಳನ್ನು ರಚಿಸಿ ಪೂಜೆಯ ಸಾಮಾಗ್ರಿಗಳನ್ನು ಇಟ್ಟಿರುತ್ತಾರೆ.

ಪೂಜೆಯ ಮಂಟಪವೂ ಇದ್ದು ಮತ್ತೆ ಅಂತರಾಳವಿದ್ದು ಅದರ ನಂತರ ಗರ್ಭಗೃಹವಿರುತ್ತದೆ. ಗರ್ಭಗೃಹದಲ್ಲಿ ಒಂದೇ ಮೂಲ ನಾಯಕನ ಪ್ರತಿಮೆ ಇರುತ್ತದೆ. ಅದು ಸಮವಸರಣದಲ್ಲಿರುವ ಒಂದೇ ಪ್ರತಿಮೆಯಂತಿರುತ್ತದೆ. ಅಶುದ್ದ ವಸ್ತ್ರಗಳಿಂದ ಗರ್ಭಗೃಹದಲ್ಲಿ ಯಾರೂ ಹೋಗುವಂತಿಲ್ಲ. ಕೇವಲ ಶುದ್ಧ ವಸ್ತ್ರಗಳಿಂದಲೇ ಒಳಗೆ ಹೋಗುತ್ತಾರೆ. ಮಹಿಳೆಯರಿಗೆ ಗರ್ಭಗೃಹದಲ್ಲಿ ಪ್ರವೇಶವೇ ಇಲ್ಲ. ಯಾಕೆಂದರೆ ಯಾವಾಗ ಯಾರಿಗೆ ಎಂತಹ ಸ್ಥಿತಿ ಬರುವುದೋ, ಆಗ ಅಲ್ಲಿ ಅತಿಶಯ ಇರುವುದಿಲ್ಲ. ಅತಿಶಯ ನಮ್ಮ ಭಾವನೆಗಳಿಂದ ಆಗುತ್ತಿದೆ. ನಾವೆಷ್ಟು ಶುದ್ಧತೆ ಹೊಂದಿರುತ್ತೇವೋ ಅದರ ಪ್ರಭಾವ ಮಂದಿರದ ಮೇಲೆ ಅವಶ್ಯವಾಗಿ ಆಗುತ್ತದೆ. ಮಂದಿರದಲ್ಲಿ ಗರ್ಭಗೃಹದ ಹೊರಗೆ ಎರಡು ಕಡೆಗೆ ಇತರ ವೇದಿಕೆಗಳು ಇರುತ್ತವೆ ಅಲ್ಲಿ ಲೋಹ ಮುಂತಾದವುಗಳ ಪ್ರತಿಮೆಗಳು. ಪ್ರತಿಷ್ಠಿತವಾಗಿರುತ್ತವೆ. ಇಲ್ಲಿಯ ಮಂದಿರಗಳಲ್ಲಿ ಪರಿಕ್ರಮಕ್ಕಾಗಿ ಮೂರು ಸ್ಥಾನಗಳಿರುತ್ತವೆ. ಮೊದಲನೆಯದು ಮಾನಸ್ತಂಭದಿಂದ ಮಂದಿರದ ಹೊರ ಭಾಗದಲ್ಲಿ ಮೂರು ಪ್ರದಕ್ಷಿಣೆ ಮಾಡುತ್ತಾರೆ ಮತ್ತೆ ಮಂದಿರದಲ್ಲಿ ಪ್ರವೇಶ ಮಾಡಿದ ಮೇಲೆ ಅಲ್ಲಿ ಮೇಲಿನಿಂದ ಪ್ರದಕ್ಷಿಣೆ ಹಾಕುತ್ತಾರೆ ಹಾಗೂ ಒಳಗೆ ಮೂಲ ನಾಯಕನಿಗೂ ಸಹ ಪೂಜೆ ಅಭಿಷೇಕ ಮಾಡುವವರು ಪ್ರದಕ್ಷಿಣೆ ಹಾಕುತ್ತಾರೆ.

ನಿಮಗೆ ಸಿದ್ಧಾಂತದ ಮಾತುಗಳನ್ನು ಹೇಳುವುದಾದರೆ ಮಂದಿರದೊಂದಿಗೆ ನೇರವಾಗಿ ಮನೆಗಳ ಸಂಬಂಧವಿರುವುದಿಲ್ಲ, ಅರ್ಥಾತ್ ಮಂದಿರ ಮತ್ತು ಮನೆಯ ಗೋಡೆ ಒಂದೇ ಇರುವುದಿಲ್ಲ. ಮಂದಿರಕ್ಕೆ ಹಚ್ಚಿ ಮನೆ ಮಾಡುವುದಿಲ್ಲ. ಎಷ್ಟರ ಮಟ್ಟಿಗೆ ಎಂದರೆ ಮಂದಿರ ಶಿಖರದ ನೆರಳು ಎಲ್ಲಿಯವರೆಗೆ ಬೀಳುವುದೋ ಅಲ್ಲಿಯವರೆಗೆ ಮನೆಗಳು ಇರುವುದಿಲ್ಲ ಇಂತಹ ವ್ಯವಸ್ಥೆ ಇದೆ ಮಂದಿರದ ಎದುರಿಗೆ ಸಹ ಮನೆ ನಿರ್ಮಿಸುವುದಿಲ್ಲ. ಮಂದಿರದ ಎದುರಿಗೆ ರಸ್ತೆ ಬರುವಂತದು ಸ್ಥಾನ, ಬಯಲಿರುವ ಸ್ಥಾನಗಳಲ್ಲಿಯೇ ಮಂದಿರ ನಿರ್ಮಿಸಿರುತ್ತಾರೆ. ಇವೆಲ್ಲವುಗಳನ್ನು ಅವರು ಸ್ವೀಕರಿಸಿರುವುದು ಬಹಳ ಒಳ್ಳೆಯದು. ಭಗವಂತ ಅಥವಾ ನವದೇವತೆಗಳ ಎದುರಿಗೆ ಹಿಂಸೆ ಮುಂತಾದ ಪಾಪಗಳನ್ನು ಮಾಡಿದರೆ ಎಷ್ಟೊಂದು ಪಾಪ ಬಂಧವಾಗುತ್ತದೆ. ನಮ್ಮ ಜೀವನ ಮತ್ತು ಮನೆ ಹೇಗೆ ಆಗುವುದೋ ಗೊತ್ತಿಲ್ಲ. ಭಗವಂತ ಅಥವಾ ನವದೇವತೆಗಳ ಸಮ್ಮುಖದಲ್ಲಿ ಮರ್ಯಾದೆ–ಮಿತಿಯನ್ನು ಹೊಂದಿರಬೇಕು ಮಂದಿರಕ್ಕೆ ಹತ್ತಿ ಮನೆ ಕಟ್ಟಬಾರದು. ಸ್ಥಳ ಬಿಡಬೇಕು ಹೀಗೆ ಸರಕಾರದ ಕಾನೂನು ಸಹ ಇದೆ ಎಂದು ನಮಗೆ ಜನ ಹೇಳುತ್ತಾರೆ. ಕಾನೂನು ಹೇಗಿದೆ ನಮಗೆ ಹೆಚ್ಚು ಗೊತ್ತಿಲ್ಲ, ಹೆಚ್ಚು ಹೇಳಲಾರೆವು, ನನಗೆ ಗೊತ್ತಿರುವಂತೆ ನಾಲ್ಕೂ ದಿಕ್ಕಿನಲ್ಲಿ ಹತ್ತು ಅಡಿ ಮನೆಗಳಿರಬಾರದೆಂಬ ನಿಯಮವಿರಬೇಕು. ಕಾನೂನುಗಳು ರಚನೆಯಾಗುತ್ತವೆ. ಆದರೆ ಎಷ್ಟು ಜನ ಪಾಲಿಸುತ್ತಾರೆ ಎಂಬುದನ್ನು ಎಲ್ಲರೂ ಚೆನ್ನಾಗಿ ತಿಳಿದಿದ್ದಾರೆ. ಎಲ್ಲ ವ್ಯವಸ್ಥೆಗಳು ನಮ್ಮ ಧರ್ಮ ಮತ್ತು ದೇಶಗಳಲ್ಲಿವೆ ಆದರೆ ಜನ ಅವುಗಳನ್ನು ಪಾಲಿಸುವುದಿಲ್ಲ. ನಮ್ಮ ದೇಶ ಮತ್ತು ಧರ್ಮದ ಬಗ್ಗೆ ಸಮರ್ಪಣೆ, ಶ್ರದ್ಧೆಯಲ್ಲಿ ಕೊರತೆಯ ಕಾರಣ ಈ ವಿಷಯಗಳಲ್ಲಿ ನಮ್ಮ ದೇಶ ಹಿಂದುಳಿದಿದೆ. ಭಗವಂತನಲ್ಲಿ ವಿನಯ ತೋರಲು ನಾವು ಅಂತಹ ವಾತಾವರಣವನ್ನು ರೂಪಿಸಬೇಕು. ಮಂದಿರದ ಕಡೆಗೆ ಕಾಲು ಚಾಚಿ ಮಲಗುವುದಿಲ್ಲವೆಂಬುದು ನಿಮಗೆ ತಿಳಿದಿದೆ. ಯಾಕೆಂದರೆ ಅವು ಚೈತ್ಯ ಚೈತ್ಯಾಲಯಗಳಾಗಿದ್ದು ಅಲ್ಲಿ ದೇವತೆಗಳು ವಿರಾಜಮಾನರಾಗಿದ್ದಾರೆ ಮಂದಿರವು ಸಹ ಒಂದು ದೇವತೆಯೇ ಆಗಿದೆ. ಇದು ಸಹ ನವದೇವತೆಗಳಲ್ಲಿ ಒಂದಾಗಿದೆ ಆದ್ದರಿಂದ ಇದಕ್ಕೆ ವಿನಯ ತೋರುವುದು ಅನಿವಾರ್ಯವಾಗಿದೆ.

ಎಲ್ಲಿ ಜಿನವಾಣಿಯನ್ನು ಇಡಲಾಗಿದೆ, ಗುರುಗಳು ಕುಳಿತಿರುವಲ್ಲಿ ನಾವು ಆ ದಿಕ್ಕಿಗೆ ಕಾಲು ಚಾಚಬಾರದು, ಬೆನ್ನು ತೋರಿಸಿಯೂ ಕುಳಿತುಕೊಳ್ಳಬಾರದು. ಇವೆಲ್ಲವೂ ವಿನಯಕ್ಕಾಗಿ ಇವೆ. ವಿನಯವಿದ್ದಾಗಲೇ ಮಾರ್ದವ ಧರ್ಮ ಬರುತ್ತದೆ. ಇಲ್ಲವಾದಲ್ಲಿ ಇಲ್ಲ. ಆದ್ದರಿಂದ ಈ ಎಲ್ಲ ಆಯತನಗಳು ನಮ್ಮೆಲ್ಲರಿಗೂ ವಿನಯ ಮಾಡುವುದನ್ನು ಕಲಿಸುತ್ತವೆ ಹಾಗೂ ಅಹಂಕಾರವನ್ನು ತಗ್ಗಿಸುತ್ತವೆ. ಇಂದು ಇವುಗಳ ವ್ಯವಸ್ಥೆಗಳು, ರಚನೆಗಳು ಸಹ ಬದಲಾಗುತ್ತಿದೆ ಹಾಗೂ ಜನರ ಮನಸ್ಸು ಸಹ ಬದಲಾಗುತ್ತಾ ಸಾಗುತ್ತಲಿವೆ.

ನಮ್ಮ ಗುಣಗಳನ್ನು ಹೆಚ್ಚಿಸಿಕೊಳ್ಳಬೇಕಾಗಿದೆ ಎಂದಾಗ ನಮ್ಮ ದೃಷ್ಟಿ ಯಾರು ದೊಡ್ಡವರೋ ಗುಣಿಗಳೋ ಅವರೆಡೆಗೆ ಸಾಗುತ್ತದೆ ಆಗ ನಮ್ಮ ಅಹಂಕಾರ ಕರಗುತ್ತದೆ. ನಾವು ಎಷ್ಟು ಚಿಕ್ಕವರಾಗಿದ್ದೇವೆ, ನಮಗಿಂತ ಯಾರಾದರೂ ದೊಡ್ಡವರಿದ್ದರೆ ಮಾನದ ಹಾನಿಯಾಗುತ್ತದೆ. ಮನಸ್ಸಿನ ಗಲನವಾಗುತ್ತದೆ ಹಾಗೂ ಒಂದು ವೇಳೆ ಕೆಳಗಿನವರೆಗೆ ನೋಡಿದರೆ ನೋಡಿ, ಅವರೆಷ್ಟು ಅಜ್ಞಾನಿಗಳಾಗಿದ್ದಾರೆ, ನಿರ್ಧನರಾಗಿದ್ದಾರೆ, ನಾನು ಜ್ಞಾನಿಯಾಗಿದ್ದೇನೆ. ನಾನು ದೊಡ್ಡವನಾಗಿದ್ದೇನೆ. ನಾನು ಶ್ರೀಮಂತನಾಗಿದ್ದೇನೆ ಇತ್ಯಾದಿ ರೂಪದಿಂದ ನಮ್ಮ ಮಾನ ಹೆಚ್ಚಾಗುತ್ತಿದೆ. ನಮ್ಮ ಮಾನವನ್ನು ಕಳೆದುಕೊಳ್ಳಬೇಕಾದರೆ ಮೇಲೆ ನೋಡಬೇಕಾಗುತ್ತದೆ. ಮೇಲೆ ನೋಡಿದರೆ ಮಾನ ತಗ್ಗುತ್ತದೆ ಕೆಳಗಿನ ಕಡೆ ನೋಡಿದರೆ ನಮ್ಮ ಮಾನ ಹೆಚ್ಚಾಗುತ್ತಿದೆ. ಆದ್ದರಿಂದ ಮಾನವನ್ನು ತಗ್ಗಿಸಲು ನಮಗಿಂತ ಮೇಲೆ ದೃಷ್ಟಿ ಹಾಯಿಸಬೇಕು. ನಾವು ಅನ್ಯರ ಕಟ್ಟಡ ನೋಡಿದಾಗ ನಾವೇನೂ ಅಲ್ಲ ಎಂದು ನಮಗನಿಸುತ್ತದೆ, ಗುಡಿಸಲುಗಳನ್ನು ನೋಡಿದಾಗ ನಾನು ಬಹಳ ದೊಡ್ಡ ಮನುಷ್ಯ ಎನಿಸುತ್ತಿದೆ ಯಾವ ದೃಷ್ಟಿಯಿಂದ ನೋಡಬೇಕು ಎನ್ನುವುದು ಅಪೇಕ್ಷಾ ದೃಷ್ಟಿಯಾಗಿದೆ. ಆಸೆಗಳ ದೃಷ್ಟಿಯಿಂದ ನೋಡಿದರೆ ಆಸೆಗಳು ಇನ್ನೂ ಹೆಚ್ಚಾಗುತ್ತವೆ. ನಮಗಿಂತ ಹೆಚ್ಚಿನ ಗುಣಗಳನ್ನು ಇರುವವರನ್ನು ನೋಡಬೇಕು. ಆಗ ನಮ್ಮ ಮಾನ(ಕಷಾಯ) ಕಡಿಮೆಯಾಗುತ್ತದೆ. ಇದೇ ಮಾತನ್ನು ಉದಾಹರಣೆಗಳಿಂದ ತಿಳಿಯೋಣ.

ನದಿಯಲ್ಲಿ ನೀರಿನ ಮಹಾಪೂರ ಬರುತ್ತದೆ ಹಾಗೂ ಮಳೆಗಾಲದ ಮಹಾಪೂರ ಹೆಚ್ಚು ವೇಗದಿಂದ ಮುಂದೆ ಸಾಗುತ್ತಿದೆ. ಒಂದು ಸಾರಿ ಮಳೆಗಾಲದ ಮಹಾಪೂರದಲ್ಲಿ ದೊಡ್ಡ ದೊಡ್ಡ ಮರಗಳು ಕೊಚ್ಚಿಕೊಂಡು ಹೋದದ್ದು ನೀರು ಕಡಿಮೆಯಾದಾಗ ಮೃದುವಾದ ಬೆತ್ತಗಳು ಆ ಸಮಯದಲ್ಲಿಯೂ ಸುರಕ್ಷಿತವಾಗಿ ನಿಂತಿದ್ದು ಕಂಡು ಬಂದಿತು. ಯಾರೋ ಹೋಗಿ ಬೆತ್ತಕ್ಕೆ ಏನು ಸಮಾಚಾರ? ಎಂದು ಕೇಳಿದರು. ಇಷ್ಟೊಂದು ದೊಡ್ಡ ದೊಡ್ಡ ವಟ ವೃಕ್ಷಗಳು ಕೊಚ್ಚಿಕೊಂಡು ಹೋದವು ಆದರೆ ನೀನು ಹೇಗೆ ನಿಂತಿದ್ದಿಯಲ್ಲಾ? ನಾನು ಬಾಗುವುದನ್ನು ಕಲಿತ್ತಿದ್ದೇನೆ ಎಂದು ಕೇವಲ ಇಷ್ಟೇ ಉತ್ತರ ನೀಡಿತು ಮಹಾಪೂರದ ಪ್ರಬಲ ವೇಗ ನಾನೂ ನೋಡಿದೆ ಹಾಗು ಬಾಗದೇ ಹಾಗೇ ಸೆಟೆದು ನಿಂತರೆ ಮೂಲದಿಂದ ಕಿತ್ತು ಕೊಚ್ಚಿಕೊಂಡು ಹೋಗುತ್ತಿದ್ದೆ. ಉಳಿಯುವ ಹಾಗೂ ಸುರಕ್ಷಿತವಾಗಿರುವ ಒಂದೇ ಉಪಾಯ, ಬಾಗು, ವಿನಮ್ರನಾಗು, ಹಗುರತೆಯನ್ನು ತಂದುಕೋ. ಧರ್ಮಭಾವನಾ ಶತಕದಲ್ಲಿ ಮಾರ್ದವ ಧರ್ಮದ ಬಗ್ಗೆ ನಾನು ಹೀಗೆ ಬರೆದಿದ್ದೇನೆ–

**ಸಹಿಸದು ಬಿರುಗಾಳಿ ಕಠೋರವಾಗಿರುವ ವಟ ವೃಕ್ಷಗಳನು**
**ಬೇರು ಸಹಿತ ಕಿತ್ತೆಸೆವುದು ಕಾರಣ ಮೃದುತ್ವ ಇಲ್ಲವೆಂದು**
**ಮೃದುವಿನ ಕಾರಣ ಅದು ಸಹಿಸುವುದು ಬೆತ್ತದ ವೃಕ್ಷಗಳ**
**ಭೂ ಚರಣಕೆ ಬಾಗುವ ಕಾರಣ ಅದನ ಕರೆವರು ವಿನಯ ಶೀಲನೆಂದು॥9॥**

ಒಂದು ವಟವೃಕ್ಷವಿದೆ ಇನ್ನೊಂದು ಬೆತ್ತದ ವೃಕ್ಷ, ಎರಡೂ ಸ್ವಲ್ಪ ಅಂತರದಲ್ಲಿ ನಿಂತಿವೆ. ಒಂದು ಸಾರಿ ಪರಸ್ಪರರಲ್ಲಿ ಚರ್ಚೆಯಾಗುತ್ತದೆ. ವಟವೃಕ್ಷವು–ಅರೇ ನೀನು ಯಾಕೆ ಇಲ್ಲಿ ನಿಂತಿದ್ದಿಯಾ ನಿನ್ನ ಬಳಿ ಏನಿದೇ? ನನ್ನ ಬಳಿ ನೋಡು ನಾನು ಇಷ್ಟೂ ದೊಡ್ಡವನಾಗಿದ್ದೇನೆ. ಎಷ್ಟು ಎತ್ತರವಿದ್ದೇನೆ, ಎಷ್ಟು ದಪ್ಪವಿದ್ದೇನೆ. ನನ್ನ ಶರೀರ ನೋಡು ಎಷ್ಟು ದಪ್ಪವಿದೆ. ಇದ್ದರು ಎರಡೂ ಕೈಗಳಿಂದ ಹಿಡಿದರೂ ಹಿಡಿಯಲಾಗುವುದಿಲ್ಲ. ಶರೀರದಿಂದ ನಿಂತಿದ್ದೇನೆ ನಾನು. ಗಮನವಿಟ್ಟು ನೀನು ನೋಡು ನನ್ನ ನೆರಳಿನಲ್ಲಿ ಅನೇಕ ಜನರು ಏಕಕಾಲದಲ್ಲಿ ಕುಳಿತಿರುತ್ತಾರೆ. ನನ್ನ ಫಲಗಳನ್ನು ಸಾವಿರಾರು ಪಕ್ಷಿಗಳು ಸೇವಿಸುತ್ತವೆ. ನೂರಾರು ಪಕ್ಷಿಗಳು ನಮ್ಮ ಬಳಿ ಬಂದು ಕುಳಿತುಕೊಳ್ಳುತ್ತವೆ. ನಿನ್ನ ಬಳಿ ಯಾರು ಕುಳಿತುಕೊಳ್ಳುತ್ತಾರೆ? ನನ್ನ ಮುಂದೆ ನೀನು ಏನೂ ಅಲ್ಲಾ. ಇಲ್ಲಿಂದ ನೀನು ದೂರ ಸರಿ–ಇತ್ಯಾದಿ ಇತ್ಯಾದಿ ಹೇಳಿ ಮಾನ ಕಷಾಯ ಹೊಂದಿತು.

ಬೆತ್ತದ ವೃಕ್ಷ ವಿಚಾರ ಮಾಡಿತು. ನಿಂತುಕೊಂಡು ಎಲ್ಲವನ್ನು ಕೇಳಿಸಿಕೊಂಡಿತು. ನಾವೇನು ಹೇಳುವುದು, ಏನು ತೋರಿಸುವುದು ಮತ್ತೆ ಯಾವಾಗಲಾದರೂ ಸಮಯ ಬಂದರೆ ತಿಳಿಸಿದರಾಯಿತು, ಹೇಳೋಣ ಎಂದು ವಿಚಾರ ಮಾಡಿತು. ಒಂದು ದಿನ ಸಮಯ ಸಿಕ್ಕಾಗ ಅದು–ನೀನು ನಮ್ಮಿಂದ ಏನನ್ನಾದರೂ ಕೇಳುವುದಿದ್ದರೆ ಕೇಳು. ಹಾಗೇ ನೋಡಿದರೆ ನನಗೆ ನಮ್ಮ ಗುಣಗಳನ್ನು ಹೇಳಿ ಕೊಳ್ಳುವುದು ಸರಿ ಎನಿಸುವುದಿಲ್ಲ. ನೀನು ಯಾವಾಗ ನಿಮ್ಮ ಗೌರವ–ದೊಡ್ಡಸ್ತಿಕೆ ಹೇಳಿರುವಾಗ ನಾನು ಸ್ವಲ್ಪ ಕೆಲವು ನಮ್ಮ ಗುಣಗಳನ್ನು ಹೇಳುತ್ತಿದ್ದೇನೆ. ಅವು ಯಾವಾಗಲಾದರೂ ಉಪಯೋಗಕ್ಕೆ ಬರಬಹುದು. ನೀನು ಹೀಗೆ ಆಗುವುದಾದರೆ ಆಗು. ನನ್ನ ಬಳಿ ಕೆಲವೇ ಗುಣಗಳಿವೆ. ನಿನ್ನ ಬಳಿ ಬಹಳಷ್ಟು ಇವೆ, ನಿನ್ನಷ್ಟಕ್ಕೆ ನೀನು ದೊಡ್ಡವನೆಂದು ಭಾವಿಸಿದ್ದಿಯಾ, ನೀನು ಕೇಳಿದ್ದರಿಂದ ಸ್ವಲ್ಪ ಹೇಳುತ್ತಿದ್ದೇನೆ– ಎಂದಿತು.

ಒಂದು ನನ್ನ ಈ ಕೋಲಿನಿಂದ ಶಿಕ್ಷಕ ಜನರು ಒಂದು ದಂಡ(ಬಡಿಗೆ)ವನ್ನು ರೂಪಿಸಿಕೊಂಡು ವಿದ್ಯಾರ್ಥಿಗಳಿಗೆ ವಿದ್ಯಾಧ್ಯಯನ ಮಾಡಿಸುವಾಗ ಉಪಯೋಗಿಸುತ್ತಾರೆ. ವಿದ್ಯಾರ್ಥಿಗಳು ಸಹ ಅಧ್ಯಯನದ ನಂತರ ಯಾವಾಗಲೂ ಶಿಕ್ಷಕರ ಕೋಲುನ್ನುನ್ನು ಜ್ಞಾಪಿಸಿಕೊಳ್ಳುತ್ತಾ ನಮ್ಮನ್ನು ಈ ಬಡಿಗೆಯು ಜ್ಞಾನಿಗಳನ್ನಾಗಿ ಮಾಡಿತು ಎಂದು ಹೇಳುತ್ತಾರೆ. ವಟ ವೃಕ್ಷ ಒಳ್ಳೆಯದು ಹೀಗಾ ಎಂದಿತು. ಬೆತ್ತದ ವೃಕ್ಷ ಮತ್ತೆ ಹಾಗೇ ನೋಡಿದರೆ ಮುಖ್ಯರೂಪದಲ್ಲಿ ಆಹಾರ ತಯಾರಿಸುವಲ್ಲಿಯೂ ನಮ್ಮ ಉಪಯೋಗ ಮಾಡಲಾಗುತ್ತಿದೆ. ವೃದ್ಧರು ಸಹ ವೃದ್ಧಾವಸ್ಥೆಯಲ್ಲಿ ನನ್ನ ಆಸರೆ ಪಡೆಯುತ್ತಾರೆ, ಯಾವುದೇ ವ್ಯಕ್ತಿ ನಿಧನರಾದಾಗ ಅವರ ಶವ ಯಾತ್ರೆಗಾಗಿ ನಮ್ಮ ಈ ಕೋಲುಗಳನ್ನು ಪ್ರಯೋಗ ಮಾಡಲಾಗುತ್ತಿದೆ. ಬಹಳಷ್ಟು ಇನ್ನೂ ಅನೇಕ ವಿಶೇಷ ಉಪಯೋಗಗಳಿವೆ ಎಂದು ಹೇಳಿತು ಅದರಲ್ಲಿಯ ಒಂದು ವಿಶೇಷತೆ ಎಂದರೆ ಈ ಕೋಲನ್ನು ಸುಲಭವಾಗಿ ಹೊರಳಿಸಬಹುದು ಯಾಕೆಂದರೆ ನಮ್ಮೊಳಗೆ ಕೋಮಲತೆ ಇದೆ ಈ ಕಾರಣದಿಂದ ಮುನಿಮಹಾರಾಜರು ಪಿಂಛಿಗಳಲ್ಲಿ ಉಪಯೋಗಿಸುತ್ತಾರೆ. ಇದಕ್ಕಿಂತ ದೊಡ್ಡ ಸೌಭಾಗ್ಯ ಮತ್ತೆನಿದೆ. ಸಂಯಮಧಾರಿಗಳ ತಪ–ಸಾಧನಮಯ ಸ್ಪರ್ಶ ನಮಗೆ ಪ್ರಾಪ್ತವಾಗುತ್ತದೆ. ಜೊತೆಗೆ ನಮ್ಮಲ್ಲಿರುವ ಇನ್ನೊಂದು ವಿಶಿಷ್ಟ ಗುಣ ನಮ್ಮೊಳಗೆ ಇರುವ ಬಳಕುವ–ಬಾಗುವುದಾಗಿದೆ. ಮಳೆ ಅಥವಾ ಬಿರುಗಾಳಿ ಬಂದರೆ ನಮ್ಮಲ್ಲಿರುವ ಕೋಮಲತೆಯ ಮಾಧ್ಯಮದಿಂದಾಗಿ ನಾವು ಜನ್ಮ ಪಡೆದ ಭೂಮಿಯ ಮಡಿಲಲ್ಲಿಯೇ ಹೋಗಿ ಮಲಗಿ ಬಿಡುತ್ತೇವೆ. ಇದರಿಂದಾಗಿ ನಮ್ಮ ಜೀವನದ ರಕ್ಷಣೆ ಭೂಮಾತೆ ಮಾಡುತ್ತಾಳೆ, ಬಿರುಗಾಳಿ ನಿಲ್ಲುತ್ತಲೇ ಅವಳು ಪುನಃ ಎಬ್ಬಿಸಿ ನಿಲ್ಲಿಸಿ ಬಿಡುತ್ತಾಳೆ ಯಾಕೆಂದರೆ ನಾವು ಬಾಗುವುದನ್ನು

ಕಲಿತಿದ್ದೇವೆ. ಒಳ್ಳೆಯದು ಹೀಗಾ, ನಿಮ್ಮೊಳಗೆ ಅಮೂಲ್ಯ ವಿಶೇಷತೆಗಳಿವೆ-ಎಂದಿತು ವಟ ವೃಕ್ಷ.

ಒಂದು ದಿನ ಬಹಳ ಜೋರಾಗಿ ಬಿರುಗಾಳಿ ಬೀಸಿದಾಗ ಬಾಗುವುದನ್ನೇ ಕಲಿಯದಿದ್ದ ವಟ ವೃಕ್ಷ ಸಹಿಸಲು ಸಾಧ್ಯವಾಗದೇ ನೆಲಕ್ಕುರುಳಿತು. ಬೆತ್ತದ ವೃಕ್ಷ ಬಾಗುವುದನ್ನು ಕಲಿತಿದ್ದರಿಂದ ಅದು ಭೂಮಾತೆಯ ಚರಣಗಳಲ್ಲಿ ಬಾಗಿತು. ಭೂಮಾತೆಯು ಅದರ ರಕ್ಷಣೆ ಮಾಡಿತು. ಬಿರುಗಾಳಿ ಹೊರಟು ಹೋದ ಮೇಲೆ ಮತ್ತೆ ಅದು ನಿಂತುಕೊಂಡಿತು ನೋಡಿದಿರಾ ಸಹೋದರರೆ, ಯಾರ ರಕ್ಷಣೆಯಾಯಿತು? ಸೆಟೆದು ನಿಂತಿದ್ದ ವಟವೃಕ್ಷದ್ದಾ? ಅಥವಾ ಬಾಗಲು ಕಲಿತ್ತಿದ್ದ ಬೆತ್ತದ ವೃಕ್ಷದ್ದೆ? ಯಾರ ಬಳಿ ಮಾನ ಕಷಾಯ ಇರುವುದಿಲ್ಲವೋ ಅದರ ರಕ್ಷಣೆ ಆಗುತ್ತದೆ. ದೇವ-ಶಾಸ್ತ್ರ-ಗುರುಗಳೇ ನಮ್ಮ ತಾಯಿ-ತಂದೆ, ಬಂಧು ಎಲ್ಲವೂ ಆಗಿವೆ. ಇವುಗಳಲ್ಲಿ ಶರಣಾದರೆ ಹಾಗೂ ಮಾನವನ್ನು ಗಳಿಸಿದರೆ ದುಃಖ ಅಥವಾ ಆಪತ್ತಿನ ಸಮಯದಲ್ಲಿ ನಮ್ಮ ರಕ್ಷಣೆ ಆಗಬಲ್ಲದು. ಆದ್ದರಿಂದ ಎಂದಿಗೂ ಇವುಗಳ ಉಪಕಾರವನ್ನು ಮರೆಯಬಾರದು. ವಟವೃಕ್ಷ ಮತ್ತು ಬೆತ್ತದ ವೃಕ್ಷದ ಉದಾಹರಣೆಯಿಂದ ನಾವು ಮಾನ ಮತ್ತು ಕೋಮಲತೆಯ ವಿಷಯವನ್ನು ತಿಳಿದೆವು, ಅದರಿಂದ ಶಿಕ್ಷಾಪ್ರದ ಉಪದೇಶ ಪಡೆದೆವು. ಮಾನ ಹೇಗೆ ಕರಗುತ್ತದೆ? ಹಾಗೂ ಮಾರ್ದವ ಧರ್ಮ ಹೇಗೆ ಪ್ರಕಟವಾಗುತ್ತದೆ? ಮೃದುತ್ವ ಬಂದಾಗಲೇ ಆಗುತ್ತವೆ. ಮಣ್ಣು ಎಷ್ಟು ಮೃದು ಕೋಮಲವಾಗಿರುವುದೋ ಅಷ್ಟು ಒಳ್ಳೆಯ ಆಕಾರ, ಪ್ರಕಾರ ನಿರ್ಮಾಣ ಮಾಡಬಹುದು, ಒಂದು ವೇಳೆ ಅದು ಕಠೋರವಾದರೆ ಅಷ್ಟೊಂದು ಆಕಾರ-ಪ್ರಕಾರಗಳನ್ನು ಮಾಡಲಾಗುವುದಿಲ್ಲ; ಆದರೆ ಒಡೆದು ಹೋಗುತ್ತದೆ, ಅದೇ ಪ್ರಕಾರ ನಾವು ಎಷ್ಟು ಕೋಮಲರಾಗುತ್ತೇವೆ, ಕೋಮಲ ಪರಿಣಾಮಿಯಾಗುತ್ತೇವೋ, ಸಹನ ಶೀಲರಾಗುತ್ತೇವೋ ಹಾಗೇಯೇ ನಮಗಾಗಿ ಸುಂದರಕ್ಕಿಂತ ಸುಂದರ ಆಕಾರ ಪ್ರಕಾರದ ದೇವ, ಶಾಸ್ತ್ರ, ಗುರುಗಳು ದೊರೆಯುತ್ತಾರೆ. ಅವರು ನಮ್ಮ ಜೀವನವನ್ನು ಒಳ್ಳೆಯ ಹೆಚ್ಚು ಉಜ್ವಲ ಹಾಗೂ ಪವಿತ್ರ ಗೊಳಿಸುವಲ್ಲಿ ಮಾಧ್ಯಮ/ನಿಮಿತ್ತರಾಗುತ್ತಾರೆ. ಮಾನವಿರದಿದ್ದರೆ ಹಟಮಾರಿತನವೂ ಇರುವುದಿಲ್ಲ ಅಂತಹ ಗುರುಗಳ ಸಂದೇಶ ನಮಗೆ ಸನ್ಮಾರ್ಗವನ್ನು ತೋರಿಸುತ್ತದೆ.

ನಾನೇ ಎಲ್ಲರಿಗಿಂತ ದೊಡ್ಡವನಾಗಿದ್ದೇನೆಂದು ಭಾವಿಸುವವರ ಮಾನ ಒಂದಲ್ಲ ಒಂದು ದಿನ ಖಂಡಿತವಾಗುತ್ತದೆ. ಒಂಟೆಯು ತನ್ನಷ್ಟಕ್ಕೆ ತಾನೇ ಬಹಳ ದೊಡ್ಡದೆಂದು ಭಾವಿಸುತ್ತದೆ. ಆದರೆ ಅದು ಪರ್ವತದ ಬಳಿ ಬಂದಾಗ ಅರೇ ನನಗೀಗ ಬೇರೆ ದೊಡ್ಡವರಿದ್ದಾರೆಂದು ಯೋಚಿಸುತ್ತದೆ. ನನಗಿಂತ ಬೇರೆ ಯಾರೋ ದೊಡ್ಡವರಿದ್ದಾರೆ-ಹೀಗೆ ದೊಡ್ಡವರನ್ನು ನೋಡಿದಾಗ ಮಾನ ಗಲನವಾಗುತ್ತದೆ, ಗುಣಿಗಳನ್ನು ನೋಡಿದಾಗ ಮಾನ ಗಲಿಸುತ್ತದೆ ಹಾಗೂ ಚಿಕ್ಕವರನ್ನು ನೋಡಿದಾಗ ನಾನೂ ದೊಡ್ಡವನಿದ್ದೇನೆ ಎಂದು ಮಾನ ಹೆಚ್ಚುತ್ತದೆ. ನಮ್ಮ ಭಾವನೆ ಮಾನವನ್ನು ಗಲಿಸುವುದಾಗಬೇಕು, ಕಷಾಯ ಹೊಂದಿರುವುದಲ್ಲ. ಮಾತ್ಸರ್ಯ ಭಾವದ ಭಾವನೆ ಇರಬಾರದು. ಭಾವ ಅನೇಕ ಪ್ರಕಾರವಾಗಿ ಆಗುತ್ತದೆ. ಇದು ನನಗಿಂತ ಯಾಕೆ ದೊಡ್ಡದಿದೆ, ಇದನ್ನು ಚಿಕ್ಕದನ್ನಾಗಿ ಮಾಡುವ ಭಾವ ಬರುತ್ತದೆ. ಆದರೆ ಇದು ತಮ್ಮ ತಮ್ಮದೇ ಆದ ಉಪಾದಾನವಿದೆ, ತಮ್ಮ ತಮ್ಮ ಪುರುಷಾರ್ಥವಿದೆ. ನಾವು ಮಾನವನ್ನು ತಗ್ಗಿಸಲು ಪುರುಷಾರ್ಥ ಮಾಡಿದರೆ ಒಳ್ಳೆಯದು ಹಾಗೂ ಯಾರಿಗೆ ಈ ಜ್ಞಾನವೇ ಇಲ್ಲವೋ ಅಂದರೆ ಮಾನವನ್ನು ದೂರ ಮಾಡುವುದರಿಂದ ಮಾರ್ದವ ಧರ್ಮ ಬರುತ್ತದೆ. ಅವರು ಮಾತ್ಸರ್ಯ ಮಾಡುತ್ತಾ ಕುಳಿತು ಬಿಡುತ್ತಾರೆ-ಇವರು ನನಗಿಂತ ಯಾಕೆ ದೊಡ್ಡವರಾಗಿದ್ದಾರೆ? ಅವರ ಮನೆಯೂ ದೊಡ್ಡದಿದೆ, ಕಟ್ಟಡವು ದೊಡ್ಡದಿದೆ.

ರೂಪವಂತರಿದ್ದಾರೆ. ಬಲ, ಬುದ್ಧಿ, ಸೌಂದರ್ಯದಿಂದ ಕೂಡಿದ್ದಾರೆ. ಇದೆಲ್ಲವನ್ನು ನೋಡಿ ಅವರಿಗೆ ಮತ್ಸರ ಉಂಟಾಗುತ್ತದೆ. ನನಗಿಂತ ಯಾರು ದೊಡ್ಡವರಿರಬಾರದು, ಅವರ ಈ ಎಲ್ಲ ವಸ್ತುಗಳನ್ನು ನಾನು ನಾಶ ಮಾಡುತ್ತೇನೆ, ಇವನನ್ನು ಕೆಳಗಿಳಿಸುತ್ತೇನೆ ಅವರನ್ನು ಕೀಳಾಗಿ ತೋರಿಸುತ್ತೇವೆ. ಹೀಗೆ ಅನೇಕ ತರಹದ ಮಾತುಗಳು ಅಥವಾ ಯಾರ ಪ್ರಶಂಸೆಯನ್ನು ಕೇಳದಿರುವ ವಿಚಾರ ಭಾವ ಇವೆಲ್ಲವೂ ಮಾನದ ಅನೇಕ ರೂಪಗಳಾಗಿದೆ.

ಇಂದು ವ್ಯಕ್ತಿಗಳು ಸಾಮಾನ್ಯವಾಗಿ ಜೀವಿಸಲು ಇಚ್ಛಿಸುವುದಿಲ್ಲ ಅವರು ಕೆಲವು ವಿಶೇಷಗಳನ್ನು ಬಯಸುತ್ತಾರೆ, ಅವರು ತಮ್ಮನ್ನು ವಿಶೇಷಣಗಳೊಂದಿಗೆ ಪರಿಚಯಿಸುತ್ತಾರೆ. ಇದೇ ಭಾವ ಅಹಂಕಾರ, ಅಭಿಮಾನ, ಮದ, ಮಾನವನ್ನು ಹುಟ್ಟಿಸುತ್ತದೆ. ನಾನು ಜಗತ್ತಿನಲ್ಲಿ ಎಲ್ಲಕ್ಕಿಂತ ದೊಡ್ಡ ಮನುಷ್ಯನಾಗ ಬೇಕು. ಜಡ ಪದಾರ್ಥಗಳನ್ನು ಚೈತನ್ಯವೆಂದು ಭಾವಿಸಿ ಮಾತನಾಡುತ್ತಾರೆ, ನೇರವಾಗಿ ಮಾತನಾಡುವುದೇ ಇಲ್ಲ ಅವರು ಆಕಾಶವನ್ನೇರುತ್ತಾರೆ. ಆ ಸಮಯ ಒಳಗಿನಿಂದ ಮೃದುತ್ವ ಹೇಳುವುದಿಲ್ಲ ಅಹಂಕಾರ, ಮಾನ ಹೇಳುತ್ತಿದೆ ಮಾನ ಮಾಡುವವನು ತಾನಲ್ಲದೇ ಅನ್ಯ ಪ್ರಾಣಿಗಳನ್ನು ತುಚ್ಛರೆಂದು ಭಾವಿಸುತ್ತಾನೆ. ಮಾನದ **ಅರ್ಥ–ಏಕೋಹಂ ದ್ವಿತೀಯೋ ನಾಸ್ತಿನ ಭೂತೋ ನ ಭವಿಷ್ಯತಿ**. ಒಬ್ಬ ನಾನೇ ಆಗಿದ್ದೇನೆ ಬೇರೆಯಾರೂ ಇಲ್ಲ. ಹಿಂದೆಯೂ ಆಗಿಲ್ಲ ಭವಿಷ್ಯದಲ್ಲಿಯೂ ಆಗಲಾರರು. ಮಮಕಾರ ಮತ್ತು ಅಹಂಕಾರ ಜೀವನದಲ್ಲಿ ದುಃಖಗಳಿಗೆ ಬಹಳ ದೊಡ್ಡ ಕಾರಣವಾಗಿವೆ. ವ್ಯಕ್ತಿಯ ಬಳಿ ಏನೆಲ್ಲ ಇರಲಿ, ಜನರು ಅವರ ಪ್ರಶಂಸೆ ಮಾಡುತ್ತಿದ್ದರೂ ಅವರ ಪರಿಣಾಮಗಳಲ್ಲಿ ಮಾನ ಕಷಾಯದ ಉದಯವಾಗದಿದ್ದರೆ ದೊಡ್ಡ ಆಶ್ಚರ್ಯದ ಮಾತು, ನಿರ್ಧನತೆಯಲ್ಲಿ ಪ್ರಾಮಾಣಿಕತೆ, ಯುವ ಅವಸ್ಥೆಯಲ್ಲಿ ವಿಷಯ ಭೋಗಗಳ ಆಕಾಂಕ್ಷೆ ಉತ್ಪನ್ನವಾಗದಿರುವುದು, ವೈಭವ, ಆಜ್ಞಾಕಾರೀತ ಮುಂತಾದವುಗಳನ್ನು ಹೊಂದಿಯೂ ಮಾನ ಆಗದಿರುವುದು ವಿಶ್ವದ ಅನುಪಮ ಆಶ್ಚರ್ಯಗಳಲ್ಲಿದೆ.

ನಾಲ್ಕು ಗತಿಗಳ ಅಪೇಕ್ಷೆಯಿಂದ ಮನುಷ್ಯಗತಿಯಲ್ಲಿ ಮನವು ಎಲ್ಲಕ್ಕಿಂತ ಹೆಚ್ಚು ದುಃಖಮಯವಾಗಿದೆ, ಮಾನ ಮಾಡುವ ವ್ಯಕ್ತಿಯು ನರಕದ ಕಡೆಗೆ ಸಾಗುತ್ತಾನೆ. ಮಾನದಲ್ಲಿ ವ್ಯಕ್ತಿ ಕುರುಡನಾಗುತ್ತಾನೆ, ಆತನನ್ನು ಮದಾಂಧನೆನ್ನುತ್ತಾರೆ. ಮಾನದ ಉದಯವಾದಾಗ ಮಾನಿ ವ್ಯಕ್ತಿಯು ಯಾರ ಮಾತನ್ನೂ ಒಪ್ಪುವುದಿಲ್ಲ. ಮಾನ ತೀವ್ರತೆಯ ಕಡೆಗೆ ಸಾಗಿದರೆ ಕ್ರೋಧವು ಸಹ ಉತ್ಪನ್ನವಾಗುತ್ತದೆ ಹಾಗೂ ಕ್ರೋಧವು ನರಕದ ಸೂಚಿತವಾಗಿದೆ. ಮಾನಿ ವ್ಯಕ್ತಿಯ ಗತಿಯು ನೀಚವೇ ಆಗಿರುತ್ತದೆ. ಹೀಗೆ ಹೇಳಿಯೂ ಇದ್ದಾರೆ–

**ಮಾನಿ ನರನ, ನಲ್ಲಿದ ನೀರಿನ ಗತಿ ಒಂದೇ ಆಗಿರುವುದು।**
**ಎಷ್ಟೆಷ್ಟು ಎತ್ತರಕ್ಕೆ ಏರಿದರೂ, ಅಷ್ಟಷ್ಟೆ ಕೆಳಗೆ ಇರುವುದು॥**

ಮಾನಿ ಮನುಷ್ಯನ ಹಾಗೂ ನಳದ ನೀರಿನ ಗತಿ ಒಂದೇ ರೀತಿಯಾಗಿರುತ್ತದೆ. ನಲ್ಲಿಯನ್ನು 'ಎಷ್ಟೇ ಎತ್ತರಕ್ಕೆ ಒಯ್ದರೂ ಅದರ ನೀರು ಕೆಳಗಡೆಯೇ ಬರುತ್ತದೆ. ಅದೇ ಪ್ರಕಾರ ಮಾನಿ ವ್ಯಕ್ತಿಯು ಸಹ ಕೆಳಗೇ ಬರುತ್ತಾನೆ. ಅಹಂಕಾರ ಅಥವಾ ಮದ ವ್ಯಕ್ತಿತ್ವದ ಸಂಪೂರ್ಣನಾಶವನ್ನು ಮಾಡುತ್ತದೆ. ನಾಶವಾದವರನ್ನು ಎಂದಿಗೂ ಆದರಿಸಬಾರದು.

ಮೇಲೆ ಹೇಳಿದ ಮಾತನ್ನು –ನಮ್ಮೆಲ್ಲರ ಚಿತ್ತದಲ್ಲಿ ಎಂಟು ಹೆಡೆಗಳುಳ್ಳ ಒಂದು ಭಯಂಕರ ವಿಷಧರ ಕುಳಿತಿದೆ ಅದು ಜ್ಞಾನ, ಪೂಜೆ, ಕುಲ, ಜಾತಿ, ಬಲ ಋದ್ದಿ, ತಪ ಹಾಗೂ ಶರೀರ(ರೂಪ)ದ

ಅಭಿಮಾನದಿಂದ ಆತ್ಮನನ್ನು ಜಡತಾ ಕ್ರಾಂತನನ್ನಾಗಿ ಮಾಡುತ್ತಲಿದೆ. ಈ ಹೆಡೆಗಳನ್ನು ತಿಳಿಯುವುದು ಬಹಳ ಕಠಿಣವಿದೆ. ಇವುಗಳಿಂದ ರಕ್ಷಿಸಿಕೊಂಡು ಇರಬೇಕು–ಎನ್ನುವ ಅರ್ಥದಲ್ಲಿ ತಿಳಿಯಬೇಕು. ವ್ಯಕ್ತಿಯ ಬಳಿ ಸ್ವಲ್ಪ ಹೆಚ್ಚು ಆದಾಯವಾದರೆ, ಧನ, ವೈಭವ ದೊರಕಿದರೆ, ಎಲ್ಲಿಂದ ಏನೂದರೂ ಸ್ವಲ್ಪ ದೊರೆತರೆ, ಪದ, ಪ್ರತಿಷ್ಠೆ, ಮಾನ, ಸನ್ಮಾನ ಆಗ ನೋಡಿ, ಪುಣ್ಯದ ಯೋಗ/ಸಂಯೋಗದಿಂದ ಸ್ವಲ್ಪವಾದರೂ ನಾವೇನಾದರೂ ಪಡೆದು ಬಿಟ್ಟರೆ ಆಗ ಅದರ ಮಜಾ. ರಸ ಮತ್ತು ಆನಂದ ಬೇರೆಯಾಗಿಯೇ ಬಿಡುತ್ತದೆ. ಈ ಮಜ, ರಸ ಮತ್ತು ಆನಂದ ಬೇರೆಯದನ್ನು ನೋಡದೆ ಇರುವವರಿಗೆ ಒಳ್ಳೆಯದೆನಿಸುವುದಿಲ್ಲ. ಅವರ ಮದ, ಮಾನ ಬೇರೆಯದರ ಮೇಲೆ ಆಶ್ರಿತವಾಗಿದೆ. ಎಂಟು ಪ್ರಕಾರದ ಮಾನದ ಚರ್ಚೆಯನ್ನು ಆಚಾರ್ಯ ಸಮಂತ–ಭದ್ರರು ಮಾಡಿದ್ದಾರೆ. ಇವುಗಳ ಮೇಲೆ ಅಭಿಮಾನ ಮಾಡುವುದು ಅಜ್ಞಾನವಿದೆ. ಇವೆಲ್ಲವು ಆತ್ಮನ ಸ್ವಭಾವಗಳಲ್ಲ, ವಿಭಾವಗಳಾಗಿವೆ. ಕ್ಷಣ ಕ್ಷಯೀಗಳಾಗಿವೆ. ಹೊರಗಿನಿಂದ ಬಂದಿವೆ. ಪರಾಧೀನ ಹಾಗೂ ಕರ್ಮಾಧೀನಗಳಾಗಿವೆ.

ಈ ಮಾನವನ್ನು ಎಂಟು ಪ್ರಕಾರಗಳಲ್ಲಿ ಹೇಳಲಾಗಿದೆ. ಇವುಗಳನ್ನು ಅವಶ್ಯವಾಗಿ ತಿಳಿಯಿರಿ. ಅವುಗಳ ಮಾಧ್ಯಮದಿಂದ ಜನರ, ಮಾನ ಗಳಿಸಲಿ, ಹಾಗೂ ಅವರಿಗೆ ಸ್ವಲ್ಪ ಶಿಕ್ಷಣ ಸಿಗಲಿ. ಅವರ ಸಮ್ಯಗ್ ದರ್ಶನ ನಿರ್ಮಲವಾಯಿತು. ಸಮ್ಯಗ್ ದರ್ಶನ ಯಾರಿಗೋ ಆಯಿತು. ಇನ್ನು ಕೆಲವರಿಗೆ ಆಗಲೂ ಇಲ್ಲ. ತೀರ್ಥೋದಯ ಕಾವ್ಯದಲ್ಲಿ ಎಂಟು ಮದಗಳ ಖಂಡನದ ವಿಷಯದಲ್ಲಿ ಕೆಲವು ದೃಷ್ಟಾಂತಗಳ ರೂಪದಲ್ಲಿ ಪದ್ಯಗಳನ್ನು ರಚಿಸಲಾಗಿದೆ. ಪ್ರಸಂಗಾನುಸಾರ ವರ್ಣನೆಯಲ್ಲಿ ಅವುಗಳನ್ನು ಸಹ ತಿಳಿಸುತ್ತೇನೆ.

**ಜ್ಞಾನ ಮದ–** ಜ್ಞಾನ ಪಡೆದು ಮಾನ/ಮದ ಪಡುವುದು ದೊಡ್ಡ ವಿಡಂಬನೆಯಾಗಿದೆ. ಜ್ಞಾನವು ಮದ ಹಾಗೂ ದರ್ಪವನ್ನು ದೂರ ಮಾಡುವ ಸಾಧನವಾಗಿದೆ. ದರ್ಪ ಆಡಂಬರ ಅಜ್ಞಾನದ ಪರಿಣತಿಗಳಾಗಿವೆ ಹಾಗೂ ವಿನಮ್ರತೆ ಜ್ಞಾನದ ನಿಜವಾದ ಗುರುತು. ಆಚಾರ್ಯ ಜಿನಸೇನ ಸ್ವಾಮಿಗಳು ಮಹಾಪುರಾಣದಲ್ಲಿ ಒಂದು ಕಡೆ ಉಲ್ಲೇಖ ಮಾಡುತ್ತಾ ಜ್ಞಾನ ಮದ ಮಾಡುವುದು, ಜ್ಞಾನದ ಮೇಲೆ ಆವರಣ ಹಾಕುವುದಾಗಿದೆ, ಜ್ಞಾನದ ಮೇಲೆ ಅಡೆತಡೆ ಮಾಡುವುದಾಗಿದೆ. ಮೊದಲ ಮದ ಅಥವಾ ಮಾನ ಜ್ಞಾನದ್ದಾಗಿದೆ. ಜ್ಞಾನದ ಮದ ಅಥವಾ ಮಾನ ಯಾರಿಗಾದರೂ ಸ್ವಲ್ಪ ಜ್ಞಾನವಾದರೆ ತಾವೇ ಬಹಳ ದೊಡ್ಡ ಜ್ಞಾನಿ ಎಂದು ಭಾವಿಸುವುದು, ಎಲ್ಲಡೆ ತನ್ನ ಪಾಂಡಿತ್ಯದ ಪ್ರದರ್ಶನ ಮಾಡುವುದು, ನಾಲ್ಕು ಗಾಥೆಗಳನ್ನು ಶ್ಲೋಕಗಳನ್ನು ಶಬ್ದಗಳನ್ನು ಕಲಿತು ಬಿಟ್ಟರೆ ಮಾನವು ತಲೆಯ ಮೇಲಿಂದ ಸಾಗುತ್ತದೆ. ನನ್ನೊಂದಿಗೆ ಶಾಸ್ತ್ರಾರ್ಥ ಮಾಡಲು ಎಲ್ಲರು ಹೆದರುತ್ತಾರೆ. ದೊಡ್ಡ ದೊಡ್ಡ ಶಾಸ್ತ್ರಗಳು ಕಂಠಸ್ಥವಾಗಿವೆ. ಯಾವ ಗ್ರಂಥದಲ್ಲಿ ಏನು ಬರೆದಿದ್ದಾರೆ ಶ್ಲೋಕ, ಗಾಥೆ ಸಂಖ್ಯೆ ಸಹಿತ ಮೌಖಿಕವಾಗಿ ಹೇಳಬಲ್ಲೆ. ಈ ಜಗತ್ತಿನಲ್ಲಿ ನನ್ನ ಸಮಾನ ಯಾವ ಜ್ಞಾನವಂತ ಪಂಡಿತನಿಲ್ಲ ಅವರೆಲ್ಲರೂ ಸೂರ್ಯನಂಥ ನನ್ನ ಮುಂದೆ ನಕ್ಷತ್ರಗಳಂತಿದ್ದಾರೆ. ನನ್ನ ತರ್ಕಗಳ ಮುಂದೆ ಯಾರೂ ಉಳಿಯಲಾರರು. ಎಲ್ಲರೂ ನನ್ನನ್ನು ಜ್ಞಾನದ ಲೋಹವೆಂದು ಭಾವಿಸಿದ್ದಾರೆ. ಇವೆ ಮಾನಿ ವ್ಯಕ್ತಿಯು ಈ ಪ್ರಕಾರ ಜ್ಞಾನದ ಮದ ಮಾಡುತ್ತಾನೆ.

ಸ್ವಲ್ಪ ಯೋಚಿಸಿದರೆ ಯಾವ ಜ್ಞಾನದ ಬಗ್ಗೆ ಮಾತನಾಡುತ್ತಿದ್ದಿರಿ. ಭಗವಂತರ ಕೇವಲ ಜ್ಞಾನದ ಮುಂದೆ ನಿನ್ನ ಈ ಜ್ಞಾನ ಎಷ್ಟಿದೆ? ಕೇವಲ ಶಬ್ದ ಜ್ಞಾನವು ಯಥಾರ್ಥ ಜ್ಞಾನವಲ್ಲ. ಅದು ತೊಟ್ಟಿಯಲ್ಲಿ ತುಂಬಿದ ನೀರಿನಂತಿದೆ ಆದರೆ ಆತ್ಮಜ್ಞಾನ ಅನುಭವ ಬಾವಿಯಲ್ಲಿರುವ ನೀರಿನ

ಉಗಮದಂತಿದೆ. ಒಂದು ಸಾರಿ ಒಂದು ಪುಸ್ತಕದಲ್ಲಿ ಯಾವದೋ ಮನೋವೈಜ್ಞಾನಿಕ ವಿಷಯವನ್ನು ಓದಿದ್ದೆ "ಯಾವುದಾದರೂ ಮೂರ್ಖ ಹುಚ್ಚನಾದರೆ ಆತ ಹೆಚ್ಚು ಹೆಚ್ಚಾಗಿ ಬೇರೆಯವರಿಗೆ ಶಾರೀರಕ ಕಷ್ಟಗಳನ್ನು ನೀಡುತ್ತಾನೆ. ಇಲ್ಲವೇ ಸ್ವಯಂ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಆದರೆ ಜ್ಞಾನ ಮದದಲ್ಲಿ ಪ್ರಜ್ಞೆ ತಪ್ಪದ ಅಥವಾ ಬುದ್ಧಿವಂತ ಅಥವಾ ಸ್ವಾರ್ಥದಿಂದ ಹುಚ್ಚನಾದರೆ ಆತ ತನ್ನ ಸೀಮಿತ ಸಂಕುಚಿತ ಜ್ಞಾನಾಭಿಮಾನದಿಂದ ಅನೇಕ ವ್ಯಕ್ತಿಗಳಿಗೆ ಮಾರ್ಗ ಚ್ಯುತಿ ಅಥವಾ ದಾರಿ ತಪ್ಪಿಸಿ ಅವರಿಗೆ ಅಪಾರ ಹಾನಿಮಾಡುತ್ತಾನೆ" ಈ ಸಂದರ್ಭದಲ್ಲಿ ಜೈನಧರ್ಮದ ಆಗಮ ಗ್ರಂಥಗಳಲ್ಲಿ ಭಗವಾನ ಋಷಭ ದೇವರ ದೊಡ್ಡ ಮಗ ಚಕ್ರವರ್ತಿ ಭರತನ ಪುತ್ರ ಮಾರೀಚನ ಉದಾಹರಣೆ ಎಲ್ಲಕ್ಕಿಂತ ದೊಡ್ಡ ಪ್ರಮಾಣವಿದೆ. ಇದೇ ಪ್ರಕರಣದಲ್ಲಿ ಅನ್ಯ ದೃಷ್ಟಾಂತಗಳನ್ನು ಕಾಣಬಹುದು. ಜ್ಞಾನ ಮದದ ಖಂಡನೆಯಲ್ಲಿ ತೀರ್ಥೋದಯ ಕಾವ್ಯದಲ್ಲಿ ಹೀಗೆ ಬರೆಯಲಾಗಿದೆ-

**ಮಹಾವೀರರ ಸಮವಸರಣದಲಿ, ಮಾನಸ್ತಂಭ ತೋರಿತು ಜಿನಮಹಿಮೆ।**
**ಅದೃಷ್ಟಶಾಲಿ ಇಂದ್ರಭೂತಿ ಗೌತಮರು, ಜ್ಞಾನಮದ ಕರಗಿಸಿ ತೋರಿದರು ಗರಿಮೆ॥**

ಒಂಟೆಯನ್ನು ಪರ್ವತದ ಕೆಳಗೆ ತೋರಿಸಿದಾಗ, ದೊಡ್ಡ ವ್ಯಕ್ತಿತ್ವ ಬಂದಾಗ ವ್ಯಕ್ತಿಗೆ ತನ್ನ ಯೋಗ್ಯತೆಯ ಅನುಭವವಾಗುತ್ತದೆ. ಇಂದ್ರಭೂತಿ ಗೌತಮರಿಗೆ ತಮ್ಮ ಜ್ಞಾನದ ಬಗ್ಗೆ ಬಹಳ ಗರ್ವವಿದ್ದಿತು. ಅವರ ಹೆಸರು ಇಂದ್ರಭೂತಿಯಾಗಿದ್ದು ಗೋತ್ರ ಗೌತಮವಾಗಿದ್ದಿತು. ನಾನು ಎಲ್ಲರಿಗಿಂತ ದೊಡ್ಡ ಜ್ಞಾನಿಯಾಗಿದ್ದೇನೆ. ನನ್ನ 500 ಶಿಷ್ಯರಿದ್ದಾರೆ, ಎಲ್ಲ ವೇದಗಳನ್ನು ತಿಳಿದಿದ್ದೇನೆ, ನನ್ನ ಸಮಾನ ಯಾರಲ್ಲಿಯೂ ಜ್ಞಾನವಿಲ. ಪೃಥ್ವಿಯ ಮೇಲೆ ನನ್ನೊಂದಿಗೆ ಶಾಸ್ತ್ರ ಚರ್ಚೆ ಮಾಡುವವರು ಯಾರಾದರೂ ಇದ್ದಾರಾ? ಹೀಗೆ ವಿಚಾರ ಮಾಡಿದಾಗ ಅವರಿಗೆ ಯಾರು ಸಿಗುತ್ತಿರಲಿಲ್ಲ. ಆದರೆ ಒಂದು ದಿನ ಅವರ ಗರ್ವವು ಸಹ ಕರಗಿ ಹೋಯಿತು.

ಇಪ್ಪತ್ನಾಲ್ಕನೆ ತೀರ್ಥಂಕರ ಭಗವಾನ ಮಹಾವೀರರಿಗೆ ಕೇವಲ ಜ್ಞಾನವಾಗಿದ್ದಿತು. ಆ ಸಮಯದಲ್ಲಿ ಸೌಧರ್ಮ ಇಂದ್ರನಿಂದ ಸಮವಸರಣದ ರಚನೆಯಾದರೂ ಸಹ 66 ದಿನಗಳವರೆಗೆ ದಿವ್ಯ ಧ್ವನಿ ಹೊರಡಲಿಲ್ಲ. ಇಂದ್ರನಿಗೆ ಚಿಂತೆಯಾಯಿತು. ಆದರೆ ಆತ ತಿಳಿದು ಅರೇ ಹೇಗೆ ತಾನೇ ಧ್ವನಿ ಹೊರಟೀತು? ಅದನ್ನು ತಿಳಿಯಬಲ್ಲ ಪಾತ್ರ ಬೇಕಲ್ಲವೆ? ಭಗವಂತನ ವಾಣಿಯನ್ನು ಸಾಮಾನ್ಯರ್‍ಯಾರು ತಿಳಿಯಲಾರರು, ಸಿಂಹಿಣಿಯ ಹಾಲು ಸುವರ್ಣ ಪಾತ್ರೆಯಲ್ಲಿಯೇ ಕೆಡದಂತೆ ಇರಬಲ್ಲದು. ಭಗವಂತರ ಧ್ವನಿಯನ್ನು ಅರ್ಥೈಸಬಲ್ಲ ಯಾವ ಯೋಗ್ಯರು ಇಲ್ಲಿ ಕಾಣುವುದಿಲ್ಲ. ಈ ಯೋಗ್ಯತೆ ಯಾರಲ್ಲಿದೆ? ಅದು ಬಹಳ ಅಭಿಮಾನಿ ಮಿಥ್ಯಾದೃಷ್ಟಿಯಾಗಿ ಕುಳಿತಿದ್ದಾನೆ. ಆತನಿಗೆ ನನ್ನ ಸಮಾನ ದೊಡ್ಡ ಜ್ಞಾನಿಗಳು ಇಲ್ಲವೇ ಇಲ್ಲ. ಎಂಬ ಮದ ಬಂದಿದೆ. ಇಂದ್ರ ವಿಚಾರ ಮಾಡಿದ. ಆತನ ಮನ-ಗರ್ವದ ಗಲನ ಮಾಡಲು ಹೊರಟ.

ಸೌಧರ್ಮೇಂದ್ರನು ವೃದ್ಧ ಬ್ರಾಹ್ಮಣನ ವೇಷಧಾರಿಯಾಗಿ ಇಂದ್ರಭೂತಿಯ ಆಶ್ರಮದಲ್ಲಿ ಹೋಗಿ, ಹೇ ಗುರುದೇವಾ ನನಗೆ ಈ ಪ್ರಶ್ನೆಗಳಿಗೆ ಉತ್ತರ ಹೇಳಿರಿ ಎಂದು ಕೇಳಿದ. ಸಪ್ತ ತತ್ವಗಳು ಯಾವುವು? ಷಡ್ ದ್ರವ್ಯಗಳೆಂದರೇನು? ಪಂಚಾಸ್ತಿಕಾಯಗಳು ಯಾವುವು? ನವ ಪದಾರ್ಥಗಳೆಂದು ಯಾವುಗಳಿಗೆ ಹೇಳುತ್ತಾರೆ. ಕೃಪೆಯಿಟ್ಟು ಸ್ವಲ್ಪ ತಿಳಿಸಿ ಕೊಡಿ ಗುರುದೇವಾ. ಅರೇ ಈ ಶಬ್ದಗಳನ್ನು ನಾವು ಎಂದಿಗೂ ಕೇಳಿಯೇ ಇಲ್ಲ ಇವುಗಳ ಅರ್ಥವನ್ನು ಹೇಗೆ ಹೇಳಲಿ ಎಂದು ಇಂದ್ರ ಭೂತಿ ಗೌತಮ ಮನಸ್ಸಿನಲ್ಲಿ ವಿಚಾರ ಮಾಡತೊಡಗಿದ. ಬಹಳಷ್ಟು ಚಿಂತನ ಮನನ

ಮಾಡಿದ, ತಿಳಿಯದಿದ್ದಾಗ ಆ ವೃದ್ಧ ಬ್ರಾಹ್ಮಣನನ್ನೇ–ನಿನಗೆ ಯಾರು ಓದಿಸಿದ್ದಾರೆ? ಎಂದು ಕೇಳಿದ ಭಗವಾನ ಮಹಾವೀರರು ಎಂಬ ಉತ್ತರ ಬಂದಿತು. ನಡೆ ನೋಡೋಣ ಆ ಮಹಾವೀರ ಯಾರು? ನಾನು ಇವುಗಳ ಉತ್ತರಗಳನ್ನು ನಿನ್ನ ಗುರುವಿನ ಬಳಿಯಲ್ಲಿಯೇ ಹೋಗಿ ಹೇಳುವೆ. ಈ ಗರ್ವವು ಅಹಂಕಾರದ ಭೂಮಿಕೆಯಾಗಿದೆ. 500 ಶಿಷ್ಯರೊಂದಿಗೆ ಹೊರಟ ಗೌತಮ ಗೊಂದಲಕ್ಕಿಡಾದ ಮಾನದ ಭೂಮಿಕೆಯಲ್ಲಿ ಮುಂದೆ ಮುಂದೆ ಸಾಗಿದ. ಇಂದ್ರ ಇದನ್ನೇ ಬಯಸಿದ್ದ– ಇಂದ್ರ ಗೌತಮನನ್ನು ಹೇಗಾದರೂ ಸರಿ ಸಮವಸರಣಕ್ಕೆ ಕರೆದೊಯ್ಯ ಬೇಕಾಗಿದ್ದಿತು.

ಸಮವರಸರಣದ ಕಡೆಗೆ ಹೋಗುವಾಗ ಆರೂ ಋತುಗಳ ಫಲ–ಹೂ ಏಕಕಾಲದಲ್ಲಿ ಹುಟ್ಟಿರುವುದನ್ನು ಕಂಡನು. ಮಂದ, ಮಂದ ಸುಗಂಧಿತ ವಾಯು ಬೀಸುತ್ತಿದ್ದಿತು. ದುಂದುಭಿ ವಾದ್ಯ ಬಾರಿಸುತ್ತಿದ್ದಿತು. ಗಂಧೋಧಕ ವೃಷ್ಟಿ ಆಗುತ್ತಿದ್ದಿತು. ಜಯಜಯಕಾರ ಕೇಳಿ ಬರುತ್ತಿದ್ದಿತು. ಇಲ್ಲಿ ಆವಶ್ಯಕವಾಗಿ ಯಾವುದೋ ಮಹಾನ್ ಆತ್ಮ ವಿರಾಜಮಾನರಾಗಿರಬೇಕು. ಅವರನ್ನು ಸ್ವರ್ಗದ ದೇವತೆಗಳು ಮನುಷ್ಯ ಮುಂತಾದವರು ಬಂದು ಪೂಜಿಸುತ್ತಿರಬೇಕು. ಅವರ ಉಪಾಸನೆ ಮಾಡುತ್ತಿರಬೇಕು, ಅವರ ದರ್ಶನಕ್ಕೆ ಕಾತರಿಸುತ್ತಿರಬಹುದು ಎಂದು ಅವರಿಗೆ ಅನಿಸಿತು. ಹತ್ತಿರಕ್ಕೆ ಬಂದಾಗ ಸಮವಸರಣ ಬಂದಿತು, ಇಂದ್ರಭೂತಿ ಗೌತಮರು ಮಾನಸ್ತಂಭವನ್ನು ನೋಡಿದರು, ಮಾನ ಸ್ತಂಭಿತವಾಗಿ ಬಿಟ್ಟಿತು. ಚೂರು ಚೂರಾಯಿತು ಮತ್ತೂ ಆತ್ಮ ಕಲ್ಯಾಣದ ಭಾವನೆ ಜಾಗೃತವಾಗತೊಡಗಿತು. ಸಮ್ಯಕ್ತ್ವ ಪ್ರಕಟವಾಯಿತು. ಸಮವಸರಣದೊಳಗೆ ಪ್ರವೇಶ ಮಾಡಿದರು ಹಾಗೂ ನೇರವಾಗಿ ಹೋಗಿ ಪ್ರಭುವಿನ ಸಾಕ್ಷಾತ್ ದರ್ಶನ ಮಾಡಿದರು. ನಮ್ರಭೂತರಾದರು, ವಿನೀತರಾದರು ಹಾಗೂ ಕ್ಷಣಭರದ ವಿನಯವು, ಇಂದ್ರಭೂತಿ ಗೌತಮರನ್ನು ಸಕಲ ಸಂಯಮಿಯನ್ನಾಗಿ ಮಾಡಿತು, ಕ್ಷಾಯಿಕ ಸಮ್ಯಗ್ ದೃಷ್ಟಿ, ಗಣಧರ, ಮತಿ, ಶ್ರುತ, ಅವಧಿ, ಮನ ಪರ್ಯಾಯ ಈ ನಾಲ್ಕು ಜ್ಞಾನಗಳ ಧಾರಿ ಮತ್ತು 63 ಋದ್ಧಿಗಳಿಂದ ಸಂಪನ್ನನಾಗುವಂತೆ ಮಾಡಿತು. ಜ್ಞಾನವು ಚಾರಿತ್ರದ ಚರಣಗಳಿಗೆ ಬಾಗಿದರೆ ಅದು ಮೋಕ್ಷ ಮಾರ್ಗವಾಗಿ ಬಿಡುತ್ತದೆ ಎಂಬುದು ಗಮನದಲ್ಲಿರಲಿ ಹಾಗೂ ಜ್ಞಾನವು ಚಾರಿತ್ರದ ಸಮಕ್ಷ ಹಠ ಮಾಡಿದರೆ ಅಲ್ಲಿಯವರೆಗೆ ಅದು ಕುಂಟನೆನಿಸುತ್ತದೆ. ಅಹಂಕಾರ/ಮಾನಗಳಲ್ಲಿದ್ದರೆನೇ 11ನೆ ರುದ್ರನಂತೆ ಅಧೋಲೋಕದ ಅವಸ್ಥೆಯನ್ನು ಹೊಂದಬೇಕಾಗುತ್ತದೆ. ಅತಂಹ ಫಲವೇ ಸಿಗಬಲ್ಲದೆಂದು ತಿಳಿಯಿರಿ ಒಂದು ಬಾರಿ ಯಮರಾಜನು ಮುನಿಶ್ರೀಗಳಿಗೆ ಅವರ ಬಳಿ ಏನು ಜ್ಞಾನವಿದೆ ಅವರಿಗಿಂತ ಹೆಚ್ಚು ತಿಳಿದಿದ್ದೇನೆ ಎಂದು ಹೇಳಿ ಅವರ ಅಪಮಾನ ಮಾಡಿದ್ದನು. ಇಷ್ಟು ಶಬ್ದ ಮಾತ್ರದಿಂದಲೇ ಆತನ ಕ್ಷಯೋಪಶಮದ ಲೋಪವಾಯಿತು. ಆತ ಮುನಿವ್ರತ ಧಾರಣೆ ಮಾಡಿದಾಗ ಆತನಿಗೆ ಪೂರ್ಣ ಜೀವನದಲ್ಲಿ ಣಮೋಕಾರ ಮಂತ್ರ ಸ್ಮರಣೆಗೆ ಬರಲಿಲ್ಲ ಮುಂದೆ ಸ್ಮರಣೆಗೆ ಬಂದಾಗ ಕೇವಲ ಜ್ಞಾನ ಪಡೆದು ಸಂಪೂರ್ಣ ಜ್ಞಾನರೂಪದ ಅನಂತ ಜ್ಞಾನವನ್ನು ಪಡೆದಿದ್ದನು.

ಇಂದ್ರಭೂತಿ ಗೌತಮರು ಭಗವಾನ ಮಹಾವೀರ ಸ್ವಾಮಿಯ ಪ್ರಥಮ ಗಣಧರರಾದರು ಅವರು ಪ್ರಭುವನ್ನು ಭೇಟಿಯಾದ ದಿನ ಅವರಿಗೆ ಜಗತ್ತಿನ ಗುರು ದೊರೆತಿದ್ದರು ಹಾಗೂ ಅವರ ನಿಮಿತ್ತದಿಂದ ಪ್ರಭುವಿನ ವಾಣಿ ಹೊರಟಿತು ಈ ಜಗತ್ತಿಗೂ ಸಹ ಒಬ್ಬ ಗುರು ದೊರೆತರು ಈ ಕಾರಣ ಆ ದಿನವನ್ನು 'ಗುರು ಪೂರ್ಣಿಮಾ' ಎಂದು ಹೇಳುತ್ತಾರೆ ಹಾಗೂ ಮುಂದಿನ ದಿನ ದಿವ್ಯ ಧ್ವನಿಯ ಮೂಲಕ ಭಕ್ತರಿಗೆ ಜ್ಞಾನ ದೊರಕಿತು. ಆ ದಿನ ಶ್ರಾವಣ ಕೃಷ್ಣ ಪಕ್ಷದ ಪ್ರತಿಪದೆಯಾಗಿದ್ದಿತು. ಅದು 'ವೀರ ಶಾಸನ ಜಯಂತಿ' ಹೆಸರಿನಿಂದ ಪ್ರಸಿದ್ಧಿ ಪಡೆಯಿತು.

**ಪೂಜಾಮದ–** ಪೂಜೆ–ಪ್ರತಿಷ್ಠೆಯದು ತನ್ನದೇ ಆದ ಆವೇಶದಿಂದ ಕೂಡಿದ ನಶೆಯಾಗಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ಹೆಚ್ಚೆಚ್ಚು ಮಾನ, ಸನ್ಮಾನ, ಪದವಿ, ಪ್ರತಿಷ್ಠೆಗಳ ಬಯಕೆಯಲ್ಲಿ ತೊಡಗಿರುತ್ತಾನೆ. ಜನಪ್ರಿಯತೆ, ಪ್ರಮಾಣ ಪತ್ರ, ಮಾನಪತ್ರ, ಶಿಲಾ ಫಲಕಗಳ ಹಿಂದೆ ಬಿದ್ದಿರುತ್ತದೆ. ನಾನು ಒಡೆಯ, ನಾನು ದೊರೆ. ನಾನು ಪ್ರಭು, ನಾನು ಮಾಲೀಕ, ಸೇವಕ, ಮಂತ್ರಿ, ರಾಜಾ. ನನ್ನ ಬಳಿ ಎಲ್ಲರೂ ನನ್ನ ಆಜ್ಞೆಯಲ್ಲಿರುವಷ್ಟು ಸಂಪತ್ತು ಇದೆ, ನನಗಿಂತ ದೊಡ್ಡವರು ಯಾರೂ ಇಲ್ಲ ನಾನು ಭಾರಿ ದೊಡ್ಡವನು. ಎಲ್ಲ ಜನರು ನನ್ನನ್ನು ಪೂಜಿಸುತ್ತಾರೆ–ಯಾಕೆಂದರೆ ನಾನು ಬಹಳ ದೊಡ್ಡ ತಪಸ್ವಿಯಾಗಿದ್ದೇನೆ. ಎಲ್ಲರೂ ನನ್ನ ಗುಣಗಾನ ಮಾಡುತ್ತಾರೆ, ಸನ್ಮಾನಿಸುತ್ತಾರೆ, ಹೀಗೆ ಮಾನ ಪಡುವವರು ಪೂಜಾ ಮದವನ್ನು ಹೊಂದಿದವರಾಗಿದ್ದಾರೆ. ತೀರ್ಥೋದಯ ಕಾವ್ಯದಲ್ಲಿ ಹೀಗೆ ಬರೆಯಲಾಗಿದೆ–

**ವಾಲಿಯೊಂದಿಗೆ ಪೂಜಾ ಮದದಿ ರಾವಣ ಎತ್ತಿದ ಪರ್ವತವವಾಲಿಯೊಂದಿನ**
**ಮದದಿಂದಾಗಿ, ನಾಶವಾಯಿತು ಧರ್ಮ ರಕ್ಷಣೆಯು॥36॥**

ರಾವಣನಿಗೆ ಬಹಳ ಅಭಿಮಾನವಿದ್ದಿತು. ನಾನು ತ್ರಿಖಂಡಾಧಿಪತಿ ಲಂಕೇಶ ವಿದ್ಯಾಧರ, ನನ್ನ ಲಂಕೆಯು ಚಿನ್ನದಿಂದ ಮಾಡಿದ್ದಾಗಿದೆ, ಅದರ ಮೇಲೆ ಕೋಟೆ ನಿರ್ಮಿಸಿದ್ದೇನೆ, ಅದರಲ್ಲಿ ಯಾರೂ ಪ್ರವೇಶ ಮಾಡಲಾರರು, ನನ್ನ ಬಳಿ ರಾಜ್ಯವಿದೆ, 1008 ವಿದ್ಯೆಗಳಿವೆ, ಯಾರೂ ನನ್ನನ್ನೂ ಏನೂ ಮಾಡಲಾರರು. ಆತನಿಗೆ ತನ್ನ ಪೂಜೆಯ, ತನ್ನ ಐಶ್ವರ್ಯದ ಬಹಳ ಅಭಿಮಾನವಿದ್ದಿತು. ಎಲ್ಲ ಜನರಿಂದ ನಾನು ಪೂಜಿತನಾಗಿದ್ದೇನೆ. ನನ್ನ ಪ್ರಜೆಗಳು ನನಗೆ ನಮಸ್ಕರಿಸುತ್ತಾರೆ. ರಾವಣನ ರಾಜ್ಯದಲ್ಲಿ ವಾಲಿಯ ರಾಜ್ಯವು ಇದ್ದಿತು. ಆತ ಸಮ್ಯಗ್ ದರ್ಶನದ ಪಾಲಕನಾಗಿದ್ದನು. ಆತನದು ಜಿನದರ್ಶನದ ಪ್ರತಿಜ್ಞೆ ಇದ್ದಿತು. ಒಂದು ದಿನ ರಾವಣನಿಗೆ ವಾಲಿಯು ತನಗೆ ನಮಸ್ಕರಿಸುವುದಿಲ್ಲವೆಂದು ತಿಳಿಯಿತು ಆತನು ವಾಲಿ ರಾಜನನ್ನು ತನ್ನ ಆಸ್ಥಾನಕ್ಕೆ ಕರೆಸಿದ ಹಾಗೂ ನಮಸ್ಕರಿಸಲು ಹೇಳಿದ. ವಾಲಿರಾಜನಿಗೆ ಈ ಮೊದಲೇ ಸಂದೇಹವಿದ್ದಿತು. ಆದ್ದರಿಂದ ಆತ ತನ್ನ ಕೈ ಬೆರಳಿನಲ್ಲಿ ಜಿನಮುದ್ರೆಯ ಉಂಗುರ ಧರಿಸಿದ್ದನು. ಅದನ್ನು ನೋಡಿ ಆತ ನಮಸ್ಕರಿಸಿದನು. ಆ ನಂತರ ಆಸ್ಥಾನದಿಂದ ತನ್ನ ಮನೆಗೆ ಬಂದನು.

ಮನೆಗೆ ಬಂದ ವಾಲಿರಾಜನು–ನಾನು ಈ ರಾಜ್ಯದಲ್ಲಿದ್ದರೆ ನನ್ನ ಜಿನದರ್ಶನದ ಪ್ರತಿಜ್ಞೆ ರಾವಣನಿಗೆ ಗೊತ್ತಾದರೆ ತಾನು ಸರಾಗ ಅವಸ್ಥೆಯಲ್ಲಿ ಸುರಕ್ಷಿತನಾಗಿರಲು ಸಾಧ್ಯವಿಲ್ಲವೆಂದು ಯೋಚಿಸಿದನು. ಆದ್ದರಿಂದ ಆತನು ವೀತರಾಗಿ ನಿರ್ಗ್ರಂಥ ಮುನಿಯ ಮಾರ್ಗವನ್ನು ಅನುಸರಿಸಿ ಪರ್ವತದ ಮೇಲೆ ಧ್ಯಾನದಲ್ಲಿ ಲೀನನಾದ. ಅಲ್ಲಿ ಜಿನಾಲಯವು ಇದ್ದಿತು. ಆತ ಧರ್ಮ ಮತ್ತು ಜಿನಾಲಯದ ರಕ್ಷಣೆ ಮಾಡಬೇಕೆಂದು ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡಿದ್ದನು. ಒಂದು ದಿನ ರಾವಣನು ಆಕಾಶಮಾರ್ಗದಿಂದ ಆ ಜಿನಾಲಯದ ಸಮೀಪದಿಂದ ಹೋಗುತ್ತಿದ್ದನು. ಆಕಸ್ಮಿಕವಾಗಿ ಆತನ ವಿಮಾನ ಸ್ಥಗಿತಗೊಂಡಿತು. ಎಲ್ಲಿ ಪೂಜ್ಯರು ಸಜ್ಜನರು ಅಥವಾ ಶತ್ರುಗಳಿರುತ್ತಾರೋ ಅಲ್ಲಿಯೇ ವಿಮಾನ ನಿಲ್ಲುತ್ತದೆ ಎಂದು ಚಿಂತಿಸಿದನು. ಆತ ವಿಮಾನದಿಂದ ಇಳಿದು ಕೆಳಗೆ ಬಂದು ನೋಡಿದಾಗ ಎದುರಿಗೆ ವಾಲಿ ಮುನಿರಾಜರು ಧ್ಯಾನದಲ್ಲಿ ಲೀನರಾಗಿದ್ದರು. ಮುನಿರಾಜರನ್ನು ನೋಡಿದ ರಾವಣನು ಅವರನ್ನು ಶತ್ರು ಸಮಾನರೆಂದು ಭಾವಿಸಿ ರೋಷದಿಂದ ಕೂಡಿ ಅದೇ ರೋಷದಲ್ಲಿ ಬಂದು ಆತ ಪರ್ವತವನ್ನು ಎತ್ತಿದನು.

ಜಿನಾಲಯಗಳ ರಕ್ಷಣೆಗಾಗಿ ವಾಲಿ ಮುನಿರಾಜರು ಆ ಪರ್ವತವನ್ನು ತಮ್ಮ ಕಾಲಿನ ಹೆಬ್ಬೆರಳಿನಿಂದ ಸ್ವಲ್ಪ ಮಾತ್ರ ಒತ್ತಿದ್ದರಿಂದ ಅದರಿಂದ ರಾವಣನು ಅತ್ತನೂ ಮತ್ತು ಆತನ ಮದ ಖಂಡಿತವಾಗಿದ್ದಿತು. ಈ ಕಾರಣದಿಂದಲೇ ಆತನ ಹೆಸರು ರಾವಣ ಎಂದಾಗಿದ್ದಿತು. ಧರ್ಮಭಾವನಾ ಶತಕದಲ್ಲಿ ಹೀಗೆ ಹೇಳಿದೆ–

**ಮಾನಿ ರಾವಣನು ಧ್ಯಾನಿ ಮುನಿ ವಾಲಿಗೆ ಮಾಡಿದ ಉಪಸರ್ಗ**
**ಸಾಧೂ ಒತ್ತಿದ ಹೆಬ್ಬೆಟ್ಟು, ಆತ ಮಾಡಿದ ಹಾಹಾಕಾರ**
**ಆತ ಬಾಗಿದ ಸಾಧು ಚರಣಕೆ, ಆತ್ಮನಿಂದ ಹೊರಟಿತು**
**ಮಾನಮಾನ ಕರಗದೇ ಸಿಗದು ಧರ್ಮ, ಚೆನ್ನಾಗಿ ಯೋಚಿಸು ಇದೇ ಅದರ ಮರ್ಮ॥**

**ಕುಲಮದ**–ತಂದೆಯ ವಂಶಕ್ಕೆ ಕುಲವೆನ್ನುತ್ತಾರೆ. ತನ್ನ ತಂದೆಯ ಪರಂಪರೆಯೇ ಶ್ರೇಷ್ಠವೆಂದು ಭಾವಿಸುವುದು ಅದರ ಬಗ್ಗೆ ಅಹಂಕಾರ ಪಡುವುದು ಕುಲಮದವಾಗಿದೆ. ನನ್ನ ಕುಲ ದೊಡ್ಡದು. ಎತ್ತರವಾದದ್ದು–ಶ್ರೇಷ್ಠವಿದೆ. ನಾನು ಪ್ರಸಿದ್ಧವಾದ, ವಿಶಾಲವಾದ, ಉನ್ನತ ಕುಲದಲ್ಲಿ ಉತ್ಪನ್ನನಾಗಿದ್ದೇನೆ, ನನ್ನ ಸಮಾನ ಅನ್ಯರ ಕುಲವಿಲ್ಲವೆಂದು ವಿಚಾರ ಮಾಡುತ್ತಾ ಮದ ಪಡುವುದು, ತನ್ನ ತಲೆ ಎತ್ತಿ ನಡೆಯುವುದು. ಯಾರನ್ನೂ ಏನೂ ತಿಳಿಯದೇ ಇರುವುದು ಎಲ್ಲರನ್ನು ಕೀಳಾಗಿ ತಿಳಿಯುವುದು, ಗರ್ವಿತನಾಗಿ ಬೇರೆಯವರ ಅಪಮಾನ ಮಾಡುವುದು ಹಾಗೂ ದೊಡ್ಡವರಿಗೆ ಅವಿನಯ ತೋರುವುದು ಕುಲಮದವಾಗಿದೆ. ವ್ಯಕ್ತಿ ಜನ್ಮದಿಂದ ಮಹಾನ್ ಆಗದೇ ಕರ್ಮದಿಂದಾಗುತ್ತಾನೆ. ಕುಲದಿಂದಲ್ಲ ಕುಲಾಚಾರದ ಪರಂಪರೆಯಿಂದ ಮಹಾನ್ ಆಗುತ್ತಾನೆ. ಇಂದು ಉಚ್ಚ ಕುಲವನ್ನು ಪಡೆದು ಅಭಿಮಾನದಿಂದ ಬೇರೆಯವರನ್ನು ತುಚ್ಛರೆಂದು ತಿಳಿಯುತ್ತಿದ್ದರೆ. ಇದು ಮಹಾನ್ ತಪ್ಪು ಮಾಡುತ್ತಿದ್ದಿರಾ. ನಾಳೆ ನಿಮ್ಮ ಜೀವನವು ಸಹ ತುಚ್ಛವಾಗಬಲ್ಲದು. ಆಗಮಗಳಲ್ಲಿ ಒಂದು ನಿಗೋಧದ ಪ್ರಾಣಿ ಸಹ ಮನುಷ್ಯನಾದರೆ ತನ್ನ ಸಾಧನೆಯ ಬಲದಿಂದ ಅದೇ ಭವದಲ್ಲಿ ಮೋಕ್ಷಕ್ಕೆ ಹೋಗಬಲ್ಲದೆಂದು ಹೇಳಲಾಗಿದೆ. ಉಚ್ಚ ಕುಲೀನ ಮನುಷ್ಯನು ಸಹ ಕರ್ಮೋದಯದ ವಶದಿಂದ ಹೀನ ಕುಲದಲ್ಲಿ ಉತ್ಪನ್ನನಾಗಿ ಬಿಡುತ್ತಾನೆ. ಸ್ವರ್ಗದ ಋದ್ಧಿಧಾರಕ ದೇವನು ಸಹ ಚಾಂಡಾಲನಾಗ ಬಲ್ಲನು. ರಾಜನು ಸತ್ತ ಕೀಡೆಯಾಗಿ ಬಿಡುತ್ತಾನೆ ಹಾಗು ಕೀಡೆಯು ಸತ್ತು ರಾಜನಾಗಬಲ್ಲದು. ಮುಂದಿನ ಜೀವನದಲ್ಲಿ ಯಾವ ಪರ್ಯಾಯ ಸಿಗುವುದೋ ಗೊತ್ತಿಲ್ಲ. ಬಹಳ ಪುಣ್ಯೋದಯದಿಂದ ಉತ್ತಮ ಕುಲ ಪಡೆದಿದ್ದಿರಾ ಸಂಯಮ–ಶೀಲವ್ರತಗಳಿಂದ ಅದನ್ನು ಸಫಲ ಮಾಡಿಕೊಳ್ಳಬೇಕು. ಸಾಧನೆಯಲ್ಲಿ ಕುಲವೂ ಸಹಕಾರಿಯಾಗಿದೆ. ಆದ್ದರಿಂದ ಶಾಸ್ತ್ರಗಳಲ್ಲಿ– 'ದೇಶ, ಕುಲ ಜಾಇ ಶುದ್ಧಾ' ಎಂದು ಹೇಳಿದ್ದಾರೆ. ಅರ್ಥಾತ್ ಧರ್ಮಚಾರ್ಯರು ದೇಶ, ಕುಲ ಮತ್ತು ಜಾತಿಗಳಿಂದ ಪರಿಶುದ್ಧರಾಗಿರುತ್ತಾರೆ.

ಆತ್ಮನಿಗೆ ಯಾರೂ ಸಹೋದರರಿಲ್ಲ, ಯಾರು ತಂದೆ ಇಲ್ಲ ಹಾಗೂ ಕುಟುಂಬವೂ ಇಲ್ಲ ಆದ್ದರಿಂದ ಆತ್ಮನು ಉತ್ಥಾನ(ಏಳ್ಗೆ)ದ ವಿಚಾರವನ್ನು ಮಾಡುತ್ತಾ ಕುಲಮದವನ್ನು ಮಾಡಬಾರದು. ಕುಲಮದ ಹೊಂದುವುದರಿಂದ ಏನಾಗುತ್ತದೆ ಎಂಬುದನ್ನು ತೀರ್ಥೋದಯ ಕಾವ್ಯದಲ್ಲಿ ಬರೆಯಲಾಗಿದೆ–

**ಜರಾಸಂಧಸುತ ಕಾಲಯವನನು, ತುಂಬಿದ್ದ ಕುಲಮದದಿಂದ**
**ಶ್ರೀಕೃಷ್ಣನಿಂದ ಯುದ್ಧ ಮಾರ್ಗದಲಿ ಸೋಲನಪ್ಪಿತು ಆತನ ಕುಲಮದವು ॥137॥**

ಜರಾಸಂಧನ ಮಗ ಕಾಲಯವನ ಕಾಲ ಮದದಿಂದ ತುಂಬಿದ್ದ, ಶ್ರೀಕೃಷ್ಣ ನಾರಾಯಣನಿಂದ ಆತ ಯುದ್ಧದಲ್ಲಿ ಪರಾಜಿತನಾದಾಗ ಆತನ ಕುಲಮದ ನಾಶವಾಯಿತು.

**ಜಾತಿ ಮದ**–ಕೆಲವರಿಗೆ ಜಾತಿ ಮದವು ಬಂದು ಬಿಡುತ್ತದೆ. ತನ್ನ ಅಜ್ಜ ಮಾಮಾ ಇವರುಗಳ ವೈಭವ ಸಂಪನ್ನತೆ ಕಂಡು ಅವುಗಳ ಅಭಿಮಾನ ಪಡುವುದು, ತಾಯಿಯ ಪರಿವಾರದ ಬಗ್ಗೆ ಅಭಿಮಾನ ತಾಳುವುದು, ವಿಭೂತಿ, ಪ್ರಸಿದ್ಧಿ ಬಂದಿರುವುದನ್ನು –ನನ್ನ ತಾಯಿ ಬಹಳ ದೊಡ್ಡ ಮನೆಯ ಮಗಳು. ನಾನು ಉಚ್ಚ ಜಾತಿಯಲ್ಲಿ ಜನ್ಮ ಪಡೆದಿದ್ದೇನೆ, ನನ್ನ ಸಮಾನ ಯಾರೂ ಇರಲಾರರು ಎಂದು ಹೇಳುತ್ತಾ ಅನ್ಯ ವ್ಯಕ್ತಿಗಳ ಅಪಮಾನ ಮಾಡುವುದು ಜಾತಿ ಮದದಿಂದ ಮಾಡುವ ತಿರಸ್ಕಾರವಾಗಿದೆ. ತಮ್ಮ ಜಾತಿಯ ಬಗ್ಗೆ ಅಭಿಮಾನ ಪಡುವವರು ನೀಚ ಗೋತ್ರಕ್ಕೆ ಪಾತ್ರರಾಗುತ್ತಾರೆ. ತಮ್ಮ ಜಾತಿ–ಅರ್ಥಾತ್ ಮಾತೃ ಪಕ್ಷದ ಮಾನ ಮಾಡಬಾರದು. ಈ ಜಾತಿಯು ಕರ್ಮೋದಯದಿಂದ ಪ್ರಾಪ್ತವಾಗಿದೆ. ಈ ಜೀವವು ಮನುಷ್ಯಭವದಲ್ಲಿ ಅನೇಕ ಜಾತಿಗಳನ್ನು ಪಡೆದಿದ್ದಾನೆ. ಚಾಂಡಾಲ, ಶಾಬರಿ, ಮಲೀನಿ, ದಾಸೀ, ಘೀವರಿ ಮುಂತಾದ ಜಾತಿಗಳನ್ನು ಅನುಭವಿಸಿದ್ದಾನೆ ಪದ್ಮ ಪುರಾಣದಲ್ಲಿ ಆಚಾರ್ಯರು ಹೀಗೆ ಬರೆದಿದ್ದಾರೆ–

**ನ ಜಾತಿ ಗರ್ಹಿತಾ ಕಶ್ಚಿದ್ ಗುಣಾ ಕಲ್ಯಾಣ ಕಾರಣಮ್।**
**ವ್ರತಸ್ಥಮಪಿ ಚಾಂಡಾಲಂ ತಂ ದೇವಾ ಬ್ರಾಹ್ಮಣಂ ವಿದುಃ ॥**

ಅರ್ಥಾತ್ ಯಾವ ಜಾತಿಯು ನಿಂದನೀಯವಲ್ಲ. ಗುಣವು ಕಲ್ಯಾಣಕ್ಕೆ ಕಾರಣವಾಗಿದೆ. ಚಾಂಡಾಲನು ಸಹ ವ್ರತ ಧಾರಣೆ ಮಾಡಿದಾಗ ಯಾವುದೋ ಕಾಲದಲ್ಲಿ ಬ್ರಾಹ್ಮಣನಾಗಬಲ್ಲ. ಲವಣಾರ್ಣವ ಮಧು–ಸುಂದರರ ಮಗ ಜಾತಿಯ ಮದದಿಂದ ಕೂಡಿದ್ದನೆಂದು ಪದ್ಮ ಪುರಾಣದಲ್ಲಿ ಹೇಳಿದೆ. ಕೃತಾಂತ ವಕ್ರ ಸೇನಾಪತಿಯು ಆತನನ್ನು ಮದದಿಂದ ಚೂರ್ಣಗೊಳಿಸಿದ್ದನು ತೀರ್ಥೋದಯ ಕಾವ್ಯದಲ್ಲಿಯೂ ಹೀಗೆ ಬರೆದಿದೆ–

**ಲವಣಾರ್ಣವ–ಮಧು ಸುಂದರರ ಮಗ ಜಾತಿ ಮದದಿಂದ ಪೂರ್ಣನು**
**ಕೃತಾಂತ ವಕ್ರನು ಆತನ ಸೋಲಿಸಿ ಇಲ್ಲದ ಹಾಗೇ ಮಾಡಿದ ಮದ ಸಂಪೂರ್ಣ ॥137॥**

**ಬಲಮದ**–ತನ್ನ ಶರೀರದ ಶಕ್ತಿಯ ಅಭಿಮಾನ ಪಡುವುದು ಬಲಮದವಾಗಿದೆ. ಸ್ವಲ್ಪ ಒಳ್ಳೆಯ ಶರೀರ ದಷ್ಟ–ಪುಷ್ಟವಾದರೆ, ಸ್ವಲ್ಪ ಶಕ್ತಿ ಬಂದು ಬಿಟ್ಟರೆ ವ್ಯಕ್ತಿ ಅಭಿಮಾನದಿಂದ ತುಂಬಿ ಹೋಗುತ್ತಾನೆ. ತನ್ನ ಸಮಾನರು ಯಾರು ಇಲ್ಲವೇ ಇಲ್ಲ. ತನಗಿಂತ ಬಲವಂತರು ಯಾರೂ ಇಲ್ಲವೆಂದು ಭಾವಿಸುತ್ತಾನೆ. ಬಾಹುವಿನ ಬಲ ತೋರಿಸಿ ಬದುಕುತ್ತಾರೋ, ಹುಬ್ಬೇರಿಸುತ್ತಾರೊ. ಇವರಿಗೆ ನಾನೊಬ್ಬನೇ ಸಾಕು, ನಮ್ಮೆದುರು ಯಾರಾದರೂ ಹೇಗೆ ಇರಬಲ್ಲರು, ಇಂತಹವರು ಬಲಮದದ ಧಾರಿಗಳು ವ್ಯಕ್ತಿಯ ಬಳಿ ಸೈನ್ಯ, ಅಸ್ತ್ರ–ಶಸ್ತ್ರ, ಶಾರೀರಿಕ ಶಕ್ತಿ ಮುಂತಾದ ಯಾವುದೇ ಪ್ರಕಾರದ್ದೆನಿದೆ ಅದರ ಮದವನ್ನು ತೋರಿಸುತ್ತಾನೆ. ಆದರೆ ಸ್ವಲ್ಪ ವಿಚಾರ ಮಾಡಿ ನಾರಾಯಣ, ಚಕ್ರವರ್ತಿಗಳಂತಹವರು ಬಲವಿಲ್ಲದೆಯೇ ಅವರು ಕೋಟಿ ಶಿಲೆಯನ್ನು ಎತ್ತಿದ್ದರು. ಯಾರೊಳಗೆ ಪರಾಕ್ರಮವಿದೆ. ಅವರು ನಾಲ್ಕಾರು ದಿನ ಅಸ್ವಸ್ಥರಾದರೆ ಎಲ್ಲ ಬಲ ಉಡುಗಿ ಹೋಗುತ್ತದೆ, ತನ್ನ ಬಲದಿಂದ ನಿಲ್ಲಲು ಆಗಲಾರದು. ಒಂದು ಚಿಕ್ಕ ಕಣ ಕಣ್ಣಲ್ಲಿ ಹೋದರೆ ಅದು ಸಹಾ ಆತನನ್ನು ಸುಸ್ತು ಮಾಡಿ ಬಿಡುತ್ತದೆ.

ದೊಡ್ಡ-ದೊಡ್ಡ ಬಾಹುಬಲಿಗಳು ಸಹ ಕಾಲಬಲಿಯ ಮುಂದೆ ಸೋಲುತ್ತಾರೆ ಕಾಲ ಬಲಿಯು ಎಲ್ಲಕ್ಕಿಂತ ದೊಡ್ಡ ಬಲಿಯಾಗಿದ್ದಾನೆ. ಶಕ್ತಿಯ ಅಭಿಮಾನ ಪಡುವವನು ರಾವಣ ಕಂಸರಾಗಿರಬಹುದು. ಆದಿನಾಥರ ಪುತ್ರ ಭರತರಾಗಿರಬಹುದು. ಶಕ್ತಿಯ ಅಭಿಮಾನಪಟ್ಟವರು ನೆಲಕಚ್ಚಿದರು. ಭರತ ಎಷ್ಟೊಂದು ಸಂಘರ್ಷ ಮಾಡಿದ, ಸಾಹಸ ಮಾಡಿದ ಆದರೆ ಆತ ಬಾಹುಬಲಿಯ ಮೇಲೆ ವಿಜಯ ಪಡೆಯಲು ಆಗಲಿಲ್ಲ. ತೀರ್ಥಂಕರ, ಚಕ್ರವರ್ತಿ ಹಾಗೂ ಮಹರ್ಷಿಗಳಿಗೆ ಅಪರಿಮಿತವಾದ ಬಲವಿರುತ್ತದೆ. ಇವರ ಮಹಾಬಲವನ್ನು ತಿಳಿದು ನಮ್ಮ ಬಲದ ಬಗ್ಗೆ ಮದ ಪಡಬಾರದು. ತೀರ್ಥೋದಯ ಕಾವ್ಯದಲ್ಲಿ ಹೀಗೆ ಬರೆದಿದ್ದಾರೆ-

**ಬಾಹುಬಲಿಯಿಂದ ಭರತ ಭ್ರಾತನ ಬಲ ಮದದ ನಷ್ಟವಾಯಿತು.**
**ಚಕ್ರರತ್ನ ಸಹ ಸೋತು ಬಿಟ್ಟಿತು. ಅನುಜಗೆ ಆಗಲಿಲ್ಲ ಏನೂ ಕಷ್ಟ ॥138॥**

ಬಲದ ಮದ ಮಾಡಿದ ಭರತ ಚಕ್ರವರ್ತಿ ಬಾಹುಬಲಿಯ ಸಹೋದರನಾಗಿದ್ದನು. ಆತ ವಿಜಯಾರ್ಧ ಪರ್ವತದ ಮೇಲೆ ವೃಷಭಗಿರಿ ಪರ್ವತದಲ್ಲಿ ತನ್ನ ಪ್ರಶಸ್ತಿ ಬರೆದ. ಅದಕ್ಕಾಗಿ ಆತ ಗರ್ವಪಟ್ಟ. ಆರು ಖಂಡಗಳ ರಾಜ್ಯದಲ್ಲಿ ಎಲ್ಲಿಯೂ ಏನೂ ಕಡಿಮೆಯಾಗದಿರಲಿ. ಆದ್ದರಿಂದ ಆತ ಬಲವನ್ನು ಪ್ರಯೋಗಿಸಿದ, ಆತನ ಬಲದ ಮುಂದೆ ಅನೇಕ ರಾಜರು ಸಮರ್ಪಣೆ ಮಾಡಿದರು. ಆದರೆ ಆತ ತನ್ನ ಸಹೋದರ ಬಾಹುಬಲಿಗೆ ಸಾಮ್ರಾಟನ ಆಜ್ಞೆಯ ಮೇರೆಗೆ ಕರೆಸಿದರೆ ಬಾಹುಬಲಿ ಹಾಗೇ ಬರಲಿಲ್ಲ. ಆತ ವಿಚಾರ ಮಾಡಿದ. ಸಹೋದರ ಭರತ ರಾಜರ ರಾಜನಾಗಿರಬಹುದು. ಆದರೆ ಆತ ನನಗೆ ಸಹೋದರ. ಸಾಮ್ರಾಟನಲ್ಲ ಸಹೋದರನೆಂದು ಕರೆದಿದ್ದರೆ ನಾನು ಸಹೋದರ ತಮ್ಮನಾದ ಕಾರಣ ಆತನ ಚರಣಗಳಲ್ಲಿ ಹೋಗುತ್ತಿದ್ದೆ ಆದರೆ ಸಹೋದರ ಅಣ್ಣ ಒಬ್ಬ ಸಾಮ್ರಾಟನ ಅಧಿಕಾರದಿಂದ ಆಜ್ಞೆ ನೀಡಿದ್ದಾನೆ. ನಾನು ಯುದ್ಧ ಕ್ಷೇತ್ರದಲ್ಲಿ ಬರುತ್ತೇನೆ ಹಾಗೂ ಯುದ್ಧ ಮಾಡಿದ ಇಬ್ಬರೂ ಚರಮ ಶರೀರಿಗಳಾಗಿದ್ದರು. ಸೋಲುವ ಪ್ರಶ್ನೆಯೇ ಇಲ್ಲ. ಬಾಹುಬಲಿಯ ಪುಣ್ಯವು ಇಬ್ಬರಲ್ಲಿಯೂ ದೃಷ್ಟಿಯುದ್ಧಗಳಲ್ಲಿ ಭರತ ಚಕ್ರವರ್ತಿ ಕೊನೆಯಲ್ಲಿ ಸೋತು ಹೋದ. ಆತನ ಮನ ಚೂರು-ಚೂರಾಯಿತು. ಆವೇಶದಲ್ಲಿ ಬಂದು ಭರತನು ಬಾಹುಬಲಿಯ ಮೇಲೆ ಚಕ್ರವನ್ನು ಪ್ರಯೋಗಿಸಿದ. ಚಕ್ರವು ಬಾಹುಬಲಿಯ ಮೂರು ಪ್ರದಕ್ಷಿಣೆ ಹಾಕಿ ಅಲ್ಲಿಯೇ ನಿಂತು ಬಿಟ್ಟಿತು, ಚಕ್ರವು ತನ್ನ ಪರಿವಾರದವರ ಮೇಲೆ ಕಾರ್ಯ ಮಾಡದು ಎನ್ನುವುದನ್ನು ಭರತ ಮರೆತು ಬಿಟ್ಟಿದ್ದ ಹಾಗೂ ತದ್ಭವ ಮೋಕ್ಷಗಾಮಿಯ ಮೇಲೆ ಹೇಗೆ ತಾನೆ ಆಕ್ರಮಣ ಮಾಡೀತು? ಈಗ ಭರತ ತನ್ನ ದೃಷ್ಟಿಯನ್ನು ಕೆಲಗಡೆ ಮಾಡಿ ನಿಂತು ಬಿಟ್ಟ. ತಾನು ಚಕ್ರವರ್ತಿ ಎಂದು ಹೇಗೆ ಹೇಳಿಕೊಳ್ಳುವುದು. ಚಕ್ರರತ್ನ ಬಾಹುಬಲಿ ಬಳಿ ಹೋಗಿದ್ದಿತು. ಹೇಳುವುದರ ತಾತ್ಪರ್ಯವೆಂದರೆ ತನ್ನ ಶರೀರ ಬಲ, ಅಧಿಕಾರ ಬಲ, ಸಂಪತ್ತಿನ ಬಲಗಳಿಂದ ನನ್ನ ಆಜ್ಞೆಯಲ್ಲಿ ಇಷ್ಟೊಂದು ಜನರಿದ್ದಾರೆಂದು ಗರ್ವ ಪಟ್ಟವರ ಗರ್ವ ಈ ಜಗತ್ತಿನಲ್ಲಿ ಇಲ್ಲದಂತಾಯಿತು. ಆತ ಚಾವುಂಡರಾಯನಿರಬಹುದು, ಕೌರವರಾಗಿರಬಹುದು, ಭೀಷ್ಮ, ದ್ರೋಣಾಚಾರ್ಯರಿರಬಹುದು, ನೆಪೋಲಿಯನ್ ಬೋನಾಪಾರ್ಟೆ ಅಥವಾ ಹಿಟ್ಲರ್ ಮುಂತಾದವರಿರಬಹುದು ಅಹಂಕಾರ/ಮಾನ ಯಾರಲ್ಲಿ ಇಲ್ಲವೋ, ಅದು ಯಾವಾಗ ಕುಸಿದು ಹೋಗಬಹುದೋ ಹೇಳಲಾಗದು. ಈ ಮಾನ ಕಷಾಯ ಕಾಮನ ಬಿಲ್ಲಿಗೆ ಸಮಾನವಾಗಿದೆ, ಸ್ವಲ್ಪ ಹಣ ಗಳಿಸಿದರು, ಸ್ವಲ್ಪ ಅಧಿಕಾರ ಪಡೆದರು ಆ ಶಕ್ತಿಗಳ ಉಪಯೋಗ ಸೇವೆ, ಸಹಯೋಗ ಹಾಗೂ ಸಂರಕ್ಷಣೆಯಲ್ಲಿ ಆಗಬೇಕು ಅವುಗಳನ್ನು ಬೇರೆಯವರಿಗೆ ಕಷ್ಟಕೊಡಲು

ಅಥವಾ ಅಪಮಾನ ಕೊಡಲು ಉಪಯೋಗಿಸಿದರೆ ಇನ್ನೂ ಪಾಪ ಹೆಚ್ಚಾಗುವಲ್ಲಿ ಸ್ವಯಿಂದ ಅಹಿತವಾಗುತ್ತದೆ.

ನೋಡಿ ಈ ಜಗತ್ತು ಸಂಪತ್ತಿನ ಹಿಂದೆ, ವೈಭವದ ಬೆನ್ನತ್ತಿ ತನ್ನ ಸಹೋದರನನ್ನು ಬಿಡುವುದಿಲ್ಲ ಎಲ್ಲರನ್ನೂ ಕೊನೆಗೊಳಿಸಲು ಸಿದ್ಧವಾಗುತ್ತದೆ. ಧಿಕ್ಕಾರವಿರಲಿ ಈ ಸಂಸಾರಕ್ಕೆ ಈ ಶರೀರಕ್ಕೆ; ಹೀಗೆ ವಿಚಾರ ಮಾಡಿದ ಬಾಹುಬಲಿಗೆ ವೈರಾಗ್ಯ ಬಂದಿತು. ಆತ ಕೂಡಲೇ ವೈಭವವನ್ನು ಬಿಟ್ಟು ಮುನಿ ದೀಕ್ಷೆ ಸ್ವೀಕರಿಸಿದ ಹಾಗೂ ಒಂದು ವರ್ಷ ಉಪವಾಸ ಸ್ವೀಕರಿಸಿ ಧ್ಯಾನದಲ್ಲಿ ಲೀನನಾದ ಆನಂತರ ಕೇವಲ ಜ್ಞಾನ ಪಡೆದು ಕೊಂಡೇ ಎದ್ದ. ಗಮನವಿರಲಿ ಹೀಗೆ ಭರತನ ಬಲದ ಮದ ಬಾಹುಬಲಿಯಿಂದ ನಷ್ಟವಾಗಿದ್ದಿತು. ಬಾಹುಬಲಿಯಿಂದ 12 ಮನುಷ್ಯರ ಬಲ ಒಂದು ಎತ್ತಿನಲ್ಲಿರುತ್ತದೆ. 12 ಎತ್ತುಗಳ ಬಲ ಒಂದು ಕುದುರೆಯಲ್ಲಿರುತ್ತದೆ. 12 ಕುದುರೆಗಳ ಬಲ ಒಂದು ಕೋಣದಲ್ಲಿರುತ್ತದೆ. 100 ಕೋಣಗಳ ಬಲ ಒಂದು ಆನೆಯಲ್ಲಿರುತ್ತದೆ. 100 ಆನೆಗಳ ಬಲ ಒಂದು ಸಿಂಹದಲ್ಲಿರುತ್ತದೆ. 100 ಸಿಂಹಗಳ ಬಲ ಒಬ್ಬ ಬಲಭದ್ರನಲ್ಲಿರುತ್ತದೆ ಹಾಗೂ 100 ಬಲಾಭದ್ರರ ಬಲ ಒಬ್ಬ ನಾರಾಯಣನಲ್ಲಿರುತ್ತದೆ. 100 ನಾರಾಯಣರ ಬಲ ಒಬ್ಬ ಚಕ್ರವರ್ತಿಯಲ್ಲಿರುತ್ತದೆ ಹಾಗೂ 100 ಚಕ್ರವರ್ತಿಗಳ ಬಲ ಒಬ್ಬ ತೀರ್ಥಂಕರನಲ್ಲಿರುತ್ತದೆ, ಆದ್ದರಿಂದ ಬಲವಾನ ಮನುಷ್ಯರಿಗೆ ತಮಗಿಂತ ಹೆಚ್ಚಿನ ಬಲವೆಂದು ತಿಳಿದು ಬಲದ ಮದ ಮಾಡಬಾರದು.

**ಋದ್ಧಿ ಮದ**–ಸಾಧನೆಯ ಬಲದಿಂದ ಏನಾದರೂ ದೊರೆತರೆ, ಏನಾದರೂ ಋದ್ಧಿ-ಸಿದ್ಧಿ ದೊರೆತರೆ ಏನು ಹೇಳುವುದು? ಸ್ವಲ್ಪ ಚಮತ್ಕಾರವಾಗಲಿಲ್ಲ ಕೂಡಲೇ ಪ್ರಚಾರ ಪ್ರಸಾರ ಪ್ರಾರಂಭವಾಗಿ ಬಿಡುತ್ತದೆ. ಏನಾದರೂ ಆಗಲಿ ಅಥವಾ ಆಗದಿರಲಿ ಪ್ರಚಾರವಂತೂ ಪೂರ್ಣ ರೂಪದಲ್ಲಿ ಆಗುತ್ತಿದೆ. ತಪಸ್ಸಿನ ಮೂಲಕ ದೊಡ್ಡ ಋದ್ಧಿಗಳು ಪ್ರಾಪ್ತವಾಗಿದೆ ನನ್ನಂತೆ ಬೇರೆ ಯಾರೂ ಋದ್ಧಿಧಾರಿಗಳಿಲ್ಲ. ನನ್ನಂತೆ ಯಾವುದೇ ದೊಡ್ಡ-ದೊಡ್ಡ ಕಾರ್ಯ ಮಾಡುವವರು ಇಲ್ಲ. ಹೀಗೆ ಭಾವಿಸುತ್ತಾ ಅನ್ಯರನ್ನು ತಿರಸ್ಕರಿಸುತ್ತಾರೆ. ಭಯಭೀತರನ್ನಾಗಿ ಮಾಡುತ್ತಾರೆ. ಪ್ರದರ್ಶನ ಮಾಡುತ್ತಾರೆ ಅದರ ಮಾನ ಮಾಡುವವರನ್ನು ಋದ್ಧಿ ಮದ ಧಾರಿಗಳೆಂದು ಹೇಳುತ್ತಾರೆ. ಗೃಹಸ್ಥ ಜೀವನದಲ್ಲಿ ಧನ ಸಂಪತ್ತು, ವೈಭವ ಇವುಗಳ ಮದ ಮಾಡದಿರುವುದು ಇದೇ ಗೃಹಸ್ಥರ ಋದ್ಧಿಯಾಗಿದೆ. ಬಾಹ್ಯ ಸಾಮಾಗ್ರಿಗಳ ವೃದ್ಧಿಯಿಂದ ಅಹಂದ ತೃಪ್ತಿಯಾಗಬಲ್ಲದು. ಆದರೆ ಸತ್ಯದ ಉಪಲಬ್ಧಿಯಾಗಲಾರದು. ಚಕ್ರವರ್ತಿ ಮುಂತಾದವರು ಸಹ ವಿಕ್ರಿಯಾ ಮುಂತಾದವುಗಳನ್ನು ಪಡೆದು ಅಹಂಕಾರ ಪಡುತ್ತಾರೆ. ಅವರು ಏಳನೆ ನರಕ ಇತ್ಯಾದಿಗಳನ್ನು ಪಡೆದುಕೊಳ್ಳುತ್ತಾರೆ. ತಮ್ಮ ಅಧಿಕಾರ, ಧನದ ಅಹಂಕಾರ ಪಡುವವರು, ಇವು ಕೈಯಿಂದ ಮಾಡಿಕೊಂಡ ಅಶುದ್ಧಿಗಳು ಯಾವಾಗ ಹೊರಟು ಹೋಗುತ್ತವೆಯೋ ಹೇಳಲಾಗದು. ನೋಡಿ-ವಿಷ್ಣು ಕುಮಾರರಂತಹ ಮುನಿರಾಜರಿಗೆ ಋದ್ಧಿ ಪ್ರಾಪ್ತಿಯಾಗಿದ್ದಿತು. ಅವರಿಗೆ ತಿಳಿದಿರಲೇ ಇಲ್ಲ ತಿಳಿಸಬೇಕಾಯಿತು. ತೀರ್ಥೋದಯ ಕಾವ್ಯದಲ್ಲಿ ಹೀಗೆ ಬರೆಯಲಾಗಿದೆ–

**ಕುಲದೇಶಭೂಷಣರ ಮೇಲೆ, ಅಗ್ನಿಪ್ರಭನು ವಿಘ್ನ ಮಾಡಿದ।**
**ಋದ್ಧಿ ಗರ್ವವಿದ್ದಿತಾದ್ದರಿಂದ ರಾಮ ಋದ್ಧಿಮದ ದೂರಮಾಡಿ ವಿಘ್ನ ಕಳೆದ॥138॥**

ಪದ್ಮ ಪುರಾಣದಲ್ಲಿ ಇದರ ವಿವರಣೆ ಇದೆ. ವಂಶಧರ ಹೆಸರಿನ ದುರ್ಗಮ ಪರ್ವತದ ಮೇಲೆ ಶ್ರೀ ಕುಲಭೂಷಣ-ದೇಶಭೂಷಣ ಹೆಸರಿನ ಮುನಿರಾಜರು ಕಾಯೋತ್ಸರ್ಗ ಮುದ್ರೆಯಲ್ಲಿ ಧ್ಯಾನ

ನಿರತರಾಗಿದ್ದರು. ಆ ಪರ್ವತದ ಮೇಲೆ ಅಗ್ನಿಪ್ರಭ ಹೆಸರಿನ ಒಬ್ಬ ದೇವ ತನ್ನ ಋದ್ಧಿಯ ಮದದಿಂದ ವಿವಿಧ ರೀತಿಯ ಉಪಸರ್ಗಗಳನ್ನು ನೀಡುತ್ತಿದ್ದ. ಅದರಿಂದಾಗಿ ಅಲ್ಲಿದ್ದ ಪ್ರಜೆಗಳು ಪ್ರತಿದಿನ ಸಾಯಂಕಾಲ ದೂರ ಹೊರಟು ಹೋಗುತ್ತಿದ್ದರು ಹಾಗೂ ಬೆಳಿಗ್ಗೆ ಎಲ್ಲರೂ ಹಿಂದಿರುಗುತ್ತಿದ್ದರು. ಇಬ್ಬರೂ ತಪಸ್ವಿ ಮುನಿ ರಾಜರ ಮೇಲೆ ಅಗ್ನಿಪ್ರಭ ದೇವನು ತನ್ನ ವಿಕ್ರಿಯಾ ಋದ್ಧಿಯಿಂದ ವಿಭಿನ್ನ ರೀತಿಯ ರೂಪಗಳನ್ನು ಧಾರಣೆ ಮಾಡಿ ಉಪಸರ್ಗ ನೀಡುತ್ತಿದ್ದನು, ಅನೇಕ ದಿನಗಳು ಕಳೆದಿದ್ದವು ಆದರೆ ಒಂದು ದಿನ ವನವಾಸದ ಸಮಯ ರಾಮ, ಸೀತಾ, ಲಕ್ಷ್ಮಣ ವಿಹಾರ ಮಾಡುತ್ತಾ ಅಲ್ಲಿಗೆ ಬಂದರು. ಮೂವರು ಯುಗಳ ಮಹಾರಾಜರಿಗೆ ಕೈ ಜೋಡಿಸಿ ನಮೋಸ್ತು ಮಾಡಿದರು ಹಾಗೂ ಅಲ್ಲಿಯೇ ಅವರ ಸಮೀಪ ಕುಳಿತರು. ಅಷ್ಟರಲ್ಲಿ ಅಲ್ಲಿ ದೇವನಿಂದ ಮಹಾಭಯಾನಕ ಶಬ್ದವಾಯಿತು. ಉಪಸರ್ಗ ಮಾಡತೊಡಗಿದ ದೇವನಿಗೆ ರಾಮ–ಲಕ್ಷ್ಮಣರು ಎಚ್ಚರಿಕೆ ನೀಡಿದರು, ತಮ್ಮ ಬಿಲ್ಲಿನಿಂದ ಮೇಘಕ್ಕೆ ಸಮಾನವಾಗಿ ಗರ್ಜನೆ ಮಾಡುವಂತೆ ಟೇಂಕಾರ ಮಾಡಿದರು. ಇವರು ಮಹಾಮುನಿಗಳೆಂದು ದೇವನಿಗೆ ತಿಳಿಸಿದರು, ಅವರು ಮಹಾನ್ ತಪಸ್ವಿಗಳು, ನಿನಗೆ ಧಿಕ್ಕಾರ. ನೀನು ಮಾಡುತ್ತಿರುವ ಕಾರ್ಯದಿಂದ ದುರ್ಗತಿಯ ಸಿದ್ಧತೆ ಮಾಡಿಕೊಳ್ಳುತ್ತಿದ್ದಿಯಾ ಎಂದು ಹೇಳಿದರು. ಅಗ್ನಿಪ್ರಭ ಹೆಸರಿನ ಜ್ಯೋತಿಷ್ಕ ದೇವನು ತಿಳಿದು ಹೊರಟು ಹೋದನು, ಹೊರಗಡೆ ಇವೆಲ್ಲ ಕಾರ್ಯಗಳು ಆಗುತ್ತಿದ್ದವು ಆದರೆ ಆ ಮಹಾಮುನಿಗಳಿಗೆ ಈ ಎಲ್ಲ ಉಪದ್ರಕಾರಿ ಚೇಷ್ಟೆಗಳ ಜ್ಞಾನದ ಅರಿವೇ ಆಗಲಿಲ್ಲ, ಅಂತರಂಗದಲ್ಲಿ ಅವರ ಆ ಸಮಯ ಜ್ಞಾನೋಪಯೋಗ ಶುಕ್ಲಧ್ಯಾನ ಮಯವಾಗುತ್ತಿದ್ದಿತು. ಪರಿಣಾಮವಾಗಿ ಇಬ್ಬರೂ ಮುನಿರಾಜರಿಗೆ ಕೇವಲ ಜ್ಞಾನ ಪ್ರಾಪ್ತವಾಯಿತು ಹಾಗೂ ಅಗ್ನಿಪ್ರಭ ದೇವನ ಮದವು ನಷ್ಟವಾಯಿತು. ಇಂತಹ ಒಂದು ಮಹಾನ್ ಉಪಲಬ್ಧಿಯನ್ನು ರಾಮನು ತನ್ನ ವನವಾಸ ಕಾಲದಲ್ಲಿ ಪಡೆದಿದ್ದನು.

**ತಪ ಮದ**–ತಪ ಸಾಧನೆಯಿಂದಲೂ ಮದ ಉಂಟಾಗುತ್ತದೆ. ಖ್ಯಾತಿ, ಪೂಜೆ, ಲಾಭ ಮುಂತಾದವುಗಳಿಂದ ರಹಿತ ಅನಶನ, ಅವಮೌದರ್ಯ, ಮುಂತಾದ ತಪಗಳನ್ನು ಮಾಡುವವನು ನಾನೇ ಆಗಿದ್ದೇನೆ ಅಥವಾ ಪಂಚಮಹಾವ್ರತ ಇತ್ಯಾದಿ 13 ಪ್ರಕಾರಗಳ ಚಾರಿತ್ರಗಳ ಪಾಲನೆ ಮಾಡುವವನಾಗಿದ್ದಾನೆ ಅಥವಾ ಸಾಮಾಯಿಕ ಇತ್ಯಾದಿ ಚಾರಿತ್ರಗಳ ರಕ್ಷಕ ನಾನೇ ಆಗಿದ್ದೇನೆ, ನಾನು ಬಹಳ ದೊಡ್ಡ ತಪಸ್ವಿಯಾಗಿದ್ದೇನೆ. ನನ್ನಂತಹ ತಪಸ್ವಿ ಬೇರೆ ಯಾರೂ ಇಲ್ಲ. ಆಗಾಗ ಪ್ರೋಷಧೋಪವಾಸ ಇತ್ಯಾದಿ ಮಾಡುತ್ತಿರುತ್ತೇನೆ. ಅನೇಕ ಪ್ರಕಾರದ ರಸಗಳ ಪರಿತ್ಯಾಗ ಮಾಡಿದ್ದೇನೆ. ಎಲ್ಲ ಋತುಗಳಲ್ಲಿ ಸುಮೇರುವಿನಂತೆ ಸ್ಥಿರವಾಗಿ ತಪ ಸಾಧನೆಯಲ್ಲಿ ನಿರತನಾಗಿರುತ್ತೇನೆ, ಇಂತಹ ಪರಿಣತಿ ತಪಮದವಾಗಿದೆ. ತಪದ ಉದ್ದೇಶ ಆತ್ಮನ ಪವಿತ್ರತೆಯಾಗಿದೆ. ಅದು ಕ್ರೋಧ, ಮಾನ, ಮದ, ಮತ್ಸರ ಇತ್ಯಾದಿ ವೈಭಾವಿಕ ಭಾವಗಳ ಶುದ್ಧಿಯಿಂದಲೇ ಸಾಧ್ಯವಿದೆ. ಇಂದು ತಪಸಾಧನಾಗಳ ದಿನವಿದ್ದು ಸಾಮಾನ್ಯವಾಗಿ ಎಲ್ಲರು ವ್ರತ ಮಾಡುತ್ತಾರೆ. ಯಾರಾದರೂ ಉಪವಾಸ ಮಾಡಿದ್ದರೆ ಅರೇ ನಿಮಗಿಂತ ನಾನು ಚೆನ್ನಾಗಿ ಮಾಡಿದ್ದೇನೆಂದು ಹೇಳುತ್ತಾರೆ. ನಾವು ಉಪವಾಸ ಮಾಡಿದೆವು ಆದರೆ ನೀವು ಎರಡು ಭಾರಿ ಭೋಜನ ಮಾಡುತ್ತಿರಿ, ಒಂದು ಬಾರಿಯಾದರೂ ಏಕಾಸನ ಮಾಡಬಹುದಿತ್ತಲ್ಲವೆಂದು ಹೇಳುತ್ತಾರೆ. ಏನು ಸಾಧನೆ ಮಾಡುತ್ತಿರಿ ನೀವು? ಹಸಿ ತರಕಾರಿಯನ್ನು ಬಿಡುವುದಿಲ್ಲ. ನಾವು ವ್ರತಿಗಳಲ್ಲಿ ಆದರೂ ಹಸಿರು ಪಟ್ಟ ತೆಗೆದುಕೊಳ್ಳುವುದಿಲ್ಲ, ರಸದ ತ್ಯಾಗವನ್ನು ಮಾಡುತ್ತೇವೆ ಹಾಗೂ ನೋಡಿ ವ್ರತಿಕರು, ಮಹಾರಾಜರು, ಇತ್ಯಾದಿ ಕೆಲವರು

ಹಸಿರು ಸ್ವೀಕರಿಸುತ್ತಾರೆ-ರಸವನ್ನೂ ಸ್ವೀಕರಿಸುತ್ತಾರೆ. ಎಲ್ಲರಿಗೂ ಅವರದೇ ಆದ ಶಕ್ತಿ ಇದೆ ಎನ್ನುವುದನ್ನು ಗಮನದಲ್ಲಿಡಬೇಕು. ನಮ್ಮ ಶಕ್ತಿಯ ಮಾನ ಮಾಡುವುದು ನಮ್ಮ ಸಾಧನೆಯನ್ನು ಕುಂಠಿತಗೊಳಿಸಿದಂತಾಗುತ್ತದೆ.

ಆಗಮ ಗ್ರಂಥಗಳಲ್ಲಿ ಕೆಳಗಿನ ಮೆಟ್ಟಲುಗಳ ಮೇಲೆ ಕುಳಿತ ವ್ಯಕ್ತಿ ತಿಂಗಳೆಲ್ಲಾ ಉಪವಾಸ ಮಾಡಿದರೆ ಹಾಗೂ ಸಾಧು ನಿತ್ಯ ಆಹಾರ ಮಾಡಿದರೂ ಸಹ ಇಬ್ಬರ ಸಾಧನೆಯಲ್ಲಿ ಅಸಂಖ್ಯಾತ ಪಟ್ಟು ಅಂತರವಿದೆ ಎಂದು ಆಚಾರ್ಯರು ಬರೆದಿದ್ದಾರೆ. ಆ ವ್ಯಕ್ತಿ/ಶ್ರಾವಕನ ಸಾಧನೆ ನಿರ್ಜರೆ, ಸಂವರ ವಿಶುದ್ಧಿಯಿಂದ ಅಸಂಖ್ಯಾತ ಪಟ್ಟು ವಿಶುದ್ಧಿ ಸಾಧೂ/ಶ್ರಮಣನದೆಂದು ಹೇಳಲಾಗುತ್ತಿದೆ. ಲಬ್ಧ/ಗುಣಸ್ಥಾನಗಳ ಅಪೇಕ್ಷೆಯಿಂದ ಮುನಿಗಳದು ಶ್ರಾವಕನದು ಹೆಚ್ಚಾಗಿರುತ್ತದೆ. ಶ್ರಾವಕರು ಎಂದಿಗೂ ತಪಃ ಸಾಧನೆಯ ಮದ ಮಾಡಬಾರದು. ತಪವು ಸಹಜವಾಗಿದೆ. ಮಾನ/ಅಹಂಕಾರ ಸಹಿತ ಮಾಡಿದ ತಪ ಪತನಕ್ಕೆ ಕಾರಣವಾಗಿದೆ. ತಪದ ಮದ ಮಾಡುವುದರಿಂದ ಅಧೋಗತಿಯನ್ನು ಪಡೆದು ಸಂಸಾರದಲ್ಲಿ ಭ್ರಮಣೆಯಾಗುತ್ತದೆ. ತಪವು ಪರಮ ಶಕ್ತಿವರ್ಧಕವಾಗಿದೆ. ಇದು ತೋರಿಕೆಯದಾಗಿರದೇ ಆತ್ಮ ಜಾಗೃತಿಯನ್ನುಂಟು ಮಾಡುತ್ತದೆ. ತಪದ ಮದ ಯಮದಗ್ನಿ ಋಷಿಗೆ ಆಗಿದ್ದಿತು. ನಾನು ದೊಡ್ಡ ತಪಸ್ವಿಯಾಗಿದ್ದೇನೆ. ಪಂಚಾಗ್ನಿ ಇತ್ಯಾದಿ ವಿವಿಧ ರೀತಿಯ ತಪವನ್ನು ತಪಿಸುತ್ತೇನೆ. ನನ್ನ ಸಮಾನ ಯಾರೂ ತಪವನ್ನು ತಪಿಸಲಾರರು. ಹೀಗೆ ಅವರಿಗೆ ಬಹಳ ಮಾನವಿದ್ದಿತು. ಒಂದು ಸಾರಿ ಅವರ ತಪದ ಪರೀಕ್ಷೆ ನಡೆಸಲು ಅಮಿತಪ್ರಭ ಹಾಗೂ ವಿದ್ಯುತ್‌ಪ್ರಭ ದೇವತೆಗಳು ಬಂದರು. ಅವರು ಸ್ವಲ್ಪವೇ ಉಪಸರ್ಗ ಪ್ರಾರಂಭಿಸಿದಾಗ ಋಷಿಗಳು ತಮ್ಮ ತಪ ಸಾಧನೆಯಿಂದ ವಿಚಲಿತರಾದರು. ವಿಚಲಿತರಾದಾಗ ಅವರಿಗೆ ಅರೇ ನಾನೆಂಥಾ ತಪಸ್ವಿ ನನಗೆ ಇಷ್ಟು ಸಹಿಸಲಾಗಲಿಲ್ಲ ಎಂಬ ಅರಿವಾಯಿತು. ನಾನು ಸ್ವಲ್ಪವೇ ವಿಘ್ನ ಉಪಸರ್ಗದಿಂದ ಹೆದರಿ ಬಿಟ್ಟೆನು. ಹೀಗೆ ಇಬ್ಬರು ದೇವತೆಗಳು ಯಮದಗ್ನಿ ಋಷಿಯ ತಪದ ಮದವನ್ನು ನಷ್ಟ ಮಾಡಿದ್ದರು. ಉದಾಹರಣೆಯ ಸ್ವರೂಪದಲ್ಲಿ ತೀರ್ಥೋದಯ ಕಾವ್ಯದಲ್ಲಿ ಹೀಗೆ ಬರೆಯಲಾಗಿದೆ-

**ಅಮಿತ ಹಾಗೂ ವಿದ್ಯುತ್ಪ್ರಭ ಸೂರರು, ಯಮದಗ್ನಿ ಋಷಿಯ ತಪಗರ್ವ**
**ದೂರ ಮಾಡಿದರು ಪರೀಕ್ಷಿಸಿ, ಹೆಚ್ಚಿದ ಏರಿದ ತಪದ ಗರ್ವವನು ॥139॥**

**ಶರೀರ ಮದ-** ತನ್ನ ಶಾರೀರಕ ರೂಪ ಹಾಗೂ ಸೌಂದರ್ಯದ ಬಗ್ಗೆ ಗರ್ವಪಡುವುದು ಶರೀರ ಮದವಾಗಿದೆ. ವಪುವಿನ ತಾತ್ಪರ್ಯ ಶರೀರದೊಂದಿಗಿದೆ. ನನ್ನ ಸೌಂದರ್ಯ ಅನುಪಮವಾಗಿದೆ, ನಾನು ಬಹಳ ಸುಂದರನಾಗಿದ್ದೇನೆ. ನನ್ನನ್ನು ನೋಡಿದೊಡನೆ ಎಲ್ಲ ಜನರು ಚಕಿತರಾಗುತ್ತಾರೆ. ನನ್ನ ರೂಪ ಸೌಂದರ್ಯದ ಮುಂದೆ ಯಾರೂ ಸರಿಗಟ್ಟಲಾರರು. ಎಲ್ಲರೂ ಸೂರ್ಯನ ಮುಂದೆ ದೀಪದಂತೆ ಕಾಣುತ್ತಾರೆ. ಹೀಗೆ ವಿಚಾರ ಮಾಡುವವರು ಶರೀರ ಮದದಿಂದ ಕೂಡಿದ್ದಾರೆ. ಈ ಮದವು ಎಲ್ಲಕ್ಕಿಂತ ಅಪಾಯಕಾರಿಯಾಗಿದೆ. ಶಾರೀರಿಕ ರೂಪಕ್ಕೆ ಸಂಬಂಧಿಸಿದಂತೆ ಸನತ್ಕುಮಾರನ ಮಾನದ ಪ್ರಸಂಗ ಹೆಚ್ಚು ಪ್ರೇರಣಾದಾಯಿಯಾಗಿದೆ. ಅವರು ಬಹಳ ರೂಪವಂತರಾಗಿದ್ದರು. ಅವರ ರೂಪ ಕಾಮದೇವನಂತಿದ್ದಿತು. ಸ್ವರ್ಗದ ದೇವತೆಗಳು ಸಹ ಆತನ ರೂಪದಿಂದ ಮುಗ್ಧರಾಗಿದ್ದರು. ಅವರು ಗೃಹಸ್ಥಾವಸ್ಥೆಯಲ್ಲಿದ್ದಾಗ ಅವರಿಗೆ ಮಾನಕಷಾಯ ಉಂಟಾಗಿದ್ದಿತು. ಆದರೆ ದೀಕ್ಷಾ ಧಾರಣೆ ಮಾಡಿದ ಮೇಲೆ ಅವರು ಕುಷ್ಠರೋಗದಿಂದ ಪೀಡಿತರಾದರು. ನಮ್ಮ ರೂಪದ ಬಗ್ಗೆ ಅಹಂಕಾರ ಪಡಬಾರದು. ನಮ್ಮ ರೂಪ, ಸೌಂದರ್ಯ, ಲಾವಣ್ಯ ಇವೆಲ್ಲವು ಕ್ಷಣ ಭಂಗುರವಾಗಿದೆ. ಕ್ಷಣ

ಮಾತ್ರದಲ್ಲಿ ನಷ್ಟವಾಗುತ್ತವೆ.

ಮಹಾಭಾರತದ ನಿರ್ಮಾತಾ ದುರ್ಯೋಧನನಿಗೆ ತನ್ನ ಶರೀರದ ಬಗ್ಗೆ ಬಹಳಷ್ಟು ಅಹಂಕಾರವಿದ್ದಿತು. ಶ್ರೀಕೃಷ್ಣ ನಾರಾಯಣ ಶಾಂತಿದೂತನಾಗಿ ದುರ್ಯೋಧನನಿಗೆ ಒಪ್ಪಂದ ಮಾಡಿಕೊಳ್ಳಲು ಹೇಳಿದ ಆದರೆ ಆತ ಒಪ್ಪಲಿಲ್ಲ ಕೊನೆಯಲ್ಲಿ ಮಹಾಭಾರತದ ಯುದ್ಧವಾಯಿತು, ಅದರಲ್ಲಿ ಜನ, ಧನದ ಹಾನಿಯಾಯಿತು ಹಾಗೂ ಕೊನೆಯಲ್ಲಿ ಸ್ವಯಂ ಸತ್ತೆ ಹೋದನು, ದುರ್ಗತಿಗೆ ಪಾತ್ರನಾದನು. ತನ್ನ ವಂಶವನ್ನೇ ನಾಶಮಾಡಿದನು. ಹೇಳಿಯೂ ಇದ್ದಾರೆ–

**ತನದ ಅಹಂಕಾರ ಮಾಡಿದ ದುರ್ಯೋಧನ, ತಾರುಣ್ಯ ಸೇರಿತು ಮಣ್ಣಿನಲಿ**
**ತನ್ನ ಸಮಾಧಿ ತಾನೆ ತೋಡಿಕೊಂಡ................।**

ಹೀಗೆಯೇ ಸತ್ಯಭಾಮಾಳಿಗೂ ರೂಪ ಮದ ತುಂಬಿದ್ದಿತು. ಸತ್ಯಭಾಮಾ ಯಾರೆಂದು ನಿಮಗೆ ತಿಳಿದಿದೆ. ಅವಳು ನಾರಾಯಣ ಶ್ರೀಕೃಷ್ಣನ ಪಟ್ಟದ ರಾಣಿಯಾಗಿದ್ದಳು. ಅವಳಿಗೆ ತನ್ನ ರೂಪ, ಸೌಂದರ್ಯ, ಲಾವಣ್ಯಗಳ ಬಗ್ಗೆ ಬಹಳ ಅಹಂಕಾರವಿದ್ದಿತು. ನನ್ನ ಹಾಗೇ ಬೇರೆ ಯಾರೂ ಇಲ್ಲ. ಅದರೆ ಅವಳು ಕಾಡಿನಲ್ಲಿ ಕೃಷ್ಣನ ಇನ್ನೊರ್ವ ಪತ್ನಿ ರುಕ್ಮಿಣಿಯನ್ನು ನೋಡಿದಾಗ ಯಾರೋ ದೇವಿಯಂತೆ ನಿಂತಿರುವಂತೆ ಭಾವಿಸಿದಳು. ಆಶ್ಚರ್ಯ ಚಕಿತಳಾದಳು; ಅವಳು ಸ್ತ್ರೀಯಾಗಿರಲಾರಳು ಇವಳು ಯಾರೋ ದೇವಿಯೇ ಇರಬೇಕು ಎಂದಳು. ಶ್ರೀಕೃಷ್ಣನು ಸಹ ಸತ್ಯಭಾಮಾಳಿಗೆ ಇವಳು ತನ್ನ ಪತ್ನಿ ರುಕ್ಮಿಣಿ ಎಂದು ಹೇಳಲಿಲ್ಲ. ಆದರೆ ಅವಳಿಗೆ ಇದು ತಿಳಿದಾಗ ರುಕ್ಮಿಣಿಯ ರೂಪವನ್ನು ನೋಡಿ ಅವಳಿಗೆ ನಾಚಿಕೆಯಾಯಿತು. ಅರೆ ನಾನು ನನ್ನ ರೂಪವೇ ಸರ್ವ ಶ್ರೇಷ್ಠವೆಂದು ಭಾವಿಸಿದ್ದೇನಲ್ಲಾ ಅಂದುಕೊಂಡ ಕೂಡಲೇ ಅವಳ ಶರೀರ ಸೌಂದರ್ಯದ ಮದ ಚೂರು–ಚೂರಾಯಿತು. ಇದೇ ವಿಷಯದ ದೃಷ್ಟಾಂತ ತೀರ್ಥೋದಯ ಕಾವ್ಯದಲ್ಲಿ ಪದ್ಯ ರೂಪದಲ್ಲಿದೆ.

**ರೂಪ ಮದದಿಂ ತುಂಬಿಹಳು ಸತ್ಯಭಾಮಾ ರಾಣಿ**
**ದೇವಿ ಸಮ ರುಕ್ಮಿಣಿಯ ನೋಡಿ ರಾಣಿಯ ಮದವು ಚೂರಾಯಿತು ॥139॥**

ಮಾರ್ದವ ಧರ್ಮವನ್ನು ಪಡೆಯಿರಿ ಆ ರಾಮಚಂದ್ರನ ಸ್ಮರಣೆ ಮಾಡಿರಿ. ಅವರು ಮೋಕ್ಷಕ್ಕೆ ಹೋಗಿದ್ದಾರೆ. ರಾಮಚಂದ್ರರು ತಮ್ಮ ಕೆಲವು ಆದರ್ಶಗಳನ್ನು ಸ್ಥಾಪಿಸಿದ್ದಾರೆ. ಅವರಿಗೆ ವನವಾಸಕ್ಕೆ ಹೋಗಲು ಹೇಳಿದಾಗ ಅವರು ತಮ್ಮ ತಂದೆಯ ಮಾತುಗಳಿಗೆ ಗೌರವ ಹೊಂದಿದರು ಮತ್ತು ಕಾಡಿನಲ್ಲಿ ಹೋಗಿ ಗುಡಿಸಲು ನಿರ್ಮಿಸಿಕೊಂಡು ಇದ್ದರು. ಅರಮನೆಗಳಲ್ಲಿ ಇರುವಂತಹವರು ಕಾಡಿನಲ್ಲಿ ಹೋಗಿ ಇದ್ದರು. ನೀವು ಇರಲಾರಿರಿ. ಗುಡಿಸಲಿಗೆ ಹೋಗಲು ಅನೇಕ ಬಾರಿ ಯೋಚಿಸುತ್ತಿರಿ. ವಿಚಾರ ಮಾಡುತ್ತಿರಿ. ನಾವು ಹೋಗುವುದಿಲ್ಲವೆಂದು ಹೇಳುತ್ತೀರಿ. ಯಾಕೆಂದರೆ ಇಷ್ಟು ದೊಡ್ಡ ಶ್ರೀಮಂತರು ಗುಡಿಸಿಲಿನಲ್ಲಿ ಇರುವುದೇ ಎಂದು ಯಾರಾದರೂ ಹೇಳುತ್ತಾರೆ. ನಾನು ಅರಮನೆಯನ್ನು ಗುಡಿಸಲೆಂದು ಹೇಳುತ್ತೇವೆ. ಈ ಮುನಿಶ್ವರರು ನನ್ನ ಗುಡಿಸಿಲಿಗೆ ಬಂದರು. ಆದರೆ ಗುಡಿಸಿಲಿಗೆ ಹೋಗುವುದಿಲ್ಲ. ಆದರೆ ರಾಮಚಂದ್ರರಿಗೆ ಸ್ವಲ್ಪವು ಅಹಂಕಾರವಿರಲಿಲ್ಲ ಅವರು ಗುಡಿಸಿಲಿನಲ್ಲಿ ಮಹಾರಾಜರಿಗೆ ಆಹಾರವನ್ನು ಮಾಡಿಸಿದರು.

ಅಷ್ಟ ಮದಗಳನ್ನು ಚೂರ್ಣ ಮಾಡುವ ಉದಾಹರಣೆಗಳನ್ನು ಕೇಳಿದಿರಿ. ನಾವು ದೊಡ್ಡ ಜನರನ್ನು ನೋಡಿದಾಗ, ಗುಣವಂತರನ್ನು ನೋಡಿದಾಗ, ದೊಡ್ಡ ವಸ್ತುಗಳನ್ನು ನೋಡಿದಾಗ ನಮ್ಮ

ಮದವೂ ಸಹ ಚೂರ್ಣವಾಗಿ ಬಿಡುತ್ತದೆ. ಆ ವಸ್ತುಗಳು ಹಾಗೂ ಮಾತುಗಳ ಚಿಂತನೆಗಳನ್ನು ಮಾಡಬೇಕು ಆ ಚಿಂತನೆಗಳ ಮಾಧ್ಯಮದಿಂದ ನಮ್ಮ ಮದ ಚೂರ್ಣವಾಗಬೇಕು. ನಾವು ಯಾವಾಗಲೂ ನಮಗಿಂತ ಕೆಳಗಿನವರನ್ನು ನೋಡುತ್ತಾ ಅಹಂಕಾರ ಪಡುತ್ತಿರುತ್ತೇವೆ. ಜ್ಞಾನದ ಮದ ಉಂಟಾದಾಗ ದೊಡ್ಡ ದೊಡ್ಡ ಜ್ಞಾನಿ ಗಣಧರ ದೇವ, ದೊಡ್ಡ ದೊಡ್ಡ ಕೇವಲ ಜ್ಞಾನಿ ಮುನಿರಾಜರು ಈ ಭೂಮಿಯ ಮೇಲೆ ವಿರಾಜಮಾನರಾಗಿದ್ದಾರೆ ಎಂದು ಯೋಚಿಸಿ. ಎಲ್ಲಿ? ಇಲ್ಲಿ ಅಲ್ಲ ಆದರೆ ಈಗ ಇದೇ ಮಧ್ಯಲೋಕದ ವಿದೇಹ ಕ್ಷೇತ್ರಗಳಿವೆ ಇಪ್ಪತ್ತು ತೀರ್ಥಂಕರರು ವಿದ್ಯಮಾನರಾಗಿದ್ದಾರೆ. ಐದು ವಿದೇಹ ಕ್ಷೇತ್ರಗಳಿವೆ ಹಾಗೂ ನಾಲ್ಕು-ನಾಲ್ಕು ತೀರ್ಥಂಕರರಿದ್ದಾರೆ. ತೀರ್ಥಂಕರರೊಂದಿಗೆ ಎಷ್ಟೊಂದು ಕೇವಲ ಜ್ಞಾನಿಗಳು, ಮನಃ ಪರ್ಯಾಯ ಜ್ಞಾನಿಗಳು, ಋದ್ಧಿಧಾರಿ ಇತ್ಯಾದಿಗಳು ಅಲ್ಲಿ ವಿರಾಜಮಾನರಾಗಿದ್ದಾರೆ. ಆದರೆ ನಾವು ಅಹಂಕಾರ ಪಡುತ್ತಿದ್ದೇವೆ. ಇದೇ ಭಾರತದಲ್ಲಿಯೂ ಸಹ ಅನೇಕ ಆಚಾರ್ಯರು ಮುನಿಜನರು ಜ್ಞಾನಮಾನರಾಗಿ ವಿರಾಜಮಾನರಾಗಿದ್ದಾರೆ. ಆದರೆ ನಾವು ಅವರಿಗಿಂತ ಜ್ಞಾನವಂತರೆಂದು ಹಾಗೂ ದೊಡ್ಡವರೆಂದು ತಿಳಿದು ಅಹಂಕಾರ ಪಡುತ್ತಿದ್ದೇವೆ.

ಗಮನದಲ್ಲಿರಲಿ ಕರ್ಮದ ಉದಯವಾದಾಗ ಒಂದು ಕ್ಷಣದಲ್ಲಿ ಏನು ಇದ್ದದ್ದು ಏನೋ ಆಗಿ ಬಿಡುತ್ತದೆ. ಒಂದು ಕ್ಷಣದಲ್ಲಿ ಅಜ್ಞಾನಿಯೂ ಆಗಬಹುದು. ಆದ್ದರಿಂದ ಜ್ಞಾನ ಇತ್ಯಾದಿ ಮದಗಳು ಏನಾಗುತ್ತಿವೆಯೋ ಅವೆಲ್ಲವು ಅಜ್ಞಾನತೆಯಿಂದಾಗಿ ಆಗುತ್ತಲಿವೆ. ನಮಗಿಂತ ಅನೇಕ ಪಟ್ಟು ಧನವಂತರು, ರೂಪವಂತರು ಸುಂದರರು ಇರಬಹುದು. ದೊಡ್ಡ ದೊಡ್ಡ ಋದ್ಧಿಧಾರಿಗಳು, ತಪಸ್ಸು ಮಾಡುವವರಿರಬಹುದು ಅವರು ನಮ್ಮ ಸಮುಖದಲ್ಲಿ ಬಂದಾಗ ನಮ್ಮ ಮದ ಕರ್ಪೂರದಂತೆ ನಷ್ಟವಾಗಿ ಬಿಡುತ್ತದೆ. ನಾನು ಎಲ್ಲಕ್ಕಿಂತ ಚಿಕ್ಕವನಾದರೂ ಒಳ್ಳೆಯದೇ. ನಾನು ಏನೂ ಇಲ್ಲ, ನಾನು ತುಚ್ಛನಾಗಿದ್ದೇನೆ. ನಾನು ಸೂರ್ಯನೆದುರು ದೀಪದಂತಿದ್ದೇನೆ. ನಾನು ಮಿಂಚು ಹುಳದಂತಿದ್ದೇನೆ ಎಂದು ವಿಚಾರ ಮಾಡಬೇಕು. ನಾನು ಎಲ್ಲರಿಗಿಂತ ದೊಡ್ಡವನಾಗಿದ್ದೇನೆ. ನನ್ನ ಸಮಾನರು ಯಾರೂ ಇಲ್ಲ ಇತ್ಯಾದಿಯಾಗಿ ವಿಚಾರ ಮಾಡಬಾರದು, ಇಲ್ಲವಾದಲ್ಲಿ ಎಂದಿಗೂ ಮಾರ್ದವ ಧರ್ಮವನ್ನು ಪಡೆಯಲಾರೆವು. ಆಚಾರ್ಯರು ಆಗಮಗಳಲ್ಲಿ ಈ ಸಂಸಾರದಲ್ಲಿ ಅಹಂಕಾರಿ ಮನುಷ್ಯನು ಧರ್ಮವನ್ನು ನಾಶ ಮಾಡುತ್ತಾನೆ, ಸಮೀಚೀನ ಗುಣಗಳನ್ನು ಕಳೆದುಕೊಳ್ಳುತ್ತಾನೆ, ವಿನಯ ಮಾಡುವುದಿಲ್ಲ, ಲೋಕ ಮರ್ಯಾದೆಯನ್ನು ಬಿಡುತ್ತಾನೆ, ಸುಖದಿಂದ ಮಲಗುವುದಿಲ್ಲ. ಆಹಾರ ಮಾಡುವುದಿಲ್ಲ ಇದೇ ಪ್ರಕಾರ ಮಾನಿ ಮನುಷ್ಯನು ಮಾನದ ವಶನಾಗಿ ಕಷ್ಟಗಳಲ್ಲಿ ಬಿದ್ದು ನಿರಂತರ ಪಾಪದ ಸಂಚಯ ಮಾಡುತ್ತಿರುತ್ತಾನೆ. ಮಾನವು ಶ್ರೇಷ್ಠ ಆಚರಣೆಗಳನ್ನು ನಷ್ಟ ಮಾಡಿಬಿಡುತ್ತದೆ. ಸೂರ್ಯನ ತೇಜಸ್ಸನ್ನು ಮೇಘವು ಲುಪ್ತಗೊಳಿಸುವಂತೆ ಮಾನವು ವಿನಯ ಇತ್ಯಾದಿ ಗುಣಗಳನ್ನು ನಾಶ ಮಾಡಿ ಬಿಡುತ್ತದೆ. ಬಾಹ್ಯ ಸಂಯೋಗಗಳಿಂದಾಗಿ ಹೆಚ್ಚುತ್ತಿರುವ ಮಾನವನ್ನು ಕೃಶಗೊಳಿಸಿ ಆತ್ಮನ ಸ್ವರೂಪವನ್ನು ತಿಳಿಯಿರಿ ಮತ್ತು ಜೀವನದಲ್ಲಿ ವಿನಮ್ರತೆಯು ವಿಕಸಿತವಾಗಲಿ, ಎಂಧು ಹೇಳಿದ್ದಾರೆ.

ಒಬ್ಬ ರಾಜನಿದ್ದನು. ಅವನಿಗೆ ಅತಿ ಹೆಚ್ಚಿನ ಮಾನ ಕಷಾಯವಿದ್ದಿತು. ನನಗೆ ದೊರೆತಿರುವ ವೈಭವ ಅತಿ ಹೆಚ್ಚಾಗಿದ್ದು. ನನ್ನ ಸಮಾನದ ವೈಭವ ಯಾರಿಗೂ ಇಲ್ಲ ಹಾಗು ಇಂದಿನವರೆಗೂ ಆಗಿರಲಿಕ್ಕಿಲ್ಲ. ನಾನು ಅಷ್ಟು ದೊಡ್ಡ ಚಕ್ರವರ್ತಿಯಾಗಿದ್ದೇನೆ. ಇದು ಬಹಳ ಸಂತಸದ ಸಂಗತಿಯಾಗಿದೆ. ಎಲ್ಲರಿಗೂ ಆನಂದದ ವಿಷಯವಾಗಿದೆ ಹಾಗೂ ಇಂತಹುದೇ ಆನಂದ ಹಾಗೂ ಸಂತಸ ನನ್ನ

ಹೆಸರಿನಿಂದ ಎಲ್ಲರಿಗೂ ಆಗುತ್ತಿರಲಿ, ನನ್ನ ಹೆಸರು ಅಜರಾಮರವಾಗಿರಲಿ, ಆದ್ದರಿಂದ ನನ್ನ ಹೆಸರನ್ನು ಎಲ್ಲರೂ ಓದುವಂತಹ ಪರ್ವತದ ಮೇಲೆ ಬರೆಯಲ್ಪಡಲಿ, ಎಲ್ಲರೂ ಓದುತ್ತಿರಲಿ, ನನ್ನ ಗುಣಗಾನ ಮಾಡುತ್ತಿರಲಿ ಹೀಗೆ ಆ ರಾಜನು ವಿಚಾರ ಮಾಡತೊಡಗಿದ. ಇದು ಸಾಮಾನ್ಯದ ವಿಷಯ. ನಮಗೆ ಸ್ವಲ್ಪ ಏನಾದರೂ ದೊರಕಿದರೆ ಅದನ್ನು ತಡೆದುಕೊಳ್ಳಲು ಆಗದೇ ಎಲ್ಲರಿಗೂ ತೋರಿಸುವ ಭಾವ ಜಾಗೃತವಾಗಿಬಿಡುತ್ತದೆ. ವಿಚಾರಮಾಡಿ ತಾವೂ ಸಹ ಹೀಗೆ ಯೋಚಿಸುತ್ತಿರಿ ಹೌದೋ ಅಲ್ಲವೋ ಯಾವಾಗಲೋ ಸ್ವಲ್ಪ ದಾನ ಮಾಡಿದರೆ, ಮಂದಿರದಲ್ಲಿ ಸ್ವಲ್ಪ ನಿರ್ಮಾಣ ಕಾರ್ಯ ಮಾಡಿದರೆ ನಿಮ್ಮ ಹೆಸರಿನ ಒಂದು ಪಟ್ಟಿಯನ್ನು ಒಂದು ಫಲಕವನ್ನು ಹಾಕಿಸಲೇಬೇಕು ಅದರಿಂದಾಗಿ ಹೆಸರು ಅಜರಾಮರವಾಗಬೇಕು. ಆದರೆ ಎಲ್ಲಿಯವರೆಗೆ? ಯಾರು ನಿಮ್ಮನ್ನು ಗುರುತಿಸುತ್ತಾರೆ? ಆತ ಹೆಚ್ಚೆಂದರೆ ಒಂದೆರಡ ಪೀಳಿಗೆ ಆದರೆ ನಂತರ ಯಾರು ಗುರಿತಿಸುವುದಿಲ್ಲ. ಬಹುಶಃ ಯಾರಿಗೂ ನಿಮ್ಮ ಚಹರೆಯು ನೆನಪಿನಲ್ಲಿರುವುದಿಲ್ಲ. ತಾವು ಯಾರಾಗಿದ್ದಿರಿ ಯಾರಿಗೂ ಗಮನಕ್ಕೆ ಬರುವುದೇ ಇಲ್ಲ.

ತೀರ್ಥಕ್ಷೇತ್ರಗಳಲ್ಲಿ ಅದೆಷ್ಟು ಹೆಸರುಗಳನ್ನು ಬರೆದಿದ್ದಾರೆ. ಅವುಗಳನ್ನು ಯಾರು ಓದುತ್ತಾರೆ ಅತಿ ಹೆಚ್ಚೆಂದರೆ ನಿಮ್ಮ ಪರಿವಾರದಲ್ಲಿ ನಿಮಗೆ ಮಗನಿದ್ದರೆ ಆತ ಯಾವಾಗಲೋ ಹೋದಾಗ ಓದಬಹುದು ಹೀಗಿದ್ದರೆ ಮಗನಿಗಾಗಿ ಮನೆಯಲ್ಲಿ ಬರೆದು ಹೊರಟು ಹೋಗಿ, ಮಂದಿರದ ಫಲಕವನ್ನು ಮನೆಯಲ್ಲಿ ಹಚ್ಚಿದರೆ ಆತ ದಿನವೂ ಓದುತ್ತಾನೆ. ಮಂದಿರದಲ್ಲಿ ಆಗಾಗ ಓದುತ್ತಾನೆ. ಆಯಾ ಮನೆಯಲ್ಲಿ ಹಾಕಿದರೆ ಅದನ್ನು ನೋಡಿ ಆಗಾಗ ಆ ತೀರ್ಥಕ್ಷೇತ್ರಕ್ಕೆ ಹೋಗುವ ಭಾವನೆಯಾದರೂ ಬರುತ್ತದೆ. ಅಲ್ಲಿ ಹಾಕುವುದರಿಂದ ಏನಾದೀತು? ಬೇರೆಯವರಿಗಂತೂ ಏನೂ ಇಲ್ಲ ಬದಲಾಗಿ ಇತರರಿಗೆ ಆಗಾಗ ಆ ಕಾರಣದಿಂದ ಸ್ವಲ್ಪ ತೊಂದರೆಯೂ ಆಗಬಹುದು, ಆದರೆ ತನ್ನ ಹೆಸರನ್ನು ಹೆಚ್ಚಿಸಿಕೊಳ್ಳಲು ಎಲ್ಲವನ್ನು ಮಾಡುತ್ತಿರುತ್ತೇವೆ. ಯಾವುದರಿಂದ ಶಿಕ್ಷಣ ಸಿಗುವುದೋ ಆ ಕಾರ್ಯವನ್ನು ಮಾಡಬೇಕು. ನಿಮ್ಮ ಮನೆಯಲ್ಲಿ ಅದರ ಇತಿಹಾಸವಿಡಿ. ಅದರಿಂದಾಗಿ ಅದನ್ನು ಓದಿದ ಜನರಿಗೆ ಶಿಕ್ಷಣ ಸಿಗುವಂತಾಗಲಿ. ಒಳ್ಳೆಯದಿದೆ ವಿಚಾರ ಮಾಡಿರಿ, ಕಷಾಯ ಮಾಡಬೇಡಿ ಹಾಗೇ ಯಾರಾದರು ಹೇಳಿದರೆ ಹೇಳಿಸಿಕೊಳ್ಳದೇ ಯೋಗ್ಯ ಸ್ಥಾನದಲ್ಲಿ ಹೆಸರು ಬರೆದರೆ ಶಿಕ್ಷಾಪ್ರದವಾಗುವುದರಿಂದ ಏನೂ ಕೆಡಕಿಲ್ಲ.

ಆ ಚಕ್ರವರ್ತಿ ರಾಜಾ–ಚಕ್ರರತ್ನ ದೊರೆತಿದೆ, ಚೆನ್ನಾಗಿದೆ ಎಂದು ಯೋಚಿಸಿದ. ತನ್ನ ಒಬ್ಬ ಸೇವಕನಿಗೆ ಆಜ್ಞೆ ಮಾಡಿ ಹೋಗು ನೀನು ಇನ್ನೊಂದು ಬಹಳ ವಿಶಾಲ ಪರ್ವತಕ್ಕೆ ಹೋಗಿ ಅದರ ಮೇಲೆ ಹೆಸರು ಬರೆದು ಬಾ ಎಂದು ಯೋಚಿಸಿದ. ಸೇವಕನನ್ನು ಕರೆದು ಒಂದು ಪರ್ವತವಿದೆ ಅಲ್ಲಿಗೆ ನೀನು ಹೋಗಬೇಕು ಅದರ ಮೇಲೆ ನೀನು–ಒಬ್ಬ ಚಕ್ರವರ್ತಿ ಆಗಿದ್ದ. ಆತ ಆರು ಖಂಡಗಳ ಅಧಿಪತಿಯಾಗಿದ್ದ. 18 ಕೋಟಿ ಕುದುರೆಗಳು 84 ಲಕ್ಷ ಆನೆಗಳು. 96 ಸಾವಿರ ರಾಣಿಯರು. 14 ರತ್ನಗಳು ಈ ಎಲ್ಲ ಸಂಪತ್ತು ಅವನ ಬಳಿ ಇದ್ದಿತು ಎಂದು ನನ್ನ ಹೆಸರು ಬರೆದು ಬಾ ಎಂದು ಹೇಳಿದ. ಸೇವಕ ರಾಜನ ಆಜ್ಞೆ ಪಡೆದು ಹೊರಟು ಹೋದ. ಸೇವಕ ಅಲ್ಲಿ ತಲುಪಿದ ಅಲ್ಲಿ ಸಂಪೂರ್ಣ ಪರ್ವತ ನೋಡಿಯೇ ನೋಡಿದ ಅಲ್ಲಿ ಆತನಿಗೆ ತನ್ನ ರಾಜನ ಹೆಸರನ್ನು ಬರೆಯಲು ಸಾಧ್ಯವಾಗದೇ ಹಿಂದುರುಗಿದ.

ಸೇವಕ ಹಿಂದಿರುಗಿ ಬಂದು ರಾಜನಿಗೆ–ರಾಜನ್ ಈ ಕಾರ್ಯ ಬಹಳ ಕಠಿಣವಿದೆ–ಎಂದು

ಹೇಳಿದ. ರಾಜ ಯಾಕೆ ಕಠಿಣವಿದೆ ಎಂದು ಕೇಳಿದ ಪರ್ವತದವರೆಗೆ ತಲುಪಲು ಆಗಲಿಲ್ಲವೇ? ಸೇವಕ ಹೇಳಿದ–ಹೋಗಿದ್ದೆ, ಸೇನೆಯು ಸಹ ಜೊತೆಗಿದ್ದಿತು. ಎಲ್ಲವೂ ಆಯಿತು. ಆದರೆ ಪರ್ವತದ ಮೇಲೆ ಹೆಸರು ಬರೆಯಲು ಆಗಲಿಲ್ಲ. ಯಾಕೆ? ಅಷ್ಟೊಂದು ವಿಶಾಲ ಕಾಯದ ಪರ್ವತವಿದೆ, ಯಾರು ಬೇಡವೆಂದರು? ಯಾರಾದರೂ ಅಡೆ ತಡೆ ಮಾಡಿದರಾ? ನಾನೂ ಬರಲೇನು? ಇಲ್ಲ, ರಾಜಾ ನಿಮಗೆ ಬರಬೇಕಾದ ಅವಶ್ಯಕತೆ ಇಲ್ಲ ನೀವು ಅಲ್ಲಿಗೆ ಬರುವಿರಾದರೆ ನಡೆಯಿರಿ ನೋಡುವಿರಂತೆ; ಎಂದು ಹೊರಟೆ ಬಿಟ್ಟ! ಅಲ್ಲಿ ತಲುಪಿ ಸೇವಕ ಹೇಳಿದ–ಸ್ವಾಮಿನ್ ನೋಡಿ ಪರ್ವತದ ಮೇಲೆ ನಿಮ್ಮ ಹೆಸರು ಬರೆಯಲು ಸ್ಥಳವೇ ಇಲ್ಲ. ಯಾಕೆ ಸ್ಥಳ ಯಾಕಿಲ್ಲ? ಸ್ವಾಮಿಗಳೇ ನೋಡಿ ನಿಮ್ಮಂತೆಯೇ ಒಬ್ಬರೇ ಅಲ್ಲ ಅಸಂಖ್ಯಾತರು ಆಗಿ ಬಿಟ್ಟಿದ್ದಾರೆ ಹಾಗೂ ಅನಂತವೆಂದು ಹೇಳಿದರೂ ಸಹ ಯಾವ ದೊಡ್ಡ ವಿಷಯವಿಲ್ಲ. ಇಲ್ಲಿಯಂತೂ ಮೊದಲಿನಿಂದಲೇ ಅಸಂಖ್ಯಾತ ಹೆಸರುಗಳನ್ನು ಬರೆದಿದ್ದಾರೆ, ಬರೆಯುಲು ಸ್ಥಳವೇ ಇಲ್ಲ. ಮೊದಲಿನಿಂದ ಲೂ! ಎಲ್ಲವೂ ಚಕ್ರವರ್ತಿಗಳ ಹೆಸರುಗಳೇನು? ಹೌದು, ಒಳ್ಳೆಯದು. ಇಷ್ಟೊಂದು ಚಕ್ರವರ್ತಿಗಳಾಗಿದ್ದಾರೇಯೇ? ಅವರೆಲ್ಲರೂ ನನ್ನ ಸಮಾನ ವೈಭವವುಳ್ಳವರೇ? ಹೌದು, ಸರಿ ನಡೆ ನೋಡೋಣ. ಹತ್ತಿರ ಹೋಗಿ ಸ್ವಯಂ ನೋಡಿದಾಗ ಆಶ್ಚರ್ಯಚಕಿತನಾದ. ಅದೇ ಸಮಯ ಯೋಚನೆ ಮಾಡಿ ನನ್ನ ಜೀವನಕ್ಕೆ ಧಿಕ್ಕಾರ. ನನ್ನ ಸಮಾನ ಯಾರೂ ಆಗಿಲ್ಲ ಎಂದು ಯೋಚಿಸಿದ್ದೆ ಆದರೆ ನನ್ನ ಸಮಾನ ಅದೆಷ್ಟು ಜನ ಆಗಿದ್ದಾರೆ. ನನ್ನ ಹೆಸರು ಬರೆಯಲು ಸ್ಥಳವಿಲ್ಲವಲ್ಲ. ಈಗ ಏನು ಮಾಡಲಿ ವಿಮೂಢನಾಗಿ ವಿಚಾರ ಮಾಡತೊಡಗಿದ.

ಹೆಸರು ಬರೆಯುವ ಪರಂಪರೆ ಇದೆ ಬರೆಯಲೇ ಬೇಕು ಎಂದು ರಾಜ ಯೋಚಿಸ ತೊಡಗಿದ. ಹೇಗೆ ಬರೆಯಲಿ? ಅರೆ ಯಾರಾದರೂ ಹೆಸರನ್ನು ಅಳಿಸಿಬಿಡುತ್ತೇನೆ ಹಾಗೂ ಸೇವಕನಿಗೆ ಯಾರದಾದರೂ ಹೆಸರನ್ನು ಅಳಿಸಿ ನನ್ನ ಹೆಸರನ್ನು ಬರೆದು ಬಿಡು ಎಂದು ಹೇಳಿದ. ನೋಡಿ ಸಹೋದರ ಹೀಗೆ ಅಳಿಸುವವರು ಸಹ ಎಷ್ಟು ಜನ ಆಗಿರಬೇಕು. ಅರೇ ಹೀಗೆ ಅಳಿಸುವವರು ಸಹ ಅನಂತರಾಗಿದ್ದಾರೆ. ಈ ಕಾರ್ಯ ಅನಾದಿಕಾಲದಿಂದ ನಡೆದಿದೆ. ಹೀಗೆ ಅಳಿಸುವುದು ಸಹ ಒಂದು ಪ್ರಕಾರದ ದ್ವೇಷವಿದೆ. ರಾಗ, ದ್ವೇಷ ನಡೆದಿದೆ. ನೋಡಿ ಇನ್ನೊಬ್ಬರ ಹೆಸರನ್ನು ಅಳಿಸಲಾಗುತ್ತಿದೆ ಹಾಗೂ ತನ್ನ ಹೆಸರನ್ನು ಬರೆಸಲಾಗುತ್ತಿದೆ. ಅಹಂಕಾರ ಖಂಡಿತವಾಗುತ್ತಲಿದೆ. ನಾನೇ ಎಲ್ಲಕ್ಕಿಂತ ದೊಡ್ಡವನು–ಹಾಗಿಲ್ಲ. ನನ್ನ ಸಮಾನ ಬಹಳ ಆಗಿದ್ದಾರೆ. ಅಹಂಕಾರ ಅಳಿಯಿತು. ಅದರೆ ಬೇರೆಯವರ ಹೆಸರಿನಿಂದ ದ್ವೇಷ ಹೋಗಲಿಲ್ಲ ಹಾಗೂ ಸ್ವಯಂದ ಹೆಸರಿನಿಂದ ರಾಗ ಹಾಗೇ ಉಳಿಯಿತು. ಕೊನೆಯಲ್ಲಿ ಯಾರದನ್ನೋ ಅಳಿಸಿ ಬರೆದೇ ಬಿಟ್ಟರು ತಮ್ಮ ಹೆಸರನ್ನು. ಗೊತ್ತೆ ಹೆಸರು ಬರೆದದು, ವೃಷಭಗಿರಿ ಪರ್ವತದಲ್ಲಿ, ಅಲ್ಲಿ ಹೆಸರು ಬರೆಯುವ ಪರಂಪರೆ ಸಾಗುತ್ತದೆ. ಪ್ರಶಸ್ತಿ ಚಕ್ರವರ್ತಿ ಮೂಲಕ ಬರೆಸಲ್ಪಡುತ್ತದೆ. ವಿಚಾರ ಮಾಡಿ ಜಗತ್ತಿನಲ್ಲಿ ಇದೆಲ್ಲವು ಆಗುತ್ತಿರುತ್ತದೆ. ನಾವು ಇದರಿಂದ ಸರಿದು ಮೇಲೆ ನೋಡಬೇಕಾಗಿದೆ ಅದರಿಂದ ನಮ್ಮ ಅಹಂಕಾರ ಕರಗುತ್ತದೆ ಹಾಗೂ ನಾವು ಮಾರ್ದವ ಧರ್ಮವನ್ನು ಹೊಂದಬಲ್ಲೆವು.

ಜ್ಞಾನ, ಜಾತಿ, ಪೂಜೆ, ರೂಪ, ಕುಲ, ಐಶ್ವರ್ಯ, ಶೀಲ, ಬಲ, ತಪ, ವೃದ್ಧಿ ಇವುಗಳ ಮದ ಹೊಂದಿರುವವನು ಹಾಗೂ ಇತರರನ್ನು ಕೀಳು ಎಂದು ತೋರಿಸುವ ಪ್ರಾಣಿ ನೀಚ ಗೋತ್ರದ ಬಂಧ ಮಾಡಿಕೊಳ್ಳುತ್ತಾನೆ. ಮಾನ ಕಷಾಯದ ವಶವಾದ ಪ್ರಾಣಿ ನೀಚ ಗತಿಯನ್ನು ಪಡೆಯುತ್ತದೆ.

ಆಚಾರ್ಯ ಶುಭ ಚಂದ್ರ ಸ್ವಾಮಿಗಳು ಜ್ಞಾನಾರ್ಣವದಲ್ಲಿ ಹೀಗೆ ಬರೆದಿದ್ದಾರೆ–

**ಕುಲ ಜಾತೀಶ್ವರತ್ವಾದಿ, ಮದ ವಿಧ್ವಸ್ತಬುದ್ಧಿಭಿಃ ।**
**ಸದ್ಯಃ ಸಂಚೀಯತೇ ಕರ್ಮ, ನೀಚೈರ್ಗತಿ ನಿಬಂಧನಮ್ ॥19/48॥**

ಕುಲ, ಜಾತಿ, ಐಶ್ವರ್ಯ, ರೂಪ ಬಲ ವಿದ್ಯಾ ಹಾಗೂ ಧನ ಈ ಎಂಟು ಭೇದಗಳಿಂದ ಬುದ್ಧಿಯನ್ನು ಕೆಡಿಸಿಕೊಂಡವರು ಅರ್ಥಾತ್ ಅಹಂಕಾರ ಪಡುತ್ತಾರೆ, ಅವರು ಕೂಡಲೇ ನೀಚ ಗತಿಮ ಕಾರಕ ಕರ್ಮದ ಸಂಚಯ ಮಾಡುತ್ತಾರೆ. ಆದರೆ ಅವರ ಪದವಿಗನುಗುಣವಾಗಿ ತಮ್ಮ ನಿಶ್ಚಿತ ಸುಯೋಗ್ಯ ನಿಯಮ, ಕಾನೂನು ಹಾಗೂ ಕರ್ತವ್ಯಗಳಲ್ಲಿ ತೊಡಗಿರುತ್ತಾ ಅವುಗಳಿಂದ ಚ್ಯುತರಾಗಬಾರದು, ಅದನ್ನು ಯೋಗ್ಯ ಸಮಯದಿಂದ ದೃಢತೆ, ನಿರ್ಭಯತೆಯಿಂದ ಪಾಲನೆ ಮಾಡುವುದನ್ನು ಸ್ವಾಭಿಮಾನವೆನ್ನುತ್ತಾರೆ. ಅದು ತದ್ ಪದವಿ ಅನುರೂಪಿ ಜನರಿಗೆ ಗ್ರಾಹ್ಯವಾಗಿದೆ. ಮಾನದ ಶಮನ ಹಾಗೂ ವಿನಯದ ಉದಯವೇ ಮಾರ್ದವವಾಗಿದೆ. ಆಚಾರ್ಯ ವಟ್ಟಕೇರ ಸ್ವಾಮಿಗಳು 'ಮೂಲಾಚಾರ' ಗ್ರಂಥದಲ್ಲಿ ಹಾಗೂ ಆಚಾರ್ಯ ಶಿವಕೋಟಿ ಮಹಾರಾಜರು 'ಭಗವತಿ ಆರಾಧನಾ' ಗ್ರಂಥದಲ್ಲಿ **'ವಿಣಒ ಮೋಕ್ಖ ದ್ವಾರಂ'** ವಿನಯ–ವಿನಮ್ರತೆ, ಮೃದುತ್ವ ಮೋಕ್ಷದ ದ್ವಾರವೆಂದು ಹೇಳಿದ್ದಾರೆ. ಈ ವಿನಮ್ರತೆಯು, ಮೃದುತ್ವವು ಪ್ರಾಣಿಯನ್ನು ಮೋಕ್ಷದ ದ್ವಾರಕ್ಕೆ ಒಯ್ದು ನಿಲ್ಲಿಸುತ್ತದೆ. ವಿನಯದಿಂದಲೇ ಸಂಯಮ, ತಪ, ಜ್ಞಾನ, ವ್ರತ, ನಿಯಮಗಳಿವೆ, ವಿನಯವಿಲ್ಲದೆ, ಮೃದುತ್ವವಿಲ್ಲದೇ ಜ್ಞಾನವು ಇಲ್ಲ, ಸಂಯಮವು ಇಲ್ಲ ವ್ರತ, ನಿಯಮ, ತಪವೂ ಇಲ್ಲ ಅಲ್ಲದೇ ಮೋಕ್ಷದ ದ್ವಾರವು ಇಲ್ಲ ಹಾಗೂ ಮೋಕ್ಷದ ಮಾರ್ಗವೂ ಇಲ್ಲ. ಮಾರ್ದವ ಧರ್ಮದಲ್ಲಿ ಐದೂ ಇಂದ್ರಿಯಗಳನ್ನು ಸಂಯಮಗೊಳಿಸುವ ಶಕ್ತಿ ಇದೆ. ಇದು ಧರ್ಮ ಶೀಲತೆಯ ಆಸರೆಯಾಗಿದೆ. ಇದರ ಮಾಧ್ಯಮದಿಂದಲೇ ಧರ್ಮ ಮುಂದೆ ಸಾಗುತ್ತದೆ. ಆಚಾರ್ಯ ಮುಂತಾದ ಎಲ್ಲ ಸಂಘ ಹಾಗೂ ಪಂಚ ಪರಮೇಷ್ಠಿಗಳ ಆರಾಧನೆ ಇದರ ಮೂಲಕವೇ ಸಾಧ್ಯವಿದೆ. ಕೋಮಲತೆ ಇರದೇ ಇದ್ದಲ್ಲಿ ವಿನಮ್ರತೆ ಇರುವುದಿಲ್ಲ. ಮೃದುತ್ವವಿರುವುದಿಲ್ಲ ಅಲ್ಲಿ ಯಾವ ವ್ರತ ತಪ, ಧ್ಯಾನ ಸ್ಥಿರವಾಗಿರಲಾರವು.

ಬಿಲ್ಲು ಎಷ್ಟು ಬಾಗುವುದೋ ಅಷ್ಟೇ ದೂರ ಬಾಣ ಹೋಗುತ್ತದೆ ಎಂದು ಕಿರಾತಾರ್ಜುನೀಯದಲ್ಲಿ ಉಲ್ಲೇಖವಿದೆ. ಇದೇ ಪ್ರಕಾರ ವಿನಮ್ರರಾಗಿರುವವರು ಅವರು ತಮ್ಮ ಪ್ರತಿಯೊಂದು ಕಾರ್ಯದಲ್ಲಿ ಸಫಲರಾಗುತ್ತಾರೆ. ಗರ್ವದ ಮರ್ಧನ ಮಾಡಬೇಕೆಂದರೆ ಜನ್ಮ ಮರಣದಿಂದ ಬಿಡುಗಡೆ ಪಡೆಯ ಬೇಕೆಂದರೆ ಉತ್ತಮ ಮಾರ್ದವದ ಪಾಲನೆ ಮಾಡಬೇಕಾಗುತ್ತದೆ. ಮಾರ್ದವ ಧರ್ಮವು ಸಂಸಾರವನ್ನು ನಷ್ಟಗೊಳಿಸುತ್ತದೆ. ದಯಾ ಧರ್ಮದ ಮೂಲವಾಗಿದೆ. ಹಾಗೂ ಉದ್ಧಂಡತೆಯನ್ನು ನಾಶ ಮಾಡುವಂತಹದಾಗಿದೆ. ಮೃದುತ್ವಮಯ ಪರಿಣಾಮಗಳಿಂದ ಮಾನವನು ಉಳಿದೆಲ್ಲರಿಗಿಂತ ಸುಖಿ ಹಾಗೂ ಆದರಣೀಯನಾಗುತ್ತಾನೆ. ಹೇಗೆ ಮಣ್ಣಿನಲ್ಲಿ ನೀರನ್ನು ಸೇರಿಸುವುದರಿಂದ ಅದು ಹರಳು ಕಲ್ಲುಗಳಿಂದಲೂ ರಹಿತವಾದಾಗ ಶುದ್ಧವಾಗುತ್ತದೆ. ಸುಕೋಮಲವಾಗುತ್ತದೆ. ಆಗ ಅದು ಸುಂದರ ಕುಂಭ ಇತ್ಯಾದಿಗಳ ಆಕಾರ ಪಡೆಯಬಲ್ಲದು ಹಾಗೆಯೇ ಮಾನಿ ಪ್ರಾಣಿಯು ಧರ್ಮರೂಪದ ಜಲದಿಂದ ಪವಿತ್ರ ಕೋಮಲವಾದಾಗ ಅದಕ್ಕಿಂತಲೂ ಸುಂದರ ಗುಣಮಯಿ ಭಗವಂತನ ಸ್ವರೂಪ ಪಡೆಯುತ್ತದೆ. ಆದರೆ ತನ್ನ ದೊಡ್ಡಸ್ತಿಕೆ ತೋರುವುದು, ಆತ್ಮ ಪ್ರಶಂಸೆ ಮಾಡುವುದು ಹಾಗೂ ಪರರ ನಿಂದೆ ಇತ್ಯಾದಿ ಮಾಡುವುದು ಇವು ಮಾನ ಕಷಾಯದ ರೂಪಗಳಾಗಿವೆ.

ಅನ್ಯರನ್ನು ಕೀಳಾಗಿ ತೋರಿಸುವುದು ಅಥವಾ ತಿರಸ್ಕರಿಸುವುದು ಇದರಿಂದ ಪರಸ್ಪರ ಜಗಳ ಒತ್ತಡ ಹೆಚ್ಚಾಗುತ್ತವೆ. ಅದರಿಂದ ಅಶಾಂತಿಯ ವಾತಾವರಣ ನಿರ್ಮಾಣವಾಗುತ್ತದೆ. ವಾತ್ಸಲ್ಯಭಾವದ ಅಭಾವವಾಗುವುದರಿಂದ ಹಾಗೂ ಆಂತರಿಕ ಶುದ್ಧಿಯ ಅಭಾವದಲ್ಲಿ ನೈತಿಕ ಪತನವಾಗುತ್ತದೆ. ನಾವು ಚಿಕ್ಕಪುಟ್ಟ ವಿಷಯಗಳಿಂದ ಉತ್ತೇಜಿತರಾಗದೇ, ಮನಸ್ಸಿನಲ್ಲಿ ಸ್ವಲ್ಪ ಸಹನಶೀಲತೆ ತಂದು ಕೊಂಡರೆ, ವಿನಮ್ರ ವಿನಯಶೀಲರಾಗುವುದನ್ನು ಕಲಿತರೆ ನಮ್ಮ ಜೀವನ ಸುಖಮಯವಾಗುತ್ತದೆ. ಲೋಕವ್ಯವಹಾರದಲ್ಲಿ ಯಾವಾಗಲೂ ನಮ್ಮ ನಮ್ರತೆಯನ್ನು ಬಿಡಬಾರದು. ಮಾರ್ದವವು ಆತ್ಮನ ಪರಿಣಾಮವಿದೆ. ಆತ್ಮನ ಆಳದಲ್ಲಿ ಇಳಿದಾಗ ಸ್ವಯಂ ಮಾನ ಕಷಾಯದ ಅಭಾವದಲ್ಲಿ ಮಾರ್ದವ ಧರ್ಮಗುಣದ ಆನಂದ ಸ್ವತಃ ಅನುಭವದಲ್ಲಿ ಬರುತ್ತದೆ.

# ಉತ್ತಮ ಆರ್ಜವ ಧರ್ಮ

## ಮಾಯಾಚಾರದ ಅಭಾವವೇ ಆರ್ಜವತೆಯ ಸದ್ಭಾವ

### ಮಂಗಲಾಚರಣೆ

**ನಮಃ ಶ್ರೀವರ್ಧಮಾನಾಯ, ನಿರ್ಧೂತಕಲಿಲಾತ್ಮನೇ।**
**ಸಾಲೋಕಾನಾಂ ತ್ರಿಲೋಕಾನಾಂ, ಯದ್ವಿದ್ಯಾ ದರ್ಪಣಾಯತೇ॥**

ಸದ್ಧರ್ಮ ಬಂಧುಗಳೇ,

ಇಂದು ದಶಲಕ್ಷಣ ಪರ್ವದ ಮೂರನೇ ದಿನ ಹಾಗೂ ಇಂದು ಉತ್ತಮ – ಆರ್ಜವ ಧರ್ಮವಿದೆ, ನಿಯಮಸಾರ ಗ್ರಂಥದ ತಾತ್ಪರ್ಯ ವೃತ್ತಿಯಲ್ಲಿ – **'ಋಜೋರ್ಭಾವಃ ಆರ್ಜವಃ'** ಎಂದು ಹೇಳಿದ್ದಾರೆ. ಸರಳತೆಯ ಭಾವ ಆರ್ಜವವಿದೆ. ಸರಳತೆಯ ಮಾಧ್ಯಮದಿಂದ ಪಡೆಯುವುದನ್ನು ಆರ್ಜವ ಧರ್ಮವೆನ್ನುತ್ತಾರೆ. ಈ ಧರ್ಮವು ಯಾವುದೇ ಸ್ವಾರ್ಥಭಾವನೆಯಿಂದ ಇರದೇ ಜೀವನದಲ್ಲಿ ಖ್ಯಾತಿ, ಲಾಭ ಪೂಜೆ ಅಥವಾ ಸಂಸಾರ ಪರಿಭೋಗಗಳನ್ನು ಪಡೆಯಲು ಇಲ್ಲ ಬದಲಾಗಿ ಸಮ್ಯಗ್ ದರ್ಶನದೊಂದಿಗೆ ಈ ಧರ್ಮದ ಅನುಪಾಲನೆ ಮಾಡಲಾಗುತ್ತದೆ. ಉತ್ತಮ ಆರ್ಜವ ಧರ್ಮದಲ್ಲಿ ಸರಳತೆ ಹಾಗೂ ಋಜುತ್ವಗಳನ್ನು ಹೊಂದಿ, ಮಾಯಾ, ಛಲ, ಕಪಟತನ ಹಾಗೂ ಅಪ್ರಾಮಾಣಿಕತೆಗಳನ್ನು ಬಿಡುತ್ತಾರೆ. ಆರ್ಜವ ಧರ್ಮ ಇರುವ ಆತ್ಮನಲ್ಲಿ ಎಲ್ಲರಿಗೂ ಪೂರ್ಣವಿಶ್ವಾಸ ಜಾಗೃತವಾಗುತ್ತದೆ. ಅವರನ್ನು ಆದರ್ಶ ಪುರುಷರೆಂದು ಭಾವಿಸುತ್ತಾರೆ ಹಾಗೂ ಮೋಸತನ – ಛಲ – ಕಪಟತನ ಇರುವಲ್ಲಿ ಮನಸ್ಸು ಮುರಿಯುವ ಕೆಡಕುಗಳು ಉತ್ಪನ್ನವಾಗುತ್ತವೆ –ಇಲ್ಲಿ ಸರಳತೆಯ ಮೇಲೆ ಇರುತ್ತದೆ. ಸರಳವಾಗಿರುವುದು ಸರಳವಾಗಿದ್ದರೂ ಸರಳವಾಗುವುದು ಬಹಳ ಕಠಿಣವೆಂದು ಹೇಳುತ್ತಾರೆ. ಮನಸ್ಸಿನಲ್ಲಿ ಸತ್ಯದ ಬಗ್ಗೆ ನಿಷ್ಠೆ, ಅದರಲ್ಲಿಯೇ ನಡೆಯುವ ಸಂಕಲ್ಪ, ಪ್ರಾಮಾಣಿಕತೆಯಿಂದ ಜೀವನ ನಡೆಸುವ ಅಭ್ಯಾಸ ಇರುವಲ್ಲಿ ಸರಳತೆ ಇರುತ್ತದೆ. ಇವರ ಸರಳತೆ ಆಂತರಿಕವಾಗಿರುತ್ತದೆ. ಆರ್ಜವ ಧರ್ಮವು ಅಂತರಂಗದೊಂದಿಗೆ ಹೆಚ್ಚಿನ ಸಂಬಂಧ ಹೊಂದಿರುತ್ತದೆ ಅದನ್ನು ಮೇಲಿಂದ ತಿಳಿಯುವುದು ಕಠಿಣವೆನಿಸುತ್ತದೆ.

ಆರ್ಜವದ ಅರ್ಥ ಪರಿಣಾಮಗಳ ಸರಳತೆಯಾಗಿದೆ. ನಮ್ಮ ಜೀವನದಲ್ಲಿ ಎಷ್ಟು ಸರಳವಾಗಿರಲು ಸಾಧ್ಯವೋ ಅಷ್ಟೇ ನಾವು ಪರಮಾತ್ಮನ ಸಮೀಪ ಇರುತ್ತೇವೆ. ಪರ ಪದಾರ್ಥಗಳಲ್ಲಿ ರುಚಿ ಇರುವವರು ಸಂಸಾರದಲ್ಲಿ ಸುತ್ತಾಡುತ್ತಿರುತ್ತಾರೆ ಹಾಗೂ ಯಾರು ಸ್ವಯಂ ತಮ್ಮಷ್ಟಕ್ಕೆ ತಮ್ಮ ಮೇಲೆ ಹಾಗೂ ಪರಮಾತ್ಮನ ಮೇಲೆ ವಿಶ್ವಾಸ ಹೊಂದಿದ್ದಾರೋ ಅವರು ಈ ಸಂಸಾರದಿಂದ ಮುಕ್ತರಾಗುತ್ತಾರೆ. ಪರಮಾತ್ಮನ ಸಾಧನೆ ಮಾಡಿಸುವ ಇಂತಹ ಉತ್ತಮ ಆರ್ಜವ ಧರ್ಮವನ್ನು ನಾವು ನಮ್ಮ ಜೀವನದಲ್ಲಿ ಹೊಂದಿ ನಮ್ಮ ಜನ್ಮ ಜನ್ಮಗಳ ಪಾಪಗಳನ್ನು ತೊಳೆದು ಮುಕ್ತಿಯ ಕಡೆಗೆ ಗಮನ ಮಾಡಬಹುದು. ಈ ಧರ್ಮದಿಂದ ನಮಗೆ ನಮ್ಮ ಮನ–ವಚನ–ಕಾಯಗಳ ಏಕತೆ ದೊರೆಯುತ್ತದೆ. ನೀವು ಕವಿವರ ಧ್ಯಾನತರಾಯರ ದಶಲಕ್ಷಣ ಪೂಜೆಯಲ್ಲಿ ಓದುತ್ತೀರಾ.

**ಮನದಲಿ ಇರುವ ವಚನವ ಹೇಳಿರಿ।**
**ವಚನದ ಹಾಗೇ ಕಾಯದಿ ಮಾಡಿರಿ॥**

ಮನಸ್ಸಿನಲ್ಲಿರುವುದೇ ವಚನದಲ್ಲಿ ಬರಬೇಕು ಹಾಗೂ ಅದೇ ಕ್ರಿಯಯಲ್ಲಿರಬೇಕು ಆಗಲೇ ಈ ಧರ್ಮದ ಪಾಲನೆಯಾಗುತ್ತದೆ. ಈ ಸಾಲುಗಳ ಅರ್ಥ ನಮ್ಮ ಮನಸ್ಸಿನಲ್ಲಿ ಬರುವುದನ್ನೇ ನಾವು ಹೇಳಬೇಕು ಹಾಗೂ ಅದೇ ರೀತಿ ಮಾಡಬೇಕೆಂದಲ್ಲ ಇದರಿಂದ ಹಾನಿಯೇ ಆಗುತ್ತದೆ. ಯಾರಿಗಾದರೂ ಮನಸ್ಸಿನಲ್ಲಿ ಸಾಯುವ, ಸಾಯಿಸುವ ಭಾವ ಬಂದರೆ ಕೋಪದಿಂದ ಆ ಮಾತುಗಳನ್ನಾಡಿದರೆ ಏನಾಗಬಹುದು? ಮತ್ತೆ ಅದನ್ನೇ ಕಾರ್ಯಗತಗೊಳಿಸಿದರೆ ಮತ್ತೇನು? ಆದ್ದರಿಂದ ಆ ರೀತಿಯ ಭಾವ ಬಂದಿತೆಂದು ಭಾವಿಸಿ ಅದನ್ನು ಕೂಡಲೇ ಮನಸ್ಸಿನಿಂದ ತೆಗೆದು ಹಾಕಬೇಕು. ಈ ಸಾಲುಗಳ ಅರ್ಥ ಮನ, ವಚನ, ಕಾಯಗಳ ಏಕ ರೂಪತೆ ಒಳ್ಳೆಯ ಕಾರ್ಯಗಳದಾಗಲಿ, ಸತ್ಪುರುಷರು ಸರಳವಾಗಿರುತ್ತಾರೆ. ಛಲ, ಕಪಟ ಭಾವವನ್ನು ಹೊಂದಿರುವುದಿಲ್ಲ, ಧರ್ಮಾತ್ಮರು ಹೇಳಿದ್ದಾರೆ.

**ಮನಸ್ಯೈಕಂ ವಚಸ್ಯೈಕಂ ಕರ್ಮಣ್ಯೈಕಂ ಮಹಾತ್ಮನಾಮ್।**
**ಮನಸ್ಯನ್ಯದ್ ವಚಸ್ಯನ್ಯತ್ ಕರ್ಮಣ್ಯನ್ಯದ್ ದುರಾತ್ಮನಾಮ್॥**

ಮನದಲ್ಲಿರುವ ಹಾಗೇ ವಚನದಲ್ಲಿಯು ಇರುತ್ತದೆ ಹಾಗೂ ವಚನದಲ್ಲಿರುವ ಹಾಗೇ ಆಚರಣೆಯಲ್ಲಿ ತರುತ್ತಾರೆ- ಇವರೇ ಮಹಾತ್ಮರು. ಆದರೆ ಮನದಲ್ಲಿ ಒಂದು, ವಚನದಲ್ಲಿ ಇನ್ನೊಂದು, ಆಚರಣೆಯಲ್ಲಿ ಅದಕ್ಕಿಂತ ವಿಪರೀತರಾಗಿರುವವರು ದುರಾತ್ಮ, ದುರ್ಜನರಾಗಿರುತ್ತಾರೆ. ಒಳ್ಳೆಯವರು ಮತ್ತು ಕೆಟ್ಟವರನ್ನು ಗುರುತಿಸಲು ಇದೇ ಮಾರ್ಗ. ಋಜುತಾ ಭಾವ, ಸರಳಭಾವ ಹಾಗೂ ಭಾವಿಕ ಭಾವವೇ ಆರ್ಜವ. ಮನ ವಚನ ಕಾಯಗಳು ಏಕರೂಪತೆ ಮತ್ತು ಸರಳತೆಯೇ ಮಹಾನತೆಯ ಆಧಾರವಾಗಿದೆ. ಋಜುತೆ ಇಲ್ಲದ ವ್ಯಕ್ತಿಯಲ್ಲಿರುವ ಅಸದ್ಗುಣದಿಂದ ಆತ ವಕ್ರವಾಗಿ ಚಲಿಸುತ್ತಾನೆ ಹಾಗೂ ವಿಷಾಕ್ತ ಸ್ವಭಾವದಿಂದ ಬೇರೆಯವರಿಗೆ ಹಾನಿಯನ್ನುಂಟು ಮಾಡುತ್ತಾನೆ. ಆಚಾರ್ಯ ಪೂಜ್ಯಪಾದ ಸ್ವಾಮಿಗಳು ಸರ್ವಾರ್ಥಸಿದ್ದಿಯಲ್ಲಿ ಆರ್ಜವ ಧರ್ಮದ ಸಂದರ್ಭದಲ್ಲಿ

**ಯೋಗಸ್ಯಾವಕ್ರತಾ ಆರ್ಜವಮ್ ॥9/6॥**

ಎಂದು ಹೇಳಿದ್ದಾರೆ.

ಯೋಗಗಳ ಅವಕ್ರತೆಯ ಹೆಸರು ಆರ್ಜವ ಧರ್ಮವಿದೆ. ಮನ, ವಚನ, ಕಾಯಗಳ ಕುಟಿಲತೆ ಆಗದಿರುವುದು ಆರ್ಜವ ಧರ್ಮವಾಗುತ್ತದೆ ಹಾಗೂ ಎಲ್ಲಿ ಕುಟಿಲತೆ ಇರುತ್ತದೆ ಅಲ್ಲಿ ಆರ್ಜವ ಧರ್ಮ ಎಂದಿಗೂ ಆಗುವುದಿಲ್ಲ. ಆಚಾರ್ಯ ಕಾರ್ತಿಕೇಯ ಸ್ವಾಮಿಗಳು ಕಾರ್ತಿಕೇಯಾನು ಪ್ರೇಕ್ಷಾ ಗ್ರಂಥದಲ್ಲಿ ಆರ್ಜವ ಧರ್ಮಕ್ಕೆ ಸಂಭಂಧಿಸಿದಂತೆ, ಹೀಗೆ ಹೇಳಿದ್ದಾರೆ.

**ಜೋ-ಚಿಂತೇಈ ಣ ವಂಕಂ ಣ ಕುಣದಿ ವಂಕಂ ಣ ಜಂಪದೇ-ವಂಕಂ**
**ಣ ಯ ಗೋವದಿ ಣಿಯದೋಸಂ ಅಜ್ಜವ ಧಮ್ಮೋಹವೇ ತಸ್ಸ॥396॥**

ಮನಸ್ಸಿನಿಂದ ಕುಟಿಲ ಚಿಂತನೆ ಮಾಡದಿರುವವರು, ಕುಟಿಲತಾಪೂರ್ವಕ ಹೇಳದಿರುವವರು, ಕುಟಿಲತೆಯ ಕಾರ್ಯ ಮಾಡದಿರುವವರು ಹಾಗೂ ತಮ್ಮ ದೋಷಗಳನ್ನು ಬಚ್ಚಿಡದವರು ಆರ್ಜವ ಧರ್ಮದ ಧಾರಕರಾಗಿರುತ್ತಾರೆ. ಯಾಕೆಂದರೆ ಮನ-ವಚನ-ಕಾಯಗಳ ಸರಳತೆಯ ಹೆಸರೇ ಆರ್ಜವ ಧರ್ಮವಾಗಿದೆ. ಕುಟಿಲ ವಕ್ರ ಪರಿಣಾಮಗಳಿಂದ ಮನಸ್ಸು ದೂರವಾಗಿ ಬಿಡುತ್ತದೆ. ಆಗ ಕುಟಿಲ ವಕ್ರ ಪರಿಣಾಮ ಸ್ವಯಂ ಬಿಟ್ಟು ಹೋಗುತ್ತವೆ ಹಾಗೂ ಅಲ್ಲಿಂದ ಆರ್ಜವ ಧರ್ಮದ

ಶುಭಾರಂಭವಾಗುತ್ತದೆ. ಕುಟಿಲ ಪರಿಣಾಮ ಇರುವವರೆಗೆ ಆರ್ಜವಧರ್ಮವಾಗಲಾರದು. ಆರ್ಜವ ಧರ್ಮದಿಂದ ಮುನಿಶ್ರೀಗಳು ಶುಭೋಪಯೋಗದಿಂದ ಶುದ್ಧೋಪಯೋಗದ ಕಡೆಗೆ ಗಮನ ಮಾಡುತ್ತಾರೆ. ತಮ್ಮ ತಪ್ಪುಗಳನ್ನು ಬಚ್ಚಿಡುವವರ ಪಾಪ ವೃತ್ತಿ ನಿರಂತರ ಹೆಚ್ಚಾಗುತ್ತಾ ಸಾಗುತ್ತದೆ ಹಾಗೂ ಪಾಪವು ಬಚ್ಚಿಡುವುದರಿಂದ ಹೆಚ್ಚಾಗುತ್ತದೆ ಹಾಗೂ ಹೇಳುವುದರಿಂದ ಕಡಿಮೆಯಾಗುತ್ತದೆ. 'ಪಾಪಗಳನ್ನು' ಗುರುವಿನ ಎದುರಿಗೆ ಹೇಳಿ ಪ್ರಾಯಶ್ಚಿತ ತೆಗೆದುಕೊಳ್ಳುವುದರಿಂದ ಆತ್ಮ ನಿರ್ಮಲವಾಗಬಹುದು. ಒಂದು ಚಿಕ್ಕ ದೃಷ್ಟಾಂತವಿದೆ.

ಒಬ್ಬ ರಾಜನಿದ್ದ. ಆತ ದೊಡ್ಡ ಧರ್ಮಾತ್ಮನಾಗಿದ್ದ, ಆತನೊಳಗೆ ತ್ಯಾಗ-ಸಂಯಮದ ಪವಿತ್ರ ಭಾವನೆಗಳಿದ್ದವು. ಆತ ತನ್ನ ಪರಿವಾರದಲ್ಲಿ ಅಪಾರ ಪ್ರೇಮ, ವಾತ್ಸಲ್ಯವನ್ನು ಹೊಂದಿದ್ದನು. ಆತ ಸದಾಕಾಲ ರಾಜ್ಯಪಥವಿದೆ ಎಲ್ಲವನ್ನು ನೋಡಿಕೊಳ್ಳುವುದು, ಬಹಳಷ್ಟು ಕಾರ್ಯಗಳನ್ನು ಆದರ್ಶಪೂರ್ಣ ಮಾಡುವುದು ಹಾಗೂ ಅವುಗಳ ನಂತರ ಮೋಕ್ಷಮಾರ್ಗವನ್ನು ಪಡೆಯುವುದು, ಜೀವನದ ಯಾವುದೇ ಕ್ಷಣದಲ್ಲಿ ನಮಗೂ ವೈರಾಗ್ಯ ಉಂಟಾಗಲಿ ಇಂತಹ ವಿಚಾರಗಳನ್ನು ಮಾಡುತ್ತಾ ಇಂತಹ ಭಾವನೆಗಳನ್ನು ರಾಜನೊಳಗೆ ಇದ್ದವು.

ಒಂದು ಬಾರಿ ಒಬ್ಬ ಸಜ್ಜನ ಪುರುಷರು ರಾಜನಿಗೆ ಬಹಳ ಸುಂದರಾದ ಫಲವನ್ನು ಉಪಹಾರದಲ್ಲಿ ನೀಡಿದ ಹಾಗೂ ರಾಜನ್ ಇದು ಬಹಳ ಸಿಹಿಯಾದ, ಮೌಲ್ಯಗಟ್ಟಿದ ದುರ್ಲಭ ಫಲ ಬಹಳ ಸ್ವಾದಿಷ್ಟವಿದೆ ಇದನ್ನು ನೀವು ಸ್ವೀಕರಿಸಿರಿ ಎಂದು ಹೇಳಿದ ರಾಜನು ಆ ಫಲವನ್ನು ತೆಗೆದುಕೊಂಡು ರಾಜಭವನದ ತನ್ನ ಕೊಠಡಿಗೆ ತೆರಳಿದ ಫಲ ತಿನ್ನುವ ಮೊದಲು ರಾಜನು ಇಷ್ಟು ಸುಂದರ ಕಾಣದ ದುರ್ಲಭ ಫಲವನ್ನು ನನ್ನ ಪ್ರೀತಿಯ ರಾಣಿಗೆ ಕೊಡುತ್ತೇನೆ ಎಂದು ಯೋಚಿಸಿದ. ರಾಜನು ತನ್ನ ರಾಣಿಯೊಂದಿಗೆ ಹೆಚ್ಚಿನ ಸ್ನೇಹ ಹೊಂದಿದ್ದರಿಂದ ಆತ ಆ ಫಲವನ್ನು ತನ್ನ ಪ್ರಿಯರಾಣಿಗೆ ನೀಡಿದ. ರಾಣಿಯು ರಾಜನಿಂದ ಆ ಫಲವನ್ನು ಪಡೆದು ಇಟ್ಟು ಬಿಟ್ಟಳು. ರಾಣಿಯು - ಈಗ ನಾನು ಈ ಫಲವನ್ನು ಏನು ಮಾಡಲಿ ನನಗೆ ಯಾರು ಹೆಚ್ಚು ಪ್ರೀಯರೋ ಅವರಿಗೆ ಕೊಟ್ಟು ಬಿಡುತ್ತೇನೆ ಎಂದು ಯೋಚಿಸಿದಳು. ರಾಣಿಯ ಸರ್ವಾಧಿಕ ಪ್ರೇಮ ತನ್ನ ರಾಜ್ಯದ ಮಂತ್ರಿಯ ಮೇಲಿದ್ದಿತು. ಅವಳು ಬೇಗನೆ ಮಂತ್ರಿಯನ್ನು ಕರೆಸಿ ಗುಪ್ತವಾಗಿ ಆ ಫಲವನ್ನು ಕೊಟ್ಟು ಬಿಟ್ಟಳು. ನೋಡಿ ರಾಜನ ಪ್ರೇಮ ರಾಣಿಯ ಮೇಲಿದ್ದಿತು, ರಾಣಿಯ ಪ್ರೇಮ ರಾಜನ ಮೇಲಿರದೇ ಮಂತ್ರಿಯ ಮೇಲಿದ್ದಿತು. ರಾಣಿಯ ಪ್ರೇಮ ರಾಜನ ಮೇಲೆ, ರಾಜನ ಪ್ರೇಮ ರಾಣಿಯ ಮೇಲಿರುವಂತೆ ಇರಲಿಲ್ಲ ಆದರೆ ರಾಜನು ತಿಳಿಯುತ್ತಿರಲಿಲ್ಲ ರಾಣಿಗೆ ತನ್ನ ಮೇಲೆ ಪ್ರೇಮವಿರಲಿಲ್ಲ ಯಾಕಂದರೆ ರಾಜನ ಮೇಲೆ ರಾಣಿಯ ಪ್ರೇಮ ವಾಸ್ತವಿಕವಾಗಿ ಇರದೇ ಕೃತಕ ರೂಪದಲ್ಲಿದ್ದಿತು.

ಮಂತ್ರಿಯು ರಾಣಿಯಿಂದ ಫಲ ಪಡೆದನು ಆದರೆ ಆತನು ಆ ಫಲವನ್ನು ತನ್ನ ಪತ್ನಿಗೆ ಕೊಡದೆ, ತಾನೂ ತಿನ್ನದೆ ಒಬ್ಬ ವೇಶ್ಯೆಗೆ ನೀಡಿದ. ಆತ ಆ ವೇಶ್ಯೆಯನ್ನು ತುಂಬಾ ಪ್ರೀತಿಸುತ್ತಿದ್ದ. ನೋಡಿ ಸಹೋದರರೇ ಈ ಜಗತ್ತು ಹೇಗಿದೆ? ಫಲ ಪಡೆದ ವೇಶ್ಯೆ ನನಗೆ ಇಷ್ಟೊಂದು ಶ್ರೇಷ್ಠ ಫಲ ದೊರೆತಿದೆ. ಇದು ನನ್ನ ಸೌಭಾಗ್ಯ, ಆದರೆ ಇದನ್ನು ನಾನು ತಿನ್ನುವುದಿಲ್ಲ, ಉತ್ತಮ ವಸ್ತುಗಳನ್ನು ಭೋಗಿಸುವವರು ರಾಜರೇ ಆಗಿರುವುದರಿಂದ ಇದನ್ನು ಅವರಿಗೆ ಕಾಣಿಕೆಯಾಗಿ ನೀಡುವೆ ಎಂದು ಯೋಚಿಸಿದಳು. ಈ ಫಲವನ್ನು ರಾಜನಿಗೆ ಕೊಡಲು ಹೊರಟಳು. ಅರಮನೆಗೆ ಬಂದ ಅವಳು- ರಾಜನ್ ಇದು ಅತಿ ಉತ್ಕೃಷ್ಟವಾದ ಫಲ ನನಗೆ ದೊರೆತಿದೆ, ಇದು ಎಲ್ಲೆಡೆ ಸಿಗುವುದಿಲ್ಲ,

ತಮಗೆ ಯೋಗ್ಯವಾಗಿದೆ ತಮಗೆ ಕಾಣಿಕೆಯ ರೂಪದಲ್ಲಿ ನೀಡಲು ಬಂದಿದ್ದೇನೆ, ಮುಖ್ಯವಾದ ಮತ್ತು ಎಲ್ಲಕ್ಕಿಂತ ಉತ್ತಮ ವಸ್ತುಗಳ ಮೇಲೆ ಪ್ರಥಮ ಅಧಿಕಾರ ರಾಜನಿಗೆ ಇರುತ್ತದೆ. ನಾವೆಲ್ಲ ಇವುಗಳನ್ನು ಉಪಭೋಗ ಮಾಡಲು ಸಾಧ್ಯ. ಇದನ್ನು ನೀವು ತೆಗೆದುಕೊಳ್ಳಿ, ಸ್ವೀಕಾರಮಾಡಿ, ಬಹಳ ಭಕ್ತಿಭಾವದಿಂದ ಬಂದಿದ್ದೇನೆ–ಎಂದು ಹೇಳಿದಳು. ವೇಶ್ಯೆಯು ಆ ಫಲವನ್ನು ರಾಜನ ಮುಂದೆ ಮಾಡಿದಳು. ರಾಜನು ಆ ಫಲವನ್ನು ಪಡೆದ ಹಾಗೆಯೇ ಅದನ್ನು ನೋಡಿದ ಆತನಿಗೆ ಬಹಳ ಆಶ್ಚರ್ಯವಾಯಿತು. ಈ ಫಲ ಎಲ್ಲ ಸ್ಥಳಗಳಲ್ಲಿ ಸಿಗುವುದೇ ಇಲ್ಲ. ಇದು ನನ್ನ ಬಳಿ ಬಂದಿದ್ದಿತು ನಾನು ರಾಣಿಗೆ ನೀಡಿದ್ದೆ, ವೇಶ್ಯೆಯ ಬಳಿ ಹೇಗೆ ತಲುಪಿತು? ಇದರ ಬಗ್ಗೆ ತಿಳಿಯಬೇಕು. ಯಾರನ್ನು ಕೇಳುವುದು? ವೇಶ್ಯೆಯನ್ನೇ ಯಾಕೆ ಕೇಳಬಾರದು ಎಂದು ನಿನ್ನ ಬಳಿ ಈ ಫಲ ಹೇಗೆ ಬಂದಿತು? ಎಂದು ರಾಜ ವೇಶ್ಯೆಯನ್ನು ಕೇಳಿಯೇ ಬಿಟ್ಟ.

ವೇಶ್ಯೆಯು ಏನೂ ಹೇಳಲಿ ರಾಜಾ, ನಿಮ್ಮಿಂದ ಮುಚ್ಚಿಯೂ ಇಡಲಾರೆ, ತಾವು ನಮ್ಮ ರಾಜರು, ರಕ್ಷಕರು. ಈ ಫಲವನ್ನು ನನಗೆ ಮಂತ್ರಿಗಳು ನೀಡಿದರು ಎಂದು ಹೇಳಿದಳು. ಮಂತ್ರಿ ಬಂದರು ಆತನನ್ನು ರಾಜಾ ಕೇಳಿದ ಈ ಫಲವನ್ನು ನೀನು ವೇಶ್ಯೆಗೆ ನೀಡಿದ್ದಿಯಾ ಹಾಗಾದರೆ ನಿನ್ನ ಬಳಿ ಈ ಫಲ ಹೇಗೆ ಬಂದಿತು? ಮಂತ್ರಿ ಏನು ಹೇಳಬೇಕು ಎಂದು ಯೋಚನೆ ಮಾಡತೊಡಗಿದ. ಅವರಿಗೆ ತಲೆಯಿಂದ ಕಾಲಿನವರೆಗೆ ಬೆವರು ಸುರಿಯತೊಡಗಿತು, ಎದೆ ನಡುಗತೊಡಗಿತು, ಈಗ ನನ್ನ ಸಾವು ನಿಶ್ಚಿತವೆನಿಸುತ್ತದೆ, ಈಗ ಏನಾಗುತ್ತದೆ, ನನ್ನ ಈ ರಹಸ್ಯ ಹೇಗೆ ಬಯಲಾಯಿತು? ಏನೂ ಹೇಳದಿದ್ದರೆ ಕಷ್ಟವಾಗುತ್ತದೆ, ಹೇಳಿದರೂ ಸಹ ಕಷ್ಟ, ಈಗ ಮಾಡಿದರೆ ಏನು ಮಾಡಬೇಕು? ಹೇಳಲೇ ಬೇಕು ರಾಜ ನನಗೆ ಅಭಯದಾನ ನೀಡಿದರೂ ನೀಡಬಹುದು. ಮುಚ್ಚಿಡಬಾರದೆಂದು ಯೋಚಿಸುತ್ತಾ ಮಂತ್ರಿಯು ರಾಜನಿಗೆ–ಹೇ ರಾಜನ್ ಏನೇ ಆಗಲಿ, ತಾವು ಏನೇ ದಂಡ ನೀಡಿರಿ, ಸಹರ್ಷದಿಂದ ಸ್ವೀಕರಿಸುತ್ತೇನೆ. ಆದರೆ ಈ ಮಾತನ್ನು ನಿಮ್ಮಿಂದ ಮುಚ್ಚಿಡುವುದಿಲ್ಲ ಈ ಫಲ ನನಗೆ ಮಹಾರಾಣಿಯಿಂದ ದೊರಕಿತು–ಎಂದು ಹೇಳಿದ.

ಇಷ್ಟು ಕೇಳುತ್ತಲೇ ರಾಜನ ತನು–ಮನದಲ್ಲಿ ಬೆಂಕಿ ಹತ್ತಿದಂತಾಯಿತು. ಹೇ ಭಗವಾನ್ ಇದೇನಾಯಿತು? ಯಾರನ್ನು ನಾನು ನನ್ನವರೆಂದು ತಿಳಿದಿದ್ದೆ ಅವರು ನನಗೆ ಎಲ್ಲಕ್ಕಿಂತ ಪ್ರಿಯರು ಹಾಗೂ ನನ್ನಿಂದ, ಎಲ್ಲರಿಂದ ಹೆಚ್ಚು ಪ್ರೇಮ ಹೊಂದಿರಬಹುದು ಬೇರೆ ಯಾರೊಂದಿಗೂ ಇಲ್ಲವೆಂದು ಭಾವಿಸಿದ್ದೆ ಆದರೆ ಇದೇನು? ನನ್ನ ಅರ್ಧಾಂಗಿನಿಯೇ ನನಗೆ ಮೋಸಮಾಡುತ್ತಿದ್ದಾಳೆ. ನಿಮ್ಮನ್ನು ಬಿಟ್ಟು ನನ್ನವರಾರು ಇಲ್ಲ ಎಂದು ಇಲ್ಲಿ ಪ್ರೇಮ ತೋರುತ್ತಾಳೆ ಆದರೆ ಹಿಂದಿನಿಂದ ಏನು ಮಾಡುತ್ತಾಳೆ? ಈ ಸಂಸಾರಕ್ಕೇಧಿಕ್ಕಾರ. ಈಗ ಯಾರ ಮೇಲೆ ವಿಶ್ವಾಸ ಮಾಡುವುದು. ರಹಸ್ಯ ಬಯಲಾಯಿತು. ರಾಣಿಯನ್ನು ಕರೆಸಿದ. ರಾಣಿ ಬಂದು ಇದೆಲ್ಲವನ್ನು ನೋಡಿದಾಗ ರಹಸ್ಯ ಬಯಲಾಗಿದೆ ಎಂದು ತಿಳಿದು ಏನಾಗುತ್ತಿದೋ ಗೊತ್ತಿಲ್ಲ, ಮಾಯಾಚಾರವಂತೂ ಇದ್ದೇ ಇರುವುದನ್ನು ನೀವೆಲ್ಲ ತಿಳಿದೇ ಇದ್ದೀರಾ. ಅಳುವ ತೊಳೆಯುವ ಕಾರ್ಯ ಪ್ರಾರಂಭವಾಯಿತು. ಕುಂಟು ನೆಪಗಳನ್ನು ರೂಪಿಸುವ ತಿಳಿಸುವ ಕಾರ್ಯ ಪ್ರಾರಂಭವಾಯಿತು. ರಾಜಾ ಯೋಚಿಸಿ ಯಾವುದೇ ಪ್ರಕಾರದ ನೆಪ ನಡೆಯುವುದಿಲ್ಲ ಹಾಗೂ ನೀನು ಹೇಳುವುದರಿಂದ ನಾನು ಯಾರ್ಯಾರಿಗೆ ದಂಡ ಕೊಡಲಿ, ನಾನಂತೂ ಹೀಗೆಂದು ತಿಳಿದಿರಲಿಲ್ಲ. ವಾಸ್ತವಿಕ ತಪ್ಪು ನಮ್ಮದೇ ಆಗಿದೆ ಎಂದು ಹೇಳಿದ.

**ಸ್ತ್ರಿಯಶ್ಚರಿತ್ರಂ ಪುರುಷಸ್ಯ ಭಾಗ್ಯಂ, ದೇವೋ ನ ಜಾನಾತಿ ಕುತೋ ಮನುಷ್ಯಾ:।**

ಅರ್ಥಾತ್ ಸ್ತ್ರೀಯರ ಚಾರಿತ್ರ ಮತ್ತು ಪುರುಷರ ಭಾಗ್ಯವನ್ನು ದೇವತೆಗಳು ಸಹ ತಿಳಿಯಲಾರರು ಎಂದ ಮೇಲೆ ಮನುಷ್ಯರ ಸಾಮಾರ್ಥ್ಯ ಏನಿರಬಹುದು, ಧರ್ಮಭಾವನಾ ಶತಕದಲ್ಲಿ ಹೀಗೆ ಬರೆಯಲಾಗಿದೆ.

**ನಾರಿಯ ಚರಿತ ಹಾಗೂ ಪುರುಷರ ಭಾಗ್ಯ।**
**ತಿಳಿಯಲಾಗದು ದೇವರಿಗೂ, ಏನಿದ್ದಿತು ಮಾನವ ಭಾಗ್ಯ॥**
**ಮೇಘ ಕ್ರಿಯೆಯಲಿ–ನಾರಿಗಿದೆ, ಮಿಂಚಿನಸಮ ಚಂಚಲತೆ।**
**ಮಾಯಾಚಾರಿ ನಾರಿಯಲಿ, ನರ ಹೇಗೆ ಇಟ್ಟಾನು ವಿಶ್ವಾಸ॥123॥**
**ಸುಂದರ ಫಲವ ಕೊಟ್ಟರು ಯಾರೋ ರಾಜಗೆ, ರಾಜಾ ನೀಡಿದ ರಾಣಿಗೆ।**
**ಅದನ ಕೊಟ್ಟಳು ರಾಣಿ ಮಂತ್ರಿಗೆ, ಮಂತ್ರಿ ಕೊಟ್ಟನು ವೇಶ್ಯೆಗೆ॥**
**ಸೌಭಾಗ್ಯ ಭಾವಿಸಿ ವೇಶ್ಯಯಾ, ಆ ಫಲ ಕೊಟ್ಟಳು ರಾಜನಿಗೆ।**
**ನಾರಿಯ ಕಪಟವ ನೋಡಿ, ರಾಜಗೆ ಹುಟ್ಟಿತು ತ್ಯಾಗದ ಭಾವ॥124॥**

ಆಚಾರ್ಯ ಕುಂದಕುಂದ ಸ್ವಾಮಿಗಳು ಸ್ವಯಂ ಹೇಳಿದರು– ಏನೆಂದರೆ ಮಾಯಾಚಾರ ಸ್ತ್ರೀಯರ ಬಳಿ ಸ್ವಭಾವದಿಂದಲೇ ಇರುತ್ತದೆ. ಮಾಯಾಚಾರವು ಮನುಷ್ಯನನ್ನು ಪತನೋನ್ಮುಖಿಯನ್ನಾಗಿ ಮಾಡುತ್ತದೆ. ಎಲ್ಲ ವೈರತ್ವ ವಿರೋಧಗಳು ಮಾಯಾಚಾರದಿಂದಲೇ ಪ್ರಾರಂಭವಾಗುತ್ತವೆ. ವಿಶ್ವದ ಎಲ್ಲ ಕೆಡಕುಗಳ ಭಂಡಾರ ಮಾಯಾಚಾರವಿದೆ. ಆಗ ರಾಜನು ಅರೆ ನಮ್ಮೊಂದಿಗೆ ಎಷ್ಟೊಂದು ಮಾಯಾಚಾರ ನಡೆಯುತ್ತಲಿದೆ. ಮೋಸವಾಗುತ್ತಿದೆ ಎಂದು ತಿಳಿದುಕೊಂಡನು. ನನ್ನದು ಇಷ್ಟೊಂದು ಶ್ರೇಷ್ಠ ಕುಲ, ಕುಟುಂಬ, ಪರಿವಾರ ಅದರಲ್ಲಿ ಇಂತಹ ಕಾರ್ಯವಾಗುತ್ತಿದೆಯಲ್ಲ. ಇಂತಹ ಪರಿವಾರ ಮತ್ತು ಜೀವನ ಎರಡಕ್ಕೂ ಧಿಕ್ಕಾರವಿರಲಿ. ರಾಜನಿಗೆ ಸಾಕಾಗಿ ಈಗ ಮೋಕ್ಷ ಮಾರ್ಗ ಕಾಣತೊಡಗಿತು. ಇದೊಂದೇ ನಿಜವಾದ ಮಾರ್ಗವಿದೆ. ರಾಜನಿಗೆ ಸಂಸಾರ ಮಾರ್ಗ ಹೇಯವೆನಿಸತೊಡಗಿತು. ಎಲ್ಲ ರಾಜ್ಯ ವೈಭವ, ಭೋಗವಿಲಾಸ ಇತ್ಯಾದಿಗಳು ಸಪ್ಪೆ ಎನಿಸತೊಡಗಿತು. ಅಂತರಂಗದಲ್ಲಿ ಒಂದೇ ಚಿಂತನನಧಾರೆ ಪ್ರವಾಹಿತವಾಗತೊಡಗಿತು.

**ಅನಂತ ಜನ್ಮದಿ ಇದೇ ಭೋಗಿಸಿದೆ, ಅದೇ ಹಳೆ ವೈಭವ**
**ಗೆದ್ದಿದ್ದರೆ ಎಂಟು ಕರ್ಮ, ದೊರೆಯುತಿದ್ದಿತು ಶಿವನ ದಡ**

ಜಗತ್ತಿನಲ್ಲಿ ಎಲ್ಲರೂ ಸ್ವಾರ್ಥದ ಜೊತೆಗಾರರು, ಸಂಸಾರದಲ್ಲಿ ಯಾರು ನನ್ನವರಲ್ಲ ಎಲ್ಲವೂ ನಿಮ್ಮ ಕನಸು. ಈ ಸ್ವಪ್ನವು ಕರ್ಮಾಶ್ರೀತವಾಗಿರುವುದರಿಂದ ನಮ್ಮದಲ್ಲ, ಸಂಸಾರದ ಯಾವ ಪದಾರ್ಥವು ನಮ್ಮದಲ್ಲ. ನಮ್ಮಿಂದ ಬೇರೆಯಾಗಿರುವುದು ಅದೇ ನಮ್ಮದು ಹಾಗೂ ಯಾವ ಯಾವುದರ ಸಂಯೋಗವಾಗುವುದೋ ಅವುಗಳ ವಿಯೋಗ ನಿಶ್ಚಿತವಾಗಿದೆ. ಅದನ್ನು ನಮ್ಮದೆಂದು ಹೇಳುವುದೇ ಕನಸು. ಈ ಜಗತ್ತು ಸ್ವಾರ್ಥಿಯಾಗಿದೆ ಎಲ್ಲರೂ ಸ್ವಾರ್ಥದ ಜೊತೆಗಾರರಾಗಿದ್ದಾರೆ. ನೋಡಿ ರಾಣಿ ನನಗೆ ಮೋಸಮಾಡಿದಳು. ಈಗ ಯಾರಲ್ಲಿ ವಿಶ್ವಾಸವಿಡಲಿ? ಈಗ ಈ ಜನತ್ತಿನ ಮೇಲೆ ವಿಶ್ವಾಸವಿಡುವುದು ಸರಿಯಲ್ಲ. ಯಾರು ನಿಸ್ವಾರ್ಥಿಗಳೋ, ನಿಷ್ಕಪಟರೋ ಈಗ ಅವರ ಮೇಲೆ ವಿಶ್ವಾಸವಿಡುತ್ತೇವೆ. ಅವರೇ ನಮ್ಮ ಜೊತೆಗಾರರಾಗುತ್ತಾರೆ. ಅವರನ್ನೇ ನಮ್ಮ ಜೊತೆಗಾರರನ್ನಾಗಿ ಮಾಡಿಕೊಳ್ಳುತ್ತೇವೆ. ಅವರಿಗೆ ಶರಣು ಹೋಗುತ್ತೇವೆ ಹಾಗೂ ಅವರಿಂದಲೇ ಧರ್ಮದ ಮಾರ್ಗ,

ಮುಕ್ತಿಯಮಾರ್ಗ ಕೇಳುತ್ತದೆ. ಅವರೇ ನನಗೆ ನಿಜವಾದ ಮಾರ್ಗ ತೋರುತ್ತಾರೆ. ಅನ್ಯ ಬೇರೆ ಯಾವುದೇ ವ್ಯಕ್ತಿಗಳು ನಮಗೆ ನಿಜವಾದ ಮಾರ್ಗವನ್ನು ತೋರಲಾರರು. ತೋರಿಸುವುದಾದರೆ ಆ ರಸ್ತೆಯಲ್ಲಿ ನಿಶ್ಚಿಯವಾಗಿಯೂ ಮೋಸವಿದೆ. ಯಾಕೆಂದರೆ ಅಲ್ಲಿ ಸ್ವಾರ್ಥವಿದೆ. ಈ ಚಿಂತನೆ ರಾಜನ ಹೃದಯದಿಂದ ತಲೆಯೊಳಗೆ ಹೋಗತೊಡಗಿತು, ಕಿವಿಯಲ್ಲಿ ಗುನಿಗುನಿಸತೊಡಗಿತು **– ಲಕ್ಷಾಂತರ ಶತ್ರುಗಳನ್ನು ಹೊಡೆದೆ ನಾನು, ಎಂಟು ಕರ್ಮಗಳಿಗೆ ಹೊಡೆಯಲಿಲ್ಲ –** ಹಾಗೂ ಇದೇ ವಿಚಾರಗಳಿಂದ ಆತನಿಗೆ ವೈರಾಗ್ಯ ಉಂಟಾಯಿತು. ಈ ಕುಟಿಲ ಭಾವ, ಕಪಟ–ಛಲ–ಮಾಯಾಚಾರಗಳು ಜೀವನವನ್ನು ಎಷ್ಟು ವಿಕೃತಗೊಳಿಸುತ್ತವೆ ಹಾಗೂ ಇವುಗಳನ್ನು ಬಿಡದ ಹೊರತು ಆರ್ಜವ ಧರ್ಮದ ಸರಳತೆ, ಸಹಜತೆ ನಮ್ಮ ಜೀವನದಲ್ಲಿ ಮುಟ್ಟಲು ಸಹ ಸಾಧ್ಯವಿಲ್ಲ ಈ ಮಾತು ರಾಜನಿಗೆ ತಿಳಿದು ಬಂದಿತು. ಹೇಗೆಂದರೆ–

**ನೋಡಿರಿ ರಾಜನ ಆ ತ್ಯಾಗ, ಧೈರ್ಯವಾನನೆಂದು ಕರೆಯುವರು।**
**ಆರ್ಜವ ಧರ್ಮ ಪೂರ್ಣಪಡೆದು, ಮಾಡಿದ ಆತ್ಮ ಶುದ್ಧಿಯ॥**
**ಅದರಿಂದಾಗಿ ಹೆದರಿತು ಕರ್ಮಶತ್ರು, ಆಯಿತು ದೂರ ಸದಾಕಾಲ।**
**ಭವಬಂಧದಿ ಬಿಡುಗಡೆ ಹೊಂದಿ, ಅನುಭವಿಸುವುದು ಶಿವಸುಖವ॥26॥**

ಮನ–ವಚನ–ಕಾಯಗಳಿಂದ ನಿರಂತರ ಮಾಯಾಚಾರ ಮಾಡುವವನು ಯಾವ ಬುದ್ಧಿವಂತನಿಂದ ವಿಶ್ವಾಸ ಮಾಡಲು ಯೋಗ್ಯನಾಗುತ್ತಾನೆ? ಯಾವುದರಿಂದಲೂ ಮುಚ್ಚಲಾಗದ ದೋಷ ಸಹ ಕಾಲವನ್ನು ಪಡೆದು ಪ್ರಕಟವಾಗಿಯೇ ಬಿಡುತ್ತದೆ, ನೀರಿನಲ್ಲಿ ಎಸೆದ ಮಲವು ದೀರ್ಘಕಾಲದವರೆಗೆ ತಳದಲ್ಲಿ ಸ್ಥಿರವಾಗಿ ಇರುವುದಿಲ್ಲ ಅಥವಾ ಹೊರಗೆ ಬಂದೇ ಬರುತ್ತದೆ. ಆರ್ಜವ ಧರ್ಮದ ವಿಷಯದಲ್ಲಿ ಪದ್ಮನಂದಿ ಪಂಚವಿಂಶತಿಕಾ ಗ್ರಂಥದಲ್ಲಿ ಆಚಾರ್ಯರು ಹೀಗೆ ಹೇಳಿದ್ದಾರೆ–

**ಹೃದಿ ಯತ್ತದ್ವಾಚಿ ಬಹಿಃ ಫಲತಿ ತದೇವಾರ್ಜವಂ ಭವತ್ಯೇತತ್।**
**ಧರ್ಮೋ ನಿಕೃತಿರಧರ್ಮೋ, ದ್ವಾವಹಿ ಸುರಸದ್ಮನರಕ ಪಥೌ ॥89॥**

ಹೃದಯದಲ್ಲಿರುವ ವಿಚಾರ, ಅದೇ ವಚನದಲ್ಲಿರುತ್ತದೆ ಹಾಗೂ ಅದೇ ಹೊರಗು ಫಲಿಸುತ್ತದೆ ಅರ್ಥಾತ್ ಶರೀರದಿಂದಲೂ ಸಹ ಅದಕ್ಕನುಸಾರವಾಗಿಯೇ ಕಾರ್ಯ ಮಾಡಲಾಗುತ್ತದೆ– ಇದೇ ಆರ್ಜವ ಧರ್ಮ, ಇದಕ್ಕೆ ವಿಪರೀತವಾಗಿ ಬೇರೆಯವರಿಗೆ ಮೋಸ ಮಾಡುವುದು ಅಧರ್ಮವಾಗಿದೆ. ಸ್ವರ್ಗ ಅರ್ಥಾತ್ ದೇವಗತಿಯು ಸರಳತೆಯ ಮೆಟ್ಟಿಲಾಗಿದೆ. ಆದರೆ ಕುಟಿಲತೆ ಪಶುಗತಿಯ ಪಥವಾಗಿದೆ. ಸರಳ ಪರಿಣಾಮಗಳಲ್ಲಿ ಊರ್ಧ್ವಗತಿಯು ದೊರೆತರೆ, ಕುಟಿಲ ಪರಿಣಾಗಳಿಂದ ಚತುರ್ಗತಿ ರೂಪದ ಸಂಸಾರದಲ್ಲಿ ಭ್ರಮಣೆಯಾಗುತ್ತದೆ. ಮಾಯಾಚಾರ ಮಾಡಿ ಅನೇಕ ಉಪಾಯಗಳಿಂದ ಬೇರೆಯವರನ್ನು ಮೋಸ ಮಾಡುವವರು ಮಹಾಮೋಹಿ ಸ್ವರ್ಗ ಮತ್ತು ಮೋಕ್ಷದ ಸುಖಗಳಿಂದ ತಮ್ಮನ್ನು ತಾವೇ ವಂಚಿಸುತ್ತಾರೆ. ಅನ್ಯರ ಹೃದಯ ಕವಾಟದಲ್ಲಿ ಅಡಗಿರುವ ಮಾಯಾಚಾರಿ ಭಾವಗಳನ್ನು ತಿಳಿಯುವುದು ಅತ್ಯಂತ ಕಠಿಣವಾಗಿದೆ. ಮಾಯಾಚಾರ ಮಾಡುವವರು ಹೊರಗಿನಿಂದ ದೊಡ್ಡ ಸರಳ ವಿನಮ್ರ ಪ್ರಾಣಿಗಳಂತೆ ತೋರುತ್ತಾರೆ. ಆದರೆ ಒಳಗಿನಿಂದ ಅವರು ಬೇರೆಯೇ ಆಗಿರುತ್ತಾರೆ. ಖರ್ಜೂರ ಮೇಲಿನಿಂದ ಕೋಮಲ ಹಾಗೂ ಒಳಗಿನಿಂದ ಬಹಳ ಕಠೋರವಾಗಿರುವಂತೆ ಮಾಯಚಾರಿಗಳಿರುತ್ತಾರೆ. ಹೀಗೆ ಹೇಳಿಯೂ ಇದ್ದಾರೆ–

**ಉನ್ನತಂ ಮಾನಸಂ ಯಸ್ಯ, ಭಾಗ್ಯ ತಸ್ಯ ಸಮುನ್ನತಂ ।**

ಉನ್ನತವಾಗಿರುವವರ ಮನಸ್ಸು ಸರಳ ಶಾಂತ ಸದೃಢವಾದರೆ ಅವರ ಜೀವನ ಭಾಗ್ಯವೂ ಶ್ರೇಷ್ಠವಾಗುತ್ತದೆ. ಜನ್ಮ-ಮುಪ್ಪು-ಮರಣಗಳ ಮೇಲೆ ವಿಜಯ ಸಾಧಿಸಲು ಮನಸ್ಸು ಸರಳವಾಗುವುದು ಅತ್ಯಂತ ಅವಶ್ಯವಿದೆ. ದೋಷಗಳನ್ನು ಅತಿಯಾಗಿ ಮುಚ್ಚಿಟ್ಟರೂ ಸಹ ಅವು ಕಾಲಾಂತರದಲ್ಲಿ ಪ್ರಕಟವಾಗಿಯೇ ಬಿಡುತ್ತವೆ. ಆದ್ದರಿಂದ ದೋಷಗಳನ್ನು ಮಾಡಿದ ನಂತರ ಎಂದಿಗೂ ಮುಚ್ಚಿಡಬಾರದು ಕೂಡಲೇ ಪ್ರಾಯಶ್ಚಿತ ಇತ್ಯಾದಿ ತೆಗೆದುಕೊಂಡು ಆ ದೋಷಗಳಿಂದ ನಿವೃತ್ತಿಯಾಗುವ ಪ್ರಯತ್ನ ಮಾಡಬೇಕು. ಇದರ ಕುರಿತು ಹೀಗೆ ಹೇಳಿದ್ದಾರೆ- **'ಪಾಪಂ ಕೃತ್ವಾನ ಗುಹ್ಯಯೇತ ಗುಹ್ಯಮಾನೇ ವಿವರ್ಧತೇ'** ಅರ್ಥಾತ್ ಪಾಪ ಮಾಡಿ ಮುಚ್ಚಿಡಬಾರದು, ಮುಚ್ಚಿಟ್ಟ ಪಾಪ ಶಾಂತವಾಗುವುದಿಲ್ಲ. ದಿನದಿಂದ ದಿನಕ್ಕೆ ನಿತ್ಯ ಪ್ರತಿದಿನ ಅದು ಹೆಚ್ಚಾಗುತ್ತಾ ಸಾಗುತ್ತದೆ. ಆತ್ಮ ನಿರೀಕ್ಷಣೆ ಮಾಡಿಕೊಂಡು ನಮ್ಮ ಕೊರತೆಗಳನ್ನು ಸ್ವೀಕರಿಸುವುದು ಎಲ್ಲಕ್ಕಿಂತ ಕಠಿಣ ಕಾರ್ಯವಾಗಿದೆ. ಆದರೆ ನಮ್ಮ ದೋಷಗಳ ಉದ್ಘಾಟನೆಯು ಸಹ ಎಲ್ಲರ ಸಮ್ಮುಖದಲ್ಲಿ ಮಾಡಬಾರದೆಂಬ ಗಮನ ಇರಬೇಕಾದುದು ಅವಶ್ಯವಾಗಿದೆ. ನಮ್ಮ ಮೋಕ್ಷ ಮಾರ್ಗದರ್ಶರು, ಹಿತೈಷಿಗಳು ನಮಗಿರುವ ದೊಡ್ಡ ಅನುಭವಿಗಳು, ಗಂಭೀರ ಮತ್ತು ಶಾಸ್ತ್ರ ಬಲ್ಲ ಗುರುಗಳ ಸಮಕ್ಷಮ ನಮ್ಮ ಆಲೋಚನೆ ಇತ್ಯಾದಿ ಮಾಡಿ ಆತ್ಮ ಶುದ್ಧಿ ಮಾಡಿಕೊಳ್ಳಬಹುದು. ಆಚಾರ್ಯ ಕುಂದಕುಂದ ಸ್ವಾಮಿಗಳು ಉತ್ತಮ ಆರ್ಜವದ ವಿಷಯದಲ್ಲಿ ಬಾರಸಾಣುಪೆಕ್ಖಾ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ-

**ಮೋತ್ತೂಣ ಕುಡಿಲ ಭಾವಂ, ಣಿಮ್ಮಲಂ ಹಿದಏಣ ಚರದಿ ಜೋ ಸಮಣೋ**
**ಅಜ್ಜವ ಧಮ್ಮಂ ತಇಯೋ, ತಸ್ಸ-ದು ಸಂಭವದಿ ಣಿಯಮೇಣ ॥73॥**

ಕುಟಿಲ ಭಾವಗಳನ್ನು ಬಿಟ್ಟು ನಿರ್ಮಲ ಹೃದಯದಿಂದ ಅಥವಾ ಹೃದಯದ ಶುದ್ಧತೆಯೊಂದಿಗೆ ಆಚರಣೆ ಮಾಡುವ, ಚಾರಿತ್ರದ ಪಾಲನೆ ಮಾಡುವ ಶ್ರಮಣ/ಮುನಿಗಳಿಗೆ ಆರ್ಜವ ಧರ್ಮ ಪ್ರಕಟವಾಗುತ್ತದೆ ಅಥವಾ ಇರುತ್ತದೆ. ಕುಟಿಲ ಭಾವಗಳನ್ನು ಬಿಟ್ಟು ಮಾಯಾಚಾರವನ್ನು ಬಿಟ್ಟು ನಿರ್ಮಲ ಹೃದಯದೊಂದಿಗೆ ಆಚರಣೆ ಮಾಡುವವರ ಆತ್ಮನಲ್ಲಿ ನಿಯಮದಿಂದ ಆರ್ಜವ ಧರ್ಮ ವಾಸಿಸುತ್ತದೆ, ಅನ್ಯರ ಬಳಿ ಅಲ್ಲ ಎನ್ನುವುದು ಈ ಹೇಳಿಕೆಯ ಉದ್ದೇಶವಾಗಿದೆ. ಅವರ ಮನಸ್ಸು ಎಷ್ಟು ಶುದ್ಧವಾಗಿರಬೇಕೆಂದರೆ ಸಾಕು;

**ಮನಮೇ ಹೋಯ ಸೊ ವಚನ ಉಚರಿಯೇ! ವಚನ ಹೋಯ ತೋ ತನ ಸೋ ಕರಿಯೇ**

(ಮನಸ್ಸಿನಲ್ಲಿರುವುದನ್ನು ವಚನದಲ್ಲಿ ಹೇಳಿರಿ, ವಚನದಲ್ಲಿರುವುದನ್ನು ಕಾಯದಿಂದ ಮಾಡಿರಿ) ಈ ಮಾತು ಜೀವನದಲ್ಲಿ ಇಳಿಯಲಿ, ಒಂದು ವೇಳೆ ಚಿಂತಿಸುವುದು ಬೇರೆ, ಹೇಳುವುದು ಬೇರೆ ಹಾಗೂ ಕ್ರಿಯೆ ಮಾಡುವುದು ಬೇರೆ, ಆ ನೋಡಿ ಈ ಆರ್ಜವ ಧರ್ಮ ನಿಮ್ಮ ಜೀವನದಲ್ಲಿ ಎಂದಿಗೂ ಬರಲಾರದು. ಮಾಯಾಚಾರ, ಛಲ, ಕಪಟ ಎಲ್ಲಿ ಆಗುತ್ತಿರುತ್ತದೆಯೋ ಅಲ್ಲಿ ಆರ್ಜವ ಧರ್ಮದ ವಾಸ ಆಗುವುದಿಲ್ಲ. ಇದು ಬಹಳ ಪವಿತ್ರ ವಸ್ತುವಾಗಿದೆ. ಇದರ ವಾಸಕ್ಕಾಗಿ ನಮ್ಮ ಹೃದಯ ಬಹಳ ಸ್ವಚ್ಛ ಸುಂದರವಾಗಬೇಕಾಗುತ್ತದೆ. ನಾವು ಧ್ಯಾನ ಮಾಡುವುದಾದರೆ ನಮ್ಮ ಮನರೂಪದ ವೇದಿಕೆಯಲ್ಲಿ ಪ್ರಭುವನ್ನು ವಿರಾಜಮಾನಗೊಳಿಸಬೇಕು. ಆ ಪ್ರಭುವು ದಶ ಧರ್ಮಗಳನ್ನು ತನ್ನ ಜೀವನದಲ್ಲಿ ಪಾಲನೆ ಮಾಡಿ ಪ್ರಭು ಆಗಿದ್ದಾರೆ ಅವರ ಬಳಿ ಅನಂತ ಗುಣಗಳಿವೆ, ಈ ದಶಧರ್ಮಗಳು ಸಹ ಅವರ ಗುಣಗಳಾಗಿದ್ದವು, ಆಗಿಯೂ ಇರುತ್ತವೆ. ಆದರೆ

ಅವರಿಗೆ ಈ ಧರ್ಮಗಳ ಮಾಧ್ಯಮದಿಂದ ಫಲ ದೊರಕಿಯಾಗಿದೆ ಎಂಬುದನ್ನು ಗಮನಿಸಬೇಕು. ಅವರ ಉಪದೇಶದಲ್ಲಿ ಧರ್ಮ ಇದ್ದೇ ಇರುತ್ತದೆ. ಇಡೀ ಜಗತ್ತಿನಲ್ಲಿ ಇರುವುದೆಲ್ಲವು ಅವರ ಕೇವಲ ಜ್ಞಾನದ ಹೊರಗಿಲ್ಲ ಆದ್ದರಿಂದ ನಾವು ಇಂತಹ ಧರ್ಮವು ಅವರ ಬಳಿ ಇದೆ ಎಂದು ನಾವು ಹೇಳುತ್ತೇವೆ. ಇಂತಹ ಪ್ರಭುವನ್ನು ನಮ್ಮ ಅಂತರಂಗದಲ್ಲಿ ಕುಳ್ಳಿರಿಸಬೇಕೆಂದರೆ ಈ ಧರ್ಮಗಳನ್ನು ನಮ್ಮ ಆತ್ಮ ವೇದಿಕೆಯ ಮೇಲೆ ಕುಳ್ಳಿಸಬೇಕೆಂದರೆ ನಮ್ಮ ಆತ್ಮರೂಪದ ವೇದಿಕೆಯನ್ನು ಸ್ವಚ್ಛ ಸುಂದರಗೊಳಿಸಬೇಕು. ಅವುಗಳಲ್ಲಿ ಈ ಕಷಾಯಗಳಿರಬಾರದು. ಕ್ರೋಧ, ಮಾನ, ಮಾಯಾ, ಲೋಭ ಇತ್ಯಾದಿ ಕಷಾಯಗಳು ಇದ್ದರೆ ಆ ಮನರೂಪದ ವೇದಿಕೆಯಲ್ಲಿ ನಾವು ಈ ಪ್ರಭುವನ್ನು ಕುಳಿಸಲು ಆಗದು, ಅವರ ಧ್ಯಾನ ಮಾಡಲಾರೆವು. ನಮ್ಮ ಧ್ಯಾನ ಎಂದಿಗೂ ನಿರ್ಮಲವಾಗಲಾರದು. ಈ ಮಾತುಗಳನ್ನು ನಾವು ಸದಾಕಾಲ ನೆನಪಿನಲ್ಲಿಡಬೇಕು.

ಮನಸ್ಸಿನ ನಿರ್ಮಲತೆಯಿಂದಲೇ ಮಾಯಾಚಾರ ಕೊನೆಗೊಳ್ಳುತ್ತದೆ. ಸರಳತೆಯು ಸೀಮಾತೀತವಾಗಿದೆ. ಕುಟೀಲತೆ ಸೀಮೆಯಿಂದ ಕೂಡಿದೆ ಛಲ, ಕಪಟ, ಮೋಸಗಳನ್ನು ಎಷ್ಟೇ ಮುಚ್ಚಿಡುವ ಪ್ರಯತ್ನ ಮಾಡಿದರೂ ಅವು ಯಾವುದಾದರೊಂದು ರೂಪದಲ್ಲಿ ಪ್ರಕಟವಾಗಿಯೆ ಬಿಡುತ್ತವೆ. ಈ ಜಗತ್ತಿನಲ್ಲ ಮೋಸ ಹೊಂದುವುದು ಕೆಟ್ಟದಲ್ಲ ಆದರೆ ಮೋಸ ಮಾಡುವುದು ಬಹಳ ಕೆಟ್ಟ ವಿಷಯವಾಗಿದೆ. ಯಾಕೆಂದರೆ ಯಾರಾದರೂ ಮೋಸ ಮಾಡುತ್ತಾರೆ. ನಮ್ಮ ಪೂರ್ವಜನ್ಮದ ಪಾಪಕರ್ಮದ ಫಲದಿಂದ ನಾವು ಸಾಲ ತೀರಿಸುವಂತೆ ಸಮತಾ ಪೂರ್ವಕ ಸಹಿಸಿಕೊಳ್ಳಬೇಕು. ಕರ್ಮಭೂಮಿಯಲ್ಲಿ ನೋಡಿ ಮೋಸ, ಛಲ, ಕಪಟಗಳಿವೆ ಪರಿಣಾಮವಾಗಿ ತಿರ್ಯಂಚ ಮತ್ತು ನರಕಗತಿಯ ದ್ವಾರಗಳು ಸದಾ ತೆರೆದಿರುತ್ತವೆ. ಆದರೆ ಭೋಗಭೂಮಿಯಲ್ಲಿ ಯಾವುದೇ ಛಲ, ಕಪಟ, ವ್ಯಸನ, ದುರಾಚಾರಗಳಿಲ್ಲ ಅಲ್ಲಿಯ ಮನುಷ್ಯ ಹಾಗೂ ತಿರ್ಯಂಚರು ಋಜು ಪರಿಣಾಮ, ಸರಳ ವಿಚಾರದವರಾಗಿರುತ್ತಾರೆ. ಆದ್ದರಿಂದ ಅಲ್ಲಿ ಮರಣದ ನಂತರ ದೇವಗತಿಗೇನೆ ಹೋಗುತ್ತಾರೆ. ಸಹಜತೆ, ನಿಷ್ಕಪಟತೆ ಸರಳತೆಗಳಿಂದಲೇ ಈ ಪರಿಣಾಮಗಳಿವೆ.

ರಾಮಾಯಣದ ರಚನೆ ಯಾಕೆ ಆಯಿತೆಂದು ನಿಮಗೆಲ್ಲರಿಗೂ ತಿಳಿದಿದೆ. ಛಲ, ಕಪಟಗಳೇ ಈ ಕಥೆಯ ಕಾರಣಗಳಾಗಿವೆ. ರಾಮನ ಕಥೆಯ ಹೆಸರೇ ರಾಮಾಯಣ, ರಾಜಾ ದಶರಥ ತನ್ನ ರಾಣಿಯೊಂದಿಗೆ ರಥದಲ್ಲಿ ಹೋರಟಾಗಿನ ಪ್ರಸಂಗ. ರಥ ಬಹಳ ವೇಗವಾಗಿ ಓಡುತ್ತಿದ್ದಿತು ಆಕಸ್ಮಿಕವಾಗಿ ಆ ರಥದ ಗಾಲಿಗಳನ್ನು ನಿಯಂತ್ರಿಸುವ ಕೀಲು ಹೊರಬಂದಿತು. ರಾಣಿ ಇದನ್ನು ನೋಡಿ, ತನ್ನ ಚಿಂತೆಯೊಂದಿಗೆ, ರಾಜನ ಚಿಂತೆಯೂ ಆಯಿತು. ಅವಳು ಸಾಗುತ್ತಿರುವ ರಥದ ಚಕ್ರದ ಕೀಲಿನಲ್ಲಿ ತನ್ನ ಕೈಯ ಬೆರಳನ್ನಿಟ್ಟು, ಸಾಗುತ್ತಿರುವ ರಥವನ್ನು ನಿಯಂತ್ರಿಸಿದಳು. ರಾಜನಿಗೆ ಈ ರಹಸ್ಯ ತಿಳಿದಾಗ ಆತ ಅತಿ ಪ್ರಸನ್ನನಾಗಿ ಪ್ರಸನ್ನತೆಯಲ್ಲಿಯೇ ರಾಣಿಗೆ ವರದಾನ ಕೇಳಿಕೊಳ್ಳಲು ಹೇಳಿದ, ಏನೇ ಬೇಕಿದ್ದರೂ ನಾವು ಕೊಡಲು ಸಿದ್ದರಿದ್ದೇವೆ. ನೀನು ನನ್ನ ಜೀವವನ್ನು ಉಳಿಸಿದ್ದಿಯಾ, ಆದರೆ ರಾಜನು ವರದಾನದ ಸ್ಥಾನದಲ್ಲಿ ನಮ್ಮ ಧರ್ಮ ಸಂಕಟದಲ್ಲಿ ಬೀಳುವುದನ್ನು ಯೋಚಿಸಲಿಲ್ಲ. ವರದಾನ ಅಂದುಕೊಂಡಂತೆ ಕಾಯ್ದಿರಿಸಲಾಗಿದ್ದಿತು ಕೂಡಲೇ ಅದು ಕಾರ್ಯಗತವಾಗಲಿಲ್ಲ. ನಮಗೆ ಬೇಕಾದಾಗ ನೀವು ಕೊಟ್ಟರಾಯಿತು, ಇದರಲ್ಲಿಯೇ ಹೆಚ್ಚು ಕಡಿಯೆಯಾಯಿತು. ಯಾವುದೇ ರಹಸ್ಯಯದ ವಿಷಯ ಸಾಮಾನ್ಯವಾಗಿ ಹಾಗೆಯೇ ಬಿಡಬಾರದು. ಈಗಲೇ ಏನು ಬೇಕು ಕೇಳು ಎಂದಿದ್ದರೆ ಸರಿಯಾಗುತ್ತಿತ್ತು ನಂತರ ಮಾತು ಎನ್ನುವುದು ಆಗಬಾರದಿತ್ತು ಎನ್ನುವುದನ್ನು ಈ

ಪ್ರಸಂಗದಿಂದ ನಾವು ಕಲಿಯಬೇಕು. ಯಾಕೆಂದರೆ ಸಮಯದ ಲಾಭ ಪಡೆದು ಜನರು ತಮ್ಮ ಧರ್ಮದ ಹಾನಿಯನ್ನು ಮಾಡಬಹುದು ಹಾಗೂ ಇಲ್ಲಿ ಅದೇ ಆಯಿತು.

ಒಂದು ಸಾರಿ, ರಾಜಾ ಕೊನೆಗೆ ತನ್ನ ಹಟದಿಂದ ಹೊರಟೇಬಿಟ್ಟ, ಅವಕಾಶ ಬಂದಾಗ ಆದದ್ದಿಷ್ಟೆ ಭಗವಂತನ ಗಂಧೋದಕ ಕೂಡುವಲ್ಲಿ ಸ್ವಲ್ಪ ತಡವಾಗಿದ್ದಿತು. ಆಗ ಉದ್ಭವಿಸಿದ ಪ್ರಶ್ನೆ ಇಷ್ಟೇ ಅನ್ಯ ರಾಣಿಯರಿಗೆ ಗಂಧೋದಕವನ್ನು ಮೊದಲು ನೀಡಿ ನನಗೆ ನಂತರ ನೀಡಿದ್ದು ಯಾಕೆ? ನಾನು ರಾಜನ ಎಲ್ಲಕ್ಕಿಂತ ಪ್ರಿಯ ರಾಣಿಯಾಗಿದ್ದೇನೆ. ರಾಜ್ಯ ನಡೆಸುವುದರಲ್ಲಿಯೂ ಜೊತೆಗಿದ್ದೇನೆ. ಆದರೂ ನನಗೆ ನಂತರ ಗಂಧೋದಕ ನೀಡಿದರು ಸಾಕು ಇಷ್ಟರಲ್ಲಿಯೇ ಬೆಂಕಿ ಹರಡಿತು. ನನ್ನನ್ನು ಯಾರೂ ಕೇಳುವವರೇ ಇಲ್ಲ ಎಂಬ ಭಾವ ಬಂದಿತು. ರಾಜಾ ದಶರಥ ಈ ಸಂಸಾರದಿಂದ ವಿರಕ್ತನಾಗುತ್ತಿದ್ದ. ಆತ ರಾಜ್ಯವನ್ನು ಬಿಡುವವನಿದ್ದ ಹಾಗೂ ಆದ ಮೋಕ್ಷ ಮಾರ್ಗದಲ್ಲಿ ಹೊರಡುವ ಸಿದ್ಧತೆಯಲ್ಲಿದ್ದ, ಈ ಮಾತು ರಾಣಿಗೆ ತಿಳಿದಿದ್ದಿತು. ನೋಡಿ ಸಮಯದ ಚಕ್ರ ರಾಜನಿಗೆ ಕಷ್ಟವಾಗುವುದಿದ್ದಿತು, ಆ ರಾಣಿಯರಿಗೂ ಕಷ್ಟವಾಗುವುದಿದ್ದಿತು ಎಂತಹ ಸ್ವಾರ್ಥ ಉತ್ಪನ್ನವಾಯಿತು? ಈಗ ವರದಾನ ಕೇಳಲೋ, ಹಾ ಕೇಳಿಕೊ, ರಾಜ್ಯ ನೀಡುವ ಪ್ರಸಂಗವಿದ್ದಿತು. ರಾಣಿ ರಾಜನಿಗೆ –ನನ್ನ ಮಗ ಭರತನಿಗೆ ರಾಜ್ಯ ಕೊಡಿ ಹಾಗೂ ಇದರೊಂದಿಗೆ ರಾಮನಿಗೆ ವನವಾಸಕ್ಕೇ ಕಳಿಸಿ. ಇಷ್ಟು ಕೇಳುತ್ತಲೇ ರಾಜನಿಗೆ ಬಹಳ ದುಃಖವಾಯಿತು ಹಾಗೂ ಆತ–ಅರೇ ಇದೇನು ಮಾತು ನಿನ್ನ ಮಗನಿಗೆ ರಾಜ್ಯ ಈ ಮಾತು ಸರಿಯಾಗಿದೆ ಆತನು ನನ್ನ ಮಗನೇ ಇದ್ದಾನೆ ಆದರೆ ರಾಮನಿಗೆ ವನವಾಸ, ಇದು ಒಳ್ಳೆಯ ಮಾತಲ್ಲ ಆತನು ಸಹ ನನ್ನ ಮಗನೇ, ಆತನಿಗೆ ಸ್ವಲ್ಪವಾದರೂ ರಾಜ್ಯದಲ್ಲಿರಲು ಬಿಡು ಎಂದು ಹೇಳಿದ. ರಾಣಿಯು–ಇದು ನಾನು ಕೇಳಿದ ವರ– ನನಗೆ ಇದೇ ಬೇಕು– ಎಂದಳು ಹೀಗಿದ್ದರೆ ಸರಿ ಎಂದು ಆತ–

**ರಘುಕುಲ ರೀತ ಸದಾ ಚಲಿ ಆಯಿ, ಪ್ರಾಣ ಜಾಯ ಪರ ವಚನ ನ ಜಾಯಿ।**

(ರಾಮಚರಿತ ಮಾನಸ)

(ಪ್ರಾಣ ಹೋಗಲಿ ಆದರೆ ವಚನ ಹೋಗದು ಇದು ನಡೆದುಕೊಂಡು ಬಂದ ರಘುಕುಲ ರೀತಿ ಎಂದು ಹೇಳಿದ)

ಈಗ ಇದನ್ನೇ ಮಾಡಬೇಕು ಕಣ್ಣಿನಿಂದ ಅಶ್ರುಧಾರೆ ಹೊರಹೊಮ್ಮಿತು, ಬಹಳಷ್ಟು ಆಕುಲತೆ–ವ್ಯಾಕುಲತೆ ಹಾಗೂ ದುಃಖವಾಯಿತು. ಇದೆ ಛಲ, ಕಪಟದಿಂದ ಎಲ್ಲ ರಚನೆಗಳಾದವು ಮತ್ತು ರಾಮನ ಜೀವನದಲ್ಲಿ ಹಟವೇ ಹಟ ಕಂಡು ಬರುತ್ತದೆ ಮುಂದೆ ಇನ್ನೊಂದು ಪ್ರಸಂಗ.

ಒಂದು ಸಾರಿ ಒಬ್ಬ ಸ್ತ್ರೀ ಕಾಡಿನಲ್ಲಿ ಬಂದಳು. ಅವಳು ರಾಜ ಪರಿವಾರದವಳಾಗಿದ್ದಳು ತನ್ನ ರೂಪ ಲಾವಣ್ಯ ಸೌಂದರ್ಯಗಳಿಂದ ಆಕರ್ಷಿಸಲು ಪ್ರಯತ್ನಿಸಿದಳು. ತನ್ನ ವಿವಿಧ ಹಾವಭಾವಗಳನ್ನು ಪ್ರಕಟಿಸಿ ಬಹಳ ಪ್ರಯತ್ನ ಮಾಡಿದಳು. ಆದರೆ ಆ ಮಹಾ ಪುರುಷರು ಅದರಿಂದ ಪ್ರಭಾವಿತರಾಗಲಿಲ್ಲ. ಬಹಳಷ್ಟು ಪ್ರಯತ್ನ ಮಾಡಿದರೂ ಆಕರ್ಷಿತರಾಗದಿದ್ದಾಗ ಆ ಸ್ತ್ರೀಯೂ ತನ್ನ ದೋಷಗಳನ್ನು ಮುಚ್ಚಿಡುತ್ತಾ ಅವರ ಮೇಲೆ ದೋಷಾರೋಪ ಮಾಡಲು ತನ್ನ ಚೂಪಾದ ನಖಗಳಿಂದ ಶರೀರವನ್ನು ಪರಚಿಕೊಂಡಳು, ವಸ್ತ್ರಗಳನ್ನು ಅಸ್ತವ್ಯಸ್ತ ಮಾಡಿಕೊಂಡಳು ನಂತರ ತನ್ನ ಅಣ್ಣನ ಬಳಿ ಹೋಗಿ–ಕಾಡಿನಲ್ಲಿ ಇಬ್ಬರೂ ವನವಾಸಿಗಳಿದ್ದಾರೆ, ಅವರು ನನಗೆ ತೊಂದರೆ ಕೊಟ್ಟರು ಹಾಗೂ ನನಗೆ ಈ ದಿಶೆಯನ್ನುಂಟು ಮಾಡಿದರೆಂದು ಹೇಳುತ್ತಾ ಜೋರು

ಜೋರಾಗಿ ಅಳ ತೊಡಗಿದಳು. ಅಣ್ಣ ತನ್ನ ತಂಗಿಯ ಈ ಅವಸ್ಥೆಯನ್ನು ನೋಡಿದ ಆತನಿಗೆ ಕೋಪ ಬಂದಿತು ಸೇಡು ತೀರಿಸಿಕೊಳ್ಳಲು ಕಾಡಿನ ಕಡೆಗೆ ನಡೆದ. ಹೋಗುವಾಗ ಜೊತೆಯಲ್ಲಿ ತನ್ನ ಮಾಮನನ್ನು ಕರೆದೊಯ್ದು, ಆ ಮಾಮಾ ತನ್ನ ಮಾಯಾಚಾರದಿಂದ ಬಹಳಷ್ಟು ರೂಪಧಾರಣೆ ಮಾಡಿಕೊಳ್ಳುವವನಾಗಿದ್ದನು.

ಇಬ್ಬರೂ ಕಾಡಿಗೆ ಬಂದರು. ಮಾಮಾ ತನ್ನನ್ನು ಜಿಂಕೆಯ ವೇಷವನ್ನಾಗಿ ಮಾಡಿಕೊಂಡು ನೋಡುವಾಗ ಚಿನ್ನದಂತೆ ಕಾಣುತ್ತಿದ್ದು ಗುಡಿಸಿಲಿನ ಅಕ್ಕ ಪಕ್ಕದಲ್ಲಿ ಜಿಗಿದಾಡುತ್ತಿದ್ದ. ಅಳಿಯ ರಾಮ ನಾಮದ ಹೊದಿಕೆ ಹೊದ್ದು ಸಾಧುವಿನ ವೇಷಧಾರಣೆ ಮಾಡಿದ. ಜಿಂಕೆಗೆ, ನೀನು ಈ ಇಬ್ಬರೂ ಪುರುಷರನ್ನು ದೂರಕಾಡಿನಲ್ಲಿ ಕರೆದೊಯ್ಯುವಷ್ಟರಲ್ಲಿ ಇವರ ಸ್ತ್ರೀಯನ್ನು ಅಪಹರಿಸುತ್ತೇನೆಂದು ಹೇಳಿದ, ಜಿಂಕೆಯು ಗುಡಿಸಿಲಿನ ಹೊರಗೆ ನೆಗೆಯುತ್ತಾ. ಆಗಾಗ ಕುಣಿಯುತ್ತಾ ಆಗಾಗ ಓಡುತ್ತಾ, ಆಗಾಗ ನಿಲ್ಲುತ್ತ ವಿವಿಧ ರೀತಿಯ ಚೇಷ್ಟೆಗಳನ್ನು ಮಾಡುತ್ತಿದ್ದಿತು. ಆ ಸುವರ್ಣ ಮೃಗ, ತುಂಬಾ ಮುದ್ದಾಗಿ ಕಾಣುತ್ತಿದ್ದಿತು, ಗುಡಿಸಲಿನಲ್ಲಿದ್ದ ಸೀತೆಯ ಗಮನ ಅದರ ಮೇಲೆ ಬಿದ್ದು ಅವಳು ಯಾಕೆ ಈ ಮೃಗವನ್ನು ನಮ್ಮ ತೋಟದಲ್ಲಿಟ್ಟುಕೊಳ್ಳಬಾರದು ಎಂದು ಯೋಚಿಸಿದಳು ಅವಳು ತನ್ನ ಪತಿ ರಾಮ ಮತ್ತು ಮೈದುನ ಲಕ್ಷ್ಮಣನಿಗೆ ಈ ಜಿಂಕೆ ನನಗೆ ಬೇಕು ಇದನ್ನು ಹತ್ತಿರದಿಂದ ಮುಟ್ಟಬೇಕು ಎಂದು ಹೇಳಿದಳು. ಹಾ..ಹಾ.. ಯಾಕೆ ಇಲ್ಲ ಈಗಲೇ ತರುತ್ತೇವೆ. ರಾಮಚಂದ್ರ ಹೊರಟೇ ಬಿಟ್ಟರು. ಹಿಡಿದು ಬಿಡಲು ಹೊರಟರೆ ಅದು ಮುಂದೆ ಮುಂದೆ ಸಾಗಿತು ಮುಂದೆ ಹಿಡಿಯೋಣ, ಮುಂದೆ ಹಿಡಿಯೋಣ ಎಂದು ಸಾಗಿದಂತೆ ಅದು ಕಾಡಿನಲ್ಲಿ ಬಹಳ ದೂರ ಸಾಗಿತು. ರಾಮಚಂದ್ರ ಹೋಗಿ ಸಾಕಷ್ಟು ಸಮಯವಾಗಿ ಅವರು ಬರಲಿಲ್ಲ ಆಗ ಸೀತೆ ಹಾಗೂ ಲಕ್ಷ್ಮಣರಿಗೆ ಅವರ ಚಿಂತೆಯಾಗತೊಡಗಿತು. ಸೀತೆಯು ಮೈದುನ ಲಕ್ಷ್ಮಣನಿಗೆ ನಿಮ್ಮ ಅಣ್ಣ ಇನ್ನೂವರೆಗೆ ಬರಲಿಲ್ಲ. ಸ್ವಲ್ಪ ನೀನು ಹೋಗಿ ನೋಡು ಎಲ್ಲಿದ್ದಾರೆಂದು ಹೇಳಿದಳು. ಲಕ್ಷ್ಮಣನಿಗೆ ಸ್ವಲ್ಪ ಸಂದೇಹವಾಯಿತು. ಕಾಡಿನಲ್ಲಿ ಅತ್ತಿಗೆ ಒಬ್ಬರೇ ಇದ್ದಾರೆ, ಸ್ವಲ್ಪ ವ್ಯವಸ್ಥೆ ಮಾಡಬೇಕು ಎಂದು ಭಾವಿಸಿ ಅವರು ಗುಡಿಸಿಲಿನ ಮುಂದೆ ಒಂದು ರೇಖೆಯನ್ನೆಳೆದು ಈ ರೇಖೆಯೊಳಗೆ ಯಾರೂ ಪ್ರವೇಶ ಮಾಡಲಾರರು ಒಂದು ವೇಳೆ ಮಾಡಿದರೆ ಬೆಂಕಿ ಹತ್ತಿ ಭಸ್ಮರಾಗುವಂತೆ ವ್ಯವಸ್ಥೆಯನ್ನು ಮಾಡಿದ.

ರೇಖೆಯನ್ನೇಳೆದು ಲಕ್ಷ್ಮಣ ಹೊರಟು ಹೋದ, ಕಾಡಿನಲ್ಲಿ ಬಹಳ ದೂರ ಹೋದ ಆದರೆ ಅಣ್ಣ ಆತನಿಗೆ ಕಾಣಲೇ ಇಲ್ಲ. ಬಹಳ ದುಃಖವಾಯಿತು. ಕಣ್ಣಿನಲ್ಲಿ ನೀರು ಬಂದವು. ಇದೇ ರಸ್ತೆ, ಎಲ್ಲಿಂದ ಹೋಗುತ್ತಾರೆ. ಹಿಂದಿರುಗಿ ಎಲ್ಲಿಗೆ ಹೋಗುತ್ತಾರೆ. ಇತ್ತ ರಾಮ ಇನ್ನು ಮುಂದೆ ಹೋದಾಗ ಅಲ್ಲಿ ಆ ಜಿಂಕೆ ಆಕಾಶದಲ್ಲಿ ಹಾರಿ ಹೋಯಿತು. ಆಗ ಅವರಿಗೆ ಅದು ಛಲ, ಕಪಟ ಎಂದು ತಿಳಿಯಿತು. ಈಗ ಮನೆಕಡೆಗೆ ಹೊರಟು, ಬೇಗನೆ ಬರುವಂತಿರಲಿಲ್ಲ ಎಷ್ಟು ಹೊತ್ತು ಹೋಗಲು ಆಗಿದ್ದಿತೋ ಈಗ ಬರಲು ಅಷ್ಟೆ ಹೊತ್ತು ಬೇಕಾಗಿದ್ದಿತು. ಹಾರಿ ಆಕಾಶಮಾರ್ಗದಿಂದ ಬರಲು ಅವರು ವಿದ್ಯಾಧರರಾಗಿರಲಿಲ್ಲ ಇವರು ಭೂಮಿ ಗೋಚರಿಯಾಗಿದ್ದರು, ಸ್ವಲ್ಪ ಧೈರ್ಯದಿಂದ ಮುಂದೆ ಹೋದರು. ಅಣ್ಣ ತಮ್ಮ ಇಬ್ಬರೂ ಭೇಟಿಯಾದರು. ಅಣ್ಣ ತಮ್ಮನನ್ನು ನೀನು ಇಲ್ಲಿ ಇದ್ದಿಯಾ ಅಲ್ಲಿ ನಿನ್ನ ಅತ್ತಿಗೆ ಒಬ್ಬರೇ ಇರಬಹುದು ಎಂದು ಹೇಳಿದಾಗ ತಮ್ಮ ರೇಖೆ ಎಳೆದು ಬಂದಿದ್ದೇನೆ ಏನೂ ಆಗುವುದಿಲ್ಲ, ಇಬ್ಬರೂ ಹೊರಟರು.

ಇಲ್ಲಿ ಗುಡಿಸಲಿನಲ್ಲಿ ಸೀತಾ ಒಬ್ಬರೇ ಇದ್ದರು. ಅಲ್ಲಿ ಸಾಧುವಿನ ವೇಷ ಧರಿಸಿ ಸಿದ್ಧನಾಗಿದ್ದು

ಲಕ್ಷ್ಮಣ ಹೋಗುತ್ತಲೇ ಭಿಕ್ಷೆ ನೀಡಿ, ಭಿಕ್ಷೆ ನೀಡಿ ಎಂದು ಹೇಳುತ್ತಾ ಗುಡಿಸಿಲಿನ ಮುಂದೆ ನಿಂತು ಬಿಟ್ಟನು. ಸೀತೆ ಗುಡಿಸಿಲಿನಲ್ಲಿ ಇದ್ದಳು. ಅವಳು ಸಾಧುವಿನ ಧ್ವನಿಯನ್ನು ಕೇಳಿದಳು. ಅರೇ ಯಾರೋ ಸಾಧುಗಳು ಬಂದಿದ್ದಾರೆ, ಎಲ್ಲರಿಗೂ ದಾನ ನೀಡಬೇಕು, ಯಾವ ಸಾಧುವು ಹಸಿವೆಯಿಂದ ಹೋಗಬಾರದು, ದಾನ ನೀಡುವುದು ಗೃಹಸ್ಥನ ಕರ್ತವ್ಯವಾಗಿದೆ ಆದರೆ ಮೈದುನರು ಒಂದು ಬಂಧನವನ್ನು ಬಂಧಿಸಿ ಹೋಗಿದ್ದಾರೆ, ಹೊರಗಡೆ ಹೋಗಬಾರದೆಂದು ಹೇಳಿದ್ದಾರೆ. ಒಳಗಡೆ ಕರೆದೆ ಕೊಟ್ಟು ಬಿಡುತ್ತೇನೆ. ಸೀತೆಯು ಆ ಸಾಧುವಿಗೆ ನೀವು ಒಳಗೆ ಬನ್ನಿ ಭೋಜನ ಸ್ವೀಕರಿಸಿ ಎಂದು ಹೇಳಿದಳು. ಆಗ ಆ ಸಾಧುವು ಇಲ್ಲ ನಾನು ಯಾರದೇ ಮನೆಯನ್ನು ಪ್ರವೇಶಿಸುವುದಿಲ್ಲ ಎಂದು ಹೇಳಿದ, ಯಾಕೆಂದರೆ ಆತನು ಲಕ್ಷ್ಮಣನು ರೇಖೆ ಹಾಕುವುದನ್ನು ನೋಡಿಕೊಂಡಿದ್ದನು ಆದ್ದರಿಂದ ಆತನು ಹೊರಗೆಯೇ ನಿಂತಿದ್ದನು. ಸೀತೆಯು ನೋಡಿ ಎಷ್ಟು ಒಳ್ಳೆಯ ಸಾಧು ಇದ್ದಾನೆ ಯಾರ ಮನೆಯನ್ನು ಪ್ರವೇಶ ಮಾಡುವುದಿಲ್ಲ ಎಂದು ಯೋಚಿಸಿದಳು. ಸೀತೆ ಪುನಃ ಇದರಲ್ಲಿ ಏನಿದೆ ನೀವು ಬನ್ನಿ, ನೀವು ಸಾಧುಗಳು, ನಮ್ಮೊಳಗೆ ಯಾವ ವಿಕಾರವು ಇಲ್ಲ; ನೀವು ಬನ್ನಿ ಹೀಗೆ ಅನೇಕ ಬಾರಿ ಸೀತೆ ಹೇಳಿದರೂ ಆತ ಇಲ್ಲವೆಂದು ಹೇಳುತ್ತಿದ್ದ ಎಲ್ಲಿ ಒಬ್ಬಳೇ ಮಹಿಳೆ ಇರುತ್ತಾಳೋ ಅಲ್ಲಿ ನಾವು ಪ್ರವೇಶ ಮಾಡುವುದಿಲ್ಲವೆಂದು ಹೇಳಿದ, ನೋಡಿ ಕೇವಲ ಮಹಿಳೆಯರು ಮಾಯಾಚಾರಿಗಳೆಂದು ಹೇಳುತ್ತೇವೆ ಹಾಗೇನಿಲ್ಲ ಪುರುಷರ ಬಳಿಯೂ ಮಾಯಾಚಾರವಿರುತ್ತದೆ. ಹೆಚ್ಚು ಎನ್ನುವ ದೃಷ್ಟಿಯಿಂದ ಮಹಿಳೆಯರ ಬಗ್ಗೆ ಹೇಳಲಾಗುತ್ತದೆ.

ಆಗಲಿ, ನಾವೇ ಹೊರಬಂದು ಭಿಕ್ಷೆ ನೀಡುತ್ತೇವೆ ಎಂದು ವಿಚಾರಮಾಡಿ ಸೀತೆ ಪಾತ್ರೆಯಲ್ಲಿ ಆಹಾರದೊಂದಿಗೆ ಬಂದಾಗ, ಆ ಪತಿವ್ರತೆಯು ತನ್ನ ವಸ್ತುಗಳನ್ನು ಭಿಕ್ಷೆಯಲ್ಲಿ ಕೊಡಲು ಬಯಸಿದಾಗ ಆ ವೇಷಧಾರಿ ಸಾಧುವು ನನಗೆ ಇದು ಬೇಡ ನಾನು ನಿನ್ನನ್ನೇ ಒಯ್ಯುತ್ತೇನೆಂದು ಕೈ ಹಿಡಿದು ಸೀತೆಯನ್ನು ಎತ್ತಿಕೊಂಡು ಬಿಟ್ಟ ಅರೆ ಇದೇನು? ನನ್ನ ಶೀಲ, ನನ್ನ ಧರ್ಮ, ನನ್ನ ಪತಿ, ನನ್ನ ಮೈದುನ ಅವರದೇನಾಗುತ್ತದೆ ನಿನೇನು ಮಾಡಿ ಬಿಟ್ಟೆ, ಇಲ್ಲ ಇಲ್ಲ, ನನ್ನನ್ನು ರಕ್ಷಿಸು, ನನ್ನನ್ನು ರಕ್ಷಿಸು, ರಕ್ಷಣೆ ಮಾಡು, ರಕ್ಷಣೆ ಮಾಡು, ಬಹಳ ಕೂಗಾಡಿದರು, ಣಮೋಕಾರ ಮಂತ್ರ ಹೇಳಿಕೊಂಡರು. ನನ್ನ ಶೀಲವ್ರತವಿದೆ ನನ್ನನ್ನು ಬಿಟ್ಟು ಬಿಡು ಎಂದು ಸಾಧುವಿಗೆ ಹೇಳಿದರು. ಆದರೆ ಆತ ವಿದ್ಯಾಧರನಾಗಿದ್ದ ವಿಮಾನದಲ್ಲಿ ಕುಳ್ಳರಿಸಿಕೊಂಡು ಕೊಂಡೊಯ್ದು, ವಿಮಾನದಲ್ಲಿ ಕುಳಿತೊಡನೆ ತನ್ನ ನಿಜರೂಪ ತೋರಿದ ಆತ ಲಂಕಾಪತಿ ರಾವಣನಾಗಿದ್ದನು. ನೋಡು ನನ್ನ ನಿಜರೂಪವನ್ನು ಎಂದು ಸೀತೆಗೆ ಹೇಳಿದ ಇಲ್ಲ, ಇಲ್ಲ ನಾನು ನೋಡುವುದಿಲ್ಲ ನಾವು ನಿನ್ನನ್ನು ಸಾಧುವೆಂದು ತಿಳಿದಿದ್ದೆವು ಸ್ವಾದುವೆಂದಲ್ಲ. ಕೆಳಗೆ ದೃಷ್ಟಿ ಮಾಡಿಕೊಂಡೇ ಅಳುತ್ತಿದ್ದರು. ತನ್ನ ರಕ್ಷಣೆಗಾಗಿ ಹೇಳುತ್ತಲೆ ಇದ್ದರು. ಸಹಾಯಕ್ಕೆ ಕೂಗುತ್ತಲೇ ಇದ್ದರು. ಆಗ ಒಂದು ಜಟಾಯು ಪಕ್ಷಿ ತಿರ್ಯಂಚ ಪ್ರಾಣಿಯಾಗಿದ್ದಿತು ಅದು ನೋಡಿ ಚಿಂತೆಗೊಳಗಾಯಿತು ಒಬ್ಬ ಮಹಾನ್ ಪತಿವ್ರತಾ ನಾರಿಯ ಹರಣ, ಅದಕ್ಕೆ ಸಹಿಸಲು ಸಾದ್ಯವಾಗಲಿಲ್ಲ, ಬೇಗನೆ ಬಂದು ಲಂಕಾಪತಿ ರಾವಣನಿಗೆ ತನ್ನ ಕೊಕ್ಕಿನಿಂದ ಪ್ರಹಾರ ಮಾಡಿ ಮೇಲಿಂದ ಮೇಲೆ ಪ್ರಹಾರ ಮಾಡಿತು. ಏ ಪಾಪಿಯೇ ಅವರನ್ನು ಬಿಡು ಎಂದು ಹೇಳಿತು. ಹೇ ದುರಾತ್ಮಾ ಈ ಸತಿಯನ್ನು ಬಿಟ್ಟು ಬಿಡು, ಮೇಲಿಂದ ಮೇಲೆ ಪ್ರಯತ್ನಿಸುತ್ತದೆ. ಆದರೆ ಒಂದು ಶಕ್ತಿಹೀನ ಪ್ರಾಣಿ ಎಲ್ಲಿಯವರೆಗೆ ಏನು ಮಾಡಬಲ್ಲದು, ತಿರ್ಯಂಚ ಪ್ರಾಣಿ ಸಬಲರ ಜೊತೆ ಎಲ್ಲಿಯವರೆಗೆ ಹೋರಾಡಿತು. ರಾವಣನು ತಲವಾರವನ್ನೆತ್ತಿ ಆ

ಪಕ್ಷಿಯ ರೆಕ್ಕೆಗಳನ್ನು ಕತ್ತರಿಸಿ ಬಿಟ್ಟನು, ಅಪಂಗವಾದ ಆ ಪಕ್ಷಿ ಕೆಳಗೆ ಬಿದ್ದಿತು. ಈ ಪರಿಸ್ಥಿತಿಯಲ್ಲಿ ಅದು ಣಮೋಕಾರ ಮಂತ್ರವನ್ನು ಜಪಿಸತೊಡಗಿತು. ಈ ಮೊದಲು ಒಮ್ಮೆ ಗುಪ್ತಿ, ಸುಗುಪ್ತಿ ಮಹಾರಾಜರ ಚರಣಗಳ ಗಂಧೋದಕವಿದ್ದಿತು. ಅದರಲ್ಲಿ ಹೊರಳಾಡಿದ್ದಿತು ಆ ಕಾರಣದಿಂದ ಅದರ ರೆಕ್ಕೆಗಳು ಸ್ವರ್ಣ ಸಮಾನವಾಗಿದ್ದವು. ಅದು ಅಣುವ್ರತವನ್ನು ಧಾರಣೆ ಮಾಡಿದ್ದಿತು. ಎಲ್ಲ ಅಶುದ್ಧ ವಸ್ತುಗಳನ್ನು ತ್ಯಾಗ ಮಾಡಿದ್ದಿತು. ಈಗ ಅದು ಅದೇ ಮಹಾರಾಜರ ಧ್ಯಾನ ಮಾಡುತ್ತಾ ಅಂತಿಮ ಶ್ವಾಸ ಹೊಂದುತ್ತಿದ್ದಿತು.

ಗುಡಿಸಿಲಿಗೆ ಬಂದು ಅಣ್ಣ ರಾಮ ತಮ್ಮ ಲಕ್ಷ್ಮಣರು ನೋಡಿದಾಗ ಅದು ಖಾಲಿಯಾಗಿದ್ದಿತು ಇಬ್ಬರಿಗೂ ಆಶ್ಚರ್ಯವಾಯಿತು, ಇದೇನಾಯಿತು? ಈಗ ಏನಾದೀತು? ಇಬ್ಬರ ಕಣ್ಣುಗಳಲ್ಲಿ ಗಂಗಾ ಜಮುನಾ ಹರಿಯ ತೊಡಗಿದರು ನನಗೆ ಅವಳ ವ್ರತಗಳ ಶೀಲದ ಚಿಂತೆ ಇದೆ, ಯಾವ ಮಾಯಾಚಾರಿ ಏನು ಮಾಡಿದ? ಎಷ್ಟೊಂದು ದೊಡ್ಡ ಛಲ ಕಪಟವಾಯಿತಲ್ಲ. ಮಾಯಚಾರಿಯು ಸುವರ್ಣಮಯ ಜಿಂಕೆಯ ರೂಪವನ್ನು ಧಾರಣೆ ಮಾಡಿದ್ದನು ಎಂದು ರಾಮಚಂದ್ರ ಹೇಳಿದ. ಆಗ ಲಕ್ಷ್ಮಣ ಅತ್ತಿಗೆ ಹೇಗೆ ಹೊರಬಂದರು ಅವರನ್ನು ಹೇಗೆ ಕರೆಯಲಾಯಿತು ಯಾರೂ ಒಳಗೆ ಪ್ರವೇಶಿಸುವಂತಿರಲಿಲ್ಲ. ಈಗ ಏನು ಮಾಡುವುದು? ಹುಡುಕೋಣ ನಡೆಯಿರಿ ಎಂದು ಹೇಳಿದ. ಇಬ್ಬರೂ ಸಹೋದರರು ಕಾಡಿನಲ್ಲಿ ಹುಡುಕುತ್ತಾ ಹುಡುಕುತ್ತಾ ಕೊನೆಗೆ ಅವರಿಗೆ ಒಂದು ಸ್ಥಳದಲ್ಲಿ ಆ ಜಟಾಯು ಪಕ್ಷಿ ಗಾಯಳುವಾಗಿ ದೊರಕಿತು. ಅದನ್ನು ಅವರು ನೋಡಿದಾಗ ಅವರಿಗೆ ಇನ್ನೂ ದುಃಖ ಉಂಟಾಯಿತು. ಈ ಪ್ರಾಣಿ ಎಷ್ಟು ಪುಣ್ಯವಂತವಿದ್ದಿತು ಇದು ಮುನಿ ಮಹಾರಾಜರ ದರ್ಶನ ಮಾಡಿದ್ದಿತು, ಅವರ ಚರಣಗಳಲ್ಲಿ ತ್ಯಾಗವನ್ನೂ ಮಾಡಿದ್ದಿತು. ಈ ಪ್ರಾಣಿಯನ್ನು ಬಿಟ್ಟಿಲ್ಲವಲ್ಲ. ನಿಯಮದಿಂದ ಇದು ರಕ್ಷಣೆ ಮಾಡಿರಬೇಕು ಈ ಕಾರಣದಿಂದಲೇ ಬಹುಶಃ ಈ ಕಷ್ಟ ಒದಗಿದೆ ಮೊದಲು ಇದನ್ನು ನೋಡೋಣ ಹಾಗೂ ಈ ಪ್ರಾಣಿಯ ಕಿವಿಯಲ್ಲಿ ಣಮೋಕಾರ ಮಂತ್ರ ಹೇಳಿ ನಿಸ್ವಾರ್ಥ ಭಾವನೆ ತಾಳಿದರು ನೋಡಿ ನಮ್ಮ ಹೃದಯದಲ್ಲಿ ಎಂತಹ ಭಾವನೆ ಇರಬೇಕು. ನಮ್ಮ ಸಹೋದರ ಬಂಧುಗಳೊಂದಿಗೆ ನಾವು ಇಂತಹ ಭಾವಗಳನ್ನು ಹೊಂದಿರಬೇಕು, ಅನ್ಯ ಪ್ರಾಣಿಗಳು ಸಹ ನಮ್ಮಂತಿವೆ, ಅವು ಸಹ ಸುಖ, ದುಃಖಗಳ ಅನುಭವ ಹೊಂದುತ್ತವೆ. ನಾವು ಅವುಗಳ ಹಿತವನ್ನುಂಟು ಮಾಡಲು ಸದಾಕಾಲ ತತ್ಪರರಾಗಿರಬೇಕು.

ನಾನು ಈ ಕಥೆಯನ್ನು ಸ್ಮರಣೆ ಮಾಡುವಾಗಲೆಲ್ಲಾ ನನಗೆ ಒಂದು ರೀತಿಯ ಸಂವೇದನೆ ಆಗುತ್ತದೆ. ಪ್ರಾಣಿಯ ಧರ್ಮ ಏನಿದೇ? ಇಂದು ಜನರು ಏನು ಮಾಡುತ್ತಿದ್ದಾರೆ. ತಮ್ಮ ಪರಿವಾರವನ್ನು ಮರೆಯುತ್ತಿದ್ದಾರೆ. ಅವರ ಹಿತದ ಬಗ್ಗೆ ಯೋಚಿಸುವುದೇ ಇಲ್ಲ. ಗುರುಜನರು ತಮ್ಮ ಪರಿವಾರ, ತಮ್ಮ ಕುಟುಂಬವನ್ನು ಬಿಟ್ಟು ಅವರು ಸಮಾಜದ ಹಿತದ ಬಗ್ಗೆ ವಿಚಾರ ಮಾಡುತ್ತಾರೆ ಹಾಗೂ ಹಿತದ ಕಾರ್ಯಮಾಡುತ್ತಾರೆ. ಣಮೋಕಾರ ಮಂತ್ರ ಹಾಗು ಸಲ್ಲೇಖನಾ ಭಾವ ಸಹಿತ ಅಂತಿಮ ಕ್ಷಣದಲ್ಲಿ ಅವರು ಪ್ರಾಣ ಬಿಡುತ್ತಿದ್ದರು, ಅವರಿಗೆ ಇಂತಹ ಮಹಾನ್ ಸಂಯೋಗ ದೊರಕಿತು ಸ್ವರ್ಗವೂ ದೊರಕಿತು ಎಷ್ಟು ಶ್ರೇಷ್ಠ ಕಥೆ ಎಂದು ವಿಚಾರ ಮಾಡಿರಿ ಎಲ್ಲೆಲ್ಲಿ ಕುಟಿಲತೆ ಇರುತ್ತದೆ. ಅದರ ಪರಿಣಾಮದ ಫಲ ಏನಾಗುತ್ತದೆ? ಇದನ್ನು ನಾವು ಪದ್ಮ ಪುರಾಣವನ್ನು ಓದಿ ತಿಳಿಯಬೇಕು. ಅದರಲ್ಲಿಯ ವಿಶಿಷ್ಟ ಸಂದರ್ಭಗಳು ನಮ್ಮ ಜೀವನದಲ್ಲಿ ಬಹಳ ಪರಿವರ್ತನೆಯನ್ನುಂಟು ಮಾಡುತ್ತವೆ.

ರಾಮ ಸೀತೆಯನ್ನು ಹಿಂದೆ ಕರೆತರುವ ಪ್ರಯತ್ನ ನಡೆಯುತ್ತಿದ್ದಾಗಿನ ಸಂದರ್ಭ ಸೀತಾಳ ಶೀಲಧರ್ಮದ ರಕ್ಷಣೆ ಮಾಡಬೇಕಾಗಿದ್ದಿತು. ಯುದ್ಧ ನಿಶ್ಚಿತವಾಗಿದ್ದಿತು ಯುದ್ಧ ಆರಂಭವಾಗಿ ನಡೆಯುತ್ತಿದ್ದಿತು, ಈ ಮಧ್ಯ ಪರ್ವದ ದಿನಗಳು ಬಂದಿದ್ದರಿಂದ ಯುದ್ಧವನ್ನು ನಿಲ್ಲಿಸಲಾಗಿದ್ದಿತು. ಹಿಂದೆ ಪರ್ವದ ದಿನಗಳೆಂದು ಹಿಂಸೆ ಮಾಡಬಾರದೆಂಬ ಯುದ್ಧಗಳು ನಡೆಯುತ್ತಿದ್ದವು. ಯುದ್ಧಗಳನ್ನು ನಿಲ್ಲಿಸಲಾಗುತ್ತಿದ್ದಿತು. ಅದು ಎಂಟುದಿನಗಳ ಅಷ್ಟಾಹ್ನಿಕ ಪರ್ವವಾಗಿದ್ದಿತೆಂದು ಪುರಾಣಗಳಲ್ಲಿ ವರ್ಣನೆ ಇದೆ. ಅಷ್ಟಾಹ್ನಿಕ ಪರ್ವದಲ್ಲಿ ಎಲ್ಲರೂ ಭಗವಂತರ ಪೂಜೆ ಅರ್ಚನೆಗಳಲ್ಲಿ ವ್ರತ ಉಪವಾಸಗಳಲ್ಲಿ ಲೀನರಾಗಿಬಿಡುತ್ತಾರೆ. ಮೊದಲು ಬಹಳ ಪಾಪಕರ್ಮಗಳನ್ನು ಮಾಡಿ ಜನರು ಏಳನೆ ನರಕ ಪೃಥ್ವಿಯವರೆಗೆ ಹೋಗುವ ಶಕ್ತಿ ಸಾಮಾರ್ಥ್ಯ ಹೊಂದಿದ್ದರು ಹಾಗೂ ಇನ್ನೊಂದೆಡೆ ಪೂರ್ಣ ಕರ್ಮಗಳ ನಿರ್ಜರೆ ಮಾಡಬಲ್ಲವರು ಆಗಿದ್ದರು ಹಾಗೂ ಮೋಕ್ಷದ ದ್ವಾರವನ್ನು ತೆರೆಯಬಲ್ಲವರಾಗಿದ್ದರು.

**ಜೋ ಕಮ್ಮೆ ಸೂರಾ ಸೋ ಧಮ್ಮೇ ಸೂರಾ**

ಕರ್ಮಗಳಲ್ಲಿಯೂ ಶೂರರಾಗಿರುತ್ತಿದ್ದರು ಹಾಗೂ ಧರ್ಮದಲ್ಲಿಯೂ ಶೂರರಾಗಿರುತ್ತಿದ್ದರು. ಇಂದಿನ ಜನರು ಕರ್ಮದಲ್ಲಿಯಾಗಲಿ, ಧರ್ಮದಲ್ಲಿಯಾಗಲಿ ಶೂರರಿಲ್ಲ ಕೇವಲ ಶೂನ್ಯರಾಗಿದ್ದಾರೆ ಮತ್ತೇನೂ ಇಲ್ಲ. ಕರ್ಮದಲ್ಲಿ ಶೂರರಿಲ್ಲದಿದ್ದರೆ, ಧರ್ಮದಲ್ಲಿಯಾದರೂ ಶೂರರಾಗಿರಿ. ಧರ್ಮದಲ್ಲಿ ಮುಂದೆ ಸಾಗಿ, ಅದಕ್ಕೂ ಶಕ್ತಿ ಉಳಿದಿಲ್ಲವೇನು? ಶಕ್ತಿ ಹೇಗೆ ಬಂದೀತು? ಬ್ಯಾಟರಿ ಚಾರ್ಜ ಮಾಡುವ ಹಾಗೇ ದಶಲಕ್ಷಣ ಮಾಡಿ, ಹದಿನಾರು ಕಾರಣ ಭಾವನೆ ಮಾಡಿ, ರತ್ನತ್ರಯ ಮಾಡಿ, ಬೀಗ ಹಾಕಬೇಕಾಗುತ್ತದೆ. ಆಗ ಶಕ್ತಿ ತಾನಾಗಿ ಬಂದುಬಿಡುತ್ತದೆ, ಒಂದು ತಿಂಗಳ ಬೀಗದ ಕೈಗೆ ಸಮಾನ ಷೋಡಶಕಾರಣ ವ್ರತ ಆಗುತ್ತದೆ. ಸಾಧು ಸಮಾಗಮ ಸಹ ನಿಮಗೆಲ್ಲರಿಗೂ ಬೇಕು ಅದರಿಂದಲೇ ಬೇಗನೇ ಶಕ್ತಿ ಬರುತ್ತದೆ. ಆ ಅಷ್ಟಾಹ್ನಿಕ ಪರ್ವದಲ್ಲಿ ಲಂಕೆಯ ಶಾಂತಿನಾಥ ಜಿನಾಲಯದಲ್ಲಿ ಒಂದು ಆತ್ಮವು ಎಂಟು ದಿನಗಳ ಉಪವಾಸ ಪಡೆದು ಆಸೀನರಾಗಿದ್ದರು. ಅದೇ ಆಸನದಲ್ಲಿ ಅವರ ಧ್ಯಾನ ನಡೆದಿದ್ದಿತು. ಉಪಸರ್ಗವಾದರೂ ಅವರು ಧ್ಯಾನದಲ್ಲಿಯೇ ಲೀನರಾಗಿದ್ದರು. ಸಂಪೂರ್ಣ ನಗರದಲ್ಲಿ ವಿಪತ್ತಿಯಾಗಿದ್ದರಿಂದ ಮಕ್ಕಳು ಬಂದರು, ಪತ್ನಿಯು ಬಂದಳು, ಊರು-ಪಟ್ಟಣಗಳಿಂದ ಜನರು ಬಂದರು, ಉಳಿಸಿ, ಉಳಿಸಿ ಎಂದು ಹೇಳತೊಡಗಿದರು ಆದರೂ ಏನೂ ಆಗಲಿಲ್ಲ. ಶಾಂತಿನಾಥಾಯ ನಮಃ ನಡೆದಿದ್ದಿತು. ಅಂತಹ ಆಸನ ಅಂತಹ ಧ್ಯಾನ ಯಾರಾದರೂ ಮುನಿಯಾಗಿ ನಡೆಸಿದ್ದರೆ ಬಹುಶಃ ಕೇವಲ ಜ್ಞಾನವಾಗಿ ಬಿಡುತ್ತಿದ್ದಿತೆಂದು ಪುರಾಣದಲ್ಲಿ ಹೇಳಿದ್ದಾರೆ. ಆದರೆ ಅವರಿಗೆ ಧರ್ಮಧ್ಯಾನವೂ ಆಗುತ್ತಿಲ್ಲ. ಅರೆ ಬಾಯಿಯಲ್ಲಿ ರಾಮನಾಮ ಆದರೆ ಬಗಲಿನಲ್ಲಿ ಛೂರಿ ಎನ್ನುವ ಮಾತಿನಂತಿತ್ತು ಅಲ್ಲವೇ, ರಾಮ ರಾಮ ಎನ್ನುವುದು ಪರರ ವಸ್ತು ನನ್ನದು; ಇಂತಹ ಧ್ಯಾನ ನಡೆಯುತ್ತಿತ್ತು. **'Action is correct but intention is wrong'** ಕ್ರಮ ಒಳ್ಳೆಯದು ಆದರೆ ಅಭಿಪ್ರಾಯ ಬಹಳ ಕೆಟ್ಟದಾಗಿದ್ದಿತು. ಕೊಕ್ಕರೆಗಿಂತಲೂ ಕೆಟ್ಟದಾಗಿದ್ದಿತು ಅದು ಮುಕ್ತವಾಗಿ ಮಾಡುತ್ತದೆ ಆದರೆ ಮಾಯಾವಿಯಾಗಿ ವಾಸನಾದ ಪೂರ್ತಿಗಾಗಿ ಮಹಾ ರೌದ್ರ ಧ್ಯಾನದಂತಹ ಕಾರ್ಯ ಮಾಡುತ್ತಿದ್ದರು. ಪರ ವಸ್ತು ಯಾವಾಗ ನನಗೆ ಸಿಕ್ಕೀತು ಎನ್ನುವ ಪರಿಗ್ರಹಾನಂದ ಪಡೆಯುವ ಆಸೆ ಇದ್ದಿತು. ಮುಖದಲ್ಲಿ, ಬಾಯಿಯಲ್ಲಿ ಭಗವಂತನ ಹೆಸರು, ಆದರೆ ಮನದಲ್ಲೇನು? ಕ್ರಮ ಪ್ರಶಸ್ತವಾಗಿದ್ದಿತು. ಆದರೆ ಅಭಿಪ್ರಾಯ ತಪ್ಪಾಗಿದ್ದಿತು. ಕೊನೆಗೆ ಅದರ ಫಲ ಅವರಿಗೆ ದೊರೆಯಿತು ಅವರು ಬಹುರೂಪಿಣಿ ವಿದ್ಯೆಯ ಸಿದ್ಧಿಗಾಗಿ ಕುಳಿತಿದ್ದರು. ಆದ್ದರಿಂದ ಸಿದ್ಧಿಯಂತೂ ಆಯಿತು.

ಬಹುರೂಪಿಣಿ ವಿದ್ಯೆ ಎಂದರೆ ಆ ವಿದ್ಯೆಯಿಂದ ಅನೇಕ ರೂಪಗಳನ್ನು ಹೊಂದಬಹುದಾಗಿದ್ದಿತು. ಲಂಕಾಪತಿ ರಾವಣನು ವಿದ್ಯೆಯ ಬಲದಿಂದ ಬಹಳಷ್ಟು ರೂಪಗಳನ್ನು ಹೊಂದಿದ ಆದರೆ ಆತ ಜೀವನದಲ್ಲಿ ಏನನ್ನೂ ಸಾಧಿಸಲಾಗಲಿಲ್ಲ. ರಾಮನೊಂದಿಗೆ ಯುದ್ಧ ಪ್ರಾರಂಭವಾದಾಗ ಆ ವಿದ್ಯೆಯು ಆತನಿಗೆ ಜೊತೆ ನೀಡಲಿಲ್ಲ. ನಾನು ದುರಾಚಾರಿಗೆ ಜೊತೆ ನೀಡುವುದಿಲ್ಲವೆಂದು ವಿದ್ಯೆ ಹೇಳಿತು. ರಾಮನಂತಹ ಸದಾಚಾರಿ ವ್ಯಕ್ತಿತ್ವವನ್ನು ಏನೂ ಮಾಡಲಾಗದು ಅಂದರೆ ಅವರೊಂದಿಗೆ ನಾನು ಹೇಗೆ ತಾನೇ ಹೋರಾಡಬಲ್ಲೆ. ಅವರೆಷ್ಟು ಮಹಾಪುರುಷರೆಂದರೆ ನಾವಂತೂ ಅವರ ಸೇವೆಯಲ್ಲಿಯೇ ನಿರತರಾಗುತ್ತೆವೆಯೇ ವಿನಹ, ನಿನ್ನೊಂದಿಗಿರುವುದಿಲ್ಲ. ಎಲ್ಲ ವಿದ್ಯೆಗಳು ಅವನಿಂದ ಹೊರಟು ಹೋಗುತ್ತವೆ. ಹಾಗೂ ಆತ ಜೀವನದೊಂದಿಗೂ ಸಹ ಕೈ ತೊಳೆದು ಬಿಟ್ಟ ಎಂದ ಮೇಲೆ ವಿಚಾರ ಮಾಡಿರಿ, ಮನಸ್ಸಿನಲ್ಲಿ ಏನೋ ಇದೆ, ವಚನದಲ್ಲಿ ಏನೋ ಇದೆ, ಕಾಯದಲ್ಲಿ ಏನೋ ಇದೆ ಇಂತಹ ಜೀವನದಲ್ಲಿ ಮಾಯಾಚಾರವಿದೆ. ಹೀಗೆ ಮಾಡುವವರೆ, ಜೀವನ ಹೇಗಿರುತ್ತದೆಂಬುದನ್ನು ನೀವು ಬಲ್ಲಿರಿ. ರಾಮನು ಬಹಳ ಕಠೋರತೆಯೊಂದಿಗೆ ರಾವಣನಿಗೆ ಶಿಕ್ಷೆ ನೀಡಿದ ಆದರೆ ಆತ ಪವಿತ್ರನಾಗಿದ್ದ, ಆತನೊಳಗೆ ಯಾವ ಫಲವು ಇರಲಿಲ್ಲ ಆದರೆ ರಾವಣನು ರಾಮ ನಾಮ ಹೆಸರಿನ ಹೊದಿಕೆಯನ್ನು ಹೊದ್ದು ರಾಮನಿಗೇನೆ ದುಃಖದ ಹೊಂಡದಲ್ಲಿ ಹಾಕಿದ, ಈ ಕೊಕ್ಕರೆಯ ಭಕ್ತಿ ಅಥವಾ ಧ್ಯಾನ ಆಂತರಿಕ ಶುದ್ಧಿಯ ಕಾರಣವಲ್ಲ. ಯಾರೋ ಸರಿಯಾಗಿಯೇ ಹೀಗೆ ಹೇಳಿದ್ದಾರೆ.

**ಶರೀರದ ಮೇಲೆ ಇದೆ ಬೆಳಕು, ಮನ ಆಗುತಿದೆ ಕೊಳಕು।**
**ಏನು ಮಾಡುವಳು ಜಮುನಾ, ಅರೆ ಏನು ಮಾಡುವಳು ಗಂಗಾ॥**

ಆರ್ಜವ ಧರ್ಮವು ತನ್ನ ಅಂತಃಶಕ್ತಿಯಿಂದ ಬಹಳ ಸಂಬಂಧ ಹೊಂದಿರುತ್ತದೆ ಅದನ್ನು ಹೊರಗಿನ ರೂಪದಿಂದ ತಿಳಿಯುವುದು ಕಠಿಣವಿದೆ. ಆಗಾಗ ತಾಯಿ-ತಂದೆ ಶಿಕ್ಷಕ ಮುಂತಾದವರು ಮೇಲಿನಿಂದ ಕಠಿಣತೆಯ ಪ್ರಯೋಗ ಮಾಡಿದರೂ ಸಹ ಅವರ ಉದ್ಧಾರದ ಭಾವನೆಯಿಂದ ಆಂತರಿಕ ಪವಿತ್ರತೆ ಇರುತ್ತದೆ. ರಾಮಾಯಣದ್ದೇ ಒಂದು ಪ್ರಸಂಗವಿದೆ ರಾಮಚಂದ್ರ ಮತ್ತು ಸೀತೆಯರಿಗೆ ಸಂಬಂಧಿಸಿದಂತೆ ಒಂದು ಕಥೆ ಬರುತ್ತಿದೆ. ಶ್ರೀ ರಾಮಚಂದ್ರರು ಸೀತೆಗೆ ತೀರ್ಥಯಾತ್ರೆಗೆ ಹೊರಡೋಣ ನಡೆ ಎಂದು ಹೇಳುತ್ತಾರೆ ಅವರ ಮನಸ್ಸಿನಲ್ಲಿ ಏನಿದ್ದಿತು? ವಚನದಲ್ಲಿ ಏನಿದ್ದಿತು. ಮನಸ್ಸಿನಲ್ಲಿ ಬಿಡುವ/ತ್ಯಾಗ ಮಾಡುವ ವಿಚಾರ ಮತ್ತು ವಚನದಲ್ಲಿ ತೀರ್ಥಯಾತ್ರೆ ಇದು ಮಾಯಾಚಾರ ಆಯಿತಲ್ಲವೇ. ಆದರೆ ಅವರು ಕ್ಷಾಯಕ ಸಮ್ಯಗ ದೃಷ್ಟಿಗಳಾಗಿದ್ದರು, ತದ್ಭವ ಮೋಕ್ಷಗಾಮಿಗಳಾಗಿದ್ದರು. ಆದರೆ ಸಮ್ಯಗ್ ದೃಷ್ಟಿ ಅನಂತಾನು ಬಂಧಿಮಾಯಾದ ಚಕ್ರದಲ್ಲಿ ಸಿಕ್ಕಿ ಬೀಳುವುದಿಲ್ಲ. ಪರಿಸ್ಥಿತಿ ವಶರಾಗಿ ಸಮಸ್ಯೆಗಳಲ್ಲಿ ಅಪ್ರತ್ಯಾಖ್ಯಾನಾದಿ ಸಿಕ್ಕು ಮೂರು ಕಷಾಯಗಳಿಗೆ ಸಂಬಂಧಿಸಿದ ಅವರ ಚರ್ಚೆ ಆಗಬಲ್ಲದು.

ಪದ್ಮ ಪುರಾಣದ ರಚನಕಾರರು ರಾಮಚಂದ್ರರ ವಿಷಯದಲ್ಲಿ ನಾವು ನಿಮ್ಮನ್ನು ತ್ಯಾಗ ಮಾಡುತ್ತಿದ್ದೇವೆ. ದೇಶದಿಂದ ಹೊರಹಾಕುತ್ತಿದ್ದೇವೆಂದು ವರ್ಣಿಸದೇ, ಮೋಸದಿಂದ ಕಾಡಿನಲ್ಲಿ ಬಿಟ್ಟಿರುವುದಾಗಿ ಹೇಳಿದ್ದಾರೆ. ಸಾರಥಿಯು ಸೀತೆಗೆ ಅಮ್ಮ ಏನಾದರು ಹೇಳುವುದಿದೆಯೇ ಎಂದು ಕೇಳಿದಾಗ ಅವಳ ಸರಳತೆಯನ್ನು ನೋಡಿರಿ ಕ್ರೋಧ ಮಾಡಿಕೊಂಡರೆ ಕೆಟ್ಟದಾಗಿ ಹೇಳಬಹುದು ಎಂದೆನಿಸಿರಬೇಕು, ಆದರೆ ಇಲ್ಲಿ ಅದೆಲ್ಲಾ ಆಗಿಲ್ಲ. ಸೀತೆಯ ಶಬ್ದಗಳನ್ನು ನೋಡಿರಿ, ಬಹಳ ವಿನಮ್ರ ಭಾವದಿಂದ-ನನ್ನ ಸ್ವಾಮಿಯ ಯಾವ ದೋಷವೂ ಇಲ್ಲ, ಇದು ನನ್ನ ಪಾಪಕರ್ಮದ ಉದಯವಿದೆ. ಅವುಗಳ ನಿಮಿತ್ತದಿಂದ ಈ ಕರ್ಮ ನಿರ್ಜರಿತವಾಗುತ್ತಿದೆ. ಹಾ ಒಂದು ಮಾತು

ಅವಶ್ಯವಾಗಿ ಹೇಳಿ. ಲೋಕೋಪವಾದದ ಭಯದಿಂದ ನನ್ನೊಂದಿಗೆ ಮಾಯಾಚಾರಿಯ ಯಾತ್ರೆಯ ಸ್ಥಾನದಲ್ಲಿ ನನ್ನನ್ನು ಕಾಡಿನಲ್ಲಿ ಬಿಡಲಾಗಿದೆ. ಧರ್ಮದ ಅವಹೇಳನವನ್ನು ಯಾರಾದರೂ ಮಾಡಿದರೆ, ಪರಿಹಾಸ ಮಾಡತೊಡಗಿದರೆ ಢೊಂಗಿ ಹೇಳತೊಡಗಿದರೆ– ತಾವು ಧರ್ಮವನ್ನು ಬಿಡಬಾರದು. ನನ್ನೊಂದಿಗೆ ಮೋಸವಾಗಿರುವಂತೆ–ಧರ್ಮದೊಂದಿಗೆ ಆಗಬಾರದು–ಎಂದು ಹೇಳಿದಳು. ಸಂಕಟದಲ್ಲಿರುವ ಒಬ್ಬ ನಾರಿಯ ಧೈರ್ಯವನ್ನು ನೋಡಿರಿ. ಮುನಿಗಳಿಗಾಗಿ ಅಲ್ಲ ನಮ್ಮ ಸ್ವಯಂಗಾಗಿ ನಿಮ್ಮ ನಿಮ್ಮ ಹೃದಯದಲ್ಲಿ ಇಣಕಿ ನೋಡಿರಿ–ನಾವೆಷ್ಟು ಸರಳರು ಮತ್ತು ಸಹಜವಾಗಿದ್ದೇವೆ. ಮಾಯಾಚಾರಿಗಳಾಗಿಲ್ಲವಲ್ಲ. ಸೀತೆಗೆ ಪುಣ್ಯ ಜೊತೆಯಲ್ಲಿದ್ದಿತು. ಲವ–ಕುಶರ ಜನ್ಮವಾಯಿತು ನಂತರ ಅಗ್ನಿ–ಪರೀಕ್ಷೆಯನ್ನು ನೀಡಿದಳು. ಶ್ರೀರಾಮಚಂದ್ರರು ಲಕ್ಷ್ಮಣ ಇಬ್ಬರೂ ಮಕ್ಕಳು ನಡೆ ಮನೆಗೆ ಎಂದು ಹೇಳಿದರು. ಆಗ ಸೀತೆಯು ಈಗ ಮನೆಗೆ ಅಲ್ಲ ಈಗ ವನವೇ ಸುಹಾಯೋಗ, ಮೋಕ್ಷ ಮಾರ್ಗದಲ್ಲಿ ನಡೆಯಿರಿ ಎಂದು ಹೇಳಿದರು. ಕಾಡಿನಲ್ಲಿ ಅರ್ಯಿಕೆಯ ವ್ರತ ಹೊಂದಿ ತಪ ಮಾಡಿ ನಾರಿಯ ಪರ್ಯಯವನ್ನು ಛೇದಿಸಿ ಸ್ವರ್ಗದಲ್ಲಿ ಪ್ರತೀಂದ್ರಳಾದರು ಹಾಗೂ ನಿಕಟ ಭವಿಷ್ಯದಲ್ಲಿ ತನ್ನ ಆತ್ಮವನ್ನು ಪರಮಾತ್ಮನನ್ನಾಗಿ ಮಾಡಿಕೊಳ್ಳುವರು. ಸಾಹಿತ್ಯ ಇತಿಹಾಸ, ಹಾಗು ಪ್ರಥಮಾನುಯೋಗ ಸಾಹಿತ್ಯವು ಯಾರು ಯಾರಿಗೆ ಕುಟಿಲತೆಗಳು ಬಂದಿವೆ. ವಿಕೃತಿಗಳು ಬಂದಿವೆ ಅಂತಹ ಮಾಯಾಚಾರಿಗಳು ಮೋಕ್ಷಮಾರ್ಗದಲ್ಲಿ ಸಾಗುವುದಿಲ್ಲವೆನ್ನುವುದಕ್ಕೆ ಸಾಕ್ಷಿಯಾಗಿವೆ. ಮಾಯಾಚಾರಕ್ಕೆ ಸಮಾನವಾದ ನಿಂದನೀಯ ಪದಾರ್ಥವಿಲ್ಲ ಕಪಟಿ ಮಾನವನ ವ್ರತಪಾಲನೆ, ತಪ, ದಾನ, ಪೂಜೆ, ತೀರ್ಥಯಾತ್ರೆ ಮುಂತಾದವುಗಳನ್ನು ಮಾಡುವುದು ನಿಷ್ಫಲ, ನಿರರ್ಥಕವಾಗಿದೆ. ಬೇರೆಯವರನ್ನು ಮಾಯಾಜಾಲದಲ್ಲಿ ಸಿಲುಕಿಸಲು ಪ್ರಯತ್ನಿಸುವವರು ಸ್ವತಃ ಅದರಲ್ಲಿ ಸಿಲುಕಿ ಬಿಡುತ್ತಾರೆ. ಬೇರೆಯವರಿಗಾಗಿ ತಗ್ಗು ತೋಡುವವರು ಅವರು ಸ್ವತಃ ನರಕದ ಗಂಭೀರ ತಗ್ಗಿನಲ್ಲಿ ಬೀಳುತ್ತಾರೆ. ಮಾಯಾ ಶಲ್ಯವು ಹೃದಯದಲ್ಲಿ ಗೂಟದಂತೆ ತಿವಿಯುತ್ತಿರುತ್ತದೆ. ಮಾಯಾ ಶಲ್ಯ ಉಳ್ಳವರು ಸದಾಕಾಲ ಸಂದೇಹವುಳ್ಳವರಾಗಿರುತ್ತಾರೆ. ಮಾಯಾಚಾರ ಪ್ರಕಾಶಕ್ಕೆ ಬರದಂತಿರಲಿ. ಈ ಭಯದಿಂದ ಯಾವಾಗಲೂ ಭಯ ಪಡುತ್ತಿರುತ್ತಾರೆ. ಅಪರಾಧವಾದಾಗ ಅದನ್ನು ಬಚ್ಚಿಡಲು ಪ್ರಯತ್ನಪಟ್ಟಷ್ಟು ದುಃಖಿತರಾಗುತ್ತಾರೆ.

ಪ್ರಾಮಾಣಿಕತೆ, ಸರಳತೆ, ಸಹಜತೆ ಇರದ ವ್ಯಕ್ತಿಗಳಲ್ಲಿ ಎಲ್ಲ ಗುಣಗಳಿದ್ದರೂ ಸಹ. ಆ ವ್ಯಕ್ತಿಗಳು, ಗುಣಗಳಿಲ್ಲದವನೆಂದು ಭಾವಿಸಲಾಗುತ್ತದೆ. ಆಚಾರ್ಯರುಗಳು ಶಾಸ್ತ್ರಗಳಲ್ಲಿ ಮಾಯಾಚಾರಿಗಳಾಗಿರುವವರು ವ್ರತಗಳನ್ನು ಪಾಲನೆ ಮಾಡಲಾರರು ಅವರು ವ್ರತಗಳ ಉಪದೇಶಗಳ ಖಂಡನೆ ಮಂಡನೆ ಮಾಡುತ್ತಾರೆ. ಅವರು ಉಪೇಕ್ಷಾಭಾವದಿಂದ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳುತ್ತಾ ವ್ರತಗಳ ಪಾಲನೆಯಿಂದ ಏನಾಗುತ್ತದೆ? ವ್ರತಗಳಲ್ಲಿ ಏನಿದೆ? ಸುಮ್ಮ ಸುಮ್ಮನೆ ಶರೀರಕ್ಕೆ ಕಷ್ಟಕೊಡುವುದಾಗಿದೆ. ಇಂತಹ ವ್ಯಕ್ತಿಗಳು ತಮ್ಮ ಪಾಪಮಯ ಪ್ರಮಾದಿ ಕ್ರಿಯೆಗಳ ರಕ್ಷಣೆಗಾಗಿ ಎಲ್ಲ ವ್ರತ ನಿಯಮಗಳನ್ನು ವಿರೋಧಿಸುತ್ತಾ ಸಾಗುತ್ತಾರೆ. ಇದು ಮಾಯಾಚಾರದ ಪ್ರಥಮ ಲಕ್ಷಣವೆಂದು ಹೇಳಲಾಗಿದೆ– ಎಂದು ಬರೆದಿದ್ದಾರೆ. ಎಲ್ಲ ಹಿಂಸಾತ್ಮಕ ಕಾರ್ಯಗಳು ಆಗುವ ದೊಡ್ಡ ಯುದ್ಧಗಳೆಲ್ಲವೂ ಮಾಯಾಚಾರದ ಕಾರಣದಿಂದ ಆಗುತ್ತವೆ. ಮಾಯಾಚಾರಿಯು ಅತಿ ಹೆಚ್ಚು ಹಿಂಸೆ ಮಾಡುತ್ತಾನೆ. ಯಾಕೆಂದರೆ ಆತ ಹಿಂಸಕ ಪ್ರವೃತ್ತಿಗಳಿಗೆ ಪ್ರೋತ್ಸಾಹ ನೀಡುತ್ತಾನೆ. ಆತನು ಭಾವ ಮತ್ತು ದ್ರವ್ಯ ಎರಡೂ ಪ್ರಕಾರದ ಹಿಂಸೆ ಮಾಡುತ್ತಾನೆ. ಎಲ್ಲ ವ್ಯಸನಗಳು

ಮಾಯಾಚಾರದಿಂದ ಪ್ರಾಪ್ತವಾಗುತ್ತವೆ. ಆಚಾರ್ಯ ವಾದಿರಾಜರು ಕ್ಷತ್ರಚೂಡಾಮಣಿ ಗ್ರಂಥದಲ್ಲಿ- ಸಂಸಾರದಲ್ಲಿದ್ದು ಕೊಂಡು ನಾನು ಮಾಯಾಚಾರವನ್ನು ತ್ಯಾಗಮಾಡಿದ್ದೇನೆ ಎಂದು ಹೇಳುವುದು ಸಹ ಒಂದು ಮಾಯಾಚಾರವಾಗಿದೆ. ಪ್ರತಿಯೊಂದು ಕ್ಷೇತ್ರದಲ್ಲಿ ಮಾಯಾಚಾರವಿದೆ. ಇದರಿಂದ ಯಾವ ಕ್ಷೇತ್ರವು ಮುಕ್ತವಾಗಿಲ್ಲ ಸಂಸಾರವನ್ನು ವಿಸ್ತರಿಸುವವರು ಮಾಯಾಚಾರಿಗಳೇ ಆಗಿದ್ದಾರೆ ಮಾಯಾಚಾರದ ನಿಂದೆಯನ್ನು ಮಾಡುತ್ತಾ-

**ಕುಶಲ ಜನನ ಬಂದ್ಯಾಂ ಸತ್ಯ ಸೂರ್ಯಾಸ್ತ ಸಂಧ್ಯಾಂ।**
**ಕುಗತಿ ಯುವತಿ ಮಾಲಾಂ. ಮೋಹ ಮಾತಂಗ ಶಾಲಾಂ॥**
**ಶಮ ಕಮಲ ಹಿಮಾನೀ ದುರ್ಯಶೋ ರಾಜ, ಧಾನೀಂ।**
**ವ್ಯಸನ ಶತ ಸಹಾಯಾಂ ದೂರತೋ ಮುಂಚ ಮಾಯಾಮ್॥**

ಕುಶಲ ಕ್ಷೇಮ ಉತ್ಪನ್ನ ಮಾಡಲು ಬಂಧವಾಗಿರುವುದು, ಸತ್ಯರೂಪದ ಸೂರ್ಯನನ್ನು ಅಸ್ತಮಾಡಲು ಸಂಧ್ಯಾ ಆಗಿದೆ. ಕುಗತಿ ರೂಪದ ಸ್ತ್ರೀಯನ್ನು ಸ್ವಾಗತಿಸಲು ಮಾಲೆಯಾಗಿದೆ, ಮೋಹರೂಪಿ ಆನೆಯ ಶಾಲೆಯಾಗಿದೆ, ಪ್ರಶಮ ಭಾವ ರೂಪದ ಕಮಲವನ್ನು ನಷ್ಟಮಾಡಲು ಹಿಮಾನಿ ಅರ್ಥಾತ್ ತುಷಾರ ಪಾತವಿದೆ ಅಪಯಶದ ರಾಜಧಾನಿಯಾಗಿದೆ ಮತ್ತು ಅನೇಕ ವ್ಯಸನಿಗಳಿಗೆ ಸಹಾಯಕವಾಗಿದೆ ಇಂತಹ ಈ ಮಾಯಾವನ್ನು ದೂರದಿಂದಲೇ ಬಿಟ್ಟು ಬಿಡಬೇಕು. ಅಚಾರ್ಯರು-ಮಾಯಾವು ದುರ್ಭಾಗ್ಯ ಉತ್ಪನ್ನ ಮಾಡುವ ಮಾಲೆಯಂತಿದೆ. ದುರ್ಗತಿಯನ್ನು ಹೆಚ್ಚುಸುವಂತಿದೆ. ಮನುಷ್ಯರಿಗೆ ಸ್ತ್ರೀ ಪರ್ಯಾಯವನ್ನು ಮಾಡಿಸುವಂತಿದೆ. ಆದ್ದರಿಂದ ಜ್ಞಾನಿಗಳಿಂದ ಮಾಯಾಚಾರವು ಬಿಡಲಾಗುತ್ತದೆ. ಗೊಮ್ಮಟಸಾರ ಜೀವಕಾಂಡದಲ್ಲಿ ಮಾಯಾ ಕಷಾಯದ ಸ್ಥಿತಿಗಾಗಿ ಉದಾಹರಣೆಯನ್ನು ವರ್ಣಿಸಿದ್ದಾರೆ. ಅಲ್ಲಿ ಹೀಗೆ ಹೇಳಿದ್ದಾರೆ-

**ವೇಣುವಮೂಲೋರಂಭ್ಯಸಿಂಗೇ ಮೋಮುತ್ತಯೇ ಯ ಖೋರಪ್ಪೆ।**
(ಗೊ.ಸಾ.ಗಾ.286)

ಮಾಯಾಚಾರವು ನಾಲ್ಕು ಪ್ರಕಾರವಾಗಿರುತ್ತದೆ. ಬಿದಿರಿನ ಮೂಲದಂತೆ, ಟಗರಿನ ಕೊಂಬಿನಂತೆ, ಗೋಮೂತ್ರದಂತೆ ಹಾಗೂ ಕುರುಚಿಗೆಯಂತೆ, ಅನಂತಾನುಬಂಧಿ ಕಷಾಯದ ವಕ್ರತೆ, ಬಿದಿರಿನ ಮೂಲದಂತೆ, ಹಾಗೂ ಅದರ ಧಾರಣೆ ಮಾಡಿರುವವರು ಸ್ವತಃ ಅಷ್ಟೇ ವಕ್ರರಾಗಿರುತ್ತಾರೆ. ಅರ್ಥಾತ್ ಈ ಕಷಾಯವು ಅಡ್ಡಾ-ದಿಡ್ಡಿ ಅಂತ ಹೀನ ತೊಡಕಿನದೆಂದು ತಿಳಿಯಲಾಗಿದೆ ಹಾಗೂ ಇಂತಹ ಮಾಯಚಾರಿಯ ಫಲ ತಿರ್ಯಂಚ ಪಶುಪಕ್ಷಿಯ ಪರ್ಯಾಯವೆಂದು ತಿಳಿಯಲಾಗಿದೆ. ಅಪ್ರತ್ಯಾಖ್ಯಾನ ಕಷಾಯವು ಟಗರಿನ ಕೊಂಬಿನಂತೆ ತಿರುಗು ಮುರುಗಿನಂತಿರುತ್ತದೆ. ಇದರಲ್ಲಿ ಬಿದಿರಿನ ಮೂಲಕ್ಕಿಂತ ಸ್ವಲ್ಪ ತಿರುವು ಇರುತ್ತದೆ. ಪ್ರತ್ಯಾಖ್ಯಾನ ಕಷಾಯದ ವಕ್ರತೆ ಗೋಮೂತ್ರದ ಸಮಾನವಿರುತ್ತದೆ ಹಾಗೂ ಸಂಜ್ವಲನ ಕಷಾಯ ಮಾಯಾಚಾರವು ಕುಡಗೋಲಿನಂತೆ ಒಂದೇ ತಿರುವಿನಂತಿರುತ್ತದೆ. ಇಂತಹ ವ್ಯಕ್ತಿಯು ಸಮಸ್ತ ಕಷಾಯ ಹಾಗೂ ತನ್ನ ದೋಷಗಳಿಂದ ಮುಕ್ತನಾಗುವ ಪ್ರಯತ್ನ ಮಾಡುತ್ತಾನೆ. ನಮ್ಮ ಗತಿಯು ಕರ್ಮಕ್ಕನುಗುಣವಾಗಿ ವಿಗ್ರಹಗತಿಯಾಗುತ್ತದೆ. ನಮ್ಮ ಗತಿಯು ಆತ್ಮನ ಅನುರೂಪವಾಗುವುದಿಲ್ಲ. ಆತ್ಮನ ಅನುರೂಪ ಗಮನ ಮಾಡಲು ವಕ್ರತೆಯನ್ನು ಕೊನೆಗೊಳಿಸುವುದು ಅವಶ್ಯವಾಗಿದೆ. ಇದಕ್ಕಾಗಿ ಆರ್ಜವ ಧರ್ಮದ ಬಗ್ಗೆ ಅನುರಾಗ ಹೊಂದುವುದು ಅವಶ್ಯವಾಗಿದೆ. ಮಾಯಾಚಾರಕ್ಕೆ ಸಂಬಂಧಿಸಿದಂತೆ ಅಚಾರ್ಯರು ಹೀಗೆ ಹೇಳಿದ್ದಾರೆ-

**ಜನ್ಮ ಭೂಮಿರವಿದ್ಯಾನಾಮಕೀರ್ತಿರ್ವಾಸ ಮಂದಿರಮ್।**
**ಪಾಪ ಪಂಕ ಮಹಾಗರ್ತೋ ನಿಕೃತಿಃ ಕೀರ್ತಿತಾ ಬುಧೈಃ॥19/58 ಜ್ಞಾನಾರ್ಣವ**

ಮಾಯಾಚಾರವನ್ನು ವಿದ್ಯೆಯ ಜನ್ಮ ಭೂಮಿ, ಅಕೀರ್ತಿಯ ನಿವಾಸ ಗೃಹ ಮತ್ತು ಪಾಪರೂಪದ ಕೆಸರಿನ ಹೊಂಡವೆಂದು ಹೇಳಿದ್ದಾರೆ. ಗುಪ್ತ ಪಾಪರೂಪದ ಕುಷ್ಠವನ್ನು ಪ್ರಕಟ ಮಾಡುವಂತಹದಾಗಿದೆ ಹಾಗೂ ಕಲಹ ಮತ್ತು ತಿರಸ್ಕಾರವನ್ನುಂಟು ಮಾಡುವುದಾಗಿದೆ. ಆಕಾಶದಲ್ಲಿ ಮೋಡ ಹರಡುವುದರಿಂದ ಸೂರ್ಯನ ಪ್ರಕಾಶ ಭೂಮಿಯ ಮೇಲೆ ಬರದಂತೆ ಮಯಾಚಾರದ ಮೋಡ ಬಂದಾಗ ಧರ್ಮದ ಪ್ರಕಾಶ ಆತ್ಮನ ಭೂಮಿಯ ಮೇಲೆ ಬರಲಾರದು. ಆಗಮದಲ್ಲಿ ಆಚಾರ್ಯರು ಪ್ರಾಣಿಗಳಿಗೆ ಮಾಯಾಚಾರದ ಕಾರಣ ಸ್ತ್ರೀವೇದ, ನಪುಂಸಕ ವೇದ, ತಿರ್ಯಂಚಗತಿ ಹಾಗೂ ನೀಚಗೋತ್ರಗಳಲ್ಲಿ ಜನ್ಮ ತಾಳುವ ಅಪಮಾನವನ್ನು ಅನೇಕ ಜನ್ಮಗಳಲ್ಲಿ, ಭೋಗಿಸಬೇಕಾಗುತ್ತದೆಂದು ಹೇಳಿದ್ದಾರೆ. ಆಚಾರ್ಯ ಉಮಾಸ್ವಾಮಿಗಳು, ತತ್ವಾರ್ಥಸೂತ್ರದಲ್ಲಿ ಮಾಯಾಚಾರದ ಫಲ ತಿರ್ಯಂಚ ಪರ್ಯಾಯವೆಂದು ಹೇಳುತ್ತಾ ಈ ಸೂತ್ರ ಬರೆದಿದ್ದಾರೆ–

**"ಮಾಯಾ ತೈರ್ಯಗ್ಯೋನಸ್ಯ"(6/16)**

ತಿರ್ಯಂಚಗತಿಯ ಪ್ರಾಣಿಗಳಲ್ಲಿ ಮಾಯಾಚಾರಿಗಳು ಹೆಚ್ಚಾಗಿರುತ್ತಾರೆ. ಈ ಮಾತಿಗೆ ಅನೇಕ ಉದಾಹರಣೆಗಳು ನಮ್ಮೆಲ್ಲರಿಗೂ ಎದುರಿಗೆ ಕಂಡುಬರುತ್ತವೆ. ಕಾಗೆ ಬಹಳ ಮಾಯಾಚಾರಿಯಾಗಿರುತ್ತದೆ, ಕೋಗಿಲೆಯು ಮಾಯಾಚಾರಿಯಾಗಿರುತ್ತದೆ. ಅದು ಕಾಗೆಯಂತೆ ಬಣ್ಣ ರೂಪ ಅಕಾರದ್ದಾಗಿರುವುದರಿಂದ ತನ್ನ ಲಾಭವನ್ನು ಪಡೆಯಲು ತನ್ನ ಮೊಟ್ಟೆಯನ್ನು ಕಾಗೆಯ ಗೂಡಿನಲ್ಲಿಡುತ್ತದೆ. ಸ್ವತಃ ತನ್ನ ಮೊಟ್ಟೆಗಳ ಸೇವೆಯನ್ನು ಮಾಡುವುದಿಲ್ಲ, ಮೊಟ್ಟೆಗಳು ಒಡೆದಾಗ ಅದರಿಂದ ಹೊರಬಂದ ಮರಿಗಳು ದೊಡ್ಡವಾಗುತ್ತವೆ ಹಾಗೂ ಧ್ವನಿಯಿಂದ ಗುರುತಿಸಲ್ಪಟ್ಟಾಗ ಅವು ಸ್ವಯಂ ಅಲ್ಲಿಂದ ಹಾರಿ ಹೋಗುತ್ತವೆ. ಹೀಗೆ ಮಾಯಾಚಾರದ ಕಾರಣ ಕೋಗಿಲೆಯ ಮರಿಗಳು ಕಾಗೆಯಿಂದ ಸಾಕಲ್ಪಡುತ್ತವೆ. ಕಾಗೆಯು ಗೂಬೆಗೆ ಹಾನಿ ಅಥವಾ ಕಷ್ಟ ಕೊಡಲು ಸೂರ್ಯೋದಯ ಲಾಭವನ್ನು ಪಡೆಯುತ್ತದೆ. ಯಾಕೆಂದರೆ ಗೂಬೆಗೆ ಸೂರ್ಯೋಯದಲ್ಲಿ ಕಣ್ಣು ಕಾಣಿಸುವುದಿಲ್ಲ. ಕೊಕ್ಕರೆಯು ಮೀನುಗಳನ್ನು ಹಿಡಿಯಲು ಒಂದೇ ಕಾಲಿನ ಮೇಲೆ, ಕಣ್ಣುಮುಚ್ಚಿ ಧ್ಯಾನಸ್ಥನಾಗಿ ನಿಂತು ಮೀನು ಬರುತ್ತಲೇ ಅದನ್ನು ತನ್ನ ಕೊಕ್ಕಿನಿಂದ ಒತ್ತಿ ಹಾರಿ ಹೋಗುವಷ್ಟು ಮಾಯಾಚಾರಿಯಾಗಿರುತ್ತದೆ. ಮಾಯಾಚಾರಿಗಳು ಅನೇಕ ಬಣ್ಣಗಳಲ್ಲಿ, ಅನೇಕ ಗುಣಗಳಲ್ಲಿ ವ್ಯಕ್ತವಾಗುತ್ತದೆ.

ಈ ಜಗತ್ತಿನಲ್ಲಿ ಎಲ್ಲರೂ ತಮ್ಮ-ತಮ್ಮ ಸುಖಕ್ಕಾಗಿ ಅಳುತ್ತಾರೆ. ಮಗನಾಗಲಿ, ತಂದೆ ಇರಲಿ, ಬೇರೆ ಯಾರೇ ಆಗಿರಲಿ ಎಲ್ಲರೂ ತಮ್ಮ ತಮ್ಮ ಸುಖ ಬಯಸುತ್ತಾರೆ ಮಗ ತಂದೆಯ ಮೇಲೆ ಕೇಸು ಹಾಕುತ್ತಾನೆ, ತಂದೆಯು ಮಗನ ಮೇಲೆ ಕೇಸು ಹಾಕುತ್ತಾನೆ. ಹೀಗೆಯೇ ಒಬ್ಬ ಸಜ್ಜನರು ನಮ್ಮ ಬಳಿ ಬಂದು-ಮಹಾರಾಜರೇ ನಮ್ಮ ತಂದೆ-ಮಗನಲ್ಲಿ ಹಂಚಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಕೇಸು ಹಾಕುತ್ತಿದ್ದೇನೆ, ಆದರೆ ನಮ್ಮ ಇಚ್ಛೆ ತಮಗೆ ಆಹಾರ ನೀಡುವುದಾಗಿದೆ ಎಂದು ಹೇಳಿದರು. ನಾನು ಅವರ ಮಾತುಗಳನ್ನು ಕೇಳಿ-ನೇರವಾಗಿ ಹೊರಗೆ ಹೊರಟು ಹೋಗಿ- ಎಂದು ಹೇಳಿದೆವು. ಇದೇನು ಮಾಡುತ್ತಿದ್ದಿರಾ ನೀವು, ನಿಮ್ಮ ಕುಟುಂಬದಲ್ಲಿ ತಂದೆಯವರು ಏನು ಕೊಟ್ಟಿದ್ದಾರೋ ಅದು ಸರಿಯಾಗಿದೆ, ಕೊಡದೇ ಇದ್ದರೂ ಇದಕ್ಕಿಂತ ಭಿಕ್ಷೆ ಕೇಳಿ(ಬದುಕಿ) ನಿನ್ನನ್ನು

ಚಿಕ್ಕವನಾಗಿದ್ದಾಗಿನಿಂದ ದೊಡ್ಡವನನ್ನಾಗಿ ಮಾಡಿರುವುದಕ್ಕೂ ಗೌರವ ಭಾವವಿಲ್ಲವೇ, ಇದೇನು ಕಡಿಮೆಯೇ? ಇದೇ ಬಹಳ ದೊಡ್ಡದು. ಇದು ಸರಿಯಲ್ಲ, ಹೀಗಾಗಬಾರದು, ಇದನ್ನು ಮರೆತು ಬಿಡಿ, ಕ್ಷಮೆ ಮಾಡಿ ಹಾಗೂ ವೈರಭಾವವನ್ನು ಬಿಡಿ, ಆಗಲೇ ನೀವು ಇದಕ್ಕೆ (ಆಹಾರದಾನ ಮಾಡಲು) ಪಾತ್ರರಾಗುತ್ತಿರಿ. ಇಲ್ಲವಾದರೆ ಇಲ್ಲ-ಎಂದು ಹೇಳಿದೆವು. ಈ ವ್ಯವಹಾರಗಳಿಂದ ಈ ಜಗತ್ತು ಹೇಗಿದೆ? ಎಂದು ತಿಳಿದು ಬರುತ್ತದೆ. ಎಷ್ಟು ಸ್ವಾರ್ಥಿಗಳು? ಇಂತಹ ಅನೇಕ ಸಾಕ್ಷಾತ್ ಉದಾಹರಣೆಗಳನ್ನು ನೋಡುತ್ತೇವೆ. ಇದರಿಂದ ನಮ್ಮ ವೈರಾಗ್ಯ ಇನ್ನು ದೃಢವಾಗುತ್ತಾ ಸಾಗುತ್ತದೆ.

ಇಲ್ಲಿಯೇ ಹತ್ತಿರದಲ್ಲಿ ಒಂದು ಪರಿವಾರವಿದ್ದಿತು. ಆ ಮನೆಯ ಮುಖ್ಯಸ್ಥರು ನೌಕರಿ ಮಾಡಿ, ನಿವೃತ್ತರಾಗಿದ್ದರು ಅವರಿಗೆ ನಿವೃತ್ತಿ ವೇತನ ಬರುತ್ತಿದುದು ಅವರ ಜೀವನ ಮತ್ತು ಮನೆ ವ್ಯವಹಾರ ಸಾಗುತ್ತಿತ್ತು. ಈಗ ಅವರು ವೃದ್ಧರಾಗಿದ್ದರು ಅವರಿಗೆ ದಮ್ಮು ರೋಗವಿದ್ದಿತು. ಬಹಳ ಕೆಮ್ಮು ಬರುತ್ತಿದ್ದಿತು, ಬಹಳ ಕಫವು ಬರುತ್ತಿದ್ದಿತು. ಏಳುವುದು ಕೂಡ್ರುವುದು, ಓಡಾಡುವುದು ಕಠಿಣವಿದ್ದಿತು, ಶರೀರ ದುರ್ಬಲವಾಗಿದ್ದಿತು ಆದರೂ ಹಾಗೂ ಹೀಗೂ ಗೋಡೆಯನ್ನು ಹಿಡಿದುಕೊಂಡು ನಡೆದಾಡುತ್ತಿದ್ದರು. ಕೋಲಿನ ಆಸರೆಯಿಂದ ಅಲ್ಲಿ ಇಲ್ಲಿ ಹೋಗಿ ಬರುತ್ತಿದ್ದರು. ಅವರ ಪತ್ನಿ ದಪ್ಪ ಶರೀರದ ಕಾರಣ ಏಳುವುದು, ಕೂಡ್ರುವುದು ಅತ್ಯಂತ ಪ್ರಯಾಸದಾಯಕವಾಗಿದ್ದಿತು. ಅವರ ಜೀವನದಲ್ಲಿ ಯಾವ ಸೇವಾ ಭಾವನೆಯೂ ಇರಲಿಲ್ಲ. ಸ್ವಾರ್ಥ ತುಂಬಿದ್ದಿತು. ಯಾರ ಗಳಿಕೆಯನ್ನು ಅನುಭವಿಸುತ್ತಿದ್ದರೋ, ಯಾರಿಂದ ಜೀವನ ನಿರ್ವಹಣೆ ಆಗುತ್ತಿತ್ತೋ, ಅವರ ಬಗ್ಗೆ ಯಾವ ಸೇವಾ ಭಾವನೆಯೂ ಇರಲಿಲ್ಲ, ಯಾವುದೇ ರೀತಿಯ ಆದರ ಭಾವವೂ ಇರಲಿಲ್ಲ. ಪತ್ನಿ ಒಲೆಯ ಮುಂದೆ ರೊಟ್ಟಿ ಮಾಡಲು ಕುಳಿತಿದ್ದರೆ ಅವರ ಪತಿ ಅಲ್ಲಿಗೆ ಬಂದು ಅಲ್ಲಿಯೇ ಸಮೀಪ ಕುಳಿತಿರುತ್ತಿದ್ದರು. ಪತ್ನಿ ತಟ್ಟೆಯಲ್ಲಿ ತಿಳಿಯಾದ ಸಾರನ್ನು ಹಾಕಿ ರೊಟ್ಟಿಯನ್ನು ಮಾಡಿ ಕುಳಿತಲ್ಲಿಂದಲೇ ಪತಿಯ ತಟ್ಟೆಗೆ ರೊಟ್ಟಿಯನ್ನು ಎಸೆದು ತಿನ್ನಿ ಎನ್ನುತ್ತಿದ್ದಳು. ಆ ರೊಟ್ಟಿ ಸಾರಿನ ಮೇಲೆ ಬಿದ್ದು ಚೆಲ್ಲಾಡಿ ಅವರ ಮೈಗೆಲ್ಲಾ ಸಿಡಿಯುತ್ತಿದ್ದಿತು. ಅದನ್ನು ಪತ್ನಿ ನೋಡುತ್ತಾ ಇದ್ದರೆ, ಪತಿ ಏನು ಯೋಚಿಸುತ್ತಿರ ಬಹುದು? ಅರೇ ನಾನು ಏನೆಲ್ಲವನ್ನು ಗಳಿಸಿದೆ, ನನ್ನ ನಿವೃತ್ತಿಯ ಹಣವನ್ನೂ ಇವರೆಲ್ಲಾ ತಿನ್ನುತ್ತಿದ್ದಾರೆ ಹಾಗೂ ನನ್ನ ಬಗ್ಗೆ ಇಂತಹ ಭಾವವಿದೆಯಲ್ಲಾ. ಅವಳು ರೊಟ್ಟಿ ಎಸೆಯುತ್ತಿದ್ದ ರೀತಿಯನ್ನೇ ನೋಡಿದರೆ ಮನಸ್ಸಿನಲ್ಲಿ ಎಷ್ಟು ನೋವಾಗುತ್ತದೆ. ತಿನ್ನುವವರಿಗೆ ಹೇಗೆ ಅನ್ನಿಸಬಹುದು?

ನಾನು ಸಂಸಾರ ಹೇಗಿದೆಯಲ್ಲಾ ಎಂದು ಯೋಚಿಸುತ್ತಿದ್ದೆ. ಯಾವಾಗಲಾದರೂ ಯಾರೊಂದಿಗಾದರೂ ಯಾರಾದರೂ ಹೀಗೆ ಮಾಡಬಲ್ಲರೆ? ಮಾಡಬಲ್ಲರು. ಕರ್ಮ ಯಾರನ್ನೂ ಬಿಡುವುದಿಲ್ಲ. ಸಹೋದರರೇ ಈ ಕರ್ಮಗಳನ್ನು ಕತ್ತರಿಸಿರಿ, ಯಾರಿಗೆ ಕರ್ಮ ಎಂತಹ ಫಲ ನೀಡುತ್ತದೆ ಎನ್ನುವುದು ನಿಶ್ಚಿತವಿಲ್ಲ, ಇಂತಹ ಜೀವನ ಎಲ್ಲರದೂ ಆಗಬಲ್ಲದು. ಹಾಗೂ ಅನೇಕ ಸಾರಿ ಆಗಿಯೂ ಇದೆ. ಈ ಸಂಸಾರದಲ್ಲಿ ಯಾರ್ಯಾರಿಗೊ ನೊಣ ಓಡಿಸುವವರು ಯಾರೂ ಸಿಗುವುದಿಲ್ಲ ಕೊನೆಯಲ್ಲಿ ಅಳುತ್ತಾ-ಅಳುತ್ತಾ ಕೂಗಾಡುತ್ತಾ-ಕೂಗಾಡುತ್ತಾ ಸತ್ತು ಹೋಗುತ್ತಾರೆ. ಆದ್ದರಿಂದ ಸಂಸಾರ ಸ್ವಾರ್ಥದಿಂದ ಕೂಡಿದೆ. ಎಲ್ಲರೂ ತಮ್ಮ ತಮ್ಮ ಸುಖಕ್ಕಾಗಿ ಅಳುತ್ತಿದ್ದಾರೆಂಬುದು ಗಮನದಲ್ಲಿರಲಿ, ಯಾರೂ ನಮ್ಮವರಲ್ಲ. ನಮ್ಮದೇ ಕನಸಾಗಿದೆ. ಯಾರ್ಯಾರದೋ ಸ್ವಲ್ಪ ಪುಣ್ಯವಿರುತ್ತದೆ, ಕೊನೆಯ ಕಾಲದವರೆಗೂ ಸೇವೆ ಆಗುತ್ತಿರುತ್ತದೆ ಅಂತಹವರು ವಿರಳರಾಗಿರುತ್ತಾರೆ. ಆದ್ದರಿಂದ

ತ್ಯಾಗ-ತಪ್ಪಸ್ಸು-ಸಾಧನೆ ಮಾಡಿರಿ. ಸಲ್ಲೇಖನದಿಂದ ಮರಣ ಹೊಂದಿರಿ, ಸದ್ಗತಿಯಾಗಲಿ, ಈ ಸಂಸಾರದ ಅಲೆದಾಟ ಕೊನೆಗೊಳ್ಳಲಿ, ನನ್ನ ಒಳ್ಳೆಯ ಹಾಗೂ ಕೆಟ್ಟದ್ದು ನನ್ನದೇ ಪುಣ್ಯ ಪಾಪದ ಅನುಸಾರವಾಗುತ್ತದೆ ಎಂದು ಸ್ವೀಕಾರಮಾಡಿರುವವರಿಗೆ ಮಾಯಾಚಾರ ಮಾಡುವ ಪ್ರಯೋಜನವೇ ಇರುವುದಿಲ್ಲ ಅಂದ ಮೇಲೆ ಜಾರಿತ್ರ ಮೋಹದಿಂದ ಸಂಬಂಧಿಸಿದ ಮಾಯಾಚಾರವನ್ನು ತ್ಯಾಗ ಮಾಡಿದಾಗಲೇ ನಿಜವಾದ ಸಮ್ಯಗ್ ದೃಷ್ಟಿ ಆಗುತ್ತಾರೆ. ಮಾಯಾಚಾರವನ್ನು ತ್ಯಾಗ ಮಾಡದಿರುವವರು, ಇತರರೊಂದಿಗೆ ಸ್ವಯಂಗೂ ಸಹ ಹಾನಿಯನ್ನುಂಟು ಮಾಡುತ್ತಾರೆ ಧರ್ಮದ ಸರಳತೆ ಅನಾದಿಕಾಲದಿಂದ ಇದೆ ಹಾಗೂ ಅನಾದಿಕಾಲದವರೆಗೂ ಇರುತ್ತದೆ. ಸರಳತೆಯು ಶಾಶ್ವತ, ಅವಿನಶ್ವರ ಸ್ವಾಭಾವಿಕವಾಗಿರುತ್ತದೆ. ಉತ್ತಮ ಆರ್ಜವ ಧರ್ಮದಲ್ಲಿ ಮೂರು ಯೋಗಗಳ ಸರಳತೆ, ಸಹಜತೆ, ಸತ್ಪುರುಷಾರ್ಥ, ಸತ್ಪ್ರಯಾಸ ಪೂರ್ವಕವಾಗಿ ಬದುಕುವುದರಿಂದ ಆತ್ಮಿಕ ಸ್ವಭಾವವನು ಆತ್ಮಿಕ ಗುಣಗಳನ್ನು ಪಡೆಯಬಲ್ಲದು ಪೂರ್ಣ ಋಜು ವಿಚಾರಗಳಾದಾಗ ಋಜುಗತಿಯಿಂದ ಸಿದ್ಧಾಲಯದ ಸಹಜ ಉಪಲಬ್ಧವಾಗಬಲ್ಲದು. ಆದ್ದರಿಂದ ತನ್ನ ಸ್ವಕೀಯ ಸ್ವಭಾವವನ್ನು ಪಡೆಯೋಣ, ಸ್ವಕೀಯ ಗುಣಗಳು, ಸ್ವಕೀಯ ನಿಧಿಯನ್ನು ಪಡೆದು ಒಂದು ದಿನ ಪರಮಾತ್ಮನ ಶ್ರೇಣಿಯಲ್ಲಿ ಬರೋಣ ಇದೇ ಮಂಗಲಮಯ ಭಾವನೆ ಇದೆ. ಧರ್ಮಭಾವನಾ ಶತಕದಲ್ಲಿ ಹೀಗೆ ಹೇಳಿದೆ-

**ಯಾರ ಸರಳ ವಿನಮ್ರಾದಿ ಗುಣಗಳು, ಚಂದ್ರಕಲೆಗಳ ಹಾಗೇ ವರ್ಧಿಸಿ।**
**ಅವರ ಚೇತನವಾಗಿ ನಿರ್ಮಲ, ದರ್ಪಣದಂತೆ ಜ್ಞಾನಿ ಆಗಲಿ॥**
**ಮತ್ತೇ ಆರ್ಜವ ಧರ್ಮ ಪಡೆದು, ಉತ್ತಮ ಸುಖದಲಿ ಲೀನವಾಗಲಿ।**
**ಕ್ಷಣ, ಕ್ಷಣದಲಿ ಅವರು ಆತ್ಮ ರಸವ ಸೇವಿಸಿ ನಿರ್ವಿಕಾರಿಯಾಗಲಿ॥18॥**
**ಯೋಚಿಸಿದಂತೆ ಇದ್ದು ನಾವು, ವಚನ, ಕ್ರಿಯೆಗಳಲಿ ಸದಾ ತೊಡಗಿ।**
**ಅಪರಾಧಗಳ ಮುಚ್ಚಿ ಇಡದೇ, ಧರ್ಮಮಾರ್ಗದಲಿ ಸದಾ ಸಾಗಿ॥**
**ಹೀಗೆ ಮಾಡುವ ಅವನು ಭವಿ, ಆರ್ಜವ ಧರ್ಮಿ ಎಂದು ಕರೆದರು।**
**ಅವನು ಇರುವ ವಿಶ್ವಾಸಿ ಎಲ್ಲರ, ಕೀರ್ತಿ ಉತ್ತಮ ಪಡೆವರು॥**
**ತಿರ್ಯಕ ಗತಿಯಲಿ ಮಾಯಾಚಾರಿಯು ಇರುವ ನರಕ ನಿಗೋಧಗಳಲ್ಲಿಯೂ।**
**ಕಷ್ಟಗಳ ಸಹಿಸಿ ದುಃಖ ಪಡೆಯುವ, ಇರುವುದು ಕುಮರಣ ಭವದಲ್ಲಿಯೂ॥**
**ಆರ್ಜವದಿಂದ ಮಾಯಾ ತ್ಯಜಿಸಿ, ಪೂಜ್ಯನಾದನು ದೇವತೆಗಳಿಗೂ।**
**ತೀರ್ಥಂಕರನಾಗುವ ಲೋಕಪೂಜ್ಯನು, ಸಿದ್ಧರ ಸುಖವನು ಪಡೆವನು॥**

# ಉತ್ತಮ ಶೌಚ ಧರ್ಮ

## ಲೋಭದ ತ್ಯಾಗವೇ ಶುಚಿತ್ವದ ಮಾರ್ಗ

### ಮಂಗಲಾಚರಣೆ

**ಸ ಚಂದ್ರಮಾ ಭವ್ಯ ಕುಮುದ್ವತೀನಾಂ ವಿಪನ್ನದೋಷಾ ಭ್ರಕಲಂಕ ಲೇಪ:।**
**ವ್ಯಾಕೋಶವಾಙ್ಮನ್ಯಾಯ ಮಯೂಖಮಾಲ: ಪೂಯಾತ್ಪವಿತ್ರೋ ಭಗವಾನ್ಮನೋ ಮೇ॥**

ಸದ್ಧರ್ಮ ಬಂಧುಗಳೇ,

**"ಶುಚೇರ್ಭಾವಃ ಶೌಚಮ್'** ಪವಿತ್ರತೆಯ ಪರಿಣಾಮ/ಭಾವವಾಗುವುದು ಉತ್ತಮ ಶೌಚ ಧರ್ಮವಾಗಿದೆ ಅರ್ಥಾತ್ ಶುಚಿತ್ವ ಭಾವವನ್ನು ಶೌಚ ಧರ್ಮವೆಂದು ಕರೆಯಲಾಗುತ್ತದೆ. ಶರೀರದಲ್ಲಿ ಮಮತಾ ರಹಿತ ಭಾವವಿರುವುದು ಹಾಗೂ ಇದು ನನ್ನದು ಎಂಬ ಬುದ್ಧಿ ಇರದೇ ಇರುವುದು ಉತ್ತಮ ಶೌಚ ಧರ್ಮವೆಂದು ಕರೆಯಲಾಗುತ್ತದೆ. ಶರೀರ ಸಂಬಂಧದ ಲೋಭದ ತ್ಯಾಗವೇ ಸಮಸ್ತ ಲೋಭಗಳ ತ್ಯಾಗದ ಮೂಲಕಾರಣವಿದೆ. ಶರೀರದ ಉಪಕಾರಕ್ಕಾಗಿ ಬಂಧು ಮುಂತಾದವರಲ್ಲಿ ಲೋಭವಾಗುತ್ತದೆ. ಆದ್ದರಿಂದ ಪರವಸ್ತುಗಳನ್ನು ಬಿಟ್ಟು ಮನದ ಶುದ್ಧಿಯ ಹೊರ್ತಾಗಿ ಶೌಚ ಧರ್ಮವಾಗುವುದಿಲ್ಲ, ಶುಚಿತ್ವ ಉತ್ತಮ ಶೌಚ ಧರ್ಮ, ಶುಚಿ ಅರ್ಥಾತ್ ಪವಿತ್ರತೆ, ಸ್ವಚ್ಛತೆ, ಶುದ್ಧತೆ, ನಿರ್ಲೋಭತೆ, ಮನದ ನಿರ್ಮಲತೆ, ವಚನದ ನಿರ್ಮಲತೆ, ತನುವಿನ ನಿರ್ಮಲತೆ, ಎಲ್ಲಿ ನೋಡಿದಲ್ಲಿ ನಿರ್ಮಲತೆ, ಚೇತನತೆಯ ನಿರ್ಮಲತೆ, ಇಂತಹ ನಿರ್ಮಲತೆಯು ಲೋಭನ್ನು ತ್ಯಾಗ ಮಾಡಿದಾಗಲೇ ದೊರೆಯಬಲ್ಲದು. ಅತಿ ಲೋಭದ ತ್ಯಾಗ ಹಾಗೂ ಧರ್ಮ ಮತ್ತು ಧರ್ಮಾತ್ಮರೊಂದಿಗೆ ಗ್ಲಾನಿಯನ್ನು ಬಿಡುವುದು ಶೌಚಧರ್ಮವೆಂದು ಕರೆಯಲಾಗುತ್ತದೆ.

ಸಂಸಾರದಲ್ಲಿ ಪರಪದಾರ್ಥಗಳಲ್ಲಿರುವ ಆಸಕ್ತಿ ಅದೇ ಲೋಭದ ಕಾರಣವಾಗಿದೆ. ಶೌಚ ಧರ್ಮದ ಸಂಭಂಧವು ಆತ್ಮನ ಶುದ್ಧತೆಯೊಂದಿಗೆ ಆತ್ಮನ ಪವಿತ್ರತೆಯಲ್ಲಿದೆ, ಲೋಕ ವ್ಯವಹಾರದಲ್ಲಿ ಶರೀರದ ಬಾಹ್ಯ ಶುದ್ಧತೆಯೂ ಮಾನ್ಯವಿದೆ ಇದು ಸಹ ಬಹಳ ಅವಶ್ಯವಿದೆ. ತನುವಿನ ಪವಿತ್ರತೆಯೊಂದಿಗೆ ಮನದ ಪವಿತ್ರತೆಯೂ ಸಹ ಬೇಕು. ನಮ್ಮ ಮನಸ್ಸನ್ನು ಪತಿತ್ರಗೊಳಿಸುವುದರಿಂದ ನಮ್ಮ ಆತ್ಮನು ಪವಿತ್ರನಾಗುತ್ತಾನೆ. ಮನಸ್ಸನ್ನು ಹೇಗೆ ಪವಿತ್ರಗೊಳಿಸುವುದು? ಮನಸ್ಸನ್ನು ಪವಿತ್ರಗೊಳಿಸಲು. ನಮ್ಮ ಮನಸ್ಸು ಯಾವ ಕಾರಣಗಳಿಂದ ಅಪವಿತ್ರವಾಗಿದೆಯೋ, ಅಪಾವನವಾಗಿದೆಯೋ, ಆ ಕಾರಣಗಳಿಗೆ ವಿರಾಮ ನೀಡುವುದೊಂದೇ ಉಪಾಯವಾಗಿದೆ. ಸ್ವಾರ್ಥ ಬುದ್ಧಿಯಿಂದ ಧರ್ಮ ಮಾಡುವುದು, ರೋಗಿ ಬಡವರು ಹಾಗೂ ತಪ-ಧ್ಯಾನ ಮಾಡುವ ಸಾಧುಗಳಿಗೆ ತೊಂದರೆ ಕೊಡುವುದು, ನಮ್ಮ ಆತ್ಮದ ಶುಚಿತ್ವ ಹಾಗೂ ಪವಿತ್ರತೆಗೆ ಹಾನಿ ಮಾಡುವಂತಹದಾಗಿದೆ. ಶೌಚದ ಅರ್ಥ ಬಾಹ್ಯ ಶುಚಿ ಮಾತ್ರ ಅಲ್ಲ. ಉತ್ತಮ ಶುದ್ಧಿ ಎಂದರೆ ಆಂತರೀಕ ಶುಚಿಯೇ ಆಗಿದೆ. ಅಂತರಂಗ ಶುಚಿಯು ತತ್ವಜ್ಞಾನದಿಂದ ಸಾಧ್ಯವಿದೆ. ಪೂರ್ಣ ಶುಚಿತ್ವವು ಕೇವಲ ಬಾಹ್ಯ ಪರಿಗ್ರಹ ತ್ಯಾಗದಿಂದ ಸಾಧ್ಯವಿಲ್ಲ ಬದಲಾಗಿ ಅಂತರಂಗ ಪರಿಗ್ರಹಗಳ ತ್ಯಾಗದಿಂದ ಸಾಧ್ಯವಿದೆ. ಶೌಚ ಧರ್ಮದ ವಿಷಯದಲ್ಲಿ ಶ್ರೀ ಪೂಜ್ಯಪಾದ ಸ್ವಾಮಿಗಳು ಸರ್ವಾರ್ಥಸಿದ್ದಿ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ-

**ಲೋಭ ಪ್ರಕಾರಣಾ ಮುಪರಮ: ಶೌಚಮ್। 6/12**

ಲೋಭದ ಪ್ರಕಾರಗಳನ್ನು ತ್ಯಾಗ ಮಾಡುವುದು ಶೌಚಧರ್ಮವಾಗಿದೆ ಲೋಭವು ಅನೇಕ ಪ್ರಕಾರದ್ದಾಗಿದೆ. ಕೇವಲ ಧನದ ಲೋಭವೆಂದೇನೂ ಇಲ್ಲ, ಹೆಸರು, ಖ್ಯಾತಿ, ಪೂಜೆ, ರೂಪ, ಪದವಿ, ಲಾಭ ಇತ್ಯಾದಿ ಅನೇಕ ಪ್ರಕಾರದ ಲೋಭಗಳಿವೆ. ಕೆಲವರು ಧನದ ಲೋಭದಲ್ಲಿ ಬಿದ್ದಿದ್ದಾರೆ, ಇನ್ನು ಕೆಲವರು ರೂಪದ, ಕೆಲವರು ಶರೀರದ, ಸಾಂಸಾರಿಕ ಸಾಮಾಗ್ರಿಗಳ, ಕೆಲವರು ಪದವಿ, ದುಡ್ಡು ಈ ಎಲ್ಲ ಪ್ರಕಾರದ ಲೋಭಗಳನ್ನು ಬಿಡುವುದು ಶೌಚ ಧರ್ಮವೆಂದು ಕರೆಯಲ್ಪಡುತ್ತದೆ. ಅತಿಯಾಗಿ ಗಳಿಸುವುದು, ಇದರಿಂದ ನಾವು ಧರ್ಮ ಮಾಡೋಣವೆಂದು ಯೋಚಿಸುವುದು, ಇದು ಈ ಅಪೇಕ್ಷೆಯಿಂದ ಸರಿ ಇದೆ, ಆದರೆ ಅತಿ ಹೆಚ್ಚು ಗಳಿಸುವವರು ಹಾಗೂ ವಿಸರ್ಜನೆಯನ್ನು ಮಾಡುವುದಿಲ್ಲ, ಸಾಕಷ್ಟು ಗಳಿಸುತ್ತಾರೆ ಆದರೆ ಏನನ್ನೂ ವೆಚ್ಚ ಮಾಡುವುದಿಲ್ಲ. ಈ ಅಪೇಕ್ಷೆಯಿಂದ ಸರಿ ಇಲ್ಲ, ಯಾವ ಅಪೇಕ್ಷೆಯಿಂದ ಸರಿ ಇಲ್ಲ? ಆಚಾರ್ಯ ಪೂಜ್ಯಪಾದ ಸ್ವಾಮಿಗಳು ಇಷ್ಟೋಪದೇಶ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ–

**ತ್ಯಾಗಾಯೇ ಶ್ರೇಯಸೇ ವಿತ್ತಮ, ವಿತ್ತ: ಸಂಚಿನೋತಿ ಯಃ ।**
**ಸ್ವ ಶರೀರಂ ಸ ಪಂಕೇನ, ಸ್ನಾಸ್ಯಾಮೀತ ವಿಲಂಪತಿ॥16॥**

ಪುಣ್ಯ ಪ್ರಾಪ್ತಿಯಾಗುತ್ತದೆ ಆದ್ದರಿಂದ ದಾನ ಮಾಡಲು ಧನ ಗಳಿಸುವ ಅಥವಾ ಸಂಗ್ರಹಿಸುವ ನಿರ್ಧನರು "ಸ್ನಾನ ಮಾಡುತ್ತೇನೆ" ಎಂಬ ವಿಚಾರದಿಂದ ತಮ್ಮ ಶರೀರಕ್ಕೆ ಕೆಸರನ್ನು ಮೆತ್ತಿಕೊಳ್ಳುತ್ತಾರೆ.

ತ್ಯಾಗಕ್ಕಾಗಿ ನಿರ್ಧನರು ಧನದ ಗಳಿಕೆ ಮಾಡುತ್ತಾರೆ, ಅವರು ನಾನು ಧರ್ಮ ಮಾಡುತ್ತೇನೆ, ತೀರ್ಥಯಾತ್ರೆ ಮಾಡುತ್ತೇನೆ, ಚೌಕಾ ಇಡುತ್ತೇನೆ, ದೇವ ಪೂಜೆ ಮಾಡಿಕೊಳ್ಳುತ್ತೇನೆ ಇತ್ಯಾದಿ ಅನೇಕ ರೀತಿಯಲ್ಲಿ ಯೋಚಿಸುತ್ತಾರೆ. ಪಾತ್ರ ದಾನ ಇತ್ಯಾದಿ ಪುಣ್ಯದಿಂದ ಪಾಪವನ್ನು ನಷ್ಟ ಮಾಡಿ ಬಿಡುತ್ತೇನೆ. ಆದ್ದರಿಂದ ನಾನು ಹಣವನ್ನು ಗಳಿಸುತ್ತಿದ್ದೇನೆ, ಎಂದು ಯೋಚನೆ ಮಾಡುತ್ತಾರೆ. ಹೀಗೆ ಒಂದು ವೇಳೆ ಯೋಚಿಸಿದರೆ ಅವರ ಆ ಯೋಚನೆ ತಪ್ಪಾಗಿದೆ. ಇದರಲ್ಲಿ ಏನು ತಪ್ಪಿದೆ? ಎಂದು ನೀವು ಯೋಚಿಸುತ್ತಿರಾ. ಇದು ಚೆನ್ನಾಗಿದೆ ಅಲ್ಲವೇ? ಮುಂದೆ ನಾನು ಧರ್ಮ ಮಾಡುತ್ತೇನೆ ಅದಕ್ಕಾಗಿ ಗಳಿಸುತ್ತಿದ್ದೇನೆ. ಹಣ ಗಳಿಸುವಾಗ ಅದೆಷ್ಟು ಆರ್ತ–ರೌದ್ರರಿ ಧ್ಯಾನ ವಾಗುತ್ತದೆಂದು ನೀವು ತಿಳಿದಿಲ್ಲ, ಅದೆಷ್ಟು ಧರ್ಮಧ್ಯಾನ ಬಿಟ್ಟು ಹೋಗುತ್ತದೆ ಹಾಗೂ ಎಷ್ಟು ಕಷಾಯ ಮಾಡಬೇಕಾಗುತ್ತದೆ, ಅದೆಷ್ಟು ಮಾನಸಿಕ ಕ್ಲೇಷ ಉಂಟಾಗುತ್ತದೆ. ಇವೆಲ್ಲವನ್ನು ನಾವು ತಿಳಿದಿಲ್ಲ ಹಾಗೂ ನಾವು ತ್ಯಾಗಮಾಡಿದಾಗ ಒಳ್ಳೆಯದಾಗುವುದೆಂದು ವಿಚಾರ ಮಾಡುತ್ತೇವೆ, ಯಾವುದಾದರೂ ದೊಡ್ಡ ಹರಾಜು ತೆಗೆದುಕೊಳ್ಳೋಣ, ಹೆಸರಿನ ಪಟ್ಟಿ ಹಾಕೋಣ, ಚೌಕಾ ಇಡೋಣ, ತೀರ್ಥ ಯಾತ್ರೆ ಮಾಡೋಣ, ಮುನಿ, ಆಚಾರ್ಯರ ಸಂಘದ ದರ್ಶನಕ್ಕೆ ಹೋಗೋಣ, ಸಂಗ ಸಮಾಗಮ ಮಾಡೋಣ ಇತ್ಯಾದಿ ಇವೆಲ್ಲವುಗಳನ್ನು ಯೋಚಿಸುತ್ತೇವೆ. ಆದರೆ ಆಚಾರ್ಯರು ನಿಮಗೆ ಇವೆಲ್ಲವುಗಳನ್ನು ಮಾಡುವ ಅವಶ್ಯಕತೆ ಯಾಕಿದೇ? ಎಂದು ಕೇಳುತ್ತಾರೆ. ಹಣವನ್ನು ಇವೆಲ್ಲವುಗಳಿಗೆ ಗಳಿಸುವುದು ಜರೂರಿ ಅವಶ್ಯವೆಂದು ನೀವು ಭಾವಿಸಿದರೆ ಅದಕ್ಕೆ ಅವರು ಯಾವ ಅವಶ್ಯಕತೆ ಇಲ್ಲವೆಂದು ಹೇಳುತ್ತಾರೆ. ನೀವು ಏನಾದರೂ ಮಾಡಿ ನಿಮ್ಮ ಬಳಿ ಏನಿದೆಯೋ ಅದರಿಂದಲೇ ನಿಮ್ಮ ಕಾರ್ಯ ಮಾಡಿರಿ, ಎಷ್ಟು ದಾನ ಸಾಧ್ಯವೋ ಅಷ್ಟೇ ಮಾಡಿರಿ; ಪೂಜೆ ಮಾಡುವ ಶಕ್ತಿ ಇದ್ದರೆ ಪೂಜೆ ಮಾಡಿರಿ. ಎಷ್ಟು ಶಕ್ತಿ ಇದೆಯೋ ಸಾಕು ನಿಮ್ಮ ಜೀವನ ನಡೆಸಿಕೊಳ್ಳಿ

ಹಾಗೂ ಧರ್ಮಧ್ಯಾನ ಮಾಡಿರಿ, ಪಂಚ ಪಾಪಗಳನ್ನು ತ್ಯಾಗ ಮಾಡಿರಿ, ಹಿಂಸೆ, ಅಸತ್ಯ ಕಳ್ಳತನ, ಕುಶೀಲ, ಪರಿಗ್ರಹ ಇವುಗಳನ್ನು ಬಿಟ್ಟರೆ ಎಲ್ಲಕ್ಕಿಂತ ದೊಡ್ಡ ಧರ್ಮವಾಯಿತು. ಪಂಚ ಪಾಪಗಳನ್ನು ಬಿಡಲು ದುಡ್ಡಿನ ಅವಶ್ಯಕತೆ ಇಲ್ಲ. ಮಹಾ ವ್ರತೀಗಳಾಗಿರಿ, ಅಣು ವ್ರತಿಗಳಾಗಿರಿ, ತಿರ್ಯಂಚಗಳು ಸಹ ಅಣುವ್ರತಿಗಳಾಗಿ ಬಿಡುತ್ತವೆ. ಅವೆಲ್ಲಿ ಚೌಕಾ ಇಡುತಿತ್ತವೆ? ತೀರ್ಥಯಾತ್ರೆ ಮಾಡುತ್ತವೆ? ಆದರೂ ಕೆಲವು ಅಣುವ್ರತಿಗಳಾಗುತ್ತವೆ. ಪಂಚಮ ಕಾಲದಲ್ಲಿಯೂ ಆಗಬಹುದು ಆದರೆ ಬಹಳ ಕಡಿಮೆ. ಚತುರ್ಥಕಾಲದಲ್ಲಿ ಬಹಳ ಆಗುತ್ತಿದ್ದವು. ಸ್ವಯಂಭೂ ರಮಣ ದ್ವೀಪದಲ್ಲಿರುವ ಬಹಳಷ್ಟು ತಿರ್ಯಂಚರು ಅಣುವ್ರತಿಯಾಗುತ್ತವೆ. ವಿಚಾರ ಮಾಡಿರಿ. ನಾವು ಏನು ಯೋಚಿಸುತ್ತೇವೆ ಬಹಳ ದೊಡ್ಡ ಧರ್ಮ ಮಾಡುತ್ತೇವೆ ಎಂದು, ಆದ್ದರಿಂದ ಮೊದಲು ಮಾಯಾಚಾರದಿಂದ ಹಣ ಗಳಿಸೋಣ ಹಾಗೂ ಮಂದಿರದಲ್ಲಿ ಹೇಳುತ್ತೇವೆ–

**ಹೇ ಭಗವಂತ ನಾವು, ಬಹಳ ಅವಗುಣ ಮಾಡಿದೆವು।**
**ಕಾಗದದ ಮೇಲೆ ಲೇಖನಿ ಇಟ್ಟಾಗ ಹತ್ತನ್ನು ಇಪ್ಪತ್ತು ಮಾಡಿದೆವು॥**

ಇಂತಹ ಕಾರ್ಯ ಯಾವ ಕೆಲಸಕ್ಕಾಗುತ್ತದೆ ನೀವು ಮಾಯಾಚಾರ, ಲೋಭದಿಂದ ಇತರರಿಗೆ, ಮೋಸ ಮಾಡಿದಿರಿ ಇಲ್ಲ ಪಾಪವನ್ನು ಮಾಡಿದಿರಿ, ಹಿಂಸೆಯೂ ಆಯಿತು ಅಸತ್ಯವೂ ಆಯಿತು, ಕಳ್ಳತನವು ಆಯಿತು, ಅಬ್ರಹ್ಮವೂ ಆಯಿತು ಯಾಕೆಂದರೆ ಐದೂ ಇಂದ್ರಿಯಗಳು ಹಾಗೂ ಎಲ್ಲ ಕಷಾಯಗಳಿಂದ ಅಬ್ರಹ್ಮವಾಗುತ್ತವೆ. ಸ್ಪರ್ಶ ರಸನಾದಿಂದ ಮಾತ್ರ ಅಬ್ರಹ್ಮವಾಗುತ್ತದೆ ಎಂದೇನೂ ಇಲ್ಲ. 18 ಸಾವಿರ ಶೀಲಗಳ ಭೇದದಿಂದ ತಿಳಿಯಬಹುದಾಗಿದೆ. ಅಬ್ರಹ್ಮವು ಎಲ್ಲ ರೀತಿಯಿಂದಲೂ ಸೇರಿಕೊಂಡಿದೆ. ನೀವು ಸ್ವಲ್ಪ ಬ್ರಹ್ಮದಿಂದ ಹೊರಗಿದ್ದರೂ ಅಬ್ರಹ್ಮವೇ ಆಗಿದೆ. ಆತ್ಮನಿಂದ ಹೊರ ಹೋದರೆ ಅಬ್ರಹ್ಮವೇ ಬಹಳ ಸೂಕ್ಷ್ಮ ಪರಿಭಾಷೆ ಇದೆ. ಪಾಪ ಮಾಡಿದವರಿಗೆ ಧರ್ಮದ ಅವಶ್ಯಕತೆ, ಪುಣ್ಯ ಮಾಡುವ ಅವಶ್ಯಕತೆ ಇದೆ ಹಾಗೂ ಪಾಪಗಳಿಂದ ಮುಕ್ತರಾದವರಿಗೆ ಪುಣ್ಯ ಮಾಡುವ ಅವಶ್ಯಕತೆ ಇಲ್ಲ. ಪಾಪ ಮಾಡುವವರಿಗೆ ಪುಣ್ಯ ಮಾಡುವ ಅವಶ್ಯಕತೆ ಇದೆ, ಪಾಪಗಳಿಂದ ಮುಕ್ತರಾದವರಿಗೆ ಪುಣ್ಯ ಏನು ಮಾಡುವುದು? ಪುಣ್ಯ ತನ್ನಷ್ಟಕ್ಕೆ ತಾನೇ ಆಗುತ್ತದೆ ಎನ್ನುವುದು ಬೇರೆ ಮಾತು, ನಿರ್ಜರೆಯು ಆಗುತ್ತದೆ, ಪುಣ್ಯವೂ ಆಗುತ್ತದೆ. ಹೀಗೆ ಚಿಂತನೆಯನ್ನು ಬಹಳ ಕಡಿಮೆ ಜನ ಮಾಡುತ್ತಾರೆ. ಯಾರು ಪಾಪಗಳಿಂದ ಪಾರಾಗಲು ಯೋಚಿಸುತ್ತಾರೋ ಅವರು ಎಲ್ಲಕ್ಕಿಂತ ದೊಡ್ಡ ಜ್ಞಾನಿಗಳೆಂದು ಗಮನದಲ್ಲಿಡಿರಿ. ನೇರವಾಗಿ ದೀಕ್ಷೆ ಪಡೆಯುತ್ತಾರೆ. ಮುನಿಯಾಗಿ ಬಿಡುತ್ತಾರೆ. ದಾನವನ್ನು ಮಾಡುವುದಿಲ್ಲ, ಯಾತ್ರೆಯನ್ನೂ ಮಾಡುವುದಿಲ್ಲ. ಸಾಕು ಐದು ಪಾಪಗಳಿಂದ ಮುಕ್ತರಾಗಿ ಬಿಟ್ಟರು. ಇದು ಎಲ್ಲಕ್ಕಿಂತ ಶ್ರೇಷ್ಠವಾಗಿದೆ.

ಸಹೋದರರೇ ಕೆಲವರು ಈ ಪ್ರವಚನದಲ್ಲಿ ಕುಳಿತುಕೊಂಡು ಬಿಟ್ಟರೆ ಅಲ್ಲಿ ಅಂಗಡಿಯಲ್ಲಿ ಗಿರಾಕಿಗಳು ಬಂದು ಹೋಗುತ್ತಾರೆ ಎಂದು ಯೋಚಿಸುತ್ತಾರೆ. ಪ್ರವಚನದಿಂದ ಆಗುವುದೇನು? ಅಂಗಡಿಯಿಂದ ಚೆನ್ನಾಗಿ ಆದಾಯ ಮಾಡಬಹುದು ಮತ್ತೆ ಒಳ್ಳೆಯ ಒಂದೆರಡು ಹರಾಜು ಪಡೆಯಬಹುದು, ಮಹಾರಾಜರ ಬಳಿ ಹೋಗಬಹುದು ಚೌಕಾ ಇಡಬಹುದು, ಹೀಗೆ ವಿಚಾರ ಮಾಡುವುದಾದರೆ ಇವೆಲ್ಲವುಗಳ ಅವಶ್ಯಕತೆ ಇಲ್ಲ. ನೀವು ಹಿಂಸೆ, ಸುಳ್ಳು, ಕಳ್ಳತನ, ಪರಿಗ್ರಹ, ಕುಶೀಲಗಳನ್ನು ಬಿಟ್ಟರೆ ಇದು ಎಲ್ಲಕ್ಕಿಂತ ದೊಡ್ಡ ಪುಣ್ಯ ಹಾಗೂ ಧರ್ಮವಾಗಿದೆ ದೊಡ್ಡ ದೊಡ್ಡ ದಾನಗಳನ್ನು ನೀಡುವುದಕ್ಕಿಂತ ಹತ್ತು ದಿನಗಳ ಕಾಲ ಅಂಗಡಿ ತೆಗೆಯದಿರುವುದು ಒಳ್ಳೆಯದು.

ಎಲ್ಲಿಗೂ ಹೋಗಬಾರದು, ಹತ್ತು ದಿನಗಳ ಕಾಲ ಇಲ್ಲಿ ದೊರೆಯುತ್ತಿರುವ ಜ್ಞಾನ, ಆಗುತ್ತಿರುವ ಧ್ಯಾನ ಹಾಗೂ ಸಾಧನೆ ಅವುಗಳಿಗಿಂತ ದೊಡ್ಡದಾದ ಯಾವ ವಿಷಯವು ಇಲ್ಲ. ನಾವು ನಮ್ಮ ಎದುರಿನ ವಸ್ತುವನ್ನು ಬಿಟ್ಟು ಮತ್ತೇನೋ ವಸ್ತುವನ್ನು ಪಡೆಯುವ ವಿಚಾರ ಮಾಡಿದರೆ ಈ ಗಾದೆ ಮಾತನ್ನು ಅವಶ್ಯವಾಗಿ ಗಮನದಲ್ಲಿಡಬೇಕಾಗುತ್ತದೆ–

**"ಅತಿಯಾಸೆ ಗತಿಗೆಡಿಸಿತು"**–ಕೈಯಲ್ಲಿರುವುದು ಸಹ ಹೋದಿತು. ಸಹೋದರಾ ಎದುರಿಗೆ ಏನು ಸಿಕ್ಕಿದೆ ಅದನ್ನು ಸ್ವೀಕರಿಸು. ಇಲ್ಲ ಎಲ್ಲ ಸಹೋದರರು, ಮನೆಯ ಎಷ್ಟು ಸದಸ್ಯರಿದ್ದಾರೆ ಅವರೆಲ್ಲರೂ ಅಂಗಡಿಗೆ ಹೋಗುವುದು, ಗಳಿಸಿರಿ ಮತ್ತೆ ಸ್ವಲ್ಪ ಧರ್ಮ, ಕರ್ಮ, ದಾನ, ಪೂಜೆ ಇತ್ಯಾದಿ ಮಾಡೋಣ, ಇದು ತೋರಿಕೆಯಾಗಿದೆ. ಆತ್ಮಿಕ ಲಾಭ ಎಷ್ಟು ದೊರಕುವುದೋ ಅಷ್ಟು ಪಡೆಯಿರಿ, ಇಲ್ಲವಾದಲ್ಲಿ ಅದೇ ಕೆಸರನ್ನು ಲೇಪಿಸಿಕೊಂಡು ಮತ್ತೆ ಸ್ನಾನ ಮಾಡುವಿರಾ, ಈ ಕೆಸರನ್ನು ಹಚ್ಚಿಕೊಳ್ಳಬೇಡಿ, ಹಣ ಗಳಿಸುವುದೆಲ್ಲಾ ಕೆಸರಿನ ಲೇಪನವಾಗಿದೆ. ಅಲ್ಲಿ ಅಂಗಡಿಯಲ್ಲಿ ಎಲ್ಲ ಸುಳ್ಳು ಹೇಳುತ್ತೀರಿ ಅಲ್ಲವೆ? ಎಷ್ಟು ಲಾಭ ಬೇಕು, ಏನೇನು ಮಾಡಬೇಕಾಗುತ್ತದೆ? ಎಲ್ಲವೂ ಮಿಶ್ರಣ–ಮಿಲಾವಟ–ಕಲಬೆರಕೆ–ತೆರಿಗೆಯನ್ನು ಕದಿಯುತ್ತೀರಿ. ಹತ್ತು ದಿನಗಳು ದೊರೆತಿವೆ ಒಳ್ಳೆಯ ಧರ್ಮಗಳಿಸಬೇಕು ನೋಡಿ ಒಂದು ಅಂಗಡಿ ತೆರೆದಿದೆ ಆತ್ಮನ ಲಾಭಕ್ಕಾಗಿ ಅದು ಜನ್ಮ–ಜನ್ಮಾಂತರಗಳ ವರೆಗೆ ಲಾಭ ಮಾಡಿಸುತ್ತದೆ. ಇಲ್ಲಿ ಧರ್ಮ ಮತ್ತು ಪುಣ್ಯದ ಅಂಗಡಿ ತೆರೆದಿದೆ, ಕರ್ಮನಿರ್ಜರೆಯ ಅಂಗಡಿ ತೆರೆದಿದೆ ಆದರೆ ನೀವು ಬೇರೊಂದು ಅಂಗಡಿ ತೆಗೆದು ಕುಳಿತಿದ್ದೀರಿ ಅದು ಕರ್ಮಬಂಧದ ಅಂಗಡಿಯಾಗಿದೆ. ಮಹಾರಾಜರೇ ಹೀಗೆ ಮಾಡಿದರೆ ಜೀವನ ಹೇಗೆ ಸಾಗಿತು ಎಂದು ನೀವು ಹೇಳುತ್ತೀರಿ. ಆಚಾರ್ಯರು ಧರ್ಮವನ್ನು ಮಾಡಿಯಾದರೂ ಮಾಡು ನೋಡೋಣ ಎಂದು ನೀವು ಹೇಳುತ್ತೀರಿ ಜೀವನ ಹೇಗೆ ಸಾಗುತ್ತದೆ? ನೀವು ತಿಳಿದುಕೊಳ್ಳುತ್ತಿರಿ. ಧರ್ಮಕಾರ್ಯ ಎಂದಿಗೂ ದುಃಖವನ್ನು ಕೊಡಲಾರದು, ವೈಭವ ಎಲ್ಲಿಂದ ಬರುತ್ತದೆ ಎನ್ನುವುದು ಗೊತ್ತಾಗುವುದಿಲ್ಲ ಇದಕ್ಕೆ ವಿಶ್ವಾಸ ಬೇಕಾಗುತ್ತದೆ. ಹಣ ಸುರಿಯುತ್ತದೆ, ಹುಟ್ಟಿನಿಂದಲೇ ಕುಟುಂಬದಲ್ಲಿ ಮನೆ, ಪರಿವಾರದಲ್ಲಿ ತನ್ನ ಮುತ್ತು, ಪಚ್ಚೆ, ಹೀರಾ, ಮಾಣಿಕ್ಯ ಖಜಾನೆ ಮತ್ತೆ ಏನೇನೋ ಗೊತ್ತಿಲ್ಲ ಕುಳಿತುಕೊಂಡೇ ಊಟ ಮಾಡುತ್ತಿರಾ. ಆದರೆ ಸ್ವಾರ್ಥಬುದ್ಧಿಯಿಂದ ಧರ್ಮ ಮಾಡುವುದು ರೋಗಿ, ಬಡವರು ಹಾಗೂ ತಪ, ಧ್ಯಾನ ಮಾಡುವ ಸಾಧುಗಳಿಗೆ ತೊಂದರೆ ಕೊಡುವುದು ತನ್ನ ಆತ್ಮ ಶುಚಿತ್ವ ಹಾಗೂ ಪವಿತ್ರತೆಗೆ ನಷ್ಟ ಮಾಡುವುದಾಗಿದೆ. ಆಚಾರ್ಯರು, ಭಗವಂತರು ಲೋಭದ ಪರಿಭಾಷೆಯನ್ನು ನೀಡುತ್ತಾ ಹೀಗೆ ಹೇಳಿದ್ದಾರೆ–

**ಯುಕ್ತ ಸ್ಥಲೇ ಧನ ವ್ಯಯಾಭಾವೋ ಲೋಭಃ ।(ನಿಯಮಸಾರ 112)**

ಅರ್ಥಾತ, ಯುಕ್ತಕಾಲದಲ್ಲಿ ಧನದ ವ್ಯಯದ ಅಭಾವ ಲೋಭವೆಂದು ಕರೆಯಲ್ಪಡುತ್ತಿದೆ ಧನ ವೆಚ್ಚ ಮಾಡುವ ಅವಶ್ಯಕತೆ ಇದ್ದಾಗ, ಆ ಸಮಯದಲ್ಲಿ ಧನ ವ್ಯಯ ಮಾಡದಿರುವುದು ಲೋಭವೆಂದು ಕರೆಯಲ್ಪಡುತ್ತದೆ. ಶರೀರಕ್ಕೆ ಶ್ರಮ ಮಾಡುವ ಅವಶ್ಯಕತೆ ಇರುವಾಗ ಆ ಸಮಯ ಶ್ರಮ ಆಗದಿರುವುದು, ಧರ್ಮ ಮಾಡದಿರುವುದು, ಸೇವೆ ಮಾಡದಿರುವುದು ಇತ್ಯಾದಿ ಲೋಭವೆಂದು ಕರೆಯಲ್ಪಡುತ್ತದೆ. ಲೋಭದಿಂದ ಬುದ್ಧಿ ಚಂಚಲವಾಗುತ್ತದೆ. ಲೋಭವು ತೃಷ್ಣೆಗೆ ಜನ್ಮ ನೀಡುತ್ತದೆ. ತೃಷ್ಣೆಯಿಂದ ದು:ಖಿತನಾದ ಮಾನವನು ಎರಡೂ ಲೋಕಗಳಲ್ಲಿ ದುಃಖವನ್ನು ಪಡೆಯುತ್ತಾನೆ. ಯಾಕೆಂದರೆ–

**ಲೋಭಾತ್ ಕ್ರೋಧ: ಪ್ರಭವತಿ, ಲೋಭಾತ್ ಕಾಮ: ಪ್ರಜಾಯತೇ।**
**ಲೋಭಾನ್ ಮೋಹಶ್ಚ ನಾಶಶ್ಚ, ಲೋಭ: ಪಾಪಸ್ಯ ಕಾರಣಮ್॥**

ಲೋಭದಿಂದ ಕ್ರೋಧ ಉತ್ಪನ್ನವಾಗುತ್ತದೆ. ಲೋಭದಿಂದ ಕಾಮ ಉತ್ಪನ್ನವಾಗುತ್ತದೆ. ಲೋಭದಿಂದ ಮೋಹ ಹೆಚ್ಚಾಗುತ್ತದೆ ಹಾಗೂ ಜೀವನದ ನಾಶವಾಗುತ್ತದೆ. ಲೋಭವೇ ಎಲ್ಲ ಪಾಪಗಳಿಗೆ ಕಾಣವಿದೆ. 'ಲೋಭವು ಪಾಪದ ಮೂಲವಾಗಿದೆ. ' ಈ ಲೋಕೋಕ್ತಿ ಅತ್ಯಂತ ಪ್ರಸಿದ್ಧವಾಗಿದೆ ಹಾಗೂ ಯಾವಾಗಲೂ ಸತ್ಯವಾಗಿದೆ. ಯಾಕೆಂದರೆ ಎಲ್ಲ ಅನುಚಿತ ಕಾರ್ಯಗಳು ಲೋಭದ ಕಾರಣದಿಂದಲೇ ಆಗಿವೆ. ಕವಿವರ ದೌಲತರಾಯರು ಹೇಳಿಯೂ ಇದ್ದಾರೆ-'ಲೋಭವು ಪಾಪದ ತಂದೆ'. ಲೋಭವು ಏನೇನು ದುರ್ಗತಿಯನ್ನು ಮಾಡಿಸಿಲ್ಲಾ? ಲೋಭಿ ಮನುಷ್ಯ-ಒಡೆಯ, ಗುರು, ಸ್ವಜನ, ವೃದ್ಧ, ಸ್ತ್ರೀ, ಬಾಲಕ, ದುರ್ಬಲ, ಬಡವ ವ್ಯಕ್ತಿಯನ್ನು ಸಹ ಹೊಡೆದು ನಿಷ್ಠುರನಾಗುತ್ತಾ ಹಣವನ್ನು ಪಡೆಯುತ್ತಾನೆಂದು ಆಚಾರ್ಯರು ಹೇಳಿದ್ದಾರೆ. ಇಷ್ಟೇ ಅಲ್ಲ ಈ ಲೋಭವು ಆತನು ಮಹಾಪೂರದಲ್ಲಿ ತೇಲಿ ಬರುವ ಶವಗಳ ಮೇಲೆ ಇರುವ ಆಭರಣಗಳನ್ನು ತೆಗೆದುಕೊಳ್ಳುವಷ್ಟು ನೀಚತನಕ್ಕೂ ತಲುಪುತ್ತಾನೆ. ಲೋಭಿ ಮನುಷ್ಯನು ತಾಯಿ-ತಂದೆ, ಪುತ್ರ, ಸಹೋದರ, ಪ್ರಿಯಮಿತ್ರ ಒಡೆಯ ಹಾಗೂ ಹತ್ತಿರದ ಸಂಬಂಧಿಗಳನ್ನು ಸಹ ಸಾಯಿಸಿ ಬಿಡುತ್ತಾನೆ. ಸ್ವಲ್ಪ ಹಣವನ್ನು ಪಡೆಯುವ ಇಚ್ಛೆಯಿಂದ ಒಡಹುಟ್ಟಿದ ಸಹೋದರನು ಕಾದಾಡುತ್ತಾನೆ. ಮಾಂಸದ ತುಂಡಿಗಾಗಿ ನಾಯಿಗಳು, ಬಹು ಬೇಗನೆ ಜಗಳದಲ್ಲಿ ತೊಡಗುತ್ತವೆ. ದೊಡ್ಡ-ದೊಡ್ಡ ಶಾಸ್ತ್ರ ಪಟುಗಳು ಸಹ ಸಂಶಯಗಳನ್ನು ದೂರಮಾಡುವವರು ಸಹ ಈ ಲೋಭದಿಂದ ಮೋಹಿರತಾಗುವ ಕಾರಣ ದು:ಖಿಗಳಾಗುತ್ತಾರೆ.

ಸಂಸಾರಿ ಪ್ರಾಣಿಗಳು ಎಷ್ಟರ ಮಟ್ಟಿಗೆ ಲೋಭಿಗಳಾಗಿರುತ್ತಾರೆಂದರೆ-ಲೋಭದ ಕಾರಣದಿಂದ ಅವರು ರಾತ್ರಿಯಲ್ಲಿ ಸುಖವಾಗಿ ಮಲಗಲಾರರು, ಸಮಯಕ್ಕೆ ಸರಿಯಾಗಿ ಭೋಜನ ಮಾಡಲಾರರು, ಸಮಯಕ್ಕನುಸಾರ ದಾನ ನೀಡಲಾರರು, ಸಮಯಕ್ಕೆ ಸರಿಯಾಗಿ ಧರ್ಮವನ್ನು ಮಾಡಲಾರರು. ಇಂತಹ ವ್ಯಕ್ತಿಗಳು ಆಗಾಗ ಒಡೆದ ಮುರುಕು ಕಾಲಿನ ಮಂಚದಲ್ಲಿಯೇ ನಿತ್ಯವು ಮಲಗಿರುತ್ತಾರೆ. ಹಸಿವೆಯಿಂದ ಪೀಡಿತರಾಗಿದ್ದರೂ ಒಣಗಿದ ಆರಿದ ಭೋಜನ ಮಾಡುತ್ತಾರೆ ಸೊಂಟದಲ್ಲೊಂದು ಹಳೆಯ ಹರಿದ ವಸ್ತ್ರವೊಂದನ್ನು ಸುತ್ತಿಕೊಂಡಿರುತ್ತಾರೆ. ಈ ಪ್ರಕಾರ ಲೋಭ ಕಷಾಯಕ್ಕೋರಿಳಗಾಗಿ ಪ್ರಾಣಿ ಪ್ರತಿದಿನ ಹೆಚ್ಚು ಹಣ ಸಂಗ್ರಹದಲ್ಲಿ ತೊಡಗಿರುತ್ತದೆ. ಆದರೆ ಜಲದಿಂದ ಎಂದಾದರೂ ಸಮುದ್ರವನ್ನು ಒಂದು ಸಾರಿ ತುಂಬಬಹುದು ಆದರೆ ಮೂರು ಲೋಕಗಳ ರಾಜ್ಯದಿಂದಲೂ ಸಹ ಲೋಭ ರೂಪದ ಸಮುದ್ರವನ್ನು ತುಂಬಲಾಗದು. ಯಾಕೆಂದರೆ ಲೋಭಕ್ಕೆ ಕೊನೆಯೇ ಇಲ.್ಲ ಲೋಭದಿಂದ ಕೂಡಿದ ಮನುಷ್ಯನ ಆತ್ಮದ ಅಧ:ಪತನವಾಗಿ ಬಿಡುತ್ತದೆ. ಅದರಲ್ಲಿ ಸ್ವಾರ್ಥಪರತೆ, ಹೃದಯಹೀನತೆ, ಹಾಗೂ ನಿಷ್ಠುರತೆಗಳಂತಹ ದುರ್ವತ್ತಿಗಳು ಉತ್ಪನ್ನವಾಗಿ ಬಿಡುತ್ತವೆ. ಅವರ ಹೃದಯದಲ್ಲಿ ಇಣುಕಿದ ಅಸಂತೋಷದ ಅಗ್ನಿಯಲ್ಲಿ ಅವರ ನಿರಾಕುಲತೆ ಮತ್ತು ಶಾಂತಿಯ ಸ್ವಾಹಾ ಆಗಿ ಬಿಡುತ್ತದೆ.

**ಲೋಭ ಪ್ರತಿಷ್ಠಾ ಪಾಪಸ್ಯ, ಪ್ರಸೂತಿರ್ಲೋಭ ಏವ ವಾ।**
**ದ್ವೇಷ ಕ್ರೋಧಾದಿ ಜನಕೋ, ಲೋಭ: ಪಾಪಸ್ಯ ಕಾರಣಮ್॥**

ಲೋಭವು ಸಮಸ್ತ ಪಾಪಗಳ ಮೂಲ ಮತ್ತು ದ್ವೇಷ ಕ್ರೋಧಾದಿಗಳ ಜನಕನಾಗಿದೆ. ನಾಲ್ಕು

ಕಷಾಯಗಳ ಉತ್ಪೇರಕ ಲೋಭವಿದೆ. ಲೋಭದ ಕಾರಣದಿಂದಲೇ ವ್ಯಕ್ತಿ ಮಾಯಾಚಾರಿಯಾಗುತ್ತಾನೆ ಆತನ ಮನಸ್ಸಿನಲ್ಲಿ ಯಾವುದೋ ವಸ್ತುವಿನ ಬಗ್ಗೆ ಆಕರ್ಷಣೆ ಉತ್ಪನ್ನವಾದಾಗ, ಆತನ ಮನಸ್ಸು ಮುಗ್ಧವಾಗಿ ಬಿಡುತ್ತದೆ ಆತ ಅದನ್ನು ಪಡೆಯಲು ಅನೇಕ ಪ್ರಕಾರದ ಸಾಧನೆಗಳನ್ನು ಸೇರಿಸಿಕೊಳ್ಳುತ್ತಾನೆ. ಸ್ವಾರ್ಥ, ಲಿಪ್ಸೆ ಮತ್ತು ಪ್ರಲೋಭನಗಳ ಕಾರಣದಿಂದಾಗಿಯೇ ಮಾಯಾಚಾರದ ಸೃಷ್ಟಿಯಾಗುತ್ತದೆ. ಮಾಯಾಚಾರದಲ್ಲಿ ಸಫಲನಾದ ನಂತರ ಆತನ ಮನಸ್ಸಿನಲ್ಲಿ ಅಭಿಮಾನ ಉಕ್ಕಿ ಹರಿಯುತ್ತದೆ ಹಾಗೂ ಆತನ ಅಹಂಕಾರಕ್ಕೆ ಗಾಯವಾದರೆ ಕೋಧವು ಭುಗಿಲೇಳುತ್ತದೆ. ಆದ್ದರಿಂದಲೇ ಸಮಸ್ತ ಕಷಾಯಗಳ ಜನಕ ಲೋಭವೆಂದು ಹೇಳುತ್ತಾರೆ. ಆಚಾರ್ಯ ಪ್ರವರ ಶಿವಾರ್ಯರು ಭಗವತೀ ಆರಾಧನೆಯಲ್ಲಿ ಹೀಗೆ ಹೇಳಿದ್ದಾರೆ–

**ದ್ರವ್ಯೇಷು ಮಮೇದಂ ಭಾವ ಮೂಲೋ ವ್ಯಸನೋಪನಿಪಾತಃ**
**ಸಕಲ ಇತಿ ತತಃ ಪರಿತ್ಯಾಗೋ ಲಾಘವಂ!(45)**

ಧನ, ಧಾರೆ ಮುಂತಾದ ವಸ್ತುಗಳು ನನ್ನವು ಇಂತಹ ಅಭಿಲಾಷೆಯ ವೃದ್ಧಿಯೇ ಮನುಷ್ಯನನ್ನು ಸರ್ವಸಂಕಟಗಳಲ್ಲಿ ಬಿಳಿಸುತ್ತದೆ. ಈ ಮಮತ್ವವನ್ನು ಹೃದಯದಿಂದ ದೂರ ಮಾಡುವುದೇ ಲಾಘವ ಆರ್ಥಾತ್ ಶೌಚಧರ್ಮವಾಗಿದೆ. ಅತ್ಯಧಿಕ ಲೋಭ ಮಾಡುವುದು ಹಾನಿಕಾರಕವಾಗಿದೆ. ಲೋಭದ ನಿಮಿತ್ತದಿಂದ ಆತ್ಮ ಅಪವಿತ್ರವಾಗುತ್ತದೆ. ಅತ್ಯಧಿಕ ಲೋಭ ಮಾಡುವುದೇ ಪಾಪವಾಗಿದೆ. ಅದನ್ನೇ ಪಾಪದ ತಂದೆ ಎಂದು ಭಾವಿಸಲಾಗಿದೆ. ಧರ್ಮಶತಕ ಭಾವನೆಯಲ್ಲಿ ಹೀಗೆ ಬರೆಯಲಾಗಿದೆ–

**ಲೋಭ ಸದಾ ಹುಟ್ಟಿಸುತೆ ದುಃಖವ, ಎಲ್ಲ ಪಾಪಗಳ ತಂದೆ ಎಂದು ತಿಳಿ।**
**ಹೇಳುವರು ನೊಣ ಹೀರುವವನೆಂದು, ಲೋಭ ವಶನಾದ ಮಾನವನ॥37॥**

ಲಾಭದಲ್ಲಿ ವೃದ್ಧಿಯಾದಂತೆ ಲೋಭದಲ್ಲಿಯೂ ವೃದ್ಧಿಯಾಗುತ್ತದೆ ಮತ್ತು ಇದೇ ಲೋಭ ಒಂದು ದಿನ ಇಚ್ಛೆಯನ್ನು ಹಾಗೂ ಇಚ್ಛೆಯಿಂದ ತೃಷ್ಣೆಯಾಗಿ ಬದಲಾಗುತ್ತದೆ. ಆ ತೃಷ್ಣೆಯನ್ನು ಎಂದಿಗೂ ತೃಪ್ತಿ ಮಾಡಲು ಸಾಧ್ಯವಿಲ್ಲ. ಆದ್ದರಿಂದ "ಪ್ರಕರ್ಷ ಪ್ರಾಪ್ತ ಲೋಬಾನ್ನಿವೃತ್ತಿಃ ಶೌಚಮ್" ಎಂದು ಹೇಳಲಾಗುತ್ತದೆ. ಉತ್ಕೃಷ್ಟತೆಯನ್ನು ಪಡೆದ ಲೋಭದಿಂದ ನಿವೃತ್ತನಾಗುವುದೇ ಶೌಚ ಧರ್ಮವಾಗಿದೆ. ಲೋಭನ್ನು ನಿಯಂತ್ರಿಸುವುದೇ ಶೌಚಧರ್ಮವಾಗಿದೆ ಅಂದರೆ ಲೋಭವೇ ಸಮಸ್ತ ಅಪವಿತ್ರತೆಯ ಆಧಾರವಿದೆ. ಲೋಭದ ನಿಮಿತ್ತದಿಂದ ಆತ್ಮನು ಅಪವಿತ್ರನಾಗಿ ಬಿಡುತ್ತಾನೆ. ಆಚಾರ್ಯರ ಲೋಭನ್ನು ದೋಷಗಳ ಕುಂಜ ವೆಂದು ಹೇಳಿದ್ದಾರೆ, ದೋಷಗಳ ಸಾಗರ. ಅವಗುಣಗಳ ಖಜಾನೆ ಎಂದಿದ್ದಾರೆ, ಹೇಳಿಯೂ ಇದ್ದಾರೆ ಏನೆಂದರೆ–

**ತ್ರೈಲೋಕ್ಯೇಪಿ ಯೇ ದೋಷ:, ತೇ ಸರ್ವೇ ಲೋಭ ಸಂಭವ:।**
**ಗುಣಾಸ್ತ್ರೈ ವಹೋಕ್ಯೆಪಿ, ತೇ ಸರ್ವೇ ಲೋಗ ವರ್ಧನಾತ್॥**

ಮೂರು ಲೋಕಗಳಲ್ಲಿರುವ ದೋಷಗಳೆಲ್ಲವೂ ಲೋಭ ರೂಪದ ಚುಂಬಕೀಯ ಶಕ್ತಿಯ ಮಾಧ್ಯಮದಿಂದ ಸೆಳೆಯಲ್ಪಟ್ಟು ಸಾಗುತ್ತಾ ಬರುತ್ತವೆ. ಅರ್ಥಾತ್ ಲೋಭದಲ್ಲಿ ಅಂತಹ ಒಂದು ಚುಂಬಕೀಯ ತಾಕತ್ತು/ಶಕ್ತಿ ಇದೆ ಅದರ ಮೂಲಕ ಎಲ್ಲ ದೋಷಗಳು ಸಾಗುತ್ತಾ ಬರುತ್ತವೆ. ಅಲ್ಲದೇ ಸಮಸ್ತ ಸಂಸಾರದ ಕಾರಣ ಮನಸ್ಸು. ಆಚಾರ್ಯ ಪೂಜ್ಯಪಾದ ಸ್ವಾಮಿಗಳು ಬಹಳಷ್ಟು ಮಾರ್ಮಿಕವಾದ ಮಾತನ್ನು ಹೇಳಿದ್ದಾರೆ.

**ಜಲೇನ ಜನಿತಂ ಪಂಕಂ ಜಲೇನ . ಪರಿಶುದ್ಧಯತಿ।**
**ಚಿತ್ತೇನ ಜನಿತಂ ಕರ್ಮ ಚಿತ್ತೇನ ಪರಿಶುದ್ಧಯತಿ॥**

ಎಷ್ಟೆಲ್ಲ ದೋಷಗಳು ಒಂದೆಡೆ ಇರುವವೋ ಅವೆಲ್ಲವೂ ಮನಸ್ಸಿನಿಂದಾಗಿ ಒಂದೆಡೆ ಇರುತ್ತವ. ' ಅವೆಲ್ಲ ದೋಷಗಳು ಮನಸ್ಸಿನಿಂದಲೇ ತುಳಿಯಲ್ಪಡುತ್ತವೆ. ಅದು ಹೇಗೆ ಮಣ್ಣಿನ ಮೇಲೆ ನೀರು ಬಿದ್ದಾಗ ಅಲ್ಲಿ ಕೆಸರಾಗುತ್ತದೆ ಅದೇ ಕೆಸರು ಕೈ ಮೈಗೆ ಹತ್ತಿದರೆ ಅದರ ಸ್ವಚ್ಛತೆಯನ್ನು ನೀರಿನಿಂದಲೇ ಮಾಡಲಾಗುತ್ತದೆ. ನೀರಿನಿಂದಲೇ ಕೆಸರು ಉತ್ಪನ್ನವಾಯಿತು ಹಾಗೂ ನೀರಿನಿದಿಂದಲೇ ಆ ಕೆಸರನ್ನು ತೊಳೆಯಲಾಗುತ್ತದೆ. ಅರ್ಥಾತ್ ಸ್ವಚ್ಛಗೊಳಿಸಲಾಗುತ್ತದೆ. ಅದೇ ರೀತಿಯಲ್ಲಿ ಮನಸ್ಸಿನಿಂದಲೇ ಪಾಪವಾಗುತ್ತದೆ ಹಾಗೂ ಮನದಿಂದಲೇ ಪಾಪವನ್ನು ತೊಳೆಯಲಾಗುತ್ತದೆ. ದೋಷಗಳು, ಒಳ್ಳೆಯ ಸಂಗತಿಗಳು, ಗುಣಗಳು, ಅವಗುಣಗಳು, ಕೋಪ ಮನಸ್ಸೇ ಆಗಿದೆ, ಮನಸ್ಸು ಪವಿತ್ರವಾಗಿರುವವರ ಜೀವನವು, ಪವಿತ್ರವಾಗಿ ಬಿಡುತ್ತದೆ ಹಾಗೂ ಅಪವಿತ್ರವಾಗಿರುವವರ ಜೀವನವು ಅಪವಿತ್ರವಾಗುತ್ತದೆ. ಮನಸ್ಸಿನ ಪವಿತ್ರತೆ ಇಲ್ಲದೇ ಭಾಗ್ಯವು ಸಹ ಎತ್ತರದಲ್ಲಿರಲಾರದು, ಮನಸ್ಸು ಪವಿತ್ರವಾಗಿರದಿದ್ದರೆ ಬಾಹ್ಯದಲ್ಲಿ ಶುಚಿ ಮಾಡಿಕೊಂಡರು ಸಹ ಶುಚಿತ್ವ ಬರುವುದಿಲ್ಲವೆಂದು ಆಚಾರ್ಯರು ಹೇಳುತ್ತಾರೆ. ಬೇವಿನ ಫಲ ಪಕ್ವವಾದರೂ ಸಹ ಅದರ ಬೀಜ ಕಹಿಯಾಗಿಯೇ ಇರುತ್ತದೆ. ಆದ್ದರಿಂದ ಯಾರ ಮನಸ್ಸು ಎತ್ತರ, ಶುದ್ಧ, ಪವಿತ್ರವಿರುವುದೋ ಅವರ ಭಾಗ್ಯವು ಸಹ ಎತ್ತರವಿದೆ, ಮನಸ್ಸು ಶುದ್ಧವಾದರೆ ವಿಶುದ್ಧಿಯಾಗುತ್ತದೆ. ಪವಿತ್ರ ಮನಸ್ಸು ಆತ್ಮವಾದ ಆತ್ಮನನ್ನು ಶುದ್ಧ ಮಾಡಲು ಮಣ್ಣು, ನೀರು, ಅಗ್ನಿ ಸಮರ್ಥವಲ್ಲ, ಜ್ಞಾನಿ ಜನರು ಜ್ಞಾನ-ಧ್ಯಾನ ಹಾಗೂ ತಪ ರೂಪದ ಜಲದ ಮಾಧ್ಯಮದಿಂದ ಕರ್ಮಗಳ ಪರಿಪಾಲನೆ ಮಾಡಲಿ ಧರ್ಮ ಭಾವನಾ ಶತಕದಲ್ಲಿ ಹೀಗೆ ಬರೆಯಲಾಗಿದೆ.

**ಮನದ ಶುಚಿತ್ವದಿ ಮಾನವನ, ತನುವೂ ಪಡೆವುದು ಶುಚಿತ್ವವ॥**
**ಅಷ್ಟೇ ಅಲ್ಲ ತನದ ಶುಚಿತ್ವದಿ, ಮೀನು ಮೊಸಳೆಗಳಲ್ಲಿ॥29॥**
**ಜಗತ್ತಿನಲ್ಲಿ ದೊಡ್ಡ ಶತ್ರು ಹಾಗೂ ಪಾಪಗಳ ಖಜಾನೆಯೇ ಲೋಭ॥**
**ಇವುಗಳ ತ್ಯಜಿಸದೇ ಶ್ವಾಸದ ಭರವಸೆ ಇಲ್ಲ॥30॥**

ಅತಿ ಲೋಭ ವ್ಯಕ್ತಿಯು ಧರ್ಮದ ಆಶ್ರಯದಲ್ಲಿ ಮಾಡುವ ಪಾಪದಿಂದ ಧರ್ಮದ ಅಪಹಾಸ್ಯವಾಗುತ್ತದೆ ಹಾಗೂ ಅನ್ಯ ಜನರು ಧರ್ಮಮಾರ್ಗದಿಂದ ಭಯಭೀತರಾಗುತ್ತಾರೆ. ಆದ್ದರಿಂದ ಸ್ಕಂಧ ಪುರಾಣದಲ್ಲಿ ಹೀಗೆ ಹೇಳಿದ್ದಾರೆ-

**ಅನ್ಯ ಕ್ಷೇತ್ರೇ ಕೃತಂ ಪಾಪಂ ಧರ್ಮ ಕ್ಷೇತ್ರೆ ವಿನಶ್ಯತಿ।**
**ಧರ್ಮ ಕ್ಷೇತೇ ಕೃತಂ ಪಾಪಂ ವಜ್ರ ಲೇಪೋ ಭವಿಷ್ಯತಿ॥ 4॥69॥**

ಅರ್ಥಾತ್ ಸಂಸಾರ ಅಥವಾ ಲೌಕಿಕ ಕ್ಷೇತ್ರದಲ್ಲಿ ಮಾಡಿದ ಪಾಪವು ಧರ್ಮ ಕ್ಷೇತ್ರ ಅರ್ಥಾತ್ ನಿಜವಾದ ದೇವ, ಗುರು, ಶಿಷ್ಟಾದಿಗಳ ಮುಂದೆ ಪಶ್ಚಾತ್ತಾಪ ಮತ್ತು ಪ್ರಾಯಶ್ಚಿತ ಮಾಡಿದಾಗ ಆತ್ಮದಿಂದ ದೂರವಾಗುತ್ತದೆ ಹಾಗೂ ಧರ್ಮ ಕ್ಷೇತ್ರದಲ್ಲಿ(ಧರ್ಮದ ದುಡ್ಡು, ಭೂಮಿ, ಮಂದಿರ ಇತ್ಯಾದಿಗಳಿಗೆ ಸಂಬಂಧಿಸಿದ ವಸ್ತುಗಳ ವಿಷಯದಲ್ಲಿ ಮಾಡಿದ ಪಾಪ ವಜ್ರಲೇಪದಂತೆ ಕಠಿಣ ಅಥವಾ ದೃಢವಾಗಿ ಬಿಡುತ್ತದೆ ಅರ್ಥಾತ್ ಭವ, ಭವಗಳವರೆಗೆ ದುಃಖಗಳಿಗೆ ಕಾರಣವಾಗುತ್ತದೆ. ಗೃದ್ಧತಾ ರೂಪದ ಜಲದಿಂದ ವೃದ್ಧಿ ಪಡೆದ ಈ ಲೋಭ ರೂಪದ ವೃಷಮ ಎರಡೂ ಲೋಕಗಳಲ್ಲಿ

ದುಃಖ ರೂಪದ ಫಲಗಳನ್ನು ನೀಡುತ್ತದೆ. ಆದ್ದರಿಂದ ಅದನ್ನು ಸಂತೋಷ ರೂಪದ ಶಸ್ತ್ರದಿಂದ ಕತ್ತರಿಸಿ ಹಾಕಬೇಕು ಸಂತೋಷವು ಜಡ ಪದಾರ್ಥಗಳ ಆಸಕ್ತಿಯನ್ನು ಕಡಿಮೆ ಮಾಡಿ ಆತ್ಮೀಕ ಸುಖ, ಶಾಂತಿಯನ್ನು ದೊರಕಿಸಿ ಕೊಡುತ್ತದೆ. ಹೀಗೆ ಹೇಳಿಯೂ ಇದ್ದಾರೆ.

**ಗೋಧನ ಗಜಧನ ಬಾಜಧನ ಔರ ರತನ ಧನ ಖಾನ।**
**ಜಬ ಆವೇ ಸಂತೋಷ ಧನ ಸಬ ಧನ ಧೂಲಿ ಸಮಾನ॥**

ಸಂತೋಷಕ್ಕಿಂತ ಬೇರೆ ಇನ್ನೊಂದು ಧನವಿಲ್ಲ ಸಂತೋಷ ವ್ಯಕ್ತಿ ಸದಾಕಾಲ ಸುಖಿಯಾಗಿರುತ್ತಾನೆ. ಆದ್ದರಿಂದ ಮನಸ್ಸಿನ ರೂಪದ ಕಾಡಿನಲ್ಲಿ ಸುಡುತ್ತಿರುವ ಪರಿಗ್ರಹದ ಅಭಿಲಾಷಾ ರೂಪದ ಅಗ್ನಿಯನ್ನು ಸಂತೋಷ ರೂಪದ ಮೇಘ ಜಲದ ಧಾರೆಯಿಂದ ಶಾಂತಗೊಳಿಸ ಬೇಕು. ಅಸಂತುಷ್ಟ ವ್ಯಕ್ತಿಯು ಅತ್ಯಂತ ದು:ಖಿಯಾಗಿರುತ್ತಾನೆ ಆತನಿಗೆ ಮೂರು ಲೋಕಗಳ ಸಂಪತ್ತು ದೊರೆತರೂ ಸಹ ಆತನು ಸುಖಿಯಾಗುವುದಿಲ್ಲ ಪಂಡಿತ ಪ್ರವರ ಆಶಾಧರರು–ಲೋಭದ ತಗ್ಗು ಅತ್ಯಂತ ವಿಶಾಲವಾಗಿದ್ದು ಅದರಲ್ಲಿ ಈ ಪೃಥ್ವಿಯ ಎಲ್ಲ ವಸ್ತುಗಳನ್ನು ಅದರಲ್ಲಿ ಹಾಕಿದರೂ ಆ ತಗ್ಗು ತುಂಬುವುದಿಲ್ಲವೆಂದು ಹೇಳುತ್ತಾರೆ. ಆಚಾರ್ಯ ಶಿವಾರ್ಯರು ಭಗವತಿ ಆರಾಧನೆಯಲ್ಲಿ ಲೋಭವನ್ನು ತ್ಯಾಗ ಮಾಡಲು ಒತ್ತು ನೀಡುತ್ತಾ–

**ಲೋಭೇ ಕಏ ಅತ್ಥೋ ಣ ಹೋಇ ಪುರಿಸಸ್ಸ ಅಪಡಿ ಭೋಗಸ್ಸ।**
**ಅಕಏ ವಿ ಹವದಿ ಲೋಭೇ ಅತ್ಥೋ–ಪಡಿಭೋಗವಂ ತಸ್ಸ॥143॥**

ಲೋಭ ಮಾಡಿದರೂ ಸಹ ಪುಣ್ಯಹೀನ ಪುರುಷನ ಬಳಿ ಧನ ಇರುವುದಿಲ್ಲ ಹಾಗೂ ಲೋಭ ಮಾಡದಿದ್ದರೂ ಪುಣ್ಯಶಾಲಿಯ ಬಳಿ ಧನವಿರುತ್ತದೆ–ಎಂದು ಹೇಳಿದ್ದಾರೆ. ಆದ್ದರಿಂದ ಧನದ ಲೋಭ, ಧನ ಲಾಭದಲ್ಲಿ ನಿಮಿತ್ತವಲ್ಲ ಬದಲಾಗಿ ಪುಣ್ಯ ನಿಮಿತ್ತವಾಗಿದೆ. ಅರ್ಥಾತ್ ಸಂತೋಷಿಯು ಅತ್ಯಂತ ದರಿದ್ರನಾಗಿದ್ದರೂ ಸಹ ನಿರಂತರ ಸುಖವಾಗಿರುತ್ತಾನೆ. ಹೀಗೆ ತಿಳಿದು ಲೋಭವನ್ನು ತ್ಯಜಿಸಬೇಕು ಸ್ವಾಮಿ ಕಾರ್ತಿಕೇಯಾನುಪ್ರೇಕ್ಷೆಯಲ್ಲಿ ಆಚಾರ್ಯ ಕಾರ್ತಿಕೇಯ ಸ್ವಾಮಿಗಳು ಹೀಗೆ ಹೇಳಿದ್ದಾರೆ.

**ಸಮ ಸಂತೋಸ–ಜಲೇಣ ಜೋ ಧೋವದಿ ತಿವ್ವ ಲೋಹ ಮಲ ಪುಂಜಂ।**
**ಭೋಯಣ ಗಿದ್ಧಿ–ವಿಹೀಣೋ ತಸ್ಸ ಸಉಚ್ಚಂ ಹವೇ ವಿಮಲಂ॥397॥**

ಸಮಭಾವ ಮತ್ತು ಸಂತೋಷ ರೂಪದ ಜಲದಿಂದ ತೃಷ್ಣೆ ಮತ್ತು ಲೋಭ ರೂಪದ ಮಲದ ಸಮೂಹವನ್ನು ತೊಳೆಯುವವರು ಹಾಗೂ ಭೋಜನದ ಲೋಭ ಮಾಡದಿರುವವರಿಗೆ ನಿರ್ಮಲವಾದ ಶೌಚಧರ್ಮ ಆಗುತ್ತದೆ. ಶೌಚಧರ್ಮದಿಂದ ಎಲ್ಲ ಕಷಾಯಗಳು ನಷ್ಟವಾಗುತ್ತದೆಂದು ಜೀವವು ಪಾಪರಹಿತವಾಗುತ್ತದೆಂದು ಆಚಾರ್ಯರು ಹೇಳುತ್ತಾರೆ ಲೋಭವನ್ನು ದೂರಮಾಡಬೇಕೆನ್ನುವುದಾದರೆ ಮನಸ್ಸನ್ನು ಶುದ್ಧವಾಗಿಡುವ ಪ್ರಯತ್ನ ಮಾಡಬೇಕು ಹಾಗೂ ಇದು ಧರ್ಮಧ್ಯಾನದಿಂದ ಸಾಧ್ಯವಿದೆ. ಸದ್ ಗುಣಗಳ ದೋಷಗಳನ್ನು ಮನಸ್ಸಿನಲ್ಲಿ ಒಂದೆಡೆ ಮಾಡಬೇಕೆಂದರೆ ಅದು ಆಚಾರಧರ್ಮದಿಂದ ಮಾತ್ರ ಸಾಧ್ಯವಿದೆ. ತೃಷ್ಣೆ ರೂಪದ ಬಾಯಾರಿಕೆಯನ್ನು ನಾಶಮಾಡುವ ಸಂತೋಷ ರೂಪದ ಅಮೃತವನ್ನು ಕುಡಿದಿರುವವರು ನಿರ್ವಾಣಸುಖದ ಕಾರಣವನ್ನು ಪಡೆದಿರುತ್ತಾರೆ. ಹೇಳಿಯೂ ಇದ್ದಾರೆ.

**ಕಂಖಾ ಭಾವ ಣಿವಿತ್ತಿಂ ಕಿಚ್ಚಾ ವೇರಗ್ಗ ಭಾವಣಾ ಜುತ್ತೋ।**
**ಜೋ ವಬ್ಬದಿ ಪರಮಮುಣೀ ತಸ್ಸ ದು ಧಮ್ಮೋ ಹವೇ ಸೋಚ್ಚಂ॥75॥(ಬಾ. ಅ. )**

ಇಚ್ಛೆಗಳನ್ನು ತಡೆದು ಮತ್ತು ವೈರಾಗ್ಯದ ವಿಚಾರಗಳಿಂದ ಕೂಡಿ ಆಚರಣೆ ಮಾಡುವ ಪರಮ ಮುನಿಗೆ ಶೌಚಧರ್ಮವಾಗುತ್ತದೆ. ನಿಯಮಸಾರದಲ್ಲಿಯೂ ಸಹ ಆಚಾರ್ಯ ಕುಂದ–ಕುಂದ ಸ್ವಾಮಿಗಳು ಸ್ಪಷ್ಟ ಶಬ್ದಗಳಲ್ಲಿ–ಅಂತರಂಗದಲ್ಲಿ ಪರಮಾಣು ಪ್ರಮಾಣದಷ್ಟು ಲೋಭ ಕಷಾಯವಿದ್ದರೆ ಶುಚಿತ್ವ ವಾಗಲಾರದು ಅಲ್ಲಿ ವೀತರಾಗ ಪೂರ್ಣ ಸಮ್ಯಗ್ ದೃಷ್ಟಿಯು ಸಹ ಆಗಲಾರದು–ಎಂದು ಹೇಳಿದ್ದಾರೆ. ಲೋಭ ಕಷಾಯ ಉಳಿದಿರುವವರೆಗೆ ವ್ಯಕ್ತಿ ಕೆಳಗಿನ ಕಡೆ ಬಿಳಬಹುದು. ಚತುರ್ಥ ಗುಣಸ್ಥಾನದಲ್ಲಿಯೇ ಪೂರ್ಣತೆಯ ಸ್ಥಿತಿಯನ್ನು ಒಪ್ಪಿಕೊಳ್ಳಬಾರದು. ನಾವು ಪುರುಷಾರ್ಥ ಗುಣಸ್ಥಾನದಲ್ಲಿಯೇ ಪೂರ್ಣತೆಯ ಸ್ಥಿತಿಯನ್ನು ಒಪ್ಪಿಕೊಳ್ಳಬಾರದು. ನಾವು ಪುರುಷಾರ್ಥ ಮಾಡುತ್ತಾ ಹದಿನಾಲ್ಕನೇ ಗುಣಸ್ಥಾನದ ವರೆಗೆ ತಲುಪಬೇಕಾಗಿದೆ. ಸಂಪೂರ್ಣ ಲೋಭದಿಂದ ರಹಿತ ಹನ್ನೆರಡನೆ ಗುಣಸ್ಥಾನದವರು ಕ್ಷಪಕ ಶ್ರೇಣಿಯು ಮನಿರಾಜರೇ ಆಗುತ್ತಾರೆ. 10ನೇ ಗುಣಸ್ಥಾನದವರು ಸಹ ಸೂಕ್ಷ್ಮ ಲೋಭದಿಂದ ಸಹಿತರಾಗಿರುತ್ತಾರೆ. ಹನ್ನೊಂದನೇ ಗುಣಸ್ಥಾನದವರಿಗೆ ಲೋಭದ ಈ ಸಂಕೋಲೆಗಳು ಕೆಳಗೆ ಬೀಳಿಸಿ ಬಿಡುತ್ತವೆ. ನರಕ ನಿಗೋದದ ವರೆಗೆ ಮತ್ತೊಮ್ಮೆ ತಲುಪಿಸಬಲ್ಲವು. ಲೋಭವು ಹೀಗಿದ್ದು 11ನೇಗುಣ ಸ್ಥಾನದಿಂದ ಬೀಳುವ ಮುನಿಗಳನ್ನು ಸಹ ನಾಲ್ಕು ಗತಿಗಳಲ್ಲಿ ಭ್ರಮಣೆ ಮಾಡಿಸಬಲ್ಲವು ಆದರೆ 11ನೇ ಗುಣಸ್ಥಾನವುಳ್ಳವರು ಲೋಭದಿಂದ ಕೂಡಿಲ್ಲ ವೆಂಬುದನ್ನು ಧ್ಯಾನದಲ್ಲಿಡಬೇಕು ಆದರೆ ಅವರ ಲೋಭ ಒತ್ತು ಹಿಡಿಯಲ್ಪಟ್ಟಿದೆ. ಉದಯನ್ನು ಪಡೆದಿಲ್ಲ. ಲೋಭ ಕಷಾಯವನ್ನು ಒತ್ತಿ ಹಿಡಿಯದಿದ್ದರೆ, ಅಂತರ್ ಮುಹೂರ್ತಕ್ಕಾಗಿಯಾಗಲಿ ಉಪಶಾಂತ ಮೋಹ ಗುಣಸ್ಥಾನದಲ್ಲಿ ವೀತರಾಗತೆಯು ಪ್ರಾಪ್ತಿಯಾಗಿ ಬಿಡುತ್ತದೆ. ಅಲ್ಲಿ ಸೂಕ್ಷ್ಮ ಲೋಭವನ್ನ, ಸಹ ಕ್ಷಯ ಮಾಡಲಾಗುತ್ತದೆ. ಅಲ್ಲಿ ಕ್ಷೀಣ ಮೋಹದ ಅವಸ್ಥೆಯು ಪ್ರಾಪ್ತವಾಗಿ ಬಿಡುತ್ತದೆ ಹಾಗೂ ಕ್ಷೀಣ ಮೋಹವುಳ್ಳ ಮುನಿರಾಜರು ಅಂತರ ಮುಹೂರ್ತದಲ್ಲಿಯೇ ಕೇವಲ ಜ್ಞಾನವನು ಪಡೆದುಕೊಂಡು ಅದೇ ಭವದಿಂದ ಮೋಕ್ಷಕ್ಕೆ ಹೋಗುತ್ತಾರೆ. ಪೂರ್ಣ ವೀತರಾಗತೆಯು 13ನೇ ಗುಣಸ್ಥಾನದಲ್ಲಿಯೇ ಆಗುತ್ತದೆಂಬುದನ್ನು ಗಮನದಲ್ಲಿಡಬೇಕು. 14ನೇ ಗುಣಸ್ಥಾನದ ಕಾಲವು ಅತ್ಯಂತ ಅಲ್ಪವಾಗಿರುತ್ತದೆ. ಐದು ಹೃಸ್ವಸ್ವರಗಳ ಉಚ್ಚಾರಣೆಯು ಎಷ್ಟು ಸಮಯದ್ದಾಗಿರುತ್ತದೆಯೋ ಅಷ್ಟೇ ಇದ್ದು ನಂತರ ಮೋಕ್ಷವಾಗಿ ಬಿಡುತ್ತದೆ.

ಮುನಿಜನರ ಶೌಚಧರ್ಮವು ಆತ್ಮನ ವಿಶುದ್ಧಿ, ಜ್ಞಾನ, ಧ್ಯಾನ, ತಪೋ–ವೃತ ಇತ್ಯಾದಿ ರೂಪವಾಗಿದೆ. ಆತ್ಮನ ಪರಿಣಾಮಗಳನ್ನು ಶೌಚಧರ್ಮದಿಂದ ಪವಿತ್ರ ಮನವನ್ನು ಪತನೋನ್ಮುಖಿಯಾಗುವುದರಿಂದ ರಕ್ಷಿಸುತ್ತದೆ. ಶೌಚಧರ್ಮದ ಪ್ರಭಾವದಿಂದ ಕಷಾಯಗಳು ನಷ್ಟವಾಗುತ್ತವೆ ಹಾಗೂ ಈ ಕಾರಣದಿಂದ ಜೀವವು ಪಾಪದಿಂದ ಲಿಪ್ತವಾಗುವುದಿಲ್ಲ. ಸಾತಾವೇದನೀಯ ಕರ್ಮದ ಉದಯ ಯಾವುದರಿಂದ ಆಗುತ್ತದೆ, ಸುಖ ಯಾವುದರಿಂದ ದೊರೆಯುತ್ತದೆ? ಶೌಚಧರ್ಮದಿಂದ ಎನ್ನುವುದನ್ನು ನೀವು ತಿಳಿದಿದ್ದರೆ, ಧರ್ಮಮಾರ್ಗದ ಪ್ರತಿಯೊಂದು ಚರಣದಲ್ಲಿ ಶಾಂತಿ, ಆನಂದ ಹಾಗೂ ಪವಿತ್ರತೆ ಸ್ವಾಭಾವಿಕವಾಗಿದೆ. ಚಂದ್ರನಿಂದ ಶೀತಲತೆ ಬೇರಯಾಗದಿರುವಂತೆ ಶೌಚಧರ್ಮದಿಂದ ಮನ: ಶಾಂತಿ ಬೇರೆಯಾಗುವುದಿಲ್ಲ. ಸಂಪೂರ್ಣ ಸುಖಗಳ ಮೂಲ ಉತ್ತಮ ಶೌಚವಾಗಿದೆ.

ಸಗರ ಚಕ್ರವರ್ತಿಯ ಜೀವನ ದೃಷ್ಟಾಂತ ಸಾಕಷ್ಟು ಹೃದಯಗ್ರಾಹಿ ಹಾಗೂ ಮಾರ್ಮಿಕವಾಗಿದೆ.

ಅದು ನಮಗೆ ಸನ್ಮಾರ್ಗದೆಡೆಗೆ ಪ್ರೇರಣೆ ನೀಡುತ್ತದೆ. ಸಗರ ಚಕ್ರವರ್ತಿಯ ಅಜಿತನಾಥ ತೀರ್ಥಂಕರರ ತೀರ್ಥಕಾಲದಲ್ಲಿದ್ದರು. ಈತನಿಗೆ 60 ಸಾವಿರ ಮಕ್ಕಳಿದ್ದರು. ಒಂದು ದಿನ ಸಗರ ಚಕ್ರವರ್ತಿಯು ರಾಜ್ಯಸಭೆಯಲ್ಲಿ ಸಿಂಹಾಸನದಲ್ಲಿ ವಿರಾಜಮಾನನಾಗಿದ್ದನು ಆಗ ಆತನ 10 ಸಾವಿರ ಪುತರ್ರು ಬಂದು ಸಿಂಹದ ಮಕ್ಕಳಂತೆ ಉದ್ದಂಡ ಹಾಗು ಅಹಂಕಾರದಿಂದ ಕೂಡಿದ ಅವರು ತಮ್ಮ ತಂದೆಯಲ್ಲಿ ನಿವೇದನೆ ಮಾಡಿಕೊಳ್ಳುತ್ತಾ ನಾವು ಕ್ಷತ್ರಿಯ ಪುತ್ರರಾಗಿದ್ದೇವೆ ಶೂರತೆ-ವೀರತೆ ಮತ್ತು ಸಾಹಸದಿಂದ ಸುಶೋಭಿತ ಕ್ಷತ್ರಿಯರ ಪುತ್ರರ ಯೌವನ ದುಸ್ಸಾಧ್ಯವಾದ ಕಾರ್ಯದಲ್ಲಿ ತಂದೆಯ ಮನೋರಥ ಸಿದ್ಧಿ ಮಾಡದಿದ್ದರೆ ಅದು ಯೌವ್ವನವಲ್ಲ. ಅಂತಹ ಪ್ರಾಣಿಯ ಜೀವನ ಧಾರಣೆ ಮಾಡುವುದರಿಂದ ಅಥವಾ ಜನ್ಮ ಪಡೆಯುವುದರಿಂದ ಏನು ಲಾಭ? ಜೀವನ ಧಾರಣೆ ಮಾಡುವುದು ಹಾಗೂ ಜನ್ಮ ಪಡೆಯುವುದು ಎರಡೂ ಸಹ ಸರ್ವಸಾಧಾರಣ ಮಾತಾಗಿದೆ ಅರ್ಥಾತ್ ಎಲ್ಲ ಜೀವಗಳಿಗೂ ಆಗುತ್ತದೆ. ಆದ್ದರಿಂದ ಹೇ ರಾಜನೇ ನಮಗೆ ಸಾಹಸದಿಂದ ಕೂಡಿದ ಹಾಗೂ ಕೇವಲ ಭೋಜನದಲ್ಲಿ ಸಮಿಲಿತವಾಗುವುದರಿಂದ ಉತ್ಪನ್ನವಾಗುವ ಅಕರ್ಮಣ್ಯತೆ ದೂರವಾಗಬಲ್ಲ ಕೆಲಸವನ್ನು ಹೇಳಿರಿ, ಹೇ ತಂದೆಯೇ ನಮಗೆ ನಮ್ಮ ಬಾಹುಗಳಲ್ಲಿ ಸಿಕ್ಕಿರುವ ಬಲ ಯಾಕಿದೆ? ಇದರ ಪ್ರಯೋಗ ಮಾಡಲು ಬಿಡಿ ಎಂದರು.

ಇದನ್ನು ಕೇಳಿ ಸಗರ ಚಕ್ರವರ್ತಿಯು ಪ್ರಸನ್ನನಾಗಿ-ಹೇ ಮಕ್ಕಳೇ ಚಕ್ರರತ್ನದಿಂದ ಎಲ್ಲವೂ ಸಿದ್ಧವಾಗಿ ಬಿಟ್ಟಿದೆ. ಮವನ ಪರ್ವತ ಮತ್ತು ಸಮುದ್ರದ ಮಧ್ಯೆ ನಮಗೆ ಸಿದ್ಧವಾಗದಿರುವಂತಹ ವಸ್ತು ಯಾವುದಿದೆ? ನಿಮ್ಮಲ್ಲರಿಗೂ ಇರುವ ಕೆಲಸವೆಂದರೆ ನೀವು ಎಲ್ಲರೂ ಸೇರಿ ಈ ವಿಶಾಲ ರಾಜ್ಯ ವೈಭವ ಲಕ್ಷ್ಮೀಯ ಯಥಾಯೋಗ್ಯ ರೀತಿಯಿಂದ ಉಪಭೋಗ ಮಾಡಿರಿ, ಹೀಗೆ ಚಕ್ರವರ್ತಿಯು ಅವರಿಗೆ ಬಹು ರೀತಿಯಲ್ಲಿ ತಿಳಿಸಿದ ಆದರೆ ಅವರು ಕೆಲಸವಿಲ್ಲದೇ ಕುಳಿತು ಕೊಳ್ಳುವುದು ನಮಗೆ ಸರಿ ಎನಿಸುವುದಿಲ್ಲ. ನೀವು ನಮಗೆ ಯಾವುದಾದರೂ ಕೆಲಸ ಕೊಡಿ ಇಲ್ಲವಾದಲ್ಲಿ ನಾವು ಊಟವನ್ನು ಮಾಡುವುದಿಲ್ಲವೆಂದು ಹೇಳಿದರು. ಮಕ್ಕಳ ಮಾತುಗಳನ್ನು ಕೇಳಿದ ಚಕ್ರವರ್ತಿಯು ಚಿಂತಿತನಾದ ನೋಡಿ ಎಂತೆಂಥಹ ಜನರಿರುತ್ತಾರೆ, ಕೆಲವು ಜನರು ನಮಗೇನು ಮಾಡುವಂತಾಗಬಾರದು ಸುಮ್ಮನೆ ಕುಳಿತುಕೊಂಡು ತಿನ್ನೋಣವೆಂದು ಯೋಚಿಸುತ್ತಾರೆ. ಆದರೆ ಇವರು ನಾವು ಸುಮ್ಮನೆ ಕುಳಿತುಕೊಂಡು ಯಾಕೆ ತಿನ್ನಬೇಕೆಂದು ಯೋಚಿಸುತ್ತಿದ್ದಾರೆ. ತಂದೆಯು ಅವರಿಗೆ ಪೂರ್ವಜನ್ಮದ ಪುಣ್ಯವಿದೆ. ಎಲ್ಲವೂ ತುಂಬಿದೆ ಇದರ ಉಪಭೋಗ ಮಾಡಿರಿ ಎಂದು ತಿಳಿಸಿ ಹೇಳುತ್ತಿದ್ದಾರೆ. ಅವರು ಆಗುವುದಿಲ್ಲವೆಂದು ಹೇಳುತ್ತಿದ್ದಾರೆ ಈ ಬಾಹುಗಳ ಬಲದ ಪ್ರಯೋಗ ನಾವು ಯಾಕೆ ಮಾಡಬಾರದು. ಈಗ ಚಕ್ರವರ್ತಿ ಇನ್ನೂ ಚಿಂತಿತನಾದ. ಇವರಿಗೇನು ಕೆಲಸ ಕೊಡಬೇಕು ಎಂದು ಯೋಚಿಸತೊಡಗಿದ. ವಿಚಾರ ಮಾಡಿದ ಈಗ ಧರ್ಮದ ಕಾರ್ಯ ಉಳಿದಿದೆ ಎಂದು ಆತನ ಸ್ಮರಣೆಗೆ ಅಕಸ್ಮಾತಾಗಿ ಹೊಳೆಯಿತು. ಆತನು ಪ್ರಸನ್ನನಾಗಿ-ಅವರಿಗೆ ಆಜ್ಞೆ ನೀಡುತ್ತಾ-ಪ್ರಥಮ ಚಕ್ರವರ್ತಿ ಭರತನು ಕೈಲಾಸ ಪರ್ವತದ ಮೇಲೆ ಮಹಾ ರತ್ನಗಳಿಂದ ಅರಹಂತ ದೇವರ 72 ಜಿನಾಲಯಗಳನ್ನು ನಿರ್ಮಿಸಿದ್ದನು. ಆ ಜಿನಾಲಯಗಳ ರಕ್ಷಣೆಗಾಗಿ ನೀವು ಆ ಪರ್ವತದ ನಾಲ್ಕು ದಿಕ್ಕಿನಲ್ಲಿ ಗಂಗಾ ನದಿಯ ಕಂದುಕ ರಚಿಸಿರಿ ಯಾಕೆಂದರೆ ಪಂಚಮಕಾಲ ಬಂದು ಜನರ ನಿಷ್ಠೆ ಕೆಟ್ಟು ಹೋಗಲಿದೆ. ಆ ಜನ ಒಂದೊಂದು ಇಟ್ಟಿಗೆಯನ್ನು ತಮ್ಮ ಮನೆಗೆ ತೆಗೆದುಕೊಂಡು ಹೋಗಿ ಬಿಡುತ್ತಾರೆ. ಆದ್ದರಿಂದ ಹೇ ಪುತ್ರರೇ ಗಂಗಾ ನದಿಯ ಕಂದುಕವನ್ನು ನಿರ್ಮಿಸಿರಿ-ಎಂದು ಹೇಳಿದ.

ಎಲ್ಲ ಪುತ್ರರು ಈ ಕೆಲಸ ಪಡೆದು ಬಹಳ ಪ್ರಸನ್ನರಾದರು ಹಾಗೂ ತಂದೆಯ ಆಜ್ಞೆಯಂತೆ ದಂಡರತ್ನ ತೆಗೆದುಕೊಂಡು ಅದರ ಮೂಲಕ ಆ ಜಿನಾಲಯಗಳ ನಾಲ್ಕು ದಿಕ್ಕಿನಲ್ಲಿ ಬಹು ಬೇಗನೆ ಕಂದುಕವನ್ನು ತೋಡಿದರು ಅದರಿಂದಾಗಿ ಕೈಲಾಸ ಪರ್ವತದ ಮೇಲೆ ಯಾರೂ ಹೋಗದಂತಾಯಿತು. ಹಾಗೂ ಆ ಜಿನಾಲಯಗಳು ಚಿರಕಾಲದವರೆಗೆ ಸುರಕ್ಷಿತವಾಗಿರುವಂತಾಯಿತು ಕಂದುಕ ತೋಡುವಾಗ ಏನಾಯಿತೆಂದು ನಿಮಗೆ ಗೊತ್ತಿದಿಯೆ?

ನೋಡಿ ಸಹೋದರರೇ, ಎಷ್ಟೋ ಜೀವಿಗಳೊಂದಿಗೆ, ಅನೇಕ ಜನ್ಮಗಳ ಸಂಬಂಧ ಈ ಜೀವದೊಂದಿಗೆ ಇರುತ್ತದೆ. ಕೆಲವೊಂದು ಸಂಬಂಧಗಳು ಜೀವದ ಹಿತವನ್ನು ಹೆಚ್ಚಿಸಲು ಕಾರ್ಯ ಮಾಡುತ್ತವೆ. ಅವುಗಳ ಪರಸ್ಪರದಲ್ಲಿ ಹಿತ ಸಂಪಾದನೆಯನ್ನು ಸಹ ಮಾಡುತ್ತವೆ. ಮಣಿಕೇತು ಹೆಸರಿನ ದೇವ ಸ್ವರ್ಗ ಲೋಕದಲ್ಲಿ ತನ್ನ ಮಿತ್ರ ಸಗರ ಚಕ್ರವರ್ತಿಯ ಹಿತ ಬಯಸುತ್ತಾನೆ. ಆದ್ದರಿಂದ ಮೇಲಿಂದ ಮೇಲೆ ಅವರನ್ನು ಧರ್ಮಮಾರ್ಗದ ಬಗ್ಗೆ ತಿಳಿಸಿಕೊಡುತ್ತಾನೆ. ಆದರೆ ಸಗರ ಚಕ್ರವರ್ತಿ ಸಂಸಾರದ ವಿಷಯಭೋಗಗಳಲ್ಲಿ ಮೋಹಿತನಾಗಿರುತ್ತಾನೆ. ಈ ಬಾರಿ ಮತ್ತೆ ಮಣಿಕೇತುವು ಯೋಚಿಸಿ ಇದೊಂದು ಒಳ್ಳೆಯ ಅವಕಾಶ, ಇವರು ಬಹಳ ಪುಣ್ಯವಂತರು ಆದರೆ ಸಂಸಾರದ ತುಚ್ಛ ವೈಭವದಲ್ಲಿ ಮುಳುಗಿ ಹೋಗಿದ್ದಾರೆ. ಪ್ರೇಮ ಮತ್ತು ಸಜ್ಜನತೆಯಿಂದ ಪ್ರೇರಿತನಾದ ಮಣಿಕೇತು ಪುನಃ ಸ್ವರ್ಗದಿಂದ ಬಂದು ಚಕ್ರವರ್ತಿ ಸಗರನಿಗೆ ತಿಳಿ ಹೇಳಲು ಯೋಗ್ಯ ಉಪಾಯ ಮಾಡತೊಡಗಿದ ಆ 60 ಸಾವಿರ ರಾಜಪುತ್ರರು ಕಂದುಕ ಅಗೆಯುತ್ತಿರುವ ಸ್ಥಾನದಲ್ಲಿ ಭಯಂಕರ ನಾಗನ ರೂಪ ಧಾರಣೆ ಮಾಡಿ ಬಂದನು ಆತನು ತನ್ನ ವಿಷಮಯ ಘುಂಕಾರದಿಂದ ಎಲ್ಲ ರಾಜಕುಮಾರರನ್ನು ಸತ್ತವರಂತೆ ಮೂರ್ಛಿತಗೊಳಿಸಿ ಹೊರಟು ಹೋದನು. ರಾಜ್ಯ ಮಂತ್ರಿಗಳಿಗೆ ರಾಜಪುತ್ರರ ಮೇಲೆ ರಾಜನ ಸ್ನೇಹ ಅತ್ಯಧಿಕವೆಂದು ತಿಳಿದಿದ್ದು. ರಾಜನ ಪುತ್ರರ ಮರಣವನ್ನು ತಿಳಿದು ಸಹ ಈ ಸಮಾಚಾರವನ್ನು ರಾಜನಿಗೆ ತಿಳಿಸುವಲ್ಲಿ ಸಮರ್ಥರಾಗಲಿಲ್ಲ ಅಲ್ಲದೇ ಈ ಸಮಾಚಾರವನ್ನು ಬಚ್ಚಿಟ್ಟು ಸುಮ್ಮನೆ ಕುಳಿತು ಬಿಟ್ಟರು ಆಗ ಮಣಿಕೇತು ದೇವನು ಕೆಲಸವಾಗಲಿಲ್ಲವೆಂದು ತಿಳಿದು ಆತನು ಬ್ರಾಹ್ಮಣನ ರೂಪ ಧಾರಣೆ ಮಾಡಿದ ಮತ್ತು ಸಗರ ಚಕ್ರವರ್ತಿ ಬಳಿ ತಲುಪಿದ. ಅಲ್ಲಿ ತಲುಪಿದ ಆತ ಬಹಳ ಶೋಕದಿಂದ ಆಕ್ರಾಂತನಾಗಿ–ಹೇ ದೇವ ನಿಮ್ಮ ರಾಜ್ಯದಲ್ಲಿ ಇರುತ್ತ ನಮಗೆ ಯಾವ ದುಃಖವು ಇಲ್ಲ, ಎಲ್ಲವೂ ಕುಶಲವಾಗಿದೆ ಆದರೆ ಆಯುವಿನ ಅವಧಿ ದೂರವಿರುವಾಗಲೂ ಅಸಮಯದಲ್ಲಿಯೇ ಯಮರಾಜನು ನನ್ನ ಪುತ್ರನನ್ನು ನನ್ನಿಂದ ಕಸಿದಿದ್ದಾನೆ. ಆತ ನನ್ನ ಏಕಮೇವ ಪುತ್ರನಾಗಿದ್ದನು, ನೀವು ಆಯುವಿನಿಂದ ಕೂಡಿದ ಅರ್ಥಾತ ಜೀವಂತ ಗೊಳಿಸದಿದ್ದರೆ ನನ್ನ ಮರಣವು ನಿಶ್ಚಿತವೆಂದು ತಿಳಿಯಿರಿ–ಎಂದು ಹೇಳತೊಡಗಿದ.

ಬ್ರಾಹ್ಮಣನ ಮಾತುಗಳನ್ನು ಕೇಳಿದ ಚಕ್ರವರ್ತಿಯು ಆತನನ್ನು ಸಾಂತ್ವನ ಗೊಳಿಸುತ್ತಾ ವಿಪ್ರವರ್ಯನೇ ಈ ಜಗತ್ತಿಗೆ ಬಂದಿರುವವರನ್ನು ಯಮರಾಜನು ಬಿಡುವುದಿಲ್ಲ. ಈ ಜಗತ್ತಿನಲ್ಲಿ ಎಷ್ಟೊ ಪ್ರಾಣಿಗಳು ಆಯು ಮಧ್ಯದಲ್ಲಿಯೇ ಮುಗಿದು ಹೋಗುತ್ತದೆ. ನೀನು ಆ ಯಮರಾಜನನ್ನು ದ್ವೇಷಿಸಿ ಆತನನ್ನು ಪರಾಜಿತಗೊಳಿಸುವ ಇಚ್ಛೆ ಇದ್ದರೆ ಮನೆಯ ಮೋಹವನ್ನು ಬಿಟ್ಟು ಮುನಿ ದೀಕ್ಷೆಯನ್ನು ಧಾರಣೆ ಮಾಡಿ ಶೋಕವನ್ನು ಬಿಡು–ಎಂದು ಹೇಳಿದ.

ಚಕ್ರವರ್ತಿ ರಾಜ ಸಗರ ಇದೆಲ್ಲವನ್ನು ಹೇಳಿದಾಗ ಬ್ರಾಹ್ಮಣ ವೇಷಧಾರಿ ಮಣಿಕೇತು ದೇವ

ಮನದಲ್ಲಿ ಪ್ರಸನ್ನನಾಗುತ್ತ–ಹೇ ದೇವ! ನೀವು ಸತ್ಯ ಹೇಳುತ್ತಿದ್ದಿರಾ ಯಮರಾಜನಿಗಿಂತ ಮತ್ತೆ ಯಾರು ಬಲವಾನರು ಇಲ್ಲ ಆತನನ್ನು ಗೆಲ್ಲಲು ಇರುವ ಒಂದೇ ಉಪಾಯ ಮುನಿ ದೀಕ್ಷೆ. ಆದರೆ ದೇವ ನನ್ನ ಮಾತನ್ನು ಸಹ ಕೇಳಿರಿ, ನಾನೂ ಏನೇ ಹೇಳಿದರೂ ತಾವು ಭಯ ಭೀತರಾಗಬಾರದು. ಹಾ–ಹಾ ಹೇಳು, ಹೇ ರಾಜನ್ ನಿಮ್ಮ 60 ಸಾವಿರ ಮಕ್ಕಳು ಕೈಲಾಸ ಪರ್ವತದ ಮೇಲೆ ಕಂದುಕ ನಿರ್ಮಿಸಲು ಹೋಗಿದ್ದರು ಅವರೆಲ್ಲರನ್ನು ಆ ಯಮರಾಜನು ತನ್ನನ್ನೆಡೆಗೆ ಕರೆಸಿಕೊಂಡಿದ್ದಾನೆ. ದೈವಯೋಗದಿಂದ ಅವರ ಮೇಲೆ ಮಣ್ಣು ಮತ್ತು ಬಂಡೆಗಲ್ಲೂಗಳು ಬಿದ್ದಿದ್ದರಿಂದ ಎಲ್ಲರೂ ಸ್ವರ್ಗ ಲೋಕಕ್ಕೆ ಸಾಗಿದ್ದಾರೆ. ಎಲ್ಲರ ಮರಣವಾಗಿಬಿಟ್ಟಿದೆ ಹಾಗೂ ತಾವು ಇಲ್ಲಿಯೇ ಕುಳಿತಿದ್ದೀರಾ. ಈ ಸಂಸಾರವು ಅಸಾರವಾಗಿದೆ ನೀವು ಯಾರ ಮೋಹದಲ್ಲಿ ಸಿಲುಕಿದ್ದಿರಿ. ತಾವು ಹೇಳಿದ ಶಬ್ಧಗಳ ಪ್ರಕಾರ ಈಗ ತಮಗೂ ಸಹ ಯಮರಾಜನ್ನು ಗೆಲ್ಲಲು ಮುನಿ ದೀಕ್ಷೆ ತೆಗೆದುಕೊಳ್ಳಬೇಕು. ಬ್ರಾಹ್ಮಣನ ಈ ವಚನರೂಪಿ ವಜ್ರದಿಂದ ಸಗರ ಚಕ್ರವರ್ತಿಯ ಹೃದಯ ಛಿದ್ರವಾಯಿತು ಹಾಗೂ ಆತ ಮೂರ್ಛಿತನಾಗಿ ಬಿದ್ದು ಬಿಟ್ಟನು. ಕೆಲವು ಸಮಯದ ನಂತರ ಉಪಚಾರವಾದ ಮೇಲೆ ಸುಚೇತನಾಗಿ ವಿಚಾರ ಮಾಡ ತೊಡಗಿದ ಈ ಮೋಹಕ್ಕೆ ಧಿಕ್ಕಾರವಿರಲಿ ಈ ಕಾರಣದಿಂದಾಗಿ ಇಲ್ಲಿಯವರೆಗೆ ನಾನು ಸಂಸಾರದ ವಾಸ್ತವಿಕ ರೂಪವನ್ನು ತಿಳಿಯಲಿಲ್ಲ. ಏನು ಒಂದು ದಿನ ನನ್ನ ಮರಣ ಸಹ ಆಗಿ ಬಿಡುವುದೆ? ನಾನು ಯವುದೇ ಶಾಶ್ವತ ಪರ್ಯಾಯ ಹೊತ್ತು ತಂದಿಲ್ಲ ಇದು ಸಹ ನಶ್ವರವಿದೆ ಅಲ್ಲವೆ? ಅವರು ಹೊರಟು ಹೋದರು, ಇಲ್ಲಿ ನಾನೇನು ಮಾಡಲಿ? ಅವರ ಜೀವನವಂತೂ ಆಕಸ್ಮಿಕವಾಗಿ ಹೊರಟು ಹೋಯಿತು. ಒಂದು ವೇಳೆ ಸಂಯಮಪೂರ್ವಕ ಜೀವನ ಅವರದಾಗಿದ್ದಿದ್ದರೆ ಸದ್ಗತಿ ಅಥವಾ ಮೋಕ್ಷವಾಗುತ್ತಿದ್ದಿತು. ನನ್ನದೂ ಒಂದು ವೇಳೆ ಹೀಗೆ ಆದರೆ ಏನು ಮಾಡುವುದು? ನನ್ನ ಬಳಿ ಎಲ್ಲವೂ ಇದೆ, ಯಾರಿಗಾಗಿ ಗಳಿಸಲಿ, ವ್ಯರ್ಥವಾಗಿ ಭೇದವನ್ನೇ ಹೆಚ್ಚಿಸುವ ಈ ಲಕ್ಷ್ಮಿರೂಪಿ ಮಾಯೆಯ ಅವಶ್ಯಕತೆ ನನಗಿಲ್ಲ. ಈಗ ಯಾರಿಗಾಗಿ ಬದುಕಲಿ, ಇಲ್ಲಿ ಇದ್ದು ಏನು ಮಾಡಲಿ? ಈ ಶರೀರ ಅಪವಿತ್ರವಿದೆ, ನಷ್ಟವಾಗುವುದಿದೆ ಹಾಗೂ ಈ ಕಾರಣದಿಂದ ಸೇವನೆ ಮಾಡಲು ಯೋಗ್ಯವಿಲ್ಲ. ಈ ಯೌವನ ಕಾಮನ ಬಿಲ್ಲಿನಂತೆ ನಶ್ವರವಾಗಿದೆ, ಹೀಗೆ ತಿಳಿದು ತೀರ್ಥಂಕರ ಭಗವಂತರು ಕಾಡಿಗೆ ತೆರಳುತ್ತಾರೆ. ಆದರೆ ನಾನು ಮೂರ್ಖ ಈಗಲೂ ಸಹ ಇವುಗಳಲ್ಲಿಯೇ ಮೂಢನಾಗುತ್ತಿದ್ದೇನೆ. ನಾವು ಗುರುವಿನ ಚರಣಗಳಲ್ಲಿ ಹೋಗೋಣ. ಆಗ ಸಗರ ಚಕ್ರವರ್ತಿಯು ಭಗಲಿ ದೇಶದ ರಾಜ ಸಿಂಹವಿಕ್ರಮನ ಮಗಳು ವಿಭಾಳ ಪುತ್ರ ಭಗಿರಥನಿಗೆ ರಾಜ್ಯವನ್ನು ವಹಿಸಿಕೊಟ್ಟು ಸ್ವಯಂ ದೃಢಧರ್ಮ ಕೇವಲಿಗಳ ಬಳಿ ತೆರಳಿದರು. ವೈರಾಗ್ಯಭಾವ ಆಗಿದ್ದಿತು. ದೀಕ್ಷೆ ಧಾರಣೆ ಮಾಡಿ ತಪಶ್ಚರಣದಲ್ಲಿ ತೊಡಗಿ ಬಿಟ್ಟರು. ಇದೆಲ್ಲವನ್ನು ದೇವ ಮಾಡುತ್ತಿದ್ದ ಅವರ ಪೂರ್ವಜನ್ಮದಲ್ಲಿ ಪರಸ್ಪರದಲ್ಲಿ ದೊಡ್ಡ ಸ್ನೇಹಿತರಾಗಿದ್ದರು.

ಸಗರ ಚಕ್ರವರ್ತಿಗಳು ದೀಕ್ಷೆ ಪಡೆದರು. ಆ ಕಡೆ ಮಣಿಕೇತು ದೇವ ಆ ಮಕ್ಕಳ ಕಡೆಗೆ ತೆರಳಿದ ಕೈಲಾಸ ಪರ್ವತದ ಮೇಲೆ, ಆ ರಾಜಕುಮಾರರನ್ನು ಸಚೇತನಗೊಳಿಸಿ–ನಿಮ್ಮ ತಂದೆ ಕಂದುಕ ತೋಡುವ ಒಳ್ಳೆಯ ಕೆಲಸವನ್ನೇ ನೀಡಿದ್ದಾರೆ. ಶಕ್ತಿ ದೊರೆತಿದ್ದಿತು ನಿಮಗೆ ತಪಸ್ಸು ಮುಂತಾದ ಮತ್ತೆ ಏನಾದರೂ ಹೇಳಿದ್ದರೆ ಚೆನ್ನಾಗಿದ್ದಿತು, ಕರ್ಮಕಳೆಯುತ್ತಿದ್ದಿತು, ನೀವು ಈ ಶಕ್ತಿಯ ಪ್ರಯೋಗವನ್ನು ಎಲ್ಲಿ ಮಾಡುತ್ತಿದ್ದಿರಿ, ನೀವು ಜಡಕ್ಕಾಗಿ ಈ ಕಾರ್ಯ ಮಾಡುತ್ತಿದ್ದೀರಿ. ಈ ಜಡದ ಸುರಕ್ಷೆಗಾಗಿ ಮಾಡುತ್ತಿದ್ದೀರಿ. ಜಡ ನಶ್ವರವಾಗಿದೆ. ಅದರದು ಗಲನ ಪೂರಣ ಸ್ವಭಾವವಾಗಿದೆ. ಈ

ಎಲ್ಲವು ಪುದ್ಗಲವಾಗಿ ಕಾಣುತ್ತಲಿವೆ ಹಾಗೂ ಈ ಜಗತ್ತಿನಲ್ಲಿ ಏನಿದೆ?

ಸಮಾಧಿ ತಂತ್ರದಲ್ಲಿ ಹೇಳಿಯೂ ಇದ್ದಾರೆ-

**ಅಚೇತನಮಿದಂ ದೃಶ್ಯ, ಮದೃಶ್ಯಂ ಚೇತನಂ ತತಃ ।**
**ಕ್ವ ರುಷ್ಯಾಮಿ ಕ್ವ ತುಷ್ಯಾಮಿ, ಮದ್ಯಸ್ತೋಹಂ ಭವಾಮತಃ ॥46॥**

ಈ ಚಿಂತನೆ ಮಾಡಬೇಕು. ಈ ಜಗತ್ತಿನಲ್ಲಿ ಏನೆಲ್ಲಾ ಕಾಣುತ್ತಲಿದೆ ಇದೆಲ್ಲವೂ ದೃಶ್ಯವೂ ಅಚೇತನವಾಗಿದೆ ಹಾಗೂ ನನ್ನ ಅದೃಶ್ಯವೂ ಆತ್ಮ ಚೇತನವಾಗಿದೆ, ಆದ್ದರಿಂದ ನಾನು ಯಾವುದರಲ್ಲಿ ರಾಗ ಮಾಡಲಿ, ಯಾವುದರಲ್ಲಿ ದ್ವೇಷ ಮಾಡಲಿ? ಸಾಕು, ಮಧ್ಯಸ್ಥಭಾವದಿಂದ ಜ್ಞಾತಾದೃಷ್ಟಾ ಆಗುತ್ತೇ. "ನಮ್ಮ ನಮ್ಮ ಕರ್ಮಗಳ ಫಲವನ್ನು ಈ ಸಂಸಾರ ಭೋಗಿಸಲಿ ಮತ್ತೇನೂ ಇಲ್ಲ. ಈಗ ನೀವು ಏನು ಮಾಡುತ್ತಿದ್ದಿರಿ. ನೋಡಿ ನಿಮ್ಮ ತಂದೆಯೂ ನಿಮಗೆ ಈ ಕೆಲಸ ತೋರಿಸಿದರು ಹಾಗೂ ಸ್ವಯಂ ಮೋಕ್ಷ ಮಾರ್ಗದಲ್ಲಿ ತೊಡಗಿದರು, ನಿಮಗೆ ಸಂಸಾರದ ಮಾರ್ಗ ತೋರಿಸಿ ಧರ್ಮ ಸಾಧನೆ ಮಾಡ ತೊಡಗಿದರು ದೀಕ್ಷಿತರಾಗಿ ಮುನಿಗಳಾದರು, ಒಳ್ಳೆಯದಾಯಿತು, ಇದೆಲ್ಲ ಹೇಗೆ ಆಯಿತು? ಮುನಿಯಾಗಲು ನಮಗೆ ಯಾಕೆ ಹೇಳಲಿಲ್ಲ? ಮಣಿಕೇತು ದೇವ-ಹೇ ರಾಜಕುಮಾರರೇ ಯಾರೋ ನಿಮ್ಮ ತಂದೆಗೆ ನಿಮ್ಮೆಲ್ಲರ ಮರಣದ ಈ ಅಶ್ರವಣೀಯ ದು:ಸಂವಾದವನ್ನು ಹೇಳಿದ್ದಾರೆ ಅದನ್ನು ಕೇಳಿದ ಅವರು ಶೋಕಾಗ್ನಿಯಿಂದ ಬಹಳಷ್ಟು ಉದ್ದೀಪಿತರಾಗಿ ಭಗೀರಥನಿಗೆ ರಾಜ್ಯವಹಿಸಿ ದೀಕ್ಷಿತರಾಗಿ ಮುನಿಗಳಾಗಿದ್ದಾರೆ ಹಾಗೂ ತಪದಲ್ಲಿ ತೊಡಗಿದ್ದಾರೆ. ನಾನು ನಿಮ್ಮ ಕುಲಪರಂಪರೆಯಂತೆ ನಡೆದು ಬಂದಿರುವ ಬ್ರಾಹ್ಮಣನಾಗಿದ್ದು ಶೋಕದಿಂದ ನಿಮ್ಮನ್ನು ಹುಡುಕಿಕೊಂಡು ಬಂದೆ ಎಂದು ಹೇಳಿದನು.

ಬ್ರಾಹ್ಮಣ ವೇಷದಾರಿ ಮಣಿಕೇತು ದೇವನ ಈ ಮಾತುಗಳನ್ನು ಕೇಳಿ ಆ ರಾಜಕುಮಾರರಿಗೂ ಸಹ ವೈರಾಗ್ಯ ಉಂಟಾಯಿತು ಹಾಗೂ ಅವರು ಚಿಂತನೆಯಲ್ಲಿ ತೊಡಗಿದರು. ಅರೇ ನಮಗೆ ನಮ್ಮ ತಂದೆಯು ಏನನ್ನು ಮಾಡಿದರೋ ಅದನ್ನೇ ನಮಗೂ ಹೇಳಿದ್ದರೆ ಚೆನ್ನಾಗಿದ್ದಿತು ಅವರು ಯಾವ ಮಾರ್ಗದಲ್ಲಿ ಸಾಗಿದರೋ ಅದೇ ಶ್ರೇಷ್ಠ ಮಾರ್ಗವಾಗಿದೆ. ವಾಸ್ತವಿಕವಾಗಿ ಇವೆಲ್ಲವೂ ನಶ್ವರವಾಗಿವೆ ನಮ್ಮವು ಎನ್ನುವುದು ಏನೂ ಇಲ್ಲ, ಹಾಗೇ ನೋಡಿದರೆ ನಾವು ಈ ಸಂಸಾರದಿಂದ ಪಾರಾಗುವುದಿಲ್ಲ. ಈ ಸುಖ, ದುಃಖ ನಮಗೆ ಯಾವಾಗಲೂ ಸಿಗುತ್ತಿರುತ್ತವೆ ಹಾಗೂ ನಾವು ಈ ಜಗತ್ತಿನಲ್ಲಿ ಚತುರ್ಗತಿ ಭ್ರಮಣೆ ಮಾಡುತ್ತಿರುತ್ತೇವೆ. ಬಾಹುಗಳ ಬಲ ದೊರೆತಿದೆ ಅದನ್ನು ಪವಿತ್ರ ಶುದ್ಧರೂಪದಲ್ಲಿ ಪ್ರಯೋಗ ಮಾಡಬೇಕು ಹಾಗೇ ನೋಡಿದರೆ ಅನೇಕ ಲಾಭದ ಕಾರ್ಯ ಮಾಡಿದ್ದೇವೆ, ಅನೇಕ ಶತ್ರುಗಳನ್ನು ಸೋಲಿಸಿದ್ದೇವೆ ಮತ್ತೆ ಬೇರೆ ಕರ್ಮ ಶತ್ರುಗಳು ತಯಾಗಾಗುತ್ತಿದ್ದರೆ ಅದರಿಂದ ನಮಗೆ ದುಃಖ ಪಡೆಯುತ್ತಿರುತ್ತೇವೆ. ಈಗ ಸಂಸಾರದಲ್ಲಿ ಬಾರದಂತಿರುವ ಶತ್ರುಗಳನ್ನು ಸೋಲಿಸಬೇಕಾಗಿದೆ. ಅವು ಕರ್ಮ ಶತ್ರುಗಳಾಗಿದ್ದು ಅವುಗಳನ್ನು ಸೋಲಿಸಲು ಬಲ ಸಿಕ್ಕಿರುವಾಗ ನಾವೇಕೆ ಈ ಸಂಸಾರದಲ್ಲಿ ಸಿಕ್ಕಿರಬೇಕು? ಅದರ ಪುರುಷಾರ್ಥವನ್ನು ಮಾಡೋಣ ಬನ್ನಿ ಎಂದು 60 ಸಾವಿರ ರಾಜಪುತ್ರರು ಜಿನೇಂದ್ರ ಭಗವಾನರ ಆಶ್ರಯ ಪಡೆದು ದೀಕ್ಷೆ ಧಾರಣೆ ಮಾಡಿದರು ಹಾಗೂ ತಪದಲ್ಲಿ ತೊಡಗಿದರು. ವಾಹ್, ವಾಹ್ ಎಂತಹ ಕೆಲಸ ಮಾಡಿದರು ವಿಚಾರ ಮಾಡಿರಿ ಒಂದು ಕಡೆ ನಾವಿದ್ದೇವೆ ಏನು ಮಾಡುತ್ತಿದ್ದೇವೆ. ನಾವು ನಮ್ಮ ಬಲವನ್ನು ಎಲ್ಲಿ ತೊಡಗಿಸುತ್ತಿದ್ದೇವೆ?

ಎಂತಹ ಗಳಿಕೆ ಮಾಡುತ್ತಿದ್ದೇವೆ. ಅವರು ಪಂಚ ಪಾಪಗಳನ್ನು ಬಿಟ್ಟು ಬಿಟ್ಟರು. ಎಲ್ಲಕ್ಕಿಂತ ಇದೇ ದೊಡ್ಡ ಪುರುಷಾರ್ಥವಾಗಿದೆ ಇದೇ ಎಲ್ಲಕ್ಕಿಂತ ದೊಡ್ಡಗಳಿಕೆಯಾಗಿದೆ. ಇದೇ ಎಲ್ಲಕ್ಕಿಂತ ದೊಡ್ಡ ಧರ್ಮ. ಭಗಿರಥನಿಗೆ ಈ ಸಮಾಚಾರ ತಿಳಿದಾಗ ಆತನು ಈ ಮುನಿಗಳ ಕಡೆ ಹೋಗಿ ಅಲ್ಲಿ ಆತನು ಅವರೆಲ್ಲರಿಗೂ ಭಕ್ತಿ ಪೂರ್ವಕ ನಮೋಸ್ತು ಮಾಡಿ ಜಿನೇಂದ್ರೋಕ್ತ ಧರ್ಮದ ಸ್ವರೂಪವನ್ನು ಕೇಳಿ ಶ್ರಾವಕರ ವ್ರತಗಳನ್ನು ಸ್ವೀಕರಿಸಿದನು ಕೊನೆಯಲ್ಲಿ ಮಣಿಕೇತು ದೇವ ಆ ಸಗರ ಮುಂತಾದ ಸಮಸ್ತ ಮುನಿಗಳ ಸಮಕ್ಷ ತನ್ನೆಲ್ಲ ರಹಸ್ಯದ ಮಾತುಗಳನ್ನು ಬಹಿರಂಗ ಪಡಿಸಿದ ಹಾಗೂ ನಿವೇಲ್ಲರೂ ನಮ್ಮನ್ನು ಕ್ಷಮಿಸಿರಿ ಎಂದು ಹೇಳಿದ, ಆಗ ಆ ಮುನಿಗಳು 'ಇದರಲ್ಲಿ ನಿಮ್ಮ ಅಪರಾಧವಾದರೂ ಏನು? ತಾವು ಇಲ್ಲಿ ನಮ್ಮ ಪರಮ ಹಿತ ಮತ್ತು ಪ್ರಿಯ ಕಾರ್ಯ ಮಾಡಿದೆ' ಎಂದು ಹೇಳಿದರು ಈ ಪ್ರಕಾರ ಪ್ರಸನ್ನತೆಯಿಂದ ತುಂಬಿದ ವಚನಗಳಿಂದ ಮಣಿಕೇತು ದೇವನಿಗೆ ಆ ಎಲ್ಲ ಮುನಿಗಳು ಉಪದೇಶ ನೀಡಿ ಸಾಂತ್ವನ ಮಾಡಿದರು. ದೇವ ನೀಡಿದ ವಚನ ಕಾರ್ಯ ಸಿದ್ಧವಾಗಿದ್ದಿತು, ಆತನಿಗೂ ಸಂತುಷ್ಟಿಯಾಗಿ ದೇವಲೋಕಕ್ಕೆ ಹೊರಟು ಹೋದನು. ನಾವು ಕೇವಲ ಈ ಜಡದ ಅರ್ಜನೆಯಲ್ಲಿ ತೊಡಗಿದ್ದೇವೆ ಸಾಕು. ಇದು ನಮಗೆ ಜೊತೆ ನೀಡಬಹುದೇ? ಹೆಸರು, ಖ್ಯಾತಿ ಪೂಜೆಯನ್ನು ಬಯಸುವವರು ಧನದ ಗಳಿಕೆ ಮಾಡಿ ಏನು ಮಾಡಬಲ್ಲರು?

ಸಹೋದರರೇ ಆತ್ಮನಿಗೆ ಧನವು ಜೊತೆಯಾಗುವುದಿಲ್ಲ, ಆತ್ಮನಿಗೆ ಜೊತೆ ನೀಡುವುದು ಧರ್ಮವೇ ಆಗಿದೆ. ಯಾವ ಆತ್ಮನೊಂದಿಗೆ ಧರ್ಮವಿರುವುದೋ ಅದಕ್ಕೇ ದೇವನು ಸಹ ನಮಸ್ಕರಿಸುತ್ತಾನೆ. ಸ್ವರ್ಗದಲ್ಲಿ ಅಪಾರ ವೈಭವ ಶಾಲಿಯಾಗಿದ್ದರೂ ಆ ದೇವರುಗಳು ನಮಸ್ಕರಿಸುತ್ತಾರೆ. ಹೇಳಿಯೂ ಇದೆ–

**ಧಮ್ಮೋ ಮಂಗಲ ಮುಕ್ಕಿಟ್ಠಂ ಅಹಿಂಸಾ ಸಂಯಮೋ ತವೋ।**
**ದೇವಾವಿ ತಸ್ಸ ಣಮಂಸಂತಿ ಜಸ್ಸ ಧಮ್ಮೇ ಸಯಾ ಮಣೋ॥ (ವಿ. ಭ 8)**

ಅಹಿಂಸೆ, ಸಂಯಮ, ತಪಮಯ ಉಚ್ಛ್ರಾಷ್ಟ ಧರ್ಮದಲ್ಲಿ ತೊಡಗಿರುವ ಆತ್ಮನಿಗೆ ದೇವತೆಗಳು ನಮಸ್ಕರಿಸುತ್ತಾರೆ.

ಸಹೋದರ ಧರ್ಮಕ್ಕೆ ಬೆಲೆ ಇದೆ ಧನಕ್ಕೆ ಬೆಲೆ ಇಲ್ಲ. ಧನವನ್ನು ಗಳಿಸಿ ನಿರ್ವಿಘ್ನತೆಯಿಂದ ಧರ್ಮ ಮಾಡೋಣವೆಂದು ನೀವು ಯೋಚಿಸುತ್ತೀರಾ ಹೀಗೆ ಮಾಡುವ ಯಾವ ಭರವಸೆಯೂ ಇಲ್ಲ, ಯಾಕೆಂದರೆ ಬಹಳ ಪಾಪ ಮಾಡಿ ವಿವಿಧ ರೀತಿಯ ಮಾಯಾಚಾರಮಾಡಿ ಧನ ಗಳಿಸಿದ್ದರೆ, ಅದನ್ನು ಸಂಗ್ರಹಿಸಿದ್ದರೆ ಅದರಲ್ಲಿಯೂ ಅನೇಕ ವಿಘ್ನ ಅಂತರಾಯ, ಬಾಧೆಗಳು ಬರಬಹುದು ಆದ್ದರಿಂದ ಮುಂದಿನವರ ಯೋಚನೆ ಮಾಡಬೇಡಿ, ವರ್ತಮಾನವನ್ನು ನೋಡಿರಿ, ಪಾಪಗಳ ತ್ಯಾಗದಲ್ಲಿ ನಿಮ್ಮ ಸಮಯ ತೊಡಗಿಸಿರಿ, ಇದೇ ಎಲ್ಲಕ್ಕಿಂತ ದೊಡ್ಡ ಧರ್ಮವಾಗಿದೆ ಹೆಸರು, ಖ್ಯಾತಿ ಪೂಜೆಗಳಿಗೂ ಸಹ ಜನರು ಲೋಭ ಮಾಡುತ್ತಾರೆ. ಸಂಪತ್ತುಗಳಿಸಿ ಹೆಸರುಗಳಿಸೋಣವೆಂದು ಕೆಲವರು ಯೋಚಿಸುತ್ತಾರೆ. ದಾನಾದಿಗಳನ್ನು ಮಾಡೋಣ ಹಾಗಾದರೆ ಬಹಳಷ್ಟು ದಿನಗಳವರೆಗೆ ಹೆಸರು ಇರುತ್ತದೆ ಎಂದು ಭಾವಿಸುತ್ತಾರೆ. ಆದರೆ ನೋಡಿ ಈ ಹೆಸರಿನ ಲೋಭದಲ್ಲಿ ಎಷ್ಟೊ ಬಾರಿ ಅದೆಷ್ಟು ಜಗಳಗಳಾಗಿ ಬಿಡುತ್ತವೆ. ಕಷಾಯಗಳು ಹೆಚ್ಚಾಗುತ್ತವೆ. ದಾನ ಮಾಡಿ ತ್ಯಾಗ ಮಾಡಿದ್ದೀರಾ, ಹಣವನ್ನು ಕೊಟ್ಟಿರುವಿರಿ ಆದರೆ ಒಂದು ವೇಳೆ ನಿಮ್ಮ ಮನಸ್ಸಿನ ಪ್ರಕಾರ ಹೆಸರು ಬರೆಯದಿದ್ದರೆ ಇನ್ನುವರೆಗೆ ನಮ್ಮ ಹೆಸರು ಬರೆಸಿಲ್ಲವೆಂದು, ಹೆಸರಿನ ಪಟ್ಟಿಯನ್ನು ಇನ್ನೂವರೆಗೆ

ಯಾಕೆ ಹಾಕಿಸಿಲ್ಲ? ಹಾಕಿಸಿದ್ದರೂ ಇದನ್ನು ಇಲ್ಲಿ ಯಾಕೆ ಹಾಕಿಸಿದ್ದೀರಿ ಮೇಲೆ ಹಾಕಬೇಕಾಗಿದ್ದಿತು. ನೀವು ಕೆಳಗೆ ಹಾಕಿ ಬಿಟ್ಟಿದ್ದೀರಾ, ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬರೆಸ ಬೇಕಾಗಿದ್ದಿತು. ನೀವು ಚಿಕ್ಕ ಅಕ್ಷರಗಳಲ್ಲಿ ಬರೆಸಿ ಬಿಟ್ಟಿದ್ದೀರಾ, ಹೀಗೆ ಆಗುತ್ತದಲ್ಲವೇ ಈಗ ನೋಡಿ ಧನದ ತ್ಯಾಗ ಮಾಡಿದ್ದೀರಾ. ಆದರೆ ಹೆಸರಿನ ಲೋಭವನ್ನು ಬಿಡಲಿಲ್ಲ ಹಾಗೂ ಹೆಸರಿನ ಲೋಭವಂತೂ ಅನೇಕ ವಿದ್ಯೆಗಳಿಂದ ಕೂಡಿರುತ್ತದೆ. ಪಾಪಗಳ ವರ್ಣನೆ ಮಾಡುವುದು ಬಹಳ ಕಠಿಣವಿದೆ. ಆದರೆ ಧರ್ಮದ ವರ್ಣನೆ ಸರಳವಿದೆ, ಹೆಸರು, ಸಮ್ಮಾನವನ್ನು ಬಯಸುವುದು ಸಹ ಒಂದು ಲೋಭ ಕಷಾಯವಿದೆ. ಅದು ನಮ್ಮನ್ನು .ಶೌಚಧರ್ಮದಿಂದ ದೂರವಿಡುತ್ತದೆ. ನಾವು ಅನೇಕ ಪ್ರಕಾರಗಳಿಂದ ತಿಳಿದಾಗ ನಮ್ಮ ಮನಸ್ಸು ಧರ್ಮದ ಕಡೆಗೆ ಬರುತ್ತದೆ. ವಿವಿಧ ರೀತಿಯ ಜಾಹೀರಾತುಗಳನ್ನು ಮಾಡಿದಂತೆ ಜನರಿಗೆ ಅನೇಕ ರೀತಿಯಲ್ಲಿ ಹೇಳಬೇಕಾಗುತ್ತದೆ. ಆಗ ಜನರ ಮನಸ್ಸು ಆಯಿತು, ತಿಳಿಯಿತು, ಈಗ ಮನದಟ್ಟಾಯಿತು ಎಂದು ಧರ್ಮದ ಕಡೆಗೆ ಬರುತ್ತಾರೆ. ಜೈನಾಗಮ ಗ್ರಂಥಗಳಲ್ಲಿ ಆಚಾರ್ಯರು ಹೀಗೆ ಹೇಳಿದ್ದಾರೆ–

**ಅಣ ಥೋವಂ ವಣಥೋವಂ ಅಗ್ಗೀ ಥೋವಂ ಕಸಾಯಥೋವಂ ಚ।**
**ಣ ಹು ಮೇ ವೀಸ ಸಿಯವ್ವಂ ಥೋವಂ ಪಿ ಹು ತೇ ಬಹುಂ ಹೋಈ॥120॥ (ಆ.ನಿ.)**

ಅರ್ಥಾತ್ ಋಣವನ್ನು ಸ್ವಲ್ಪ, ಗಾಯವನ್ನು ಸ್ವಲ್ಪ, ಬೆಂಕಿಯನ್ನು ಸ್ವಲ್ಪ ಹಾಗೂ ಕಷಾಯವನ್ನು ಅಲ್ಪವೆಂದು ತಿಳಿದು ನಿಶ್ಚಿಂತರಾಗಿ ಕುಳಿತುಕೊಳ್ಳಬಾರದು ಯಾಕೆಂದರೆ ಈ ಸ್ವಲ್ಪ ಸ್ವಲ್ಪವೇ ಹೆಚ್ಚಿ ಬಹಳ ಆಗಿ ಬಿಡುತ್ತದೆ.

ತಾವು ಯಾರಿಂದಲಾದರೂ ಸಾಲ ಪಡೆದಿದ್ದರೆ, ಈ ಸಾಲವೇನು ಸ್ವಲ್ಪವಿದೆ ತೀರಿಸಿದರಾಯಿತೆಂದು ಉದಾಸೀನರಾಗಬಾರದು, ಉದಾಸೀನ ತೋರಿದರೆ ಅದು ಕ್ರಮೇಣವಾಗಿ ಹೆಚ್ಚುತ್ತಾ ಸಾಗಿ ಅದನ್ನು ಜೀವನ ಪರ್ಯಂತ್ ತೀರಿಸಿದರೂ ಆ ಸಾಲ ಮುಗಿಯುವುದಿಲ್ಲವೆಂದು ಆಚಾರ್ಯರು ಹೇಳುತ್ತಾರೆ. ಈ ಮಾತನ್ನು ಸಾಲ ಪಡೆಯುವವರು ಹಾಗೂ ನೀಡುವವರು ಚೆನ್ನಾಗಿ ತಿಳಿದಿದ್ದಾರೆ. ಹಾಗೆಯೇ ಗಾಯವಾಗಿದ್ದರೆ ಅದೇ ಎಷ್ಟೇ ಚಿಕ್ಕದಾಗಿದ್ದರೂ ನೀವು ಅದರ ಕಡೆ ಗಮನ ನೀಡದಿದ್ದರೆ ಒಂದು ದಿನ ಅದು ಆಳವಾದ ಗಾಯವಾಗಿಬಿಡುತ್ತದೆ. ಅಗ್ನಿಯ ಒಂದು ಕಿಡಿಯಾದರೂ ಸರಿ ಅದು ಏನನ್ನಾದರೂ ಮಾಡಿ ಬಿಡಬಹುದು. ಅದು ಜ್ವಾಲೆಯಾಗಿ ಎಲ್ಲವನ್ನು ಸುಟ್ಟು ಬೂದಿ ಮಾಡುವ ಸಾಮಾರ್ಥ್ಯ ಅದಕ್ಕಿದೆ. ಹೀಗೆಯೇ ಕಷಾಯದ ಪರಿಣಿತಿಯೂ ಇದೆ. ಸ್ವಲ್ಪ ಕಷಾಯವು ಸಹ ವಿನಾಶ ಮಡುವುದರಲ್ಲಿ ಸಾಮಾರ್ಥ್ಯ ಹೊಂದಿದೆ. ಸಮಯಸಾರ ಗ್ರಂಥದಲ್ಲಿ ಉದಾಹರಣೆ ಕೊಡುತ್ತಾ ಒಂದು ಅಮೃತಮಯ ಲಾಡುವಿನಲ್ಲಿ ಒಂದು ಸಾಸುವೆ ಕಾಳಿನಷ್ಟು ವಿಷದ ಅಂಶವಿದ್ದರೂ ಲಾಡು ಸ್ವೀಕರಿಸಲು ಅರ್ಹವೇ? ಇಲ್ಲ ಆ ಲಾಡು ಗ್ರಾಹ್ಯವಲ್ಲ, ಸಾವಿನ ಸಂದೇಶವಿದೆ, ಅಮೃತಮಯ ಲಾಡುವಿನಲ್ಲಿ ಒಂದು ಅಂಶ ವಿಷವು ಸಹ ಘಾತಕವಾಗಿದೆ ಎಂದು ಹೇಳಿದ್ದಾರೆ ಅದು ಘಾತಕವೇ ಆಗುತ್ತದೆ. ಲೋಭ ಪರಿಗ್ರಹವಾಗಿದೆ. ಆದ್ದರಿಂದ ಸಂಪೂರ್ಣ ಪರಿಗ್ರಹ ಹಾಗೂ ಶರೀರ ಮಟ್ಟವನ್ನು ಸಹ ಪರಿತ್ಯಾಗ ಮಾಡುವುದು ಉತ್ತಮ ಶೌಚವಾಗಿದೆ. ಉತ್ತಮ ಶೌಚಧರ್ಮವು ಅಖಂಡವಾಗಿದೆ, ಅಭಿನ್ನವಾಗಿದೆ. ಇದರಲ್ಲಿ ಮನಸ್ಸು ಶುದ್ಧವಾಗುತ್ತದೆ ಹಾಗೂ ಇದು ಲೋಭವನ್ನು ನಾಶ ಮಾಡುತ್ತದೆ ನಿರ್ಲೋಭತೆಯಿಂದ ಆತ್ಮನಲ್ಲಿ ದೊಡ್ಡ ಮಹಾನತೆ ಪ್ರಾಪ್ತವಾಗುತ್ತದೆ. ಕಾತಂತ್ರ ರೂಪಮಾಲಾದಲ್ಲಿ ಹೀಗೆ ಹೇಳಿದ್ದಾರೆ–

**ಶುಚಿ ಭೂಮಿ ಗತಂ ತೋಯಂ ಶುಚಿರ್ನಾರಿ ಪತಿವ್ರತಾ।**
**ಶುಚಿಧರ್ಮ ಪರೋ ರಾಜಾ ಬ್ರಹ್ಮಚಾರಿ ಸದಾ ಶುಚಿ॥**

ಭೂಮಿಯೊಳಗೆ ಹೋದ ನೀರು, ಶೀಲವಾನ ಪತಿವ್ರತಾ ನಾರೀ, ಧರ್ಮ ನಿಷ್ಠ ರಾಜಾ ಹಾಗೂ ಕಾಮವಾಸನಾ ತ್ಯಾಗಿ ಬ್ರಹ್ಮಚಾರಿ ಇವರು ಸದಾಕಾಲ ಪವಿತ್ರರು ಎಂದು ಹೇಳಲಾಗಿದೆ.

ನಿರ್ಲೋಭಿಯಾದ ರಾಮನು ಲಂಕೆಯನ್ನು ಗೆದ್ದ ನಂತರವೂ ಅದರ ಮೇಲೆ ಮೋಹ ಮಾಡದೇ ತನ್ನ ರಾಜ್ಯಕ್ಕೆ ಹಿಂದಿರುಗಿದ ಹಾಗೂ ಅತನ ಪವಿತ್ರ ಭಾವನೆಯಿಂದ ಆತನಿಗೆ ಅನಾಯಾಸವಾಗಿ ಅಯೋಧ್ಯೆಯ ರಾಜ್ಯ ದೊರೆಯಿತು, ಇದೇ ಶುಚಿತ್ವದ ಧರ್ಮದ ಫಲವಾಗಿದೆ. ನಿರ್ಲೋಭಿಯಾಗಿರುವವನು ಧನದ ಬಗ್ಗೆ ಆಕರ್ಷಣೆ ಇಲ್ಲದವನು ಮಾತ್ರ ಲೋಭವನ್ನು ತ್ಯಾಗ ಮಡುತ್ತಾನೆ. ಲೋಭದ ಪರಿಧಿಯಲ್ಲಿ ವಿಷಯ ಸಂತುಷ್ಟಿ ಪಂಚೇಂದ್ರಿಯ ಸುಖಗಳ ಪೂರ್ತಿಗಾಗಿ ಸಮಸ್ತ ಸಾಧನೆಗಳು ಬರುತ್ತವೆ. ಲೋಭ ಕಷಾಯ ಆತ್ಮನಲ್ಲಿರುವ ವರೆಗೆ ನಾವು ಆತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಆಗುವುದಿಲ್ಲ. ಆತ್ಮನ ಶುಚಿತ್ವ ಲೋಭದ ಅಭಾವದಲ್ಲಾಗುತ್ತದೆ. ದೀಪವನ್ನು ಹಚ್ಚುವ ಮೊದಲು ಅದರ ಬತ್ತಿಯನ್ನು ಶುದ್ಧಮಾಡುವುದು ಅವಶ್ಯವಿದೆ ಎಣ್ಣೆ ಮತ್ತು ಪಾತ್ರೆಯ ಶುದ್ಧಿಯನ್ನೂ ಮಾಡುತ್ತಾರೆ ಹಾಗೆಯೇ, ಲೋಭ, ಮಮತ್ವ ಪರಿಗ್ರಹದ ನಿವಾರಣೆ, ಇಂದ್ರಿಯ ನಿಗ್ರಹ ಪೂರ್ವಕ ಮಾಡುತ್ತಾರೆ ಲೋಭ ಮಾಡಿದವರೆಲ್ಲರ ಪತನವಾಗಿದೆ ಆತ ರಾವಣನಿರಬಹುದು, ಕೌರವರಿರಬಹುದು, ಕಂಸನಿರಬಹುದು, ಪ್ರತಿನಾರಾಯಣ ರಾಜನಿರಬಹುದು ಅಥವಾ ವಿಖ್ಯಾತ ಶ್ರೇಷ್ಠಿ ಇರಬಹುದು ಅಥವಾ ಇನ್ನಿತರರೂ ಇರಬಹುದು, ಹೀಗೆಯೆ ಹೇಳಿದ್ದಾರೆ–

**ಉತ್ತಮ ಪಥಕೆ ಜೋ ಪಥಿಕ, ಯಶ ಕೇ ರಾಗೀ ಸಾಥ।**
**ಮಿಟತೆ ವೆ ಭೀ ಲೋಭಸೇ, ರಚ ಕುಚಕ್ರ ನಿಜ ಹಾಥ॥**

ದೃಷ್ಟಾಂತಗಳ ಮಾಧ್ಯಮದಿಂದ ನಾವು ಲೋಭದ ವಿಷಯದ ವಿಚಾರ ಮಾಡಬಹುದಾಗಿದೆ. ದೊಡ್ಡ ದೊಡ್ಡ ವೈಭವಶಾಲಿ ವ್ಯಕ್ತಿಗಳು ಸಹ ಈ ಸಂಸಾರದಿಂದ ವಿರಕ್ತರಾದರು. ಅಪಾರ ವೈಭವವಿದ್ದ, ಏನೂ ಕಡಿಮೆ ಇಲ್ಲದ, ಆತನ ಅನೇಕ ಪೀಳಿಗೆ ಕುಳಿತು ತಿನ್ನುವಷ್ಟು ಇರುವ ಒಬ್ಬ ಶ್ರೇಷ್ಠಿ ಇದ್ದನು, ಆದರೆ ಅವನಿಗೆ ಲೋಭವಿದ್ದಿತು, ಸಾಕಷ್ಟು ಸಂಪಾದಿಸಬೇಕು ಮತ್ತು ಸಂಪಾದಿಸಿ ತನ್ನ ಬಳಿ ಇಟ್ಟುಕೊಳ್ಳಬೇಕು, ನಮ್ಮ ಅನೇಕ ಪೀಳಿಗೆಗಳಿಂದಲಾದರೂ ಹೆಸರು ದೊರೆಯುತ್ತದೆ–ಈ ವ್ಯಕ್ತಿಯ ಬಳಿ ಅಷ್ಟೊಂದು ಸಂಪತ್ತು, ದೊಡ್ಡ–ದೊಡ್ಡ ಕಟ್ಟಡಗಳು, ದೊಡ್ಡ ದೊಡ್ಡ ಖಜಾನೆ ಇತ್ಯಾದಿಗಳಿವೆ. ಆತನ ವಂಶಸ್ಥರು ಶ್ರೀಮಂತರು–ಹೀಗೆ ಬಯಸುವುದು ಸಹ ಲೋಭವಾಗಿದೆ. ನಮಗೆ ಹೆಸರು ಬರುವುದೆಂಬ ಹೆಸರಿನ ಲೋಭವಿದ್ದಿತು. ಆದ್ದರಿಂದ ಆತನು ವಿದೇಶಕ್ಕೆ ತೆರಳುವ ಯೋಚನೆ ರೂಪಿಸಿದ ಮನೆಯಲ್ಲಿ ಎಲ್ಲರೊಂದಿಗೆ ಚರ್ಚೆ ಮಾಡಿದ. ಎಲ್ಲರೂ ಒಕ್ಕೊರಲಿನಿಂದ ವಿದೇಶಕ್ಕೆ ಹೋಗುವುದನ್ನು ವಿರೋಧಿಸಿದರು. ಎಲ್ಲಿ ಏನು ಮಾಡಲು ಹೋಗುತ್ತಿದ್ದಿರಿ, ಇಷ್ಟೊಂದು ಸಂಪತ್ತು ಇದೆ. ಎಲ್ಲಿ ಏನು ಮಡಲು ಹೊರಟಿದ್ದೀರಿ? ತಮ್ಮ ಬಳಿ ಇಷ್ಟೊಂದು ಹಣವಿದೆ. ಈಗ ಏನು ವ್ಯಾಪಾರ ಮಾಡಬೇಕಿಲ್ಲ, ಏನು ಗಳಿಸ ಬೇಕಾಗಿಲ್ಲ ಗಳಿಸಿರದಿದ್ದರು ಸಹ ಸಂಪೂರ್ಣ ಜೀವನವನ್ನು ಸುಖಮಯವಾಗಿ ಕಳೆಯುತ್ತದೆ. ಒಂದು ವೇಳೆ ಧರ್ಮದಲ್ಲಿಯೂ ಸಹ ಮೂರು ಭಾಗಗಳನ್ನು ನೀಡಿದರು ಏನೂ ಕಡಿಮೆಯಾಗುವುದಿಲ್ಲ. ನೀವು ಯಾಕೆ ಹೋಗುತ್ತಿದ್ದಿರಾ? ಇಲ್ಲೆ ಇದ್ದುಕೊಂಡು ಧರ್ಮದಲ್ಲಿ ಜೀವನ ಕಳೆಯಿರಿ, ಇದಕ್ಕೆ ಶ್ರೇಷ್ಠಿಯು–ಇಲ್ಲ ನನಗೆ ಈಗ ವ್ಯಾಪಾರ ಮಡುವುದು

ಅವಶ್ಯವಿದೆ. ದೊಡ್ಡ ದೊಡ್ಡ ಶ್ರೀಮಂತರು, ರಾಜರು, ಮಹಾರಾಜರು ಆಗಿ ಹೋಗಿದ್ದಾರೆ, ಕಡಿಮೆ ಎಂದರೂ ಅವರ ಸಮನನಾಗಬೇಕು. ಜೀವನ ದೊರಕಿರುವುದರಿಂದ ಏನಾದರೂ ಮಾಡುತ್ತೇನೆ– ಎಂದು ಹೇಳಿದರು. ಬಹಳಷ್ಟು ತಿಳಿಸಿ ಹೇಳಿದರೂ ಏನು ಮಾಡುವುದು "ಮತಿ ಹೇಗಿದೆಯೋ ಹಾಗೇ ಗತಿ".

ವಿದೇಶಯಾತ್ರೆಗಾಗಿ ಸಮುದ್ರದ ಜಲಮಾರ್ಗದಿಂದ ಯಾತ್ರೆ ಪ್ರಾರಂಭಿಸುತ್ತಾರೆ. ಈಗ ಹೋಗುತ್ತಾ ಹೋಗುತ್ತಾ ಪರೀಕ್ಷೆ ಪ್ರಾರಂಭವಾಯಿತು, ಪುಣ್ಯ ಪಾಪದ ಪರೀಕ್ಷೆ ನಡೆಯುತ್ತಲೇ ಇರುತ್ತವೆ. ಎಲ್ಲರ ಜೀವನದಲ್ಲಿ ಆಗುತ್ತಿರುತ್ತವೆ. ಅನೇಕ ಆಶೆಗಳು, ಆಕಾಂಕ್ಷೆಗಳು ಆತನ ಹೃದಯದಲ್ಲಿದ್ದವು. ಆದರೆ ಸಮಯದ ಗತಿ ಆತನಿಗೆ ಏನನ್ನು ಕಲಿಸಲು ಕಾದು ಕುಳಿತಿದೆ ಎನ್ನುವುದು ಆತನಿಗೇನು ಗೊತ್ತು. ದೂರದ ಆಕಾಶದಲ್ಲಿ ಸಾಂಯ್ ಸಾಂಯ್ ಎನ್ನುವ ಭಯಂಕರ ಧ್ವನಿ ಬರತೊಡಗಿತು. ಅದು ಹೆಚ್ಚಾಗುತ್ತ ಕೇಳ ತೊಡಗಿತು. ಆತ ಗಾಬರಿಯಾದ ಏನದು? ಈಗ ಆತ ಸಮುದ್ರದ ಮಧ್ಯದಲ್ಲಿದ್ದ ಹಾಗೂ ಬಿರುಗಾಳಿ ತಲೆ ಮೇಲೆಯೇ ಬಂದಿತು, ಜೋರಾಗಿ ಬಿರುಗಾಳಿ ಬೀಸುವ ಸಂಕೇತವನ್ನು ಜಲಯಾನ ಮಾಡಿಸುತ್ತಿದ್ದರು–ಈಗ ಬಿರುಗಾಳಿ ಈಗ ಸಂಭವಿಸಲಿದೆ, ಏನನ್ನು ಹೇಳಲಾಗದು! ಏನಾಗುವುದೋ? ಬದುಕುವುದು ಕಠಿಣವಿದೆ ಆದ್ದರಿಂದ ಎಲ್ಲರೂ ಸತರ್ಕರಾಗಿ ನಿಮ್ಮ ನಿಮ್ಮ ಇಷ್ಟ ದೇವತೆಯನ್ನು ಸ್ಮರಣೆ ಮಾಡಿಕೊಳ್ಳಿ, ಅದರ ಹೊರ್ತಾಗಿ ಬೇರೆ ಆಸರೆ ಇಲ್ಲ ಎಂದು ಎಚ್ಚರಿಸಿದರು, ಬಿರುಗಾಳಿಯ ವೇಗ ಸಮುದ್ರದ ಸ್ಥಾನವನ್ನೇ ಬೇರೆಡೆ ಎತ್ತಿ ಹೋಗುವಂತಿದ್ದಿತು. ಸಮುದ್ರಕ್ಕೆ ತನ್ನ ಅಭಿಮನದ ಮೇಲೆ ಇಷ್ಟೊಂದು ದೊಡ್ಡ ಆಘಾತವನ್ನು ಎಂದಿಗೂ ಕಂಡಿರಲಿಲ್ಲ. ಅದು ಕೂಡಲೇ ಗರ್ಜಿಸಿ ಮೇಲೆರಿತು, ಪೂಕರಿಸ ತೊಡಗಿತು ಹಾಗೂ ಅಲ್ಲೋಲ ಕಲ್ಲೋಲ ಮಾಡಿ ವಾಯು ಮಂಡಳಿಗೆ ಅಪ್ಪಳಿಸತೊಡಗಿತು. ದಿಕ್ಕುಗಳಲ್ಲಿ ಭಯಂಕರ ಗರ್ಜನೆಗಳು ಆಗ ತೊಡಗಿದವು. ಅರೆ ಇದೇನಾಯಿತು, ಎಲ್ಲರೂ ಹೆದರತೊಡಗಿದರು ಕಣ್ಣುಗಳಲ್ಲಿ ನೀರು ಹರಿಯ ತೊಡಗಿತು, ಅನೇಕರು ನಡುಗತೊಡಗಿದರು ಮತ್ತೆ ಕೆಲವರು ದೇವರ ಸ್ಮರಣೆ ಮಾಡತೊಡಗಿದರು, ಕೆಲವರು ಣಮೋಕಾರ ಮಂತ್ರ ಹೇಳತೊಡಗಿದರು. ಎಲ್ಲರೂ ತಮ್ಮ ತಮ್ಮ ಇಷ್ಟ ದೇವರನ್ನು ಸ್ಮರಿಸ ತೊಡಗಿದರು. ಮೇಘರಾಜನು ತನ್ನ ಪ್ರಕೋಪವನ್ನು ತೋರತೊಡಗಿದ. ಬಿರುಗಾಳಿ ಮಳೆಯ ಮಧ್ಯ ಬಿರುಗಾಳಿ ನಿಲ್ಲಲಿಲ್ಲ. ಸಂಪೂರ್ಣ ಹಡಗು ಅಲ್ಲಾಡಿಸುವ, ಆಘಾತವಾಗುವಷ್ಟು ಬಿರುಗಾಳಿ ಮುಂದೆ ಸಾಗಿತು, ಹಡಗಿನಲ್ಲಿ ನೀರು ತುಂಬಿತು. ಸಮುದ್ರದ ಒಂದು ವಿಕರಾಳ ತರಂಗವೆದ್ದಾಗ ಮತ್ತೆ ಹಡಗು ಜೋರಾಗಿ ಮೇಲೆ ನೆಗೆದು ಮತ್ತೆ ಕೆಳಗೆ ಬಿದ್ದು ತುಕುಡಿ ತುಕುಡಿಯಾಗಿ ಹರಡಿ ನೀರಿನಲ್ಲಿ ವಿಲುಪ್ತವಾಯಿತು. ಎಷ್ಟೋ ಜನ ಸಮುದ್ರದಲ್ಲಿ ಲೀನರಾಗಿ ಹೋದರು. ಅದರಲ್ಲಿ ಹೊರಟು ಹೋದರು. ಇಷ್ಟ ದೇವರನ್ನು ಸ್ಮರಣೆ ಮಾಡಿಕೊಂಡವರದು ತೀವ್ರ ಪಾಪ ಕರ್ಮದ ಉದಯವಿದ್ದಿತು. ಆದರೆ ಭಗವಂತನ ಹೆಸರು ಇಷ್ಟರಾದವರ ಸ್ಮರಣೆ ವ್ಯರ್ಥವಾಗುವುದಿಲ್ಲ. ಅವರು ಶ್ರದ್ಧಾ ಪೂರ್ವಕವಾಗಿ ಸ್ಮರಣೆ ಮಾಡಿದ್ದರೆ ಸ್ವಯಮೇವ ರಕ್ಷಣೆಯಾಗುತ್ತದೆ.

ಆ ಶ್ರೇಷ್ಠಿಯು ಮೂರ್ಛಿತನಾದನು, ಸಮುದ್ರದಲ್ಲಿ ಮುಳುಗಲಿಲ್ಲ, ತಾನು ಎಲ್ಲಿದ್ದೇನೆಂಬುದು ಆತನಿಗೂ ಗೊತ್ತಾಗಲಿಲ್ಲ. ಎರಡು ದಿನಗಳು ಕಳೆದ ನಂತರ ಸ್ವಲ್ಪ ಜ್ಞಾನ ಬಂದಾಗ ನೋಡಿದ ಅರೇ ಆತನೊಂದು ಮರದ ಪಟ್ಟಿಯ ಮೇಲಿರುವುದನ್ನು ತಿಳಿದನು. ಆತ ಹೆದರಿ ಬಿಟ್ಟನು. ಹೆದರಿದ ಆತ ಆ ಮರದ ಪಟ್ಟಿಯನ್ನು ಜೋರಾಗಿ ಹಿಡಿದುಕೊಂಡನು. ಸಮುದ್ರದಲ್ಲಿ ಅಲೆಗಳು

ಏಳುತ್ತಿದ್ದವು ಹಾಗೂ ತೀವ್ರ ಗತಿಯಿಂದ ಏಳುತ್ತಿದ್ದ ಅಲೆಗಳು ಆತನ್ನು ಸಮುದ್ರದ ದಂಡೆಯ ಕಡೆಗೆ ಒಯ್ಯುತ್ತಿದ್ದವು ಅರೇ! ಇದೇನಾಯಿತು? ಇದು ಣಮೋಕಾರ ಮಂತ್ರದ ಸ್ಮರಣೆಯ, ಭಗವಂತನ ಸ್ಮರಣೆಯ ಪರಿಣಾಮವೆಂದು ವಿಚಾರ ಮಾಡತೊಡಗಿದ, ಇಂತಹ ತೀವ್ರ ಕರ್ಮ ಬಂದಿತು ಆದರೆ ಆ ಕರ್ಮ ಹೇಗೆ ದೂರವಾಯಿತು, ಒಂದು ಆಸರೆ ದೊರಕಿತು ಹಾಗೂ ನಾನು ದಂಡೆಗೆ ಬಂದೆ. ಎಲ್ಲ ಜನರೂ ಹೀಗೆಯೇ ಮಾಡುತ್ತಾರೆ–ಜನರಿಗೆ ದುಃಖದ ಸಮಯ ಬಂದಾಗ ಭಗವಂತನ ಹೆಸರನ್ನು ಸ್ಮರಿಸುತ್ತಾರೆ. ಸುಖದ ಸಮಯದಲ್ಲಿ ಮರೆತುಬಿಡುತ್ತಾರೆ. ಆದ್ದರಿಂದ ಕವಿಯೊಬ್ಬರು ಸರಿಯಾಗಿಯೇ ಹೇಳಿದ್ದಾರೆ–

**ದುಃಖಮೇ ಸುಮಿರನ ಸಬಕರೇ, ಸುಖಮೇ ಕರೇಂ ನ ಕೋಯ।**
**ಜೋ ಸುಖಮೇ ಸುಮಿರನ ಕರೇ, ಸೋ ದುಃಖ ಕಾಯೇ ಕೊ ಹೊಯ್॥**

ದುಃಖ ಬಂದಾಗ ಎಲ್ಲರೂ ಭಗವಂತನ ಸ್ಮರಣೆ ಮಾಡುತ್ತಾರೆ, ಗುರುವಿನ ಬಳಿ ಓಡುತ್ತಾರೆ, ಚಮತ್ಕಾರ, ನಮಸ್ಕಾರ ಮಾಡುತ್ತಾರೆ ಮತ್ತೆ ಸುಖ ಬಂದಾಗ ಉಬ್ಬಿ ಬಿಡುತ್ತೇವೆ, ಮರೆತು ಬಿಡುತ್ತೇವೆ. ಚೆನ್ನಾಗಿ ತಿನ್ನಿ, ಕುಡಿಯಿರಿ, ಮಜಾಮಾಡಿ, ಅದನ್ನು ಮಾಡಿ, ಇದನ್ನು ಮಾಡಿ, ಸುಖವಾಗಿರಿ, ನೋಡಿಕೊಳ್ಳೋಣ, ನಾವೇನು ಪಾಪ ಮಾಡಿದ್ದೇವೇಯೇ ಪಾಪಿಗಳಾದವರು – ಪುಣ್ಯದ ಕಾರ್ಯ ಮಾಡುತ್ತಾರೆ. ನಾವಂತೂ ಬಹಳ ಪುಣ್ಯವಾನರಾಗಿದ್ದೇವೆ. ನೋಡಿ ಸಹೋದರರೇ ಅವರಿಗೆ ಪಾಪ, ಪುಣ್ಯಗಳ ಪರಿಭಾಷೆಯೇ ಗೊತ್ತಿಲ್ಲ, ಪುಣ್ಯವನ್ನು ಭೋಗಿಸುವಲ್ಲಿ ಪಾಪವಾಗುತ್ತದೆ. ಆದ್ದರಿಂದ ಯಾರು ಸುಖವಾಗಿರುವಾಗ ಭಗವಂತನನ್ನು ಮರೆಯುವುದಿಲ್ಲವೋ ಅವರಿಗೆ ದುಃಖ ಯಾಕೆ ಆಗುತ್ತದೆ ಎಂದು ಹೇಳುತ್ತಾರೆ. ಎಂದಿಗೂ ಪುಣ್ಯದ ಬಾಕಿ ಕಡಿಮೆಯಾಗುವುದೇ ಇಲ್ಲ. ಯಾವಾಗಲೂ ಪುಣ್ಯದಿಂದ ತುಂಬಿರುತ್ತಾರೆ. ಶ್ರೇಷ್ಠಿಯದು ಪುಣ್ಯೋದಯವಿದ್ದಿತು ಆದರೆ ಆತನ ಪುಣ್ಯ ಹೊಯ್ದಾಡ ತೊಡಗಿತು, ಭಗವಂತನ ಹೆಸರನ್ನ ಸ್ಮರಿಸಿದ್ದರಿಂದ ಸ್ವಲ್ಪ ಆಸರೆ ಸಿಕಿತು ರಕ್ಷಣೆಯಾಯಿತು. ಆದರೆ ಇನ್ನೂ ಬಹಳ ಪರೀಕ್ಷೆಗಳಿದ್ದವು. ಪರೀಕ್ಷೆ ಒಂದೇ ಬಾರಿಗೆ ಆಗುತ್ತದೆ. ಎಂದೇನೂ ಇಲ್ಲ.

ಶ್ರೇಷ್ಠಿಗೆ ನವ ಜೀವನ ದೊರಕಿತು ಆದರೆ ಆತನಿಗೆ ಇದು ಗೊತ್ತಾಗಲೇ ಇಲ್ಲ. ಎಲ್ಲಿಂದ ಬರುತ್ತಿದ್ದೇನೇ, ಎಲ್ಲಿಗೆ ಹೋಗಬೇಕಾಗಿದೆ, ಏನು ಮಾಡುತ್ತೇನೆ? ಎಲ್ಲವನ್ನು ಮರೆತು ಬಿಟ್ಟಿದ್ದನು ಅವನು ದಂಡೆಯ ಮೇಲೆ ಬಂದಾಗ ಆತನಿಗೆ ಏನೂ ಗೊತ್ತಿಲ್ಲ. ಯಾರಿಂದ ಸಹಾಯ ಪಡೆಯಬೇಕು, ಯಾರೂ ಕಾಣುತ್ತಿಲ್ಲ. ರಸ್ತೆಯೂ ಕಾಣುತ್ತಿಲ್ಲ. ದಟ್ಟವಾದ ಕಾಡಿದ್ದಿತು. ಮುಂದೆ–ಮುಂದೆ ಸಾಗುತ್ತಿದ್ದಂತೆ ಹಿಂದಿನಿಂದ ಒಂದು ಭಯಂಕರ ಚೀತ್ಕಾರ ಕೇಳಿಸಿತು. ಅರೇ! ಇದೇನು? ಆತನ ಮಾನಸಿಕ ಸ್ತಬ್ಧತೆ ಭಂಗವಾಯಿತು. ಹಿಂತಿರುಗಿ ನೋಡಿದ. ಒಂದು ದೊಡ್ಡ ಭಾರಿ ಶರೀರದ ಕಪ್ಪು ಪ್ರಾಣಿ ಸೊಂಡಿಲನ್ನು ಮೇಲೆ ಮಾಡಿ ಘೀಳಿಡುತ್ತಾ ಆತನ ಕಡೆಗೆ ಓಡುತ್ತಾ ಬರುತ್ತಿದ್ದಿತು. ಹೇ, ಪ್ರಭು! ರಕ್ಷಿಸು, ಅರೇ, ನಾನು ನನ್ನ ಒಳ್ಳೆಯ ದಿನಗಳಲ್ಲಿ ನಾನು ಪ್ರಭುವನ್ನು ಸ್ಮರಿಸಿಕೊಂಡಿದ್ದರೆ ಎಷ್ಟೋ ಚೆನ್ನಾಗಿದ್ದಿತು. ಈಗ ಆಗುವುದೇನು? ಇಲ್ಲಿ ಮತ್ತೆ ಯಾರೂ ಸಹಾಯಕರಿಲ್ಲವಲ್ಲ.

ಆ ಪ್ರಾಣಿಯನ್ನು ನೋಡಿ ಓಡಿ ಹೋಗುವುದೊಂದೆ ಮಾರ್ಗವಿದ್ದಿತು ಅಲ್ಲಿ ಶರಣ ಹೊಂದಲು ಬೇರೆ ಯಾರೂ ಇರಲಿಲ್ಲ. ಕಾಡಿನ ಮರಗಳ ಮಧ್ಯೆ ಆತ ಓಡಿದ ಓಡಿದ ಓಡುತ್ತಲೇ ಇದ್ದ. ಆ ಕಪ್ಪು ಪ್ರಾಣಿ ಹಿಂದೆ, ಹಿಂದೆ ಓಡಿ ಬರುತ್ತಲೇ ಇತ್ತು. ಓಡುತ್ತಾ–ಓಡುತ್ತಾ ಶ್ರೇಷ್ಠಿ ಭಗವಂತನ ಹೆಸರನ್ನು

ಹೇಳಿಕೊಂಡ, ಣಮೋಕಾರ ಮಂತ್ರ ಹೇಳಿಕೊಂಡ. ಆ ಪ್ರಾಣಿ ಆತನಿಗೆ ಅತಿ ಸಮೀಪವೇ ಬಂದಿತು. ಈಗ ಶ್ರೇಷ್ಠಿಯ ಧೈರ್ಯ ಉಡುಗುತ್ತಿತ್ತು. ಈಗ ಜೀವನ ಅಸಂಭವವಾಗಿದೆ ಎಂದು ಯೋಚಿಸಲು ತೊಡಗಿದ, ಆದರೆ ನೋಡಿ ಆತ ತನ್ನ ನಾಲಿಗೆಯಿಂದ ಪ್ರಭುವಿನ ಹೆಸರನ್ನು ನುಡಿಸಿದ್ದ ಅದು ನಿರರ್ಥಕವಾಗುವುದಿಲ್ಲ, ಆತನ ರಕ್ಷಣೆಯಾಯಿತು ಕೊನೆಗೆ ಆತನಿಗೆ ಆಶ್ರಯ ದೊರಕಿ ಬಿಟ್ಟಿತು. ಎದುರಿಗೆ ಒಂದು ವಟವೃಕ್ಷವಿದ್ದಿತು ಅದರ ಕೊಂಬೆಗಳು ಕೆಳಗೆ ನೇತಾಡುತ್ತಿದ್ದವು ಆತ ಪುನ: ಸಾಹಸ ಮಾಡಿ ಓಡಲು ಪ್ರಾರಂಭಿಸಿದ. ವೃಕ್ಷದ ಕೆಳಗೆ ನೇತಾಡುತ್ತಿದ್ದ ಎರಡು ಕೊಂಬೆಗಳನ್ನು ಹಿಡಿದು ಆತ ಬಹು ಬೇಗನೆ ಮರದ ಮೇಲೇರಿದ.

ಆ ಪ್ರಾಣಿಯು ಆತನು ಮರವನ್ನೇರುವುದನ್ನು ಕಂಡು ಅದರ ಪ್ರಕೋಪ ಇನ್ನೂ ಹೆಚ್ಚಾಯಿತು ಇದಂತೂ ಅದರ ಮಾನಹಾನಿಗೆ ಕಾರಣವಾಗಿದ್ದಿತು. ಈ ಮರವು ಆತನಿಗೆ ಆಶ್ರಯ ನೀಡಿದ್ದಿತು. ಈಗ ಅದು ಇಲ್ಲದಂತಾಗಿದ್ದಿತು. ಆ ಪ್ರಾಣಿಯು ತನ್ನ ಉದ್ದನೆಯ ಸೊಂಡಲಿನಿಂದ ಮರದ ಬುಡವನ್ನು ಹಿಡಿದು ಜೋರು-ಜೋರಾಗಿ ಅಲುಗಾಡಿಸತೊಡಗಿತು. ಶ್ರೇಷ್ಠಿಗಂತೂ ರಕ್ತ ಒಣಗಿತು. ಈಗ ನನ್ನನ್ನು ಉಳಿಸಲು ಯಾರೂ ಇಲ್ಲ. ಕೃಪೆ ಮಾಡು. ನನಗೆ ಹೋಗಲೇ ಬೇಕು? ಆತ ಮೇಲೆ ನೋಡಿದ, ಏನು ನೋಡಿದ ಯಾವ ಕೊಂಬೆಯನ್ನು ಆತ ಹಿಡಿದಿದ್ದನೋ, ಅದರ ಮೇಲೆ ಎರಡು ಇಲಿಗಳು-ಒಂದು ಬಿಳಿ ಇನ್ನೊಂದು ಕಪ್ಪು ಕುಳಿತ್ತಿದ್ದವು. ಅವು ಆ ಕೊಂಬೆಯನ್ನು ನಿರಂತರವಾಗಿ ತಮ್ಮ ಹಲ್ಲುಗಳಿಂದ ಕಡಿಯುತ್ತಲೇ ಇವೆ. ಶ್ರೇಷ್ಠಿಯು ಬಹಳ ಹೆದರಿದ ನನ್ನದೇನಾಗುತ್ತದೆ ಎಂದು ಯೋಚಿಸಿದ. ಹೆದರಿ ಕೆಳಗೆ ನೋಡಿದರೆ ಇದ್ದಂತಹ ಎಚ್ಚರಿಕೆಯು ಹಾರಿ ಹೋಯಿತು. ಆ ಕೊಂಬೆಯ ಕೆಳಗೆ ಒಂದು ದೊಡ್ಡ ಆಳವಾದ ತಗ್ಗು ಇದ್ದು ಅದರಲ್ಲಿ ಬಾಯ್ತೆರದ ವಿಕರಾಳ ದವಡೆಗಳ ಮಧ್ಯೆ ಉದ್ದ-ಉದ್ದನೆಯ ಭಯಂಕರ ನಾಲಿಗೆ ಹೊರಳಾಡುತ್ತಿದ್ದಿತು. ಕೆಂಪು-ಕೆಂಪು ಕಣ್ಣುಗಳಿಂದ ಮೇಲಿನ ಕಡೆಗೆ ನಾಲ್ಕು ಭಯಂಕರ ಹೆಬ್ಬಾವುಗಳು ಕೊಂಬೆ ಮುರಿದು ಆ ವ್ಯಕ್ತಿ ತನ್ನ ಗಂಟಲಿಗೆ ಆಹಾರವನ್ನೊದಿಗಿಸುತ್ತವೆ ಎಂದು ಪ್ರತಿಕ್ಷೆ ಮಾಡುವಂತಿದ್ದವು. ಆ ಹೆಬ್ಬಾವಿನ ಬಳಿ ಹೊಟ್ಟೆ ತುಂಬಿಕೊಳ್ಳಲು ಇದೊಂದೆ ಸಾಧನವಿದ್ದಂತಾಗಿದ್ದಿತು. ಇದೆಲ್ಲವನ್ನ ನೋಡಿ ಆ ಶ್ರೇಷ್ಠಿಯು ನಡುಗ ತೊಡಗಿದ ಒಂದು ಆನೆಯೂ ಮರವನ್ನು ಜೋರು-ಜೋರಾಗಿ ಸಮೂಲಾಗ್ರವಾಗಿ ಕಿತ್ತೆಸೆಯಲು ಮರವನ್ನು ಅಲುಗಾಡಿಸುತ್ತಿದ್ದಿತು.

ಪ್ರಭುವಿನ ಹೆಸರನ್ನು ಸ್ಮರಿಸಿಕೊಂಡಿರುವುದು ವ್ಯರ್ಥವಾಗುವುದಿಲ್ಲ. ಇಷ್ಟರಲ್ಲಿ ಒಬ್ಬ ವಿದ್ಯಾಧರನ ವಿಮಾನ ಅಲ್ಲಿಂದ ಹೊರಟಿತು. ಅದರಲ್ಲಿ ಕುಳಿತ್ತಿದ್ದ ವಿದ್ಯಾಧರನ ದೃಷ್ಟಿ ಶ್ರೇಷ್ಠಿಯ ಮೇಲೆ ಬಿದ್ದಿತು ಅರೇ ಇದೇನಾಗಿ ಬಿಟ್ಟಿದೆ? ಸ್ವಲ್ಪ ನೋಡೋಣ; ಈ ಗಿಡದಲ್ಲಿ ಈ ವ್ಯಕ್ತಿ ಹೀಗೆ ನೇತಾಡುತ್ತಿದ್ದಾನೆ ಹಾಗೂ ಈ ಪ್ರಾಣಿ ಮರವನ್ನು ಕಿತ್ತಿ ಬಿಸಾಡಿಬಿಡುತ್ತದೆ ಎನ್ನುವ ರೀತಿಯಲ್ಲಿ ಅಲುಗಾಡುಸುತ್ತಲಿದೆ. ಆ ಮರದಲ್ಲಿ ನೇತಾಡುತ್ತಿರುವ ವ್ಯಕ್ತಿಯ ಮೇಲ್ಭಾಗದ ಕೊಂಬೆಗೆಯಲ್ಲಿ ಎರಡು ಇಲಿಗಳು ಆ ಕೊಂಬೆಯನ್ನೇ ಕತ್ತರಿಸುತ್ತಲಿವೆ, ಅರೇ ಹೋಗಿ ಈತನಿಗೆ ಸಹಾಯ ಮಾಡೋಣ.

**'ಪರಸ್ಪರೋಪಗ್ರಹೋ ಜೀವಾನಾಮ್'** ಎಂದು ಆಗಮಗಳಲ್ಲಿ ಹೇಳಿದೆ-ಪರಸ್ಪರವಾಗಿ ಜೀವಗಳ ರಕ್ಷಣೆ ಮಾಡಬೇಕು ವಿದ್ಯಾಧರ ಹತ್ತಿರ ಬಂದು ಸಹೋದರಾ ಬಂದು ಬಿಡು, ನಾನು ನಿನಗೆ ಸಹಾಯ ಮತ್ತು ರಕ್ಷಣೆ ಮಾಡುತ್ತೇನೆ ಬೇಗನೆ ಬಾ ಎಂದು ಹೇಳಿದನು. ಆ ನೇತಾಡುವವನು ಪುಣ್ಯೋದಯ ಬಂದಿದೆ, ನಾನು ಣಮೋಕಾರ ಮಂತ್ರ ಓದಿದ್ದೇನು. ಈತ ನನ್ನ ಎದುರಿಗೆ

ಸಹಾಯ ಮಾಡಲು ಬಂದಿದ್ದಾನೆ. ಈಗ ನೋಡಿ ಪುಣ್ಯದ ಫಲ ದೊರೆಯುತ್ತದೆ. ಆದರೆ ಅನೇಕ ಬಾರಿ ನಾವು ಅದರ ದುರುಪಯೋಗ ಮಾಡುತ್ತೇವೆ. ವಿದ್ಯಾಧರ ಕರೆಯುತ್ತಾನೆ ಅನೇಕ ಬಾರಿ ಬಂದು ಬಿಡು, ಬೇಗನೆ ಬಂದು ಬಿಡು ನಾನು ಮಧ್ಯದಲ್ಲಿಯೇ ನಿಂತಿದ್ದೇನೆ, ನನಗೆ ಅಷ್ಟೊಂದು ಸಮಯವಿಲ್ಲ, ನಾನು ಇನ್ನೂ ದೀರ್ಘ ಪ್ರವಾಸ ಮಾಡಬೇಕಿದೆ ಮುಂದೆ ಹೋಗಬೇಕಾಗಿದೆ. ಮರಕ್ಕೆ ನೇತಾಡುವವ "ನಾನು ಬರುತ್ತಿದ್ದೇನೆ" ಎಂದು ಹೇಳುತ್ತಾನೆ. ಸರಿ ಇಷ್ಟರಲ್ಲಿ ಮತ್ತೊಂದು ಪರೀಕ್ಷೆಯಾಯಿತು. ಮರವನ್ನು ಆ ಪ್ರಾಣಿ ಜೋರು ಜೋರಾಗಿ ಅಲ್ಲಾಡಿಸುತ್ತಿದ್ದಿತು. ಮರವು ಅಲುಗಾಡಿದ್ದರಿಂದ ಅದರ ಮೇಲೆ ಕೊಂಬೆಯಲ್ಲಿ ಇದ್ದ ಜೇನು ನೋಣದ ಗೂಡು ಸ್ವಲ್ಪ ಅಲುಗಾಡಿ ಆ ವ್ಯಕ್ತಿಯ ಮೇಲೆ ಜೇನಿನ ಕೆಲವು ಬಿಂದುಗಳು ಬಿದ್ದವು. ತಲೆ ಮೇಲೆ ಏನು ಬಿದ್ದಿತು ಎಂದು ಆತ ಹಾಗೆಯೇ ಮೇಲೆ ನೋಡಿದಾಗ ನೇರವಾಗಿ ಆತನ ಬಾಯಿಯಲ್ಲಿ ಹನಿ ಬಿದ್ದಿತು. ಜೀವನದಲ್ಲಿ ಮೊದಲ ಸಲ, ಇಷ್ಟೊಂದು ಸಿಹಿ, ಆನಂದ ಉಂಟಾಯಿತು. ಇದೇನಿದು? ಬಹಳ ಸಿಹಿಯಾದ ವಸ್ತುವಿದೆ, ಮತ್ತೊಂದು ಹನಿ.. ಬರಲಿ, ಮತ್ತೊಂದು ಹನಿ ಬರಲಿ, ಆತ ಅದರ ಪ್ರತೀಕ್ಷೆಯಲ್ಲಿಯೇ ಸಕಲ ಭಯ ಸಂಕಟಗಳನ್ನು ಮರೆತು ಬಿಟ್ಟನು ಜೇನು ಹನಿಯ ಒಂದೊಂದು ಬಿಂದುವಿನಲ್ಲಿ ಮಗ್ನನಾದನು.

ಮರವನ್ನು ಜೋರು–ಜೋರಾಗಿ ಅಲುಗಾಡಿಸಲಾಗುತ್ತಿದ್ದಿತು. ಹೆಚ್ಚು ಅಲುಗಾಡತೊಡಗಿತು ಅದರಿಂದಾಗಿ ಜೇನು ಹುಳಗಳಿಗೆ ನೆಮ್ಮದಿ ಭಂಗವಾಯಿತು. ಗುಂಜಾರವ ಮಾಡುತ್ತಾ ಝೇಂಕಾರ ಮಾಡುತ್ತ ಅವು ಹಾರಿ ನಾಲ್ಕು ಕಡೆಯಿಂದ ಶ್ರೇಷ್ಠಿಯನ್ನು ಮುತ್ತಿದವು ಆತನಿಗೆ ಕೂಡಲೇ ಗಾಬರಿಯುಂಟಾಗಿ ಇದೇನಿದು? ಜೇನುಹುಳಗಳು ಕಡಿದಾಗ ಮೈಯಲ್ಲಿ ಚುಚ್ಚಿದ ಅದರ ಮುಳ್ಳುಗಳ ಪೀಡೆಯಿಂದ ವ್ಯಾಕುಲನಾದಾಗ ಒಂದು ಚೀತ್ಕಾರ ಆತನ ಬಾಯಿಂದ ಹೊರಟು ಹೇ ಪ್ರಭು! ಎಂದಾಗ ಮತ್ತೊಂದು ಜೇನು ಹನಿ ಬಾಯಿಯಲ್ಲಿ ಮತ್ತೆ ಬಿದ್ದಿತು. ಆಗ ಆತನಿಗೆ ಆದ ಸುಖ ಅತ್ಯಂತ ದೊಡ್ಡ ಸುಖವೆನಿಸಿತು. ಆ ಕಡೆ ವಿದ್ಯಾಧರ ಕರೆಯುತ್ತಿದ್ದಾನೆ. ಸಹೋದರ ಎಲ್ಲಿ ಮುಳುಗಿ ಹೋದೆ ಬಂದು ಬಿಡು. ಹಾ ಆಯಿತು ಬರುತ್ತಿದ್ದೇನೆ, ಆಯಿತು ಒಂದು ಹನಿ ತೆಗೆದುಕೊಂಡು ಬರುತ್ತಿದ್ದೇನೆ, ಎಲ್ಲವನ್ನು ಮರೆತು ಬಿಟ್ಟ ಆ ಮಧುವಿನ ಹನಿಯಲ್ಲಿ, ಆ ಹುಳುಗಳ ಕಚ್ಚುವಿಕೆಯನ್ನು ಮರೆತುಬಿಟ್ಟ, ಮರ ಬೀಳುತ್ತದೆ ಎನ್ನುವುದನ್ನು ಮರೆತುಬಿಟ್ಟ, ಕೊಂಬೆ ಮುರಿಯಲಿದೆ ಹಾಗೂ ಕೆಳಗೆ ನಾಲ್ಕು ಹೆಬ್ಬಾವು ಆತನ ಪ್ರತೀಕ್ಷೆ ಮಾಡುತ್ತಲಿವೆ, ಎಲ್ಲಿ ಯಾರ ಬಾಯಲ್ಲಿ ಹೋಗುತ್ತೇನೋ ಎನ್ನುವುದನ್ನು ಅ ಜೇನು ಹನಿಯ ಸುಖದಲ್ಲಿ ಮರೆತು ಬಿಟ್ಟನು. ವಿದ್ಯಾಧರನು ಹೇಳುತ್ತಲೇ ಇದ್ದನು. ಆಯಿತು ಬೇಗ ಬಾ ಇಲ್ಲವಾದಲ್ಲಿ ನಾನು ಹೋಗುತ್ತೇನೆ. ಸ್ವಲ್ಪ ತಾಳು, ಸ್ವಲ್ಪ ಸಮಯದ ನಂತರ ಬಂದೇ ಬಿಡುತ್ತೇನೆಂದು ಶ್ರೇಷ್ಠಿ ಹೇಳುತ್ತಾ ಇದ್ದನು. ಸರಿ ಸಹೋದರಾ ಇಷ್ಟಾದರೂ ನೀನು ಪ್ರಸನ್ನನಾಗಿದ್ದಿಯಾ, ಸಂತುಷ್ಟನಾಗಿದ್ದಿಯಾ. ಇದು ಬಹಳ ದೊಡ್ಡ ಆಶ್ಚರ್ಯ. ಸ್ವಲ್ಪ ವಿಚಾರ ಮಾಡಿ ಕಣ್ಣು ತೆರೆ ನಿನ್ನ ಪರಿಸ್ಥಿತಿ ತುಂಬಾ ದಯನೀಯವಾಗಿದೆ. ಒಂದು ಕ್ಷಣ ಸಹ ತಡ ಮಾಡಲು ಅವಕಾಶವಿಲ್ಲ. ಈ ಸಮಯದಲ್ಲಿ ನಾನು ನಿನ್ನ ರಕ್ಷಣೆ ಮಾಡಬಲ್ಲೆ ಎಚ್ಚರಗೊಳ್ಳಲು ಬೇಗನೆ ಮಾಡು, ಬಾ ನನ್ನ ಕೈಹಿಡಿ ಹಾಗೂ ಮೆಲ್ಲನೆ ಕೆಳಗೆ ಇಳಿದು ಬಾ–ಎಂದು ವಿದ್ಯಾಧರನು ಹೇಳಿದನು. ಆಗ ಶ್ರೇಷ್ಠಿಯು "ಆಯಿತು ಮತ್ತೊಂದು ಹನಿ ಈಗಲೇ ಹೊರಡುತ್ತೇನೆ". ಈ ಉತ್ತರದ ಹೊರ್ತಾಗಿ ಮತ್ತೇನೂ ಇರಲಿಲ್ಲ. ಆ ವಿದ್ಯಾಧರ ಹೊರಟು ಹೋದನು ಹಾಗೂ ಇಲ್ಲಿ ಆ ಕೊಂಬೆ ಮುರಿದು ಹೋಗುತ್ತದೆ ಹಾಗೂ ಜೇನು ಬಿಂದುವಿನ ಮಸ್ತಿಯನ್ನು ಹೃದಯದಲ್ಲಿ ಹೊಂದಿ

ಹೆಬ್ಬಾವಿನ ಮುಖದಲ್ಲಿ ಹೋಗಿ ಆತ ತನ್ನ ಜೀವನ ಲೀಲೆಯನ್ನು ಸಮಾಪ್ತಿ ಮಾಡಿಕೊಂಡನು. ಇದು ವಿಷಯಗಳ ಲೋಭ ಆತನ ಜೀವನವನ್ನು ಕೊನೆಗೊಳಿಸಿ ಬಿಡುತ್ತದೆ.

ಸಹೋದರರೇ ಇದು ಯಾರ ಕಥೆ ಇದೆ, ಆ ಶ್ರೇಷ್ಠಿಯ ಕಥೆಯೇ ಅಥವಾ ನಮ್ಮೆಲ್ಲರ ಆತ್ಮಕಥೆಯೇ? ಸಂಸಾರಿ ಪ್ರಾಣಿಗಳ ಕಥೆಯಾಗಿದೆ, ಇದು ಮೋಹಿ–ರಾಗಿಗಳ ಕಥೆಯಾಗಿದೆ. ಇದು ವಿಷಯಗಳ ಕಥೆಯಾಗಿದೆ ವಿಚಾರ ಮಾಡಿ ಈ ಪ್ರಾಣೀಯು ಲೋಭದ ವಶವಾಗಿ ಚತುರ್ಗತಿಯಲ್ಲಿ ವಿಷಯ ಪರಿಗ್ರಹ ಸಂಸರ್ಗ ಮಾಡುತ್ತದೆ. ಒಂದು ಗತಿಯಲ್ಲಿ ಹೋದ ಅಲ್ಲಿ ಸಂತುಷ್ಟನಾಗಲು ಆಗಲಿಲ್ಲ. ಇನ್ನೊಂದರಲ್ಲಿ ಹೋದ ಅಲ್ಲಿಯೂ ಶಾಂತಿ ಸಿಗಲಿಲ್ಲ. ಇದೇ ಪ್ರಕಾರ ಗತಿಗಳ ಗ್ರಾಸ, ಕಾಲಕ್ಕನುಗುಣವಾಗಿ ಆಗುತ್ತಲಿದೆ. ಇಂದ್ರಿಯ ಸುಖ–ಜೇನಿನ ಬಿಂದುವಿನ ಹಾಗೇ ನಿ:ಸಾರವಾಗಿದೆ. ಇದರಲ್ಲಿ ಸುಖವಿಲ್ಲ ಸುಖಾಭಾಸವಿದೆ. ಇದು ತೃಷೆಯನ್ನು ಹೆಚ್ಚುಸುವುದಾಗಿದೆ. ವಿವೇಕವನ್ನು ನಷ್ಟಮಾಡುವ ಇಂದ್ರಿಯ ವಿಷಯವಾಗಿದೆ. ಈ ಕಾರಣಗಳಿಂದಲೇ ನಮಗೆ ಹಿತಕಾರಿ ಸತ್ಪುರುಷರ ವಾಣಿ ಒಳ್ಳೆಯದೆನಿಸುವುದಿಲ್ಲ. ಸುಖದ ಅಸತ್ಯದ ಅಭ್ಯಾಸದಲ್ಲಿ ಇಂದಿನವರೆಗೆ ನಮ್ಮ ಹಿತವನ್ನು ಮಾಡಿಲ್ಲ. ಸತ್ಪುರುಷರ ಸಮಾಗಮ ದೊಡ್ಡ ಯೋಗದಿಂದ ಸಿಗುತ್ತಲಿದೆ. ಈ ಅವಕಾಶದ ಲಾಭ ಪಡೆದು ಜೀವನವನ್ನು ಸುಖಮಯ ಆನಂದಮಯ ಮಾಡಿಕೊಳ್ಳಿ. ಈ ಸಂಸಾರದಲ್ಲಿ ಎಲ್ಲವೂ ಲೋಭದ ವಶದಲ್ಲಿರುವ ಧನ–ಸಂಪತ್ತನ್ನು ಸಂಗ್ರಹಿಸುತ್ತೇವೆ. ಹಾಗೂ ಈ ಸಂಪತ್ತು ಸ್ಥಿರವಾಗಿ ಬಾರದು ಎಂದೂ ತಿಳಿದಿದ್ದೇನೆ. ಸಂಸಾರದಲ್ಲಿ ಧನ ಸಂಪತ್ತಿನ ಸ್ಥಾಯಿತ್ವವಿಲ್ಲವೆಂದಾಗ ಲೋಭವೇಕೆ? ನಾವು ಮಾರುಕಟ್ಟೆಯಿಂದ ಏನಾದರೂ ವಸ್ತುವನ್ನು ತರಿಸುವುದಾದರೆ ಅದರ ಗುಣಮಟ್ಟದ ಮೇಲೆ ಅವಶ್ಯವಾಗಿ ಗಮನ ನೀಡುತ್ತವೆ. ಹಾಗೆಯೇ ನಮ್ಮ ವಿಚಾರಗಳ ವಿಶುದ್ಧಿಯ ಮೇಲೆ ನಮ್ಮ ದೃಷ್ಟಿ ಹೋಗುತ್ತಿಲ್ಲ ಇದು ಬುದ್ಧಿವಂತ ಮನುಷ್ಯರ ವಿಷಯದಲ್ಲಿ ಬಹಳ ಆಶ್ಚರ್ಯದ ಮಾತಾಗಿದೆ. ಕರ್ಮಸಿದ್ಧಾಂತದ ದೃಷ್ಟಿಯಿಂದ ವಿಚಾರ ಮಾಡಿದಾಗ. ನಾಲ್ಕು ಕಷಾಯಗಳಲ್ಲಿ ಲೋಭದ ಕ್ಷಯ ಎಲ್ಲಕ್ಕಿಂತ ಕೊನೆಯಲ್ಲಿ ಆಗುತ್ತದೆ. ಗೊಮ್ಮಟಸಾರ ಜೀವಕಾಂಡದಲ್ಲಿ ನೇಮಿಚಂದ್ರಚಾರ್ಯರು ಪರಿಣಾಮಗಳ ಗುಣಗಳ ಆಧಾರದ ಮೇಲೆ ಲೋಭ ಕಷಾಯದ ನಾಲ್ಕು ಭೇದಗಳನ್ನು ಹೇಳಿದ್ದಾರೆ–

**ಕಿಮಿರಾಯಚಕ್ಕು ತಣು ಮಲ ಹರಿದ್ಧ ರಾಏಣ ಸರಸಏ ಲೋಹೋ!**
**ಣಾರಯ ತಿರಕ್ಖ ಮಾಣುಸ ದೇವೇ ಸುಪ್ಪಾಯವೋ ಕಮಸೋ!!287!!**

ಕೃಮಿ ರಾಗ(ಕಿರಮಚ)ಒಂದು ವಿಶೇಷ ಪ್ರಕಾರದ ಬಣ್ಣವಾಗಿದ್ದು ಅದು ವಸ್ತ್ರ ಹರಿದು ಹೋದರೂ ಸಹ ಬಿಡುವುದಿಲ್ಲ. ಇದೇ ಪ್ರಕಾರ ಅನಂತಾನುಬಂಧಿ ಲೋಭವಿದೆ. ಇದು ಒಂದು ಸಾರಿ ಅಂಟಿಕೊಂಡರೆ ಅಂಟಿಕೊಂಡೇ ಇರುತ್ತದೆ. ಇದು ಭವ ಭವಾಂತರದವರೆಗೂ ತನ್ನ ಸಂಸ್ಕಾರವನ್ನು ತೆಗೆದುಕೊಂಡು ಬರುತ್ತದೆ. ಆದ್ದರಿಂದ ಶಾಸ್ತ್ರಗಳಲ್ಲಿ ಇದಕ್ಕೆ ಕೃಮಿರಾಗ ಅಥವಾ ಕಿರಮಚ ಎಂಬ ಹೆಸರು ನೀಡಲಾಗಿದೆ. ಇದು ಪಕ್ಕಾ ಬಣ್ಣವಾಗಿದ್ದು ಬಟ್ಟೆ ಹರಿದು ಹೋದರು ಅದರ ಬಣ್ಣ ಹೋಗುವುದಿಲ್ಲ. ಹಾಗೆಯೇ ಅನಂತಾನುಬಂಧಿ ಲೋಭ ಕಷಾಯವಿರುತ್ತದೆ. ಅದನ್ನು ಹೊಂದಿರುವ ವ್ಯಕ್ತಿಯೊಳಗೆ ಧನ, ಸಂಪತ್ತು, ವಿಷಯ ಭೋಗಗಳ ಬಗ್ಗೆ ಅತ್ಯಧಿಕ ಮೂರ್ಛಾ(ಆಸಕ್ತಿ)ಇರುತ್ತದೆ. ಹಾಗೂ ಪ್ರಾಣಿಯು ಬಹಳ ಆತಂಭ ಪರಿಗ್ರಹ ಮಾಡುತ್ತದೆ. ಚಕ್ರಮಲ–ಗಾಡಿಯ ಚಕ್ರದಲ್ಲಿ ಹಾಕುವ ಎಣ್ಣೆಯ ಬಣ್ಣ–ಒಂದು ಸಾರಿ ತಗುಲಿದರೆ ಅದು ಸುಲಭವಾಗಿ ಬಿಡುವುದಿಲ್ಲ, ಅದನ್ನು ತೆಗೆಯಲು ಬಹಳ ಕಷ್ಟ ಪಡಬೇಕಾಗುತ್ತದೆ. ಹಾಗೆಯೇ ಅಪ್ರತ್ಯಾಖ್ಯಾನ ಲೋಭವು ಬಹಳ ಕಠಿಣವಾದ ಪರಿಶ್ರಮದಿಂದ ಹೊರಹಾಕಲ್ಪಡುತ್ತದೆ. ಕಠಿಣತೆ ಇರುತ್ತದೆ ಆದರೆ ತೆಗೆದು ಹಾಕಬಹುದಾಗಿದೆ. ಶರೀರ

ಮಲ–ಶರೀರಕ್ಕೆ ಹತ್ತಿದ ಮಲ (ಕೆಸರು) ವನ್ನು ತೆಗೆಯಲು ಸ್ವಲ್ಪ ಪ್ರಯತ್ನ ಮಾಡ ಬೇಕಾಗುತ್ತದೆ. ಈ ಮಲವನ್ನು ಕೈಯಿಂದ ಉಜ್ಜಿದಾಗ, ನೀರಿನಿಂದ ತೊಳೆದಾಗ ಬಿಟ್ಟು ಹೋಗುತ್ತದೆ. ಹಾಗೆಯೇ ಪ್ರತ್ಯಾಖ್ಯಾನ ಲೋಭವಿರುತ್ತದೆ. ಇದನ್ನು ದೂರ ಮಾಡಲು ಶರೀರದಲ್ಲಿ ಹತ್ತಿದ ಕೆಸರಿನ ಹಾಗೇ ಸ್ವಲ್ಪ ಪ್ರಯತ್ನಿಸ ಬೇಕಾಗುತ್ತದೆ. ಆಗ ಇದನ್ನು ದೂರ ಮಾಡಬಹುದಾಗಿದೆ. ಹರಿದ್ರವಸ್ತ್ರ–ಯಾವುದೇ ಬಟ್ಟೆಯಲ್ಲಿ ಒಂದು ವೇಳೆ ಅರಿಷಿಣ ಬಣ್ಣ ಹತ್ತಿದ್ದರೆ ಅದು ಗಾಳಿ ಮತ್ತು ಬಿಸಿಲಿನ ಸಂಪರ್ಕದಿಂದ ಬಣ್ಣ ಹೋಗಿ ಬಿಡುತ್ತದೆ, ಹಾಗೆಯೇ ಸಂಜ್ವಲನ ಲೋಭದ ಸ್ಥಿತಿ ಇರುತ್ತದೆ. ಈ ಉದಾಹರಣೆಗಳ ಪ್ರಕಾರ ಯಾರ ಲೋಭ ಕಷಾಯವಿರುತ್ತದೆ. ಅವರು ಕ್ರಮವಾಗಿ ನರಕ, ತರ್ಯಂಚ, ಮನುಷ್ಯ ಮತ್ತು ದೇವಗತಿಯನ್ನು ಪಡೆಯುತ್ತಾರೆ. ಧರ್ಮಭಾವನಾ ಶತಕದಲ್ಲಿ ಹೀಗೆ ಬರೆಯಲಾಗಿದೆ–

**ಪ್ರಕರ್ಷ ಲೋಭಿಯು ಬಹು ಆರಂಬಿ, ನರಕ ಆಯುವ ಬಂಧಿಸುವ**
**ಅಲ್ಪಾರಂಭಿ, ಅಲ್ಪ ಪರಿಗ್ರಹಿ, ಮನುಷ್ಯ ಗತಿಯ ಬಂಧಿಸುವ॥33॥**
**ಲೋಭಿಯ ಆಸೆಯೇ ಮಾಡುವುದು ಮನವ ಮಲೀನ।**
**ಅಮೃತದಂತಹ ಪುಣ್ಯ ನಾಶವು ತುಂಬುವುದು ಪಾಪದ ಚೀಲ॥**
**ಮಾಯಾ ಮಿಥ್ಯಾ, ನಿದಾನದಿಂದ ಆತ ತುಂಬನು ಶುಭ ಧರ್ಮ ಪುಣ್ಯವ।**
**ಪುಣ್ಯಾನುಬಂಧಿ ಪುಣ್ಯ ಜೊತೆಯಾದರೆ, ಸಮಹಿತ ಸಹ ಆತ ಧನ್ಯನಾಗುವ॥38॥**

ಸಹೋದರರೇ ಯಾರ ದೃಷ್ಟಿ ಎಷ್ಟು ಆತ್ಮವಿಶುದ್ಧಿಯ ಕಡೆಗೆ ಹೋಗುವುದೋ ಸಮ್ಯಗ್ ದರ್ಶನದ ರುಚಿ ಅಪೇಕ್ಷೆ ಹೆಚ್ಚಾಗುವುದು, ನಿರ್ಮಲತೆಯ ಭೂಮಿಯು ಅಷ್ಟೇ ಪುಷ್ಟಿಯಾಗುತ್ತಾ ಹೋಗುತ್ತದೆ ಹಾಗೂ ಎಷ್ಟು ಪರ ಪದಾರ್ಥದ ಎಡೆಗೆ ರುಚಿ ಹೆಚ್ಚಾಗುವುದೋ ಅಷ್ಟೇ ಆತ್ಮನ ಮಲೀನತೆ ಹೆಚ್ಚಾಗುವುದು, ಮಧ್ಯಾದರ್ಶನದ ಕಡೆಗೆ ಗತಿ ಹೋಗುವುದು, ಆತ್ಮನನ್ನು ಶುದ್ಧ ಮಾಡಲು ಲೋಭವನ್ನು ತ್ಯಜಿಸುವುದು ಅವಶ್ಯವಷ್ಟೇ ಅಲ್ಲ ಅನಿವಾರ್ಯವು ಹೌದು, ಮೊದಲು ಕಷಾಯಗಳು ಶಾಂತವಾಗುತ್ತವೆ ಕ್ಷಯವಾಗುತ್ತವೆ. ಆಗ ಸತ್ಯ ಉಪಲಬದ್ಧಿಯಾಗುತ್ತದೆ ಎಂಬುದನ್ನು ಗಮನದಲ್ಲಿಡಬೇಕು. ಲೋಭ ವ್ಯಕ್ತಿಯು ಸತ್ಯಧರ್ಮವನ್ನು ಪಡೆಯಲಾರ ಕ್ಷೀಣ ಮೋಹ ಗುಣಸ್ಥಾನದಲ್ಲಿ ಉತ್ತಮ ಶೌಚಧರ್ಮದ ಪರಿಪೂರ್ಣತೆಯಾಗುತ್ತದೆ. ಆದ್ದರಿಂದ ಆಚಾರ್ಯರು ಮೊದಲು ಉತ್ತಮ ಶೌಚಧರ್ಮ ಹೇಳಿದ್ದಾರೆ. ಕಷಾಯಗಳು ಅಂತ್ಯವಾಗುವ ಕ್ರಮವು ಸಹ ಇದೇ ಆಗಿದೆ. ಹೇಗೆ ಸ್ವಚ್ಛ ಉಳಿದ ಮೃದು ಭೂಮಿಯ ಮೇಲೆ ನಿರ್ದೋಷ ಬೀಜಾರೋಪಣ ಮಾಡಲಾಗುತ್ತದೆ ಯಾಕೆಂದರೆ ಸಸಿಯ ಅಂಕುರಣವಾಗಲಿ ಹಾಗೂ ಒಳ್ಳೆಯ ಫಸಲು ಪ್ರಾಪ್ತವಾಗಲಿ ಎಂದು ಅದೇ ಪ್ರಕಾರ ಸತ್ಯಾಗಮನದ ಪೂರ್ವದಲ್ಲಿ ಆತ್ಮಶುದ್ಧಿಗಾಗಿ ಶೌಚಶುಚಿತ್ವ ಇರುವುದು, ಪವಿತ್ರತೆ ಇರುವುದು ಸತ್ಯವನ್ನು ಗ್ರಹಿಸುವ ಸಾಮಾರ್ಥ್ಯವನ್ನು ಉತ್ಪನ್ನ ಮಾಡುತ್ತದೆ. ಆತ್ಮನಲ್ಲಿ ಶುಚಿತ್ವವಿರದಿದ್ದರೆ ಸತ್ಯದ ಪ್ರವೇಶವು ಸಹ ಸಂಭವವಿಲ್ಲ. ಸತ್ಯದ ಸಾಕ್ಷಾತ್ಕಾರ ನಿರ್ಮಲ ಆತ್ಮನಲ್ಲಿಯೇ ಸಾಧ್ಯವಿದೆ.

**ಲೋಭಿಯ ಮನಸ್ಸು ಧನವನ್ನೇ, ಜೀವನದ ಆಧಾರವೆಂದು ಭಾವಿಸುತ್ತದೆ.**
**ಮೋಹಿ ಮನಸ್ಸು ವಿಷಯ ವಿಕಾರಗಳನ್ನೇ ಅಮೃತಧಾರೆಯೆಂದು ಭಾವಿಸುತ್ತದೆ.**
**ಜ್ಞಾನಿಗಳ ಮಾತುಗಳ ಬಗ್ಗೆ ಹೇಳುವುದೇನು–**
ಜ್ಞಾನ ಮನಸ್ಸು ಸದಾಚಾರವನ್ನೇ ಜೀವನದ ಸಾರವೆಂದು ಭಾವಿಸುತ್ತದೆ.

# ಉತ್ತಮ ಸತ್ಯ ಧರ್ಮ
## ಆತ್ಮನನ್ನು ಶ್ರೇಷ್ಠಗೊಳಿಸುವ ಸತ್ಯಧರ್ಮ

### ಮಂಗಲಾಚರಣೆ

**ಸ ಸತ್ಯವಿದ್ಯಾ ತಪಸಾಂ ಪ್ರಣಾಯಕಃ ಸಮಗ್ರಧೀರೂಗ್ರಕುಲಾಂಬು ರಾಂಶುಮಾನ್**
**ಮಯಾ ಸದಾ ಪಾರ್ಶ್ವಜಿನಃ ಪ್ರಣಮ್ಯತೇ ವಿಲೀನ ಮಿಥ್ಯಾಪಥದೃಷ್ಟಿ ವಿಭ್ರಮಃ॥**

ಸದ್ಧರ್ಮ ಬಂಧುಗಳೇ,

ದಶಲಕ್ಷಣ ಪರ್ವ ಮಹೋತ್ಸವದಲ್ಲಿ ಬಹಳ ಉತ್ಸಾಹ ಪೂರ್ವಕವಾಗಿ ದಶಧರ್ಮ ರೂಪದ ಅಮೃತ ವರ್ಷದಲ್ಲಿ ಸ್ನಾನಮಾಡಿ ನಮ್ಮಷ್ಟಕ್ಕೇ ನಾವು ಪರಮ ಪವಿತ್ರರಾಗಲು ಪುರುಷಾರ್ಥ ಮಾಡುತ್ತಿದ್ದೇವೆ. ಧರ್ಮದ ಹತ್ತು ಲಕ್ಷಣಗಳು, ಹತ್ತು ಚರಣಗಳು ಅಥವಾ ಹತ್ತು ಭೇದಗಳು, ನಿಜ ಆತ್ಮನಲ್ಲಿ ಅಭಿನ್ನ, ಅನಂತ ಶಕ್ತಿಯಿಂದ ಇವೆ, ಸುಪ್ತವಾಗಿವೆ. ಅವುಗಳನ್ನು ಜಾಗೃತಗೊಳಿಸುವ, ಪವಿತ್ರ, ನಿರ್ಮಲ ಗೊಳಿಸುವ ನಿರಂತರ ಪ್ರಯತ್ನ ನಡೆದಿದೆ. ಒಂದೊಂದು ಧರ್ಮದ ಮೇಲೆ ವಿಚಾರ ಮಾಡುತ್ತಾ ಇಂದು ಉತ್ತಮ ಸತ್ಯ ಧರ್ಮದ ಮೇಲೆ ವಿಚಾರ ಮಾಡೋಣ ಕ್ಷಮೆ, ಮೃದುತ್ವ, ಋಜುತ್ವ ಮತ್ತು ಶುಚಿತ್ವಗಳ ಸಾರ ಸತ್ಯಧರ್ಮವಿದೆ. ಉತ್ತಮ ಸತ್ಯಧರ್ಮದ ದಿನದಂದು ನಮ್ಮ ಜೀವನದಲ್ಲಿ ಒಂದು ಹೊಸ ತಿರುವು ಬರಲಿ, ಹೊಸ ಉತ್ಸಾಹ ತರಲಿ, ನಿಜವಾದ ಜೀವನ ನಡೆಸಲು ಒಂದು ಹೊಸ ಮಾರ್ಗದರ್ಶನ ಈ ಧರ್ಮದ ಮಾಧ್ಯಮದಿಂದ ದೊರಕಲಿ ಇದು ನಮ್ಮೆಲ್ಲರ ಮಂಗಲ ಭಾವನೆಯಾಗಿದೆ. ನಿಮ್ಮೆಲ್ಲರೊಂದಿಗೆ ನಾವು ಸಹ ಕೇವಲ ನಿಮಗೆ ಕೇಳಿಸುತ್ತಿದ್ದೇವೆಂದು ಅಲ್ಲ, ಸ್ವತ: ಚಿಂತನೆ ಮಾಡುತ್ತಿದ್ದೇವೆ. ನಿಮ್ಮೆಲ್ಲರ ನಿಮಿತ್ತದಿಂದ ನಮಗೂ ಸಹ ಒಳ್ಳೆಯ ಚಿಂತನೆ ಮಾಡುವ ಸೌಭಾಗ್ಯ ದೊರೆಯುತ್ತದೆ. ಹಾಗೂ ನಾವು ಧರ್ಮದ ಮಾಧ್ಯಮದಿಂದ ನಮ್ಮ ಆತ್ಮನನ್ನು ಉಜ್ವಲ, ಪವಿತ್ರ ಮಾಡುತ್ತೇವೆ.

ಹತ್ತು ಧರ್ಮಗಳಲ್ಲಿ ನಾಲ್ಕು ಧರ್ಮಗಳನ್ನು ಪಡೆಯುವುದರಿಂದ ಸತ್ಯದ ಉಪಲಬ್ಧಿಯಾಗುತ್ತದೆ ಹಾಗೂ ಉಳಿದ ನಾಲ್ಕು ಧರ್ಮಗಳನ್ನು ಪಡೆಯುವುದರಿಂದ ಬ್ರಹ್ಮ-ಆತ್ಮ ಲೀನತೆಯಾಗುತ್ತದೆ. ಅದು ಹತ್ತು ಧರ್ಮಗಳ ಸಾರವಾಗಿದೆ. ಮುನಿಗಳ ಮಹಾವ್ರತಗಳು, ಭಾಷಾ ಸಮಿತಿ, ವಚನಗುಪ್ತಿ ಸತ್ಯ ವಚನ ಇತ್ಯಾದಿಗಳಲ್ಲಿ ಸತ್ಯಧರ್ಮವಿರುತ್ತದೆ. ಅಂತರಂಗದಲ್ಲಿ ಧ್ಯಾನದಿಂದ ಪ್ರಕಟವಾಗುವ ವಸ್ತು ತತ್ವವು ಹಾಗೂ ಸ್ವಭಾವ ಹಾಗೂ ಸ್ವರೂಪದ ಅನುಭವ ಅದು ಸತ್ಯವಾಗಿದೆ. ಉತ್ತಮ ಸತ್ಯಧರ್ಮದ ಸಂಬಂಧ ಮಾತನಾಡುವುದರೊಂದಿಗಿಲ್ಲ. ಆತ್ಮನ ಧರ್ಮಗಳ ವಿಷಯವಾಗಿದೆ. ವಸ್ತುವಿನ ಸತ್ಯಸ್ವರೂಪದ ಜ್ಞಾನ ಅರ್ಥಾತ್ ವಸ್ತುವಿನಂತಿದೆ. ಅದರ ಅದೇ ಪ್ರಕಾರದಿಂದ ಜ್ಞಾನವಾಗುವುದು ಸತ್ಯಧರ್ಮವಿದೆ. ವಾಸ್ತವಿಕವಾಗಿ ವಸ್ತುರೂಪದಿಂದ ಇರುವಷ್ಟು ಸತ್ತೆಯು ಸತ್ಯವಾಗಿದೆ. ಆದರೆ ಸತ್ಯ ಧರ್ಮವಿದೆ. ವಾಸ್ತವಿಕವಾಗಿ ವಸ್ತುರೂಪದಿಂದ ಇರುವಷ್ಟು ಸತ್ತೆಯು ಸತ್ಯವಾಗಿದೆ. ಆದರೆ ಸತ್ಯಧರ್ಮದಲ್ಲಿರುವುದು ಚೇತನೆಯ ಆಧಾರದಿಂದ ಇದೆ. ವಸ್ತುವನ್ನು ಸಾಮಾನ್ಯ ವಿಶೇಷಾತ್ಮಕವೆಂದು, ದ್ರವ್ಯ ಪರ್ಯಾಯಾತ್ಮಕವೆಂದು, ಉತ್ಪಾದ-ವ್ಯಯ-ಧ್ರೌವ್ಯ ಸ್ವರೂಪವೆಂದು,

ಸತ್ ಸ್ವರೂಪವೆಂದು, ಭಾವಿಸುವುದು ಸತ್ಯಧರ್ಮವಾಗಿದೆ.

ಉತ್ತಮ ಸತ್ಯಧರ್ಮಕ್ಕೇ ಸಂಬಂಧಿಸಿದಂತೆ ಆಚಾರ್ಯರು ಬಹಳ ಚೆನ್ನಾಗಿ ಹೇಳಿದ್ದಾರೆ–

**"ಸತ್ಸು ಪ್ರಶಸ್ತೇಷು ಜನೇಷು ಸಾಧುವಚನಂ ಸತ್ಯಮಿತ್ಯುಚ್ಯತೆ"**

ಸಜ್ಜನರೊಂದಿಗೆ ಹಿತಕಾರಿ ವಚನ ಹೇಳುವುದು ಸತ್ಯಧರ್ಮವೆಂದು ಕರೆಯಲ್ಪಡುತ್ತದೆ. ಧರ್ಮ ಭಾವನಾ ಶತಕದಲ್ಲಿ ಹೀಗೆ ಬರೆದಿದ್ದಾರ–

**ಸಜ್ಜನರ ಮುಂದೆ ಹೇಳು, ಶುಭ ಹಿತಕರ ವಚನ।**
**ಸತ್ಯಧರ್ಮದಲಿ ಇರಲು, ಭವದುಃಖ ಹರಣ ಆ ವಚನದಿ॥39॥**

ಇಲ್ಲಿ ಸಜ್ಜನರೊಂದಿಗೆ ಮಾತನಾಡಬೇಕೆಂದು ಹೇಳಿದೆ. ಹೀಗೆ ಯಾಕೆ ಹೇಳಲಾಗಿದೆ ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕು. ಯಾಕೆ ಸಜ್ಜನರಿಗೆನೇ ಹೇಳಬೇಕು, ದುರ್ಜನರಿಗೆ ಯಾಕೆ ಹೇಳಲಾಗದು?ಹತ್ತು ಧರ್ಮಗಳ ಪ್ರಾಮುಖ್ಯತೆಯಿಂದ ಶ್ರಮಣ, ಸಾಧುಮುನಿ ಜನರೇ ಪಾಲನೆ ಮಾಡುತ್ತಾರೆಂದು ನಿಮಗೆ ತಿಳಿದಿದೆ. ಸಾಧುಗಳ ಅಪೇಕ್ಷೆಯಿಂದ ಉತ್ಕೃಷ್ಟ ಪರಿಭಾಷೆಯನ್ನು ಹೇಳಲಾಗುತ್ತಿದೆ. ಹೇಳುವಾಗ ನಮ್ಮ ಮಾತಿನ ಪ್ರಭಾವವಾಗ ಬೇಕು, ನಮ್ಮ ಶಬ್ದಗಳಿಗೆ ಬೆಲೆ ಇರಬೇಕು. ತಾವು ಹೇಳುವ ಶಬ್ದಗಳ ಮೌಲ್ಯ ತಿಳಿದಿರದ್ದರೆ, ಏನಾದರೂ ಹೇಳಿದರೆ ಬೇಜಾರು ಮಾಡಿಕೊಳ್ಳುತ್ತಾರೆ. ಅವರಿಗೆ ಏನೇ ಹೇಳುವುದು ವ್ಯರ್ಥವಿದೆ. **"ಮಾಧ್ಯಸ್ಥ ಭಾವಂ ವಿಪರೀತ ವೃತೌ"**. ಎನ್ನುವ ಮಾತು ನಮ್ಮೊಳಗೆ ಚಿಂತನೆ ಮಾಡಲು ಒಳ್ಳೆಯದಿದೆ. ವಿಪರೀತ ವೃತ್ತಿಯವರೊಂದಿಗೆ ಮಾಧ್ಯಮಭಾವವಿರಬೇಕು. ಯಾಕೆಂದರೆ ಅವರು ಚೆನ್ನಾಗಿ ಕೇಳಲು ಇಷ್ಟ ಪಡುವುದಿಲ್ಲ ಹಾಗೂ ಅವರಿಗೆ ಏನಾದರೂ ಹೇಳಿದರೆ ಅವರ ಜಗಳ ಮಾಡಲು ಸಿದ್ಧರಿರುತ್ತಾರೆ. ಅಂತಹ ಜನರೊಂದಿಗೆ ಸತ್ಯವನ್ನು ಹೇಳಬಾರದು. ಅಲ್ಲದೇ ನಮ್ಮ ಸಮಯವನ್ನು ಅವರಿಗೆ ನೀಡುವುದು ವ್ಯರ್ಥವಾಗಿದೆ.

ಗಾದೆ ಮಾತು ಇದೆ. ಕೋಣನ ಮುಂದೆ ಕಿನ್ನರಿ ಬಾರಿಸಿದರೆ ಏನು ಪ್ರಯೋಜನ? ಹಾವಿನ ಮುಂದೆ ಬಾರಿಸಿದರೆ ಅದು ಹೆಡೆಯಾಡಿಸುತ್ತದೆ. ಪ್ರಭಾವಿತವಾಗುತ್ತದೆ. ಕೋಣನ ಮುಂದೆ ಬಾರಿಸಿದರೆ ಏನಾಗುತ್ತದೆಂದು ಗೊತ್ತಿದೆಯೆ? ಅದು ಹಿಂದಿರುಗಿ ನಿಮಗೆ ಹಾಯುತ್ತದೆ. ಯಾರಿಗೆ ಯಾವುದರ ಮೌಲ್ಯ ತಿಳಿದಿದೆಯೋ ಅವರ ಮುಂದೆ ಆ ಮಾತುಗಳನ್ನು ಹೇಳುವುದು ಒಳ್ಳೆಯದು. ಆದ್ದರಿಂದ ಆಚಾರ್ಯರು–ಸಜ್ಜನರೊಂದಿಗೆ ಹೇಳಬೇಕು. ಯಾಕೆಂದರೆ ಅವರು ಅದರ ಮೌಲ್ಯವನ್ನು ತಿಳಿಯುತ್ತಾರೆ, ಉಪಯೋಗ ಮಾಡುತ್ತಾರೆ. ಅವರಷ್ಟೆ ಅಲ್ಲದೇ ನಮಗೆ ಗೊತ್ತಿಲ್ಲದೇ ಅದೆಷ್ಟೋ ಜನ ಧರ್ಮವನ್ನು ಗ್ರಹಿಸುತ್ತಾರೆ, ಮೋಕ್ಷ ಮಾರ್ಗದ ರಸ್ತೆಯು ಪ್ರಶಸ್ತವಾಗುತ್ತಿದೆ ಎಂದು ಹೇಳುತ್ತಾರೆ. ಗುರುಜನರು ಯಾವಾಗಲೂ ಸಜ್ಜನರಿಗೆ. ಹೇಳುತ್ತಾರೆ. ಯಾಕೆ ಹೇಳುತ್ತಾರೆ? ಸಂಸಾರಕ್ಕಾಗಿ ಹೇಳುತ್ತಾರಾ? ಅಪಕಾರ ಮಾಡಲು ಅಥವಾ ಯಾರಿಗಾದರೂ ತೊಂದರೆ ಇತ್ಯಾದಿಗಳಿಗಾಗಿ? ಇಲ್ಲ ಇವೆಲ್ಲರಿಗೆ ಅಲ್ಲ ಬದಲಾಗಿ ಯಾವುದರಿಂದ ಉಪಯೋಗವಾಗುವುದೋ, ಹಿತವಾಗುವುದೋ, ಎಲ್ಲರ ಉದ್ಧಾರವಾಗುವುದೋ, ಎಲ್ಲರ ಕಲ್ಯಾಣವಾಗುವುದೋ ಈ ಭಾವನೆಯಿಂದ ಹೇಳುತ್ತಾರೆ. ಅದು ಸತ್ಯಧರ್ಮವಾಗಿದೆ.

ಎರಡು ಮಾತುಗಳನ್ನು ಯಾವಾಗಲೂ ನೆನಪಿನಲ್ಲಿಡಬೇಕು. ಒಂದು–ನಾವು ಯಾರಿಗಾದರೂ ಯಾವುದೇ ವಸ್ತುವನ್ನು ಕೊಡುತ್ತಿದ್ದರೆ–ಎರಡು–ಅದನ್ನು ಪಡೆಯುವ ಪಾತ್ರತೆ ಇದೆಯೋ ಇಲ್ಲವೋ.

ಈ ಮಾತನ್ನು ಮೊದಲು ಅನುಮಾನಿಸಿ ತಿಳಿಯಬೇಕು ಆಗಲೇ ಯಾರಿಗಾದರೂ ಯಾವುದಾದರೂ ವಸ್ತುವನ್ನು ಕೊಡಬೇಕು, ಇಲ್ಲಿ ಅಧ್ಯಾತ್ಮಿಕದ ವಿಷಯ ನಡೆದಿದೆ. ನಮ್ಮ ಆಚಾರ್ಯರು ಎಷ್ಟರ ಮಟ್ಟಿಗೆ ಹೇಳಿದ್ದಾರೆಂದರೆ. ಯಾರ್‍ಯಾರಿಗೋ ವ್ರತವನ್ನು ನೀಡಬಾರದು. ತೆಗೆದುಕೊಳ್ಳುವವರು 'ಆಗಲಿ' ಎಂದರೂ ಕೊಡಬಾರದು ಯಾಕೆಂದರೆ ಇಲ್ಲಿವರೆಗೆ ಆ ವ್ಯಕ್ತಿಯು ಏನನ್ನು ಪಾಲಿಸಿದ್ದಾರೆ? ಎಷ್ಟು ವ್ರತಗಳನ್ನು ಹೇಗೆ ಪಾಲಿಸಿದ್ದಾರೆ?ಅತಿಚಾರ-ಅನಾಚಾರಗಳಾಗಿವೆಯೋ ಇಲ್ಲವೇ ಅಥವಾ ಹಾಗೆಯೇ ವ್ರತಗಳನ್ನು ಪೂರ್ಣ ಮಾಡದೇ ಬಿಟ್ಟು ಬಿಟ್ಟಿದ್ದಾರೆಯೇ. ವ್ರತಗಳ ಅವಹೇಳನ ಮಾಡಿಲ್ಲ ತಾನೇ ಅಥವಾ ಅವರ ಆರೋಗ್ಯ ಹೇಗಿದೆ?ಅವರ ಮನೆಯ ವಾತಾವರಣ ಹೇಗಿದೆ? ಮನೆಯ ಜನರು ಹೇಗಿದ್ದಾರೆ? ಅವರಿಗೆ ವ್ರತ ಪಾಲನೆ ಮಾಡುವ ಭಾವ ಎಷ್ಟಿದೆ? ಇವೆಲ್ಲ ಮಾತುಗಳನ್ನು ತಿಳಿಯದಿದ್ದರೆ ವ್ರತದ ಅವಹೇಳನ ಆಗಬಹುದು. ಆದ್ದರಿಂದ ನಿಯಮ-ಸಂಯಮ ನೀಡುವ ಮೊದಲು ವ್ಯಕ್ತಿಯನ್ನು ಪರೀಕ್ಷಿಸಲಾಗುತ್ತದೆ-ಅವರು ಇದರ ಉಪಯೋಗ ಮಾಡುವರೇ ಅಥವಾ ದುರುಪಯೋಗ ಮಾಡುವವರಾ, ಹೀಗೆ ಪಾತ್ರತೆಯನ್ನು ನೋಡಲಾಗುತ್ತಿದೆ. ಇದು ತೀರ್ಥಂಕರರಿಂದ ಪ್ರಣೀತ ಧರ್ಮವಿದೆ. ಗುರುಗಳು ಕೇವಲ ಮಾಧ್ಯಮವಾಗಿರುತ್ತಾರೆ.

ಧರ್ಮವು ಆತ್ಮನದಾಗಿರುತ್ತದೆ. ನಮ್ಮ ನಮ್ಮ ಆತ್ಮನ ಧರ್ಮವಿದೆ, ಕೊಡುವ ಯಾವ ಮಾತು ಇಲ್ಲ ಇದು ಜಾಗೃತಗೊಳಿಸುವ ಮಾತಿದೆ. ಇದನ್ನು ಪಾಲನೆ ಮಾಡಲು ಗುರುವು ಆಶೀರ್ವಾದ ನೀಡುತ್ತಾರೆ. ಸಂಕಲ್ಪ ಸ್ಮರಣೆಯಲ್ಲಿರಲಿ. ಆ ಸಂಕಲ್ಪಗಳನ್ನು ಪಾಲನೆ ಮಾಡುವ ಯೋಗ್ಯತೆಯನ್ನು ಪಡೆಯಲಿ, ಇಲ್ಲವಾದಲ್ಲಿ ಜಿನಧರ್ಮದ ಅವಹೇಳನವಾಗುತ್ತದೆ. ಅನೇಕರು ವ್ರತ-ನಿಯಮ, ಸಂಯಮಗಳನ್ನು ತೆಗೆದುಕೊಂಡು ಬಿಡುತ್ತಾರೆ, ಆ ವ್ರತ, ನಿಯಮ, ಸಂಯಮಗಳು ಕೇವಲ ಹೆಸರಿಗೆ ಮಾತ್ರ ಇರುತ್ತವೆ. ಪಾಲನೆ ಎಷ್ಟು ಹಾಗೂ ಹೇಗೆ ಮಾಡುತ್ತಾರೆ ಏನನ್ನೂ ಹೇಳಲಾಗದು, ಇದರಲ್ಲಿ ಧರ್ಮದ ಹೆಸರು ಕೆಡುತ್ತದೆ, ಇಷ್ಟು ದೊಡ್ಡ ಗುರುವಿನ ಬಳಿ ವ್ರತ ತೆಗೆದುಕೊಂಡರು ಹಾಗೂ ಏನೂ ಪಾಲನೆಯಾಗುತ್ತಿಲ್ಲವೆಂದು ಜನರು ಮಾತನಾಡುತ್ತಾರೆ. ಕೇವಲ ಹೆಸರಿಗಾಗಿ ಹೇಳುತ್ತಿದ್ದಾರೆ_ನಾನು ವ್ರತಿ, ಈ ವ್ರತ ಧಾರಣೆ ಮಾಡಿದ್ದೇನೆ, ನನ್ನ ಬಳಿ ಈ ನಿಯಮ, ಸಂಕಲ್ಪವಿದೆ ಇತ್ಯಾದಿ, ಇತ್ಯಾದಿ, ಇದರಿಂದ ಏನಾಗುತ್ತದೆ, ಬೇರೆಯವರು ಜಿನಧರ್ಮದಲ್ಲಿ ಹೀಗೆಯೇ ಆಗುತ್ತದೆಂದು ಯೋಚನೆ ಮಾಡುತ್ತಾರೆ. ಹೇಳುವುದರಲ್ಲಿ ಏನೋ ಆಗಬಹುದು, ಮಾಡುವಲ್ಲಿ ಮತ್ತೆ ಏನೋ ಆಗಬಹುದು ಹೀಗೆ ಮಾಡುವುದರಿಂದ ಜಿನೇಂದ್ರ ಭಗವಂತರ ಮಾರ್ಗದ ಅವಹೇಳನ ಆಗುತ್ತದೆ. ಅಪ್ರಭಾವನೆಯಾಗುತ್ತದೆ. ಆದ್ದರಿಂದ ಗುರು ಯೋಗ್ಯ ವ್ಯಕ್ತಿಗಳಿಗೇನೇ ವ್ರತಗಳನ್ನು ಕೊಡುತ್ತಾರೆ. ಅದರಿಂದ ವ್ರತಗಳ ಪಾಲನೆ ಸರಿಯಾಗಿ ಮಾಡುವಂತಾಗಲು ಹಾಗೂ ಧರ್ಮದ ಪ್ರಭಾವನೆ ಹೆಚ್ಚಲಿ.

ನಮ್ಮ ಗುರುಮಹಾರಾಜರು ನಿಮಗೆ ತಿಳಿದಂತೆ ಅದೆಷ್ಟು ಪರೀಕ್ಷೆ ಮಾಡುತ್ತಾರೆ? ಬಹಳ ಪರೀಕ್ಷೆ ಮಾಡುತ್ತಾರೆ. ಮೊದಲು ನಮಗೆ ಕಠೋರ ಪರೀಕ್ಷೆಯನ್ನು ತೆಗೆದುಕೊಂಡಿದ್ದರು. ಹಾಗೇಯೇ ನಾವು ಮುನಿಗಳಾಗಿಲ್ಲ ಮೊದಲು ಬ್ರಹ್ಮಚಾರಿ ಆದೆವು. ಬ್ರಹ್ಮಚಾರಿ ವ್ರತ ಪಡೆಯುವಾಗಲೂ ಬಹಳ ಪರೀಕ್ಷೆ ಆಯಿತು. ಅನೇಕ ಬ್ರಹ್ಮಚರ್ಯದ ವ್ರತಗಳಾದವು ಮತ್ತೆ ಮೆಲ್ಲ ಮೆಲ್ಲನೆ ಪ್ರತಿಮಾಧಾರಿಗಳಾದೆವು. ಗುರು ಮಹಾರಾಜರು ಯೋಗ್ಯತೆಯನ್ನು ತಿಳಿಯದವರೆಗೆ ತಾಳಿ-ತಾಳಿ ಎನ್ನುತ್ತಿದ್ದರು. ತಿಳಿದಾಗ ಅವರೇ ಕರೆಸಿಕೊಂಡರು. ಬ್ರಹ್ಮಚಾರಿಯಾಗಿದ್ದಾಗ ಆಹಾರಜೀ ತೀರ್ಥಕ್ಷೇತ್ರದಲ್ಲಿದ್ದೆವು. ಗುರು

ಮಹಾರಾಜರಿಗೆ ಇದು ಯೋಗ್ಯಸ್ಥಾನವೆನಿಸಿದ್ದಿತು. ನಾವು ಮಂದಿರದಲ್ಲಿ ಕುಳಿತಿದ್ದೆವು. ಗುರು ಮಹಾರಾಜರು ಸಹ ಅಲ್ಲಿಗೆ ಬಂದರು ಅವರಿಗೂ ಸಹ ಪ್ರಶಸ್ತವಾಗಿದೆ ಎಂದು ಅನಿಸಿತು. ಅವರು ನಮಗೆ ಆದರ ಪೂರ್ವಕವಾಗಿ ಆಸನ ನೀಡಿದರು ಮತ್ತು ಜೊತೆಗಿದ್ದ ಇತರ ಜನರಲ್ಲಿ ಕೆಲವರನ್ನು ಕರೆದರು ಮತ್ತು ನಮ್ಮೆಲ್ಲರಿಗೂ ಏಳು-ಏಳು ಪ್ರತಿಮೆಗಳನ್ನು ನೀಡಿದರು. ಒಂದು ದಿನ ಆಹಾರಜೀಯಲ್ಲಿಯೇ ಶಾಂತಿನಾಥ ಭಗವಂತರ ಪೂಜೆ ನಡೆದಿದ್ದಿತು. ನಮ್ಮೆಲ್ಲರನ್ನು ಗುರು ಮಹಾರಾಜರು ಸ್ಮರಿಸಿಕೊಂಡಿದ್ದಾರೆಂದು ಯಾರೋ ಬಂದು ಸಮಾಚಾರ ತಿಳಿಸಿದರು. ಪೂಜೆ ಪೂರ್ಣವಾದ ನಂತರ ಗುರು ಮಹಾರಾಜರ ಬಳಿ ತೆರಳಿದೆವು. ನಮೋಸ್ತು ಮಾಡಿ ಚರಣ ವಂದನೆ ಮಾಡಿದೆವು. ಮಹಾರಾಜರು ಕೂಡಲೇ ಆರೋಗ್ಯ ಚೆನ್ನಾಗಿದೆಯಾ ಎಂದು ಕೇಳಿದರು. ಗುರು ಮಹಾರಾಜರು ಹೀಗೆ ಕೇಳುವ ಅವಕಾಶ ಬಹಳ ಕಡಿಮೆ ಬರುತ್ತದೆ. ಸ್ವಲ್ಪ ಆಶ್ಚರ್ಯವಾಯಿತು. ಚೆನ್ನಾಗಿದೆ ಮಹಾರಾಜರೇ ಎಂದು ನಾವು ಹೇಳಿದೆವು. ಬಹಳ ಒಳ್ಳೆಯದು. ಯಾವಾಗಲೂ ಗುರು ಮಹಾರಾಜರ ಬಳಿಯೇ ಇರುತ್ತಿದ್ದೆವು, ಮೂರು ಸಮಯದ ಸಾಮಾಯಿಕ ಮಾಡುತ್ತಿದ್ದೆವು. ಮಹಾರಾಜರು ಕೇಳುತ್ತಿದ್ದಾರೆಂದರೆ ಏನಾದರೂ ವಿಶೇಷ ಕಾರಣವಿರಬೇಕು. ಸ್ವಲ್ಪ ಸಮಯದ ನಂತರ ಚೆನ್ನಾಗಿ ಆಹಾರ ಮಾಡಿಕೊಂಡು ಬರಬೇಕು ಎಂದು ಹೇಳಿದರು. ಆಗ ನಮಗೆ ಏನೋ ವಿಶೇಷವಿದೆ, ಏನೋ ವಿಶೇಷ ಸಂಗತಿ ಇದೆ ಎಂದೆನಿಸಿತು. ಪ್ರಸನ್ನತೆಯಿಂದ ನಾವು-'ಸರಿ ಮಹಾರಾಜರೇ ಚೆನ್ನಾಗಿ ಮಾಡಿಕೊಂಡು ಬರುತ್ತವೆ'. ಎಂದು ಹೇಳಿದೆವು. ಚೆನ್ನಾಗಿ ಮಾಡಿಕೊಂಡು ಬನ್ನಿ ಎನ್ನುವುದರ ಅರ್ಥ ನಿಶ್ಚಿಂತೆಯಂದ ಮಾಡಿ ಬರಲಿ, ಅವಸರದಿಂದ ಅಲ್ಲ ಎನ್ನುವುದಾಗಿತ್ತು.

ಆಹಾರ ಮಾಡಲು ಹೊರಟೆವು ಹಾಗೂ ಅದೇ ದಿನ ಕೂದಲು ಬಂದಿತು ಅಂತರಾಯವಾಯಿತು ಏಳು ಪ್ರತಿಮೆಗಳಿದ್ದವು. ನಾವು ಬೇರೆ ಮಹಾರಾಜರಲ್ಲಿ ಗುರು ಮಹಾರಾಜರ ಮಾತುಗಳ ಬಗ್ಗೆ ಕೇಳಿದಾಗ ಅವರು ನಾಳೆ ಕೇಶಲೋಚನೆ ಮಾಡಬೇಕು ಎಂಬ ಸಂಕೇತವಾಯಿತೆಂದು ಹೇಳಿದರು. ನಾಳೆ ದೀಕ್ಷೆಗಳಿರಬೇಕೆಂದು ಅನಿಸುತ್ತದೆ. ಮಾರನೆ ದಿನ ಕ್ಷುಲ್ಲಕ ದೀಕ್ಷೆಗಳಾಗುವುದಿತ್ತು ಅದರಲ್ಲಿ ನಮಗೂ ಸಹ ದೀಕ್ಷೆ ನೀಡಲಾಯಿತು. ಗುರುಗಳ ಉಪಕಾರ ನೋಡಿ ಯೋಗ್ಯತೆ ಇದೆ ಎಂದು ತಿಳಿದಾಗ ಅವರೇ ಸ್ವತಃ ಉಪಕಾರ ಮಾಡುತ್ತಾರೆ. ಎಲ್ಲಿಯವರೆಗೆ ಯೋಗ್ಯತೆ ತಿಳಿದಿರುವುದಿಲ್ಲ ಹೇಳುವುದು ಸಹ ಬಹಳ ಕಠಿಣವಿದೆ. ಯಾಕೆಂದರೆ ಇದರ ಉಪಯೋಗ ಏನಾದೀತು? ಗೊತ್ತಿಲ್ಲ. ಉತ್ತಮ ಸತ್ಯ ಧರ್ಮದ ಪರಿಭಾಷೆಯನ್ನು ತಿಳಿಯುತ್ತಿದ್ದಿರಾ ಏನನ್ನು ಸಜ್ಜನರ ಹಿತಕ್ಕಾಗಿ ಹೇಳಲಾಗುವುದೋ ಅದು ಸತ್ಯ ಧರ್ಮವಿದೆ. ದುರ್ಜನರಿಗೆ ಯಾಕೆ ಹೇಳುವುದಿಲ್ಲ ಯಾಕೆಂದರೆ ಅದರ ದುರುಪಯೋಗವಾಗಿ ಬಿಡುತ್ತದೆ. ಹಿತದ ಮಾತನ್ನು ಹೇಳುತ್ತಾರೆ. ಸಾಧು ಮುನಿ ಎಂಬುದನ್ನು ನೀವು ತಿಳಿದೇ ಇದ್ದೀರಾ. ಮುನಿಯ ಪರಿಭಾಷೆ ಏಂಬುದೆ 'ಮೌನಂ ಧಾರತೀತಿ ಮುನಿ' ಅರ್ಥಾತ್ ಮೌನಧಾರಣೆ ಮಾಡುವವರು ಮುನಿಗಳೆಂದು ಕರೆಯಲ್ಪಡುತ್ತಾರೆ. ಮೌನವು ಸಹ ಅನೇಕ ಪ್ರಕಾರಗಳದ್ದಾಗಿದೆ. ಯಾರೊಂದಿಗೂ ಮಾತಾನಾಡದಿರುವುದು ಒಂದು ಪ್ರಕಾರದ ಮೌನ, ಕೈ ಮೇಲೆ ಕೈ ಇಟ್ಟುಕೊಂಡು ಕುಳಿತುಬಿಡುವುದು, ಅನ್ನ, ನೀರನ್ನು ತ್ಯಾಗ ಮಾಡುವುದು, ಮನಸ್ಸಿನಲ್ಲಿ ತನ್ನೊಳಗೆ ತಾವು ಮಾತನಾಡಿಕೊಳ್ಳುತ್ತಿರುವುದು, ಅರ್ಹಂತ ಸಿದ್ಧ ಭಗವಂತರ ಗುಣಗಳ ಸ್ಮರಣೆಯಂತು ಮಾಡುತ್ತಿರುತ್ತಾರೆ. ಆದರೆ ಬಾಹ್ಯದಲ್ಲಿ ಮೌನಧಾರಣೆ ಮಾಡಿರುತ್ತಾರೆ, ಮಾತಾನಾಡುವುದಿಲ್ಲ-ಇದು ಎರಡನೆ ಪ್ರಕಾರದ ಮೌನ, ಇನ್ನೊಂದು ಮೌನವಿದೆ-ಇದರಲ್ಲಿ ದೇವ,

ಶಾಸ್ತ್ರ, ಗುರುವಿನ ಸ್ತುತಿ ಮಾಡುತ್ತಾರೆ, ಶಾಸ್ತ್ರ ಓದುತ್ತಾರೆ, ಗುರುವಿನ ಚರಣಗಳಲ್ಲಿ ಪ್ರಾಯಶ್ಚಿತವನ್ನು ಪಡೆಯುತ್ತಾರೆ. ಆದರೆ ಸಹಧರ್ಮ ಜನರೊಂದಿಗೆ ಮಾತನಾಡುವುದಿಲ್ಲ ಹಾಗೂ ಶ್ರಾವಕರೊಂದಿಗೂ ಮಾತನಾಡುವುದಿಲ್ಲ. ಮತ್ತೊಂದು ಮೌನವಿದೆ ಅದರಲ್ಲಿ ಎಲ್ಲರೊಂದಿಗೆ ಮಾತನಾಡುತ್ತಾರೆ. ಅರ್ಥಾತ್ ಸಜ್ಜನರೊಂದಿಗೆ ಮಾತನಾಡುತ್ತಾರೆ. ಆದರೆ ಹೇಗೆಂದರೆ ಹಾಗೆ ಅಲ್ಲ ಅತಿ ಅವಶ್ಯಕತೆ ಇದ್ದರೆ ಮಾತ್ರ ಮಾತನಾಡುತ್ತಾರೆ. ತಮ್ಮ ಎಲ್ಲ ಅವಶ್ಯಕ ಕ್ರಿಯೆಗಳನ್ನು ಪಾಲನೆ ಮಾಡುತ್ತಾರೆ. ಅದಲ್ಲದೇ ಆಗಾಗ ಯಾವುದಾದರೂ ಹಿತದ ಬಗ್ಗೆ, ಕಲ್ಯಾಣದ ವಿಷಯವಾಗಿ, ವ್ರತ, ನಿಯಮ, ಸಂಯಮಗಳ ಚರ್ಚೆ ಬಂದಾಗ ಮಾತನಾಡುತ್ತಾರೆ. ಅದರಲ್ಲಿ ಶ್ರಾವಕರು ಕೇಳಿದರೆ ಸಾಧು–ಮುನಿ ಮಾತನಾಡುತ್ತಾರೆ. ಸಮಯದ ಬಂಧನ ಹೊಂದಿರುತ್ತಾರೆ. ಮಾತನಾಡಿದರೂ ಮೌನರಾಗಿರುತ್ತಾರೆ. ಇದೆಂತಹ ಮೌನವೆಂದು ನೀವು ಹೇಳಬಹುದು. ಸಹೋದರರೇ ಜೀವನ ಪರ್ಯಂತ ಪಂಚ ಪಾಪಗಳ ತ್ಯಾಗ ಮಾಡಿದ್ದಾರೆ. ನಮ್ಮ ಮುಖದಿಂದ ಪಾಪವಚನ ಮಾತನಾಡುವುದಿಲ್ಲ ಎಂಬ ಸಂಕಲ್ಪ ಮಾಡಿದ್ದಾರೆ. ಯಾರೊಂದಿಗೂ ಆರಂಭ, ಸಾರಂಭದ ವಿಷಯವನ್ನು ಹೇಳುವುದಿಲ್ಲ ಅರ್ಥಾತ್ ನೀವು ಕಟ್ಟಡ ನಿರ್ಮಿಸಿ, ಹುಲ್ಲು ಕತ್ತರಿಸು, ನೀರು ಹರಿಸು, ಬೆಂಕಿ ಉರಸು, ಭೂಮಿ ಅಗೆ, ಆಹಾರ ತಯಾರಿಸು ಇತ್ಯಾದಿ ಮಾತುಗಳನ್ನು ತಮ್ಮ ಮುಖದಿಂದ ಹೇಳುವುದಿಲ್ಲ ಏನೇ ಹೇಳಿದರೂ ಧರ್ಮಕ್ಕಾಗಿ ಹೇಳುತ್ತಾರೆ. ಇದು ಒಂದು ರೀತಿಯ ಮೌನವಿದೆ. ಇದು ಮುನಿಗಳ ಜೀವನ ಪರ್ಯಂತವಿರುತ್ತದೆ ಆದ್ದರಿಂದಲೇ ಅವರನ್ನು ಮುನಿಯೆಂದು ಕರೆಯುತ್ತಾರೆ.

ಮೌನದ ಶಾಂತಿ ಬೇರೆ ರೀತಿಯದೇ ಆಗಿರುತ್ತದೆ. ಎಲ್ಲ ಪ್ರಕಾರದ ವಿಕಲ್ಪಗಳು ಶಾಂತವಾಗಿ ಬಿಡುತ್ತವೆ. ಇಲ್ಲವಾದಲ್ಲಿ ಎಷ್ಟು ಹೇಳುವಿರೋ ಅಷ್ಟು ವಿಚಾರಗಳು ಹಾಗೂ ಅಷ್ಟು ಹೆಚ್ಚಿನ ವಿಕಲ್ಪಗಳು ಬರುತ್ತವೆ. ಸಮಾಧಾನಕ್ಕೂ ಸಹ ಬಹಳ ವಿಕಲ್ಪಗಳು ಬರುತ್ತದೆ. ಆದ್ದರಿಂದ ಏನೂ ಹೇಳಬಾರದು. ಒಳ್ಳೆಯದೆಂದರೆ ಕೇಳಲೂ ಬಾರದು ಅಂದರೆ ಇನ್ನೂ ಹೆಚ್ಚಿನ ಶಾಂತಿ ಸಿಗುತ್ತದೆ. ಇದು ಸ್ವಲ್ಪ ಕಠಿಣವೆನಿಸಬಹುದು. ಕೇಳಲೇ ಬೇಡ ಎಂದಾಗ ಹೇಳುವ ಇಚ್ಛೆಯೂ ಆಗುವುದಿಲ್ಲ. ಏಕಾಂತದಲ್ಲಿ ಹೊರಟು ಹೋಗಿ, ತೀರ್ಥಕ್ಷೇತ್ರಕ್ಕೆ ಹೊರಟು ಹೋಗಿ ಮಂದಿರಕ್ಕೆ ಹೊರಟು ಹೋಗಿ, ಒಂದು ಮೂಲೆಯಲ್ಲಿ ಕುಳಿತು ಬಿಡಿ ಅಥವಾ ಕಣ್ಣುಗಳನ್ನು ಮುಚ್ಚಿಕೊಂಡು ಕುಳಿತು ಬಿಡಿ. ಅಲ್ಲಿ ಏನು ಕೇಳಬಾರದು, ಏನೂ ಹೇಳಬಾರದು, ಏನನ್ನು ನೋಡಬಾರದು, ಆಗ ನೋಡಿ ಅದೇಷ್ಟು ಶಾಂತಿ ಸಿಗುತ್ತದೆ, ಭಾವ ಅದೆಷ್ಟು ಉಜ್ವಲವಾಗುತ್ತದೆ, ಬಹಳ ಹೆಚ್ಚು ಶಾಂತಿ ದೊರೆಯುತ್ತದೆ. ಶಾಸ್ತ್ರ ಓದಿರಿ, ಸ್ವಾದ್ಯಾಯ ಮಾಡಿರಿ, ಜಪ ಮಾಡಿರಿ, ಭಗವಂತನ ಸ್ಮರಣೆ ಮಾಡಿರಿ, ಸಾಧನೆ ಮಾಡಿ, ಬಹಳಷ್ಟು ಶಾಂತಿ ದೊರಕುತ್ತದೆ. ಜೀವನದಲ್ಲಿ ಅಂತಹ ಶಾಂತಿ ಬೇರೆ ಸಮಯದಲ್ಲಿ ದೊರೆಯುವುದಿಲ್ಲ. ತೀರ್ಥಕ್ಷೇತ್ರವಾದರೆ ಇಲ್ಲಿಯೇ ಜೀವನ ಕಳೆಯೋಣವೆನಿಸುತ್ತದೆ ವಾಸ್ತವಿಕವಾಗಿ ಸತ್ಯದ ರಕ್ಷಣೆ ಆಗಲೇ ಆಗಬಲ್ಲದು. ಎಲ್ಲಿಯೇ ಇರಲಿ **ಮೌನಿನಃ ಕಲಹೋ ನಾಸ್ತಿ**. ಮೌನಿ ವ್ಯಕ್ತಿಗೆ ಕಲಹದ ಬಾಧೆ ಇರುವುದಿಲ್ಲ ಶಾಂತ ಮನಸ್ಸಿನಲ್ಲಿಯೇ ನಮ್ಮ ಆತ್ಮನ ಅವಲೋಕನ ಮಾಡುವ ಭಾವ. ನಮ್ಮ ಸತ್ಯಾರ್ಥ ಸ್ಥಿತಿಯಲ್ಲಿ ಲೀನನಾಗುವ ಭಾವ ಬರುತ್ತದೆ ಹಾಗೂ ಆತ್ಮನಲ್ಲಿ ದೃಢತೆ ಉತ್ಪನ್ನವಾಗುತ್ತದೆ.

ನಿಮಗೆಲ್ಲರಿಗೂ ಗೊತ್ತಿರುವಂತೆ ತೀರ್ಥಂಕರರಾಗುವವರು ದೀಕ್ಷೆ ಪಡೆದ ನಂತರ ಎಂದೂ ಮಾತನಾಡುವುದೇ ಇಲ್ಲ. ಸಮವಸರಣದಲ್ಲಿ ಮಾತನಾಡುತ್ತಾರೆಂದು ನೀವು ಹೇಳಬಹುದು. ಆದರೆ ಸಹೋದರಾ ಜನರ ಪುಣ್ಯದಿಂದ ತೀರ್ಥಂಕರರ ದಿವ್ಯಧ್ವನಿ ಹೊರಡುತ್ತದೆ. ಅವರು ತಮ್ಮ

ಇಚ್ಛೆಯಿಂದ ಮಾತನಾಡುವುದಿಲ್ಲ. ತನ್ನಷ್ಟಕ್ಕೆ ತಾನೇ ಸರ್ವಾಂಗಗಳಿಂದ ದಿವ್ಯಧ್ವನಿ ಹೊರಡುತ್ತದೆ. ತುಟಿಯಾಡಿಸಿ ಹೇಳುವುದಿಲ್ಲ ದೊಡ್ಡ ವಿಶೇಷತೆಗಳಿವೆ, ವಿಚಾರ ಮಾಡಿರಿ. ಇಂತಹ ಮಹಾನ್ ಆತ್ಮಗಳು ಇವೆ. ತೀರ್ಥಂಕರ ಭಗವಂತರ ಆಯುಷ್ಯ ಒಂದು ಪೂರ್ವ ಕೋಟಿ ವರ್ಷವಿದೆ ಎಂದು ಭಾವಿಸಿ ಹಾಗೂ ಎಂಟು ವರ್ಷ ಅಂತರ ಮುಹೂರ್ತದಲ್ಲಿ ಕೇವಲಜ್ಞಾನವಾದರೆ ಎಂಟು ವರ್ಷ ಅಂತರಮುಹೂರ್ತ ಕಡಿಮೆ, ಒಂದು ಕೋಟಿ ಪೂರ್ವ ವರ್ಷಕಾಲ ಅವರು ಮಾತನಾಡುವುದಿಲ್ಲ. ಯಾಕೆ ಮಾತನಾಡುವುದಿಲ್ಲ. ಇದಕ್ಕೆ ಕಾರಣವೆಂದರೆ ತೀರ್ಥಂಕರರು ವರ್ಧಮಾನ ಚಾರಿತ್ರದ ಧಾರಕರಾಗಿರುತ್ತಾರೆ. ಅವರಿಗೆ ಯಾವ ದೋಷವು ಹತ್ತುವುದಿಲ್ಲ. ದೋಷ ಹತ್ತಿದರೆ ಮತ್ತೆ ಅವರ ಚಾರಿತ್ರ ಮಲೀನವಾಗಿ ಬಿಡುತ್ತದೆ, ಮತ್ತೆ ಅವರು ಪ್ರಾಯಶ್ಚಿತ ಇತ್ಯಾದಿ ಮಾಡಬೇಕಾಗುತ್ತದೆ. ಆದ್ದರಿಂದ ಅವರ ಚಾರಿತ್ರ ವರ್ಧಮಾನ ಅರ್ಥಾತ್ ಹೆಚ್ಚುತ್ತಲೇ ಇರುತ್ತದೆ, ಕಡಿಮೆಯಾಗುವುದಿಲ್ಲ. ತೀರ್ಥಂಕರರ ದಿವ್ಯ ಧ್ವನಿ ಅನುಭಯ ವಚನಗಳಲ್ಲಿ ಆಗುತ್ತದೆ. ನಮ್ಮ ಚಾರಿತ್ರ ಕಡಿಮೆ-ಹೆಚ್ಚು ಹೆಚ್ಚು-ಕಡಿಮೆ ಆಗುತ್ತಿರುತ್ತದೆ, ದೋಷ ತಗಲುತ್ತದೆ. ಪ್ರತಿಕ್ರಮಣ, ಪ್ರಾಯಶ್ಚಿತಗಳಿಂದ ಶುದ್ಧವಾಗುತ್ತದೆ ಮತ್ತೆ ಮುಂದೆ ಸಾಗುತ್ತದೆ. ಪ್ರತಿಯೊಂದು ಜೀವ ಯಾವಾಗಲೂ ಸ್ವ-ಪರ ಹಿತಕಾರಕ, ಪರಿಮಿತ ಹಾಗೂ ಅಮೃತದಂತೆ ಸತ್ಯ ವಚನಗಳನ್ನಾಡಬೇಕು ಎಂಬುದು ಗಮನದಲ್ಲಿರಲಿ. ಒಂದು ವೇಳೆ ಆಗಾಗ ಹೇಳುವಾಗ ಕಠಿಣತೆ ಅನಿಸಿದರೆ ಮೌನವಾಗಿರಬೇಕು. **ಮೌನಂ ಸರ್ವಾರ್ಥ ಸಾಧನಮ್** ಮೌನವಾಗಿರುವುದರಿಂದ ಸಮಸ್ತ ಕಾರ್ಯಗಳ ಸಿದ್ಧಿಯಾಗುತ್ತದೆ. ಧರ್ಮ ಭಾವನಾ ಶತಕದಲ್ಲಿ ಹೀಗೆ ಬರೆದಿದ್ದಾರೆ-

**ಅಪ್ರಿಯ ಕಟುಕ ಕಠೋರ ಶಬ್ದಗಳನು ರಾತ್ರಿ-ಹಗಲು ಹೇಳುವರು**
**ಪರನಿಂದೆ, ಚಾಡಿಗಳಿಂದಲೂ ಕೂಡ ಸತ್ಯ ಧರ್ಮವ ಮರೆಯುವರು**
**ಆತ್ಮ ಹೇಳದಿರಲಿ ಹಿಂಸೆಯಾಗುವ ಸತ್ಯವನು**
**ಎಲ್ಲಕ್ಕಿಂತ ಮನವು ಒಳಿತು, ಅದೇ ಆಗಿದೆ ಜಿನವರ ಸಮವೃತ್ತಿ॥40॥**

ಆಚಾರ್ಯರುಗಳು ಸತ್ಯಧರ್ಮದ ಪರಿಭಾಷೆಯನ್ನು ಅನೇಕ ರೂಪಗಳಲ್ಲಿ ಮಾಡಿದ್ದಾರೆ. ಬಾರಸಾಣುವೆಕ್ಖಾದಲ್ಲಿ ಹೀಗೆ ಹೇಳಿದ್ದಾರೆ-

**ಪರಸಂತಾವಯ ಕಾರಣ ವಯಣಂ ಮೋತ್ತೂಣ ಸಪರಹಿದವಯಣಂ**
**ಜೋ ವದದಿ ಭಿಕ್ಖು ತುರಿಯೋ ತಸ್ಸ ದು ಧಮ್ಮೋಹವೇ ಸಚ್ಚಂ॥74॥**

ಅರ್ಥಾತ್ ಬೇರೆಯವರಿಗೆ ಕ್ಲೇಶವನ್ನುಂಟು ಮಾಡುವ ವಚನಗಳನ್ನು ಬಿಟ್ಟು ತನ್ನ ಹಾಗೂ ಇತರರ ಹಿತ ಮಾಡುವ ವಚನಗಳನ್ನಾಡುವ ಮುನಿಗೆ ಸತ್ಯಧರ್ಮವಾಗುತ್ತದೆ. ಸತ್ಯದ ಧರ್ಮದ ಬಗ್ಗೆ ಕಾರ್ತಿಕೇಯಾನುಪ್ರೇಕ್ಷಾ ಗ್ರಂಥದಲ್ಲಿ ಆಚಾರ್ಯರು ಹೀಗೆ ಹೇಳಿದ್ದಾರೆ-

**ಜಿಣ-ವಯಣಮೇವ ಭಾಸದಿ ತಂ ಪಾಲೇದುಂ ಅಸಕ್ಕಮಾಣೋ ವಿ।**
**ವವಹಾರೇಣ ವಿ ಅಲಿಯಂ ಣ ವದದಿ ಜೋ ಸಚ್ಚವಾಈ ಸೋ॥398॥**

ಜಿನನ ಆಚಾರಗಳನ್ನು ಪಾಲನೆ ಮಾಡುವಲ್ಲಿ ಅಸಮರ್ಥರಾಗಿದ್ದರೂ, ಜಿನ ವಚನದ ವಿವರಣೆಯನ್ನು ಮಾಡುವ ಅದಕ್ಕಿಂತ ವಿಪರೀತ ವಿವರಣೆ ಮಾಡದಿರುವ ಹಾಗೂ

ವ್ಯವಹಾರದಲ್ಲಿಯೂ ಸಹ ಸುಳ್ಳಾಡದಿರುವವರು ಸತ್ಯವಾದಿಗಳಾಗಿದ್ದಾರೆ.

**ಸತ್ಯವಾಚಿ ಪ್ರತಿಷ್ಠಿತಃ ಸರ್ವಾಗುಣ ಸಂಪದಃ! ಅನೃತ ಭಾಷಿಣಂ ಬಂಧವ್ಯೋಪಿ ಅವಮನ್ಯತೇ ಮಿತ್ರಾಣಿ ಚ ಪರಿತ್ಯಜಂತಿ, ಜಿಹ್ವಾಚ್ಛೇದನ ಸರ್ವಸ್ವ-ಹರಣಾದಿ ವ್ಯಸನ ಭಾಗಪಿ ಭವತಿ (ತ. ವಾ. 9/6)**

ಎಲ್ಲ ಗುಣ ಸಂಪತ್ತುಗಳು ಸತ್ಯ ಹೇಳುವನಲ್ಲಿ ಪ್ರತಿಷ್ಠಿತವಾಗಿರುತ್ತವೆ. ಸುಳ್ಳನ್ನು ಬಂಧು ಜನರು ಸಹ ತಿರಸ್ಕಾರ ಮಾಡುತ್ತಾರೆ, ಅದಕ್ಕೆ ಯಾರೂ ಮಿತ್ರರಿರುವುದಿಲ್ಲ. ನಾಲಿಗೆ ಸೀಳುವಿಕೆ. ಸರ್ವಧನ ಹರಣ ಇತ್ಯಾದಿ ದಂಡಗಳನ್ನು ಆತನು ಭೋಗಿಸಬೇಕಾಗುತ್ತದೆ. **ತೇಷಾಮಸೌ ವಿರಜೋ ಬ್ರಹ್ಮ ಲೋಕೋ, ನ ಯೇಷು ಜಿಹ್ವ ಮನೃತಂ**ನ ಮಾಯಾ ಚೇತಿ. ಕುಟೀಲತೆ, ಅಸತ್ಯತೆ ಹಾಗೂ ಕಪಟತನ ಇಲ್ಲದಿರುವ ವ್ಯಕ್ತಿಗಳೇ ವಿಕಾರ ರಹಿತ(ಮುಕ್ತಿ)ವನ್ನು ಪಡೆಯುವ ಅಧಿಕಾರಿಯಾಗಿದ್ದಾರೆ. ಸತ್ಯದ ಸಂಬಂಧವು ಮನ, ಮೌನ-ಕಾಯ ಈ ಮೂರು ಯೋಗಗಳೊಂದಿಗಿದೆ. ಮುನಿವರ್ಯರು ತಮ್ಮ ವಚನಗುಪ್ತಿಯನ್ನು ಸತ್ಯದ ಮೂಲಕ ಪಾಲನೆ ಮಾಡುತ್ತಾರೆ. ಇದರಿಂದ ಅವರು ಸಂಸಾರದ ಅರ್ತಿ, ಪೀಡೆಯನ್ನು ಕ್ಷಯ ಮಾಡುತ್ತಾರೆ. ಸತ್ಯವು ಆತ್ಮ ಸಾಕ್ಷಾತ್ಕಾರದ ಸಾಧನವಾಗಿದೆ. ಆತ್ಮಾನುಭೂತಿಯ ವಸ್ತುವಾಗಿದೆ. ಪೂರ್ಣ ಸತ್ಯವು ಆತ್ಮನ ಅನುಭವವಿದೆ. ವ್ಯಕ್ತಿಯ ಜ್ಞಾನ ಮತ್ತು ಆಚರಣೆಯಲ್ಲಿ ಸಮಾನತೆಯಾದಾಗ ಅದರ ಪ್ರಭಾವ ಬೀಳುತ್ತದೆ. ಸತ್ಯದ ಪ್ರಭಾವ ಮಾತನಾಡದೆಯೇ ಬಿದ್ದು ಬಿಡುತ್ತದೆ. ಆದರೆ ಅಸತ್ಯದ ಅನೇಕ ವಾದಗಳು ವ್ಯರ್ಥವಾಗಿ ಬಿಡುತ್ತವೆ. ಒಂದು ಸಾರಿ ಸಹ ಸತ್ಯವನ್ನು ಬಿಟ್ಟ ವ್ಯಕ್ತಿಗೆ ಅಸತ್ಯವನ್ನು ಸತ್ಯವೆಂದು ಸಿದ್ಧ ಮಾಡಲು ಅನೇಕ ಸಾರಿ ಅಸತ್ಯದ ಪ್ರಯೋಗ ಮಾಡಬೇಕಾಗುತ್ತದೆ. ಹೀಗೆಯೇ ಒಂದು ಸಾರಿ ಅಸತ್ಯ ಹೇಳಿದ ನಂತರ ಅನೇಕ ಸಾರಿ ಸತ್ಯ ಹೇಳಿದರೂ ಸಹ ಆ ಸತ್ಯವನ್ನು ಸಹ ಅಸತ್ಯದ ಗುಂಪಿಗೆ ಸೇರಿಸಿ ಬಿಡುತ್ತಾರೆ. ಸತ್ಯ ಒಂದು ಪ್ರತೀತಿಯಾಗಿದೆ. ಅನುಭವವಾಗಿದೆ. ಅದನ್ನು ಶಬ್ಧಗಳ ಮೂಲಕ ವ್ಯಕ್ತವಾಗುವಂತಹುದು ಅದು ಸತ್ಯವಲ್ಲ ಸತ್ಯಾಂಶವಿದೆ. ಅದೇ ಸತ್ಯಾಂಶದ ಮಾಧ್ಯಮದಿಂದ ಶಾಶ್ವತ ಸತ್ಯವನ್ನು ಪಡೆಯಬೇಕಾಗಿದೆ.

ಉತ್ತಮ ಸತ್ಯಧರ್ಮವೆಂದರೆ ಶ್ರಮಣ ಧರ್ಮ, ಜೈನಾಚಾರ್ಯರು ಸತ್ಯವನ್ನು ಸ್ಥೂಲರೂಪದಲ್ಲಿ ಅಣುವ್ರತ ಹಾಗೂ ಸೂಕ್ಷ್ಮರೂಪದಲ್ಲಿ ಮಹಾವ್ರತಗಳ ಭೇದದಿಂದ ಎರಡು ರೂಪಗಳಲ್ಲಿ ಹೇಳಿದ್ದಾರೆ. ಸ್ಥೂಲರೂಪದಿಂದ ಹಿಂಸಾ ಪೂರ್ಣ ವಚನಗಳನ್ನಾಡಬಾರದು, ಕಠೋರ ಮತ್ತು ನಿಷ್ಠುರ ವಚನಗಳನ್ನಾಡಬಾರದು, ಇತರ ಗುಪ್ತ ವಿಷಯಗಳು ಪ್ರಕಟವಾಗುವಂತಹ ವಚನಗಳನ್ನು ಹೇಳಬಾರದು, ಹಿತ ಮಿತ-ಪ್ರಿಯ ವಚನ ಹೇಳಬೇಕು. ಎಲ್ಲ ಜೀವಿಗಳೊಂದಿಗೆ ಸಂತೋಷ ಜನಕ ವಚನಗಳನ್ನಾಡಬೇಕು, ಧರ್ಮದ ಪ್ರಕಾಶನ ಮಾಡುವ ವಚನ ಹೇಳುವುದು ಸತ್ಯಾಣುವ್ರತವಾಗಿದೆ. ಅಣು ವ್ರತ ರೂಪದಲ್ಲಿ ಸತ್ಯದ ಪರಿಪಾಲನೆ ಮಾಡದಿದ್ದರೆ ನಮ್ಮ ಗೃಹಸ್ಥ ಜೀವನವು ಸಹ ಪವಿತ್ರ ಹಾಗೂ ಶ್ರೇಷ್ಠವಾಗುವುದಿಲ್ಲ. ಸತ್ಯಾಣುವ್ರತವನ್ನು ಸರಿಯಾಗಿ ಪಾಲನೆ ಮಾಡಿದ ನಂತರ ಸತ್ಯ ಮಹಾವ್ರತವನ್ನು ಅಂಗೀಕಾರ ಮಾಡಬೇಕು. ರಾಗ, ದ್ವೇಷ, ಮೋಹ, ಪೈಶುನ್ಯ(ಚಾಡಿಕೋರತನ), ಅಸೂಯೆ ಮುಂತಾದವುಗಳ ವಶವಾಗಿ ಅಸತ್ಯ ಹೇಳಬಾರದು. ಅದರಿಂದ ಬೇರೆಯವರಿಗೆ ಸಂತಾಪವಾಗಬಹುದು. ಸರ್ವಥಾ ಅಸ್ತಿ ಅಥವಾ ನಾಸ್ತಿರೂಪದ ಏಕಾಂತ ವಾಕ್ಯವನ್ನು ತ್ಯಾಗ ಮಾಡಬೇಕು ಅಂತಹ ಸತ್ಯವಚನವನ್ನು ಹೇಳಬಾರದು. ಸೂತ್ರಾರ್ಥ ಅಥವಾ ದ್ವಾದಶಾಂಗವಾಣಿಯ ಅನ್ಯಥಾ ಪ್ರತಿಪಾದನೆ ಮಾಡದಿರುವುದು ಸತ್ಯ ಮಹಾವ್ರತವಾಗಿದೆ. ಉತ್ತಮ

ಸತ್ಯಧರ್ಮವನ್ನು ವೀತರಾಗಿಯೇ ಪರಿಪೂರ್ಣವಾಗಿ ಪ್ರಾಪ್ತ ಮಾಡಿಕೊಳ್ಳಬಲ್ಲರು. ನಿರ್ಗ್ರಂಥ ಮುನಿವರರೇ ಇಂತಹ ಶ್ರೇಷ್ಠ ಉತ್ತಮ ಸತ್ಯದ ಪರಿಪಾಲನೆ ಮಾಡಬಲ್ಲರು. ಇದರ ನಂತರ ವಚನಗುಪ್ತಿ ಇದೆ. ಮಾತನಾಡಲೇ ಬಾರದು ಯಾಕೆಂದರೆ ಸತ್ಯವು ಅನುಭವದ ಸಂಗತಿಯಾಗಿದೆ. ಇದರ ನಂತರ ಸತ್ಯಧರ್ಮದಿಂದಾಗುವ ಅನುಭವವನ್ನು ಯಾರಿಗೂ ಹೇಳಲಾಗದು. ಉತ್ತಮ ಸತ್ಯಧರ್ಮವಂತೂ ಮೂಕನ ಬೆಲ್ಲದಂತೆ ಇದೆ. ಯಾವುದನ್ನು ಮಾತುಗಳಲ್ಲಿ ಹೇಳಲಾಗದೋ ಅದೇ ಧರ್ಮವೆಂದು ಕರೆಯಲ್ಪಡುತ್ತದೆ. ಸತ್ಯದ ಆಶ್ರಯ ಪಡೆಯುವವರು ಶರೀರದಲ್ಲಿ ಅಡಗಿರುವ ಅನಂತ ಶಕ್ತಿ ಅವ್ಯಾಬಾಧ ಸುಖ, ಅನಂತ ಜ್ಞಾನದ ಜ್ಯೋತಿಯನ್ನು ಪಡೆಯುತ್ತಾರೆ.

ಸತ್ಯವ್ರತದ ರಕ್ಷಣೆಗಾಗಿ ಆಚಾರ್ಯ ಉಮಾಸ್ವಾಮಿಗಳು ತತ್ವಾರ್ಥ ಸೂತ್ರದ 7ನೇ ಅಧ್ಯಾಯದಲ್ಲಿ ಹೀಗೆ ಹೇಳಿದ್ದಾರೆ–

**ಕ್ರೋಧ ಲೋಭ ಭೀರುತ್ವ ಹಾಸ್ಯ ಪ್ರತ್ಯಾಖ್ಯಾನಾನ್ಯನುವೀಚಿ ಭಾಷಣಂ ಚ ಪಂಚ ॥5॥**

ಕ್ರೋಧ, ಲೋಭ, ಭೀರುತ್ವ(ಭಯ) ಮತ್ತು ಹಾಸ್ಯದ ತ್ಯಾಗ, ಅನುವೀಚೀ ರಕ್ಷಣೆ ಮಾಡಬೇಕೆಂದರೆ ಕ್ರೋಧದ ತ್ಯಾಗ, ಲೋಭದ ತ್ಯಾಗ, ಭಯದ ತ್ಯಾಗ, ಹಾಗೂ ಹಾಸ್ಯದ ತ್ಯಾಗ ಮಾಡುವುದು ಹಾಗೂ ಅನುವೀಚೀ ಭಾಷಣ–ಶಾಸ್ತ್ರಕ್ಕನುಗುಣವಾಗಿ ಹೇಳುವುದು. ಕ್ರೋಧದ ಕಾರಣದಿಂದ ವ್ಯಕ್ತಿ ಅಸತ್ಯವನ್ನು ಹೇಳುತ್ತಾನೆ. ಒಮ್ಮೊಮ್ಮೆ ಲೋಭದ ಭಾವನೆಯಿಂದಲೂ ಸಹ ಅಸತ್ಯವನ್ನು ಹೇಳಿ ಬಿಡುತ್ತಾನೆ, ಆಗ ಆತನಲ್ಲಿ ಬಹಳ ತೀವ್ರವಾದ ಲೋಭವಿರುತ್ತದೆ ಹಾಗೂ ಆಗಾಗ ಭಯಕ್ಕೆ ವಶನಾಗಿ ಅಸತ್ಯವನ್ನಾಡಿ ಬಿಡುತ್ತಾನೆ–ನನಗೆ ಸತಾಯಿಸುತ್ತಾರೆ, ಹೊಡೆಯುತ್ತಾರೆ, ಏನಾದರೂ ಹೇಳಿದರೆ ಎನ್ನುವ ಭಯದಿಂದ ಅಸತ್ಯವನ್ನಾಡುತ್ತಾನೆ. ಆಗಾಗ ನಗೆ ಹಾಸ್ಯದಲ್ಲಿಯೂ ಅಸತ್ಯವನ್ನು ಹೇಳಲಾಗುತ್ತದೆ. ಹಾಸ್ಯದಲ್ಲಿ ಯಾವ ಯಾವ ಶಬ್ಧಗಳು ಹೊರಬರುತ್ತವೋ ಅವು ಅಸತ್ಯರೂಪದಲ್ಲಿರುತ್ತವೆ. ಪ್ರಸನ್ನತೆ ಬೇರೆ, ಆದರೆ ಹಾಸ್ಯ ನಗು–ನಗುತ್ತಲೇ ಸಾಕಷ್ಟು ನಗಿಸುತ್ತಾ ಹರಟೆ ಹೊಡೆಯುತ್ತಾ, ಕೆಲಸವಿಲ್ಲದೆ ಕುಳಿತು ಸಾಕಷ್ಟು ಚರ್ಚೆ ಮಾಡುತ್ತಾರೆ, ಅದರಲ್ಲಿ ಅದೆಷ್ಟೊ ಮಾತುಗಳು ಕೆಡುಕಿಗೆ ಕಾರಣವಾಗಿ ಪರಸ್ಪರರಲ್ಲಿ ವೈರ ಭಾವನೆಗಳು ಉಂಟಾಗಿ ಬಹಳ ಸಹಜವಾಗಿ ತಮಾಶೆಗಾಗಿ ಎಂದು ಹೇಳಿ ಬಿಡುತ್ತಾರೆ. ತಮಾಶೆಗಾಗಿ ಹೇಳಿದೆ ಎನ್ನುತ್ತಾರೆ. ಅವರು ಅದೇ ಸರಿ ಎಂದು ಭಾವಿಸಿದರೆ ಏನು ಮಾಡುವುದು? ನೋಡು ನೀನು ತಮಾಶೆಯಲ್ಲಿ ಹೇಳಿದ್ದೆ ಆದರೆ ಆತನಿಗೆ ಮಾತು ನೋವುಂಟು ಮಾಡಿದೆ, ಅದನ್ನು ಆತ ಸರಿ ಎಂದು ಅಂದುಕೊಂಡಿದ್ದಾನೆ. ಎದುರಿಗಿರುವವರು ನೀವು ತಮಾಶೆಗಾಗಿ ಹೇಳಿದ್ದಿರೆಂದು ಭಾವಿಸುವರೇ? ಕೆಡಕು ಆಗಿ ಬಿಡುತ್ತದೆ. ನಗೆ ತಮಾಷೆಯಲ್ಲಿಯೂ ಸಹ ಅಸತ್ಯದ ಸಮರ್ಥನೆಯಾಗಿ ಬಿಡುತ್ತದೆ. ಹೀಗೆಯೇ ಆಗಮಕ್ಕನುಗುಣವಾಗಿ ಮಾತನಾಡದಿದ್ದರೆ ಅದು ಸಹ ಅಸತ್ಯದ ರೂಪವೇ ಆಗಿದೆ. ಆದ್ದರಿಂದ ಆಗಮಕ್ಕನುಗುಣವಾಗಿ ಮಾತುಗಳನ್ನಾಡಬೇಕು.

ಕ್ರೋಧದ ಕಾರಣದಿಂದಲೂ ಜನರು ಅಸತ್ಯವನ್ನಾಡುತ್ತಾರೆ. ವ್ಯಕ್ತಿಗೆ ಕ್ರೋಧ ಬಂದಾಗ ಆತ ಏನೇನು ಹೇಳುತ್ತಾನೆಂದು ಅವನಿಗೆ ಗೊತ್ತಿರುವುದಿಲ್ಲ. ನಾವು ಏನು ಹೇಳಿದೆವು ಎನ್ನುವುದು ಅವರ ಗಮನದಲ್ಲಿರುವುದಿಲ್ಲ. ಆದರೆ ನಂತರ ಪಶ್ಚಾತ್ತಾಪ ಪಡುತ್ತಾ ನನ್ನನ್ನು ಕ್ಷಮಿಸಿ ತನ್ನಷ್ಟಕ್ಕೆ ತಾನೇ, ಬಾಯಿಂದ ಬಂದು ಬಿಟ್ಟಿತು, ಧ್ಯಾನವಿರಲಿಲ್ಲ ಎನ್ನುತ್ತಾರೆ ಕ್ರೋಧದಲ್ಲಿ ಧ್ಯಾನ ಎಲ್ಲಿರುತ್ತದೆ. ಕ್ರೋಧದ ಅವಸ್ಥೆ ಹಾಗೂ ಅದರಲ್ಲಿರುವ ಅಗ್ನಿಯ ಗುಣಗಳ ಕಾರಣ ಧರ್ಮದ ಎಲ್ಲ ಗುಣಗಳು

ಸುಟ್ಟು ಹೋಗುತ್ತವೆ ಹಾಗೂ ಆ ಸಮಯ ಆ ಉತ್ತೇಜನದಲ್ಲಿ ಬಾಯಿಂದ ಯಾವ ಯಾವ ಶಬ್ದಗಳು ಹೊರ ಬರುತ್ತವೆ ಎನ್ನುವುದನ್ನು ಊಹಿಸಲು ಸಾಧ್ಯವಿಲ್ಲ. ವ್ಯಕ್ತಿ ಪೂರ್ಣರೂಪದಲ್ಲಿ ಕುರುಡನಾಗಿ ಬಿಡುತ್ತಾನೆ, ಕಿವುಡನಾಗಿ ಬಿಡುತ್ತಾನೆ, ಆದ್ದರಿಂದ ಕ್ರೋಧದ ತ್ಯಾಗ ಮಾಡಬೇಕು. ಕ್ರೋಧ ದೂರವಾಗಿ ಬಿಟ್ಟರೆ ಅಸತ್ಯ ವಚನಗಳು ಹೊರಡುವುದಿಲ್ಲ. ಮೌನವಾಗಿರುವುದರಿಂದ ಕ್ರೋಧವು ಶಾಂತವಾಗುತ್ತದೆ. ಕ್ರೋಧದಿಂದ ರಕ್ಷಣೆ ಪಡೆಯಲು ಇರುವ ದೊಡ್ಡ ಉಪಾಯವೆಂದರೆ ಮೌನವಾಗಿರುವುದು, ಮೌನವು ಬಹಳಷ್ಟು ಅನರ್ಥಗಳಿಂದ ವ್ಯಕ್ತಿಯನ್ನು ರಕ್ಷಿಸಿ ಬಿಡುತ್ತದೆ. ಕ್ರೋಧ ಒಂದು ಹೊಳೆಯುವ ಕಷಾಯವಾಗಿದೆ. ವ್ಯಕ್ತಿಯ ಇಚ್ಛೆಗಳ ಪೂರ್ತಿಯಲ್ಲಿ ಅಡೆತಡೆಯುಂಟಾದಾಗ ಕ್ರೋಧ ಬರುತ್ತದೆ. ಮನಸ್ಸು ಬಯಸಿದ್ದು ಸಿಗದಿದ್ದಾಗಲೂ ಸಹ ಕ್ರೋಧ ಬರುತ್ತದೆ. ಮಾನಸಿಕ ಅಸ್ತ-ವ್ಯಸ್ತತೆಯ ಅವಸ್ಥೆಯಲ್ಲಿಯೂ ಕ್ರೋಧದ ಸ್ಥಿತಿ ನಿರ್ಮಾಣವಾಗುತ್ತದೆ. ಅಸ್ವಸ್ಥತೆಯ ಅವಸ್ಥೆಯಲ್ಲಿಯೂ ಸಹ ವ್ಯಕ್ತಿ ಕ್ರೋಧ ಪಡುತ್ತಾನೆ, ವ್ಯಕ್ತಿ ಯಾವುದಾದರೂ ಕೆಲಸದಲ್ಲಿ ಸಿಲುಕಿದಾಗ. ಸಮಾಧಾನ ಸಿಗದಿರುವಾಗ, ಆತಂಕವಾಗುತ್ತಿರುವಾಗ ಸಹ ಕ್ರೋಧ ಬಂದು ಬಿಡುತ್ತದೆ. ಕ್ರೋಧದಲ್ಲಿ ವ್ಯಕ್ತಿ ಕುರುಡನಾಗುತ್ತಾನೆ. ಆತನಿಗೆ ಏನೂ ಸಮಾಧಾನ ನೀಡುವುದಿಲ್ಲ. ವಿವೇಕ ಶೂನ್ಯ ಚೇತನಾ ಶೂನ್ಯನಾಗಿ ಬಿಡುತ್ತಾನೆ. ಕ್ರೋಧವು ಧರ್ಮವನ್ನು ನಷ್ಟಗೊಳಿಸುತ್ತದೆ. ಒಂದು ಕ್ಷಣದ ಕ್ರೋಧ ಅನೇಕ ಭವಗಳಿಂದ ಸಂಗ್ರಹವಾಗಿದ್ದ ಪುಣ್ಯ ವ್ರತ, ತಪ, ನಿಯಮ, ಉಪವಾಸ ಇತ್ಯಾದಿಗಳನ್ನು ನಷ್ಟ ಪಡಿಸುತ್ತದೆ. ಕ್ರೋಧಿ ಜೀವವು ಅಧೋಗತಿಯನ್ನು ಹೊಂದುತ್ತದೆ. ಕ್ರೋಧದ ಕಾರಣದಿಂದಲೂ ಅಸತ್ಯವನ್ನು ಹೇಳಿ ಬಿಡುತ್ತಾರೆ. ಇದರ ದೃಷ್ಟಾಂತವು ದೊಡ್ಡ ಮಾರ್ಮಿಕ ಹಾಗೂ ಹೃದಯ ಸ್ಪರ್ಶಿಯಾಗಿದೆ-

ಸ್ವಸ್ತಿಕಾವತಿ ಹೆಸರಿನ ಒಂದು ನಗರವಿದ್ದಿತು. ವಿಶ್ವಾವಸು ಅಲ್ಲಿಯ ರಾಜನಾಗಿದ್ದನು ಆತನಿಗೆ ವಸು ಹೆಸರಿನ ಮಗನಿದ್ದನು. ಅದೇ ನಗರದಲ್ಲಿ ಕ್ಷೀರಕದಂಬ ಹೆಸರಿನ ಉಪಾಧ್ಯಾಯರು ಇರುತ್ತಿದ್ದರು. ಅವರು ಸರಳ ಸ್ವಭಾವದ, ಚಾರಿತ್ರ್ಯವಂತ, ಪ್ರಕಾಂಡ ವಿದ್ವಾಂಸರಾಗಿದ್ದರು. ಜಿನದೇವನ ಪರಮ ಭಕ್ತರಾಗಿದ್ದರು. ಶಾಂತಿ ವಿಧಾನ, ಹವನ, ಅನುಷ್ಠಾನ ಇತ್ಯಾದಿಗಳ ಮೂಲಕ ಗೃಹಸ್ಥರ ಶಾಂತಿ-ಸುಖಗಳಿಗಾಗಿ ಅನುಷ್ಠಾನ ಮಾಡಿಸುತ್ತಿದ್ದರು. ಅವರಿಗೆ ಪರ್ವತ ಹೆಸರಿನ ಮಗನಿದ್ದನು. ಉಪಾಧ್ಯಾಯರ ಬಳಿ ಅನೇಕ ವಿದ್ಯಾರ್ಥಿಗಳು ವಿದ್ಯಾಧ್ಯಯನ ಮಾಡುತ್ತಿದ್ದರು. ಅವರಲ್ಲಿ ಅವರ ಮಗ ಪರ್ವತ, ಶ್ರೇಷ್ಠಿಯ ಮಗ ನಾರದ ಹಾಗೂ ರಾಜಪುತ್ರ ವಸು ಪ್ರಮುಖರಾಗಿದ್ದರು. ಈ ಮೂವರಲ್ಲಿ ಪರಸ್ಪರ ಅತ್ಯಂತ ಸ್ನೇಹವಿದ್ದಿತು. ಗುರು ಉಪಾಧ್ಯಾಯರು ಎಲ್ಲರಿಗೂ ಸಮಾನ ಶಿಕ್ಷಣ ನೀಡುತ್ತಿದ್ದರು. ಸಮಾನ ಶಿಕ್ಷಣ ನೀಡಿದರೆ ಎಲ್ಲರಿಗೂ ಸಮಾನ ರೂಪದಿಂದ ವಿದ್ಯೆ ಜ್ಞಾಪಕದಲ್ಲಿರುತ್ತದೆಂದು ಹೇಳಲಾಗದು. ಗುರು ಎಲ್ಲರಿಗೂ ಸಮಾನವಾಗಿ ಓದಿಸುತ್ತಾರೆ. ಆದರೆ ಎಲ್ಲರಿಗೂ ಅವರದೇ ಆದ ಶಕ್ತಿ ಇರುತ್ತದೆ. ತರಗತಿಯಲ್ಲಿ ನೂರು ವಿದ್ಯಾರ್ಥಿಗಳು ಓದುತ್ತಿದ್ದರೆ ನೂರಕ್ಕೆ ನೂರರಷ್ಟು ಉತ್ತೀರ್ಣರಾಗುತ್ತಾರೆಂದು ಹೇಳಲಾಗದು, ಕೆಲವರು ಅನುತ್ತೀರ್ಣರಾಗುತ್ತಾರೆ ಇದು ಅವರವರ ಯೋಗ್ಯತೆ ಆಗಿದೆ.

ಕಾಲಾಂತರದಲ್ಲಿ ಗುರುವಿನಿಂದ ದೀಕ್ಷಿತರಾದ ನಂತರ ಅವರ ಮಗ ಪರ್ವತರು ಉಪಾಧ್ಯಾಯ ಪದವಿಯನ್ನು ಹೊಂದಿದರು ಹಾಗೂ ಅವರು ಮಕ್ಕಳಿಗೆ ಧರ್ಮಾಧ್ಯಯನ ಮಾಡಿಸತೊಡಗಿದರು. ರಾಜಕುಮಾರ ವಸು ಸಹ ರಾಜನಾಗಿ ನ್ಯಾಯಪೂರ್ವಕ ರಾಜ್ಯಭಾರದಲ್ಲಿ ತೊಡಗಿದನು.

ರಾಜಾ ವಸುವಿನ ಸಿಂಹಾಸನದ ಕಾಲುಗಳು ಸ್ಫಟಿಕಮಣಿಯಿಂದ ರಚನೆಯಾಗಿದ್ದವು. ಅದನ್ನು ನೋಡಿದವರಿಗೆ ರಾಜನ ಸಿಂಹಾಸನ ಅಂತರಿಕ್ಷದಲ್ಲಿದೆ ಎಂದು ಅನಿಸುತ್ತಿದ್ದಿತು. ಆತನ ಪುಣ್ಯದ ಪ್ರಭಾವದಿಂದ ಪ್ರಜೆಗಳಲ್ಲಿ ರಾಜನು ಬಹಳ ಸತ್ಯವಾದಿಯಾಗಿದ್ದಾನೆಂದು ಪ್ರಸಿದ್ಧಿಯಾಗಿದ್ದು ಸತ್ಯದ ಬಲದಿಂದಲೇ ರಾಜನ ಸಿಂಹಾಸನ ಆಕಾಶದಲ್ಲಿ ಅಂತರಿಕ್ಷದಲ್ಲಿ ನಿಂತಿದೆ ಎಂದು ಭಾವಿಸಲಾಗಿದ್ದಿತು. ರಾಜಾ ವಸು ಆ ಸಿಂಹಾಸನದ ಮೇಲೆ ಆಸೀನನಾಗುತ್ತಿದ್ದನು.

ಶ್ರೇಷ್ಠಿಯ ಮಗ ನಾರದ ಕುಶಾಗ್ರ ಬುದ್ಧಿಯುಳ್ಳವನಾಗಿದ್ದನು. ಒಂದು ದಿನ ಆತ ತನ್ನ ಸಹಪಾಠಿ ಗುರುಪುತ್ರ ಪರ್ವತನನ್ನು ಭೇಟಿಯಾಗಲು ಬಂದನು. ಸಂಯೋಗದಿಂದ ಪರ್ವತನು ಆ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಓದಿಸುತ್ತಿದ್ದ. **"ಅಜೈರ್ಯಷ್ಟವ್ಯಮ್"** ಈ ಸೂತ್ರ ವಾಕ್ಯದ ಅರ್ಥವನ್ನು ಆತ ತಿಳಿಸುತ್ತಾ "ಕುರಿಗಳಿಂದ (ಮೇಕೆ) ಯಜ್ಞ ಮಾಡಬೇಕು" ಎಂದು ಹೇಳಿದ. ಇದನ್ನು ಕೇಳಿದ ನಾರದನು ಮಧ್ಯೆ ಬಾಯಿ ಹಾಕಿ ಈ ಶ್ರುತಿ ವಾಕ್ಯದ ಅರ್ಥ ಹಾಗಲ್ಲ ಎಂದು ಹೇಳಿದ. ಹೇ ಗೆಳೆಯಾ! ಪರಮ ಜ್ಞಾನಿ ಗುರುಗಳು ಇದರ ಅರ್ಥವನ್ನು **'ಅಜೈಸ್ತ್ರಿ ವಾರ್ಷಿಕೈರ್ಧಾನ್ಯೈರ್ತಷ್ಟವ್ಯಮ್'** ಹೇಗೆ ಹೇಳಿದ್ದಾರೆ. ಅಜದ ಅರ್ಥ–ಅಂಕುರ ಉತ್ಪನ್ನವಾಗುವ ಶಕ್ತಿ ಇಲ್ಲದಿರುವ; ಇದರ ಅರ್ಥ ಮೂರು ವರ್ಷ ಹಳೆಯದಾದ ಧಾನ್ಯದಿಂದ ಶಾಂತಿ ಅಥವಾ ಪುಷ್ಟಿ ಕಾರ್ಯಕ್ಕಾಗಿ ಯಜ್ಞಹವನ ಮಾಡಬೇಕು. ನಿಮ್ಮ ತಂದೆ ಹೇಳಿರುವ ಅರ್ಥದ ಅನರ್ಥ ಮಾಡುವುದು ನಿನಗೆ ಶೋಭಿಸುವುದಿಲ್ಲ. ನಿನ್ನ ಬುದ್ಧಿ ವಿಪರೀತವಾಗಿದೆ. ನೀನು ಅಜದ ಅರ್ಥ ಮೇಕೆ–ಕುರಿ ಎಂದು ಹೇಳುತ್ತಿರುವೆ. ಪರ್ವತನು ನಾರದನ ಒಂದು ಮಾತನ್ನು ಒಪ್ಪಲಿಲ್ಲ. ವಿವಾದ ಹೆಚ್ಚಾಯಿತು. ಇಬ್ಬರೂ ತಮ್ಮದೇ ಸರಿ ಎಂದರು ಇದರ ನಿರ್ಣಯವನ್ನು ರಾಜಾ ವಸುವಿನ ಆಸ್ಥಾನದಲ್ಲಿ ಮಾಡಿಸಲು ಒಪ್ಪಿಕೊಂಡರು.

ಮನೆಗೆ ಬಂದ ಪರ್ವತ ತನ್ನ ತಾಯಿಗೆ ಎಲ್ಲ ವೃತ್ತಾಂತವನ್ನು ಹೇಳಿದ. ಗುರು ಮಾತೆ ಶಾಸ್ತ್ರ ಬಲ್ಲವಳಾಗಿದ್ದಳು. ಅವಳು ತನ್ನ ಮಗ ಪರ್ವತ ಸರಿಯಾಗಿ ಅರ್ಥ ಮಾಡಿಲ್ಲವೆಂದು ತಿಳಿದು ಅವಳು ಪರ್ವತನಿಗೆ ತಿಳಿಸುತ್ತಾ ಮಗನೇ ನೀನು ಈ ಶ್ರುತಿಯ ವಿಪರೀತ ಅರ್ಥ ಮಾಡಿದ್ದಿಯಾ. ನಾರದ ಸರಿಯಾಗಿ ಹೇಳುತ್ತಿದ್ದಾನೆ, ನಿಮ್ಮ ತಂದೆಯು ಹಾಗೆಯೇ ಅರ್ಥವನ್ನು ತಿಳಿಸಿದ್ದರು. ಅದನ್ನೇ ಸ್ವೀಕರಿಸಬೇಕು–ಎಂದು ಹೇಳಿದಳು. ಆದರೆ ಪರ್ವತನು ತನ್ನ ದುರಾಗ್ರಹದಿಂದ ಹಿಂದೆ ಸರಿಯಲಿಲ್ಲ. ಆತ ತನ್ನ ಹಠ ಸಾಧಿಸಲು ತಾಯಿ ಹೇಳಿದ್ದನ್ನು ಒಪ್ಪಲಿಲ್ಲ. ವಿಪತ್ತಿನ ಕಾಲ ಬಂದಾಗ ಮನುಷ್ಯನ ಬುದ್ಧಿ ವಿಪರೀತ ಅರ್ಥಾತ್ ಮಲೀನವಾಗುತ್ತದೆಂದು ಹೇಳುತ್ತಾರೆ. (ವಿನಾಶಕಾಲೇ ವಿಪರೀತ ಬುದ್ಧಿ) ಪರ್ವತ ತಾಯಿಗೆ ಆತನ ಪುತ್ರ ಸುಳ್ಳು ಹೇಳುತ್ತಿದ್ದಾನೆಂದು ತಿಳಿದಿದ್ದಿತು. ಆದರೂ ಮಗನ ಮೇಲಿನ ಮೋಹದಿಂದ ಅವಳು ರಾಜಾ ವಸುವಿನ ಬಳಿ ತೆರಳಿ, ರಾಜಾ ವಸುವಿಗೆ ಎಲ್ಲಾ ವಿಷಯವನ್ನು ತಿಳಿಸಿ ಗುರುಮಾತೆಗೆ ನೀಡುವ ಅನುಗ್ರಹಕ್ಕೆ ಬದಲಾಗಿ ಪರ್ವತನಿಗೆ ಬೆಂಬಲ ನೀಡಬೇಕೆಂದು ಹೇಳಿದಳು.

ರಾಜಾ ವಸುವಿಗೆ ಇದನ್ನು ಕೇಳಿ ನಡುಕ ಉಂಟಾಯಿತು. ಆತ ಧರ್ಮಸಂಕಟಕ್ಕೊಳಗಾದ ಏನು ಮಾಡಲಿ? ಏನೂ ತಿಳಿಯುತ್ತಿಲ್ಲವಲ್ಲ. ಈ ನಿರ್ಣಾಯಕ ಪ್ರಸಂಗದಲ್ಲಿ ಸಿದ್ಧಾಂತ ಪ್ರತಿಪಾದನೆಯ ಸಂದರ್ಭದಲ್ಲಿ ಆಗ ಅಹಿಂಸೆ ಅಥವಾ ಹಿಂಸೆಯ ಪರಂಪರೆ ಸಾಗುವ ಪ್ರಶ್ನೆಯಾಗಿದ್ದಿತು. ರಾಜ ಸಭೆಯಲ್ಲಿ ರಾಜಾ ವಸು ತನ್ನ ಸ್ಫಟಿಕ ಸಿಂಹಾಸನದಲ್ಲಿ ಆರೂಢನಾಗಿದ್ದನು. ನಾರದ ಹಾಗೂ ಪರ್ವತ ಹಾಗೂ ಜೊತೆಗೆ ಪರ್ವತನ ತಾಯಿ ರಾಜಸಭೆಯಲ್ಲಿ ನ್ಯಾಯ ಮಾಡಿಸಲು ಬಂದರು.

ರಾಜನ ನಿರ್ಣಯವನ್ನು ನೋಡಲು ಬಹಳಷ್ಟು ಜನರು ಒಂದೆಡೆ ಸೇರಿದ್ದರು. ಇಬ್ಬರೂ 'ಅಜೈರ್ಯಷ್ಟವ್ಯಮ್' ತಮ್ಮ ತಮ್ಮ ಅರ್ಥಗಳನ್ನು ರಾಜನಿಗೆ ಕೇಳಿಸಿದರು ಹಾಗೂ ತಾವು ಸಹ ನಮ್ಮಿಬ್ಬರ ಸಹಪಾಠಿಗಳಾಗಿದ್ದಿರಿ ಗುರುಗಳು ಇದರ ಅರ್ಥವನ್ನು ಏನೆಂದು ಮಾಡಿದ್ದರು. ನೀವೇ ತಿಳಿಸಿರಿ ಎಂದು ಹೇಳಿದರು. ರಾಜನ ನಿರ್ಣಯದ ಪ್ರತೀಕ್ಷೆಯಲ್ಲೊ ತೊಡಗಿದರು. ರಾಜನು ಈ ವಿಷಯವನ್ನು ಯಾಕೆ ಹೆಚ್ಚಿಸುವುದು. ರಾಜಾ ವಸುವಿನ ಸ್ಮರಣೆಯಲ್ಲಿ ಸರಿಯಾದ ಅರ್ಥ ಮೂರು ವರ್ಷ ಹಳೆಯ ಧಾನ್ಯ ಎಂದಿದೆ ಅದರಿಂದ ಹವನ ಮಾಡಬೇಕು ಎಂದು ಗುರುಗಳು ಅರ್ಥಮಾಡಿದ್ದರು. ಇಬ್ಬರಿಗೂ ತಿಳಿಸಿದ ನಾರದನಿಗೆ ರಾಜಾ ವಸು ನ್ಯಾಯನಿಷ್ಠನಾಗಿದ್ದು ತನ್ನ ಪಕ್ಷದಲ್ಲಿ ನಿರ್ಣಯ ನೀಡುತ್ತಾನೆಂಬ ಪೂರ್ಣ ವಿಶ್ವಾಸವಿದ್ದಿತು, ಪರ್ವತನ ಹೃದಯದಲ್ಲಿ ಸ್ವಲ್ಪ ಸಂದೇಹವಿದ್ದಿತು. ಆದರೆ ಗುರುಮಾತೆಗೆ ರಾಜಾ ವಸು ಪರ್ವತನ ಪಕ್ಷದಲ್ಲಿ ನಿರ್ಣಯ ಕೊಡುವುದಾಗಿ ವಚನ ನೀಡಿದ್ದನು. ಆದ್ದರಿಂದ ರಾಜನಿಗೆ ತೀವ್ರ ಕ್ರೋಧ ಬಂದು ಆತ ಅಜದ ಅರ್ಥ ಪರ್ವತ ಹೇಳಿದ ಹಾಗೇ ಎಂದು ಹೇಳಿ ಬಿಟ್ಟನು. ಸರಿ ಮತ್ತೇನು? ಅಸತ್ಯದ ಪಕ್ಷದಲ್ಲಿ ನಿರ್ಣಯ ಹೇಳಿದ ಕೂಡಲೇ ರಾಜಾ ವಸುವಿನ ಸಿಂಹಾಸನ ನೆಲಕ್ಕುರುಳಿತು ಹಾಗೂ ಪಾತಾಳ ಸೇರತೊಡಗಿತು. ಇದನ್ನು ನೋಡಿದ ನಾರದ–ಹೇ ರಾಜನ್ ನೋಡು ಕ್ರೋಧ ಮತ್ತು ಮಹಾ ಅಸತ್ಯದ ಫಲ ಈಗಲಾದರೂ ರಕ್ಷಿಸಿಕೋ ಆದರೆ ರಾಜನು ನಾರದನ ಮಾತುಗಳ ಕಡೆಗೆ ಗಮನ ನೀಡಲಿಲ್ಲ. ಕೊನೆಗೆ ಸತ್ತು ನರಕಗತಿಯನ್ನು ಪಡೆದನು. ಕ್ರೋಧಕ್ಕೆ ವಶನಾಗಿ ಅಸತ್ಯವನ್ನು ಮಾತನಾಡಿದ್ದರಿಂದ ನರಕವನ್ನು ತಲುಪಿದ. ಪೂಜೆಯಲ್ಲಿ ಈ ಸಾಲನ್ನು ಓದುತ್ತಿರಾ–

**ವಸು ಝೂಟ ಸೇತಿ ನರಕ ಪಹುಂಚಾ, ಸ್ವರ್ಗಮೇ ನಾರದ ಗಯಾ।**

(ವಸು ಅಸತ್ಯ ಹೇಳಿ ನರಕ ತಲುಪಿದ, ಸ್ವರ್ಗ ಸೇರಿದ ನಾರದ)

ಅಸತ್ಯವನ್ನು ಎಂದಿಗೂ ಹೇಳಬಾರದು ಹಾಗೂ ಎಂದಿಗೂ ಅಸತ್ಯದ ಪಕ್ಷನ್ನು ವಹಿಸಬಾರದೆಂದು ಈ ದೃಷ್ಟಾಂತದಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಕ್ರೋಧವು ಅಸತ್ಯದ ಜೋಳಿಗೆಯಲ್ಲಿ ಹಾಕಿ ಬಿಡುತ್ತದೆ. ಸತ್ಯ ಮತ್ತು ಕ್ರೋಧ ಪರಸ್ಪರ ವಿರೋಧಿ ತತ್ವಗಳಾಗಿವೆ. ಕ್ರೋಧವು ವಿವೇಕದ ಹರಣ ಮಾಡಿ ಬಿಡುತ್ತದೆ ಹಾಗೂ ಅವಿವೇಕ ಇರುವಲ್ಲಿ ಸತ್ಯ ಇರುವುದಿಲ್ಲ. ರಾಜಾ ವಸುವು ಕ್ರೋಧ ವಶನಾಗಿ ಮಿಥ್ಯಾ ನಿರ್ಣಯ ನೀಡಿದ್ದರಿಂದ ಆತನು ಕೂಡಲೇ ಪತನ ಹೊಂದಿದ ದುರ್ಗತಿಗೆ ಪಾತ್ರನಾದ.

ಲೋಭದ ಕಾರಣದಿಂದಲೂ ಜನರು ಅಸತ್ಯವನ್ನಾಡುತ್ತಾರೆ. ಲೋಭವಿರುವಲ್ಲಿ ನಿಯಮದಿಂದ ಅಸತ್ಯವಿದೆ. ಲೋಭದಲ್ಲಿ ಬಂದು ಜನರು ತಮ್ಮ ಸ್ವಾರ್ಥವನ್ನು ಸಾಧಿಸಲು ಅಸತ್ಯವನ್ನು ಹೇಳುತ್ತಾರೆ. ರೂಪಾಯಿ ಹಣ ಸಂಪತ್ತಿನ ಲೋಭದಲ್ಲಿ ಬಿದ್ದು ವ್ಯಕ್ತಿ ನ್ಯಾಯ ನೀತಿಯನ್ನು ಬಿಟ್ಟು ಬಿಡುತ್ತಾರೆ ಹಾಗೂ ಹೇಗಾದರೂ ಸರಿ ಸಮೃದ್ಧ ವೈಭವ ಶಾಲಿಯಾಗಲು ಅಸತ್ಯದ ಆಸರೆಯನ್ನು ಹೊಂದುತ್ತಿರುತ್ತಾರೆ. ಒಬ್ಬ ದೊಡ್ಡ ವ್ಯಾಪಾರಿ ಇದ್ದನು. ಗಿರವಿ ಇಟ್ಟುಕೊಳ್ಳುವ ಕಾರ್ಯ ಮಾಡುತ್ತಿದ್ದನು. ಇಂದು ನೀವು ಫೈನಾನ್ಸ್ ಎಂದು ಹೇಳುತ್ತಿರಲ್ಲ ಅಂತಹ ಕೆಲಸ ಮಾಡುತ್ತಿದ್ದನು. ಅನೇಕ ಜನರು ವಸ್ತುಗಳನ್ನು ಇಡಲು ಬರುತ್ತಿದ್ದರು. ತಮ್ಮ ವಸ್ತು ಇಟ್ಟು ಹೋಗುತ್ತಿದ್ದರು. ರತ್ನ, ಮುತ್ತು, ಆಭರಣ ಇತ್ಯಾದಿ ಏನೇನು ಇರುತ್ತಿತ್ತು ಇಟ್ಟು ಹೋಗುತ್ತಿದ್ದರು ಆ ವ್ಯಾಪಾರಿ ತನ್ನಷ್ಟಕ್ಕೆ ತನ್ನನ್ನು ಸತ್ಯವಾದಿ ಎಂದು ಘೋಷಣೆ ಮಾಡಿಕೊಂಡಿದ್ದನು. ಆದ್ದರಿಂದ ಜನರು ಅವನನ್ನು ಸತ್ಯಘೋಷನೆಂದು ಕರೆಯತೊಡಗಿದರು. ವಸ್ತುಗಳನ್ನು ಇಡುವವರಿಗೆ ಸರಿಯಾದ ಸಮಯದಲ್ಲಿ ಹಿಂದಿರುಗಿಸುತ್ತಿದ್ದ. ಜನರಿಗೆ ಆತನಲ್ಲಿ

ವಿಶ್ವಾಸ ಹೆಚ್ಚತೊಡಗಿತು. ಆತ ನಾನೆಂದೂ ಅಸತ್ಯವನ್ನಾಡುವುದಿಲ್ಲವೆಂದು ಹೇಳುತ್ತಿದ್ದ. ನಾನು ಯಾರದಾದರೂ ಹಣವನ್ನಿಟ್ಟು ಅಸತ್ಯ ಹೇಳಿದರೆ ನನ್ನ ಬಳಿ ಜನಿವಾರದಲ್ಲಿರುವ ಚೂರಿಯಿಂದ ತನ್ನ ನಾಲಿಗೆಯನ್ನು ಕತ್ತರಿಸಿಕೊಳ್ಳುವೆ. ಎಲ್ಲ ಜನರು ವ್ಯಾಪಾರಿ ಬಗ್ಗೆ ಬಹಳ ವಿಶ್ವಾಸ ಹೊಂದಿದ್ದರು; ಆದರೆ ಒಂದು ದಿನ ಪರೀಕ್ಷೆ ಆಗಿಯೇ ಹೋಯಿತು.

ಒಂದು ದಿನ ಸಮುದ್ರದತ್ತ ಹೆಸರಿನ ವ್ಯಾಪಾರಿಯು ಶ್ರೀಭುತಿ ಪುರೋಹಿತ ಅಪರ ಹೆಸರು ಸತ್ಯಘೋಷನ ವ್ಯವಹಾರದಿಂದ ಪ್ರಸನ್ನನಾಗಿ ತನ್ನ ಬಳಿ ಇದ್ದ ಐದು ಬೆಲೆ ಬಾಳುವ ರತ್ನಗಳನ್ನು ಅವನ ಬಳಿ ಬಂದು–ನಾನು ವಿದೇಶ ವ್ಯಾಪಾರಕ್ಕಾಗಿ ತೆರಳುತ್ತಿದ್ದೇನೆ. ನನ್ನ ಈ ರತ್ನಗಳನ್ನು ಇಟ್ಟುಕೊಳ್ಳಿ ತಿರುಗಿ ಬಂದ ನಂತರ ತೆಗೆದುಕೊಳ್ಳುವೆ–ಎಂದು ಹೇಳಿದ. ಸರಿ ಎಂದ ಸತ್ಯಘೋಷ ಇಟ್ಟುಕೊಂಡ ಆ ವ್ಯಕ್ತಿ ತನ್ನ ರತ್ನಗಳನ್ನಿಟ್ಟು ಹೊರಟು ಹೋದನು ವಿದೇಶದಲ್ಲಿ ಆತ ಸಾಕಷ್ಟು ಹಣ ಸಂಪಾದಿಸಿದ ಪುಣ್ಯದ ಯೋಗವಿದ್ದಿತು. ಆದರೆ ಹಣ ತೆಗೆದುಕೊಂಡು ತನ್ನ ದೇಶದ ಕಡೆಗೆ ಹೊರಟಾಗ ಆತನಿಗೆ ಆಕಸ್ಮಿಕವಾಗಿ ಒಂದು ದೊಡ್ಡ ವ್ಯಾಪಾರದಲ್ಲಿ ಹಾನಿಯಾಯಿತು. ಕರ್ಮದ ಗತಿಯು ಬಹಳ ವಿಚಿತ್ರವಾಗಿರುತ್ತದೆ. ಅಷ್ಟೊಂದು ಇದ್ದ ಧನ ಸಂಪತ್ತು ಆದರೆ ಈಗ ದಿವಾಳಿಯಾಗಿ ಬಳಿಯಲ್ಲಿ ಏನೂ ಉಳಿಯಲಿಲ್ಲ. ತನ್ನ ದೇಶಕ್ಕೆ ಹಿಂದಿರುಗಲೂ ಆತನ ಬಳಿ ದುಡ್ಡು ಇರಲಿಲ್ಲ. ಹಾಗೂ–ಹೀಗೂ ಜನರಿಂದ ಹಣ ಸಂಗ್ರಹಿಸಿ ತನ್ನ ದೇಶಕ್ಕೆ ಬಂದನು. ಆದರೆ ಆತನ ಬಳಿ ಏನೂ ಇರಲಿಲ್ಲ ಮನೆಯಲ್ಲಿಯೂ ಏನೂ ಇರದೇ ಎಲ್ಲವೂ ಖಾಲಿಯಾಗಿದ್ದಿತು.

ಸತ್ಯಘೋಷನಿಗೆ ತನ್ನ ಬಳಿ ಐದು ರತ್ನಗಳನ್ನಿಟ್ಟು ಹೋಗಿದ್ದ ವ್ಯಕ್ತಿ ಆತ ಸರ್ವನಾಶ ಹೊಂದಿದ್ದಾನೆಂದು ತಿಳಿಯಿತು. ಆತನದೆಲ್ಲಾ ಹೊರಟು ಹೋಗಿದೆ ಎಂದಾಗ ಆತನ ಮನಸ್ಸಿನಲ್ಲಿ ಅ ಬೆಲೆಬಾಳುವ ರತ್ನಗಳ ಬಗ್ಗೆ ಲೋಭ ಉಂಟಾಯಿತು ಈಗ ಆತ ರತ್ನ ಪಡೆಯಲು ಬರುತ್ತಾನೆಂದು ಯೋಚಿಸಿದನು. ಆದ್ದರಿಂದ ಆತ ಮೊದಲಿನಿಂದಲೇ ಒಂದು ಯೋಜನೆ ರೂಪಿಸಿದ. ಅಕ್ಕ–ಪಕ್ಕದವರಲ್ಲಿ ಸಹೋದರರೇ ಒಬ್ಬ ವ್ಯಕ್ತಿ ನಮ್ಮ ಅಕ್ಕ–ಪಕ್ಕದಲ್ಲಿ ಹುಚ್ಚನಂತಿದ್ದಾನೆ, ನೀವು ಅವನ ಮಾತುಗಳ ಬಗ್ಗೆ ಗಮನ ಕೊಡಬೇಡಿ. ಆತನ ಮೇಲೆ ಯಾವ ವಿಶ್ವಾಸವನ್ನು ಇಡಬೇಡಿ, ಅವನು ಹಾಗೇ ಹೇಳುತ್ತಿರುತ್ತಾನೆ ದೊಡ್ಡ ಹುಚ್ಚಾ ಆತ. ಹರಿದ ಹಳೇಯ ಬಟ್ಟೆ ತೊಟ್ಟಿರಬೇಕು ಹಾಗೂ ನನ್ನ ರತ್ನಗಳನ್ನು ಕೊಟ್ಟುಬಿಡಿ. ನನ್ನ ರೂಪಾಯಿ ಹಣ ಕೊಟ್ಟುಬಿಡಿ. ಅದು ಕೊಟ್ಟು ಬಿಡಿ. ಇದು ಕೊಟ್ಟುಬಿಡಿ ಇತ್ಯಾದಿಯಾಗಿ ಹೇಳುತ್ತಾನೆ. ಅಂತಹ ವ್ಯಕ್ತಿಯ ಬಳಿ ಎಂದಾದರೂ ರತ್ನ–ರೂಪಾಯಿ–ದುಡ್ಡು ಇರಬಲ್ಲವೇ? ಆ ವ್ಯಕ್ತಿ ಹಾಗೇಯೇ ಹೇಳುತ್ತಾನೆ. ನೀವು ನೋಡಿ ಬೇಕಾದರೆ, ನನ್ನ ಮಾತು ಸತ್ಯವೆನಿಸುವುದು. ನನ್ನ ಹೆಸರು ಸತ್ಯಘೋಷ–ಏನು ಹೇಳುತ್ತೇನೋ ಸತ್ಯ ಹೇಳುತ್ತೇನೆ. ಇಲ್ಲಿ ಆ ವ್ಯಕ್ತಿ ರತ್ನವಿಟ್ಟು ಹೋದವನು ಈ ಸುಳ್ಳು ಸುದ್ಧಿಯ ಬಗ್ಗೆ ಅನಬಿಜ್ಞನಾಗಿದ್ದನು. ಬಹಳ ಆತಂಕದಿಂದ ಇದ್ದ ಸತ್ಯಘೋಷನ ಬಳಿ ನನ್ನ ರತ್ನಗಳನ್ನು ಇಟ್ಟುಹೋಗಿದ್ದೆ ಅವುಗಳನ್ನು ತಂದು ನನ್ನ ಕಾರ್ಯ ಕೆಲಸಗಳನ್ನು ನಡೆಸುವೆ ಎಂದು ಯೋಚಿಸಿದ್ದ ಹಾಗೂ ಆತ ಸತ್ಯಘೋಷನ ಬಳಿಗೆ ಬಂದನು.

ಆ ವ್ಯಕ್ತಿ ಬಂದು ಸತ್ಯಘೋಷನಿಗೆ ನಮಸ್ಕಾರ ಮಾಡಿ, ಶ್ರೇಷ್ಠಿಗಳೇ ತಾವು ಮಹಾನ್ ಇದ್ದೀರಾ, ನನಗೆ ಸಹಾಯ ಮಾಡಿ, ನಾನು ನನ್ನ ರತ್ನಗಳನ್ನು ತಮ್ಮ ಬಳಿ ಇಟ್ಟಿದ್ದೆ ಅವುಗಳನ್ನು ಹಿಂದಿರುಗಿಸಿ ಎಂದು ಕೇಳಿದ. ಸತ್ಯಘೋಷ ಆತನ ಮಾತುಗಳನ್ನು ಕೇಳಿ ಜೋರು–ಜೋರಾಗಿ ನೋಡಿ ಸಹೋದರರೇ ನಾನು ಮೊದಲೇ ಹೇಳಿದ್ದೆ ಒಬ್ಬ ಹುಚ್ಚನಂತಿರುವ ವ್ಯಕ್ತಿ ಬರುತ್ತಾನೆ

ಹಾಗೂ ಏನು ಹೇಳುತ್ತಾನೆ. ನೋಡಿ ಇವನೇ ಆ ವ್ಯಕ್ತಿ ಬಂದು ಬಿಟ್ಟ ಹಾಗೂ ಅದನ್ನೇ ನಾನು ನಿಮಗೆ ಮೊದಲೇ ಹೇಳಿದ್ದೇನಲ್ಲಾ ಅದನ್ನೇ ಹೇಳುತ್ತಿದ್ದಾನೆ. ನೀವೆಲ್ಲಾ ನೋಡಿ ಇಂತಹ ಹುಚ್ಚನ ಬಳಿ ರತ್ನ ಇರಬಲ್ಲವೇ ಇದೆಲ್ಲವನ್ನು ಕೇಳಿ ಆ ವ್ಯಕ್ತಿ ಬಹಳ ದುಃಖಿತನಾದ, ಅಳತೊಡಗಿದ ಹಾಗೂ ಈಗ ಏನಾಗಬಹುದು? ಎಂದು ಯೋಚಿಸತೊಡಗಿದ. ಆತ ಸತ್ಯಘೋಷ ಮತ್ತು ಜನರಲ್ಲಿ ಬಹಳ ವಿನಂತಿ ಮಾಡಿಕೊಂಡ, ದೈನ್ಯತೆಯಿಂದ ಕೇಳಿದ ಆದರೆ ಯಾರು ಏನನ್ನು ಕೇಳಲಿಲ್ಲ ಆತನನ್ನು ಹುಚ್ಚನೆಂದು ಹೇಳುತ್ತಾ ಹೊರಹಾಕಿದರು. ಆ ವ್ಯಕ್ತಿ ನ್ಯಾಯಕ್ಕಾಗಿ ರಾಜಾ ಸಿಂಹಸೇನನ ಬಳಿಗೆ ಬಂದ. ರಾಜನು ಸಹ ಏನನ್ನೂ ಕೇಳಲಿಲ್ಲ ಆತ ರಾಣಿ ರಾಮದತ್ತೆಗೂ ತನ್ನ ಮಾತುಗಳನ್ನು ಹೇಳಿದ, ಅವಳು ಸಹ ಆತನನ್ನು ಹುಚ್ಚನೆಂದು ತಿಳಿದು ಅರಮನೆಯಿಂದ ಹೊರ ಹಾಕಿದಳು. ಈಗ ಅವನೇನು ಮಾಡಬೇಕು? ಅಲ್ಲಲ್ಲಿ ಅಲೆದಾಡತೊಡಗಿದ. ರಾಜನ ಅರಮನೆಯ ಸಮೀಪ ಒಂದು ಮರ ವಿದ್ದಿತು. ಅದರ ಮೇಲೆ ಏರಿ, ಸತ್ಯಘೋಷ ಸುಳ್ಳು ಹೇಳುತ್ತಿದ್ದಾನೆ. ಆತ ನನ್ನ ರತ್ನಗಳನ್ನು ಇಟ್ಟುಕೊಂಡಿದ್ದಾನೆ. ಈಗ ಆತ ಆ ರತ್ನಗಳನ್ನು ಕೊಡುತ್ತಿಲ್ಲ ಅವು ನನ್ನ ರತ್ನಗಳಾಗಿದ್ದವು ಎಂದು ಒಂದೇ ವಾಕ್ಯ ಹೇಳುತ್ತಿದ್ದ. ಇದೇ ವಾಕ್ಯವನ್ನು ಮೇಲಿಂದ ಮೇಲೆ ಹೇಳುತ್ತಲಿದ್ದ. ಆರು ತಿಂಗಳುಗಳ ಕಾಲ ಆತ ಇದನ್ನೇ ಹೇಳುತ್ತಲಿದ್ದ. ಇದೆಲ್ಲವನ್ನು ಕೇಳಿ ಒಂದು ದಿನ ರಾಣಿಗೆ ಸಂದೇಹ ಉಂಟಾಗಿ ಆ ವ್ಯಕ್ತಿ ಹುಚ್ಚನಿರಲಾರ ಯಾಕೆಂದರೆ ಒಂದೇ ವಾಕ್ಯವನ್ನು ಇಷ್ಟೊಂದು ಸಮಯದವರೆಗೆ ಹೇಳುತ್ತಿದ್ದಾನೆ ಇದರಲ್ಲಿ ಯಾವ ಅಂತರವು ಇಲ್ಲ ಏನು ತಪ್ಪು ಕೆಲಸವನ್ನು ಮಾಡುತ್ತಿಲ್ಲ ಇವನ ಮಾತುಗಳನ್ನು ಕೇಳಲೇಬೇಕು ಎಂದು ಕೊಂಡಳು.

ರಾಣಿ ಒಂದು ಯುಕ್ತಿಯನ್ನು ಯೋಚಿಸಿದಳು ಮತ್ತು ಮೊದಲೇ ತಿಳಿಸಿ ಸತ್ಯಘೋಷನನ್ನು ಕರೆಸಿ ರಾಜನ ಸಮ್ಮುಖದಲ್ಲಿ ನಿನ್ನೊಡನೆ ಪಗಡೆಯಾಟ ಆಡಬೇಕೆಂದಿದ್ದೇನೆ ಎಂದಳು ಸತ್ಯಘೋಷ ಆಯಿತು ಎಂದು ತನ್ನ ಸಮ್ಮತಿ ನೀಡಿದ. ಆಟ ಪ್ರಾರಂಭವಾಯಿತು. ಆಟದಲ್ಲಿ ರಾಣಿಯು ಒಂದೊಂದೇ ವಸ್ತುಗಳನ್ನು ಗೆಲ್ಲಲು ಪ್ರಾರಂಭಿಸಿದಳು. ಅವಳು ಸತ್ಯಘೋಷನ ಕೈಯಲ್ಲಿ ಧರಿಸಿದ್ದ ಉಂಗುರ(ಮುದ್ರೆ)ವನ್ನು ಗೆದ್ದು ಮೆಲ್ಲನೆ ತನ್ನ ಸೇವಕಿಯನ್ನು ಕರೆದು ಕೊಟ್ಟು ಹೋಗಿ ಸತ್ಯಘೋಷನ ಪತ್ನಿಗೆ ಕೊಟ್ಟು ಬಾ ಹಾಗೂ ಅವಳಿಗೆ ಒಬ್ಬ ವ್ಯಕ್ತಿ ಇಟ್ಟು ಐದು ಬೆಲೆಬಾಳುವ ರತ್ನಗಳನ್ನು ಕಳಿಸಿಕೊಡಲು ಹೇಳು ಎಂದು ಕಳಿಸಿದಳು, ದಾಸಿಯು ಸತ್ಯಘೋಷನ ಮನೆಗೆ ಹೋಗಿ ರಾಣಿಯ ಸಂದೇಶವನ್ನು ಹೇಳಿ. ಮುದ್ರಾ ಉಂಗುರವನ್ನು ತೋರಿಸಿದಳು. ಉಂಗುರವನ್ನು ನೋಡಿ ಸತ್ಯಘೋಷನ ಪತ್ನಿಯು ನಾನು ಬ್ರಹ್ಮಸೂತ್ರದಲ್ಲಿ ಕಟ್ಟಿರುವ ಕತ್ತರಿಯನ್ನು ನೋಡದೇ ಏನನ್ನೂ ಕೊಡುವುದಿಲ್ಲವೆಂದು ಹೇಳಿ ಕಳಿಸಿದಳು. ದಾಸಿಯು ಬಂದು ರಾಣಿಗೆ ಎಲ್ಲ ವಿಷಯ ತಿಳಿಸಿದಳು. ರಾಣಿಯು ಆಟದಲ್ಲಿ ಬ್ರಹ್ಮಸೂತ್ರದಲ್ಲಿದ್ದ ಕತ್ತರಿಯನ್ನು ಗೆದ್ದಳು ಹಾಗೂ ಪುನಃ ದಾಸಿಯನ್ನು ರತ್ನ ತರಲು ಕಳಿಸಿದಳು, ಜನಿವಾರದಲ್ಲಿದ್ದ ಕತ್ತರಿ(ಚೂರಿ)ಯನ್ನು ನೋಡಿ ಸತ್ಯಘೋಷನ ಪತ್ನಿಯು ಐದೂ ರತ್ನಗಳನ್ನು ಕೊಟ್ಟು ಬಿಟ್ಟಳು. ರತ್ನಗಳನ್ನು ಪಡೆದ ದಾಸಿಯು ರಾಣಿ ಬಳಿಗೆ ಬಂದಾಗ ರಾಣಿಯು ಸ್ವಲ್ಪ ಸಮಯದ ನಂತರ ಆಟವನ್ನು ನಿಲ್ಲಿಸಿದಳು ಯಾಕೆಂದರೆ ಈಗ ರಾಣಿಯ ಮುಂದೆ ರಹಸ್ಯ ಬಯಲಾಗಿದ್ದಿತು. ರಾಣಿಯು ತನ್ನ ಯುಕ್ತಿಯಿಂದ ಸತ್ಯಘೋಷನ ಅಸತ್ಯತೆಯನ್ನು ಕಂಡು ಹಿಡಿದಿದ್ದಳು ಹಾಗೂ ಆತನ ಮನೆಯಿಂದ ಪ್ರಮಾಣರೂಪದಿಂದ ರತ್ನವನ್ನು ತರಿಸಿ ಕೊಂಡಿದ್ದಳು. ಕಾವಲುದಾರರಿಂದ ಆ ಹುಚ್ಚನೆಂದು ಕರೆಯಲ್ಪಟ್ಟಿದ್ದ ವ್ಯಕ್ತಿಯನ್ನು ಕರೆಸಿ ಹಾಗೂ ಎಲ್ಲರ ಎದುರಿಗೆ ಆತನನ್ನು ಕುಳ್ಳಿರಿಸಿದಳು. ಬಹಳಷ್ಟು ರತ್ನಗಳನ್ನು ಒಂದು ತಟ್ಟೆಯಲ್ಲಿ ತರಿಸಿದಳು ಹಾಗೂ ಆ ಐದು

ರತ್ನಗಳನ್ನು ಅವುಗಳ ಜೊತೆ ಬೆರೆಸಿದಳು. ರತ್ನಗಳಿಂದ ತುಂಬಿದ ತಟ್ಟೆಯನ್ನು ಹುಚ್ಚನಂತಿದ್ದ ಆ ವ್ಯಕ್ತಿಯ ಮುಂದೆ ಇಟ್ಟು ಆತನಿಗೆ ತನ್ನ ರತ್ನಗಳನ್ನು ತೆಗೆದುಕೊಳ್ಳಲು ಹೇಳಿದಳು. ರಾಜನು ಸಹ ನಿನ್ನ ರತ್ನಗಳು ಯಾವುವೋ ಅವುಗಳನ್ನು ತೆಗೆದುಕೊಳ್ಳುವಂತೆ ಹೇಳಿದ. ಆ ವ್ಯಕ್ತಿಯು ರತ್ನಗಳನ್ನು ನೋಡಿದ ಹಾಗೂ ವಾಸ್ತವಿಕವಾಗಿ ಅವನದಾಗಿದ್ದವೋ ಅವುಗಳನ್ನು ಎತ್ತಿಕೊಂಡು ಉಳಿದವುಗಳನ್ನು ಬಿಟ್ಟು ಬಿಟ್ಟ ರತ್ನಗಳನ್ನು ನೋಡಿ ರಾಜಾ–ರಾಣಿ ಎಲ್ಲರಿಗೂ ಆತ ಹುಚ್ಚನಲ್ಲ ಬಹಳ ಬುದ್ಧಿವಂತನೆಂದು ತಿಳಿಯಿತು. ಸತ್ಯಘೋಷನ ಮೋಸ ತಿಳಿದು ಬಂದಿತು.

ರಾಜನು ಮಂತ್ರಿಗಳೊಂದಿಗೆ ಪರಾಮರ್ಶೆ ಮಾಡಿ 3 ದಂಡಗಳಲ್ಲಿ ಯಾವುದಾದರೊಂದು ದಂಡವನ್ನು ಸ್ವೀಕರಿಸಲು ಸಹಿಸಲು ಸತ್ಯಘೋಷನಿಗೆ ಹೇಳಿದ. ಮೊದಲನೆಯದು–ಪೈಲ್ವಾನರ ಮೂರು ಹೊಡೆತಗಳನ್ನು ಸಹಿಸಬೇಕು. ಎರಡನೆಯದು ಮೂರು ತಟ್ಟೆ ಹೇಸಿಗೆ ಸೇವಿಸುವುದು. ಮೂರನೆಯದು ರಾಜ್ಯಕ್ಕೆ ಎಲ್ಲ ಸಂಪತ್ತನ್ನು ಕೊಡಬೇಕು. ಸತ್ಯಘೋಷನು ತನ್ನ ತಪ್ಪನ್ನು ಒಪ್ಪಿಕೊಂಡು ತನ್ನ ಅಪರಾಧವನ್ನು ಸ್ವೀಕಾರ ಮಾಡುತ್ತಾ ಪೈಲ್ವಾನರ ಹೊಡೆತ ಸಹಿಸಲು ಒಪ್ಪಿಕೊಂಡ. ಪೈಲ್ವಾನರ ಒಂದೇ ಹೊಡೆತ ಬಿದ್ದಾಗ ಕಣ್ಣು ಹೊರ ಬರತೊಡಗಿದಾಗ ಆತ ಅರ್ಧ ಸತ್ತಂತಾದ. ರಾಜನಿಗೆ ಹೇಳಿ ನಾನು ಈ ದಂಡ ಸಹಿಸಲಾರೆ ಎರಡನೆ ದಂಡ ಕೊಡಿ ಎಂದ. ತಟ್ಟೆಯಲ್ಲಿ ಹೇಸಿಗೆಯನ್ನು ತರಲಾಯಿತು. ಹೇಸಿಗೆ ತಿಂದ ಆದರೆ ವಾಂತಿ ಆಗತೊಡಗಿ ಮೂರನೆ ದಂಡದಂತೆ ಎಲ್ಲ ಸಂಪತ್ತನ್ನು ರಾಜನಿಗೆ ಎಲ್ಲ ಕೊಡಬೇಕಾಯಿತು. ಹೀಗೆ ತನ್ನಷ್ಟಕ್ಕೆ ತಾನೇ ಸತ್ಯವಾದಿ ಎಂದು ಘೋಷಣೆ ಮಾಡಿಕೊಂಡಿದ್ದ ಸತ್ಯಘೋಷನು ತನ್ನ ಅಸತ್ಯ ವ್ಯವಹಾರದಿಂದ ತನ್ನ ಅಸತ್ಯತೆಯನ್ನು ತೋರಿಸಿ ಅದರ ಪ್ರತಿಫಲವಾಗಿ ಮೂರು ದಂಡಗಳನ್ನು ಆತ ಭೋಗಿಸಬೇಕಾಯಿತು, ಅಪಮಾನ–ಅನಾದರವು ಉಂಟಾಯಿತು. ಲೋಭಕ್ಕೆ ವಶನಾಗಿ ಆತನು ಅಸತ್ಯ ಹೇಳಿದ್ದರಿಂದ ಸೆರೆಮನೆ ಮತ್ತು ನರಕ ಪಡೆದು ಮಹಾ ದುರ್ಗತಿಯನ್ನು ಪಡೆಯಬೇಕಾಯಿತು.

ಭಯದ ಕಾರಣದಿಂದಲೂ ಅಸತ್ಯವನ್ನು ಹೇಳಲಾಗುತ್ತದೆ. ಜೀವನದಲ್ಲಿ ಭಯಭೀತರಾಗಿ ಹೆದರಿ ಮನುಷ್ಯ ಅಸತ್ಯದ ಆಸರೆ ಪಡೆಯುವಂತಹ ಪ್ರಸಂಗಗಳು ಬರುತ್ತವೆ. ಅಂತಹ ಪರಿಸ್ಥಿತಿ, ಆಪತ್ತು ಅಥವಾ ಸಂಕಟದಲ್ಲಿ ಅವರು ಅಸತ್ಯದಿಂದ ತಮ್ಮ ಸುರಕ್ಷತೆ ಇದೆ ಎಂದು ಭಾವಿಸುತ್ತಾರೆ. ಅಸತ್ಯ ಹೇಳಿ ಆ ವಿಪತ್ತು ಅಥವಾ ಹಾನಿಯಿಂದ ರಕ್ಷಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಒಂದು ದೃಷ್ಟಾಂತ ಗ್ರಂಥಗಳಲ್ಲಿ ಬರುತ್ತದೆ.

ಕನಕಪುರದ ರಾಜ ಧನದತ್ತ ಜಿನಧರ್ಮಿಯಾಗಿದ್ದನು. ಆತನಿಗೆ ದಿಗಂಬರ ಮುನಿಗಳಲ್ಲಿ ವಿಶೇಷ ಆಸಕ್ತಿ ಇದ್ದಿತು. ಶ್ರೀವಂದಕ ಹೆಸರಿನ ಅನ್ಯಧರ್ಮದ ಅನುಯಾಯಿ ಆತನು ಬೌದ್ಧ ಮಂತ್ರಿ ಇದ್ದ. ಆದರೆ ರಾಜಾ ಮತ್ತು ಮಂತ್ರಿ ಪರಸ್ಪರರಲ್ಲಿ ಮಿತ್ರರು ಆಗಿದ್ದರು. ಒಂದು ದಿನ ರಾಜ ಮತ್ತು ಮಂತ್ರಿ ಇಬ್ಬರೂ ರಾಜಮಹಲಿನ ಮೇಲೆ ಕುಳಿತಿದ್ದರು ಹಾಗೂ ಪ್ರಕೃತಿಯ ಮನೋಹರ ದೃಶ್ಯವನ್ನು ನೋಡುತ್ತಿದ್ದರು. ವಾತಾವರಣ ತುಂಬಾ ಚೆನ್ನಾಗಿದ್ದಿತು. ಅದೇ ಸಮಯ ಅವರು ಆಕಾಶಮಾರ್ಗದಿಂದ ಇಬ್ಬರು ಚಾರಣಋದ್ಧಿ ಮುನಿಗಳು ಬರುವುದನ್ನು ನೋಡಿದರು. ಅವರನ್ನು ನೋಡಿದ ರಾಜನು ಜೋರಾಗಿ ಹೇ ಸ್ವಾಮಿ, ನಮೋಸ್ತು, ನಮೋಸ್ತು, ನಮೋಸ್ತು ಎಂದು ಹೇಳಿದ. ನೋಡಿ ರಾಜನ ಅರಮನೆ ಎಷ್ಟು ಎತ್ತರವಿರಬೇಕು. ಮೊದಲು 32–32 ಖಂಡದ ಮಹಲುಗಳು ಇರುತ್ತಿದ್ದವೆಂದು ಗ್ರಂಥಗಳಲ್ಲಿ ವರ್ಣನೆ ಬರುತ್ತದೆ. ಆಕಾಶದಲ್ಲಿ ಗಮನ ಮಾಡುತ್ತಾ ಚಾರಣ

ಋದ್ಧಿ ಮುನಿಮಹಾರಾಜರಿಗೆ ಇಷ್ಟೊಂದು ಎತ್ತರದ ಅರಮನೆಯಿಂದ ನಮೋಸ್ತು ಮಾಡಿದಾಗ ಮುನಿರಾಜರು ಸ್ವಲ್ಪ ಕಾಲ ನಿಂತರು. ಯಾವುದೋ ಭಕ್ತ ದರ್ಶನ ಮಾಡುತ್ತಿದ್ದಾನೆಂದು ಮುನಿರಾಜರು ನೋಡಿದರು. ಮಾಡಿಕೊಳ್ಳಲಿ ರಾಜನು ವಿನಯದಿಂದ ಮುನಿರಾಜರಿಗೆ ಆಹ್ವಾನ ಮಾಡಿದ ಅದರಿಂದಾಗಿ ಅವರು ಆತನ ಅರಮನೆಯ ಮೇಲ್ಛಾವಣಿಗೆ ಇಳಿದರು ರಾಜನು. ಅವರಿಗೆ ಉನ್ನತ ಆಸನದ ಮೇಲೆ ವಿರಾಜಮಾನಗೊಳಿಸಿ ಚರಣ ವಂದನೆ ಮಾಡಿದ ಹಾಗೂ ತಾನು ಧನ್ಯನೆಂದು ಭಾವಿಸಿದ. ರಾಜನು ಮುನಿ ರಾಜರಿಗೆ ಉಪದೇಶ ನೀಡುವಂತೆ ಪ್ರಾರ್ಥನೆ ಮಾಡುತ್ತಾ ಪ್ರಭು ಏನಾದರೂ ಹೇಳಿ ಅದರಿಂದಾಗಿ ನಮ್ಮ ಜೀವನ ಉದ್ಧಾರವಾಗಲಿ ಎಂದು ಪ್ರಾರ್ಥಿಸಿದ.

ಮುನಿರಾಜರು ಉಪದೇಶ ನೀಡಿದರು. ಉಪದೇಶದಿಂದ ಪ್ರಭಾವಿತನಾಗಿ ಮಂತ್ರಿ ಶ್ರೀವಂದಕನು ಸಮ್ಯಕ್ತ ಸಹಿತ ಶ್ರಾವಕರ ವ್ರತ ಸ್ವೀಕಾರ ಮಾಡಿದ. ಮುನಿರಾಜರು ಆಶೀರ್ವಾದ ಮಾಡಿ ವಿಹಾರ ಮಾಡಿದರು. ರಾಜಾ ಮತ್ತು ಮಂತ್ರಿ ಪರಸ್ಪರ ವಿಚಾರ ಮಾಡಿ ಈ ವಿಷಯವನ್ನು ಎಲ್ಲ ಪ್ರಜೆಗಳ ಮಧ್ಯೆ ರಾಜಸಭೆಯಲ್ಲಿ ಹೇಳಬೇಕು ಎಂದು ಕೊಂಡರು ಮಾರನೇ ದಿನ ಶ್ರೀವಂದಕ ತನ್ನ ಧರ್ಮಗುರುವಿನ ವಂದನೆಗೆ ಹೋಗಲಿಲ್ಲ. ಆಗ ಆತನ ಗುರುವು ಆತನನ್ನು ಕರೆಸಿದರು. ಶ್ರೀವಂದಕ ಗುರುವಿನ ಸಮೀಪಕ್ಕೆ ಹೋದರು ಆದರೆ ಅಲ್ಲಿ ಹೋಗಿ ಆತನು ಗುರುವಿಗೆ ನಮಸ್ಕಾರ ಮಾಡದೇ ತಾನು ವ್ರತ ಸ್ವೀಕಾರ ಮಾಡಿದ ವಿಷಯ ತಿಳಿಸಿದಾಗ ಗುರುವು ಆತನಿಗೆ ಏ ಸಾವಧಾನ! ಈ ಆಕಾಶದಲ್ಲಿ ಗಮನ ಮಾಡಿದ ಮಾತನ್ನು ಯಾರಿಗೂ ಹೇಳಬೇಡ ಎಂದು ಹೇಳಿದರು. ಇಲ್ಲವಾದಲ್ಲಿ ದಿಗಂಬರ ಜೈನ ಧರ್ಮದ ಪ್ರಭಾವನೆ ಹೆಚ್ಚಾಗಿ ಬಿಡುತ್ತದೆ. ಅವರ ಹೆಸರು ಪ್ರಸಿದ್ಧಿಯಾಗುತ್ತದೆ. ಸಾಧು ಹೀಗೂ ಇರುತ್ತಾರಾ? ನಮ್ಮಲ್ಲಿ ಹಾಗೇ ಆಗುವುದಿಲ್ಲ ಹಾಗೂ ನೀನು ಅವರ ಬಗ್ಗೆ ಹೇಳಿದರೆ ಅವರ ಪ್ರಭಾವ ಹೆಚ್ಚಾಗುತ್ತದೆ. ಆದ್ದರಿಂದ ನೀನು ಈ ವಿಷಯವನ್ನು ಯಾರಿಗೂ ಹೇಳಬಾರದು ಗುರುಗಳು ಪುನಃ ಶ್ರೀವಂದಕನಿಗೆ–ಈ ಜನರು ಇಂದ್ರಜಾಲದವರಾಗಿದ್ದಾರೆ. ಅಲ್ಲ ಯಾವುದಾದರೂ ಸಾಧುಗಳು ಆಕಾಶದಲ್ಲಿ ಸಂಚರಿಸುತ್ತಾರಾ? ಗುರುವಿನ ಮಾತುಗಳನ್ನು ಶ್ರೀವಂದಕನಿಗೆ ಒಪ್ಪಿಸಬೇಕಾಯಿತು ಯಾಕೆಂದರೆ ಗುರುವಿನ ಮಾತುಗಳನ್ನು ಒಪ್ಪದಿದ್ದರೆ ಸಮಾಜದಿಂದ ಹೊರಹಾಕುತ್ತಾರೆ ಮತ್ತು ಸಮಾಜದಲ್ಲಿ ಹೋಗಲು ಆಗುವುದಿಲ್ಲ ಹೇಗೆ? ಏನಾಯಿತು? ಎಂದು ಜನರು ಕೇಳುತ್ತಾರೆ ಸಮಾಜದಲ್ಲಿ ಕೆಟ್ಟ ಹೆಸರು ಬರುತ್ತದೆ. ಜೀವನ ಹೇಗೆ ನಡೆಸುವುದು? ಆದ್ದರಿಂದ ಸರಿಯಾಗಿದೆ. ಗುರುವಿನ ಮಾತುಗಳನ್ನು ಒಪ್ಪುತ್ತಾರೆ. ಶ್ರೀವಂದಕ ತಮ್ಮ ಮನೆಗೆ ತೆರಳಿದರು.

ರಾಜಸಭೆಯಲ್ಲಿ ರಾಜನು ಎಲ್ಲರ ಉಪಸ್ಥಿತಿಯಲ್ಲಿ ಆಕಾಶಗಾಮಿ ಚಾರಣ ಋದ್ಧಿಧಾರಕ ಮುನಿಗಳ ಎಲ್ಲ ವೃತ್ತಾಂತವನ್ನು ಹೇಳಿದ ಹಾಗೂ ಸಾಕ್ಷಿಯಾಗಿ ರಾಜನು ಶ್ರೀವಂದಕನಿಗೆ ನೀನು ಸಹ ನಿನ್ನ ಕಣ್ಣುಗಳಿಂದ ದಿಗಂಬರ ಮುನಿಗಳ ಪ್ರಭಾವವನ್ನು ನೋಡಿದೆ ಅದ್ದರಿಂದ ರಾಜಸಭೆಯಲ್ಲಿ ಹೇಳು ಎಂದು ಹೇಳಿದ. ಶ್ರೀವಂದಕನು ರಾಜಸಭೆಯಲ್ಲಿ ನಾನು ನೋಡಿಯೇ ಇಲ್ಲಾ ಹೀಗೆ ಹೇಗೆ ತಾನೇ ಆಗಬಲ್ಲದು. ನಾನೂ ಏನನ್ನೂ ನೋಡಿಲ್ಲ. ಶ್ರೀವಂದಕ ಇಷ್ಟು ಹೇಳುವುದರಲ್ಲಿತ್ತು. ಆತನು ಅಸತ್ಯ ಹೇಳಿದ್ದರಿಂದ ಕೂಡಲೇ ಆತನ ಎರಡೂ ಕಣ್ಣುಗಳು ಕಾಣುವುದು ನಿಂತು ಹೋಯಿತು. ನೋಡಿ ಆತ ಭಯದ ಕಾರಣ ಅಸತ್ಯವನ್ನು ಹೇಳಿದ ಆತನ ಕಣ್ಣುಗಳು ಕಾಣಿಸದಂತಾದವು ಆತ ಕುರುಡನಾದ. ಇಲ್ಲ ಅಲ್ಲಿ ಕೈಮಾಡಿ ತಿಳಿಯುವ ಪ್ರಯತ್ನ ಮಾಡಿದ. ಅಳುತ್ತಾ ಇದೇನಾಯಿತು ನನಗೆ, ಏನೂ ಕಾಣುತ್ತಿಲ್ಲವಲ್ಲ ಎಂದು ಹೇಳಿದ. ಆಗ ರಾಜ ಮತ್ತು ವಿದ್ವಾಂಸರು–ನೀನು ಅಸತ್ಯದ

ಮಾತುಗಳನ್ನಾಡಿದೆ. ನೀನು ನೋಡಿದ್ದನ್ನು ವಿಪರೀತವಾಗಿ ಹೇಳಿದೆ. ಆದ್ದರಿಂದ ಇದೆಲ್ಲಾ ಅಯಿತು ಎಂದು ಹೇಳಿದರು. ಆಗ ಎಲ್ಲರೂ ಮಂತ್ರಿ ಶ್ರೀವಂದಕನ ಅಸತ್ಯ ಭಾಷಣದ ನಿಂದೆ ಮಾಡಿದರು. ಜೈನಧರ್ಮದ ಬಗ್ಗೆ ಸಾಕಷ್ಟು ಪ್ರಶಂಸೆ ಮಾಡಿದರು. ಶ್ರೀವಂದಕನು ಭಯಾಕ್ರಾಂತ ಅವಸ್ಥೆಯಲ್ಲಿ ಅಸತ್ಯದ ಆಶ್ರಮ ಪಡೆದದ್ದು ಉಚಿತವಾಗಿರಲಿಲ್ಲ. ಭಯಭಾವದ ವ್ಯಕ್ತಿಯು ಸತ್ಯವನ್ನು ಪ್ರಕಾಶಕ್ಕೆ ತರಲಾರ, ಯಾಕೆಂದರೆ ಸತ್ಯವು ಅಭಯದ ಭೂಮಿಯ ಮೇಲೆ ನಿಂತಿರುತ್ತದೆ.

ಹಾಸ್ಯ ಅಂದರೆ ನಗು–ನಗು ತಮಾಷೆಯ ಕಾರಣದಿಂದಲೂ ಅಸತ್ಯವನ್ನು ಹೇಳಲಾಗುತ್ತದೆ. ಬಹಳಷ್ಟು ಜನರು ನಗು–ತಮಾಶೆಯಲ್ಲಿ ಕುತೂಹಲಕ್ಕಾಗಿ ಅಸತ್ಯವನ್ನು ಹೇಳಿ ಬಿಡುತ್ತಾರೆ. ಯಾವುದೆ ಓಬ್ಬ ವ್ಯಕ್ತಿಗೆ ಆತಂಕ, ಒತ್ತಡವನ್ನುಂಟು ಮಾಡಲು ವ್ಯಾಕುಲವನ್ನುಂಟು ಮಾಡಲು ಅಸತ್ಯವನ್ನು ಹೇಳಿ ಬಿಡುತ್ತಾರೆ. ಇದರಲ್ಲಿಯೇ ಅವರ ಮನೋರಂಜನೆಯಾಗುತ್ತದೆ. ವ್ಯರ್ಥವಾದ ಮಾತುಗಳಿಂದ ಮನೋರಂಜನೆ ಮಾಡುತ್ತಾರೆ. ಇದರಲ್ಲಿ ಮನೋರಂಜನೆಯಾಗಬಹುದು. ಆದರೆ ಸತ್ಯ ದೊರೆಯುವುದಿಲ್ಲ. ಅಲ್ಲದೇ ಸಮಯ ಹಾಳಾಗುತ್ತದೆ. ನಮ್ಮ ಸಂಘದಲ್ಲಿ ಒಬ್ಬ ಮಹಾರಾಜರು ದೃಷ್ಟಾಂತವನ್ನು ಹೇಳಿದ್ದರು. ಅದನ್ನೇ ಇಲ್ಲಿ ಹೇಳುತ್ತಿದ್ದೇನೆ. ಹಾಸ್ಯ ಅಂದರೆ ನಗುವಿನಲ್ಲಿ ಅಗಾಗ ಅಸತ್ಯವನ್ನು ಹೇಳಿಬಿಡಲಾಗುತ್ತದೆ.

ಒಂದು ನಗರದಲ್ಲಿ ಇಬ್ಬರು ಗೆಳೆಯರಿದ್ದರು. ಇಬ್ಬರೂ ಒಂದು ಸಂಜೆ ನಡೆಯುತ್ತಾ ತಿರುಗಾಡಲು ಹೊರಟರು. ಹೋಗಿ ಒಂದು ಸ್ಥಳದಲ್ಲಿ ಹೊಲದ ದಂಡೆಗೆ ಕುಳಿತರು. ಒಬ್ಬ ಗೆಳೆಯನು ಇನ್ನೊರ್ವನಿಗೆ–ಸಹೋದರ ಈ ಹೊಲವನ್ನು ಖರೀದಿಸುವ ಇಚ್ಚೆ ನನಗೆ ಆಗುತ್ತಲಿದೆ ಎಂದು ಹೇಳಿದ. ಇನ್ನೊಬ್ಬ ಮಿತ್ರ–ಒಳ್ಳೆಯದು ನೀವು ಹೊಲವನ್ನು ಖರೀದಿಸುತ್ತಿರಾ, ಖರೀದಿಸಿ–ಖರೀದಿಸಿ ಒಳ್ಳೆಯದಿದೆ ಖರೀದಿಸಿ ಎಂದು ಹೇಳಿದ. ನಾನು ಸ್ವಲ್ಪ ಖರೀದಿಸಬೇಕೆಂದಿದ್ದೇನೆ. ಮೊದಲ ಮಿತ್ರ– ನೀನೇನು ಖರೀದಿಸುತ್ತಿಯಾ. ನಿನ್ನಲ್ಲಿ ಏನು ಶಕ್ತಿ ಇದೆ, ನಿನ್ನ ಬಳಿ ಏನೂ ಇಲ್ಲವೇ ಇಲ್ಲ. ಕೇವಲ ಹೇಳುತ್ತಾ ಇರುತ್ತೀಯಾ, ಏನನ್ನು ಮಾಡುವುದಿಲ್ಲ, ಹೀಗೆ ಸುಮ್ಮನೆ ತಮಾಶೆಗಾಗಿ ಹೇಳಬೇಡ– ಎಂದು ಹೇಳಿದ, ಎರಡನೆ ಮಿತ್ರ ಇಲ್ಲ, ಇಲ್ಲ ಸಹೋದರ ನಾನು ಖರೀದಿಸುವವನಿದ್ದೇನೆ ಎಂದ. ಏನು ಖರೀದಿಸುವವನಿದ್ದಿಯಾ ಅದನ್ನಾದರೂ ಸ್ವಲ್ಪ ಹೇಳು. ನಾನು ಎಮ್ಮೆಯನ್ನು ಖರೀದಿಸುತ್ತೆನೆ. ಎಮ್ಮೆನಾ ಖರೀದಿಸು ಆದರೆ ನೋಡು ಎಚ್ಚರವಾಗಿರು. ಮೊದಲ ಮಿತ್ರನು ತನ್ನ ಬಳಿ ಬಿದ್ದ ಒಂದು ಕಲ್ಲನ್ನು ಎತ್ತಿ ಅದರಿಂದ ರೇಖೆಯನ್ನ ಎಳೆದು–ನೋಡು ಇದು ನಾನು ಹೊಲವನ್ನು ಖರೀದಿಸಿದೆ. ಇದು ನನ್ನ ಹೊಲವಿದೆ ಎಂದು ಹೇಳಿದ. ಎರಡನೆ ಮಿತ್ರನು ಸಹ ಕಲ್ಲಿನ ತುಂಡನ್ನು ಎತ್ತಿ ಇದು ನನ್ನ ಎಮ್ಮೆ ನೀನು ಗಮನದಲ್ಲಿಡು ಎಂದು ಹೇಳಿದ. ಮೊದಲ ಮಿತ್ರ ಹೇಳಿದ–ನೋಡು ನೀನು ಎಚ್ಚರದಿಂದಿರು, ನನ್ನ ಹೊಲದಲ್ಲಿ ಎಮ್ಮೆ ಬಂದು ಬಿಟ್ಟರೆ ನನಗೆ ಗೊತ್ತಿಲ್ಲ ಏನಾದರೂ ಆಗಬಹುದು. ನೋಡಿ ಸಹೋದರರೇ ಇಬ್ಬರೂ ಮಿತ್ರರಲ್ಲಿ ಕೇವಲ ನಗೆ. ತಮಾಷೆಯಲ್ಲಿ ಮಾತು ನಡೆದಿದ್ದಿತು. ಈಗ ಅದು ಎಲ್ಲಿ ತಿರುಗುತ್ತಲಿದೆ. ಮುಂದೆ ಹೇಗೆ ಮಾತು ಸಾಗುತ್ತವೆ.

ಎರಡನೆ ಮಿತ್ರ–ಏನಾಗಿ ಬಿಡುತ್ತದೆ? ಎಂದು ಹೇಳಿದ ಮೊದಲ ಮಿತ್ರ–ಮೊದಲು ನಮ್ಮ ಹೊಲದಲ್ಲಿ ಎಮ್ಮೆ ಬರಲಿ ಏನು ಮಾಡುತ್ತೇನೆ. ಆಮೇಲೆ ನಾನು ನೋಡುತ್ತೇನೆ ಎಂದ. ಎರಡನೆಯವನು ಆ ಕಲ್ಲಿನ ತುಂಡನ್ನು ಎತ್ತಿ ಆತನ ರೇಖೆಗಳ ಒಳಗೆ ಎಸೆದ ಹಾಗೂ ಈಗ ನೋಡು ಎಮ್ಮೆ ನಿನ್ನ ಹೊಲದಲ್ಲಿ ಬಂದಿತು ಏನು ಮಡುತ್ತೀಯಾ ಹೇಳು ಎಂದ. ಮೊದಲ

ಮಿತ್ರನು ಕೂಡಲೇ ಕೈ ಎತ್ತಿದ ಜೋರಾಗಿ ಒಂದು ಹೊಡೆದ ನನ್ನ ಹೊಲದಲ್ಲಿ ನಿನ್ನ ಎಮ್ಮೆ ಯಾಕೆ ಬಂದಿತು. ಎರಡನೆ ಮಿತ್ರನು ಸಹ ಕೈ ಎತ್ತಿದ. ಇಬ್ಬರೂ ಒಬ್ಬರಿಗೊಬ್ಬರು ಹೊಡೆಯ ತೊಡಗಿದರು. ಜಗಳವಾಗತೊಡಗಿತು. ಈಗ ಅವರನ್ನು ಸಂಭಾಳಿಸುವುದು ಕಷ್ಟವಾಯಿತು. ಜನರು ಬಂದು ಇಬ್ಬರನ್ನು ಹಿಡಿದು ಏನಾಗಿದೆ ಎನ್ನುತ್ತಾ ಇಬ್ಬರನ್ನೂ ಪೋಲಿಸರಿಗೆ ನೀಡಿದರು. ಈಗ ವಿಷಯ ಕೋರ್ಟನ್ನು ತಲುಪಿತು. ಮಾಜಿಸ್ಟ್ರೇಟರ ಮುಂದೆ ಇಬ್ಬರೂ ಮಿತ್ರರೂ ತಮ್ಮ ತಮ್ಮ ಹೇಳಿಕೆ ಕೊಟ್ಟರು.

ಮೊದಲ ಮಿತ್ರ ಇದು ನನ್ನ ಹೊಲವಿದೆ. ಈ ಹೊಲದಲ್ಲಿ ನಾನು ಇತನಿಗೆ ನಿನ್ನ ಎಮ್ಮೆ ಬರಕೂಡದೆಂದು ಹೇಳಿದ್ದೇನು. ಆದರೆ ಈತ ತನ್ನ ಎಮ್ಮೆಯನ್ನು ನನ್ನ ಹೊಲದಲ್ಲಿ ತಲುಪಿಸಿಯೇ ಬಿಟ್ಟ. ಮ್ಯಾಜಿಸ್ಟ್ರೇಟರು ಅವರ ಮಾತುಗಳನ್ನು ಕೇಳಿ–ಒಳ್ಳೆಯದು ಪಟವಾರಿಯನ್ನು ಕರೆಯಿರಿ, ಆತನಿಂದ ನಿಮ್ಮ ಹೊಲ ಎಲ್ಲಿದೆ ಎಂದು ಪತ್ತೆ ಹಚ್ಚಿರಿ ಯಾವ ಭೂಮಿ ಮೇಲಿದೆ? ಎಷ್ಟು ಉದ್ದ–ಅಗಲವಿದೆ? ಎಲ್ಲಿಂದ, ರಸ್ತೆ ಇದೆ. ಅದರಲ್ಲಿ ಏನಿದೆ? ಬೇಲಿ ಹಾಕಲಾಗಿದೆಯೇ ಅಥವಾ ಇಲ್ಲವೇ ಅದರಲ್ಲಿ ಏನಾದರೂ ಬಿತ್ತಿದ್ದಿರಾ ಇಲ್ಲವೋ ಅಥವಾ ಕೇವಲ ಹುಲ್ಲು ಇದೆಯಾ. ಈ ಪ್ರಶ್ನೆಗಳನ್ನು ಕೇಳಿ ಆತನ ಎಚ್ಚರಿಕೆ ಹಾರಿ ಹೋಯಿತು ಆತನಿಗೆ ಈಗ ನನ್ನದೇನಾಗುತ್ತಿದೆ; ಕೆಲಸ ಕೆಟ್ಟುಹೋಯಿತು. ಮ್ಯಾಜಿಸ್ಟ್ರಟರು ಇನ್ನೊಬ್ಬ ಮಿತ್ರರಿಗೂ ನಿಮ್ಮ ಎಮ್ಮೆ ಎಲ್ಲಿಂದ ಬಂದಿತು? ಯಾರ ಬಳಿ ಖರೀದಿಸಿದ್ದಿರಿ ಯಾವಾಗ ತೆಗೆದುಕೊಂಡಿದ್ದೀರಿ? ಎಷ್ಟು ಹಳೆಯದಾಗಿದ್ದಿತು? ಎಲ್ಲಿಂದ ಖರೀದಿಸಿದ್ದಿರಿ? ಎಷ್ಟಕ್ಕೆ ಖರೀದಿ ಮಾಡಿದ್ದಿರಿ? ಇದೆಲ್ಲವನ್ನು ಕೇಳಿ ಇತನ ಕಣ್ಣು ತೆರೆಯಿತು. ಇಬ್ಬರೂ ಮಿತ್ರರೂ ಪರಸ್ಪರ ನೋಡಿದರು. ಅರೇ ಸಹೋದರಾ ಈಗ ನಾವು ಬಹಳ ಕೆಟ್ಟದಾಗಿ ಸಿಲುಕಿ ಬಿಟ್ಟಿದ್ದೇವೆ. ಇಬ್ಬರು ಕಣ್ಣೀರು ಸುರಿಸಿದರು ಹಾಗೂ ಮ್ಯಾಜಿಸ್ಟ್ರೇಟರಿಗೆ ಹೇಳಿದರು. ಹೇ ನ್ಯಾಯಾಧೀಶರೇ! ನಮ್ಮದು ಯಾವ ಹೊಲವು ಇಲ್ಲ ಹಾಗೂ ಈತನ ಎಮ್ಮೆಯೂ ಇಲ್ಲ, ನಮ್ಮನ್ನು ಕ್ಷಮಿಸಿ ಹಾಗೂ ನಮ್ಮನ್ನು ಇಲ್ಲಿಂದ ಹೋಗಲು ಬಿಡಿ. ಮ್ಯಾಜಿಸ್ಟ್ರೇಟರು. ಅರೇ ಈಗ ಯಾರು ಎಲ್ಲಿಗೂ ಹೋಗುವುದಿಲ್ಲ? ನೀವು ಎಲ್ಲರಿಗೂ ತೊಂದರೆ ಕೊಟ್ಟಿದ್ದಿರಾ. ಇಲ್ಲೇ ಇರಿ ಮೊದಲು ಇಲ್ಲಿ ಏನಾಯಿತು ಹೇಳಿರಿ?

ಮೊದಲ ಮಿತ್ರ ಹೇಳಿದ–ಹೇಗಾಯಿತೆಂದರೆ ನಾವು ತಿರುಗಾಡಲು ಹೋಗಿದ್ದೆವು ಹಾಗೂ ಅಲ್ಲಿ ಹೊಲದ ದಂಡೆಯಲ್ಲಿ ಕುಳಿತಿದ್ದೆವು ಒಂದು ಹೊಲಕೊಳ್ಳಬೇಕೆಂದು ಯೋಚಿಸಿದೆ. ನಾವು ಕಲ್ಲಿನ ಗೆರೆಯಿಂದ ಹಾಗೆಯೇ ಹೊಲ ಮಾಡಿದೆವು ಹಾಗೂ ಇತನು ಸಹ ನಾವು ಎಮ್ಮೆ ಖರೀದಿಸುವುದಾಗಿ ಹೇಳಿದ ಆಗ ಒಂದು ಕಲ್ಲು ಎತ್ತಿ ಅದನ್ನು ಎಮ್ಮೆ ಎಂದು ಒಪ್ಪಿದೆವು. ಆಗ ನಾವು ನಮ್ಮ ಈ ಮಿತ್ರನಿಗೆ–ನನ್ನ ಹೊಲದಲ್ಲಿ ನಿಮ್ಮ ಎಮ್ಮೆ ಬರಬಾರದು ಎಂದು ಹೇಳಿದೆವು. ಆದರೂ ಇವರು ಎಮ್ಮೆಯನ್ನು ನನ್ನ ಹೊಲದಲ್ಲಿ ಹಾಕಿ ಬಿಟ್ಟರು. ಆದ್ದರಿಂದ ಜಗಳವಾಯಿತು. ಇಷ್ಟೇ ವಿಷಯ. ಮಾಜಿಸ್ಟ್ರೇಟರು ಎಲ್ಲ ಮಾತುಗಳನ್ನು ಕೇಳಿ ಅರೆ ನಿಮ್ಮ ಹೊಲವು ಇಲ್ಲ, ಅವರ ಎಮ್ಮೆಯೂ ಇಲ್ಲ ಆದರೂ ಜಗಳವಾಡಿದಿರಿ ಇಬ್ಬರನ್ನು ಜೈಲಿಗೆ ಹಾಕಿ, ಯಾಕೆಂದರೆ ಇವರು ಎಲ್ಲರಿಗೂ ಸುಮ್ಮ ಸುಮ್ಮನೆ ತೊಂದರೆ ಕೊಟ್ಟಿದ್ದಾರೆ. ನಗೆ–ತಮಾಶೆಯಲ್ಲಿ ಇಂತಹ ಆಟಗಳು ಬಿಕ್ಕಟ್ಟಿಗೆ ಕಾರಣಗಳಾಗುತ್ತವೆ. ಸಹೋದರರೇ ನೋಡಿ ನಗು–ನಗುತ್ತಲೇ ಹೊಲ ಮತ್ತು ಎಮ್ಮೆ ಮತ್ತು ಜಗಳ, ಕೋರ್ಟು–ಕಛೇರಿ ಜೈಲು ಆದವು ನಗು–ನಗುತ್ತಲೇ ಬಹಳ ಅಸತ್ಯಗಳಾಗುತ್ತವೆ.

ಸುಳ್ಳು, ಅಸತ್ಯ–ಸುಳ್ಳು ಬೇರೆಯವರ ತೊಂದರೆಗೆ ಕಾರಣವಾಗುತ್ತವೆ. ಇದೇ ಪ್ರಕಾರ–ನಗು, ನಗುತ್ತಲೇ ಮನೋರಂಜನೆಯಲ್ಲಿ ಅದೆಷ್ಟು ವಿವಾದ, ಜಗಳಾಟ, ಹೊಡೆದಾಟ ಆಗುತ್ತವೆ. ಆದ್ದರಿಂದ ತಮಾಶೆಗೆ ಸಮಯ ಕೊಡಬಾರದು, ಧರ್ಮಕ್ಕೆ ಸಮಯ ಕೊಡುವುದು ಒಳ್ಳೆಯದು. ಒಳ್ಳೆಯ ಜೀವನ ನಡೆಸಿರಿ, ನಮ್ಮಲ್ಲಿ ಜನರು ನಗೆ ತಮಾಷೆಗೆ ಸಮಯ ನೀಡುವಂತೆ, ವಿದೇಶಿಯರು ನಗೆ–ತಮಾಷೆಗೆ ಸಮಯ ಇರುವುದಿಲವೆಂದು ಹೇಳುತ್ತಾರೆ. ಅವರು ಬೆಳಿಗ್ಗೆಯಿಂದ ಸಂಜೆಯವರೆಗೆ ತಮ್ಮ ಉದ್ಯೋಗಗಳಲ್ಲಿ ವ್ಯಸ್ತವಾಗಿರುತ್ತಾರೆ ಅದರಲ್ಲಿಯೇ ಅವರದಲ್ಲಿಯೂ ಇದೆ ಹಾಗೂ ಅಲ್ಲಿಯ ಪ್ರತಿಯೊಂದು ಕ್ಷೇತ್ರದಲ್ಲಿ ಬಹಳ ವಿಕಸನವಾಗಿದೆ. ಧರ್ಮದ ಒಂದು ಕ್ಷೇತ್ರವನ್ನು ಬಿಟ್ಟು ಅಲ್ಲಿ ಎಲ್ಲವೂ ಇದೆ. ನಮಗೆ ಸಹಜ ರೂಪದಲ್ಲಿ ಧರ್ಮ ದೊರೆತಿದೆ ಆದರೂ ಜನರು ಈ ಪಾಪಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಆಗುತ್ತಿಲ್ಲ ಮಹಾಪುರುಷರ, ಸಂತರ, ಪಂಡಿತರ ಸಂದೇಶ ಮತ್ತು ಅವರ ವಾಣಿ ದೊರೆತರೂ ಇವೆಲ್ಲವುಗಳಿಂದ ರಕ್ಷಿಸಿಕೊಳ್ಳಲು ಆಗಿಲ್ಲ.

ಶಾಸ್ತ್ರ ಆಗಮಕ್ಕನುಗುಣವಾಗಿ ನಿರ್ದೋಷ ವಚನಗಳನ್ನಾಡದಿರುವ ಕಾರಣ ಸಹ ಅಸತ್ಯದ ಸಮರ್ಥನೆ ಆಗಿ ಬಿಡುತ್ತದೆ. ಆಗಮ, ಧರ್ಮಕ್ಕನುಗುಣವಾಗಿ ವಿವರಿಸುವುದನ್ನು ಬಿಟ್ಟು ಅವುಗಳನ್ನು ವಿಕೃತಗೊಳಿಸಿ ಹೇಳುವುದು. ಹೇಗೆ ಪ್ರತಿಪಾದನೆ ಮಾಡಿದೆಯೋ ಹಾಗೇ ಹೇಳದಿರುವುದು, ಏಕಾಂತದ ಆಶ್ರಯ ಪಡೆಯುವುದು. ಒಂದೇ ಸಮಯದಿಂದ ಹೇಳಿ ಜೀವನದ ನೌಕೆಯನ್ನು ಹುಟ್ಟು ಹಾಕುವುದು ಇತ್ಯಾದಿ ಮಾತುಗಳಿಂದ ಅಸತ್ಯವನ್ನು ಹೇಳಿ ಬಿಡುತ್ತಾರೆ. ಅಸತ್ಯವು ಅಲ್ಪ ಕಾಲದವರೆಗೆ ಮಾತ್ರ ಕಾರ್ಯ ಮಾಡಬಲ್ಲದು ಎಂಬ ಮಾತನ್ನು ಸದಾಕಾಲ ಗಮನದಲ್ಲಿಡಬೇಕು. ಅಸತ್ಯವು ಸದಾಕಾಲ ಪ್ರತಿಷ್ಠೆಯನ್ನು ಕೊಡಿಸಲಾರದು. ಅದರಿಂದಾಗುವ ದುಷ್ಪರಿಣಾಮವನ್ನು ಭೋಗಿಸಲೇಬೇಕಾಗುತ್ತದೆ. ಒಂದು ಶಿಕ್ಷಣ ನೀಡುವ ಪ್ರಸಂಗ ಹೀಗಿದೆ–

ಒಬ್ಬ ರಾಜನಿದ್ದನು ಆತ ದೊಡ್ಡ ವ್ಯಸನಿ ಹಾಗೂ ಮಾಂಸದ ಲೋಲುಪಿಯಾಗಿದ್ದನು ಅವರಲ್ಲಿದ್ದ ಒಂದು ಒಳ್ಳೆಯ ಸಂಗತಿ ಎಂದರೆ ಅವರ ಪರಿವಾರದಲ್ಲಿ ಯಾರೋ ಧರ್ಮಾತ್ಮ ಪುರುಷರು ಆಗಿರಬೇಕು–ಮಾಂಸದಂತಹ ವಸ್ತುಗಳ ತ್ಯಾಗಿಗಳಾಗಿರಬೇಕು ಹಾಗೂ ಶಾಸ್ತ್ರ ಸ್ವಾಧ್ಯಾಯದಂತಹ ಪರಂಪರೆ ಹೊಂದಿರಬೇಕು. ಸ್ವಾಧ್ಯಾಯಕ್ಕಾಗಿ ಒಬ್ಬ ಪಂಡಿತರು–ರಾಜ್ಯಸಭಾಗಳಲ್ಲಿ ಶಾಸ್ತ್ರ ವಚನ ಮಾಡುವಂತವರು ಇದ್ದರು. ಇದೇ ಪರಂಪರೆಯನ್ನು ರಾಜ ಅನುಸರಿಸಿದ್ದ. ಇದ್ದ ಒಬ್ಬ ಪಂಡಿತ ಆತ ಶಾಸ್ತ್ರ ವಚನವನ್ನು ಪ್ರತಿದಿನ ಮಾಡುತ್ತಿದ್ದರು. ಅವರು ತಮ್ಮ ಮನೆಯಲ್ಲಿಯೂ ತಮ್ಮ ಮಕ್ಕಳಿಗೆ ಪಂಡಿತ ಕಾರ್ಯಗಳನ್ನು ಕಲಿಸಿದ್ದರು, ಅದರಿಂದಾಗಿ ಶಾಸ್ತ್ರವಾಚನ ನಿಯಮಿತವಾಗಿ ಸಾಗಿದ್ದಿತು.

ಪಂಡಿತರು ಶಾಸ್ತ್ರ ಸಭೆಯಲ್ಲಿ ಶಾಸ್ತ್ರ ವಾಚನ ಮಾಡುತ್ತಿದ್ದರು. ಅದನ್ನು ರಾಜಾ ಮಂತ್ರಿ ಇತ್ಯಾದಿ ಸಭಾಸದರು ಕೇಳುತ್ತಿದ್ದರು. ಒಂದು ದಿನ ಪಂಡಿತರಿಗೆ ಯಾವುದೋ ಕಾರಣದಿಂದ ಹೊರಗಡೆ ಹೋಗಬೇಕಾಗಿದ್ದಿತು. ಆದ್ದರಿಂದ ಅವರು ರಾಜನಿಗೆ–ನಾಳೆ ಶಾಸ್ತ್ರ ವಾಚನವನ್ನು ನನ್ನ ಪುತ್ರ ಮಾಡುತ್ತಾನೆಂದು ಹೇಳಿದರು. ಮುಂದೆ ಈ ಪರಂಪರೆಯನ್ನು ಅವನೇ ನಿರ್ವಹಿಸಬೇಕು. ನಮ್ಮ ಉತ್ತರದಾಯಿತ್ವವನ್ನು ನಿರ್ವಹಿಸುವವನು ಅವನೇ ಅವನನ್ನು ಇದಕ್ಕಾಗಿ ಯೋಗ್ಯನನ್ನಾಗಿ ಮಾಡಲಾಗಿದೆ ಎಂದರು. ರಾಜನು ಸರಿ ಕಳಿಸಿ ಕೊಡಿ ಎಂದರು. ಮನೆಗೆ ಹೋಗಿ ಪಂಡಿತರು ಪುತ್ರನಿಗೆ–ಮಗನೇ ನಾಳೆ ಶಾಸ್ತ್ರ ಸಭೆಗೆ ರಾಜಭವನಕ್ಕೆ ನೀನು ಹೋಗಬೇಕು. ಅಲ್ಲಿ ರಾಜಾ ಮುಂತಾದವರ ಮುಂದೆ ಚೆನ್ನಾಗಿ ಶಾಸ್ತ್ರ ವಾಚನ ಮಾಡಬೇಕು–ಎಂದು ಹೇಳಿದರು. ಆಗ

ಮಗನು–ಒಳ್ಳೆಯದು ಅಪ್ಪಾಜಿ–ಚೆನ್ನಾಗಿ ಓದುತ್ತೇನೆ. ನನ್ನದೇ ರೀತಿಯಲ್ಲಿ ಆಗಮಕ್ಕನುಗುಣವಾಗಿ ಹೇಗಿದೆಯೋ ಹಾಗೆಯೇ ಓದುತ್ತೇನೆಂದು ಹೇಳಿದ.

ಪಂಡಿತರ ಮಗ ಮಾರನೆ ದಿನ ರಾಜಭವನ ತಲುಪಿದರು. ಸಮಯಾನುಸಾರ ಶಾಸ್ತ್ರ ಸಭಾ ಪ್ರಾರಂಭವಾಯಿತು. ಶಾಸ್ತ್ರ ವಾಚನ ಮಾಡುತ್ತಾ ಒಂದು ಸ್ಥಾನದಲ್ಲಿ ಒಂದು ವಾಕ್ಯ ಹೀಗೆ ಬಂದಿತು–

**ತಿಲಭರ ಮಛಲಿ ಖಾವ, ಕೋಟಿ ಗೋ ದೆ ದಾನ।**
**ಕಾಶೀ ಕರವಟ ಲೇ ಮರೇ ತೋ ಭಿ ನರಕ ನಿದಾನ॥**

ಇದರ ಅರ್ಥವನ್ನು ಹೇಳುತ್ತಾ–ಎಳ್ಳಿನಷ್ಟು ಮೀನನ್ನು ಸೇವಿಸುವವರು ಅಥವಾ ಎಳ್ಳಿನಷ್ಟು ಯಾರಾದರೂ ಮಾಂಸ ಸೇವನೆ ಮಾಡಿದರೆ ಅವರು ಕೋಟಿ ಕೋಟಿ ಹಸುಗಳ ದಾನ ಮಾಡಿದರೂ, ಇದರೊಂದಿಗೆ ಗಂಗಾನದಿಯಲ್ಲಿ ಸ್ನಾನ ಮಾಡಿದರೂ, ಕಾಶಿಯಾತ್ರೆ ಮಾಡಿ ಬಂದರೂ ಅವರು ನರಕಕ್ಕೆ ಹೋಗಲೇ ಬೇಕಾಗುತ್ತದೆ. ಹೀಗೆನೇ ಹೇಳಿದೆ, ಇದು ಬ್ರಾಹ್ಮಣ ಗ್ರಂಥಗಳ ವಿಷಯವಿದೆ. ಅವರ ಗ್ರಂಥಗಳಲ್ಲಿ ಹೀಗೆ ಬರೆದಿದ್ದಾರೆ. ಪಂಡಿತರ ಮಗ ಹೀಗೆ ವಿವರಣೆ ಮಾಡಿದಾಗ. ಇದನ್ನು ಕೇಳಿದ ಕೂಡಲೇ ರಾಜನ ಹೃದಯದಲ್ಲಿ ಬೆಂಕಿ ಹುಟ್ಟಿದಂತಾಯಿತು. ರಾಜನು ಕೋಪದಿಂದ ಅರೇ! ಯಾರು ನೀನು? ಮುಚ್ಚು ಬಾಯಿ. ಇದೆಲ್ಲವನ್ನು ನಿಲ್ಲಿಸು. ಏನು ಹೇಳುತ್ತಿದ್ದಿಯಾ ನಿಮ್ಮ ತಂದೆ, ತಾತ ಇದನ್ನು ಇಲ್ಲಿಯವರೆಗೆ ಹೇಳಿಯೇ ಇಲ್ಲ ಆದರೆ ನೀನು ಏನು ಹೇಳುತ್ತಿದ್ದಿಯಾ. ಹೀಗೆ ಜೋರಾಗಿ ಪಂಡಿತರ ಮಗನಿಗೆ ಗದರಿಸಿದಾಗ ಆತ ನಡುಗ ತೊಡಗಿ ಬೆವರಿಬಿಟ್ಟ. ಇದೇನಾಯಿತು ಎಂದು ಯೋಚಿಸ ತೊಡಗಿದ. ನಾನು ಏನು ಬರೆದಿದೆ ಅದನ್ನೇ ಓದಿದ್ದೇನೆ. ರಾಜ ಹೇಳಿದ–ನಿನಗೆ ಇನ್ನೂ ಓದಲು ಬರುವುದಿಲ್ಲ ಏದ್ದೇಳು ಹೊರಡು ಇಲ್ಲಿಂದ, ಹೊರಟು ಹೋಗು ಇಲ್ಲಿಂದ; ಈ ದೇಶದಿಂದ ಹೊರಗೆ ಹೋಗು ಗದರಿದ. ಇಂದು ಈಗಲೇ ಹೊರಡು ಇಲ್ಲವಾದಲ್ಲಿ ನಾಳೆ ನಿನ್ನನ್ನು ಗಲ್ಲಿಗೇರಿಸುತ್ತೇನೆ–ಎಂದೂ ಗದರಿದ.

ಇದೆಲ್ಲವನ್ನು ಕೇಳಿ ಆತನ ಕಾಲಿನ ಕೆಳಗೆ ಭೂಮಿ ಕುಸಿದಂತಾಯಿತು. ಆತ ಹೆದರುತ್ತಾ ಹೇಗಿದ್ದನೋ ಹಾಗೆಯೇ ಮನೆ ತಲುಪಿದ. ಅವನಲ್ಲಿ ಏನೂ ಶಕ್ತಿಯೇ ಇಲ್ಲವೆನ್ನುವಂತಾಗಿದ್ದಿತು. ಶರೀರದಲ್ಲಿರುವ ರಕ್ತವೆಲ್ಲಾ ಒಣಗಿದಂತಾಗಿದ್ದಿತು. ಅಮ್ಮನ ಬಳಿ ಅಳ ತೊಡಗಿದ ಹಾಗೂ ಅಮ್ಮನಿಗೆ ನನ್ನನ್ನು ರಕ್ಷಿಸು, ಈಗ ನನ್ನದೇನಾಗುವುದು? ಎಂದು ಗೊಗರೆದ ಬಹಳ ಕಷ್ಟಪಟ್ಟು ಏನೋ ಹೇಳಿದ. ಅನ್ಯ ಜೊತೆಗಾರರು ಎಲ್ಲವನ್ನು ಹೇಳಿದರು. ಆತನಂತೂ ಬಹಳ ಹೆದರಿದ್ದ. ಅಮ್ಮ ಇದೇನಾಯಿತು, ನೋಡು ನೀನು ಹೆದರಬೇಡ, ನಾನು ನೋಡುತ್ತೇನೆ. ಈಗ ಏನು ತಾನೇ ಮಾಡಲು ಸಾಧ್ಯ? ಅವಳು ಕೂಡಲೇ ರಾಜನ ಬಳಿ ಬಂದಳು. ರಾಜನನ್ನು ಸಂತೈಸಲು ಪ್ರಯತ್ನಿಸಿದಳು ಆದರೆ ರಾಜಾ ಏನನ್ನೂ ಕೇಳಲು ಸಿದ್ಧನಿರಲಿಲ್ಲ ಆತ–ಇಲ್ಲಿಂದ ಹೊರಟು ಹೋಗಿ. ಇಲ್ಲಿ ನಾನು ಏನನ್ನು ಕೇಳುವುದಿಲ್ಲ ಎಂದು ಹೇಳಿದ. ಅವಳು ಧೈರ್ಯದಿಂದ–ರಾಜನ್ ತಾವು ಅಪರಾಧವನ್ನು ಕ್ಷಮಿಸಬೇಕು. ಅವರ ತಂದೆ ಬರುವವರೆಗಾದರೂ ಸಮಯ ಕೊಡಿ ನಂತರ ನಾವು ಹೊರಟು ಹೋಗುತ್ತೇವೆ. ಅವರು ನಾಳೇಯೇ ಬರುತ್ತಾರೆ ಎಂದು ಹೇಳಿದಳು ಸರಿ ಗಮನವಿರಲಿ ಎಂದು ರಾಜಾ ಹೇಳಿದ.

ಮಾರನೇ ದಿನ ಅಪ್ಪಾಜೀ ಅವರು ಹಿಂದಿರುಗಿದರು ಅವರಿಗೆ ಎಲ್ಲ ವಿಷಯವನ್ನು

ಹೇಳಲಾಯಿತು, ಕೇಳಿದ ಅವರು–ಅರೇ ನೀನು ಬಹಳ ತಪ್ಪು ಮಾಡಿದೆ ನೀನು ಎಂದರು. ಮಗನು–ಅಪ್ಪಾಜೀಯವರು ಹಾಗೇ ಓದಲಾಗುವುದಿಲ್ಲ. ನಿನಗೇನು ಬರುವುದಿಲ್ಲ ನೀನೂ ಏನೂ ಕಲಿಯಲಿಲ್ಲ. ಕೇವಲ ಓದುವುದರಿಂದ ಎಲ್ಲವನ್ನು ಕಲಿತಂತಲ್ಲ, ಅರ್ಥ ಹಚ್ಚಿ ಹೇಳುವುದನ್ನು ಕಲಿಯಲಿಲ್ಲ. ರಾಜನ ಬಳಿ ನಡೆ ಅಲ್ಲಿ ನಾವು ಕ್ಷಮೆ ಕೇಳೋಣ. ತಂದೆ ಮಗ ರಾಜನ ಬಳಿ ಬಂದರು. ತಂದೆಯು ಮಗನಿಗೆ–ರಾಜನಿಂದ ಕ್ಷಮೆ ಕೇಳು ಎಂದರು ರಾಜನು ನೋಡುತ್ತಲೇ–ಇಲ್ಲ, ಇಲ್ಲಿ ಬರಬೇಡ, ಇಲ್ಲಿಂದ ಹೊರಟು ಹೋಗು ಎಂದಾಗ ಪಂಡಿತರು ಹುಜೂರು ಕ್ಷಮಿಸಬೇಕು, ನಾವು ಕಾಲಿಗೆ ಬೀಳುತ್ತೇವೆ. ನಿಮಗೆ ಕೈ ಜೋಡಿಸುತ್ತೇವೆ, ಏನು ದಂಡ ಕೊಡಬೇಕೋ ಕೊಟ್ಟು ಬಿಡಿ ಆದರೆ ಸ್ವಲ್ಪ ನಮ್ಮದನ್ನೂ ಕೇಳಿರಿ–ಎಂದರು. ಆಗ ರಾಜನು ನೀವು ಇಲ್ಲಿಂದ ಹೊರಟು ಹೋಗಿ ನಾನು ಏನನ್ನು ಕೇಳುವುದಿಲ್ಲ–ಎಂದರು ಪಂಡಿತರು ಬಹಳ ದೈನ್ಯದಿಂದ ಹೇಳಿದಾಗ ರಾಜನು ಅವರ ಮಾತುಗಳನ್ನು ಕೇಳಲು ಸಿದ್ಧನಾದ–ರಾಜನು–ಹೇಳು ಏನು ಹೇಳಬೇಕೆಂದಿರುವೆ ಹೇಳು ಎಂದನು?

ಪಂಡಿತರು–ರಾಜನ್ ನನ್ನ ಮಗನಿಗೆ ಏನೂ ಬರುವುದಿಲ್ಲ. ತನಗೆ ನಾನು ಇನ್ನೂ ಸ್ವಲ್ಪ ಮಾತ್ರ ಓದಿಸಿದ್ದೇನೆ ಆದ್ದರಿಂದ ಇವನಿಗೆ ಹೆಚ್ಚು ಏನೂ ಬರುವುದಿಲ್ಲ. ಈತ ನಮಗೆ ಏನೆಲ್ಲಾ ಹೇಳಿದ್ದಾನೆ. ಕೇಳಿಸಿದ್ದಾನೆ ಅದೆಲ್ಲಾ ಸರಿ ಇದೆ. ಎಂದು ಹೇಳಿದರು. ಆಗ ರಾಜನು–ನೀನು ಏನು ಹೇಳುತ್ತಿರುವೆ,ಎಂದು ಕೇಳಿದರು. ಪಂಡಿತರು ಈತ ಏನೆಲ್ಲಾ ಹೇಳಿದ್ದಾನೆ ಅದು ಸರಿಯಾಗಿಯೇ ಇದೆ ಆದರೆ ಇದರ ಅರ್ಥ ಹಾಗಿಲ್ಲ–ಎಂದರು ರಾಜನು ಹಾಗಾದರೆ ಎಂಥ ಅರ್ಥವಿದೆ?ಎಂದು ಕೇಳಿದಾಗ, ಪಂಡಿತರು–ನೋಡಿ ರಾಜನ್ ವಿಷಯ ಹೀಗಿದೆ ಎಳ್ಳಿನಷ್ಟು ಮೀನು ತಿಂದರೆ ಅವರಿಗೆ ನರಕ ತಪ್ಪುವುದಿಲ್ಲ, ಎಂದರು. ರಾಜನು ಪಂಡಿತರನ್ನು ಮದ್ಯ ಪ್ರವೇಶಿಸಿ ಜೋರಾಗಿ–ಮತ್ತೆ ಅದನ್ನೇ ಹೇಳುತ್ತಿದ್ದಿಯಾ ನಾಚಿಕೆ ಬರುವುದಿಲ್ಲವೇ?ಎಂದು ಕೇಳಿದ. ಪಂಡಿತರು ಶಾಂತ ಸ್ವರದಿಂದ ಸ್ವಲ್ಪ ಕೇಳಿಯಾದರೂ ಕೇಳಿ ಎಂದು ಹೇಳಿದರು. ಎಳ್ಳಿನಷ್ಟು ಮೀನು ತಿಂದವರಿಗೆ ನರಕ ತಪ್ಪುವುದಿಲ್ಲ ಹಾಗೂ ಮನಸ್ಸು ಬಯಸಿದಷ್ಟು ಮೀನೂ ತಿಂದವರಿಗೆ ಸ್ವರ್ಗ ತಪ್ಪುವುದಿಲ್ಲ–ಹೀಗೆ ಇದರ ಅರ್ಥವಿದೆ. ಇದನ್ನು ಕೇಳಿದ ರಾಜ ಜೋರಾಗಿ ಗುದ್ದಿ ಒತ್ತಿ ಹಾ, ಹಾ,ಹಾ ಇದು ನಿಜವಾದ ಅರ್ಥ ಹೀಗೆ ಹೇಳಬೇಕಾಗಿದ್ದಿತು ನಿನ್ನ ಮಗ–ಹೀಗೆ ಆತನಗೆ ಯಾಕೆ ಕಲಿಸಲಿಲ್ಲ ಎಂದು ಹೇಳಿದ ಆಗ ಪಂಡಿತರು ಕ್ಷಮಿಸ ಬೇಕು ರಾಜಾ ಆತನಗೆ ಏನೂ ಬರುವುದಿಲ್ಲ ಮುಂದೆ ಹೀಗೆ ಕಲಿಸುತ್ತೆನೆ–ಎಂದು ಹೇಳಿದ.

ನೋಡಿ ಸಹೋದರರೇ ಸ್ವಲ್ಪ ವಿಚಾರ ಮಾಡಿ,ಎಳ್ಳಿನಷ್ಟು ಮೀನು ತಿಂದರೆ ಅವರು ನರಕದಲ್ಲಿ ಹೋಗುವವರಿದ್ದಾರೆ ಅದು ತಪ್ಪುವುದಿಲ್ಲವೆಂದು ಆಗಮ ಶಾಸ್ತ್ರ ಹೇಳುತ್ತದೆ. ಶಾಸ್ತ್ರ ಸ್ವಲ್ಪ ಮಾತ್ರ ಬದಲಾದರೂ ಅದು ಹಾಗೇ ಇರುವಂತಹದು. ಆದರೆ ತಿನ್ನುವವನು ನರಕಕ್ಕೆ ಹೋಗುವನು ಆದರೆ ವಿಪರೀತವಾಗಿ ಹೇಳುವವರು ಎಲ್ಲಿ ಹೋಗುತ್ತಾರೆ? ನರಕ ಏನು ನಿಗೋದದಲ್ಲಿ ಯಾಕೆಂದರೆ ಅವರು ಕುಮಾರ್ಗವನ್ನು ತೋರಿಸುತ್ತಿದ್ದಾರೆ. ಶಾಸ್ತ್ರಕನುಗುಣವಾಗಿ ವಚನಗಳನ್ನಾಡದಿದ್ದರೆ ಎಷ್ಟು ಅಸತ್ಯಗಳನ್ನು ಹೇಳುತ್ತಾರೆ. ಪರಿಣಾಮವಾಗಿ ಈ ಜನ್ಮದಲ್ಲಂತೂ ಪ್ರತಿಫಲ ಇದ್ದೇ ಇರುತ್ತದೆ ಮುಂದಿನ ಜನ್ಮದಲ್ಲಿಯೂ ಪ್ರತಿಫಲವನ್ನು ಅನುಭವಿಸಲೇ ಬೇಕಾಗುತ್ತದೆ. ಶಾಸ್ತ್ರದೊಂದಿಗೆ ಮಾಯಾಚಾರ ಮಾಡಿದರೆ, ಕಲಬೆರಕೆ ಮಾಡಿದವರಿಗೆ, ಅದನ್ನು ಶಾಸ್ತ್ರದ ರೂಪದಲ್ಲಿ ಪ್ರಯೋಗ

ಮಾಡಿದರೆ ಅವರು ಎಷ್ಟು ಅಧೋಗತಿಗೆ ಹೋಗಬಹುದು? ಅವರಿಗೆ ನರಕದಲ್ಲಿಯೂ ಸ್ಥಾನ ಸಿಗಲಾರದು ಎಂದಾಗ ನಿಗೋದಕ್ಕೆನೇ ಹೋಗುವರು ಇದಕ್ಕೆ ಯಾವ ಪ್ರಾಯಶ್ಚಿತವೂ ಇಲ್ಲ. ನರಕ ನಿಗೋದಕ್ಕೆ ಹೋಗುವುದೊಂದೆ ಮಾರ್ಗ. ಪಂಡಿತ ಪ್ರವರ ದೌಲತರಾಮರು ಛಹಢಾಲಾದಲ್ಲಿ ಹೀಗೆ ಹೇಳಿದ್ದಾರೆ–

**ಏಕ ಶ್ವಾಸ ಮೇ ಅಠ ದಸ ಬಾರ, ಜನ್ಮಯೋ–ಮರ್‍ಯೋ ಭರ್‍ಯಯೋ ದುಃಖಬಾರ।**

(ಒಂದು ಶ್ವಾಸದಲ್ಲಿ ಎಂಟು ಹತ್ತು ಸಾರಿ ಜನ್ಮ ಮರಣಗಳನ್ನು ಭರಿಸಬೇಕಾದ ದುಃಖ)

ಶಬ್ದಗಳಲ್ಲಿ ಮಾತ್ರ ಜೀವಿಸುವ ಪಂಡಿತರು ಕೇವಲ ಹೇಳುತ್ತಾರೆ,ಮಾಡುವುದಿಲ್ಲ, ಆದ್ದರಿಂದ ಪಂಡಿತರು ಶಾಸ್ತ್ರವನ್ನು ಓದಿ ಕೇಳುಗರ ಅನುಸಾರ ಅರ್ಥ ಹೇಳುತ್ತಾರೆ, ಅವರು ಆಗಮಕ್ಕನುಗುಣವಾಗಿ ಅರ್ಥ ಮಾಡಲಿಲ್ಲ, ಪರಿಣಾಮವಾಗಿ ದುರ್ಗತಿಗೆ ಪಾತ್ರರಾಗುತ್ತಾರೆ. ಅನೇಕ ಕಷ್ಟಗಳನ್ನು ಜೀವನದಲ್ಲಿ ಸಹಿಸ ಬೇಕಾಗುತ್ತದೆ. ಪೂರ್ವಾಚಾರ್ಯರ ಪ್ರಕಾರವೇ ಎಲ್ಲ ವಿಷಯಗಳನ್ನು ಸ್ವೀಕರಿಸಿ ನಡೆಯುವ ವ್ಯಕ್ತಿಯೇ ಸತ್ಯವನ್ನು ಪಡೆಯುತ್ತಾರೆ. ಯಾರನ್ನೂ ಖುಶಿ ಪಡಿಸಲು ತಮ್ಮ ಸ್ವಾರ್ಥಕ್ಕಾಗಿ ಯಾರದೋ 'ಹಾ' ನಲ್ಲಿ 'ಹಾ' ಸೇರಿಸುವ, ಅವರ ಮನಕ್ಕನುಗುಣವಾಗಿ ಕಾರ್ಯ ಮಾಡುವ, ಹೊಗಳಿ–ಎತ್ತರಕ್ಕೆ ಏರಿಸಿ ಪ್ರಸಂಶೆ ಮಾಡುತ್ತಿರುವುದು ಮಧುರ ಸುಳ್ಳಾಗಿದೆ. ಹೀಗೆ ಅಸತ್ಯವನ್ನು ತ್ಯಾಗ ಮಾಡಬೇಕು.

ಶಾಸ್ತ್ರಕ್ಕೆ ವಿಪರೀತವಾಗಿ ಎಂದಿಗೂ ವಿವರಣೆ ಮಾಡಬಾರದು ಜಿನವಾಣಿಯು ಅನೇಕಾಂತ ಮಯವಾಗಿದೆ. ಅದರಲ್ಲಿ ಗೋಲಮಾಲ್ ಮಾಡಬೇಡಿ, ಇಂದು ಎಲ್ಲಿಯಾದರೂ ಯಾವುದಾದರೂ ವ್ಯವಹಾರವನ್ನು ಬಿಡುತ್ತಿದ್ದಾರೆ. ಇಲ್ಲವೇ ಕೆಲವರು ನಿಶ್ಚಯವನ್ನು ಬಿಡುತ್ತಾರೆ. ಕೆಲವರು ಪರ್ಯಾಯವನ್ನು ಒಪ್ಪುವುದಿಲ್ಲ ಇನ್ನು ಕೆಲವರು ನಿಮಿತ್ತದ ಅವಹೇಳನ ಮಾಡುತ್ತಾರೆ. ಕೆಲವರು ಆಚಾರ್ಯರ ವಾಣಿಗಳನ್ನು ಬಿಡುತ್ತಿದ್ದಾರೆ. ಅನೇಕ ಗಾದೆಗಳನ್ನು ಬಿಡುತ್ತಿದ್ದಾರೆ ಅಥವಾ ಶ್ಲೋಕಗಳನ್ನು ಬಿಡುತ್ತಿದ್ದಾರೆ. ಆಗಮಾನುಕೂಲ ವಿಷಯಗಳನ್ನು ಸ್ವೀಕರಿಸದೇ ತಮ್ಮ ಅನುಸಾರವೇ ಜನರಿಗೆ ತಿಳಿಸುತ್ತಿದ್ದಾರೆ. ವೀತರಾಗತೆ ಇಲ್ಲದೇನೆ ಶುದ್ಧಾತ್ಮಾನುಭೂತಿ ಯಾಗುವುದು, ಪಂಚಮ ಕಾಲದಲ್ಲಿ ಮುನಿಗಳಾಗುವುದಿಲ್ಲ, ಪೂಜೆ ದಾನದ ಪರಂಪರೆಯಿಂದ ಮುಕ್ತಿಗೆ ಕಾರಣವಲ್ಲ, ಮುಂತಾದವುಗಳನ್ನು ಹೇಳುವುದು ಅಸತ್ಯದ ಸಮರ್ಥನೆಯಾಗಿದೆ. ಆದ್ದರಿಂದ ಪೂರ್ವಾಚಾರ್ಯರ ಅನುಸಾರ ವಿವರಣೆ ಮಾಡುವ ಸಾಧಕ ಪಂಡಿತರೇ ನಿಜವಾದ ವಕ್ತಾರರಾಗಿದ್ದು ಅನುವೀಚಿ ಭಾಷಣ ಮಾಡುತ್ತಾರೆ.

ಹೀಗೆ ಸತ್ಯಧರ್ಮದ ಪಾಲನೆಗಾಗಿ ಕ್ರೋಧ, ಲೋಭ, ಭಯ, ಹಾಸ್ಯಗಳ ತ್ಯಾಗ ಮತ್ತು ಶಾಸ್ತದ ಆಜ್ಞಾನುಸಾರ ವಿವರಣೆ ಮಾಡಬೇಕು. ಇವುಗಳನ್ನು ಬಿಡದೇ ಸತ್ಯದ ಪಾಲನೆಯನ್ನು ಸರಿಯಾಗಿ ಮಾಡಲಾಗದು. ಧರ್ಮ ಭಾವನಾ ಶತಕದಲ್ಲಿ ಹೀಗೆ ಬರೆದಿದೆ–

**ಸತ್ಯಧರ್ಮದ ಪಾಲನೆ ಮಾಡಲು, ಸದಾ ತ್ಯಜಿಸಿರಿ ಕ್ರೋಧವನು**
**ಸತ್ಯದಿ ತ್ಯಜಿಸಿ ಲೋಭ ಭಾವವ, ಮಾಡಿರಿ ಭಯ ಪರಿಹಾರವನು**
**ರಮಿಸದಿರಿ ಹಾಸ್ಯದಲಿ, ಆಗುವುದು ಸತ್ಯಪಾಲನೆ**
**ಆಗದಿರಲು ಕಷಾಯ, ಭವಿ ಇರುವನು ಶುಭ ಧ್ಯಾನದಲಿ॥43॥**

ಧರ್ಮವು ಒಂದು ಶಾಶ್ವತ ವಸ್ತುವಾಗಿದೆ. ಧರ್ಮದ ಧಾರೆಯನ್ನು ಅವಿಚ್ಛನ್ನ ರೂಪದಿಂದ

ನಿರಂತರವಾಗಿ ಎಲ್ಲ ತೀರ್ಥಂಕರರು ಹರಿಸಿದ್ದಾರೆ. ನಾವು ಸಹ ತತ್ವದ ಸ್ವರೂಪ ಹೇಗಿದೆಯೋ ಅದನ್ನು ಹಾಗೆಯೇ ಇಡಬೇಕು. ಧರ್ಮದ ವ್ಯಾಖ್ಯಾನವನ್ನು ಅವಸರವಾದಿ ಪಂಡಿತರಿಗೆ ಕೊಟ್ಟರೆ, ನಿಜವಾದ ಧರ್ಮಾತ್ಮರು ಸತ್ಯವನ್ನು ಪ್ರಕಾಶಿತಗೊಳಿಸಿ ಸಿದ್ಧಾಂತದ ಪ್ರತಿಪಾದನೆಯನ್ನು ಆಗಮಾನುಸಾರ ಮಾಡಬೇಕು ಎನ್ನುವುದನ್ನು ಅವಶ್ಯವಾಗಿ ಗಮನದಲ್ಲಿಡಬೇಕು. ಆಚಾರ್ಯ ಶುಭಚಂದ್ರರು ಜ್ಞಾನಾರ್ಣವದಲ್ಲಿ ಬಹಳ ಶ್ರೇಷ್ಠವಾದ ಮಾತುಗಳನ್ನು ಹೇಳಿದ್ದಾರೆ–

**ಧರ್ಮ ನಾಶೇ ಕ್ರಿಯಾ ಧ್ವಂಸೇ ಸುಸಿದ್ಧಾಂತಾರ್ಥ ವಿಪ್ಲವೇ।**
**ಅಪೃಷ್ಟೈರಪಿ ವಕ್ತವ್ಯಂ ತತ್ತ್ವ ಸ್ವರೂಪ ಪ್ರಕಾಶನೇ॥(9/5)**

ಧರ್ಮಗುರುಗಳು,ಆಚಾರ್ಯರುಗಳು, ಭಗವಂತರಿಗೆ ಧರ್ಮದ ಅಸ್ತಿತ್ವ ಸಂಕಟದಲ್ಲಿರುವುದನ್ನು ನೋಡಿ ಕ್ರಿಯೆಗಳ ವಿನಾಶ ಹಾಗೂ ಸಿದ್ಧಾಂತಗಳ ಉಪೇಕ್ಷೆಯನ್ನು ನೋಡುತ್ತಾ ಸುಮ್ಮನಿರಬಾರದು. ಹೇಳಿಸಿಕೊಳ್ಳದೇ ಹೇಳಬೇಕು ಹಾಗೂ ನಿರ್ಮಲ ತತ್ವಜ್ಞಾನದ ಗಂಗೆಯನ್ನು ಹರಿಸಬೇಕು ಅದರಿಂದಾಗಿ ಜನರು ಧರ್ಮದ ಯಥಾರ್ಥ ಸ್ವರೂಪ ತಿಳಿಯುವಂತಾಗಲಿ, ಇಲ್ಲವಾದಲ್ಲಿ ಸಮ್ಯಕ್ ಜ್ಞಾನ ಮಿಥ್ಯಾಜ್ಞಾನದಲ್ಲಿ ಪರಿಣಿತವಾಗದೇ ಇರದು. ಆದ್ದರಿಂದ **'ಸತಾಂ ಸಾಧೂನಾಂ ಹಿತ ಭಾಷಣಂ ಸತ್ಯಮ್'** –ಎಂದು ಹೇಳಿದ್ದಾರೆ. ಅರ್ಥಾತ್ ಮುನಿ ಮತ್ತು ಅವರ ಭಕ್ತ ಶ್ರಾವಕರೊಂದಿಗೆ ಹಿತಕರವಾದ ವಚನಗಳನ್ನು ಹೇಳುವುದು ಸತ್ಯಧರ್ಮವಾಗಿದೆ. ಧರ್ಮದ ವೃದ್ಧಿಗಾಗಿ ಧರ್ಮ ಸಹಿತ ಹೇಳುವುದನ್ನು ಸತ್ಯವೆಂದು ಹೇಳಿದ್ದಾರೆ. ಜ್ಞಾನ ಚಾರಿತ್ರ ಇತ್ಯಾದಿಗಳನ್ನು ಕಲಿಸಲು ಧರ್ಮದ ವ್ಯವಹಾರದ ಅವಶ್ಯಕತೆ ಇರುತ್ತದೆ. ಕೊನೆಯಲ್ಲಿ ಒಂದು ಶ್ಲೋಕದ ಮೂಲಕ ಧರ್ಮದ ವಿಷಯವನ್ನು ಹೇಳುತ್ತಿದ್ದೇನೆ. ತಾವು ಶ್ರಾವಕರಿದ್ದೀರಿ. ಮುನಿ ಮಹಾರಾಜರ ಮಾತಲ್ಲ. ಸತ್ಯಕ್ಕಾಗಿ ಶ್ಲೋಕವನ್ನು ಹೇಳುತ್ತಾರೆ.

**ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ಬ್ರೂಯಾತ್ ಸತ್ಯಮಪ್ರಿಯಮ್।**
**ಪ್ರಿಯಂ ಚ ನಾನೃತಂ ಬ್ರೂಯಾದೇಷ ಧರ್ಮಃ ಸನಾತನಃ॥ (ಮನುಸ್ಮೃತಿ 4/38)**

'ಸತ್ಯಂ ಬ್ರೂಯಾತ್' ಸತ್ಯವನ್ನು ಹೇಳಿರಿ, 'ಪ್ರಿಯ ಬ್ರೂಯಾತ್' ಪ್ರಿಯವಾಗಿರುವುದನ್ನು ಹೇಳಿರಿ, 'ನ ಬ್ರೂಯಾತ್ ಸತ್ಯಮಪ್ರಿಯಮ್' ಅಪ್ರಿಯ ಸತ್ಯವನ್ನು ಹೇಳಬೇಡಿ ಹಾಗು ನಾನೃತಂ ಚ ಪ್ರಿಯಂ ಬ್ರೂಯಾತ್' ಪ್ರಿಯವಾದ ಸುಳ್ಳನ್ನು ಹೇಳಬೇಡಿ, ಇದೇ ಸನಾತನ ಧರ್ಮವಾಗಿದೆ, ಸತ್ಯ ಧರ್ಮವಿದೆ. ಅರ್ಥಾತ್ ಸತ್ಯವು ಹಿತ–ಮಿತ, ಪ್ರಿಯವಾಗಿದೆ. ಹಿತದ ತಾತ್ಪರ್ಯ ತನ್ನ ಹಾಗೂ ಪರರ ಒಳಿತನ್ನು ಮಾಡುವಂತಹದಾಗಿರಲಿ, ಮಿತದ ತಾತ್ಪರ್ಯ ಪರಿಮಿತವಾಗಿರಲಿ, ಮರ್ಯಾದಿತವಾಗಿರಲಿ, ಅನಾವಶ್ಯಕವಾಗದಿರಲಿ, ಹಾಗೂ ಪ್ರಿಯ ಅರ್ಥಾತ್ ಕಠೋರ, ಕರ್ಕಶ, ಮರ್ಮಭೇದಿಯಾಗದಿರಲಿ, ಶ್ರುತಿ ಸುಖಕರವಾಗಿರಲಿ. ಅಪ್ರಿಯ ಹಾಗೂ ಕಟು ಸತ್ಯವು ಸಹ ಅಸತ್ಯದ ಶ್ರೇಣಿಯಲ್ಲಿಯೇ ಬರುತ್ತದೆ. ಇಂತಹ ಸತ್ಯ ಸಹ ಅಸತ್ಯದ ಸಮಾನವಿದೆ ಅದರಿಂದ ಯಾರಿಗಾದರೂ ವಿಪತ್ತು ಬರಬಹುದು. ಯಾರದೋ ಕೆಲಸ ಹೋಗಬಹುದು, ಯಾರದೋ ಪ್ರಾಣ ಹೋಗಬಹುದು, ಯಾರಿಗೋ ಶಿಕ್ಷೆಯಾಗಬಹುದು. ಯಾರದೋ ಜೀವನ ಹಾಳಾಗ ಬಹುದು, ಯಾರದೋ ಜೀವನದ ಅಪವಾದ ಹರಡಬಹುದು–ಒಂದು ದೃಷ್ಟಾಂತ ಹೀಗಿದೆ.

ಯಾವುದೋ ಒಂದು ರಸ್ತೆಯಿಂದ ಒಂದು ಹಸು ಹೋಗುತ್ತಿದೆ ಎಂದು ಭಾವಿಸಿ ಮುಂದೆ

ಒಂದು ನಾಲ್ಕು ರಸ್ತೆಗಳು ಸೇರುವ ಚೌಕವಿದೆ. ಹಸುವು ಬಹಳ ವೇಗದಿಂದ ಚೌಕಕ್ಕೆ ಬರುತ್ತದೆ ಮತ್ತು ಹಿಂದಿನಿಂದ ಕಟುಕನೊರ್ವ, ಕಠಾರಿ ಹಿಡಿದು ಓಡುತ್ತಾ ಆ ಹಸುವನ್ನು ಹಿಡಿಯಲು ಹೊಡೆಯಲು ಬರುತ್ತಿದ್ದಾನೆ. ತಾವು ಚೌಕದಲ್ಲಿ ನಿಂತಿದ್ದೀರಿ, ತಾವು ತಮ್ಮ ಕಣ್ಣುಗಳಿಂದ ಹಸು ಓಡಿ ಬಂದು ಚೌಕದ ಒಂದು ತಿರುವಿನಲ್ಲಿ ಹೊರಟು ಹೋಗಿದ್ದನ್ನು ನೋಡಿದ್ದಿರಾ. ಹಿಂದೆ ಕಠಾರಿ ಹಿಡಿದು ಓಡುತ್ತಾ ಬಂದವನು ಇಲ್ಲಿಂದ ಹಸು ಹೋಯಿತೆ?ಎಂದು ಕೇಳಿದ. ಆತನೊಬ್ಬ ಕಟುಕನೆಂದು ನಮಗೆ ತಿಳಿಯಿತು ಹಸುವನ್ನು ಕಸಾಯ ಖಾನೆಗೆ ಒಯ್ಯುತ್ತಾನೆ. ಆಗ ನೀವು ಸತ್ಯವಾದಿಯಾಗಿ ಏನು ಮಾಡುತ್ತೀರಿ? ನಿಮಗೆ ಅದರ ಕುತ್ತಿಗೆಯನ್ನು ಕತ್ತರಿಸುತ್ತಾರೆಂದು ನಿಮಗೆ ಗೊತ್ತಿಲ್ಲ, ಯಾರೂ ಅಪರಾಧಿಗಳಲ್ಲ, ಆ ಹಸುವಂತು ನಿರಪರಾಧಿಯಾಗಿದೆ, ಇವನೋ ಹೊಡೆಯಲು ಬರುತ್ತಿದ್ದಾನೆ. ನೀವೇನು ಮಹಾವ್ರತಿಗಳಲ್ಲ. ಮಹಾವ್ರತಿ ಮುನಿ ಮಹಾರಾಜರ ವಿಷಯವೇ ಬೇರೆಯಾಗಿರುತ್ತದೆ. ಅವರಿಂದ ಎಲ್ಲವನ್ನು ಯಾರೂ ಸಹ ಕೇಳುವುದು ಇಲ್ಲ ಯಾಕೆಂದರೆ ಅವರ ಅವಸ್ಥೆಯೇ ಬೇರೆಯಾಗಿರುತ್ತದೆ ಹಾಗೂ ಅಂತಹ ಪರಿಸ್ಥಿತಿ ಬಂದರೂ ಸಹ ಮುನಿ ಮಹಾರಾಜರು ವಿವಾದದಲ್ಲಿ ಬೀಳುವುದೇ ಇಲ್ಲ. ಅವರು ಅಂತಹ ಸಮಯದಲ್ಲಿ ಏನನನ್ನೂ ಹೇಳುವುದು ಇಲ್ಲ. ಆದರೆ ನಿಮ್ಮ ಮಾತೇ ಬೇರೆ ಇದೆ. ತಾವು ಶ್ರಾವಕರಾಗಿದ್ದಿರಿ. ಆ ಸಮಯ ನೀವು ಏನು ಮಾಡುತ್ತಿರಾ? ಹೇಳಿಬಿಡುವಿರಾ ನಾವು ನೋಡಿದ್ದೇವೆ. ಯಾವ ಕಡೆಯಿಂದ ಹಸು ಬಂದಿತು ಹಾಗೂ ಎಲ್ಲಿ ಹೋಯಿತು? ಅದನ್ನು ಹೇಳಿ ಬಿಡುವಿರಾ? ಅಥವಾ ಬೇರೆ ಕಡೆ ತೋರಿಸುತ್ತಿರಾ? ಯಾಕೆಂದರೆ ಅದರಿಂದ ಅದರ ಪ್ರಾಣದ ರಕ್ಷಣೆಯಾಗುತ್ತದೆ. ಈ ಸ್ಥಿತಿಯಲ್ಲಿ ಇದು ಸುಳ್ಳಾಗಿದ್ದರೂ ಸಹ ಸತ್ಯವೇ ಆಗಿದೆ. ಇಲ್ಲಿ ಪ್ರಾಣಗಳ ರಕ್ಷಣೆಯಾಗುತ್ತದೆ. ಅಹಿಂಸೆ-ಕರುಣೆಯ ಭಾವ ಇರುವಲ್ಲಿ ಧರ್ಮವೂ ಇದ್ದು ಇಲ್ಲಿ ಸತ್ಯ ಇರುತ್ತದೆ. ಎಲ್ಲಿ ಸತ್ಯ ಹೇಳುವುದು ಕಠಿಣವಾಗಿದೆಯೋ ಸತ್ಯ ಹೇಳಿದರೆ ಪರಿಸ್ಥಿತಿ ಹದಗೆಡುತ್ತದೆಯೋ, ಏನಾದರೂ ಆಗಬಹುದೋ ಅಂತಹ ಸ್ಥಿತಿಯಲ್ಲಿ, ಮೌನವಾಗಿರಿ ಎಂದು ಆಚಾರ್ಯರುಗಳು ಹೇಳಿದ್ದಾರೆ. ಅಂತಹ ಪ್ರಸಂಗಗಳಲ್ಲಿ ಸುಮ್ಮನಾಗಿರಿ. ಒಂದು ವೇಳೆ ಮಾತನಾಡಿದರೆ ಹಿತ-ಮಿತ ಪ್ರಿಯ ಸತ್ಯವನ್ನೇ ಹೇಳಿರಿ.

ಯಾರ ಬಳಿ ಸತ್ಯ ಇರುವುದೋ ಅವರ ಬಳಿ ಎಲ್ಲವೂ ಇರುತ್ತದೆ. ಸತ್ಯವು ಪ್ರಾಣಗಳ ಪ್ರಾಣವಾಗಿದೆ. ಯಾರು ಸತ್ಯವನ್ನು ಸ್ವೀಕರಿಸುತ್ತಾರೋ ಅವರನ್ನು ಸಂಸಾರದ (ಜಗತ್ತಿನ)ಎಲ್ಲ ಗುಣಗಳು ಅಪ್ಪಿಕೊಳ್ಳುತ್ತವೆ. ಸತ್ಯಾರ್ಥಿ, ಸತ್ಯಬಾಷಿ, ಸತ್ಯ ಅನ್ವೇಷಕ, ಸತ್ಯದಲ್ಲಿ ಬದುಕಿರುವವನು ಎಂದಿಗೂ ಜೀವನದಲ್ಲಿ ದು:ಖಿಯಾಗುವುದಿಲ್ಲ ಆತನು ಸತ್ಯಧರ್ಮವನ್ನು ಪಡೆದುಕೊಂಡಾಗ ಎಲ್ಲವನ್ನೂ ಪಡೆದುಕೊಳ್ಳುತ್ತಾನೆ ಹೀಗೆ ಹೇಳಿಯೂ ಇದ್ದಾರೆ-

**ಸಾಂಚ ಬರಾಬರ ತಪ ನಹೀ ಝೂಟ ಬರಾಬರ ಪಾಪ।**
**ಜಾಕೇ ಹಿರದಯ ಸಾಂಚ ಹೈ, ತಾಕೇ ಹಿರದಯ ಆಪ॥**
**[ಸತ್ಯಕ್ಕೆ ಸಮಾನ ತಪವಿಲ್ಲ, ಸುಳ್ಳಿಗೆ ಸಮಾನ ಪಾಪ**
**ಯಾರ ಹೃದಯದಲಿ ಸತ್ಯವಿದೆ ಅವರ ಹೃದಯ ಸರ್ವವಿದೆ]**

ಯಾರ ಹೃದಯದಲ್ಲಿ ಸತ್ಯ ವಾಸವಾಗಿದೆ ಅವರ ಹೃದಯಲ್ಲಿ ಪರಮಾತ್ಮನ ವಾಸವಿದೆ. ಅರ್ಥಾತ್ ಆತನ ಆತ್ಮ ಪರಮಾತ್ಮನಾಗಬಲ್ಲ. ಸತ್ಯ ಹೇಳುವವನು ಆಪತ್ತು ವಿಪತ್ತುಗಳಲ್ಲಿಯೂ ತನ್ನ ಸ್ಥಿರತೆಯನ್ನು ಹೊಂದಿರುತ್ತಾನೆ. ತನ್ನ ಜೀವನವನ್ನು ಪ್ರಾಮಾಣಿಕ ಮಾಡುತ್ತಾನೆ. ಸತ್ಯ ಸಂಘರ್ಷದಲ್ಲಿ

ಪ್ರಕಟವಾಗುತ್ತದೆ. ಸಂಘರ್ಷದಲ್ಲಿ ಬದುಕಿರುವಾಗ ಸತ್ಯ ಪ್ರಕಟವಾಗುತ್ತಾ ಸಾಗುತ್ತದೆ. ಎಲ್ಲಿ ಸುಖ ಮತ್ತು ಸುವಿಧಾಗಳ ಮಧ್ಯೆ ಹೋಗಿ ಬರುತ್ತಿದ್ದರೆ ಸತ್ಯವು ಹತ್ತಿಕ್ಕಲಾಗುತ್ತದೆ. ಸತ್ಯದ ವೃಕ್ಷವನ್ನು ಜೀವನದುದ್ದಕ್ಕೂ ಪೋಷಣೆ ಮಾಡಿದಾಗ ಆಗ ಅದು ಫಲವನ್ನು ನೀಡುವಂತಾಗುತ್ತದೆ. ಸತ್ಯದ ಫಲ ಬಹಳ ಸಿಹಿಯಾಗಿರುತ್ತದೆ. ಪರಸ್ಪರ ವ್ಯವಹಾರದಲ್ಲಿ ಸಮೀಚೀನತೆ ಬರುತ್ತದೆ ಸತ್ಯದಿಂದ ಆತ್ಮವಿಶ್ವಾಸ, ತನ್ನತನ ಹಾಗೂ ವಾತ್ಸಲ್ಯ ವೃದ್ಧಿಯಾಗುತ್ತದೆ.

ಆಚಾರ್ಯರು ಸತ್ಯದ ಮಹತ್ವನ್ನು ತಿಳಿಸುತ್ತಾ-ಹೃದಯದಿಂದ ಹೊರಟ ಮಧುರವಾಣಿ ಮತ್ತು ಅಮೃತಮಯವಾದ ಸೌಮ್ಯರೂಪ ಸಹಧರ್ಮದ ನಿವಾಸ ಸ್ಥಾನವೆಂದು ಹೇಳಿದ್ದಾರೆ. ನಮ್ರತೆ ಮತ್ತು ಪ್ರಿಯ ಸಂಭಾಷಣೆ ಇವೇ ಮನುಷ್ಯನ ಆಭರಣಗಳಾಗಿವೆ, ಬೇರೆ ಅಲ್ಲ. ಸತ್ಯ ವ್ರತ-ಶ್ರುತ, ವ್ರತ ಹಾಗೂ ಯೋಗದ ಸ್ಥಾನವಾಗಿದೆ, ವಿದ್ಯೆ ಮತ್ತು ವಿನಯದ ಭೂಷಣವಾಗಿದೆ ಹಾಗೂ ರತ್ನತ್ರಯಮಯ ಮೋಕ್ಷಮಾರ್ಗ ಮತ್ತು ಮೋಕ್ಷದ ಕಾರಣ ಸತ್ಯವಚನವೇ ಆಗಿದೆ. ಸತ್ಯವಾದಿಗೆ ಬೆಂಕಿಯು ಸುಡುವುದಿಲ್ಲ. ನೀರು ಆತನನ್ನು ಮುಳುಗಿಸುವುದಿಲ್ಲ. ಸತ್ಯನಿಷ್ಠ ವ್ಯಕ್ತಿಗಳಿಗೆ ಹೆಜ್ಜೆ ಹೆಜ್ಜೆಗೂ ಪರೀಕ್ಷೆಯಾಗುವುದು ಎಂಬ ಮಾತು ಸರಿಯಿದೆ. ಸತ್ಯವನ್ನು ಸಹಿಸುವುದು ಬಹಳ ಕಠಿಣವಿದೆ. ಸತ್ಯದ ರಕ್ಷಣೆಯು ಸಹ ಕಠಿಣವಿದೆ. ಸತ್ಯ ಹೇಳುವವರು ಕಷ್ಟಗಳನ್ನೂ ಸಹಿಸ ಬೇಕಾಗುತ್ತದೆ. ಸಂಘರ್ಷವನ್ನು ಮಾಡಬೇಕಾಗುತ್ತದೆ. ಅಗ್ನಿ ಪರೀಕ್ಷೆಯೂ ಆಗಬಹುದು. ಸುವರ್ಣದ ಅಗ್ನಿ ಪರೀಕ್ಷೆ ಎಷ್ಟು ಸಾರಿ ಆಗುತ್ತದೋ ಅದರಲ್ಲಿ ಅಷ್ಟೆ ನಿಖರತೆ ಬರುತ್ತದೆಂದು ಹೇಳುತ್ತಾರೆ. ಇದೇ ಪ್ರಕಾರ ಸತ್ಯದಿಂದ ಜೀವನವು ಕಾಂತಿಯುಕ್ತವಾಗುತ್ತದೆ. ಸತಿ ಸೀತೆಯ ಶೀಲದ ಪ್ರಭಾವದಿಂದ ಅಗ್ನಿ ಕುಂಡದಲ್ಲಿ ಜಲ ಮತ್ತು ಕಮಲ ಅರಳಿದವು. ಶ್ರೇಷ್ಠಿ ಸುದರ್ಶನನ ನೇಣುಗಂಬ ಸಿಂಹಾಸನವಾಯಿತು ಇಂತಹ ಮುಂತಾದ ಉದಾಹರಣೆಗಳು ಸತ್ಯಧರ್ಮದ ಅತಿಶಯವನ್ನು ತಿಳಿಸುತ್ತವೆ. ಇವು ಪ್ರತಿಯೊಬ್ಬ ವ್ಯಕ್ತಿಗೆ ಸತ್ಯವಾದಿತ್ವದ ಸಾಹಸವನ್ನು ಉತ್ಪನ್ನ ಮಾಡುತ್ತವೆ. ಆದ್ದರಿಂದಲೇ 'ಸತ್ಯಮೇವ ಜಯತೇ' ಎಂದು ಹೇಳಿದ್ದಾರೆ. ರಾಜಾ ದಶರಥನು ಹೀಗೆ ಹೇಳಿದ್ದಾನೆ-

**ರಘುಕುಲ ರೀತಿ ಸದಾ ಚಲೀ ಆಈ, ಪ್ರಾಣ ಜಾಏ ಪರ ವಚನ ನ ಜಾಈ।**

(ರಘುಕುಲದ ರೀತಿ ಸದಾ ನಡೆದು ಬಂದಿದೆ, ಪ್ರಾಣ ಹೋಗಲಿ ಆದರೆ ವಚನ ಹೋಗದಿರಲಿ)

ಸತ್ಯ ವಚನದ ಪಾಲನೆಯನ್ನು ಪ್ರತಿಯೊಂದು ಸ್ಥಿತಿಯಲ್ಲಿ ಮಾಡಬೇಕು ಸತ್ಯದ ಪಾಲನೆಯನ್ನು ಮಾಡಿದವರು ಈ ಸಂಸಾರದಿಂದ ಮುಕ್ತರಾಗಿದ್ದಾರೆ. ಸತ್ಯವು ಪ್ರತಿಯೊಂದು ಆತ್ಮನಲ್ಲಿ ವಿದ್ಯಾಮಾನವಿದೆ, ಅದು ಶಾಶ್ವತವಿದೆ, ಸತ್ಯದ ಪರಿಪೂರ್ಣತೆ ಪರಮಾತ್ಮನಲ್ಲಿದೆ, ಸತ್ಯವು ಐದು ದೋಷಗಳಿಂದ ರಹಿತವಾಗಿದೆ, ನಿರ್ಮಲ, ನಿರಾಕಾರವಾಗಿದೆ. ಸತ್ಯವು ಶಿವ ಅರ್ಥಾತ್ ಮೋಕ್ಷದ ಕಾರಣವಾಗಿದೆ ಯಾರಿಗೇ ಆಗಲಿ ಇದು ಆತ್ಮನನ್ನು ಸುಂದರ, ಶ್ರೇಷ್ಠವನ್ನಾಗಿ ಮಾಡುತ್ತದೆ. ಧರ್ಮ ಭಾವನಾ ಶತಕದಲ್ಲಿ ಹೀಗೆ ಬರೆದಿದ್ದಾರೆ-

**ಸತ್ಯ ಮಾರ್ಗಕೆ ಜಯವಾಗಲಿ ನಿತ್ಯ ಜಗವಾಗಲಿ ಸುಖಿ-ವಿಶ್ವಾಸ**
**ಸತ್ಯ ಲೋಕದಲ್ಲಿ ಆಗಲಿ ಪ್ರಶಂಸೆ, ಮತ್ತೆ ಆಗಲಿ ಸ್ವರ್ಗದ ವಾಸ**
**ಎಲ್ಲ ರೀತಿಯ ವ್ರತ ಸಂಯಮದಲ್ಲಿ ಉತ್ಸಾಯತವಾಗುವುದು**
**ಎಲ್ಲ ಕರ್ಮವ ಕತ್ತರಿಸಲು, ನರನು ಆಗುವನು ಶಿವನ ಭಾಗ॥48॥**

# ಉತ್ತಮ ಸಂಯಮ ಧರ್ಮ
## ಸಂಯಮದಿಂದ ಆತ್ಮ ರಕ್ಷಣೆ

### ಮಂಗಳಾಚರಣೆ

**ಧಮ್ಮೋ ಮಂಗಲ ಮುಕ್ಕಟ್ಠಂ ಅಹಿಂಸಾ ಸಂಯಮೋ ತವೋ।**
**ದೇವಾವಿತಸ್ಸ ಪಣಮಂತಿ ಜಸ್ಸಧಮ್ಮೇ ಸಯಾ ಮಣೋ॥**

ಇಂದು ನಾವು ಪರ್ಯೂಷಣ ಪರ್ವದ ಆರನೇ ದಿನ ಉತ್ತಮ ಸಂಯಮ ಧರ್ಮದ ಮೇಲೆ ಚಿಂತನೆ ಮಾಡೋಣ.ನಾಲ್ಕು ಕಷಾಯಗಳ ಶಮನವಾಯಿತು ಮತ್ತು ನಾಲ್ಕು ಧರ್ಮಗಳ, ಮಿಲನವಾಯಿತು ಮತ್ತೆ ಸತ್ಯಮಾರ್ಗದಿಂದ ನಡೆದೆವು, ಸತ್ಯದ ಮೇಲೆ ಅಚಲವಾದ ವಿಶ್ವಾಸವಿಟ್ಟೆವು ಯಾಕೆಂದರೆ ಸತ್ಯದ ಭೂಮಿಯ ಮೇಲೆ ಸಂಯಮದ ಬೀಜ ಅಂಕುರವಾಗುತ್ತದೆ. ಅದರ ನಂತರ ತಪದ ಜಲದಿಂದ ಪಲ್ಲವಿತಗೊಂಡು ಪುಷ್ಪಿತವಾಗುತ್ತದೆ. ಆದ್ದರಿಂದ ಸಂಯಮದ ನಂತರ ತಪದ ಕ್ರಮ ಬರುತ್ತದೆ. ಸತ್ಯಮಾರ್ಗದಿಂದ ನಮ್ಮ ಜೀವನದಲ್ಲಿ ಸಂಯಮ ದೊರಕಿತು. ಸಂಯಮವನ್ನು ಸ್ವೀಕರಿಸಿದ ಮೇಲೆಯೇ ಹೆಜ್ಜೆಯು ತಪದ ಕಡೆಗೆ ಸಾಗುತ್ತದೆ. ಸಂಯಮವು ದೊಡ್ಡದಾದ ಅಮೂಲ್ಯ ರತ್ನವಾಗಿದೆ. ಜೀವನದಲ್ಲಿ ಸಂಯಮಕ್ಕೆ ಬಹಳ ಶ್ರೇಷ್ಠ ಸ್ಥಾನವಿದೆ. **'ಸಂಯಮ ಖಲು ಜೀವನಮ್'**– ಎಂದೂ ಸಹ ಹೇಳಿದ್ದಾರೆ. ಸಂಯಮವು ಆತ್ಮನ ಒಂದು ವಿಶೇಷ ಗುಣವಿದೆ.ನಮ್ಮ ಮನ ವಚನ– ಕಾಯಗಳನ್ನು ಮಾತ್ರ ಅಲ್ಲ ನಮ್ಮ ಆತ್ಮನನ್ನು ನಮ್ಮೊಂದಿಗೆ ಜೋಡಿಸುತ್ತದೆ. ನಮ್ಮ ವಿಭಾ ಅವಸ್ಥೆ ಸಮಾಪ್ತವಾಗಿ ಸ್ವಭಾವ ಅವಸ್ಥೆ ಪ್ರಾಪ್ತವಾಗುತ್ತದೆ.ಇದು ಸಂಯಮ ಧರ್ಮದ್ದೇ ಪ್ರಭಾವ ನಮ್ಮ ಜೀವನದಲ್ಲಿದೆ.

ನಮ್ಮ ಜೀವನವನ್ನು ವ್ಯವಸ್ಥಿತಗೊಳಿಸಲು ನಿಮ್ಮ ಮನ–ವಚನ–ಕಾಯದ ಕ್ರಿಯೆಗಳನ್ನು ಸಂಯಮಿತ ಗೋಳಿಸುವುದು ಆವಶ್ಯಕವಿದೆ, ಆಗ ನಮ್ಮ ಜೀವನ ಅತಿ ಸಂತುಲಿತ ಜೀವನ ಆಗಬಲ್ಲದು. ನಮ್ಮ ಪ್ರತಿಯೊಂದು ಕ್ರಿಯೆಯ ಬಗ್ಗೆ ನಮ್ಮ ಭಾವಗಳನ್ನು ತೂಕ ಮಾಡುತ್ತಿರಬೇಕು. ಎಲ್ಲಿಯಾದರೂ ನಮ್ಮ ಯಾವುದೇ ಕ್ರಿಯೆ ಅನಾವಶ್ಯಕವಾಗುತ್ತಿಲ್ಲ ಎಂಬ ಎಚ್ಚರಿಕೆ ಇರಬೇಕು. ನಮ್ಮ ಮನ–ವಚನ–ಕಾಯದ ಪ್ರವೃತ್ತಿ ಎಲ್ಲಿಯೋ ನಮ್ಮ ಮಾರ್ಗದಿಂದ ಚ್ಯುತನಾಗುತ್ತಾ ವಿಪರೀತ ಸ್ಥಾನದೆಡೆಗ ಕೊಂಡೊಯ್ಯುತಿಲ್ಲವಲ್ಲ ಯಾಕೆಂದರೆ ಇಂತಹ ಕ್ರಿಯೆಯನ್ನು ನಮ್ಮ ಜೀವನದಲ್ಲಿ ತಿಳಿದು ಮಾಡಲೇ ಬಾರದು. ಎಲ್ಲಿಯಾದರೂ ತಿಳಿಯದೇ ಸಹ ಇಂತಹ ಕ್ರಿಯೆ ಆಗದಿರಲಿ ಈ ಮಾತಿನ ಗಮನ ಪ್ರತಿಯೊಬ್ಬ ಜ್ಞಾನಿ ಆತ್ಮನಿಗೆ ಹೊಂದಿರಲೇಬೇಕು. ಮನವನ್ನು ವಶದಲ್ಲಿಡದಿದ್ದರೆ ಅದು ಮಂಗನ ಹಾಗೇ ಪಾಪದೆಡೆಗೆ ಓಡಿ ಹೋಗಿ ನಮ್ಮ ಆಧ್ಯಾತ್ಮಿಕ ಸಂಪತ್ತನ್ನು ನಾಶ ಮಾಡಿ ಬಿಡುತ್ತದೆ ಹಾಗೂ ವಚನ, ಮಾತುಗಳನ್ನು ತನ್ನ ವಶದಲ್ಲಿ ಇಟ್ಟುಕೊಳ್ಳದಿದ್ದರೆ ಅನಾವಶ್ಯಕ ಮಾತುಗಳಿಂದ ನಮ್ಮ ಗೌರವ ಕೊನೆಗೊಂಡು ನಮ್ಮ ಮಾತುಗಳ ಅನಾದರವಾಗತೊಡಗುತ್ತದೆ. ಇದೇ ರೀತಿ ನಮ್ಮ ಕಾಯವನ್ನು ಅನಾವಶ್ಯಕ ಕಾರ್ಯಗಳಿಂದ ಸಂರಕ್ಷಿಸಿಕೊಳ್ಳದಿದ್ದರೆ ನಮ್ಮ ಗಂಭೀರತೆ ನಷ್ಟವಾಗಿ ಶಾರೀರಕ ಶಕ್ತಿ ಕಳೆದು ಹೋಗುತ್ತದೆ ಹಾಗೂ ವ್ಯಕ್ತಿಯು ಧಾರ್ಮಿಕ ಕಾರ್ಯಗಳಲ್ಲಿ ಆಲಸ್ಯ

ಮಾಡತೊಡಗುತ್ತಾನೆ. ಸಂಪೂರ್ಣ ಜೀವನ ಮನ–ವಚನ–ಕಾಯಗಳ ಅಸಂಯಮದಲ್ಲಿ ಕಳೆದು ಹೋಗುತ್ತದೆ. ಪಂಚೇಂದ್ರಿಯ ವಿಷಯಗಳ ಪುಷ್ಟಿ ಮತ್ತು ಮನಸ್ಸನ್ನು ಸಂತೃಸುವುದರಲ್ಲಿಯೇ ಗೃಹಸ್ಥರ ಜೀವನ ಕಳೆದು ಹೋಗುತ್ತಿರುತ್ತದೆ. ಮನ–ವಚನ–ಕಾಯಗಳ ಪ್ರವೃತ್ತಿಯ ಮೇಲೆ ನಿಯಂತ್ರಣ ಮಾಡುವುದು ಇವುಗಳ ಮೇಲೆ ಕಡಿವಾಣ ಹಾಕುವುದೇ ಸಂಯಮ ಧರ್ಮದ ಸಾರವಾಗಿದೆ. ಈ ದಶಲಕ್ಷಣ ಪರ್ವ ಮತ್ತು ಅದರಲ್ಲಿಯೂ ಉತ್ತಮ ಸಂಯಮ ಧರ್ಮದ ಪಾವನ ದಿನ ಜೀವನವನ್ನು ಸಂಯಮಿತಗೊಳಿಸುವ ಪ್ರೇರಣೆ ನೀಡುತ್ತದೆ.

**'ಸಂಯಮ ಇತಿ ಸಂಯಮಾ':** ವಿಷಯ ಕಷಾಯ, ಇಂದ್ರಿಯ ಲಂಪಟತನದ ಶಮನವಾದರೆ ಅದನ್ನೇ ಸಂಯಮ ಧರ್ಮವೆಂದು ಹೇಳಲಾಗುತ್ತದೆ. ಧವಲಾ ಗ್ರಂಥದಲ್ಲಿ ಸಂಯಮದ ಪರಿಭಾಷೆಯನ್ನು ನೀಡುತ್ತಾ ಆಚಾರ್ಯರು ಹೀಗೆ ಹೇಳಿದ್ದಾರೆ–

**ಸಮ್ಯಕ್ ಯಮೋವಾ ಸಂಯಮಃ ।**

ಸಮ್ಯಕ್ ರೂಪದಿಂದ ಯಮ ಅರ್ಥಾತ್ ನಿಯಂತ್ರಣ, ಈ ನಿಯಂತ್ರಣವೇ ಸಂಯಮವಿದೆ. ಸಮ್ಯಕ್ ರೂಪದಿಂದ ನಿಯಂತ್ರಣವನ್ನು ಹೇಳಿದೆ. ನಿಯಂತ್ರಣ ಬಹಳ ಸ್ಥಾನದಲ್ಲಿ ಆಗುತ್ತದೆ. ಆದರೆ ಸಮೀಜೀನ ರೂಪದಿಂದ ಪ್ರತಿಯೊಂದು ಸ್ಥಾನದಲ್ಲಿ ಆಗುವುದಿಲ್ಲ. ನಾವು ಕರ್ಮಗಳ ಆಸ್ರವದಿಂದ ಉಳಿಯಬೇಕು ಮತ್ತು ನಮ್ಮ ವಿಭಾವ ಪರಿಣತಿಯನ್ನು ಬಿಟ್ಟು ನಮ್ಮ ಸ್ವಾಭಾವಿಕ ಪರಿಣತಿ ಇದೆಯೋ ಅದರ ಕಡೆಗೆ ಬರಬೇಕು. ವಿಭಾವವು ನಮ್ಮ ಸ್ವಭಾವವಲ್ಲ ಆದರೆ ವಿಭಾ ಪರಿಣತಿ ನಮ್ಮಲ್ಲಿ ಆಗುತ್ತಲಿದೆ. ಆದ್ದರಿಂದ ಹೇಳಿದ್ದಾರೆ. ನಾವು ಇಂತಹ ಪ್ರಯತ್ನದಲ್ಲಿ ಯಾವಾಗಲೂ ಸಿದ್ಧರಾಗಿರಬೇಕು ನಮ್ಮಲ್ಲಿರುವ ನಿಯಂತ್ರಣ ಸಂಯಮವಿದೆ.ಅದು ಸಮೀಜೀನ ಸಮ್ಯಕ ಯಾವಾಗ ಆಗುತ್ತದೆ? ಯಾವಾಗ ನಾವು ಲೌಕಿಕ ಬೇಡಿಕೆಗಳನ್ನು ಬಿಟ್ಟು ಸಮ್ಯಗ್ ದರ್ಶನ ಪೂರ್ವಕ ನಿಸ್ವಾರ್ಥ ಭಾವನೆಯಿಂದ ನಮ್ಮ ಪಂಚೇಂದ್ರಿಯಗಳನ್ನು ಹಾಗೂ ಮನಸ್ಸಿನ ಮೇಲೆ ನಿಯಂತ್ರಣ ಇಟ್ಟುಕೊಂಡಾಗ ಅದು ಸಮೀಚೀನ ನಿಯಂತ್ರಣವೆಂದು ಕರೆಯಲಾಗುತ್ತದೆ. ಸಮ್ಯಕ್ ರೂಪದಿಂದ ಆತ್ಮನ ಮೇಲೆ ನಿಯಂತ್ರಣ ಮಾಡುವುದು ಸಂಯಮವೆಂದು ಕರೆಯಲಾಗುತ್ತದೆ.

**'ಇಂದ್ರಿಯ ನಿರೋಧಃ ಸಂಯಮಃ'** – ಅರ್ಥಾತ್ ಇಂದ್ರಿಯಗಳನ್ನು ನಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದರ ಹೆಸರು ಸಂಯಮವಾಗಿದೆ. ಈ ಪರಿಭಾಷೆಯನ್ನೂ ಅಚಾರ್ಯರುಗಳು ಸಂಯಮಕ್ಕೆ ನೀಡಿದ್ದಾರೆ. ಆದರೆ **'ಸಮ್ಯಕ್ ಯಮೋ ವಾ ಸಂಯಮಃ'** ಎಂದೂ ಹೇಳಿದ್ದಾರೆ. ಸಮೀಚೀನ ರೂಪದಿಂದ ತನ್ನ ಗುರಿಯನ್ನು ಗಮನದಲ್ಲಿಟ್ಟುಕೊಂಡು ತನ್ನ ಸಮ್ಯಗ್ ದರ್ಶನವನ್ನು ಸುರಕ್ಷಿತವಾಗಿಟ್ಟುಕೊಂಡು ಸಂಸಾರದ ಬಯಕೆಯ ಭಾವನೆಗಳನ್ನು ಬಿಡುತ್ತಾ ಇರುವ ನಿಯಂತ್ರಣವನ್ನು ಸಂಯಮವೆಂದಿದ್ದಾರೆ. ಹಾಗೇ ನೋಡಿದರೆ ಸಂಯಮವಿಲ್ಲದೇ ನಾವು ಒಂದು ಕ್ಷಣವು ಇರಲಾರೆವು. ಸಂಸಾರದ ಪ್ರತಿಯೊಂದು ಕ್ಷೇತ್ರದಲ್ಲಿ ಸಂಯಮವಿದೆ ಆದರೆ ಆ ಸಂಯಮವು ಕೇವಲ ಲೌಕಿಕ ಸಂಯಮವಾಗಿದೆ ಪಾರಮಾರ್ಥಿಕವಲ್ಲ. ಬಹುಶಃ ನಾವು ನೋಡಿದರೆ ಗಾಡಿ ನಡೆಸುವವನು ಬಹಳ ಸಂಯಮಿತನಾಗಿರುತ್ತಾನೆ. ಆತನು ಬ್ರೇಕ್‌ನ್ನು ತನ್ನ ಕೈಯಲ್ಲಿ ಹೊಂದಿರುತ್ತಾನೆ. ಯಾವ ಭಾಗದಿಂದ ಹೋಗಬೇಕೊ ಬ್ರೇಕ್‌ನ್ನು ಅದೇ ಪ್ರಕಾರ ಒತ್ತುತ್ತಾನೆ. ಬ್ರೇಕ್ ಇದೇ ಎಂದರೆ ಸುರಕ್ಷತೆ ಇದೆ, ಇಲ್ಲವಾದಲ್ಲಿ ಅಪಘಾತವಾಗುವಲ್ಲಿ ತಡವಾಗುವುದಿಲ್ಲ. ಕಂಪ್ಯೂಟರ ನಡೆಸುವವನು ಸಹ ದೊಡ್ಡ ಸತರ್ಕದವನಾಗಿರುತ್ತಾನೆ. ಇಲ್ಲವಾದಲ್ಲಿ ಚಿಂತೆಯಿಂದ

ಚಿತೆಯಾಗುವುದರಲ್ಲಿ ತಡವಿಲ್ಲ ಇತ್ಯಾದಿ.ಹೀಗೆ ಪ್ರತಿಯೊಂದು ಕಾರ್ಯದಲ್ಲಿ ಸಂಯಮ ಇರುತ್ತದೆ. ಆದರೆ ಈ ಸಂಯಮ ಸಮ್ಯಕ್/ಸಮೀಚೀನ ನಿಯಂತ್ರಣವಲ್ಲ. ಇದು ಕೇವಲ ಸಂಸಾರದ ವೃದ್ಧಿ ಅಥವಾ ನಮ್ಮ ಜೀವನದಲ್ಲಿ ವಿಷಯಗಳ ಉಪಲಬ್ಧಿ ಎಂದು ಹೇಳಿ ಅಥವಾ ನಮ್ಮ ಸ್ವಾರ್ಥ ಭಾವನೆ ಎಂದು ಹೇಳಿ. ಈ ಎಲ್ಲ ಭಾವನೆಗಳಿಂದ ಮಾಡಲಾಗುತ್ತದೆ. ಇಂದ್ರಿಯ ವಿಷಯಗಳ ಉಪಯೋಗಕ್ಕಾಗಿ ಇರುವ ಸಂಯಮವು ಸಮ್ಯಕ್ ಸಂಯಮವಲ್ಲ. ಹಾಗೇ ನೋಡಿದಲ್ಲಿ. ಎಲ್ಲೆಡೆ ಸಂಯಮವಿದೆ– ಆ ಸಂಯಮದ ಸಮಯದಲ್ಲಿ ನಮ್ಮ ಗುರಿ ನಿರ್ಧಾರವಾದರೆ ಹಾಗೂ ನಮ್ಮ ಭಾವನೆಗಳು ಪ್ರಶಸ್ತವಾದರೆ ಅದೇ ಸಂಯಮವು ಸಮ್ಯಕ್ ಸಂಯಮವಾಗಿ ಬಿಡುತ್ತದೆ. ಸಮ್ಯಕ್ ಸಂಯಮ ಹೇಗೆ ರೂಪಗೊಳ್ಳುತ್ತದೆ? ಸಂಸಾರದ ಕ್ಷೇತ್ರದಲ್ಲಿ ಎಂತಹ ಕಾರ್ಯ ಮಾಡುತ್ತಿರುತ್ತೇವೆ ಹಾಗೇಯೇ ನನ್ನ ಯಾವ ಯಾವ ಕ್ರಿಯೆಗಳು ಆಗುತ್ತಲಿವೆ, ಅವುಗಳ ಯಾವ ಆಸವ ಆಗುತ್ತದೆ. ನಮ್ಮ ಮನಸ್ಸು ಪ್ರಶಸ್ತವೋ ಅಪ್ರಶಸ್ತವೋ? ಈ ಕ್ರಿಯೆ ಆವಶ್ಯಕ ವಿದೆಯೇ ಅಥವಾ ಅನಾವಶ್ಯಕವೇ ಎಂದು ವಿಚಾರ ಮಾಡಿದರೆ ಇಷ್ಟು ಚಿಂತನೆ ಸಾಕು ಎನಿಸತೊಡಗಿದರೆ ಮೆಲ್ಲ ಮೆಲ್ಲನೆ ಅದೇ ಪ್ರಯತ್ನ ಸಂಸಾರದ ಕಡೆಗೆ ಆಗುತ್ತಿತ್ತು ಅದು ಆತ್ಮನ ಕಡೆಗೆ ಆಗತೊಡಗುತ್ತದೆ ಧರ್ಮಭಾವನಾ ಶತಕದಲ್ಲಿ ಹೀಗೆ ಬರೆಲಾಗಿದೆ.–

**ಸಮ್ಯಕ್ತದಿ ಅಕ್ಷ ವಿಷಯ ನಿಯಂತ್ರಣವೇ ಸಂಯಮ**
**ಸಮೀತಿಗಳೈದು ಮೂರು ಗುಪ್ತಿಗಳ ಧಾರಣೆ ಮಾಡಿ ಶುಭ ಯಮದಿ**
**ಮುನಿಗಳು ಗೆದ್ದರು ಎಲ್ಲ ಕಷಾಯವ ಪಾಲಿಸಿದರು ನಿರ್ದೋಷ ರತ್ನತ್ರಯವ**
**ನಿತ್ಯವು ವ್ರತ ಶುದ್ಧಿಯು ಹೆಚ್ಚುವುದು, ಶ್ರೇಷ್ಠ ಗುಣಗಳ ಕೋಷ ಆಗುವುದು॥50॥**

ಆಚಾರ್ಯರುಗಳು ಆಗಮ ಗ್ರಂಥಗಳಲ್ಲಿ ಸಂಯಮ ಧರ್ಮದ ವಿಷಯದಲ್ಲಿ ಬರೆದಿದ್ದಾರೆ. ಪ್ರಾಕೃತ ಪಂಚ ಸಂಗ್ರಹ ಗ್ರಂಥದಲ್ಲಿ ಸಂಯಮದ ಲಕ್ಷಣಗಳನ್ನು ಸ್ಪಷ್ಟ ಪಡಿಸುತ್ತಾ ಹಿಗೆ ಹೇಳಲಾಗಿದೆ–

**ವದ ಸಮಿದಿ ಕಸಾಯಾಣಂ ದಂಡಾಣಮ ಇಂದಿಯಾಣಂ ಪಂಚಣ್ಣಂ।**
**ಧಾರಣ ಪಾಲಣ ಣಿಗ್ಗಹ ಚಾ ಜಓ ಸಂಜಮೋ ಭಣಿಓ॥127॥**

ಐದು ಮಹಾವ್ರತಗಳನ್ನು ಧಾರಣೆ ಮಾಡುವುದು, ಐದು ಸಮಿತಿಗಳ ಪಾಲನೆ ಮಾಡುವುದು, ನಾಲ್ಕು ಕಷಾಯಗಳನ್ನು ನಿಗ್ರಹಿಸುವುದು, ಮನ–ವಚನ–ಕಾಯ ರೂಪದ ಮೂರು ದಂಡಗಳ ತ್ಯಾಗ ಮಾಡುವುದು ಮತ್ತೆ ಐದು ಇಂದ್ರಿಯಗಳನ್ನು ಗೆಲ್ಲುವುದು ಸಂಯಮವೆಂದು ಹೇಳಲಾಗಿದೆ ಬಾರಸಾಣುವೆಕ್ಖಾ ಗ್ರಂಥದಲ್ಲಿ ಸಂಯಮ ಧರ್ಮಕ್ಕೆ ಸಂಬಂಧಿಸಿದಂತೆ ಆಚಾರ್ಯರು ಹೀಗೆ ಹೇಳಿದ್ದಾರೆ–

**ವದಸಮಿದಿ ಪಾಲಣಾಏ ದಂಡಚ್ಚಾಏಣ ಇಂದಿಯಜಏಣ।**
**ಪರಿಣಮ ಮಾಣಸ್ಸ ಪುಣೋಸಂಜಮ ಧಮ್ಮೋ ಹವೇ ಣಿಯಮಾ॥76॥**

ವ್ರತ ಹಾಗೂ ಸಮಿತಿಗಳ ಪಾಲನೆ, ಮನ–ವಚನ–ಕಾಯಗಳ ಪ್ರವೃತಿಯ ತ್ಯಾಗ ಇಂದ್ರಿಯ ಜಯ ಯಾರಿಗೆ ಆಗುತ್ತದೆಯೋ ಅವರಿಗೆ ನಿಯಮದಿಂದ ಸಂಯಮ ಧರ್ಮವಾಗುತ್ತದೆ. ಆಚಾರ್ಯ ಕುಂದ ಕುಂದಸ್ವಾಮಿಗಳು ಪ್ರವಚನಸಾರ ಗ್ರಂಥದ ಗಾಥೆಯಲ್ಲಿ ಸಂಯಮದ

ಲಕ್ಷಣವನ್ನು ಹೇಳುತ್ತಾ ಹೀಗೆ ಹೇಳಿದ್ದಾರೆ–

**ಪಂಚ ಸಮಿದೋ ತಿಗುತ್ತೊ, ಪಂಚೇಂದ್ರಿಯ ಸಂಬುಡೋ ಜಿದಕಸಾಓ।**
**ದಂಸಣ ಣಾಣ ಸಮಗ್ಗೊ ಸಮಣೋ ಸೋ ಸಂಜದೋ ಭಣಿದೋ ॥240॥**

ಪಂಚೇಂದ್ರಿಯಗಳ ಮೇಲೆ ನಿಯಂತ್ರಣ ಮಾಡಿ, ಇಂದ್ರಿಯ ಸಂಯಮವನ್ನು ಪಾಲನೆ ಮಾಡುವವರು, ಇಂದ್ರಿಯ ಸಂಯಮ ಅರ್ಥಾತ್ ಪಂಚೇಂದ್ರಿಯ ವಿಷಯಗಳಲ್ಲಿ ರಾಗ–ದ್ವೇಷ ಮಾಡದಿರುವವರು ಹಾಗೂ ಮನ–ವಚನ–ಕಾಯ ಮೂರು ಗುಪ್ತಿಗಳನ್ನು ಹೊಂದಿರುವವರು, ಮನವನ್ನು ವಿಷಯಗಳಲ್ಲಿ ಹೋಗಲು ಬಿಡುವುದಿಲ್ಲ. ಮಾತುಗಳಿಂದ ಯಾವುದೇ ಪಾಪದ ಮಾತುಗಳನ್ನು ಹೇಳುವುದಿಲ್ಲ ಹಾಗೂ ಶರೀರದಿಂದಲೂ ಸಹ ಯಾವುದೇ ಅಪ್ರಶಸ್ತ ಕ್ರಿಯೆಯನ್ನು ಮಾಡುವುದಿಲ್ಲ. ಅಥವಾ ಕ್ರಿಯೆಯೂ ಇಲ್ಲದಿರುವುದು, ಹೇಳದೇಯೂ ಇರುವುದು, ಹಾಗೂ ಚಿಂತನೆಯು ಕೇವಲ ಆತ್ಮನ ವಿಷಯದಲ್ಲಿ ಆತ ತೊಡಗಿದರೆ ಮೂರು ಗುಪ್ತಿಗಳ ಉತ್ಕೃಷ್ಟರೂಪದಿಂದ ಪಾಲನೆ ಎಂದು ತಿಳಿಯಿರಿ. ಪಂಚ ಸಮಿತಿಗಳು – ಈರ್ಯಾ, ಭಾಷಾ, ಏಷಣಾ, ಆದಾನ ನಿಕ್ಷೇಪಣ ಮತ್ತು ಪ್ರತಿಷ್ಠಾಪನ ಇವುಗಳ ಅವಲಂಬನದಿಂದ ನಮ್ಮ ಕ್ರಿಯಗಳನ್ನು ಮಾಡುವುದು ಸಮಿತಿಯಾಗಿದೆ. ಇದರಿಂದ ಇಲ್ಲಿಯೂ ಯಾವುದೆ ಹಿಂಸೆ ಆಗದಿರಲಿ, ಯಾವುದೇ ಪ್ರಾಣಿಗೆ ಕಷ್ಟವಾಗದಿರಲಿ ಈ ಪ್ರಕಾರದ ಭಾವಗಳಿಂದ ಕ್ರಿಯೆ ಮಾಡಬೇಕು. ಸಮಿತಿ ಪಾಲನೆಯಿಂದ ಏಕೇಂದ್ರಿಯದಿಂದ ಪಂಚೇಂದ್ರಿಯಗಳವರೆಗೆ ಜೀವಗಳ ಹಿಂಸೆ ನಿಂತು ಹೋಗುತ್ತದೆ. ಜೊತೆಯಲ್ಲಿ ಆ ಸಮಯದಲ್ಲಿ ನಮ್ಮ ಇಂದ್ರಿಯಗಳು ಸಹ ಎಚ್ಚರವಾಗಿರುತ್ತವೆ. ಆಮೆಯಂತೆ ನಮ್ಮ ಜೀವನ ಹಾಗೂ ಧರ್ಮವನ್ನು ಸುರಕ್ಷಿತವಾಗಿಡಲು ಆ ಆತ್ಮನು ಸದಾಕಾಲ ಎಚ್ಚರವಾಗಿರುತ್ತಾನೆ. ಆಮೆಗೆ ಸ್ವಲ್ಪ ಸಹ ತನ್ನ ಬಳಿ ಯಾವುದೇ ಬಾಧಕ ವಸ್ತು ಬರುತ್ತಲಿದೆ ಎಂದು ಅನಿಸಿದರೆ ಅದು ತನ್ನ ನಾಲ್ಕು ಕಾಲುಗಳು ಹಾಗೂ ಮುಖವನ್ನು ಹಿಂದೆ ಒಳಗಡೆ ಎಳೆದುಕೊಂಡು ಬಿಡುತ್ತದೆ ಅರ್ಥಾತ್ ಅವುಗಳನ್ನು ತನ್ನ ವಶದಲ್ಲಿ ಇಟ್ಟುಕೊಳ್ಳುತ್ತದೆ. ಸ್ವತಂತ್ರವಾಗಿರಲು ಬಿಡುವುದಿಲ್ಲ, ಅದೇ ಪ್ರಕಾರ ಸಂಯಮಿ/ಮುನಿ ಮಹಾರಾಜರು ತಮ್ಮ ಪಂಚೇಂದ್ರಿಯಗಳನ್ನು ಯಾವಾಗಲೂ ಬಹಳ ಗಮನದಲ್ಲಿಟ್ಟಿರುತ್ತಾರೆ. ಯಾಕೆಂದರೆ ಒಂದು ವೇಳೆ ಅವರು ಇಂದ್ರಿಯಗಳ ವಿಷಯಗಳಲ್ಲಿ ಹೋಗಿ ರಾಗ–ದ್ವೇಷ ಮಾಡಿದರೆ ಪಾಪಕರ್ಮಗಳ ಬಂಧದಿಂದ ಉಳಿಯುವುದಿಲ್ಲ ಆದ್ದರಿಂದ ಅವರು ಸಮಿತಿಗಳ ಗುಪ್ತಿಗಳ ಪ್ರಯೋಗ ಮಾಡುತ್ತಾ ಪಂಚೇಂದ್ರಿಯಗಳ ವಿಷಯದಲ್ಲಿ ರಾಗ–ದ್ವೇಷ ಮಾಡದೇ ಜೊತೆಯಲ್ಲಿ ಕಷಾಯಗಳನ್ನು ಸಹ ಗೆಲ್ಲುತ್ತಾರೆ.

ಆಚಾರ್ಯರುಗಳು–ಇಂದ್ರಿಯಗಳನ್ನು ಗೆಲ್ಲದೇ ಯಾವುದೇ ಕಷಾಯ ರೂಪದ ಅಗ್ನಿಯನ್ನು ಆರಿಸುವಲ್ಲಿ ಸಮರ್ಥರಾಗರು ಎಂದೂ ಸಹ ಹೇಳಿದ್ದಾರೆ. **'ಜಿದ ಕಸಾಓ'** ಅರ್ಥಾತ್ ಕಷಾಯಗಳಾದ ಕ್ರೋಧ, ಮಾನ, ಲೋಭ ರೂಪದಿಂದ ಜೀವನದಲ್ಲಿ ವಿವಿಧ ರೀತಿಗಳಿಂದ ಆಸ್ರವ ಮಾಡಿಸುತ್ತಾರೆ, ಯಾರ ಅವಸ್ಥೆ ಹೇಗಿದೆಯೋ ಹಾಗೇ ಆಸ್ರವ ಆಗುತ್ತಿರುತ್ತದೆ. ಆದರೆ ಈ ಕಷಾಯಗಳು ಇರುವವರೆಗೆ ಸಾಂಪ್ರಾದಾಯಿಕ ಆಸ್ರವ ಆಗುತ್ತದೆ. ಸಾಂಪ್ರಾದಾಯಿಕ ಆಸ್ರವದ ಕಾರಣ ಕರ್ಮವು ಬಂದು ನಿಲ್ಲುತ್ತದೆ ಹಾಗೂ ಸ್ವಲ್ಪ ಕಾಲದವರೆಗೆ ನಿಂತು ಅವು ಫಲ ನೀಡುತ್ತವೆ. ಆದ್ದರಿಂದ ಈ ಕಷಾಯಗಳ ಮೇಲೆ ವಿಜಯ ಸಾಧಿಸಬೇಕು. ಈ ದಶಲಕ್ಷಣ ಧರ್ಮಗಳ ಉತ್ಪತ್ತಿ ಕಷಾಯಗಳ ಶಮನವಾಗದೇ ಆಗುವುದಿಲ್ಲ ಈ ಕಾರಣದಿಂದಲೇ ನಾಲ್ಕೂ ಕಷಾಯಗಳು ಶಮನವಾದಾಗಲೇ ಮೊದಲು ಕ್ಷಮಾ

ಮಾರ್ದವ, ಆರ್ಜವ ಮತ್ತು ಶೌಚ ಈ ಧರ್ಮಗಳು ಆತ್ಮನಲ್ಲಿ ಪ್ರಕಟವಾಗುತ್ತವೆಂದು ಹೇಳಿದ್ದಾರೆ.

ಸಂಯಮ ಧರ್ಮದ ಲಕ್ಷಣವನ್ನು ಹೇಳುತ್ತಾ ಹೀಗೆ ಹೇಳಿದ್ದಾರೆ- **'ದಂಸಣಣಾಣ ಸಮಗ್ಗೋ ಸಮಣೋ'** ಅರ್ಥಾತ್ ದರ್ಶನ ಜ್ಞಾನವನ್ನು ಸಂಪೂರ್ಣ ರೂಪದಿಂದ ಧಾರಣೆ ಮಾಡುತ್ತದೆ, ಪಾಲನೆ ಮಾಡುತ್ತದೆ ಅಂತಹ ಶ್ರಮಣ ಈ ಸಂಯಮ ಧರ್ಮದಿಂದ ಕೂಡಿರುತ್ತಾರೆ. ಪಂಚೇಂದ್ರಿಯ ವಿಷಯಗಳನ್ನು ಬಿಟ್ಟ ಆತ್ಮನು ಪಂಚ ಸಮಿತಿಗಳ ಆಧಾರದಿಂದ ತಮ್ಮ ಕ್ರಿಯೆ ಮಾಡುವವರು, ಕಷಾಯಗಳನ್ನು ಗೆದ್ದು ಕೊಳ್ಳುತ್ತಾರೆ. ಮೂರು ಗುಪ್ತಿಗಳ ಧಾರಣೆ ಮಾಡುತ್ತಾರೆ ಹಾಗೂ ದರ್ಶನ-ಜ್ಞಾನಗಳೊಂದಿಗೆ ತಮ್ಮ ಆತ್ಮನನ್ನು ಪಾಪಗಳಿಂದ ತೊಳೆಯಲು ತೊಡಗಿದ್ದಾರೋ ಅಂತಹ ಆತ್ಮವು ಸಂಯಮ ಧರ್ಮವನ್ನು ಧಾರಣೆ ಅಥವಾ ಪಾಲನೆ ಮಾಡ ಬಲ್ಲದೆಂದು ಗಾಥೆಯಲ್ಲಿ ಹೇಳಲಾಗಿದೆ. **'ಶುದ್ದ-ಸ್ವಾತ್ಮೋಪಲಬ್ಧಿ ಸ್ಯಾತ್ ಸಂಯಮೋ ನಿಷ್ಕ್ರಿಯಸ್ಯ ಚ ನಿಷ್ಕ್ರಿಯ'** ಆತ್ಮನ ಸ್ವ-ಶುದ್ಧಾತ್ಮನ ಉಪಲಬ್ಧಿಯೇ ಸಂಯಮವೆಂದು ಕರೆಯಲಾಗುತ್ತಿದೆ.

**'ಸ'** ಎಂದರೆ ಸಮೀಚೀನ, **'ಯಮ'** ಎಂದರೆ ಜೀವನ ಪರ್ಯಂತಕ್ಕಾಗಿ ತೆಗೆದುಕೊಂಡ ವ್ರತ, ಯಥಾರ್ಥವಾಗಿರುವ ಸಮೀಚೀನ ವ್ರತಗಳನ್ನು ನಾವು ಸ್ವೀಕರಿಸಿದ್ದರೆ ಅವುಗಳಿಂದ ನಮ್ಮ ಜೀವನ ಪವಿತ್ರವಾಗಬಲ್ಲದು, ಶುದ್ಧವಾಗಬಲ್ಲದು, ಇಂತಹ ವ್ರತಗಳನ್ನು ಅಂಗೀಕಾರ ಮಾಡಿದ್ದರೆ ಅದನ್ನು ಸಂಯಮವೆಂದು ಕರೆಯಲ್ಪಡುತ್ತದೆ. ನಾಲ್ಕು ಕಷಾಯಗಳಾದ ಕ್ರೋಧ, ಮಾನ, ಮಾಯಾ ಮತ್ತು ಲೋಭ ಇವು ನಮ್ಮನ್ನು ಹೊರಗೆ ಒಯ್ಯುತ್ತವೆ. ಅವುಗಳಿಂದ ನಾವು ರಕ್ಷಿಸಿ ಕೊಳ್ಳುವುದೇ ಸಂಯಮದ ಅರ್ಥ. ಸಂಯಮದ ಇನ್ನೊಂದು ಅರ್ಥ ಸಂತುಲನ, ಕ್ರೋಧದಲ್ಲಿ ಸಂತುಲನವಿರುವುದಿಲ್ಲ. ನಾವು ಏನನ್ನು ಮಾಡಬಾರದೋ ಅದನ್ನು ಮಾಡುವಲ್ಲಿ ತೊಡಗಿ ಬಿಡುತ್ತೇವೆ. ಕ್ಷಮೆಯಲ್ಲಿ ಕ್ರೋಧದ ಸಂಯಮ ಮಾಡಲಾಗುತ್ತದೆ. ಮಾನದಲ್ಲಿಯೂ ಸಹ ಸಂತುಲನವನ್ನು ಕಳೆದುಕೊಳ್ಳುತ್ತೇವೆ ಹಾಗೂ ಮಾರ್ದವದಲ್ಲಿ ಕಠೋರ ಪರಿಣಾಮಗಳ ಸಂಯಮ ಮಾಡಲಾಗುತ್ತದೆ. ಮಾಯಾಚಾರ ಮಾಡುತ್ತಲೇ ಸಂತುಲನ ಕಳೆದುಕೊಳ್ಳುತ್ತೇವೆ. ಆದ್ದರಿಂದ ಆರ್ಜವದಲ್ಲಿ ಸಹ ಮಾಯಾಚಾರದ ಸಂಯಮವಿರುತ್ತದೆ, ಲೋಭದಲ್ಲಿಯೂ ಸಹ ಸಂತುಲನ ಬಿಟ್ಟು ಹೋಗುತ್ತದೆ, ಶುಚಿತ್ವ ಅರ್ಥಾತ್ ಶುದ್ಧತೆಯಲ್ಲಿ ಸಂಯಮ ಮಾಡಲಾಗುತ್ತದೆ. ಸತ್ಯದಲ್ಲಿ ಮಿಥ್ಯಾ ವಚನಗಳ ನಿಯಂತ್ರಣದ ಅವಶ್ಯಕತೆ ಇದೆ. ಈ ಪ್ರಕಾರ ಸಂಯಮದ ಅರ್ಥವೆಂದರೆ, ಎಚ್ಚರಿಕೆ, ಸಂತುಲಿತನಾಗುವುದು. ನನ್ನಲ್ಲಿಯೇ ನಿಲ್ಲುವುದು, ಮನಸ್ಸಿನ ಏಕಾಗ್ರತೆ ನಿಯಂತ್ರಣ ಹೊಂದುವುದು, ಸಂಯಮದಲ್ಲಿ ಜೀವಿಸುವ ಕಲೆಯನ್ನು ಹೊಂದುವುದು ಅವಶ್ಯಕವಿದೆ. ನಾವು ಇಂದ್ರಿಯಗಳ ಅಧೀನವಿರಬಾರದು ಹಾಗೂ ಇಂದ್ರಿಯಗಳು ನಾಶವಾದರೂ ಸರಿ ವಿಷಯಗಳಿಂದ ರಕ್ಷಿಸಿಕೊಳ್ಳಬೇಕು, ತ್ಯಾಗದಲ್ಲಿ ಪ್ರವೇಶಿಸುವುದೇ ಸಂಯಮವಿದೆ.

ಆಚಾರ್ಯರು ಸಾಮಾನ್ಯವಾಗಿ ಸಂಯಮದ ಎರಡು ಭೇದಗಳನ್ನು-ಇಂದ್ರಿಯ ಸಂಯಮ, ಪ್ರಾಣಿಸಂಯಮ ಹೇಳಿದ್ದಾರೆ. ಐದು ಇಂದ್ರಿಯಗಳ ವಿಷಯಗಳಲ್ಲಿ ಮನಸ್ಸು ಹೋಗದಂತಿರುವುದು ಇಂದ್ರಿಯ ಸಂಯಮವಾಗಿದೆ. ನಮ್ಮ ಸ್ಪರ್ಶನ, ರಸನಾ, ಘ್ರಾಣ, ಚಕ್ಷು ಮತ್ತು ಶ್ರೋತ ಇಂದ್ರಿಯಗಳ ವಿಷಯವು ಕೋಮಲ, ಥಂಡಿ, ಬಿಸಿ ಇತ್ಯಾದಿ, ಸ್ಪರ್ಶಗಳಲ್ಲಿ, ಹುಳಿ-ಸಿಹಿ, ಇತ್ಯಾದಿ, ರಸಗಳಲ್ಲಿ ಸುಗಂಧ ಇತ್ಯಾದಿ ಮನೋಹರ ದೃಶ್ಯಗಳಿಂದ ಹಾಗೂ ಮಧುರ ಸಂಗೀತದ ನಿಮಿತ್ತದಿಂದ ಮನಸ್ಸನ್ನು ರಾಗ-ದ್ವೇಷಗಳಿಂದ ರಕ್ಷಿಸಿಕೊಳ್ಳುವ ರೂಪವು ಪುರುಷಾರ್ಥವಿದೆ, ಅದನ್ನು ಇಂದ್ರಿಯ

ಸಂಯಮವೆನ್ನುತ್ತಾರೆ. ಅರ್ಥಾತ್ ಪಂಚೇಂದ್ರಿಯದ ವಿಷಯಗಳಿಂದ ವಿರತ ಹಾಗೂ ಮನದ ಆಕಾಂಕ್ಷೆಗಳ ಮೇಲೆ ನಿಯಂತ್ರಣ ಹೊಂದುವುದೇ ಇಂದ್ರಿಯ ಸಂಯಮವಿದೆ. ಪ್ರಾಣಿ ಸಂಯಮದ ಅರ್ಥವೆಂದರೆ–ಜೊಸಾತ್ಮಕ ಪ್ರವೃತಿಯಿಂದ ದೂರವಿರುವುದು ಈ ಸಂಯಮದಲ್ಲಿ ಪ್ರಾಣಿಗಳ ರಕ್ಷೆ ಮುಖ್ಯವಾಗಿದೆ. ಪೃಥ್ವಿ, ಅಗ್ನಿ ಜಲ, ವಾಯು ಮತ್ತು ವನಸ್ಪತಿ ಕಾಯಕ ಏಕೇಂದ್ರಿಯ ಹಾಗೂ ದ್ವೀಂದ್ರಿಯ ಲಟ–ಕೆಚುಳ ಮುಂತಾದ, ತ್ರಿಂದ್ರಿಯ ಇರುವೆ, ತಿಗಣೆ ಇತ್ಯಾದಿ, ಚತುರೇಂದ್ರಿಯ ನೊಣ, ಭ್ರಮರ ಇತ್ಯಾದಿ ಹಾಗೂ ಪಂಚೇಂದ್ರಿಯ ತಿರ್ಯಂಚ ಮತ್ತು ಮನುಷ್ಯ ಮುಂತಾದ ಜೀವಗಳ ಘಾತದಿಂದ ದೂರವಿರುವುದು ಪ್ರಾಣಿ ಸಂಯಮವೆಂದು ಕರೆಯಲ್ಪಡುತ್ತದೆ. ಹೀಗೆ ತ್ರಸ ಮತ್ತು ಪಂಚಸ್ಥಾವರ ಹೀಗೆ ಆರು ಜೀವ ನಿಕಾಯಗಳ ರಕ್ಷಣೆ ಮಾಡುವುದು ಪ್ರಾಣಿ ಸಂಯಮವಾಗಿದೆ.

ಆಗಮ ಗ್ರಂಥಗಳಲ್ಲಿ ಸಕಲ ಸಂಯಮ ಮತ್ತು ದೇಶ ಸಂಯಮ ಎಂಬ ಎರಡು ಭೇಧಗಳನ್ನು ಸಂಯಮದ ಭೇದಗಳೆಂದು ಹೇಳಲಾಗಿದೆ. ಗೃಹತ್ಯಾಗಿ ಮುನಿ, ಅಹಿಂಸೆ, ಸತ್ಯ, ಅಚೌರ್ಯ ಮತ್ತು ಅಪರಿಗಹ ಮಹಾವ್ರತಗಳನ್ನು ಧಾರಣೆ ಮಾಡುತ್ತಾರೆ ಹಾಗು ಹಣ, ದುಡ್ಡು ಗಾಡಿ, ಮೋಟರು, ವ್ಯಾಪಾರ ಇತ್ಯಾದಿ ಕಾರ್ಯಗಳಿಂದ ಬಹಳ ದೂರವಿರುತ್ತಾರೆ ಅವರ ಜೀವನದಲ್ಲಿ ಸಕಲ ಸಂಯಮವಾಗುತ್ತದೆ. ಅಂದರೆ ನಿರಾಗಾರ ಪರಿಗ್ರಹದಿಂದ ರಹಿತ ಮುನಿಯ ಸಕಲ ಸಂಯಮ ಆಗುತ್ತದೆ. ಗೃಹನಿವಾಸಿ ಗೃಹಸ್ಥರ ಅಹಿಂಸಾದಿ ವ್ರತಗಳ ಅಣುರೂಪದಿಂದ ಪಾಲನೆ ಮಾಡುತ್ತಾ ನ್ಯಾಯ, ನೀತಿಯಿಂದ ತಮ್ಮ ಆಜೀವಿಕೆಯನ್ನು ನಡೆಸುವುದು ದೇಶ ಸಂಯಮವೆಂದು ಕರೆಯಲ್ಪಡುತ್ತದೆ. ಅಂದರೆ ಪರಿಗ್ರಹ ಸಹಿತ ಶ್ರಾವಕರ ದೇಶ ಸಂಯಮವಾಗುತ್ತದೆ. ಧರ್ಮ ಭಾವನಾ ಶತಕದಲ್ಲಿ ಇಂದ್ರಿಯ ಸಂಯಮ ಪ್ರಾಣಿ ಸಂಯಮದ ವಿಷಯದಲ್ಲಿ ಹೀಗೆ ಬರೆದಿದ್ದಾರೆ.

**ಇಂದ್ರಿಯ–ಪ್ರಾಣಿ ಸಂಯಮ, ಮುನಿಜನ ಪಾಲನೆ ಮಾಡಿದಾಗ**
**ಮನ–ವಾನರನನ್ನು ವಶದಲಿ ಹೊಂದಿ ಎಲ್ಲ ಹಿಂಸೆಗಳಿಂದ ಅವರುಳಿಯುವರು॥52॥**

ನಿಶ್ಚಯ ಹಾಗೂ ವ್ಯವಹಾರ ಸಂಯಮದ ವಿಷಯದಲ್ಲಿ ಹೀಗೆ ಬರೆದಿದ್ದಾರೆ–

**ನಿಶ್ಚಯ ಸಂಯಮ ಪಾಲನೆಯಲಿ, ಮುನಿ ಕ್ರಿಯಾರಹಿತ ಧ್ಯಾನದಲಿ ಇರುವರು।**
**ವ್ಯವಹಾರ ಸಂಯಮಿಯಾದಾಗ ಸಾಧು, ಐದು ಸಮಿತಿ ಧರಿಸಿದ ಪಾಪ ವಿರತರು॥**
**ಸಂಯಮ ಪಾಲಿನ ಉಪೇಕ್ಷೆ ಮಾಡಲು, ಇರರು ಉಪಕರಣಗಳೊಂದಿಗೆ॥52॥**

ನಿಶ್ಚಯ ಸಂಯಮವು ಯಥಾಖ್ಯಾತ ಸಂಯಮವಾಗಿದೆ. ಯಥಾ+ಅಖ್ಯಾತ=ಯಥಾಖ್ಯಾತ ಹೇಗೆ ಹೇಳಿದೆಯೋ ಆತ್ಮನ ಸ್ವರೂಪ ಅದನ್ನು ಪಡೆಯುವುದು. ಯಥಾಖ್ಯಾತ ಸಂಯಮವು ಹತ್ತನೇ ಗುಣಸ್ಥಾನದ ನಂತರ ಪ್ರಾಪ್ತವಾಗುತ್ತದೆ. ಪಂಚ ವ್ರತಗಳ ಪಾಲನೆ ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಈ ವ್ರತಗಳ ಪಾಲನೆಯನ್ನು ಮಾಡುವುದು ವ್ಯವಹಾರ ಸಂಯಮವಾಗಿದೆ. ಕೆಲವರು ಸಕಲ ರೂಪದಿಂದ ಇವುಗಳ ಪಾಲನೆ ಮಾಡಿದರೆ ಅದು ಸಕಲ ಸಂಯಮವಾಗುತ್ತದೆ ಮತ್ತೆ ಕೆಲವರು ವಿಕಲರೂಪದಿಂದ ಪಾಲನೆ ಮಾಡಿದರೆ ದೇಶ ಸಂಯಮವಾಗುತ್ತದೆ. ನಮ್ಮನ್ನು ಯಥಾಖ್ಯಾತ ಸಂಯಮದ ಕಡೆಗೆ ಒಯ್ಯುವ ಸಂಯಮವು ಉತ್ಕೃಷ್ಟ ಸಂಯಮವಾಗಿದೆ. ಅಪಹೃತ ಸಂಯಮ ಮತ್ತು ಉಪೇಕ್ಷಾ ಸಂಯಮ ಈ ಎರಡು ಪ್ರಕಾರಗಳ ಸಂಯಮವನ್ನು ಆಗಮ ಗ್ರಂಥಗಳಲ್ಲಿ ಹೇಳಲಾಗಿದೆ. ಅಪಹೃತ ಸಂಯಮವು ಪಿಂಛಿ–

ಕಮಂಡಲು, ಶಾಸ್ತ್ರಸಹಿತವಾಗಿ ಸಮಿತಿಗಳಲ್ಲಿ ಲೀನರಾದ ಮುನಿ ಮಹಾರಾಜರ ಜೀವನದಲ್ಲಿ ಆಗುತ್ತದೆ. ಅವರ ಜ್ಞಾನ ಮತ್ತು ಚಾರಿತ್ರ ಕರ್ಣಧಾರವಿದೆ. ಅಂತಹ ಸಾಧುಗಳದು ಉತ್ಕೃಷ್ಟ ಅಪಹೃತ ಸಂಯಮವಾಗುತ್ತದೆ. ಉತ್ಕೃಷ್ಟ ಅಪಹೃತ ಸಂಯಮ ಹಾಗೂ ಉಪೇಕ್ಷಾ ಸಂಯಮ ಶುದ್ಧೋಪಯೋಗಿ ಮುನಿಗಳದೇ ಆಗುತ್ತದೆ.

ದೇಶ ಮತ್ತು ಕಾಲದ ವಿಧಾನವನ್ನು ತಿಳಿಯುವ, ಸ್ವಾಭಾವಿಕ ರೂಪದಿಂದ ಶರೀರದಿಂದ ವಿರಕ್ತ ಮತ್ತು ಮೂರು ಗುಪ್ತಿಗಳನ್ನು ಹೊಂದಿರುವ ಮುನಿಯ ರಾಗ–ದ್ವೇಷ ರೂಪ ಚಿತ್ತ ವೃತ್ತಿ ಇಲ್ಲದಿರುವುದು ಉಪೇಕ್ಷಾ ಸಂಯಮವಾಗಿದೆ. ಉತ್ತಮ ಸಂಹನನದಿಂದ ಕೂಡಿದ ಮೂರು ಗುಪ್ತಿಗಳ ಧಾರಕ ಜ್ಞಾನಿ ಜೀವದ ರಾಗ–ದ್ವೇಷ, ಇತ್ಯಾದಿಗಳ ಅಭಾವವು ಉಪೇಕ್ಷಾ ಸಂಯಮವೆನ್ನಲಾಗಿದೆ. ರಾಗ–ದ್ವೇಷ ಸಹ ಉಪಕರಣಗಳ ತ್ಯಾಗ ಅಥವಾ ಅವುಗಳಿಂದ ದೂರವಾಗುವುದು ಹಾಗೂ ಮೂರು ಗುಪ್ತಿಗಳಲ್ಲಿ ಲೀನತೆ, ಎಷ್ಟೇ ಉಪಸರ್ಗಗಳಾದರೂ ಏನಾದರೂ ಸಮತಾಭಾವದಿಂದ ಎಲ್ಲವನ್ನು ಸಹಿಸಿ ಶರೀರದ ಮೇಲು ಸಹ ನಿಸ್ಪೃಹಿ ಯಾಗುವ ಸಂಯಮದ ಹೆಸರು ಉಪೇಕ್ಷಾ ಸಂಯಮವಿದೆ. ಇಂತಹ ಉಪೇಕ್ಷಾ ಸಂಯಮವನ್ನು ಪಾಲನೆ ಮಾಡುವ ಜೀವಗಳು ವಿರಳವಾಗಿದ್ದಾರೆ. ಇದು ಮುನಿಗಳ ಧ್ಯಾನ ಅವಸ್ಥೆಯಾಗಿದೆ ಹಾಗೂ ಈ ಧ್ಯಾನ ಅವಸ್ಥೆಯಲ್ಲಿ ಈ ಉಪಕರಣ ಶರೀರ ಇತ್ಯಾದಿ ಈ ಎಲ್ಲ ವಿಷಯಗಳನ್ನು ಮರೆಯಲಾಗುತ್ತದೆ. ಕೇವಲ ಸಮತಾಭಾವ ನಮ್ಮ ಜೀವನದಲ್ಲಿ ನಮ್ಮ ಆತ್ಮನಲ್ಲಿ ಇರುತ್ತದೆ. ಈ ಸಮತಾಭವವು ಒಂದು ಪ್ರಕಾರದ ಅವಸ್ಥೆಯನ್ನು ಉತ್ಪನ್ನ ಮಾಡುತ್ತದೆ. ಅದರಲ್ಲಿ ನಮಗೆ ಎಲ್ಲ ರೀತಿಯಲ್ಲಿ ಆಗುವ ಆಸ್ರವವನ್ನು ತಡೆಹಿಡಿಯುತ್ತದೆ. ಅಪಹೃತ ಸಂಯಮವನ್ನು ಸರಾಗ ಸಂಯಮ ಮತ್ತು ಉಪೇಕ್ಷಾ ಸಂಯಮವನ್ನು ವೀತರಾಗ ಸಂಯಮವೆಂದು ಸಹ ಹೇಳುತ್ತಾರೆ. ಈ ಪಂಚಮ ಕಾಲದಲ್ಲಿ ದೇಶ ಸಂಯಮ ಮತ್ತು ಸಕಲ ಸಂಯಮ ನಮ್ಮ ಜೀವನದಲ್ಲಿ ದೊಡ್ಡ ಉಪಕಾರಿಗಳಾಗಿವೆ ಹಾಗೂ ನಮ್ಮ ಆತ್ಮನ ಮೇಲೆ ನಮಗಿರುವ ಅಧಿಕಾರವನ್ನು ಕೊಡಿಸುತ್ತವೆ ಎಂಬುದನ್ನು ನಾವು ಕಾಣಬಹುದಾಗಿದೆ. ಕೆಲವರು ತಮ್ಮ ಇಂದ್ರಿಯಗಳ ವಶರಾಗಿ ಇಂದ್ರಿಯಗಳ ಇಚ್ಛಾಪೂರ್ತಿಗಾಗಿ ಎಲ್ಲವನ್ನು ಮಾಡುತ್ತಿರುತ್ತಾರೆ. ನಮಗೆ ದೊರೆತಿರುವ ಅಧಿಕಾರದ ಲಾಭವನ್ನು ನಾವು ಅನುಭವಿಸಲಾರೆವು.

ನಮ್ಮ ಆತ್ಮನು ಅನಂತ ಶಕ್ತಿಯಿಂದ ಕೂಡಿದೆ ಆದರೆ ನಾವು ಆ ಶಕ್ತಿಯನ್ನು ಮುಚ್ಚಿಬಿಟ್ಟಿದ್ದೇವೆ. ಒಂದು ವೇಳೆ ಪುರುಷಾರ್ಥ ಮಾಡಿದರೆ ಆ ಶಕ್ತಿ ಪ್ರಕಟವಾಗಬಹುದು ಹಾಗೂ ಆ ಶಕ್ತಿಯ ಮಾಧ್ಯಮದಿಂದ ನಾವು ಅನಂತ ಕಾಲದಿಂದ ಗಳಿಸಿದ ಕರ್ಮಗಳನ್ನು ಸಮಾಪ್ತಗೊಳಿಸಬಹುದು. ಆ ಕರ್ಮಗಳಿಂದ ವಿರಾಮ ಪಡೆಯುತ್ತಾ ಮುಕ್ತಿಯ ಲಾಭವನ್ನು ಪಡೆಯಬಹುದಾಗಿದೆ. ಪಂಚಮ ಕಾಲದಲ್ಲಿ ಸಾಕ್ಷಾತ ಮೋಕ್ಷದ ಅವಶ್ಯಕತೆ ಇಲ್ಲ ಆದರೆ ಪರಂಪರೆಯಿಂದ ಮೋಕ್ಷ ಇಂದಿಗೂ ಇದೆ. ಕರ್ಮಗಳಿಂದ ಬಿಡುಗಡೆ ಪಡೆಯುವುದೇ ಮೋಕ್ಷದ ಅರ್ಥ. ಅದ್ದರಿಂದ ನಾವು ಇಂದು ಸಹ ಬಹಳಷ್ಟು ಕರ್ಮಗಳಿಂದ ಬಿಡುಗಡೆ ಹೊಂದಿ ಮುಂದಿನ ಜೀವನದಲ್ಲಿ; ಬಹಳ ಅಲ್ಪ ಸಮಯದಲ್ಲಿ ಹೇಗೆ ಮಲ್ಲಿನಾಥ ತೀರ್ಥಂಕರರು ಕೇವಲ 6 ದಿನಗಳ ಧ್ಯಾನದಿಂದ ಕೇವಲ ಜ್ಞಾನ ಪಡೆದಂತೆ ನಾವು ಸಹ ಪಡೆಯಬಹುದಾಗಿದೆ. ಅವರು ಆ ಸಮಯದಲ್ಲಿಯೇ ಸಮಸ್ತ ಕರ್ಮಗಳನ್ನು ನಾಶ ಮಡಿಕೊಂಡಿದ್ದರೆಂದಲ್ಲ ಅದು ಅವರ ಅನೇಕ ಜನ್ಮಗಳ ಸಾಧನೆಯಾಗಿದ್ದಿತು. ಭಗವಾನ ಆದಿನಾಥರಿಗೆ ಒಂದು ಸಾವಿರ ವರ್ಷಗಳು ತಗುಲಿದ್ದವು ಭಗವಾನ ಮಹಾವೀರ ಸ್ವಾಮಿಗಳಿಗೆ 12 ವರ್ಷಗಳು ತಗಲಿದ್ದವು. ನೋಡಿ ಅದೇ ಮಲ್ಲಿನಾಥರಿಗೆ ಕೇವಲ ಆರು ದಿನಗಳು

ಸಾಕಾದವು, ಸಹೋದರರೇ ಯೋಚಿಸಿ, ಪಂಚಮ ಕಾಲದಲ್ಲಿ ನಮಗಾಗಿ ಜ್ಞಾನ ದೊರೆತಿದೆ. ಶರೀರವಿದೆ, ನಿರೋಗತೆ ದೊರಕಿದೆ ಬುದ್ಧಿ ದೊರೆತಿದೆ, ದೇವ, ಶಾಸ್ತ್ರ ಗುರು ನಮ್ಮ ಎದುರಿಗೆ ಇದ್ದಾರೆ ಸಾಕು। ನಮಗೆ ನಮ್ಮ ಅಂತರಂಗದ ಶಕ್ತಿಯನ್ನು ಪ್ರಕಟಿಸ ಬೇಕಾಗಿದೆ. ತಾವೆಲ್ಲರೂ ಪ್ರತಿ ಸಮಯ ಸಂಯಮಧಾರಣೆ ಮಾಡುತ್ತಿರಾ. ಆದರೆ ಆ ಸಂಯಮ ಕೇವಲ ಸಂಸಾರದಲ್ಲಿಯೇ ಉಪಯೋಗಿಯಾಗಿರುತ್ತದೆ. ತಿನ್ನುವ-ಕುಡಿಯುವ, ಏಳುವ, ಕುಳಿತುಕೊಳ್ಳುವ, ಅಡ್ಡಾಡುವ ಇತ್ಯಾದಿಗಳಲ್ಲಿ ಪ್ರತಿ ಸಮಯ ಸಂಯಮದ ಪಾಲನೆ ಮಾಡುತ್ತೇವೆ. ಊಟದಲ್ಲಿ ಸಂಯಮ ಎಷ್ಟು ಅವಶ್ಯಕತೆ ಇದೆ ಅಷ್ಟೇ ಸೇವಿಸುತ್ತೇವೆ. ಇಲ್ಲವಾದಲ್ಲಿ ಹೆಚ್ಚು ಸೇವಿಸಿದರೆ ರೋಗಗ್ರಸ್ತರಾಗುತ್ತೇವೆ. ಏಳುವ ಕುಳಿತುಕೊಳ್ಳುವುದರಲ್ಲಿ ಸಂಯಮವಿದೆ ಇಲ್ಲವಾದಲ್ಲಿ ಜಾರಿ ಬಿದ್ದು ಬಿಡುತ್ತೇವೆ. ಎಲ್ಲ ಸ್ಥಳಗಳಲ್ಲಿ ಎಚ್ಚರಿಕೆ ಇದೆ. ಇದೇ ವಿಷಯಗಳ ಬಗ್ಗೆ ಧರ್ಮ ಭಾವನಾ ಶತಕದಲ್ಲಿ ಹೇಗೆ ಬರೆದಿದಾರೆ-

**ತಿನ್ನುತ, ಕುಡಿಯುತ, ಏಳುತ-ಕೂರುತ, ಹೇಳುತ ನಡೆಯುತ ಇವೆಲ್ಲವುಗಳಲಿ**
**ಇಡನು ಅಸಂಯಮದ ಜ್ಞಾನಿ ಇರುವನು ಜಾಗೃತ ಇವೆಲ್ಲವುಗಳಲಿ**
**ಮನದಲಿ ಇರದು ಚಿಂತನೆ ವಿಷಯದ, ಅವ ಆಡುವುದಿಲ್ಲ ಪಾಪ ವಚನವ**
**ತನದಿ ಮಾಡುವ ಸೀಮಿತ ಪ್ರವೃತ್ತಿ ಆಡಿದೆ ಇದುವೇ ಜಿನವರ ವಚನ॥55॥**

ಎಲ್ಲ ಸ್ಥಾನಗಳಲ್ಲಿ ಜಾಗೃತನಾಗಿರುತ್ತಾನೆ. ಸಾಕು। ಒಂದು ಸ್ಥಾನದಲ್ಲಿ ಮತ್ತೆ ಜಾಗೃತನಾದರೆ- ಆತ್ಮನಲ್ಲಿ ಎಷ್ಟೋ ಕರ್ಮಗಳ ಬಂಧವಾಗುವುದಿಲ್ಲ, ಯಾವ ಯಾವ ಕಾರಣಗಳಿಂದ ಬಂಧವಾಗುತ್ತದೆ? ನಮಗೆ ಯಾರಿಂದ ರಕ್ಷಿಸಿ ಕೊಳ್ಳಬೇಕಾಗಿದೆ? ಇಷ್ಟು ಸಂಯಮ ಬಂದರೆ ಸಾಕು, ಸಂಸಾರದಿಂದ ಮುಕ್ತರಾಗುವಲ್ಲಿ ತಡವಾಗುವುದಿಲ್ಲ. ಈ ಪ್ರಯತ್ನವನ್ನು ನಾವು ಮಾಡಬೇಕಾಗಿದೆ. ಮುಖ್ಯವಾಗಿ ನೋಡುವುದಾದರೆ ಮನ, ವಚನ ಮತ್ತು ಕಾಯ ಈ ಮೂರರಲ್ಲಿ ನಿಯಂತ್ರಿಸಬೇಕಾಗಿದೆ. ಮನಸ್ಸಿನ ಸಂಯಮ, ವಚನದ ಸಂಯಮ ಹಾಗೂ ಕಾಯದ ಸಂಯಮ ಅವಶ್ಯಕವಿದೆ. ಯಾವುದೇ ಸತ್ಕಾರ್ಯ ಮೂರು ಯೋಗಗಳನ್ನು ನಿಯಂತ್ರಿಸದ ವಿನಹ ಆಗುವುದಿಲ್ಲ. ತ್ರಿಯೋಗಗಳ ಮೇಲೆಯೇ ಕಾರ್ಯದ ಸುಚಾರುತೆ ಹಾಗೂ ಪೂರ್ಣತೆ ಅವಲಂಬಿಸಿದೆ ಹಾಗೂ ತ್ರಿಯೋಗದ ಯಾವುದೇ ಪವಿತ್ರ ಗುರಿಯ ಮೇಲೆ ಏಕೀಭಾವವೇ ಸಂಯಮವಾಗಿದೆ. ನಮ್ಮ ಮನಸ್ಸು ಬಹಳ ಸ್ವಚ್ಛಂದವಾಗಿದೆ, ಎಲ್ಲೆಂದರೆ ಅಲ್ಲಿಗೆ ಓಡುತ್ತದೆ. ನಾವು ಅದನ್ನು ತಡೆಗಟ್ಟುವುದೂ ಇಲ್ಲ, ತಡೆ ಹಿಡಿಯದಿದ್ದರಿಂದಲೇ ಅದು ಎಲ್ಲೆಂದರಲ್ಲಿಗೆ ಓಡುತ್ತದೆ. ಒಂದು ನಿಮಿಷವೇನು ಒಂದು ಸೆಕೆಂಡಿನಲ್ಲಿ ಎಲ್ಲಿಂದ ಎಲ್ಲಿಗೋ ಹೋಗುತ್ತದೆ. ಒಂದೇ ಸೆಕೆಂಡಿನಲ್ಲಿ ಅಮೇರಿಕಾ, ಇಂಗ್ಲೆಂಡ್ ಏನು ಅದು ಸಂಪೂರ್ಣ ವಿಶ್ವದ ಯಾತ್ರೆ ಮಾಡುತ್ತದೆ. ಮನಸ್ಸನ್ನು ನಿಯಂತ್ರಿಸುವುದು ಬಹಳ ಕಷ್ಟವಿದೆ. ಬಹಳ ಬೇಗನೇ ಓಡುತ್ತದೆ. ಆದ್ದರಿಂದ ಜನರಿಗೆ ಧ್ಯಾನ ಮಾಡಲು ಬಹಳ ಕಠಿಣವಾಗುತ್ತದೆ. ಜನರು-ಮಹಾರಾಜರೇ ಮುನಿಗಳ ಹಾಗೇ ಧ್ಯಾನ ಮಾಡುವ ಇಚ್ಛೆ ಬಹಳ ಇದೆ. ಧ್ಯಾನಕ್ಕಾಗಿ ಮುನಿಗಳ ಹಾಗೇ ನಾವು ಕುಳಿತುಕೊಳ್ಳುತ್ತೇವೆ. ಆಸನವನ್ನು ಹಾಕುತ್ತವೆ, ಕೈಮೇಲೆ ಕೈಯಿಟ್ಟು, ಆದರೆ ಮನಸ್ಸನ್ನು ಒಂದು ಸ್ಥಾನದಲ್ಲಿ ಕುಳ್ಳಿರಸಲು ಆಗುವುದಿಲ್ಲ. ಮನಸ್ಸಂತು ಬಹಳ ದೂರ ಓಡಿ ಹೋಗುತ್ತದೆ ಎಂದು ಹೇಳುತ್ತಾರೆ. ನಾವು ಅವರಿಗೆ-ಸಹೋದರರೇ ಹೀಗಿದೆ, ಮುನಿಗಳ ಹಾಗೇ ಧ್ಯಾನ ಮಾಡಲು ಬಹಳ ಪ್ರಯತ್ನ ಪಡಬೇಕಾಗುತ್ತದೆ. ಬಹಳ ಪುರುಷಾರ್ಥದ ಅವಶ್ಯಕತೆ ಇದೆ. ಕೇವಲ ಕುಳಿತು ಕೊಳ್ಳುವುದರಿಂದ ಏನೂ ಆಗುವುದಿಲ್ಲ. ಯಾವ ಹಂತದ ವರೆಗೆ ನಿರ್ಗ್ರಂಥ

ಮುನಿಗಳು ತಲುಪಿರುತ್ತಾರೆ ಅಲ್ಲಿಯವರೆಗೆ ಬರಬೇಕಾಗುತ್ತದೆ ಅವರು ಹೇಗೆ ತ್ಯಾಗ ಮಾಡಿದ್ದಾರೆ. ಹಾಗೇ ತ್ಯಾಗ ಮಾಡಬೇಕಾಗುತ್ತದೆ. ಮನೆ ಮಡದಿಯ ಮೇಲಿನ ಮೋಹ ಮಮಕಾರ ಬಿಡಬೇಕು, ಬ್ರಹ್ಮಚರ್ಯ ವ್ರತದ ಪಾಲನೆ ಮಾಡಬೇಕು ಕ್ರಮ ಕ್ರಮವಾಗಿ ಪ್ರತಿಮೆಯನ್ನು ಹೆಚ್ಚಿಸಿಕೊಳ್ಳಬೇಕು, ಎಲ್ಲ ಸಂಬಂಧಗಳನ್ನು ತೊರೆದು ಸಾಧುವಾಗಬೇಕಾಗುತ್ತದೆ. ಅಂತರಾಯಗಳನ್ನು ಸಹಿಸಬೇಕಾಗುತ್ತದೆ. ಪರಿಷಹಗಳನ್ನು ಸಹಿಸಬೇಕಾಗುತ್ತದೆ ಹಾಗೂ ಸಾಧುವಿನ ಚರ್ಯೆಯನ್ನು ಪಾಲಿಸಬೇಕಾಗುತ್ತದೆ. ಆಗ ನಿಮ್ಮ ಶರೀರ ಇದರಲ್ಲಿ ಜಾರಿ ಬೀಳುವುದು. ಜೀವನದಲ್ಲಿ ಸಮತಾ ಭಾವ ಬರತೊಡಗುವುದು. ಆಗ ಎಲ್ಲಿಯೋ ಇರುವ ಮನಸ್ಸು ನಿಮ್ಮದು ನಿಮ್ಮ ಕಡೆಗೆ ಬರುತ್ತದೆ, ಇಲ್ಲವಾದಲ್ಲಿ ಅದು ಹೊರಗಿನ ಕಡೆಗೆ ಓಡುತ್ತದೆ–ಎಂದು ಹೇಳುತ್ತೇವೆ.

ಮನಸ್ಸನ್ನು ನಮ್ಮೆಡೆಗೆ ತರಲು ಇಷ್ಟೆಲ್ಲ ಪ್ರಯಾಸವಿದೆ, ಎಷ್ಟೇ ಪರಿಗ್ರಹಗಳನ್ನು ಬಿಟ್ಟು ಬಿಡಲಾಗುತ್ತದೆ. ಅದು ಧ್ಯಾನದ ಪ್ರಸಿದ್ಧಿಗಾಗಿ ಬಿಡಲಾಗುತ್ತದೆ ಯಾಕೆಂದರೆ ಪರಿಗ್ರಹವು ಧ್ಯಾನದಲ್ಲಿ ಬಾಧಕವಿದೆ. ಕೇವಲ ಹೊರಗಿನ ವಸ್ತುಗಳೇ ಪರಿಗ್ರಹಗಳಿಂದೇನೂ ಇಲ್ಲ. ಈ ಶರೀರ ಸಹ ಪರಿಗ್ರಹವೇ ಆಗಿದೆ. ಉಪಕರಣಗಳು ಪರಿಗ್ರಹವೇ ಆಗಿವೆ ಆದ್ದರಿಂದ ಧ್ಯಾನದ ಸಮಯ ಹೊರಗಿನ ವಸ್ತುಗಳು ಮೊದಲೇ ಬಿಟ್ಟಿವೆ. ಈ ಉಪಕರಣಗಳು ಬಿಟ್ಟು ಹೋಗುತ್ತವೆ, ಇವೆಲ್ಲವೂ ಬಾಧಕ ವಸ್ತುಗಳಾಗಿವೆ. ಶರೀರ ಸಹ ನಮ್ಮದಲ್ಲ. ಹೀಗೆ ವಿಚಾರ ಮಾಡಬೇಕಾಗುತ್ತದೆ. ಇಷ್ಟೇ ಅಲ್ಲ ಈ ಕರ್ಮಗಳು ಸಹ ನನ್ನವಲ್ಲ. ಕರ್ಮ ನನ್ನವು ಎಂದು ಭಾವಿಸಿದರೆ ಧ್ಯಾನವಾಗಲಾರದು. ನಾನು ಏಕಮಾತ್ರ ಜ್ಞಾನ–ದರ್ಶನ ಸ್ವಭಾವಿ ಶುದ್ಧ ಆತ್ಮನಿದ್ದೇನೆ ಮತ್ತೆ ಬೇರೆ ಏನೂ ಸಹ ನನ್ನದಲ್ಲ, ಪರಮಾಣುವಿನಷ್ಟು ನನ್ನದೂ ಏನೂ ಇಲ್ಲ ಹೀಗೆ ವಿಚಾರ ಮಾಡುತ್ತಾರೆ. ಆಗ ಧ್ಯಾನ ಮಾಡಬಹುದು. ನೀವು ಮುನಿಗಳ ಹಾಗೇ ಧ್ಯಾನ ಮಾಡಲಾರಿರಿ, ಮೊದಲು ಮುನಿಯಾಗಿ ತಯಾರಾಗಿರಿ, ಮುನಿ ಹಾಗೆ ಆಗಿರಿ ಹಾಗೂ ಗುರು ನೀಡುವ ವ್ರತವನ್ನು ಕಂಠದಲ್ಲಿ ಪ್ರಾಣ ಇರುವವರೆಗೆ ಪಾಲನೆ ಮಾಡಬೇಕು. ಒಂದು ಬಹು ಅಮೂಲ್ಯ ವಸ್ತು ನಿಮಗೆ ಸಿಕ್ಕಿದೆ. ನೀವು ಮುನಿಗಳ ಹಾಗೇ ಧ್ಯಾನ ಮಾಡಲು ಆಗದಿದ್ದರೆ ಒಂದಲ್ಲ ಇನ್ನೊಂದರ ಆಶ್ರಯ ಅವಶ್ಯವಾಗಿ ಪಡೆಯಿರಿ. ಹನ್ನೆರಡು ಭಾವನೆಗಳ ಚಿಂತನೆ ಮಾಡಿರಿ, ವೈರಾಗ್ಯ ಭಾವನೆಯ ಚಿಂತನೆ ಮಾಡಿರಿ, ಯಾವುದಾದರೂ ತೀರ್ಥಕ್ಷೇತ್ರದ ಚಿಂತನೆ ಮಾಡಿರಿ, ಮೂರ್ತಿಯ ಧ್ಯಾನ ಮಾಡಿರಿ ಮುನಿ ಮಹಾರಾಜರು ಹೇಗೆ ಪೃಥ್ವಿಧಾರಣೆ, ಅಗ್ನಿ ಧಾರಣೆ ವಾಯು ಧಾರಣೆ, ಜಲಧಾರಣೆ ಮಾಡುವರೋ ಹಾಗೇ ಧ್ಯಾನ ಮಾಡಿರಿ ಯಾಕೆಂದರೆ ಸಂಸ್ಥಾನ ವಿಚಯ ಧ್ಯಾನವನ್ನು ಮುನಿ ಮಹಾರಾಜರೇ ಮಾಡಬಲ್ಲರು, ನಿಮ್ಮೊಳಗಿರುವ ಗೃಹಸ್ಥ ನೇರವಾಗಿ ಮಾಡಲಾರ ಎಂದಾಗ ಮುನಿಗಳ ಧ್ಯಾನ ಮಾಡಿ, ಮಾಡಬಹುದಾಗಿದೆ.

ಪಂಚ ಪರಮೇಷ್ಠಿಗಳ ಗುಣಗಳ ಚಿಂತನೆ ಮಾಡಬಹುದು, ದ್ರವ್ಯಸಂಗ್ರಹ, ಇಷ್ಟೋಪದೇಶ, ಶ್ರಾವಕಾಚಾರ ಮುಂತಾದವುಗಳಲ್ಲಿ ಧ್ಯಾನದ ವಿಧಿಯನ್ನು ವರ್ಣಿಸಲಾಗಿದೆ. ಅವುಗಳ ಚಿಂತನೆಯನ್ನು ಮಾಡಬಹುದು. ಬಾರಸಾಣುವೆಕ್ಖಾ ಗ್ರಥದಲ್ಲಿ ಧ್ಯಾನದ ವರ್ಣನೆ ಇದೆ. ಶುಭಭಾವನೆಗಳಲ್ಲಿ ದಶಧರ್ಮಗಳಿರುವಾಗ ಅನುಪ್ರೇಕ್ಷಗಳ ಚಿಂತನೆಯಲ್ಲಿ ಹನ್ನೆರಡು ಭಾವನೆಗಳು ಬರುತ್ತವೆ, ಧರ್ಮ ಭಾವನೆಯಲ್ಲಿ ದಶಲಕ್ಷಣ ಧರ್ಮಗಳ ಚಿಂತನೆಯೂ ಬರುತ್ತದೆ. ದಶಧರ್ಮಗಳಲ್ಲಿ ತಪ ಇತ್ಯಾದಿಗಳ ಭಾವನೆ ಹೊಂದುತ್ತಾರೆ. ಎಲ್ಲ ಧರ್ಮಗಳು ಒಂದು ಇನ್ನೊಂದರೊಂದಿಗೆ ಸಂಬಂಧ ಹೊಂದಿವೆ. ನೀವು ಇಂತಹ ಚಿಂತನೆಗಳನ್ನು ಮಾಡುತ್ತಾ ಬಹಳ ಸಮಯದ ವರೆಗೆ ಹೊಸ–ಹೊಸ ರೂಪದಲ್ಲಿ ಧ್ಯಾನವನ್ನು ಮಾಡಬಹುದಾಗಿದೆ. ಸಂಯಮ ಧರ್ಮದ ವಿಷಯವಾಗಿದ್ದು ಮನಸ್ಸಿನ ಮೇಲೆ

ನಿಯಂತ್ರಣ ಹೊಂದಬೇಕಾಗಿದೆ. ಬಯಸಿದರೆ ಇಂತಹ ಧ್ಯಾನದ ಮಾಧ್ಯಮದಿಂದ ಮನಸ್ಸಿನ ಮೇಲೆ ನಿಯಂತ್ರಣ ಮಾಡಬಹುದು. ಆದರೆ ಮುನಿ ಮಹಾರಾಜರಂತೆ ಧ್ಯಾನ ಮಾಡಲು ಅಷ್ಟು ತ್ಯಾಗ ಮಾಡಬೇಕಾಗುತ್ತದೆ. ನೀವು ಇದೇ ಅವಸ್ಥೆಯಲ್ಲಿ ಮುನಿ ಮಹಾರಾಜರ ಹಾಗೇ ಧ್ಯಾನ ಮಾಡಬೇಕೆಂದರೆ ಸಾಧ್ಯವಿಲ್ಲ, ಯಾಕೆಂದರೆ ಅವಸ್ಥೆಯ ಪ್ರಭಾವವಾಗುತ್ತದೆ. ಎಷ್ಟು ಜನ ಯಾವುದರೊಂದಿಗೆ ಸೇರಿಕೊಂಡಿದ್ದಾರೋ ಆ ಪದಾರ್ಥಗಳು ತಮ್ಮ ಪ್ರಭಾವವನ್ನು ಬೀರುತ್ತದೆ, ಅಂತಹ ಚಿಂತನೆಗಳು ಜನರಿಗೆ ಬರುತ್ತವೆ.

ಜಪಮಾಲೆ ಮಾಡಿದರೆ ಹಣೆ ನೋವು ಬರುತ್ತದೆಂದು ಜನರಿಗೆ ಹೇಳಿರಿ ಮಹಾರಾಜರೆ ಯಾವುದಾದರೂ ಶಾಸ್ತ್ರ ಓದಲು ಹೇಳಿರಿ, ಭಾವನೆ ಹೊಂದುವುದನ್ನು ತಿಳಿಸಿ ಕೊಡಿ, ಆದರೆ ಕೈಯಲ್ಲಿ ಮಾಲೆಯು ಬಂದಾಗ ಅತಿಶಯದ ಹಾಗೇ ಅನಿಸುತ್ತದೆ. ಒಂದು ಚಮತ್ಕಾರದಂತೆನಿಸುತ್ತದೆ. ಏನಾಗುತ್ತದೆ ಎಂದು ಗೊತ್ತಿದೆಯ? ನೆನಪಿಗೆ ಬಾರದ ಮಾತುಗಳು, ಮನವು ಖಾಲಿ ಇರುವುದನ್ನು ನೋಡಿದರೆ ನೆನಪಿಗೆ ಬಂದು ಬಿಡುತ್ತವೆ. ನಿಷೇಧದಲ್ಲಿ ಆಕರ್ಷಣೆ ಇರುವ ಮಾತಿದೆ ಯಾರನ್ನು ದೂರ ಸರಿ, ದೂರ ಸರಿ ಎಂದು ಹೇಳಿದರೆ ಅವರೇ ಬಳಿಗೆ ಬರುತ್ತಾರೆ, ಅವರೇ ಸ್ಮರಣೆಗೆ ಬರುತ್ತಾರೆ ಹಾಗೂ ನೆನಪಿಸಿ ಕೊಂಡಾಗ ನೆನಪಿಗೆ ಬರುವುದಿಲ್ಲ. ಯಾರ‍್ಯಾರೊಂದಿಗೆ ಸಂಬಂಧವಿದೆ ಅವೇ ವಸ್ತುಗಳೆ ನೆನಪಿಗೆ ಬರುತ್ತವೆ. ಯಾರೊಂದಿಗೆ ಸಂಬಂಧವಿಲ್ಲ ಅವರು ನೆನಪಿಗೆ ಬರುವುದಿಲ್ಲ ಅವರ ಸ್ಮರಣೆ ಬರುವಂತಹದಲ್ಲ. ಅವರೊಂದಿಗೆ ಸಂಬಂಧ ಹೊಂದಿರುವವರು ಅವರನ್ನು ಅವರದು ಮೇಲಿಂದ ಮೇಲೆ ನೆನಪು ಸತಾಯಿಸುತ್ತದೆ. ಇದು ಅತಿಶಯವೇ ಆಗಿದೆ. ಸಹೋದರ ನಿನಗೆ ಸಂಬಂಧಗಳನ್ನು ಮುರಿಯ ಬೇಕಾಗುತ್ತದೆ. ಸಂಬಂಧ ಮುರಿದ ಮೇಲೆಯೂ ಮತ್ತೆ ಯಾವದೋ ಕರ್ಮೋದಯದಿಂದ ಹಿಂದಿನ ಯಾರಾದರೂ ಸ್ಮರಣೆಗೆ ಬಂದರೂ ಸಹ ಹಾಗೂ ನಮ್ಮ ಆತ್ಮಧ್ಯಾನ ಬಿಟ್ಟು ಹೋದರೆ ಅಂತಹ ಸಮಯದಲ್ಲಿ ವೈರಾಗ್ಯದಿಂದ ಅವರನ್ನು ದೂರ ಮಾಡಿಕೊಳ್ಳುತ್ತೇವೆ. ಆದ್ದರಿಂದ ಎಷ್ಟೆಷ್ಟು ಸಂಬಂಧಗಳನ್ನು ಮುರಿಯುವಿರಿ ಅಷ್ಟಷ್ಟೇ ನಮ್ಮ ಆತನ ಅನುಭವವಾಗುತ್ತದೆ. ಇಷ್ಟೋಪದೇಶದಲ್ಲಿ ಹೀಗೆ ಹೇಳಿದ್ದಾರೆ–

**ಯಥಾ ಯಥಾ ನ ರೋಚಂತೇ ವಿಷಯಾಃ ಸುಲಭಾ ಅಪಿ।**
**ತಥಾ ತಥಾ ಸಮಾಯಾತಿ ಸಂವಿತ್ತೌ ತತ್ವ್ತಮುತ್ತಮಮ್॥38॥**

ಹೇಗೆ–ಹೇಗೆ ನಮಗೆ ಸುಲಭ ರೂಪದಿಂದ ಪಡೆದ ವಿಷಯ ಸಹ ಒಳ್ಳೆಯದೆನಿಸುವುದಿಲ್ಲ, ಹಾಗೇ ಹಾಗೇ ನಮ್ಮ ಆತ್ಮನಲ್ಲಿ ಉತ್ತಮ ತತ್ವದ ಅನುಭವವಾಗುತ್ತದೆ. ನಾವು ಉತ್ತಮ ತತ್ವ್ತದಲ್ಲಿ ಇಳಿದು ಬಿಡುತ್ತವೆ ಹಾಗೂ ನಮ್ಮ ಧ್ಯಾನ ಪ್ರಶಸ್ತವಾಗುತ್ತದೆ. 'ಹೇಗೆ ಹೇಗೆ ನಾವು ಧ್ಯಾನದಲ್ಲಿ ಲೀನವಾಗುತ್ತೇವೆ.

**ಯಥಾ–ಯಥಾ ಸಮಾಯಾತಿ ಸಂವಿತೌ ತತ್ವ್ತ ಮುತ್ತಮಮ್ ।**
**ತಥಾ–ತಥಾ ನ ರೋಚಂತೇ ವಿಷಯಾಃ ಸುಲಭಾ ಅಪಿ॥37॥**

ಹೇಗೆ ಹೇಗೆ ನಮ್ಮ ಆತ್ಮನ ಅನುಭವ ನಮ್ಮ ಜೀವನದಲ್ಲಿ ಬರುತ್ತದೇ ನಾವು ಎಷ್ಟು ಅಂತರಂಗದಲ್ಲಿ ಇಳಿಯುತ್ತಾ ಸಾಗುತ್ತೇವೋ, ಹಾಗೇ ಹಾಗೇ ಈ ಪಂಚೇಂದ್ರಿಯಗಳ ವಿಷಯ ಎಲ್ಲವೂ ಸಪ್ಪೆ ಅಥವಾ ನಿಸ್ಸಾರವೆನಿಸುತ್ತಾ ಸಾಗುತ್ತವೆ. ಇವುಗಳಲ್ಲಿ ಯಾವ ಸಾರವೂ ಇಲ್ಲ. ಇವೆಲ್ಲ

ನಿಸ್ಸಾರ ವಸ್ತುಗಳಾಗಿವೆ. ಆದ್ದರಿಂದ ನಾವು ಮೊದಲು ವಿಷಯಗಳನ್ನು ಬಿಡಬೇಕು ಆಗಲೇ ನಾವು ಅಂತರಂಗದ ಕಡೆಗೆ ಹೋಗಬಲ್ಲೆವು.

ಸಂಯಮದ ಆರಾಧನೆಯೇ ಜೀವನದ ಶ್ರೇಷ್ಠ ಸಾಧನೆಯಾಗಿದೆ. ಮನುಷ್ಯನ ಜೀವನದು ಕೀಲು ಮನವಿದೆ. ನಮ್ಮ ಎಲ್ಲ ವೃತ್ತಿಗಳು ಹಾಗೂ ಪ್ರವೃತ್ತಿಗಳೇ ಉತ್ತೇರಕ ಮನವೇ ಆಗಿದೆ. ಮನಸ್ಸೇ ಮನುಷ್ಯನ ಜೀವನದಲ್ಲಿ ಬಂಧನ ಮತ್ತು ಮುಕ್ತಿಯ ಕಾರಣವಾಗಿದೆ. ವಿಷಯಾಸಕ್ತ ಮನಸ್ಸಿನಿಂದ ಕರ್ಮಬಂಧವಾಗುತ್ತದೆ ಹಾಗೂ ವಿಷಯ ರಹಿತ ಮನಸ್ಸು ಮುಕ್ತಿಯ ಸಾಧನವಾಗಿದೆ. ನಾವು ಈಗ ತಾನೇ ಮನಸ್ಸನಿನ್ನು ನಿಯಂತ್ರಿಸಲು ಹೇಳಿದೆವು. ಮನಸ್ಸನ್ನು ನಿಯಂತ್ರಿಸದಿದ್ದರೆ ಅದು ಬಹಳ ಗಲಾಟೆ ಮಾಡುತ್ತದೆ. ಮನಸ್ಸಿನಿಂದಲೇ ಎಲ್ಲಕ್ಕಿಂತ ಹೆಚ್ಚು ಪಾಪಗಳು ಆಗುತ್ತವೆ. ನಾವು ವಚನದಿಂದ ಮಾಡುತ್ತವೆಯೋ ಇಲ್ಲವೋ ಕಾಯದಿಂದ ಮಾಡುತ್ತೇವೆಯೋ ಇಲ್ಲವೇ ಆದರೆ ಮನಸ್ಸು ಎಲ್ಲಿ ಬೇಕಾದಲ್ಲಿ ಇರಲಿ ಅದಂತೂ ತನ್ನ ಕೆಲಸವನ್ನು ಮಾಡುತ್ತಲೇ ಇರುತ್ತದೆ. ಬಯಸಿದಲ್ಲಿ ಇನ್ನಷ್ಟು ಮಾಡಬಲ್ಲದು ಅಥವಾ ಮಾಡದಿರಬಹುದು, ಹೇಳಬಹುದು ಅಥವಾ ಹೇಳದಿರಬಹುದು, ಆದರೆ ಮನಸ್ಸಂತೂ ತನ್ನ ಕಾರ್ಯವನ್ನು ಮಾಡಿಯೇ ಬಿಡುತ್ತದೆ ಹಾಗೂ ಆಸ್ರವ ಆಗಿಯೇ ಬಿಡುತ್ತದೆ. ನಾವು ಏನೂ ಕೆಲಸ ಮಾಡಿರದಿದ್ದರೂ, ಹಾಗೇ ಹೇಳಲಾಗಿದ್ದರೂ. ಆದರೆ ಮನಸ್ಸಿನಲ್ಲಿ ವಿಕಲ್ಪ ಬಂದು ಬಿಟ್ಟಿತು ಹಾಗೂ ಬಂಧವಾಗಿ ಬಿಟ್ಟಿತು. ಪಾಪದ್ದಾಗಿರಬಹುದು ಆಸ್ರವ ಸಹ ಮನಸ್ಸಿನ ಅನುಸಾರವೇ ಆಗುತ್ತದೆ. ನಮ್ಮ ವಿಚಾರಗಳ ಹಾಗೇ ಪರಿಣಾಮಗಳಿವೆ ಹಾಗೆಯೇ ಆಸವ್ರವಾಗುತ್ತದೆ. ನಾವು ಆ ಕಾರ್ಯ ಮಾಡಿದರೆ ಇಂತಹ ನಿಯಮವಿಲ್ಲ.

ಹೌದು ಕಾರ್ಯಾನುಸಾರ ಅದರಲ್ಲಿ ತೀವ್ರತೆ ಬರುತ್ತದೆ ಮತ್ತು ವಿಶೇಷತೆ ಬರುತ್ತದೆ, ಆದರೆ ಮನಸ್ಸಿನಲ್ಲಿ ಯಾರಿಗಾದರೂ ತೊಂದರೆ ಕೊಡುವ ಚಿಂತನೆ ಬಂದಾಗ ನಾವು ಶರೀರದಿಂದ ಅಥವಾ ವಚನದಿಂದ ಮಾಡಬಹುದು ಅಥವಾ ಮಾಡದಿರಬಹುದು. ಆದರೆ ಮನಸ್ಸಿನಲ್ಲಿ ವಿಕಲ್ಪಭಾವ ಬಂದರೆ ಕರ್ಮ ಬಂಧವಾಯಿತು. ಭೋಗ ಮಾಡುವ ಭಾವ ಬಂದರೆ ಅದಕ್ಕೇ ಸಂಬಂಧಿಸಿದ ಆಸ್ರವ ಬಂದಿತು, ನೀವು ಯಾರಿಗಾದರೂ ಹೇಳಿರಿ ಅಥವಾ ಹೇಳಿರದೇ ಇರಿ ಅಥವಾ ಭೋಗಿಸಿರಿ ಅಥವಾ ಭೋಗಿಸದೇ ಇರಿ ಮನಸ್ಸಿನಲ್ಲಿಯೂ ಬಂದಿತು. ಆದ್ದರಿಂದ ಸಹೋದರಾ ಈ ಅಶುಭ ವಿಚಾರಗಳಿಂದ ರಕ್ಷಿಸಿಕೊ ಹಾಗೂ ಮನಸ್ಸಿನ ಮೇಲೆ ನಿಯಂತ್ರಣ ಹೊಂದು, ಮನಸ್ಸಿನ ಮೇಲೆ ಸಂಯಮ ಸಾಧಿಸು. ಇದಕ್ಕಾಗಿ ನಾವು ಮನಸ್ಸು ಸಂಯಮಿತವಾಗಿರುವಂತೆ ಏನ್ನಾದರೂ ಮಾಡಬೇಕು. ನಮ್ಮ ಮನಸ್ಸಿನ ಗತಿಯನ್ನೇ ಬದಲಾಯಿಸೋಣ, ಸರಿಯಾದ ಮಾರ್ಗದರ್ಶನ ನೀಡಿರಿ. ಹೆಚ್ಚೆಚ್ಚು ನಮ್ಮ ಸಮಯವನ್ನು ಧರ್ಮದಲ್ಲಿ ತೊಡಗಿಸಿ, ಸ್ವಾಧ್ಯಾಯದಲ್ಲಿ ತೊಡಗಿಸಿ ಉತ್ತಮ ಭಾವನೆಗಳ ಚಿಂತನೆಯಲ್ಲಿ ತೊಡಗಿಸಿ. ಹೀಗೆಯೇ ಇನ್ನೂ ಧರ್ಮದ ಲೇಖನಗಳಿವೆ, ಓದುವಿಕೆ ಇದೆ ಅವುಗಳನ್ನು ಆಚರಣೆಯಲ್ಲಿ ತನ್ನ, ಪೂಜಾ ಪಾಠ ಓದಿದರೆ ಪೂಜೆ ಮಾಡಿ, ದಾನ ನೀಡುವುದನ್ನು ಓದಿದರೆ ದಾನವನ್ನೂ ಕೊಡಿ, ಏನೇನು ನೀವು ಓದಿದರೋ ಅದನ್ನು ಕಾರ್ಯಗತ ಗೊಳಿಸಿ. ಚಿಂತನೆ ಮಾಡುತ್ತಿದ್ದರೆ ಸರಿ, ಆದರೆ ಚಿಂತನೆ ಎಷ್ಟೆ ಸಮಯದವರೆಗೆ ಸಾಗೀತು, ಆದರೆ ಮತ್ತೆ ಅದು ಕ್ರಿಯೆಯಲ್ಲಿ ಆಗಬೇಕು. ಯಾಕೆಂದರೆ ಆತ್ಮನಲ್ಲಿ ಜನರು ಹಾಗೆಯೇ ಹೋಗಲಾರರು, ನಿಮ್ಮ ಬಳಿ ಇನ್ನೂ ಎಲ್ಲ ಪ್ರಕಾರದ ಪರಿಗ್ರಹಗಳಿವೆ. ಮುನಿಗಳ ಹಾಗೇ ಇನ್ನೂ ಧ್ಯಾನ ಮಾಡಲಾಗುವುದಿಲ್ಲ. ಅಷ್ಟೊಂದು ಸಮಯ ನೀಡಲಾರಿರಿ. ಆದ್ದರಿಂದ ಅಪ್ರಶಸ್ತಿ ಕ್ರಿಯೆಗಳನ್ನು

ಬಿಟ್ಟು ಪ್ರಶಸ್ತಿ ಕ್ರಿಯೆಗಳಲ್ಲಿ ತೊಡಗಬೇಕು. ಇದು ಸಹ ಒಂದು ಪ್ರಕಾರದ ಸಂಯಮವಿದೆ.

ನಮ್ಮ ಮನಸ್ಸನ್ನು ವಿಷಯ ಸುಖಗಳಿಂದ ದೂರಮಾಡಿ ಪುಣ್ಯ(ಧರ್ಮ)ದ ಕೆಲಸಗಳಲ್ಲಿ ತೊಡಗಿಸುವುದು ಸಹ. ಒಂದು ಸಂಯಮವಾಗಿದೆ. ನಾವು ಎಷ್ಟೇಷ್ಟು ಮುಂದೆ ಸಾಗುತ್ತೇವೆ ಎಷ್ಟು ತ್ಯಾಗ ಮಾಡುತ್ತಾ ಸಾಗುತ್ತೆವೆ. ಅಷ್ಟಷ್ಟು ಮನದ ಸಂಯಮ ದೊರೆಯುತ್ತದೆ. ಯಾರ ಮನಸ್ಸು ತಮ್ಮ ವಶದಲ್ಲಿದೆ ಅವರು ಇಡೀ ಜಗತ್ತನ್ನು ವಶದಲ್ಲಿ ಪಡೆಯಬಹುದಾಗಿದೆ. ಮನದ ಸಂಯಮ ಇರದಿದ್ದರೆ ಎಷ್ಟೊಂದು ಅನರ್ಥಗಳು ಆಗಿ ಬಿಡುತ್ತವೆ. ಇದನ್ನು ನಾವು ಕೆಳಗಿನ ದೃಷ್ಟಾಂತದಿಂದ ತಿಳಿಯಬಹುದು.

ಸ್ವಯಂಭೂರಮಣ ಸಮುದ್ರದಲ್ಲಿ ತಿಮಿಂಗಿಲ ಮುಂತಾದ ಮಹಾ ಮೀನುಗಳು ಇರುತ್ತವೆ. ಇವು ಸಂಜ್ಞೀ ಪಂಚೇಂದ್ರಿಯಗಳಾಗಿವೆ. ಆದರೆ ಅವು ಸಂಮೂರ್ಛನ ಜೀವಿಗಳಾಗಿವೆ. ಅವುಗಳ ಶರೀರ ಬಹಳ ದೊಡ್ಡದಿರುತ್ತದೆ. ಅವುಗಳ ಶರೀರದ ಉದ್ದ ಒಂದು ಸಾವಿರ ಯೋಜನೆಗಳೆಂದು ಹೇಳಿದ್ದಾರೆ. ಈ ಮೀನಿನ ಹೊಟ್ಟೆ ತುಂಬಿದಾಗ ಅದು ಬಾಯಿ ತೆರೆದು ಬಿಡುತ್ತದೆ ಹಾಗೂ ಅದೇ ಸಮುದ್ರದಲ್ಲಿ ಮಸ್ತಿಯಿಂದ ಬಿದ್ದಿರುತ್ತದೆ. ಆರು ತಿಂಗಳುಗಳ ಕಾಲ ಬಾಯಿ ತೆರೆದೆ ಮಲಗಿರುತ್ತದೆ. ಅದರ ತೆರೆದ ಬಾಯಿಯಲ್ಲಿ ದೊಡ್ಡ ದೊಡ್ಡ ಮೀನುಗಳು ಜಲ ಜೀವಿಗಳು ಆಟವಾಡುತ್ತಿರುತ್ತವೆ. ಜೀವಗಳು ಒಳಗೆ-ಹೊರಗೆ ಹೋಗುತ್ತಾ ಬರುತ್ತಾ ಇರುತ್ತವೆ. ನಿದ್ದೆಯಿಂದ ಎಚ್ಚೆತ್ತ ನಂತರ ಹಸಿವೆಯನ್ನು ಪೂರೈಸಿಕೊಳ್ಳಲು ತನ್ನ ಬಾಯಿಯನ್ನು ಮುಚ್ಚಿಕೊಳ್ಳುತ್ತದೆ. ಆಗ ಅದರ ಬಾಯಿಯಲ್ಲಿ ಬಂದಿದ್ದ ಮೀನು ಇತ್ಯಾದಿ ಪ್ರಾಣಿಗಳನ್ನು ಅದು ನುಂಗಿ ಬಿಡುತ್ತದೆ. ಇದೇ ಸ್ವಯಂಭೂರಮಣ ಸಮುದ್ರದಲ್ಲಿ ತಂದುಲ ಮತ್ಸ್ಯ ಎಂಬ ಇನ್ನೊಂದು ಮೀನು ಇದೆ. ತಂದುಲದ ಅರ್ಥ ಅಕ್ಕಿ, ಅಕ್ಕಿ ಚಿಕ್ಕದಿರುವಷ್ಟು ಇದರ ಶರೀರವಿದ್ದಿದ್ದರಿಂದ ಇದನ್ನು ಭತ್ತದಂತಿರುವ ಅಕ್ಕಿ(ತಂದುಲ) ಮತ್ಸ್ಯವೆಂದು ಕರೆಯುಲಾಗುತ್ತದೆ. ಆದರೆ ಅಲ್ಲಿ ಅಕ್ಕಿ ಇರುವುದಿಲ್ಲ ಆದರೆ ಮತ್ಸ್ಯದ ಕಿವಿಯಲ್ಲಿ ಒಂದು ಅಕ್ಕಿ ಕಾಳಿನಷ್ಟು ಮತ್ಸ್ಯವಿರುತ್ತದೆ ಹಾಗೂ ಅಲ್ಲಿ ಒಂದು ಸಾವಿರ ಯೋಜನದ ದೊಡ್ಡ ಮತ್ಸ್ಯದ ಕಿವಿಯಲ್ಲಿ ಅರ್ಥಾತ್ ತಿಮಿತಿಮಿಂಗಿಲಾದಿಕ ಮತ್ಸ್ಯದ ಕಿವಿಯಲ್ಲಿ ಈ ತಂದುಲ ಮತ್ಸ್ಯವಿರುತ್ತದೆ ಹಾಗೂ ಅದರ ಕಿವಿಯ ಮಲವನ್ನು ತಿನ್ನುತ್ತದೆ.

ತಂದುಲ ಮತ್ಸ್ಯವು ಮಹಾ ಮತ್ಸ್ಯದ ಕಿವಿಯಲ್ಲಿ ಕುಳಿತು-ಇದರ ಮೂಗು, ಕಿವಿ ಬಾಯಿಯಲ್ಲಿ ಇಷ್ಟೊಂದು ಜೀವಿಗಳು ಹೋಗುತ್ತಲಿವೆ, ಬರುತ್ತಲಿವೆ, ಹೋಗುತ್ತಲಿವೆ, ಬರುತ್ತಲಿವೆ ನೋಡಣ್ಣ ಕಿವಿ, ಮೂಗು, ಬಾಯಿ ಇವೆಲ್ಲವುಗಳ ಸಂಬಂಧವಿದೆ. ಒಳಗಡೆ ಎಲ್ಲವನ್ನು ಜೋಡಿಸಬಹುದು, ಯಾವುದೇ ಪದಾರ್ಥ ಒಂದು ಇನ್ನೊಂದು ಸ್ಥಾನದಿಂದ ಬಂದು ಹೋಗಬಹುದು ಬಹಳಷ್ಟು ಜೀವ ಜಂತುಗಳು ಬಾಯಿಯಲ್ಲಿ ಬಂದು-ಹೋಗುತ್ತಲಿವೆ-ಎಂದು ವಿಚಾರ ಮಾಡಿತು. ಇಂಡಿಯಾ ಗೇಟ್ ಇರುವ ಹಾಗೇ ಅದೆಷ್ಟು ವಾಹನಗಳು ಬರುತ್ತವೆ ಹೋಗುತ್ತವೆ ಎಲ್ಲವೂ ಓಡುತ್ತಾ ಬಹಳ ದೊಡ್ಡ ಗೇಟ್ ನಿಂದ ಬಂದು ಹೋಗುತ್ತಲಿವೆ ಎಂದು ಆಚಾರ್ಯ ಶ್ರೀಗಳು ಹೇಳುತ್ತಾರೆ. ಹೀಗೆ ಮಹಾಮತ್ಸ್ಯದ ಮುಖದಿಂದ ಜೀವಜಂತು ಬಂದು ಹೋಗುತ್ತಲಿವೆ. ಇಷ್ಟೊಂದು ಜೀವ, ಜಂತುಗಳು ಬಂದು ಹೋಗುತ್ತಿದ್ದರು ಏನು ಸಹ ಮಾಡುತ್ತಿಲ್ಲವಲ್ಲ ಎಂದು ತಂದುಲ ಮತ್ಸ್ಯ ಯೋಚಿಸುತ್ತದೆ. ಇದರ ಸ್ಥಾನದಲ್ಲಿ ಒಂದು ವೇಳೆ ನನ್ನ ಶರೀರ ಹಾಗಿದ್ದಿದ್ದರೆ ಹಾಗೂ ನನ್ನ ಮುಖದಲ್ಲಿ ಇಂತಹ ಪ್ರಾಣಿಗಳು ಬಂದು ಹೋಗುತ್ತಿದ್ದರೆ ಒಂದು ಪ್ರಾಣಿಯು ಜೀವ ಸಹಿತ ಹೋಗುತ್ತಿರಲಿಲ್ಲ.

ನಾನು ಒಂದನ್ನು ಸಹ ಬಿಡುತ್ತಿರಲಿಲ್ಲ, ಎಲ್ಲರನ್ನು ತಿಂದು ಬಿಡುತ್ತಿದ್ದೆ, ನೋಡಿದಿರಾ ಕೇವಲ ಭಾವ ಮಾಡಿತು, ಹಿಂಸೆ ಮಾಡಲಿಲ್ಲ. ಏನನ್ನೂ ಮಾಡಲಿಲ್ಲ ಆದರೆ ಭಾವಗಳಲ್ಲಿಯೇ ಇದರ ಸ್ಥಾನದಲ್ಲಿ ನಾನಿದಿದ್ದರೆ ಒಂದನ್ನು ಬಿಡುತ್ತಿರಲಿಲ್ಲ. ಇಷ್ಟು ಭಾವ ಮಾತ್ರದಿಂದ ಅದು ಅಧೋಗತಿಗೆ ಹೋಗುತ್ತದೆ. ಆ ತಂದುಲ ಮತ್ಸ್ಯ ಆಹಾರದ ಸಂಕಲ್ಪದಿಂದ ಲಕ್ಷಾಂತರ, ಕೋಟ್ಯಾಂತರ ಜೀವಗಳ ಮಾನಸಿಕ ಹಿಂಸೆ ಮಾಡಿ ಏಳನೇ ಪೃಥ್ವಿ(ನರಕ)ದಲ್ಲಿ ಹೋಗುತ್ತದೆ. ಅದು ಮಾತ್ರ ಮನದಲ್ಲಿ ಹಿಂಸೆಯ ಭಾವನೆ ಮಾಡಿ ಏಳನೇ ನರಕಕ್ಕೆ ಹೋಗುತ್ತದೆ ಹಾಗೂ ಮಾಹಾ ಮತ್ಸ್ಯವು ಆಹಾರದ ಕಾರಣವಾದ ಹಿಂಸೆಯಿಂದ ಏಳನೇ ನರಕಕ್ಕೆ ಹೋಗುತ್ತದೆ. ನೋಡಿರಿ ಮನಸ್ಸನ್ನು ನಿಯಂತ್ರಣಕ್ಕೆ ತನ್ನಿರಿ. ಮನಸ್ಸಿನ ಸಂಯಮ ಇಡಿ. ಧರ್ಮಭಾವನಾ ಶತಕದಲ್ಲಿ ಹೀಗೆ ಬರೆದಿದ್ದಾರೆ.

**ಮನದ ಸಂಯಮದ ಧರ್ಮ ಮಾನವ, ಮೊದಲು ಪೂರ್ಣ ತನ್ನದಾಗಿಸುವ**
**ಎಲ್ಲ ಪಾಪಗಳ ಜಡ ಮನವಿದೆ, ಭವದಲ್ಲಿ ಭ್ರಮಣೆ ಮಾಡಿಸುತಿದೆ॥53॥**

**ತಂದುಲನೆಂಬ ಮತ್ಸ್ಯವು ಹಿಂಸಾ ಭಾವವ ಮಾಡಿತು**
**ಭಾವ ಮಾತ್ರದ ಮಹಾಪಾಪಂ ನರಕಗಳ ದುಃಖವ ಪಡೆಯಿತು॥53॥**

ಕೆಲಸವಿಲ್ಲದೇ ಕುಳಿತಾಗ ಎಲ್ಲವೂ ಅಸ್ತವ್ಯಸ್ತವಾಗುವುದನ್ನು ನೀವು ತಿಳಿದಿದ್ದೀರಾ. ಮಹಾರಾಜರೇ! ಏನು ಮಾಡುವುದು ಏನೂ ಕೆಲಸವಿಲ್ಲ ಆದ್ದರಿಂದ ಹಾಗೇ ಕುಳಿತಿದ್ದೇವೆ. ಕೆಲಸವಿಲ್ಲದೇ ಯಾರೂ ಹಾಗೆ ಕುಳಿತುಕೊಳ್ಳಬೇಡಿ ಎಂದು ನಾವು ಹೇಳುತ್ತೇವೆ. ಹಾಗೇ ಜನ ಹೇಳುತ್ತಾರೆ ಈಗೇನು ಮಾಡುವುದು? ಅಂಗಡಿಯಲ್ಲಿ ಹಾಗೇ ಕುಳಿತುಕೊಳ್ಳಲೇ ಬೇಕಾಗುತ್ತದೆ. ಅಲ್ಲಿ ಏನು ಮಾಡುವುದು? ಪೂಜಾದಿಗಳನ್ನು ಅಲ್ಲಿ ಮಾಡುವುದಿಲ್ಲ, ಪೂಜೆಯನ್ನ ಮಂದಿದಲ್ಲಿ ಮಾಡುತ್ತೇವೆ. ಪೂಜೆ ಆಯಿತು. ಸ್ವಾದ್ಯಾಯವೂ ಅಯಿತು, ಜಪವೂ ಆಯಿತು ಎಲ್ಲವೂ ಆಯಿತು, ಇದರ ನಂತರ ಅಂಗಡಿಯಲ್ಲಿ ಕುಳಿತುಕೊಳ್ಳುತ್ತವೆ. ಗಿರಾಕಿಗಳು ಯಾವಾಗಲೂ ಬರುವುದಿಲ್ಲ. ಬಹಳಷ್ಟು ಹೊತ್ತು ಪ್ರತೀಕ್ಷೆ ಮಾಡಿದ ನಂತರ ಒಂದು ವೇಳೆ ಗಿರಾಕಿ ಬಂದರೆ ಸಾಮಾನು ಕೊಡುವುದಾಗುತ್ತದೆ. ದುಡ್ಡು ತೆಗೆದುಕೊಳ್ಳುವುದಾಗುತ್ತದೆ. ಮತ್ತೇನು ಮಾಡುವುದು, ಕುಳಿತಿರುತ್ತೇವೆ, ಬೇರೆ ಏನೂ ಕೆಲಸವಿಲ್ಲ. ಅನೇಕರು ಪುಸ್ತಕ ಪೇಪರ ಇತ್ಯಾದಿ ಹೊಂದಿರುತ್ತಾರೆ. ಅಲ್ಪ ಸ್ವಲ್ಪ ಓದುತ್ತಾರೆ. ಧರ್ಮದ ಪುಸ್ತಕ ಓದಿದರೆ ಧರ್ಮಧ್ಯಾನವಾಗುತ್ತದೆ. ಆದರೆ ಅಲ್ಲಿಯ ವಾತಾವರಣ ಅಷ್ಟು ಶುದ್ಧವಾಗಿರುವುದಿಲ್ಲ ಅಶುದ್ಧತೆ ಇರುತ್ತದೆ ಅಲ್ಲಿ ಎಲ್ಲ ಪ್ರಕಾರದ ಜನರೂ ಬರುತ್ತಾರೆ, ಸಾಮಾನುಗಳನ್ನು ಮುಟ್ಟುತ್ತಾರೆ. ಚರ್ಮ ಇತ್ಯಾದಿಗಳನ್ನು ಧರಿಸಿರುತ್ತಾರೆ. ಯಸನ ಮಾಡುವವರು ಇರುತ್ತಾರೆ. ಆದ್ದರಿಂದ ಅಲ್ಲಿ ದೊಡ್ಡ ದೊಡ್ಡ ಶಾಸ್ತ್ರ ಸಿದ್ಧಾಂತ ಗ್ರಂಥ ಅಥವಾ ಪರಮಾಗಮಗಳನ್ನು ಇಟ್ಟುಕೊಳ್ಳಲು ಆಗುವುದಿಲ್ಲ ಚಿಕ್ಕ ಪುಟ್ಟ ಪುಸ್ತಕಗಳನ್ನು ಇಟ್ಟುಕೊಂಡಿರುತ್ತೇವೆ. ಮ್ಯಾಗಜೀನ ಅಥವಾ ಪತ್ರಿಕೆ ಇತ್ಯಾದಿ ಧಾರ್ಮಿಕ ಚಿಂತನೆಗಾಗಿ ಸರಿ ಇದೆ. ಆದರೂ ನಾವು ಶುದ್ಧತೆ ಇರಲಿ, ವಿನಯತೆ ಇರಲಿ ಆಗ ಇವು ಇರಲಿ ಇಲ್ಲವಾದಲ್ಲಿ ಏನೂ ಉದ್ದೇಶ ಈಡೇರದು ಎಂದೇ ನಾವು ಹೇಳುತ್ತೇವೆ.

ಶಾಸ್ತ್ರ ಸ್ವಾದ್ಯಾಯ ಮಾಡುವುದು ಸಹ ಒಂದು ಕ್ರಮವಿದೆ, ವಿಧಿ ಇದೆ ಆಗಲೇ ಫಲ ದೊರೆಯುತ್ತದೆ. ಇಲ್ಲವಾದಲ್ಲಿ ಅದರ ಫಲ ಸಿಗುವುದಿಲ್ಲ. ಎಲ್ಲೆಂದರಲ್ಲಿ, ಏನನ್ನಾದರೂ ತೆರೆದುಕೊಂಡು ಕುಳಿತು ಬಿಟ್ಟರೆ ಆಗದು. ಮಂಗಲಾಚರಣೆ ಮಾಡಬೇಕು. ಆಸನದಲ್ಲಿ ಕುಳಿತಿರಬೇಕು, ಶುದ್ಧಸ್ಥಾನವಿರಿಬೇಕು, ಮಧ್ಯದಲ್ಲಿ ಮಾತನಾಡಬಾರದು, ಮೌನ ಧಾರಣೆ ಇರಬೇಕು. ಆದ್ಯ ಮಂಗಲವಿದೆ, ಅಂತ್ಯ

ಮಂಗಲವಿದೆ, ಇವೆಲ್ಲವನ್ನು ಪಾಲಿಸಬೇಕು. ಕಾಯೋತ್ಸರ್ಗ ಮಾಡಬೇಕು. ಆಗ ಸ್ವಾಧ್ಯಾಯವಾಗುತ್ತದೆ. ಎಲ್ಲಿ ಹೇಗೆಂದರೆ ಯಾವಾಗಲಾದರೂ ಏನನ್ನಾದರೂ ಓದುವುದು ಸ್ವಾಧ್ಯಾಯವಲ್ಲ. ನಾವು ಹಲವಾರು ಜನರನ್ನು ನೋಡಿದ್ದೇನೆ, ಕೇಳಿಯೂ ಇದ್ದೇವೆ ಅದಕ್ಕಾಗಿ ಹೇಳುತ್ತಿದ್ದೇವೆ. ಅವರೂ ಅಂಗಡಿಯಲ್ಲೂ ಸಮಯಸಾರ ತೆಗೆದುಕೊಂಡು ಕುಳಿತು ಬಿಡುತ್ತಾರೆ, ಮಲಗುತ್ತಲೂ ಓದುತ್ತಾರೆ, ಒಬ್ಬರು ಬೆಂಕಿ ಕಾಯಿಸಿಕೊಳ್ಳುತ್ತಾ ಹಾಗೂ ಬೆಂಕಿ ಉರಿಯುತ್ತಿರುವಾಗ ಸಮಯಸಾರ ತೆರದಿದ್ದಿತು. ಪತ್ರ ಪತ್ರಿಕೆಗಳು, ಸುದ್ದಿ ಪತ್ರಿಕೆ ಇತ್ಯಾದಿಗಳ ಹಾಗೇ ಗ್ರಂಥಗಳನ್ನು ತಿಳಿಯುತ್ತಾರೆ. ನೀವೇ ಹೇಳಿ ಶಾಸ್ತ್ರಗಳ ಜ್ಞಾನ ಬೆಳೆಯಲಿ ಎಂದರೆ ಹೇಗೆ? ಹಾಗೇ ನಾವು ಓದಿಕೊಳ್ಳುತ್ತೇವೆ ಆದರೆ ಅದರಿಂದ ಆತ್ಮನಲ್ಲಿ ಯಾವುದಾದರೂ ಪರಿಣಾಮವಾಗಲಾರದು. ಯಾಕೆಂದರೆ ವಿನಯ ಪೂರ್ವಕವಾಗಿ ಓದಿದ ಶಾಸ್ತ್ರ ಅದೇ ನಮ್ಮ ಜೀವನದಲ್ಲಿ ಕಾರ್ಯಕಾರಿಯಾಗುತ್ತದೆ, ಇಲ್ಲವಾದಲ್ಲಿ ಈ ಜ್ಞಾನ ಹಾಗೇಯೇ ಸಮಾಪ್ತವಾಗಾಗುತ್ತದೆ.

ಇಂದು ನಾವು ಸಂಯಮ ಧರ್ಮದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಮನುಸ್ಸಿನ ಸಂಯಮ ಧಾರಣೆ ಮಾಡಿರಿ, ಇಲ್ಲವಾದಲ್ಲಿ ಆ ತಂದುಲ ಮತ್ಸ್ಯದ ಹಾಗೇ ನಮ್ಮ ಜೀವನ ಏನಾಗುತ್ತದೆಯೋ ಗೊತ್ತಿಲ್ಲ. ನಾವು ಏನೂ ಕೆಲಸ ಮಾಡಲಾರೆವು. ಆದರೆ ಮನಸ್ಸಿನಲ್ಲಿ ತಿಳಿಯದೇ ಏನೆಲ್ಲ ಯೋಚನೆ ಮಾಡುತ್ತೇವೆ, ಎಷ್ಟು ವಿಷಯಗಳನ್ನು ವಿಚಾರ ಮಾಡಿಕೊಳ್ಳುತ್ತೇವೆ. ನಮ್ಮದು ಕಡಿಮೆ ಬೇರೆಯವರದನ್ನು ಹೆಚ್ಚು ಯೋಚಿಸುತ್ತೇವೆ ಅಂದರೆ ಬೇರೆಯವರದು ಏನಾಗುತ್ತಿದೆ? ಇದು ನಮಗೆ ಹೆಚ್ಚು ಚಿಂತೆಯಾಗಿದೆ. ಅವರು ನಮಗಿಂತ ಮುಂದೆ ಹೋಗುತ್ತಿದ್ದಾರೆ. ಅದು ಹೇಗೆ? ಸರಿ ನಮ್ಮ ಕೆಡುಕನ್ನೇನೂ ಮಾಡದಿರಬಹುದು. ಆದರೆ ಅವರು ನನಗಿಂತ ಮುಂದೆ ಹೋಗಬಾರದು. ಈ ಚಿಂತೆ ಹೆಚ್ಚಾಗಿರುತ್ತದೆ. ಇಂತಹ ಚಿಂತನೆಗಳು ಯಾಕೆ ಆಗುತ್ತವೆ ಗೊತ್ತೆ? ಜನರಿಗೆ ಬಹುಶ: ಇಂತಹ ಚಿಂತನೆಗಳು ಅಜ್ಞಾನದಿಂದ ಬರುತ್ತವೆ. ಇಂತಹ ಅಜ್ಞಾನತೆಗಳನ್ನು ದೂರ ಮಾಡಿ ನಮ್ಮನ್ನು ಆರೋಗ್ಯದಿಂದಿಡುವ ಇಂತಹ ಜ್ಞಾನ ಜೀವನದಲ್ಲಿ ಯಾವಾಗ ಬರುತ್ತದೆ. ಬೇರೆಯವರ ಮೇಲೆ ಕುದೃಷ್ಟಿ ಹಾಕಬೇಡಿ, ಹಾಕುವುದಾದರೆ ಅವರು ಬಹಳ ಮುಂದೆ ಹೋಗಲಿ ಎಂದು ಯೋಚಿಸಿರಿ. ನಮಗಿಂತಲೂ ಹೆಚ್ಚು ಸುಖಿ ಸಮೃದ್ಧಿ ಹೊಂದಲಿ, ಇದರ ಬಗ್ಗೆ ನಮಗೆ ಯಾವ ಚಿಂತೆಯೂ ಇಲ್ಲ. ನಮ್ಮ ಯೋಗ ಬಂದಾಗ ಅದು ಬರುತ್ತದೆ. ಆದರೆ ಬೇರೆಯವರಿಗೆ ಕಷ್ಟ ಕೊಡುವ ಕೀಳಾಗಿ ತೋರಿಸುವ. ಕೇಡು ಮಾಡುವ ಅಥವಾ ಮೇಲೆ ಏಳದಂತೆ ಮಾಡುವ ಭಾವನೆಯು ಎಲ್ಲಕ್ಕಿಂತ ಕೆಟ್ಟ ಭಾವನೆಯಾಗಿದೆ. ಇದಕ್ಕಿಂತ ಕೆಟ್ಟ ಭಾವನೆ ಮತ್ತೊಂದು ಆಗಲಾರದು.

ಒಂದು ಸಾರಿ ಒಬ್ಬ ರಾಜನು ತನ್ನ ಒಬ್ಬ ಸೇವಕನಲ್ಲಿ–ನೀನು ಒಂದು ಕೆಲಸ ಮಾಡಬೇಕು ಹಾಗೂ ಅದು ಬಹಳ ಅವಶ್ಯವಿದೆ ಎಂದು ಹೇಳಿದ ಒಂದು ವೇಳೆ ನೀನು ಅದನ್ನು ಮಾಡದಿದ್ದರೆ ಪ್ರಾಣ ದಂಡವಾಗಬಹುದು. ಹೀಗೆ ಮೊದಲಿನ ರಾಜರು ವಿಶೇಷ ಕಾರ್ಯ ಮಾಡಿಸಲು ಹೇಗೆ ಹೇಳುತ್ತಿದ್ದರು. ರಾಜನ ಸೇವಕನಿಗೆ–ಒಂದು ಕುರಿ ಇದೆ ಅದನ್ನು ತೂಕ ಮಾಡಿ ಕೊಡುತ್ತೇನೆ. ಆದರ ತೂಕ ಹೆಚ್ಚಾಗಬಾರದು ಹಾಗೂ ಅದಕ್ಕೆ ತಿನ್ನಿಸಲೂ ಏನೂ ಕೊರತೆಯಾಗಬಾರದು. ಚೆನ್ನಾಗಿ ತಿನ್ನಿಸಬೇಕು, ಕುಡಿಸಬೇಕು ಆದರೆ ಅದರ ಭಾರ ಹೆಚ್ಚಾಗಬಾರದು. ಇದನ್ನು ಗಮನದಲ್ಲಿಟ್ಟುಕೊಂಡು ಮಾಡುವುದೇ ಅವಶ್ಯವಾದ ಕಾರ್ಯ ಎಂದು ಹೇಳಿದನು. ರಾಜನ ಸೇವಕ ಒಳ್ಳೆಯ ಬುದ್ಧಿವಂತನಿದ್ದ, ಏನಾದರೂ ಉಪಾಯ ಮಾಡಿದರಾಯಿತೆಂದು ಯೋಚಿಸಿದ ಆಗಲಿ ಮಹಾರಾಜರೇ ಒಳ್ಳೆಯದು ಎಂದು ಹೇಳಿದ ಆತ ಕುರಿಯನ್ನು ಮನೆಗೆ ಒಯ್ದು ಬೆಳಿಗ್ಗೆಯಿಂದ ಸಂಜೆಯವರೆಗೆ ಚೆನ್ನಾಗಿ

ತಿನ್ನಿಸಿದ, ಅದು ತಿಂದು ತಿಂದು ದಪ್ಪವಾಗುತ್ತಿತ್ತು. ಸೇವಕನು ಒಳ್ಳೊಳ್ಳೆ ಹುಲ್ಲು–ಮೇವು ತರಕಾರಿ ಫಲ ಎಲ್ಲವನ್ನು ತಿನ್ನಿಸಿದಾಗ ಅದು ದಪ್ಪಗಾಯಿತು. ಆದರೆ ಇದರ ಭಾರ ಹೆಚ್ಚಾಗ ಬಾರದು ಮತ್ತೆ ಆದರೆ ಏನು ಮಾಡುವುದು? ಅದಕ್ಕೆ ಚಿಂತೆ ಮಾಡುವಂತೆ ಮಾಡಿದ. ಚಿಂತೆಯಿಂದ ಏನಾಗುವುದು ಗೊತ್ತೆ ಪ್ರಾಣಿಗೆ ಭಯವಾಗಿ ಬಿಡುತ್ತದೆ. ಆತಂಕ ಉಂಟಾಗಿ ಅದರ ರಕ್ತ ಸುಟ್ಟು ಹೋಗುತ್ತದೆ. ಆ ಸೇವಕ ಏನು ಮಾಡಿದ ಕುರಿಯ ಬಳಿ ಒಂದು ಪಂಜರದಲ್ಲಿ ಸಿಂಹವನ್ನಿಟ್ಟಿದ್ದ. ಸರಿ ಸಂಜೆಯ ಸಮಯ ಆ ಕುರಿಯ ಎರಡು ಕಿವಿಗಳನ್ನು ಹಿಡಿದು ಕರೆದೊಯ್ದು ಆ ಸಿಂಹದ ಮುಖವನ್ನು ತೋರಿಸುತ್ತಿದ್ದ ಹಾಗೂ ಕುರಿಗೆ ಜೋರಾಗಿ ಒಂದು ಹೊಡೆತ ಮಾಡುತ್ತಿದ್ದ ಸಾಕು ಇಷ್ಟೆ ಮಾಡಿದರೂ ಸಾಕಾಗಿತ್ತು ಕುರಿಗೆ ಈಗ ನನ್ನ ಪ್ರಾಣ ಹೋಗುತ್ತದೆ ಎಂಬ ಚಿಂತೆಯಾಗುತ್ತಿದ್ದಿತು. ಆದ್ದರಿಂದ ಅದರ ರಕ್ತ ಒಣಗುತ್ತಿತ್ತು. ಹೀಗೆಯೇ ಅನೇಕ ದಿನಗಳವರೆಗೆ ನಡೆಯಿತು. ಒಂದು ದಿನ ರಾಜನು ಸೇವಕನನ್ನು ರಾಜಮಹಲಿಗೆ ಕರೆಸಿದ ಹಾಗೂ ಏನಾಯಿತು? ಎಂದು ಅವನನ್ನು ಕೇಳಿದ. ನನ್ನ ಜರೂರಾದ ಕೆಲಸವನ್ನು ಮಾಡಿದೆಯಾ ಅಥವಾ ಇಲ್ಲವೋ? ಸೇವಕನು ಹಾ ಮಹಾರಾಜ, ತಾವು ಹೇಗೆ ಹೇಳಿದ್ದಿರಾ ಹಾಗೆಯೇ ಮಾಡುತ್ತಾ ಇದ್ದೇನೆ, ನೋಡಿಕೊಳ್ಳಿ, ನಾನು ಈಗ ತರುತ್ತಿದ್ದೇನೆ ಎಂದು ಹೇಳಿದ ಹಾಗೂ ಆತ ರಾಜನ ಸಮಕ್ಷಮಕ್ಕೇ ಕುರಿಯೊಂದಿಗೆ ಬಂದ, ಮಹಾರಾಜರೇ ಇಲ್ಲಿ ತಂದಿದ್ದೇನೆ ಇದನ್ನು ನೋಡಿರಿ. ರಾಜನು ಆ ಕುರಿಯನ್ನು ತೂಗಿಸಿದ ಸರಿಯಾಗಿ ಎಷ್ಟು ಭಾರ ನೀಡಲಾಗಿದ್ದಿತೋ ಅಷ್ಟೇ ಭಾರವಿದ್ದಿತು ಇದನ್ನು ನೋಡಿ ರಾಜನಿಗೆ ಆಶ್ಚರ್ಯವಾಯಿತು ಹಾಗೂ ಹೀಗೆ ಹೇಗೆ ಆಯಿತು? ಎಂದು ವಿಚಾರ ಮಾಡತೊಡಗಿದ.

ರಾಜನು ಸೇವಕನಿಂದ ಜಿಜ್ಞಾಸೆಯಿಂದ ಕೇಳಿಯೇ ಬಿಟ್ಟ–ನೀನು ಇದನ್ನು ಹೇಗೆ ಮಾಡಿದೆ? ಸೇವಕನು, ನಾನೇನು ಮಾಡಿದೆ ಮಹಾರಾಜ, ಹಾಗೆಯೇ ಆಯಿತು ಎಂದು ಹೇಳಿದ, ರಾಜನು ನೀನು ತುಂಬಾ ವಿವೇಕಿ ಇದ್ದಿಯಾ ಏನಾದರೂ ಉಪಾಯ ಮಾಡಿರಲೇ ಬೇಕು ಎಂದು ಹೇಳಿದ, ಸೇವಕನು–ಏನೂ ಇಲ್ಲ ಮಹಾರಾಜರೇ ಸ್ವಲ್ಪ ಚಿಂತೆ ಉತ್ಪನ್ನವಾಗುವಂತೆ ಮಾಡಿದೆ. ಇದೇ ಅದರ ಪರಿಣಾಮವಾಗಿದೆ–ಎಂದು ಹೇಳಿದ. ಇದರಿಂದ ವ್ಯಕ್ತಿ ಏನೆಲ್ಲವನ್ನು ಮಾಡುತ್ತಾನೆ, ಒಳ್ಳೆಯ ಸುಖವನ್ನು ಭೋಗಿಸುತ್ತಾನೆ. ಆದರೆ ಪರರ ಚಿಂತೆಯಲ್ಲಿ ಯಾವಾಗಲೂ ತನ್ನ ಜೀವನವನ್ನು ಹಾಳು ಮಾಡುತ್ತಾನೆ. ತನ್ನ ಚಿಂತೆ ಕಡಿಮೆ ಇರುತ್ತದೆ ಬೇರೆಯವರ ಚಿಂತೆ ಹೆಚ್ಚಾಗಿರುತ್ತದೆ. ಬೇರೆಯವರು ಮುಂದೆ ಹೋಗಬಾರದು ಎಂಬ ಮಾತ್ಸರ್ಯ ಭಾವವಿದೆ. ಈ ಚಿಂತೆ ಯಾರಿಗೆ ಹೆಚ್ಚು ಸತಾಯಿಸುತ್ತದೆಯೋ ಅವರು ಬೇರೆಯವರ ಚಿಂತೆಯಿಂದ ಒಣಗಿ ಹೋಗುತ್ತಾರೆ. ನಮ್ಮೆದುರಿನ ವ್ಯಕ್ತಿ ಒಂದು ವೇಳೆ ಮುಂದೆ ಬರುತ್ತಿದ್ದರೆ ಆತನನ್ನು ಕೆಳಗೆ ಬಿಳಿಸಲು ನಾವೇಕೆ ಹಿಂದಿರಬೇಕು, ಕೆಳಗಿಳಿಸುವುದು, ಕನಿಷ್ಠರೆಂದು ಇತರರನ್ನು ತೊರಿಸುವುದು ಈ ಭಾವನೆಯು ಬಾಧಕವಾಗುತ್ತಿರುತ್ತದೆ ಹಾಗೂ ವ್ಯಕ್ತಿ ಚಿಂತೆಗಳಲ್ಲಿ ಪಂಚೇಂದ್ರಿಯ ವಿಷಯಗಳ ಚಿಂತೆಯಲ್ಲಿ ಪರರ ಚಿಂತೆಗಳಲ್ಲಿ ತೊಡಗಿಸಿ ಕೊಂಡಿರುತ್ತಾನೆ. ಆದ್ದರಿಂದ ಪರಮಾನಂದ ಸ್ತೋತ್ರದಲ್ಲಿ ಆಚಾರ್ಯರು ಅತಿ ಸುಂದರ ಮಾತುಗಳನ್ನು ಹೇಳಿದ್ದಾರೆ.

**ಉತ್ತಮಾ ಸ್ವಾತ್ಮ ಚಿಂತಾ ಸ್ವಾತ್ ದೇಹ ಚಿಂತಾ ಚ ಮಧ್ಯಮಾ**
**ಅಧಮ ಕಾಮಚಿಂತಾ ಸ್ವಾತ್ ಪರಚಿಂತಾಧಮ್ಯಾ ಧಮಾ॥4॥**

**ಉತ್ತಮಾ ಸ್ವಾತ್ಮ ಚಿಂತಾಸ್ಯಾತ್**– ತನ್ನ ಆತ್ಮನ ಚಿಂತೆ ಮಾಡುವುದು ಉತ್ತಮ ಚಿಂತೆಯಾಗಿದೆ,

**ದೇಹ ಚಿಂತಾ ಚ ಮಧ್ಯಮಾ–** ತನ್ನ ಶರೀರದ ಚಿಂತೆ ಮಾಡುವುದು ಮಧ್ಯಮ ಚಿಂತೆಯಾಗಿದೆ, ಯಾಕೆಂದರೆ ಶರೀರವು ಧರ್ಮಕ್ಕಾಗಿ ಸಾಧನವಾಗಿದೆ. **ಅಧಮಾ ಕಾಮ ಚಿಂತಾ ಸ್ಯಾತ್–** ಕಾಮವಾಸನೆಯ ಚಿಂತೆ ಮಾಡುವುದು ಅಧಮ ಚಿಂತೆಯಾಗಿದೆ ಹಾಗೂ ಎಲ್ಲಕ್ಕಿಂತ ಕೆಟ್ಟ ಚಿಂತೆ ಯಾವುದು? ಅಧಮ ಎಂದರೆ ಪಾಪವಾಗುವುದು **ಪರಚಿಂತಾ ಧಮಾಧಮಾ** ಇಲ್ಲಿ ಧಮಾ ಧಮಾ ಎಂದು ಹೇಳಿದ್ದಾರೆ, ಅರ್ಥಾತ್ ಮಹಾಪಾಪದ ಚಿಂತೆಯಾಗಿದೆ–ಬೇರೆಯವರ ಚಿಂತೆ ಮಾಡುವುದು. ನಾವು ಬೇರೆಯವರ ಚಿಂತೆ ಮಾಡಬಾರದೇ, ಅನ್ಯರ ಚಿಂತೆ ಮಾಡುವುದನ್ನು ಬಿಟ್ಟು ಬಿಡಬೇಕೆ? ಎಲ್ಲ ಜನರ ಮನಸ್ಸಿನಲ್ಲಿ ಈ ಪ್ರಶ್ನೆಗಳು ಏಳಬಹುದು. ಹಾಗಲ್ಲ. ಅಲ್ಲ ಸಹೋದರರೇ, ನಾವು ಅಪೇಕ್ಷೆಯನ್ನು ತಿಳಿದುಕೊಳ್ಳಬೇಕು. ಒಂದು ವೇಳೆ ಬೇರೆಯವರನ್ನು ಧರ್ಮದಲ್ಲಿ ತರುವ ಚಿಂತೆ ಮಾಡುತ್ತಿದ್ದರೆ ಅದು ಕೆಟ್ಟದ್ದಲ್ಲ. ಅದನ್ನು ನಾವು ಚಿಂತೆ ಎನ್ನುವುದಿಲ್ಲ, ಭಾವನೆ ಎಂದು ಹೇಳುತ್ತೇವೆ. ಒಂದು ವೇಳೆ ಯಾರಾದರೂ ಧರ್ಮದಿಂದ ವಿಚಲಿತರಾದರೆ ಅಸ್ವಸ್ಥರಾದರೆ ಅವರ ಬಗ್ಗೆ ಸ್ವಲ್ಪ ಚಿಂತೆಯಾಗಿ ಬಿಡುತ್ತದೆ. ಇದು ಅವರನ್ನು ಧರ್ಮದ ಮಾರ್ಗದಲ್ಲಿ ತರುವ ಚಿಂತೆಯಾಗಿದೆ. ಅವರ ಧರ್ಮಧ್ಯಾನದಲ್ಲಿ ಸಹಯೋಗಿಯಾಗಿ ಮಾಡುವ ಚಿಂತೆಯಾಗಿದೆ. ಇದು ಭಾವನೆಯ ರೂಪವನ್ನು ತಾಳುತ್ತದೆ. ಅದು ನಮ್ಮ ಜೀವನದಲ್ಲಿ ಪಾಪದ ಕಾರಣವಾಗುವುದಿಲ್ಲ. ಆದರೆ ನಮ್ಮ ಜೀವನದಲ್ಲಿ ಪಾಪದ ಆಸ್ರವಕ್ಕೆ ಕಾರಣವಾಗುವ ಸಾಂಸಾರಿಕ ಚಿಂತೆಗಳು ಇಂತಹ ಚಿಂತೆಗಳು, ಪಾಪದ ಅಥವಾ ಮಹಾಪಾಪದ ಚಿಂತೆಗಳಾಗಿವೆ. ಇವುಗಳನ್ನು ಬಿಟ್ಟು ಬಿಡಬೇಕು. ಪರ ಚಿಂತೆಗಳಲ್ಲಿ ಸಿಲುಕಬಾರದು, ಯಾರಾದರೂ ಮುಂದೆ ಸಾಗುತ್ತಿದ್ದರೆ. ಅವರನ್ನು ನೋಡಿ ನಮ್ಮ ಮನಸ್ಸಿನಲ್ಲಿ ಬರುವ ದ್ವೇಷ ಪೂರ್ವಕ ವಿಕಲ್ಪಗಳು ಎಲ್ಲಕ್ಕಿಂತ ಕೆಟ್ಟವುಗಳಾಗಿವೆ. ಅವುಗಳಂತಹ ಕೆಟ್ಟ ವಿಕಲ್ಪಗಳು ಈ ಜಗತ್ತಿನಲ್ಲಿ ಬೇರೆ ಇಲ್ಲ ನಾವೆಲ್ಲಾ ಸದಾಕಾಲ ಒಂದೇ ಭಾವನೆಯನ್ನು ತಾಳಬೇಕು–

**ಎಲ್ಲ ಜೀವಗಳು ಸುಖವಾಗಿರಲಿ–ಯಾರು ಎಂದಿಗೂ ಗಾಬರಿಯಾಗದಿರಲಿ**
**ಬಿಡಿ ವೈರ, ಪಾಪ, ಅಭಿಮಾನ ಜಗದಲಿ–ನಿತ್ಯ ನೂತನ ಮಂಗಲ ಹಾಡಲಿ**

ಅಥವಾ

**ಸರ್ವೇ ಭವಂತು ಸುಖಿನಾ ಸರ್ವೇ ಸಂತು ನಿರಾಮಯಾ।**
**ಸರ್ವೇ ಭದ್ರಾಣು, ಪಶ್ಚಂತು ಕಶ್ಚಿದ್ ದುಃಖ ಭಾಕ್ ಭವೇತ್॥**

ಈ ಭಾವನೆಯನ್ನು ಯಾವಾಗಲೂ ಭಾವಿಸಿ ಇದರಲ್ಲಿಯೇ ಸಾರವಿದೆ ಮತ್ತೆ ಎಲ್ಲಿಯೂ ಸಾರವಿಲ್ಲ. ನಿಮ್ಮ ಕೆಲಸ ಮಾಡಿ, ನಿಮ್ಮ ಕೆಲಸ ಮಾಡಿದ ಮೇಲೆ ಇತರರಿಗೆ ಸಮಯ ಸಿಗುತ್ತದೆ. ಅವರ ಜೀವನದ ಉನ್ನತಿಗಾಗಿ, ಧಾರ್ಮಿಕ ಜೀವನದ ಉನ್ನತಿಗಾಗಿ ಚಿಂತನೆ ಮಾಡಿರಿ ಹಾಗೂ ಒಂದು ವೇಳೆ ಯಾರದಾದರೂ ಪುಣ್ಯದಿಂದ ವೈಭವ ಹೆಚ್ಚುತ್ತಿದ್ದರೆ ಎಂದಿಗೂ ಮಾತ್ಸರ್ಯದ ವಿಚಾರ ಮಾಡಬೇಡಿ. ಈ ವೈಭವ ಯಾಕೆ ಹೆಚ್ಚುತ್ತದೆ? ನಿಮ್ಮ ಪುಣ್ಯವಿದ್ದರೆ ಹೆಚ್ಚಾಗುತ್ತದೆ. ನೀವು ಇತರರದನ್ನು ಕಳೆಯಲು ಯೋಚಿಸಿದರೆ ಅವರದು ಕಡಿಮೆ–ಹೆಚ್ಚು ಆಗುವುದಿಲ್ಲ. ಪುಣ್ಯ ಪಾಪದಿಂದ ಎಲ್ಲವೂ ಆಗುತ್ತದೆ. ಪುಣ್ಯ ಪಾಪದ ವಿನಹ ಏನೂ ಆಗುವುದಿಲ್ಲ. ನಾವು ಧರ್ಮ ಮಾಡದಿದ್ದರೆ ಹಾಗೂ ಪುಣ್ಯ ಸಿಕ್ಕರೆ ನಮ್ಮ ಜೀವನ ಸುಖಮಯ ಆಗಲಿ ಎಂದರೆ ಆಗುವುದಿಲ್ಲ ಎಂದು ನೀವು ಯೋಚಿಸಿ ಗಳಿಕೆಯನ್ನು ನಾವೇ ಮಾಡಬೇಕಾಗುತ್ತದೆ. ಹೇಗೆ ನೀವು ಹಣದ ಗಳಿಕೆ ಮಾಡುತ್ತಿರಾ ಹಾಗೆಯೇ ಧರ್ಮದ ಗಳಿಕೆಯನ್ನು ಸಹ ನೀವೇ ಮಾಡಬೇಕಿದೆ. ನನಗೆ

ಯಾವುದಾದರೂ ವಿಘ್ನದ-ಬಾಧೆಗಳು ಬರುತ್ತಿದ್ದರೆ ಯಾವುದಾದರೂ ಗ್ರಹದ ಚಕ್ರ ಹತ್ತಿದರೆ, ಯಾವುದೋ ಗ್ರಹ ಸತಾಯಿಸುತ್ತದೆ ಎಂದು ಯೋಚಿಸಿದರೆ-ವಿಚಾರ ಮಾಡಿ ಗ್ರಹ ಯಾಕೆ ಸತಾಯಿಸುತ್ತದೆ ಸಹೋದರಾ ಅದು ಅದರ ಸುಖದಲ್ಲಿ ಲೀನವಾಗಿದೆ. ನಿನ್ನನ್ನು ಸತಾಯಿಸಲು ಯಾಕೆ ಬರುತ್ತದೆ? ನಿನ್ನೊಂದಿಗೆ ಅದರ ಸಂಬಂಧ ವೇನಿದೆ? ಪುಣ್ಯ ಪಾಪದ ವಿನಹ ಏನೂ ಆಗುವುದಿಲ್ಲ. ಯಾವುದೇ ಗ್ರಹ ಇತ್ಯಾದಿಗಳು ಯಾರಿಗೂ ಹತ್ತುವುದಿಲ್ಲ ಆದರೆ ನೀವು ಅವುಗಳ ಹಿಂದೆ ಓಡುತ್ತಿರಿ. ಗ್ರಹಗಳು ಸಮೇರು ಪರ್ವತವನ್ನು ಸುತ್ತುತ್ತವೆ, ಭಗವಂತರಿಗೆ ಸುತ್ತು ಹಾಕುತ್ತವೆ. ಗ್ರಹದ ಚಕ್ರದಲ್ಲಿ ಬಂದಿದ್ದೇವೆ ಎಂದು ಕೆಲವರು ಹೇಳುತ್ತಾರೆ ಮತ್ತೆ ಗ್ರಹ ನಿಮ್ಮ ಸುತ್ತಲು ಸುತ್ತುತ್ತದೆ ಹಾಗೂ ನೀವು ಹೆದರಿಕೊಂಡು ಅವರ ಸುತ್ತು ಹಾಕಲು ಶುರು ಮಾಡುತ್ತಿರಾ.

ನವಗ್ರಹ ಎಂದು ಹೇಳುತ್ತಾರೆ ಹಾಗೂ ನವಗ್ರಹ ಸುತ್ತುತ್ತವೆ. ಹೇಗೆ ಹತ್ತುತ್ತವೆ? ನಮ್ಮ ಪುಣ್ಯ ಪಾಪಗಳಿಂದಲೇ ಎಲ್ಲವೂ ಆಗುತ್ತದೆ. ಅವು ದೇವತೆಗಳಾಗಿವೆ, ಸುಖದಲ್ಲಿ ಲೀನರಾಗಿದ್ದಾರೆ. ಅವು ಈಗ ನಿಮ್ಮ ಬಳಿಗೆ ಬರುತ್ತವೆಯೇ ಜನರು ಹೇಳುತ್ತಾರೆ-ನವಗ್ರಹ ವಿಧಾನ ಮಾಡಿಸಿ ಎಲ್ಲವೂ ಸರಿಯಾಗುತ್ತದೆ. ಒಂದು ದಿನ ಈ ನವಗ್ರಹ ವಿಧಾನ ಹೇಗೆ ಬಂದಿತು ಎಂಬ ಚಿಂತನೆ ಬಂದಿತು, ಹೀಗಿದೆ ಹಿಂದುಗಳಲ್ಲಿ ಒಂಬತ್ತು ಗ್ರಹ ಇತ್ಯಾದಿ ಪೂಜಿಸುತ್ತಾರೆ, ಅದರಿಂದ ಜೈನರು ಸಹ ಆಕರ್ಷಿತರಾಗಿರಬಹುದು. ಆಗ ಯಾರೋ ನವಗ್ರಹ ವಿಧಾನ ಎಂಬ ಹೆಸರನ್ನಿಟ್ಟರು ಹಾಗೂ ನವಗ್ರಹ ವಿಧಾನದಲ್ಲಿ ತೀರ್ಥಂಕರರ ಪೂಜೆಯನ್ನು ಬರೆದರು. ತೀರ್ಥಂಕರರ ಪೂಜೆ ಮಾಡಲಾಗುತ್ತದೆ ಆದರೆ ನವಗ್ರಹ ವಿಧಾನ ಕೇವಲ ಹೇಳುವುದರಿಂದ ನವಗ್ರಹಗಳಿಗೆ ಆದರ-ಸನ್ಮಾನ ನೀಡಲಾಗುತ್ತಿದೆ ಅಥವಾ ಅವುಗಳಿಂದ ಯಾವುದೋ ವ್ಯಕ್ತಿ ಭಯಭೀತನಾಗಿರ ಬೇಕೆಂದು ತೋರುತ್ತದೆ. ನವಗ್ರಹ ಪೂಜೆಯಲ್ಲಿ ಒಂಬತ್ತು ತೀರ್ಥಂಕರರನ್ನು ತೆಗೆದು ಕೊಳ್ಳಲಾಗಿದೆ. ಯಾವ-ಯಾವ ತೀರ್ಥಂಕರರಿದ್ದಾರೆಂದು ನಿಮಗೆ ತಿಳಿದಿದಿಯೇ? ವಿಚಾರ ಮಾಡಿ ಒಂಬತ್ತೇ ತೀರ್ಥಂಕರರನ್ನು ಯಾಕೆ ತೆಗೆದುಕೊಳ್ಳಲಾಗಿದೆ. ಆ 24 ತೀರ್ಥಂಕರರುಗಳಲ್ಲಿ 9ನ್ನು ತೆಗೆದುಕೊಂಡರು ಉಳಿದವರನ್ನು ಬಿಟ್ಟರು. ಹೀಗೆ ಯಾಕೆ? 9 ತೀರ್ಥಂಕರರುಗಳಲ್ಲಿ ಹೆಚ್ಚಿನ ಶಕ್ತಿ ಇದೆಯಾ, ಉಳಿದ ತೀರ್ಥಂಕರರುಗಳಲ್ಲಿ ಶಕ್ತಿ ಇಲ್ಲವೇ? ಅನೇಕ ಕಡೆಗಳಲ್ಲಿ ಒಂದೊಂದು ಗ್ರಹಕ್ಕಾಗಿ ಒಂದೊಂದು ಮೂರ್ತಿಯನ್ನು ಸ್ಥಾಪಿಸಿದ್ದಾರೆ. ನಮ್ಮಲ್ಲಿ 24 ತೀರ್ಥಂಕರರ ವಿಧಾನವಿರುವಾಗ ಅದನ್ನೇ ಮಾಡಿ ಅದರಲ್ಲಿ 24 ತೀರ್ಥಂಕರರ ಎಲ್ಲ ವಿಷಯಗಳು ಬರುತ್ತವೆ ಹೌದು ಅದರಲ್ಲಿ ಗ್ರಹಗಳ ಹೆಸರು ಇಲ್ಲ. ನೀವು ಶಾಂತಿವಿಧಾನ ಮಾಡುತ್ತಿರಾ ಅದರಲ್ಲಿ ನವಗ್ರಹಗಳಷ್ಟೆ ಯಾಕೆ ಭವನತ್ರಿಕದಲ್ಲಿಯ ಪೂರ್ಣ ಜ್ಯೋತಿಷ್ಯ ಲೋಕ, ಭವನವಾಸಿ, ವ್ಯಂತರ ಮತ್ತು ಕಲ್ಪವಾಸಿ ದೇವತೆಗಳೆಲ್ಲರೂ ಒಟ್ಟಿಗೆ ಈ ಮೂರು ಲೋಕದಲ್ಲಿ ಎಷ್ಟು ದೇವರುಗಳಿದ್ದಾರೆ. ಎಲ್ಲರನ್ನೂ ಕರೆಯಲಾಗುತ್ತದೆ. ಎಲ್ಲರೂ ಬಂದು ನಮ್ಮ ಜೊತೆಯಲ್ಲಿ ಭಗವಂತರ ಪೂಜೆ ಮಾಡುತ್ತಾರೆ ಮತ್ತೆ ಯಾವ ದೇವ ಉಳಿದರು? ಇಂತಹ ವಿಧಾನ ಯಾಕೆ ಮಾಡುವುದಿಲ್ಲ? ಮಾಡುತ್ತಾರೆ. ಇವುಗಳನ್ನು ಎಲ್ಲರೂ ಮಾಡುತ್ತಾರೆ. ಅದರ ಅಪೇಕ್ಷೆಯಿಂದ ಇದನ್ನು ಮಾಡಬೇಕು. ಕೇವಲ ಭವನತ್ರಿಕ ಕ್ರಿಯಾ ಯಾಕೆ ಮಾಡಬೇಕು? ಅಲ್ಲಿಯಂತೂ ಮಿಥ್ಯಾತ್ವದೊಂದಿಗೆ ಹುಟ್ಟುತ್ತಾರೆ. ನಮ್ಮಲ್ಲಿ ಸಮ್ಯಾಗ್ ದೃಷ್ಟಿಗಳು ಅವುಗಳಲ್ಲಿ ಎಂದಿಗೂ ಹೋಗುವುದಿಲ್ಲ, ಅಂದರೆ ಭವನತ್ರಿಕದಲ್ಲಿ ಸಮ್ಯಗ್ ದೃಷ್ಟಿಗಳು ಉತ್ಪನ್ನರಾಗುವುದಿಲ್ಲ. ಅವರಂತೂ ವೈಮಾನಿಕ ದೇವರಲ್ಲಿ ಉತ್ಪನ್ನರಾಗುತ್ತಾರೆ. ಎಷ್ಟು ದೇವಗಳ ನಿವಾಸಗಳಿವೆಯೋ, ಅವರ ಭವನಗಳಿವೆ, ಅಥವಾ ಜ್ಯೋತಿಷ ಮಂಡಲವಿದೆ, ಎಲ್ಲೆಡೆ ನಮ್ಮ ಭಗವಂತರ ಮನೋಹರ

ಮಂದಿರಗಳಿವೆ, ಜಿನಾಲಯಗಳಿವೆ. ಮೇಲೆ ಸ್ವರ್ಗಗಳಲ್ಲಿ ಎಲ್ಲೆಡೆ ಜಿನಾಲಯಗಳಿವೆ. ಎಂದರೆ ನಾವು ಜಿನಾಲಯ ಹಾಗೂ ಅವುಗಳಲ್ಲಿ ಪ್ರತಿಷ್ಠಿತ ಭಗವಂತರ ಪೂಜೆ ಮಾಡುತ್ತಿದ್ದೇವೆ. ಅಥವಾ ಇವರ ಪೂಜೆ ಮಾಡುತ್ತಾ ಪಂಚ ಮಂತ್ರ ಹೇಳುತ್ತೇವೆ. ಅವುಗಳಲ್ಲಿ ಎಲ್ಲವೂ ಬಂದಿದೆ. ಣಮೋಕಾರ ಮಂತ್ರದಲ್ಲಿ ಎಲ್ಲರಿಗೂ ನಮಸ್ಕಾರವಾಯಿತು. ಜನರು ಪೂಜೆ ಮಾಡುವಾಗ ಅದರಲ್ಲಿ ಕೃತ್ರಿಮಾಕೃತ್ರಿಮ ಜಿನಾಲಯಗಳ ಅರ್ಘ್ಯ ಬರುತ್ತದೆ. ಎಲ್ಲ ಜಿನಾಲಯಗಳು ಅದರಲ್ಲಿ ಬಂದೇ ಇವೆ. ಜನರು ಪ್ರತ್ಯೇಕವಾಗಿ ಗ್ರಹಗಳ ಹೆಸರನ್ನ ಯಾಕೆ ತೆಗೆದುಕೊಳ್ಳುತ್ತಾರೆ? ಹಾ! ಅವುಗಳಲ್ಲಿರುವ ಜಿನಾಲಯಗಳು ಅವುಗಳನ್ನು ಪೂಜಿಸುವುದರಿಂದ ಎಲ್ಲ ದೇವಗಳು ಪ್ರಸನ್ನವಾಗುತ್ತಿರಲೇ ಬೇಕು ನಾವು ಈ ಮಾತನ್ನು ತಿಳಿಯಬೇಕು.

ಯಾರು ಯಾವುದೋ ಒಬ್ಬೊಬ್ಬ ತೀರ್ಥಂಕರರಲ್ಲಿ ಒಂದೊಂದು ಗ್ರಹವನ್ನು ನಿಗದಿ ಮಾಡಿದ್ದಾರೆ ಅಥವಾ ಒಂದೊಂದು ಗ್ರಹಕ್ಕೆ ಒಬ್ಬೊಬ್ಬ ತೀರ್ಥಂಕರರನ್ನು ನಿಗದಿ ಮಾಡಿದ್ದಾರೆ. ಅವರಿಗೆ ನನ್ನ ಪ್ರಶ್ನೆ ಎಂದರೆ ತಾವು ಯಾವ ತೀರ್ಥಂಕರರನ್ನು ನಿಗದಿ ಪಡಿಸಿದ್ದಿರಾ ಅದೇ ತೀರ್ಥಂಕರರು ಆಯಾ ಗ್ರಹಗಳಿಗೆ ಇದ್ದಾರೇನು? ವಿಚಾರ ಮಾಡಿ ನೋಡಿ ಒಳ್ಳೆಯದು; ಸೂರ್ಯ–ಚಂದ್ರ ಇತ್ಯಾದಿ ಏನಿದ್ದಾರೆ ಇದೊಂದು ಅಕೃತ್ರಿಮ ವ್ಯವಸ್ಥೆ ಇದೆ, ಈ ವ್ಯವಸ್ಥೆ ಬದಲಾಗುವುದಿಲ್ಲ. ಆದರೆ ತೀರ್ಥಂಕರರ ಹೆಸರುಗಳು ಬದಲಾಗುತ್ತಿವಲ್ಲ ಆಗ ಈ ಗ್ರಹಗಳಿಗೆ ತೀರ್ಥಂಕರರು(ಯಾರು?). ಇವರು ತೀರ್ಥಂಕರರೇ ಆಗಿರಲಿಲ್ಲ. ಆಗ ಯಾವ ತೀರ್ಥಂಕರರಿದ್ದರು. ಇದನ್ನು ಯಾರು ತಿಳಿಸುತ್ತಾರೆ? ಸಹೋದರಾ ನೋಡು ಹೀಗಿದೆ–ಇದು ಇಂದಿನ ಕಲ್ಪನೆಯಾಗಿದೆ–ಇದು ಶಾಶ್ವತ ಕಲ್ಪನೆಯಲ್ಲ ಆದ್ದರಿಂದ ಇದು ಒಂದು ಪ್ರಕಾರದ ಮಿಥ್ಯಾ ಇದೆ. ಹೀಗೆ ಇಂತಹ ಗ್ರಹಗಳ ಮೂರ್ತಿ ಇತ್ಯಾದಿ ಜನರು ನಿರ್ಮಿಸಿದ್ದಾರೆ, ಎಲ್ಲಿಯೋ ಅದೇ ಪ್ರಕಾರ ನಿಮ್ಮ ಬುದ್ಧಿಯಲ್ಲಿ ಬರದಿರಲು ಹಾಗೂ ನೀವು ಹೀಗೆ ಮಾಡುವುದು ಯೋಚಿಸಿ ಹೇಳುತ್ತಿದ್ದೇನೆ. ಇದೆಲ್ಲಾ ಸರಿಯಲ್ಲ. ನೀವು ಚೌಬೀಸ ತೀರ್ಥಂಕರರ ವಿಧಾನ ಮಾಡಿ, ಇನ್ನೂ ಅನೇಕ ವಿಧಾನಗಳಿವೆ ಅವುಗಳನ್ನು ಮಾಡಿ. ನವಗ್ರಹದ ಹೆಸರನ್ನು ಹೇಳಿದ ಕೂಡಲೇ ನಿಮಗೇನೋ ಭಯವಿದೆ ಎಂದು ಅನಿಸುತ್ತದೆ. ನೀವು ಅವುಗಳ ಪ್ರಭಾವಕ್ಕೊಳಪಟ್ಟಿದ್ದಿರಾ ಹಾಗೂ ಅವುಗಳ ಸುತ್ತು ಹೊಡೆಯಲು ಯೋಚಿಸುತ್ತಿದ್ದಿರೆಂದು ತಿಳಿದು ಬರುತ್ತದೆ. ನೀವು ಕರ್ಮಸಿದ್ಧಾಂತದಿಂದ ದೂರ ಹೋಗಿ ಬಿಟ್ಟಿದ್ದಿರಾ. ಇರುವ ಸಂಗತಿ ಇಷ್ಟೆ ಮತ್ತೇನೂ ಇಲ್ಲ.

ಕರ್ಮಸಿದ್ಧಾಂತದ ಮೇಲೆ ಶ್ರದ್ಧೆ ಇರದಿರುವವರು ಸಮ್ಯಗ್ ದೃಷ್ಟಿಯಾಗಲು ಸಾಧ್ಯವಿಲ್ಲ. ತಾವು ಸಮ್ಯಗ್ ದೃಷ್ಟಿಯಾಗಿದ್ದರೆ ವೀತರಾಗ ಪ್ರಭುವಿನೊಂದಿಗೆ ಸಂಬಂಧವಿರುವ ಪೂಜಾ ವಿಧಾನ ಮಾಡಿರಿ. ನಾವು ಅವುಗಳ ಹೆಸರು ತೆಗೆದುಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಶಾಂತಿ ವಿಧಾನದಲ್ಲಿ ಹೇಳಿದೆ. ಅವರೆಲ್ಲರೂ ಅದರಲ್ಲಿ ಬಂದಿದ್ದಾರೆ ಹಾಗೂ ಪೂಜೆಯನ್ನು ಮಾಡಿದ್ದಾರೆ. ಇದರಲ್ಲಿ ಯಾವ ಬಾಧೆಯೂ ಇಲ್ಲ. ಪಂಚ 'ಕಲ್ಯಾಣಗಳಲ್ಲಿ ಆಹ್ವಾನಿಸುತ್ತಾರೆ, ಆದರೆ ನವಗ್ರಹವಿಧಾನ ಈ ಶಬ್ದ ಪುಂಜವೇ ಇದು ನವಗ್ರಹ ಪೂಜೆ ಎಂದು ತಿಳಿಸುತ್ತದೆ. ಅದರ ಮೇಲೆ ತೀರ್ಥಂಕರ ಪೂಜಾ ಎಂದು ಯಾಕೆ ಬರಿಸಲಿಲ್ಲ? ಈ ಹೆಸರೇ ಗೊಂದಲಮಯವಾಗಿದೆ. ಆದ್ದರಿಂದ ತಪ್ಪು ವಸ್ತುವಿನ ಸಮರ್ಥನೆಯಾಗುತ್ತದೆ ಜನರಿಗೆ ಈ ಪ್ರಕಾರದ ಸಂದೇಹಗಳು ಬರುತ್ತದೆ. ಆದ್ದರಿಂದ ಸ್ವಲ್ಪ ಈ ವಿಷಯ ಚರ್ಚಿಸಿದೆವು. ಸಾಕು ಮನಸ್ಸಿನ ಪವಿತ್ರತೆಯನ್ನು ತಿಳಿಯಿರಿ. ಯಾವ ಗ್ರಹವೂ ಏನನ್ನೂ ಮಾಡುವುದಿಲ್ಲ. ನಮ್ಮ ಕರ್ಮದಿಂದಲೇ ಎಲ್ಲವೂ ಆಗುತ್ತದೆ. ನಮ್ಮ ಚಿಂತೆಯನ್ನು

ನಾವು ಮಾಡೋಣ, ಪರರ ಚಿಂತೆಯನ್ನೇ ನಾವು ಹೆಚ್ಚಾಗಿ ಮಾಡುತ್ತೇವೆ. ಪರದಲ್ಲಿ ಸಿಕ್ಕಿ ಹಾಕಿಕೊಂಡಿರುತ್ತೇವೆ. ಪರಚಿಂತೆಯು ಮಹಾ ಪಾಪದ ಚಿಂತೆಯಾಗಿದೆ. ಮನಸ್ಸಿನಿಂದಲೇ ಬಹಳಷ್ಟು ಪಾಪಗಳಾಗುತ್ತಿವೆ. ಆದ್ದರಿಂದ ಮನಸ್ಸನನ್ನು ಪವಿತ್ರಗೊಳಿಸುವ ಪ್ರಯತ್ನ ಮಾಡಿರಿ ಇಲ್ಲವಾದಲ್ಲಿ ತಿಮಿ ತಿಮಿಂಗಿಲಾದಿಕ ಮೀನು, ತಂದುಲ ಮೀನಿನಂತಾಗುತ್ತದೆ. ನಾವು ಕೆಟ್ಟದ್ದನ್ನು ಯೋಚಿಸುತ್ತಿದ್ದರೆ ನಮ್ಮ ಹಾನಿಯೇ ಆಗುತ್ತದೆ, ಈ ಚಿಂತೆಗಳಿಂದ ನಾವು ಒಣಗಿ ಹೋಗಿ ಕೋಲಿನಂತಾಗಿ ಬಿಡುತ್ತೇವೆ. ಯಾಕೆಂದರೆ.

**ಚಿಂತೆಯು ಚಿತಾ ಸಮಾನವಿದೆ, ಬಿಂದು ಮಾತ್ರದ ಭೇದ।**
**ಒಂದು ನಿರ್ಜೀವವ ಸುಟ್ಟರೆ, ಇನ್ನೊಂದು ಜೀವಸಮೇತ॥**

ಚಿಂತೆಯು ಚಿತೆಗೆ ಸಮಾನವಾಗಿದೆ. ಒಂದು ನಿರ್ಜಿವವನ್ನು ಸುಡುತ್ತದೆ ಹಾಗೂ ಒಂದು ಜೀವ ಸಹಿತ ಸುಡುತ್ತದೆ. ಯಾವುದು ದೊಡ್ಡದು? ನೀವೇ ಹೇಳಿ. ಚಿತೆಯು ನಿರ್ಜೀವವನ್ನು ಸುಡುತ್ತದೆ ಅದು ದೊಡ್ಡದೆ; ಅಥವಾ ಸಜೀವವನ್ನು ಸುಡುವುದು ಚಿಂತೆ ದೊಡ್ಡದೇ? ಸಹೋದರಾ ಚಿಂತೆ ದೊಡ್ಡವಿದೆ. ಸರಿ ಚಿಂತೆಯನ್ನು ಬಿಡಿ ಯಾಕೆಂದರೆ ನಾವು ಯಾವಾಗಲೂ ಈ ಚಿಂತೆಗಳಲ್ಲಿಯೇ ಸಿಲುಕಿ ನಮ್ಮ ಧರ್ಮದ ಹಾನಿ ಮಡುತ್ತಿದ್ದೇವೆ ಹಾಗೂ ಜನರನ್ನು ಯಾವಾಗಲೂ ಆತಂಕದಲ್ಲಿರುವಂತೆ ಮಾಡುತ್ತಿದ್ದೇವೆ ಪರದ ಆತಂಕವೇ ಹೆಚ್ಚಾಗಿದೆ. ನಮ್ಮ ಹಿತ ಕಡಿಮೆ ಇದೆ.

ವಚನದ ಸಂಯಮ ಅಂದರೆ ಮಾತುಗಳ ಮೇಲೆ ಸಂಯಮವಿರಲಿ. ವಚನದ ಸಂಯಮ ಹೇಗೆ ಮಾಡುವುದು. ನಾವು ಏನು ಹೇಳುತ್ತೇವೆ. ಆ ವಚನಗಳ ಪ್ರಭಾವ ನಮ್ಮ ಮೇಲಾಗುತ್ತದೆ. ಹೇಗೆ ಹೇಳುತ್ತೇವೆ? ವಚನಗಳ ಪ್ರಭಾವ ಹೇಗೆ ಆಗಿರುತ್ತದೆ. ಯಾರ ಮೇಲೆ ಏನು ಪ್ರಭಾವವಾಗುತ್ತದೆ? ಹಾಗೂ ಅದರ ಮಾಧ್ಯಮದಿಂದ ಏನು ಸಂಭವಿಸುತ್ತದೆ? ನಮ್ಮ ಹಾನಿ ಎಷ್ಟಿದೆ. ಪರರ ಹಾನಿ ಎಷ್ಟಿದೆ, ನಮ್ಮ ಲಾಭ ಎಷ್ಟಿದೆ? ಎಲ್ಲವನ್ನೂ ವಿಚಾರ ಮಾಡಿರಿ. ಜನರು ಯಾವಾಗಲೋ ಏನೋ ಹೇಳಿ ಬಿಡುತ್ತಾರೆ ಹಾಗೂ ಅದರ ನಂತರ ಪಶ್ಚಾತ್ತಾಪ ಪಡುತ್ತಾರೆ. ಇನ್ನು ಕೆಲವು ಜನ ಪಶ್ಚಾತ್ತಾಪವನ್ನು ಪಡುವುದಿಲ್ಲ. ಅವರಿಗೆ ಏನೂ ಅನಿಸುವುದೇ ಇಲ್ಲ. ಅವರು ಎಲ್ಲವೂ ಸರಿಯಾಗಿಯೇ ಇದೆ ಎಂದು ತಿಳಿಯುತ್ತಾರೆ. ಇವತ್ತಿನ ಜಗತ್ತು ಹಾಗೆಯೇ ಇದೆ. ನಮಗೆ ಹಾಗೆಯೇ ಬದುಕಬೇಕಾಗಿದೆ ಹಾಗೂ ಅವರಿಗೆ ಧರ್ಮದ ಮೇಲೆ ವಿಶ್ವಾಸವೇ ಇಲ್ಲ ಹಾಗೆಯೇ ಜೀವನ ನಡೆಸುತ್ತಾರೆ.

ನಾವು ನಮ್ಮ ಮಾತುಗಳ ಮೇಲೆ ಸಂಯಮವಿಡದಿದ್ದರೆ ಒಂದು ದಿನ ನಮ್ಮ ಹಾನಿಯಾಗುತ್ತಿದೆ. ನಾವು ಕಷ್ಟದ ಆಳದಲ್ಲಿ ಬಿದ್ದು ನಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತೇವೆ. ಯಾವ ಸಮಯ ನಾವು ಮಾತನಾಡ ಬಾರದು? ಎಷ್ಟು ಕಾಲ ನಾವು ಮೌನವಿರಬೇಕು. ಮೌನದ ಬಹಳಷ್ಟು ಸ್ಥಾನಗಳನ್ನು ಹೇಳಿದ್ದಾರೆ–ಆಹಾರದ ಸಮಯ ಮೌನದಿಂದಿರಬೇಕು. ಭಗವಂತನ ಭಕ್ತಿ ಸಮಯದಲ್ಲಿ ಬೇರೆಯವರೊಂದಿಗೆ ಮಾತನಾಡಬಾರದು, ಮಲಗಿರುವಾಗಲೂ ಮಾತನಾಡಬಾರದು ಮತ್ತು ನಿವೃತ್ತಿಗೆ(ವಿಶ್ರಾಂತಿಗೆ) ತೆರಳಿದಾಗ ಮೌನವಾಗಿರಬೇಕು ಹೆಸರು ಹೇಳಲಾಗದ ಇನ್ನೂ ಎಷ್ಟೋ ಸ್ಥಾನಗಳಿವೆ ಆ ಸ್ಥಾನಗಳಲ್ಲಿಯೂ ಸಹ ಮೌನವಾಗಿರಬೇಕು. ಇದರ ಜೊತೆಗೆ ಯಾರಾದರೂ ಯಾರದೋ ನಿಂದೆ ಮಾಡುತ್ತಿದ್ದರೆ ಆಗ ಅವರು ನಿಮ್ಮ ಸಮರ್ಥನೆಯನ್ನು ಬಯಸುತ್ತಾರೆ. ಇಂತಹ ನಿಂದನೆಯ ಸಮಯಗಳಲ್ಲಿ ಮೌನರಾಗಿದ್ದರೆ ಒಳ್ಳೆಯದು ಲೌಕಿಕದಲ್ಲಿ ಇದು ಬಹಳ

ನಡೆಯುತ್ತಿರುತ್ತದೆ. ನಾವು ಯಾರ್ಯಾರಿಗೆ ಏನು ಹೇಳುವುದು ಆದರೆ ಇಲ್ಲಿ ಸಂಯಮ ಧರ್ಮದ ವರ್ಣನೆ ನಡೆದಿದೆ. ಎಲ್ಲಿಯೂ ಅಸಂಯಮದ ಸಮರ್ಥನೆ ಆಗದಿರಲಿ.

ಇಂದು ಜೀವನದಲ್ಲಿ ಸಂಯಮ ಪಾಲಿಸುತ್ತೇವೆಯೋ ಅಥವಾ ಇಲ್ಲವೋ ಕಡಿಮೆ ಕಡಿಮೆ ಎಂದರೆ ಈ ಸಭೆಯಲ್ಲಿ ಕುಳಿತಿರುವಾಗ ಕೇಳುತ್ತಲಾದರೂ ಇದ್ದೇವೆ, ಇದು ಧರ್ಮ ಎಂಬ ಶ್ರದ್ಧೆಯಾದರೂ ಇದೆ, ಇಷ್ಟೇ ಧರ್ಮವಾಯಿತಲ್ಲ ಎನ್ನೋಣ ಮತ್ತೇನು? ಮತ್ತು ಎಲ್ಲರೂ ಪಾಲಿಸಿದರೆ ಎಲ್ಲರ ಜೀವನವೂ ಮಹಾನ್ ಆಗುತ್ತದೆ. ಇಷ್ಟು ಜನರಲ್ಲಿಯೇ ಸ್ವಲ್ಪ ಜನರಾದರೂ ಪಾಲಿಸಿದರೆ ಅವರ ಜೀವನ ಉನ್ನತವಾಗಿ ಬಿಡುತ್ತದೆ. ಅವರನ್ನು ನೋಡಿ ಇನ್ನೂ ಕೆಲವರು ಈ ಮಾರ್ಗದ ಮೇಲೆ ಬರುತ್ತಾರೆ. ನಾವು ಎಲ್ಲರ ಚಿಂತೆಯನ್ನು ಮಾಡುವುದಿಲ್ಲ. ಮೊದಲನೆಯದಾಗಿ ನಮ್ಮ ಚಿಂತೆ ಮಾಡುತ್ತೇವೆ. ನಂತರ ಯಾರು ಧರ್ಮದ ಸ್ವೀಕಾರ ಮಾಡಲು ಬಯಸುತ್ತಾರೆ ಅವರಿಗೆ ತಿಳಿಸುತ್ತೇವೆ ಹಾಗೂ ಸ್ವೀಕರಿಸಲು ಬಯಸದೇ ಇದ್ದವರಿಗೂ ಎಲ್ಲರಿಗೂ ತಿಳಿಸಿ ಬಿಡುತ್ತೇವೆ ನಂತರ ಅವರ ಅವರ ಭಾಗ್ಯದ ಸಂಗತಿ. ಅಂಗಡಿಗೆ ಯಾರಾದರೂ ಬಂದರೆ ಸಾಮಾನನ್ನು ತೋರಿಸಬೇಕಾಗುತ್ತದೆ. ಖರೀದಿಸಲಿ ಖರೀದಿಸದಿರಲಿ ಎನ್ನುವ ಭರವಸೆ ಇಲ್ಲ. ಒಂದು ವೇಳೆ ಖರೀದಿಸಿದರೆ ಒಳ್ಳೆಯದು ಇಲ್ಲವಾದಲ್ಲಿ ನಮ್ಮ ವಸ್ತು ನಮ್ಮ ಕಡೆಗೆ ಹಾಗೂ ಅವರದು ಅವರ ಬಳಿ. ಒಂದು ದೃಷ್ಟಾಂತವಿದೆ ಬಹುಶ: ಕೆಲವರು ಕೇಳಿರಲೂ ಬಹುದು ಪ್ರಸಂಗಾನುಸಾರ ಹೇಳುತ್ತಿದ್ದೇನೆ–

ಒಂದೂರಿನ ಒಂದು ಕೆರೆಯಲ್ಲಿ ಬಹಳ ಒಳ್ಳೆಯ ನೀರು ಇದ್ದಿತು. ಅಲ್ಲಿಗೆ ಬೇರೆ ಸ್ಥಾನಗಳಿಂದ ಹಂಸ ಪಕ್ಷಿಗಳು ಬರುತ್ತಿದ್ದವು, ಒಳ್ಳೆಯ ಸಿಹಿನೀರನ್ನು ಕುಡಿಯುತ್ತಿದ್ದವು ಹಾಗೂ ಹೊರಟು ಹೋಗುತ್ತಿದ್ದವು. ಅದೇ ಕೆರೆಯಲ್ಲಿ ಇನ್ನೊಂದು ಪ್ರಾಣಿ ಇದ್ದಿತು; ಆಮೆ. ಅದರೊಂದಿಗೆ ಅವುಗಳ ಉತ್ತಮ ಸ್ನೇಹವಾಯಿತು. ಅನೇಕ ದಿನಗಳ ಕಾಲ ಅವುಗಳ ಸ್ನೇಹವಿದ್ದಿತು. ನೋಡಿ ಸಹೋದರರೇ ಲೋಕಾಚಾರದಲ್ಲಿ ಎಲ್ಲಿಯವರೆಗೆ ಬರುತ್ತಾ ಇರುತ್ತವೆಯೋ ಅಲ್ಲಿಯವರೆಗೆ ಮಿತ್ರತೆ ಇರುತ್ತದೆ. ಮತ್ತೆ ನಂತರವಂತೂ ಎಲ್ಲವೂ ಮರೆತು ಹೋಗುತ್ತದೆ. ಒಂದು ಸಾರಿ ಕೆರೆಯ ನೀರು ಬೇಸಿಗೆಯ ಕಾರಣ ಮೆಲ್ಲ-ಮೆಲ್ಲನೆ ಒಣಗಲು ತೊಡಗಿದಾಗ ಆ ಹಂಸಗಳು ಹಾರಿ ಬೇರೆ ಕಡೆಗೆ ಹೊರಟು ಹೋದವು ಆದರೆ ಆ ಆಮೆ ಎಲ್ಲಿಗೆ ಹೋದಿತು, ಅದು ಅಲ್ಲಿಯೇ ಅದೇ ಕೆರೆಯಲ್ಲಿಯೇ ಇದ್ದಿತು. ನೀರು ಸಹ ಈಗ ಕಡಿಮೆಯಾಯಿತು. ಆಮೆಯ ಗತಿ ಏನು ಎಂದು ಆ ಹಂಸಗಳಿಗೆ ಆತಂಕವಾಯಿತು. ಅವುಗಳಿಗೆ ಅದರ ಮೇಲೆ ದಯೆ ಬಂದಿತು ಅವು ವಿಚಾರ ಮಾಡತೊಡಗಿದವು– ನೋಡಿ ನಾವೇನೋ ದೂರ ದೂರ ಹಾರುತ್ತಾ ಸಾಗುತ್ತೇವೆ ಹಾಗೂ ಅಲ್ಲಿಗೆ ಹೋಗಿ ತಿನ್ನುತ್ತೇವೆ. ಕುಡಿಯುತ್ತೇವೆ ಯಾಕೆ ಈ ಪ್ರಾಣಿಯನ್ನು ನಮ್ಮ ಜೊತೆಗೆ ಕರೆದೊಯ್ಯಬಾರದು. ಇದರ ಜೀವನವು ಸುರಕ್ಷಿತವಾಗಿರುತ್ತದೆ. ಹಾಗೂ ನಮ್ಮ ಮಿತ್ರತೆಯೂ ಮುಂದುವರೆಯುತ್ತದೆ ಎಂದು ಚಿಂತಿಸಿದವು.

ನೋಡಿ ಸಹೋದರರೇ ಬಹಳ ಸಂಯಮದ ಮಾತಿದೆ, ಸಂಯಮದಿಂದಲೇ ನಾವು ಸುಖ ಪಡೆಯುತ್ತೇವೆ ಇಲ್ಲವಾದಲ್ಲಿ ಅಸಂಯಮ ಬಂದರೆ ಅದರಿಂದಾಗಿ ಮಧ್ಯದಲ್ಲಿಯೇ ನಾವು ದು:ಖಿಯಾಗುತ್ತೇವೆ ಹಾಗಾದರೆ ವಿಚಾರ ಮಾಡಿ ಹಂಸಗಳು ಆಮೆಗೆ-ಸಹೋದರಾ ನಮ್ಮ ಜೊತೆಗೆ ಹೊರಡುವೆಯಾ, ಅಲ್ಲಿ ಒಳ್ಳೆಯ ನೀರು ಇದೆ, ನೀನು ಆರಾಮದಿಂದ ಇರುತ್ತಿಯಾ–ಇಲ್ಲಿ ನೀರು ಒಣಗಿ ಖಾಲಿಯಾಗುತ್ತಲಿದೆ. ಎಂದು ಹೇಳಿದವು ಆಮೆಯು–ಅವಶ್ಯವಾಗಿ ಹೊರಡುತ್ತೇವೆ ಸಹೋದರಾ, ನಮ್ಮ ಮಿತ್ರತೆಯು ಉಳಿಯುತ್ತದೆ, ಇಲ್ಲವಾದಲ್ಲಿ ನೀವು ಮತ್ತೆ ಯಾವಾಗ ಬರುತ್ತಿರಾ.

ಈಗ ಬಹುಶ: ಬರುವುದಿಲ್ಲ ಹಾಗೂ ನನ್ನ ಜೀವನವು ಇರುವುದಿಲ್ಲ ಯಾಕೆಂದರೆ ಈ ನೀರೆ ನನ್ನ ಜೀವನವಾಗಿದೆ ಈಗ ಅದು ಖಾಲಿಯಾಗುತ್ತಾ ಇದೆ. ಒಳ್ಳೆಯದು ನಮ್ಮ ಜೊತೆ ಹೊರಡು. ನಾವು ಎಲ್ಲಿಂದಲೋ ಒಂದು ಕೋಲು ತರುತ್ತೇವೆ. ಎರಡೂ ಕಡೆ ನಾವು ಹಿಡಿಯುತ್ತೇವೆ ಹಾಗೂ ನೀನು ಮಧ್ಯದಲ್ಲಿ ಹಿಡಿದು ಕೊಳ್ಳಬೇಕು ಮತ್ತು ಸರಿಯಾಗಿ ಸಾಗುತ್ತಾ ಹೋಗುತ್ತೇವೆ. ಒಳ್ಳೆಯದು ಎಂದು ಆಮೆ ಹೇಳಿತು.

ಹಂಸಗಳು ಒಂದು ಕೋಲನ್ನು ತಂದವು ಅದನ್ನು ಅವು ಒಂದೊಂದು ಕಡೆ ಹಿಡಿದವು ಮತ್ತು ಮಧ್ಯದಲ್ಲಿ ಆ ಆಮೆ ಹಿಡಿಯಿತು ಹಾಗೂ ಅವರಿಬರ್ಬರು ಅದನ್ನು ಎತ್ತಿಕೊಂಡು ಹಾರಿ ಹೊರಟವು. ಆಕಾಶ ಮಾರ್ಗದಲ್ಲಿ ಹೋಗುತ್ತಿದ್ದವು. ಚೆನ್ನಾಗಿ ಅನಿಸುತ್ತಿತ್ತು. ಊರೂರಲ್ಲಿ ಜನರು ನೋಡುತ್ತಿದ್ದರು. ಒಂದು ಸ್ಥಾನದಲ್ಲಿ ಒಂದು ಊರಿನಲ್ಲಿ ಅದೇ ಸಮಯ ಶಾಲೆಯ ಮಕ್ಕಳಿಗೆ ರಜೆ ಆಯಿತು. ಬಹಳಷ್ಟು ಮಕ್ಕಳು ಮೇಲೆ ನೋಡಿದರು. ಇಂತಹ ದೃಶ್ಯವನ್ನು ಮಕ್ಕಳಿಗೆ ಎಂದಿಗೂ ನೋಡಿರಲಿಲ್ಲ. ಒಬ್ಬರಿಗೊಬ್ಬರು ಅರೆ ಅರೆ ನೋಡಲ್ಲಿ ಇದೇನಿದು? ಏನಿದು? ಇದಂತೂ ಸಂಪೂರ್ಣ ಅದ್ಭುತ ದೃಶ್ಯ ಕಾಣಿಸುತ್ತಿದೆ ಹೀಗೆ ಎಂದಿಗೂ ನೋಡಲು ಸಾಧ್ಯವಿಲ್ಲವೆಂದು ಹೇಳ ತೊಡಗಿದರು. ಎಲ್ಲರೂ ಗಲಾಟೆ ಮಾಸುತ್ತಾ ಜೋರು ಜೋರಾಗಿ ಹೋ-ಹೋ-ಎನ್ನತೊಡಗಿದರು. ಊರಿನ ಇನ್ನೂ ಜನರು ಒಂದೆಡೆ ಸೇರಿ ಎಲ್ಲರೂ ಹೋ ಹೋ ಎಂದು ಜೋರು ಜೋರಾಗಿ ಕೂಗ ತೊಡಗಿದರು. ಎಲ್ಲರ ಹೋ. ಹೋ ಧ್ವನಿಗಳು ಆಮೆಗೆ ಕೇಳಿಬರುತ್ತಿತ್ತು. ಅದಕ್ಕೆ ಸಹನೆ ಮಾಡಲು ಆಗುತ್ತಿರಲಿಲ್ಲ. ಅದು ಮನಸ್ಸಿನಲ್ಲಿ-ಇವರೆಂಥಾ ಜನ ಇಷ್ಟೊಂದು ಹೋ ಹೋ ಎಂದು ಗಲಾಟೆ ಮಾಡುತ್ತಿದ್ದಾರೆ ಹಾಗೂ ನಿಲ್ಲಿಸುತ್ತಿಲ್ಲವಲ್ಲ, ಅದಕ್ಕೆ ಸಹಿಸಲು ಆಗದ ಕಾರಣ ಅದು ಆ ಸಮಯ ಸಂಯಮ ಹೊಂದಲಿಲ್ಲ ಹಾಗೂ-ಯಾಕೆ ಜೂಂ ಜೂಂ ಎಂದು ಗಲಾಟೆ ಮಾಡುತ್ತಿದ್ದಿರಾ ಅರ್ಥಾತ್ ಯಾಕೆ ಕೂಗಾಡುತ್ತಿದ್ದಿರಾ ಎಂದು ತನ್ನ ಮುಖದಿಂದ ಹೇಳಿದಾಗ ಅಂದರೆ ಹೇಳಲು ಬಿಟ್ಟಾಗ-ಬಾಯಿ ಬಿಟ್ಟ ಕೂಡಲೇ ಕೆಳಗೆ ಬಂದು ಬಿದ್ದಿತು ಗಲಾಟೆ ಆಗುತ್ತಿದ್ದ ಸ್ಥಾನದಲ್ಲಿ ಬಿದ್ದಿತು. ಅಲ್ಲಿಯೇ ಬಿದ್ದು ಎಲ್ಲರ ಕಾಲುಗಳ ಮಧ್ಯೆ ಕುಸಿದು ಬಿದ್ದು ಸಾವನ್ನಪ್ಪಿತು. ವಿಚಾರ ಮಾಡಿ ವಚನಗಳ ಸಂಯಮ ಎಲ್ಲಿ ಇಡಬೇಕಾಗಿದ್ದಿತು ಅಲ್ಲಿ ಇಡದಿದ್ದಾಗ ಏನು ಗತಿ ಆಯಿತು.

ನೋಡಿ, ಸಹೋದರರೇ ಯಾವಾಗಲೂ ಏನ್ನಾದರೂ ಹೇಳುತ್ತಾ ಹೋಗಿ ಬಿಡುತ್ತೇವೆ ಇಲ್ಲಿಯಾದರೂ ಹೇಳಿ ಬಿಡುತ್ತೇವೆ. ಆದರೆ ಯಾವ ಮಾತನ್ನು ಎಷ್ಟು ಯಾರ ಸಮ್ಮುಖದಲ್ಲಿ ಹೇಳಬೇಕಾಗಿದೆ, ಯಾರ ಮುಂದೆ ಹೇಳಬಾರದು, ಎಷ್ಟು ಹೇಳಬೇಕು, ಇದಕ್ಕಿಂತ ಮುಂದೆ ಹೇಳಬಾರದು ಸಜ್ಜನರು ಯಾರು, ದುರ್ಜನರು ಯಾರು ಈ ಮಾತುಗಳ ಬಗ್ಗೆ ವಿಚಾರವನ್ನೇ ಮಾಡುವುದಿಲ್ಲ, ಪಂಚ ಪಾಪಗಳು ಎಲ್ಲರೊಂದಿಗೆ ಕಾಣುತ್ತಲಿವೆ. ಆದರೆ ದುರ್ಜನರ ಅರ್ಥವೇನಾಗುತ್ತದೆ? ವ್ಯಸನಗಳಲ್ಲಿ ಲೀನರಾಗಿರುವವರು, ಆಸಕ್ತರು, ಧರ್ಮಕ್ಕೆ ವಿರುದ್ಧವಾಗಿ ನಡೆಯುವವರು, ಅನರ್ಥಕಾರ್ಯ ಮಾಡುವವರು ಅಂತಹ ವ್ಯಕ್ತಿಗಳನ್ನು ದುರ್ಜನರೆನ್ನಲಾಗುತ್ತದೆ. ದುರ್ಜನ ವ್ಯಕ್ತಿಗಳ ಮುಂದೆ ಏನು ಹೇಳಬೇಕು, ಅಥವಾ ಹೇಳಬಾರದೆ, ಎಷ್ಟು ಹೇಳಬೇಕು ಅವರು ಪಾತ್ರರೇ ಅಪಾತ್ರರೇ, ಯಾವ ವ್ಯಕ್ತಿಯೊಂದಿಗೆ ಯಾವ ರೀತಿಯ ಮಾತನ್ನಾಡಬೇಕು ಅಥವಾ ಮಾತನಾಡಬಾರದು, ಹೆಚ್ಚೆಚ್ಚು ಜಂಜಾಟ, ಜಗಳ ಈ ಕಾರಣಗಳಿಂದಲೇ ಆಗುತ್ತವೆ ಹಾಗೂ ಮಾತುಗಳ ಮೇಲೆ ನಿಯಂತ್ರಣ ಮಾಡಲು ಆಗುವುದಿಲ್ಲ, ಏನೋ ಹೇಳಿ ಬಿಡುತ್ತೇವೆ. ಈ ಸಂಯಮದ ಅಭಾವದಲ್ಲಿ ನಾವು ದುಃಖ ಪಡುತ್ತೇವೆ ಮತ್ತೆ ವರ್ಷನುಗಟ್ಟಲೆ ನಮ್ಮ ಆ ವೈರ

ಭಾವ ಮುಂದುವರೆಯುತ್ತದೆ.

ಶರೀರದ ಸಂಯಮ ಅಂದರೆ ಶರೀರದ ಮೇಲೆ ಸಂಯಮ ಹೊಂದಿರಬೇಕು ಹಾಗೇ ನೋಡಿದರೆ ಎಲ್ಲ ಜನರು ಶರೀರದ ಮೇಲೆ ಬಹಳ ಸಂಯಮ ಇಡುತ್ತಾರೆ. ಆಟಗಾರರು ವಿವಿಧ ರೀತಿಯ ಆಟಗಳನ್ನು ಆಡುತ್ತಾರೆ ಅವರು ಸಂಯಮದಿಂದಿರುತ್ತಾರೆ. ಕ್ರಿಕೆಟ್ ಆಟಗಾರ ಅದೆಷ್ಟು ಸಂಯಮದಿಂದ ಇರುತ್ತಾರೆ. ಸಂಪೂರ್ಣ ಧ್ಯಾನ ಸತರ್ಕ ಹೊಂದಿ ಆಡುತ್ತಾರೆ. ಸ್ವಲ್ಪ ಚೆಂಡು ಇಲ್ಲಿಂದ ಅಲ್ಲಿಗೆ ಹೋಗಿರುವುದಿಲ್ಲ ಅಷ್ಟರಲ್ಲಿ ಔಟ್ ಆಗಿರುತ್ತಾರೆ. ಹೀಗೆಯೇ ವಾಹನ ಚಲಿಸುವಾಗ ಸಮಯ ಸಂಯಮವಿಡುತ್ತಾರೆ. ಸ್ವಲ್ಪ ಗಮನ ತಪ್ಪುವ ಹಾಗಿಲ್ಲ ಅಪಘಾತ ಆಗಬಹುದು ಗಾಯವು ಆಗಬಹುದು. ಪ್ರಾಣವೂ ಹೋಗಬಹುದು. ಇದೇ ಪ್ರಕಾರ ಮನೆಗಳಲ್ಲಿ ಮಹಿಳೆಯರು ಇರುತ್ತಾರೆ. ಅವರು ಆಹಾರ ತಯಾರಿಸುತ್ತಾರೆಂದರೆ ಎಷ್ಟು ಸಂಯಮದಿಂದಿರುತ್ತಾರೆ. ಆದರೆ ಸ್ವಲ್ಪ ಗಮನ ಆ ಕಡೆ–ಈ ಕಡೆ ಹೋದರೆ ಆಹಾರ ಸುಟ್ಟು ಹೋಗುತ್ತದೆ. ರೊಟ್ಟಿಯನ್ನು ತಿರುವಿ ಹಾಕದಿದ್ದರೆ ಅದು ಸುಟ್ಟು ಹೋಗುತ್ತದೆ. ತವೆಯನ್ನು ತಿರುವು ಹಾಕದಿದ್ದರೆ ಅದು ಕರಗಿ ಬಿಡುತ್ತದೆ. ಕುದುರೆಯನ್ನು ನಡೆಸದಿದ್ದರೆ ಅದು ಹಟ ಮಾಡುತ್ತದೆ ಹಾಗೂ ನೀರನ್ನು ಬಾವಿಯಿಂದ ತೆಗೆಯದಿದ್ದರೆ ಕೆಟ್ಟು ಹೋಗುತ್ತದೆ. ಅದರಲ್ಲಿಂದ ದುರ್ವಾಸನೆ ಬರುತ್ತದೆ. ಇವೆಲ್ಲವನ್ನು ತಿರುವಿ ಹಾಕಬೇಕಾಗುತ್ತದೆ. ತಿರುವಿ ಹಾಕುತ್ತಿದ್ದರೆ ಏನೂ ಆಗುವುದಿಲ್ಲ. ತಿರುವಿ ಹಾಕದಿದ್ದರೆ ಎಲ್ಲವೂ ಕೆಟ್ಟು ಹೋಗುತ್ತದೆ. ಹೀಗೆ ಈ ಮಾತುಗಳಂತೆ ಎಲ್ಲೆಡೆ ಸಂಯಮವಿದ್ದರೆ ಸಾಕು, ಇವೆಲ್ಲ ಲೌಕಿಕ ಸಂಯಮಗಳಾಗಿವೆ. ಪಾರಮಾರ್ಥಿಕ ಸಂಯಮಗಳಲ್ಲ. ನಮ್ಮ ಮನ–ವಚನ–ಕಾಯಗಳ ಪ್ರವೃತ್ತಿ ಅಶುಭವಾಗುತ್ತಲಿದೆ. ಅವು ಕರ್ಮಗಳ ಬಂಧ ಮಾಡಿಸುತ್ತಲಿವೆ. ನಾವು ಶರೀರದ ಬಾಧಕ ವಸ್ತುಗಳನ್ನು ಮಾತ್ರ ನೋಡಿಕೊಳ್ಳುತ್ತೇವೆ. ಆದರೆ ಆತ್ಮನಿಗೆ ಬಾಧಕವಾಗಿರುವ ಪರವಸ್ತುವನ್ನು ನಾವು ನೋಡಲಾರೆವು. ಆದ್ದರಿಂದ ಈ ಸಂಸಾರದಲ್ಲಿ ಅಲೆದಾಡುತ್ತೇವೆ. ಪರಮಾರ್ಥದಲ್ಲಿ ದಯೆ–ಕರುಣೆ ಇರುವುದೇ ಸಂಯಮವಾಗಿದೆ, ದಯ–ಕರುಣೆ ಇಲ್ಲದಿರುವುದು ಅಸಂಯಮಿಯಾಗಿದೆ, ಅಲ್ಲಿ ಸಂಯಮದ ಪಾಲನೆ ಮಾಡಲು ಆಗುವುದಿಲ್ಲ.

ಶಿಕ್ಷಣ ನೀಡುವ ಒಂದು ದೃಷ್ಟಾಂತವಿದೆ. ಕೆಲವು ಜನರು ಸಹ ಶಾಲೆಯ ಪುಸ್ತಕಗಳಲ್ಲಿ ಓದಿರಬಹುದು ಅಥವಾ ಕೇಳಿರ ಬಹುದು, ದೃಷ್ಟಾಂತವು ಬಹಳಷ್ಟು ಮಾರ್ಗದರ್ಶಿಯಾಗಿದೆ. ನಾವು ಯಾವುದೇ ಯೋಚನೆ ಮಾಡದೆ ತಿಳಿಯದೇ ಈ ಶರೀರದಿಂದ ಏನೆಲ್ಲ ಕ್ರಿಯೆಗಳನ್ನು ಮಾಡಿ ಬಿಡುತ್ತೇವೆ ಮತ್ತು ನಂತರ ಪಶ್ಚಾತ್ತಾಪ ಪಡುತ್ತಿರುತ್ತೇವೆ ಹಾಗೂ ದುಃಖಿಯಾಗುತ್ತೇವೆ.

ಗ್ರಾಮದಲ್ಲಿ ಒಂದು ಪರಿವಾರ ಇರುತ್ತಿದ್ದಿತು. ಒಂದು ದಿನ ಶ್ರೇಷ್ಠಿಯು ಯಾವುದೋ ಕಾರ್ಯ ನಿಮಿತ್ತ ಊರಿನಿಂದ ಹೊರಗಡೆಗೆ ಹೋಗಿದ್ದರು. ಮನೆಯಲ್ಲಿ ಕೇವಲ ಆತನ ಪತ್ನಿ ಹಾಗೂ ಸ್ವಲ್ಪದಿನ ಮುಂಚಿತವಾಗಿ ಹುಟ್ಟಿದ ಆತನ ಪ್ರೀತಿಯ ಮಗ ಇದ್ದರು. ಮಗು ಇನ್ನೂ ಚಿಕ್ಕದಾಗಿದ್ದ ಕಾರಣ ಅಮ್ಮನ ಮಡಿಲಲ್ಲೇ ಹೆಚ್ಚಾಗಿ ಇರುತ್ತಿದ್ದಿತು. ಅಮ್ಮನ ಮಡಿಲಲ್ಲಿ ಆ ಬಾಲಕ ಆಡುತ್ತಿದ್ದಾಗ ಮೆಲ್ಲ ಮೆಲ್ಲಗೆ ಕಿಲ ಕಿಲ ನಗುತ್ತಲಿದ್ದಿತು ಅಮ್ಮ ಮಗುವನ್ನು ತೊಟ್ಟಿಲಿನಲ್ಲಿ ಮಲಗಿಸಿದಳು. ಮನೆಯ ಬಾಗಿಲು ಮುಂದೆ ಮಾಡಿ ನೀರು ತರಲು ಬಾವಿಗೆ ಹೋದಳು ಕೈಯಲ್ಲಿ ಮೂರು ಕೊಡಗಳಿದ್ದವು. ಬಾಲಕನ್ನು ಒಳಗೆ ಮಲಗಿಸಿದ್ದಳು. ಅವಳ ಮನೆಯ ಒಳಗೆ ಹೊರಗೆ ಒಂದು ನಾಲೆ ಇದ್ದಿತು ಅಲ್ಲಿಂದ ಒಂದು ಮುಂಗುಸಿ ಆಗಾಗ ಮನೆಯ ಒಳಗೆ ಬಂದು ಹೋಗುತ್ತಿದ್ದಿತು. ಈ ಮಧ್ಯೆ

ಒಂದು ಕಪ್ಪು ಹಾವು ಮನೆ ಒಳಗೆ ಹೋಯಿತು, ಮುಂಗುಸಿಯು ಹಾವನ್ನು ನೋಡಿದ್ದಿತು. ಅದು ಸಹ ಹಿಂದಿನಿಂದ ಮನೆ ಒಳಗೆ ಹೋಯಿತು. ಅಲ್ಲಿ ಹಾವು ತೊಟ್ಟಿಲಲ್ಲಿ ಮಲಗಿದ ಮಗುವಿನ ಬಳಿ ಹೋಗುತ್ತಿದ್ದಿತು. ಅದನ್ನು ನೋಡಿದ ಮುಂಗುಸಿ ಹಾವಿನ ಬಳಿ ಹೋಗಿ ಅದರ ಮೇಲೆ ಆಕ್ರಮಣ ಮಾಡಿತು. ಎರಡರ ನಡುವೆ ಭಾರಿ ಮಾರಾಮಾರಿ ನಡೆದು ಮುಂಗುಸಿಯು ದಂತ ರೂಪ ಅಸ್ತ್ರದ ಪ್ರಹಾರದಿಂದ ಹಾವನ್ನು ತುಂಡು ತುಂಡು ಮಾಡಿ ಅದರ ಜೀವನ ಲೀಲೆಯನ್ನು ಮುಗಿಸಿ ಬಿಟ್ಟಿತು. ಹೋರಾಟದ ಕಾರಣ ಮುಂಗಸಿ ಬೆವರಿಳಿಸಿ ಕೊಂಡಿದ್ದಿತು ಸುಗಂಧಿತ ವಾಯು ಸೇವನೆಗಾಗಿ ಮನೆಯಿಂದ ಹೊರ ಬಂದಿದ್ದಿತು. ಮುಂಗುಸಿಯ ಬಾಯಿ ರಕ್ತ ಸಿಕ್ತವಾಗಿದ್ದಿತು. ಮಗುವಿನ ತಾಯಿ ಅಷ್ಟರಲ್ಲಿ ನೀರು ತುಂಬಿಕೊಂಡು ಬಂದಾಗ ಅವಳ ತಲೆಯ ಮೇಲೆ ಎರಡೆರಡು ಕೊಡಗಳಿದ್ದವು. ಇನ್ನೊಂದು ಕೈಯಲ್ಲಿದ್ದಿತು. ಅವಳು ಮನೆಗೆ ಬಂದ ಕೂಡಲೇ ಅದೇ ಸಮಯ ಅವಳು ರಕ್ತಸಿಕ್ತ ಮುಖವನ್ನು ಹೊಂದಿದ್ದ ಮುಂಗುಸಿ ಆ ನಾಲೆಯಿಂದ ಹೊರಬರುವುದನ್ನು ನೋಡಿದಳು. ನೋಡಿದ ಅವಳು ಅರೇ ಏನಾಯಿತು ಆಗ ಮಗುವಿನ ಅಳುವ ಧ್ವನಿ ಕೇಳಿಸಿ ಬಹುಶ: ಇದು ನನ್ನ ಮಗುವನ್ನು ಕಚ್ಚಿ ಬರುತ್ತಿರಬೇಕೆಂದು ಅನುಮಾನಿಸಿದಳು, ಆದರೆ ಮಗುವಿಗೆ ಹಸಿವೆಯಾಗುತ್ತಿದ್ದದರಿಂದ ಅದು ಅಳಲಾರಂಭಿಸಿದ್ದಿತು. ಅಮ್ಮನಿಗೆ ಮುಂಗಸಿಯನ್ನು ನೋಡಿ ಕೂಡಲೇ ಕೋಪ ಬಂದಿತು. ಶರೀರದ ಮೇಲೆ ನಿಯಂತ್ರಣವಿರಲಿಲ್ಲ. ಏನೂ ಯೋಚನೆ ಮಾಡದೇ ತಲೆ ಮೇಲಿದ್ದ ಕೊಡಗಳನ್ನು ಮುಂಗುಸಿಯ ಮೇಲೆ ಹಾಕಿ ಬಿಟ್ಟಳು ಕೊಡವನ್ನು ಹಾಕಿದ ಅವಳು ಮುಂಗುಸಿಗೆ ಏನಾಯಿತು ಎಂದೂ ನೋಡಲಿಲ್ಲ. ಅವಳು ಕೂಡಲೇ ಮನೆ ಒಳಗೆ ಹೋದಳು, ಬಾಗಿಲು ತೆಗೆದು ಮಗುವನ್ನು ನೋಡಿದಳು. ಅದು ಅಳುತ್ತಿದ್ದಿತು. ಅವಳು ಅದನ್ನು ಎತ್ತಿಕೊಂಡು ಅದರ ಶರೀರವನ್ನು ನೋಡಿದಳು. ಮಗುವಿನ ಶರೀರದ ಮೇಲೆ ಗಾಯದ ಯಾವ ಚಿಹ್ನೆಯು ಇರಲಿಲ್ಲ ಮತ್ತೆ ಅವಳು ನಾಲ್ಕೂ ಕಡೆ ನೋಡಿದಳು ಮಗುವಿನ ತೊಟ್ಟಿಲ ಕೆಳಗೆ ಹಾವಿನ ತುಂಡುಗಳು ಬಿದ್ದಿದ್ದವು ಅದನ್ನು ನೋಡಿ ಅವಳು ಗಾಬರಿಗೊಂಡಳು. ಅರೇ ಆ ಮುಂಗುಸಿ ನನ್ನ ಬಾಲಕನನ್ನು ಹಾವಿನಿಂದ ರಕ್ಷಿಸಿದೆ ನಾನು ಎಷ್ಟು ತಪ್ಪಾಗಿ ಯೋಚಿಸಿ ಸ್ವಲ್ಪವೂ ನನ್ನ ಮೇಲೆ ನಿಯಮ ಹೊಂದಲಿಲ್ಲ ಕೂಡಲೇ ನಾನು ಶರೀರದ ದುರುಪಯೋಗ ಮಾಡಿಕೊಂಡು ಅದರ ಮೇಲೆ ಕೊಡವನ್ನು ಎತ್ತಿ ಹಾಕಿದೆ, ನಾನು ಎಂತಹ ಅನರ್ಥ ಮಾಡಿದೆ? ನಿರಪರಾಧ ಪ್ರಾಣಿಗೆ ಪ್ರಶಂಸೆ ದೊರೆಯ ಬೇಕಾಗಿದ್ದಿತು. ಅದರ ಸ್ಥಾನದಲ್ಲಿ ನಾನು ಶಿಕ್ಷೆ ಕೊಟ್ಟು ಬಿಟ್ಟೆ ಎಂದು ಯೋಚಿಸಿದಳು. ಅವಳು ಆ ಮುಂಗುಸಿಯ ಉಪಕಾರ ಸ್ಮರಿಸಿಕೊಂಡು ಪಶ್ಚಾತ್ತಾಪ ಪಡತೊಡಗಿದಳು.

ನೋಡಿ ಸಹೋದರರೇ, ನಾವು ಆಗಾಗ ಗಮನ ಕೊಡುವುದಿಲ್ಲ. ಯಾವಾಗಲೂ ಯಾರಿಗಾದರೂ ಏನಾದರೂ ಹೇಳಿ ಬಿಡುವುದು, ಯಾರಿಗಾದರೂ ಬೆದರಿಕೆ ಹಾಕುವುದು ಯಾರಿಗಾದರೂ ಹೊಡೆದು ಬಿಡುವುದು ಹೀಗೆ ಶರೀರದಿಂದ ಬಹಳಷ್ಟು ಕ್ರಿಯೆಗಳನ್ನು ಮಾಡುತ್ತಾ ಇರುತ್ತೇವೆ. ಬಹಳಷ್ಟು ಕ್ರಿಯೆಗಳು ಹೀಗೆ ಆಗುತ್ತಿರುತ್ತವೆ. ಯಾರನ್ನಾದರೂ ನೋಡಿ ನಗುವುದು ಅನಾವಶ್ಯಕವಾಗಿ ಯಾವುದೋ ಮಾತಿಗೆ ನಕ್ಕು ಬಿಡುವುದು ಅದರಿಂದ ಎದುರಿಗಿದ್ದ ಜನರಿಗೆ ಸಂದೇಹ ಉಂಟಾಗುತ್ತದೆ. ಯಾರನ್ನಾದರೂ ನೋಡುತ್ತಾ ನೀವು ನಗುತ್ತಿದ್ದರೆ ಅವರು ಏನೆಂದು ಕೊಳ್ಳುತ್ತಾರೆ? ನೋಡಿ ನನ್ನ ನೋಡಿ ನಗುತ್ತಿದ್ದಾರೆ. ನನ್ನನ್ನು ಟೀಕಿಸುತ್ತಿದ್ದಾರೆ; ಇವರು ಏನೋ ಮಾಡುತ್ತಿದ್ದಾರೆ ನಮಗೆ ಅಪಮಾನ ಮಾಡುತ್ತಿದ್ದಾರೆ. ಅವರ ಮನಸ್ಸಿನಲ್ಲಿ ಇದನ್ನು ನೋಡಿ ವೈರ ಭಾವ ಬರುತ್ತದೆ. ಆದ್ದರಿಂದ ಸಹೋದರರೇ ಎಲ್ಲೆಂದರಲ್ಲಿ ನಗುವುದು, ಅನಾವಶ್ಯಕವಾಗಿ ನಗುವುದು,

ಅನಾವಶ್ಯಕ ಚರ್ಚೆ ಮಾಡುವುದು, ಎಲ್ಲೆಂದರಲ್ಲಿ ಕುಳಿತುಕೊಳ್ಳುವುದು, ಹರಟೆ ಹೊಡೆಯುವುದು, ಇತ್ಯಾದಿ ಈ ಎಲ್ಲ ಕ್ರಿಯೆಗಳು. ಆಸ್ರವವನ್ನುಂಟು ಮಾಡುತ್ತವೆ ಹಾಗೂ ನಾವು ಭವ ಭ್ರಮಣೆ ಮಾಡುತ್ತಿರುತ್ತೇವೆ. ಇವುಗಳಿಂದ ರಕ್ಷಿಸಿಕೊಳ್ಳಲು ನಾವು ಸಂಯಮವನ್ನು ಧಾರಣೆ ಮಾಡಬೇಕು. ನಮ್ಮ ಮನ-ವಚನ ಕಾಯದ ಪ್ರವತ್ತಿಯನ್ನು ಎಷ್ಟು ಕಡಿಮೆ ಮಾಡುತ್ತೇವೆಯೋ ಅಷ್ಟೊಂದು ಸಂಯಮದ ಕಡೆಗೆ ನಾವು ಮುಂದೆ ಸಾಗುತ್ತೇವೆ.

ಮುನಿ ಜೀವನದಲ್ಲಿ ಗುಪ್ತಿಗಳ ಪಾಲನೆ ಮಾಡುತ್ತಾರೆ. ಅವರು ಎಲ್ಲೆಂದರಲ್ಲಿ ಹೋಗುವುದಿಲ್ಲ, ಎಲ್ಲೆಂದರಲ್ಲಿ ನಿಲ್ಲುವುದಿಲ್ಲ, ಉದ್ದೇಶವಿಲ್ಲದೇ ಎಲ್ಲಿಗೂ ಹೋಗುವುದಿಲ್ಲ. ಎಲ್ಲೆಂದರಲ್ಲಿ ಕುಳಿತುಕೊಳ್ಳುವುದಿಲ್ಲ, ಎಲ್ಲೆಂದರಲ್ಲಿ ನಗುವುದಿಲ್ಲ. ಅವರಂತೂ ತಮ್ಮ ಸಮಸ್ತ ಕ್ರಿಯೆಗಳನ್ನು ಸೀಮಿತವಾಗಿಟ್ಟಿರುತ್ತಾರೆ. ಎಲ್ಲಿಯೂ ಹೊರಗಡೆ ನಿಲ್ಲುವುದಿಲ್ಲ ಬಹಳಷ್ಟು ಸಂಯಮದಿಂದ ಇರುತ್ತಾರೆ ಯಾಕೆಂದರೆ ಯಾವಾಗ ಪಾಪಗಳ ಬಂಧವಾಗುತ್ತದೆ. ಯಾವ ಸಮಯದಲ್ಲಿ ಯಾರಿಗೆ ಎಂತಹ ವೈರ ಭಾವನೆ ಉತ್ಪನ್ನವಾಗುವುದೋ, ಎಂತಹದೋ ತಪ್ಪು ಅಭಿಪ್ರಾಯ ಉಂಟಾಗುವುದೋ ಗೊತ್ತಿಲ್ಲ. ಆದ್ದರಿಂದ ಅವರು ಈ ಎಲ್ಲ ವಿಷಯಗಳನ್ನು ಗಮನದಲ್ಲಿಟ್ಟಿರುತ್ತಾರೆ. ಯಾವಾಗಲೂ ಎಚ್ಚರಿಕೆಯಿಂದ ಇರುತ್ತಾರೆ ಎಲ್ಲ ವಿಷಯಗಳ ಬಗ್ಗೆ, ಆದರೆ ಸಾಮಾನ್ಯ ಜನರು ಸಂಪೂರ್ಣವಾಗಿ ಸ್ವಚ್ಛಂದತೆಯಲ್ಲಿ ಜೀವನ ಕಳೆಯುತ್ತಾರೆ. ಅವರೂ ತಮ್ಮ ಯಾವುದೇ ಪ್ರವೃತ್ತಿಯನ್ನು ಸೀಮಿತವಾಗಿಟ್ಟುಕೊಳ್ಳುವುದಿಲ್ಲ. ಈ ಕಾರಣದಿಂದ ಪಾಪಗಳ ಬಂಧವಂತೂ ಆಗಿಯೇ ಆಗುತ್ತದೆ. ಜೊತೆ-ಜೊತೆಯಲ್ಲಿ ಕೆಡಕುಗಳು, ವೈಮನಸ್ಸು, ವೈರ-ವಿರೋಧ, ಅಸೂಯೆಗಳು ಬಹಳಷ್ಟು ಹೆಚ್ಚಾಗುತ್ತವೆ. ವ್ಯಕ್ತಿ ಅಲ್ಲಿ-ಇಲ್ಲಿ ಎಷ್ಟು ಕಡಿಮೆ ಹೋಗುತ್ತಾನೋ. ಎಷ್ಟು ಕಡಿಮೆ ಪ್ರವೃತಿಯಲ್ಲಿರುತ್ತಾನೋ. ಸಿಮೀತನಾಗಿರುವನೋ ಅಷ್ಟು ಹೆಚ್ಚು ಈ ಎಲ್ಲ ಸಂಗತಿಗಳಿಂದ ದೂರ ಇರುತ್ತಾನೆ. ಯಾವ ಜಗಳ-ಹೋರಾಟ ಇರುವುದಿಲ್ಲ- ಇವೆಲ್ಲವುಗಳಿಂದ ದೂರ, ಇಂತಹ ಕಷಾಯಗಳು ಜಾಗೃತವಾಗುವುದಿಲ್ಲ ಆಗ ವೈರ ಭಾವನೆಗಳು ಸಹ ಉತ್ಪನ್ನವಾಗುವುದಿಲ್ಲ. ಆದ್ದರಿಂದ ಎಲ್ಲ ಜನರು ತಮ್ಮ ಜೀವನದಲ್ಲಿ ಈ ಸಂಯಮ ಧರ್ಮವನ್ನು ಧಾರಣೆ ಮಾಡುವ ಪ್ರಯಾಸ ಮಾಡಲಿ. ಮುನಿ ಮಹಾರಾಜರು ಯಾವುದೇ ಕ್ರಿಯೆ ಮಾಡುತ್ತಿರುವಾಗ ಅವರ ಕ್ರಿಯೆಗಳು ಇಷ್ಟೋಪದೇಶದಲ್ಲಿ ಆಚಾರ್ಯ ಪೂಜ್ಯಪಾದ ಸ್ವಾಮಿಗಳು ಬರೆದಂತೆ ಇರುತ್ತವೆ-

**ಬ್ರುವನ್ನಪಿ ಹಿ ನ ಬ್ರೂತೇ ಗಚ್ಛನ್ನಪಿ ನ ಗಚ್ಛತಿ।**
**ಸ್ಥಿರೀಕೃತಾತ್ಮತತ್ತ್ವಸ್ತು, ಪಶ್ಯನಪಿ ನ ಪಶ್ಯತಿ॥4॥**

ಅರ್ಥಾತ್-ಆತ್ಮ ಸ್ವರೂಪದ ವಿಷಯದಲ್ಲಿ ಸ್ಥಿರತೆಯನ್ನು ಪಡೆದ ಮುನಿಗಳೂ ಮಾತನಾಡುತ್ತಿದ್ದರೂ ಮಾತನಾಡುವುದಿಲ್ಲ, ನಡೆಯುತ್ತಿದ್ದರೂ ನಡೆಯುವುದಿಲ್ಲ. ನೋಡುತ್ತಿದ್ದರೂ ನೋಡುವುದಿಲ್ಲ. ಇದಕ್ಕೆ ಕಾರಣವೆಂದರೆ ಅವರ ದೃಷ್ಟಿ ಕೇವಲ ನಿಜ ಆತ್ಮದ ಮೇಲೆ ಇರುತ್ತದೆ. ಅವರಿಗೆ ಪರ ವಸ್ತುಗಳು ಪ್ರಭಾವಿತಗೊಳಿಸಲು ಆಗುವುದಿಲ್ಲ. ನಿಜ ಚೈತನ್ಯ ಜ್ಯೋತಿ ಮೇಲೆ ನೇತ್ರ ಯುಗಲಗಳು ನೆಟ್ಟಿರುವುದರಿಂದ ಅಂತಹ ನಿರ್ಮಲ ಸಂಯಮ ಆರಾಧಕ ಮುನಿಯೇ ನಿಜ ಆತ್ಮನ ದರ್ಶನ ಮಾಡಿ ಪರಮ ಶುದ್ಧ ಭಾವಗಳಿಂದ ಪರಮ ಶುದ್ಧ ಸಂಯಮ ಭಾವಗಳನ್ನು ಪ್ರಾಪ್ತ ಮಾಡಿಕೊಂಡಿರುತ್ತಾರೆ. ಈ ಭಾವವು ಎಂದಿಗೂ ಅಭಾವವಾಗುವುದಿಲ್ಲ. ಭವ್ಯರು ಅದೇ ಭಾವದ ಪ್ರಾಪ್ತಿಯ ಪುರುಷಾರ್ಥ ಮಾಡಬೇಕು. ಇನ್ನೂ ಸ್ಪಷ್ಟವಾಗಿ ಏನು ಹೇಳುವುದು, ಮುನಿರಾಜರು ತಮ್ಮ ಆತ್ಮನ ಚಿಂತನೆಯಲ್ಲಿ ಯಾವಾಗಲೂ ಲೀನರಾಗಿರುತ್ತಾರೆ. ಅವರು ಯಾವುದೇ ಕ್ರಿಯೆಯನ್ನು

ಮಾಡುತ್ತಿದ್ದರೂ ಸಹ ಅವರ ಮನಸ್ಸಂತೂ ತಮ್ಮ ಆತ್ಮನ ಕಡೆಗೆ ಸ್ಥಿರವಾಗಿರುತ್ತದೆ; ನನ್ನ ಆತ್ಮನು ಯಾವಾಗಲೂ ಅಶುಭ ಕರ್ಮದ ಆಸ್ರವ ಮಾಡದಿರಲಿ ಹೇಗೆ ಅವರು ಸದಾಕಾಲ ಎಚ್ಚರಿಕೆಯಿಂದ ಇರುತ್ತಾರೆ. ಒಂದೊಂದು ವಸ್ತುವಿನಲ್ಲಿ ಏನು; ಅವರು ಹೇಳುವಲ್ಲಿ ಏಳುವಲ್ಲಿ ನೋಡುವಲ್ಲಿ ಇತ್ಯಾದಿ ಎಲ್ಲದರಲ್ಲಿಯೂ ಸಂಯಮ ಪಾಲನೆ ಮಾಡುತ್ತಾರೆ.

**'ಬ್ರುವನ್ನಪಿ ಹಿ ನ ಬ್ರೂತೇ'**- ಅವರು ಹೇಳುತ್ತಿದ್ದರೂ ಸಹ ಹೇಳುವುದಿಲ್ಲ ಯಾಕೆಂದರೆ ಅವರು ಏನೇ ಹೇಳಿದರೂ ಧರ್ಮದ ವಿಷಯವನ್ನೇ ಹೇಳುತ್ತಾರೆ. ಬಹಳ ಅವಶ್ಯಕತೆ ಇದ್ದರೇನೆ ಹೇಳುತ್ತಾರೆ, ಬಹಳ ಯೋಚಿಸಿ ತಿಳಿದು ಶಬ್ದವನ್ನು ಹೊರಡಿಸುತ್ತಾರೆ ಹಾಗೂ **'ಗಚ್ಛನ್ನಪಿ ನ ಗಚ್ಛಂತಿ'**- ಹೋಗುತ್ತಿದ್ದರೂ ಹೋಗುವುದಿಲ್ಲ ಯಾಕೆಂದರೆ ಅವರು ಧರ್ಮ ಕಾರ್ಯಕ್ಕಾಗಿಯೇ ಹೋಗುತ್ತಾರೆ, ಅನಾವಶ್ಯಕವಾಗಿ ಇಲ್ಲಿ-ಅಲ್ಲಿ ತಿರುಗಾಡುವುದಿಲ್ಲ ಹಾಗೂ **'ಪಶ್ಯನ್ನಪಿ ನ ಪಶ್ಯತಿ'**- ನೋಡುತ್ತಿದ್ದರೂ ನೋಡುವುದಿಲ್ಲ ಯಾಕೆಂದರೆ ಅವರಿಗೆ ಯಾವ ರಾಗವಿಲ್ಲ, ಕೇವಲ ಕಣ್ಣು ಮುಚ್ಚಿ ಉಪದೇಶ ನೀಡಿದರೆ, ಯಾರಾದರೂ ಕೇಳುತ್ತಾರೆಯೇ? ಮಹಾರಾಜರು ಒಂದು ವೇಳೆ ಕೆಳಗೆ ದೃಷ್ಟಿ ಮಾಡಿ ನೋಡುತ್ತಿದ್ದರೆ, ಜನರು ಸಹ ಹಿಂದೆ-ಮುಂದೆ, ಎಡ-ಬಲ ನೋಡಲು ಪ್ರಾರಂಭಿಸುತ್ತಾರೆ. ಕೆಲವರಂತೂ ಈಗ ಮಹಾರಾಜರು ನೋಡುತ್ತಿಲ್ಲ-ನಾವು ಪ್ರವಚನ ಕೇಳುತ್ತಿದ್ದೇವೆಯೋ ಅಥವಾ ಇಲ್ಲವೋ, ಅಥವಾ ಮಹಾರಾಜರಿಗೆ ನಾವು ಕುಳಿತಿದ್ದೇವೆಯೋ ಇಲ್ಲವೋ ಎಂದು ಗೊತ್ತಾಗುವುದೇ ಎಂದು ಯೋಚಿಸುತ್ತಾರೆ. ಆದ್ದರಿಂದ ಮಹಾರಾಜರಿಗೆ ಜನರನ್ನು ನೋಡ ಬೇಕಾಗುತ್ತದೆ- ಭವ್ಯರು ಸರಿಯಾಗಿ ಕೇಳುತ್ತಿದ್ದಾರಾ ಇಲ್ಲವೋ, ಮನವನ್ನು ತೊಡಗಿಸಿದ್ದಾರೊ ಇಲ್ಲವೋ. ಒತ್ತಡಕ್ಕೊಳಗಾಗಿ ಕೇಳುತ್ತಿದ್ದಾರಾ ಅಥವಾ ಒಳ್ಳೆಯ ಮನಸ್ಸಿನಿಂದ ಕೇಳುತ್ತಿದ್ದಾರಾ, ಪ್ರವಚನದ ವಚನಗಳ ಪ್ರಭಾವ ಸ್ವಲ್ಪವಾದರೂ ಆಗುತ್ತಿದೆಯಾ ಅಥವಾ ಇಲ್ಲವಾ, ಆತ್ಮ ಕಲ್ಯಾಣದ ಭಾವನೆ ಇದೆಯಾ ಅಥವಾ ಬೇರೆ ಭಾವನೆ ಇದೆಯೋ ಇವೆಲ್ಲವೂ ನಿಮ್ಮ ಮುಖದ ಚಹರೆ ನೋಡಿದಾಗ ಗೊತ್ತಾಗಿ ಬಿಡುತ್ತದೆ. ಯಾಕೆಂದರೆ ಚಹರೆಯು ಹೃದಯದ ಅನುಕ್ರಮಣಿಕೆಯಾಗಿದೆ. Face is the Index of the Heart ಫೇಸ್ ಈಜ ದಿ ಇಂಡೆಕ್ಸ ಆಫ್ ಹಾರ್ಟ ಎಂದು ಹೇಳುತ್ತಾರೆ. ಚಹರೆಯಿಂದ ಕೆಲವು ವಿಷಯಗಳು ಗೊತ್ತಾಗಿ ಬಿಡುತ್ತವೆ. ತಾವು ಏನು ಮಾಡುತ್ತಿದ್ದಿರಾ? ಸಂಯಮ ಧಾರಣೆ ಮಾಡುತ್ತಿದ್ದಿರಾ ಅಥವಾ ಇಲ್ಲವೋ, ಏನು ಪಾಲನೆ ಮಾಡುತ್ತಿದ್ದಿರಾ? ಎಂತಹ ವ್ಯಕ್ತಿಗಳು ನೀವು? ಏನಾದರೂ ನಿಯಮ ಸಂಯಮ ತೆಗೆದುಕೊಂಡಿದ್ದಿರಾ ಅಥವಾ ಈಗ ಹೊಸದಾಗಿ ಬಂದಿದ್ದಿರಾ? ಸ್ವಲ್ಪ ತಿಳಿಯಲು ನೋಡ ಬೇಕಾಗುತ್ತದೆ. ಉಳಿದಂತೆ ಮುನಿರಾಜರಿಗೆ ಯಾವ ರಾಗ-ದ್ವೇಷವು ಇರುವುದಿಲ್ಲ. ಈ ವಿಷಯದಲ್ಲಿ. ಮುನಿ ಮಹಾರಾಜರ ಜೀವನ ಹೇಗೆ ಇರುತ್ತದೆ? ಇಂತಹ ಮಹಾನ್ ಅಪಹೃತ ಸಂಯಮಧಾರಣೆ ಮಾಡಿದ ಮೇಲೆ ಅಪೇಕ್ಷಾ ಸಂಯಮದಲ್ಲಿ ಲೀನರಾದ ಮುನಿರಾಜರ ಬಗ್ಗೆ ಪ್ರಸಂಗಾನುದಾರವಾಗಿ ಹೇಳುತ್ತಿದ್ದೇನೆ-

ಒಂದು ಸಾರಿ ನೇಮಿನಾಥ ಭಗವಂತರ ಸಮವಸರಣ ದ್ವಾರಿಕಾಪುರಿಗೆ ಬಂದಿದ್ದಿತು. ತೀರ್ಥಂಕರ ಪ್ರಭು ಸಮವಸರಣದಲ್ಲಿ ವಿರಾಜಮಾನರಾಗಿ ತಮ್ಮ ಆತ್ಮನಲ್ಲಿ ಲೀನರಾಗಿದ್ದರು. ಅವರಿಗೆ ಸಮವಸರಣದಿಂದ ಯಾವ ಪ್ರಯೋಜನವು ಇರಲಿಲ್ಲ ಆದರೂ ಭವ್ಯ ಜನರ ಭಾಗ್ಯದಿಂದ, ದಿವ್ಯಧ್ವನಿ ಹೊರಡುತ್ತದೆ. ಸಮವಸರಣ ಸಹಿತ ವಿರಾಜಿತ ಪ್ರಭುವಿನ ದರ್ಶನಕ್ಕಾಗಿ ಬಹಳಷ್ಟು ಜನ ಬಂದರು. ಯಾದವ ವಂಶಜರು ಬಂದರು; ಅವರಲ್ಲಿ ಶ್ರೀಕೃಷ್ಣನ ಸಹೋದರ ಸಹ ಉಪದೇಶ ಕೇಳಲು ಬಂದರು. ಶ್ರೀಕೃಷ್ಣನ ತಮ್ಮ ಅತ್ಯಂತ ತೇಜಸ್ವಿ ಗಜ ಕುಮಾರ, ಸಾಮ್ಯ ಹಾಗೂ ಸುದರ್ಶನರು ಇದ್ದರು.

ಗಜಕುಮಾರನ ವಿವಾಹ ಸೋಮಶರ್ಮನ ಪುತ್ರಿ ಸೋಮಾಳೊಂದಿಗೆ ನಿಶ್ಚಯವಾಗಿದ್ದಿತು. ಇನ್ನೂ ವಿವಾಹವಾಗಿರಲಿಲ್ಲ. ಪ್ರಭುವಿನ ಸಮವಸರಣ ಬಂದಿದ್ದರಿಂದ ಎಲ್ಲರೊಂದಿಗೆ ಅವರು(ಗಜಕುಮಾರ ಪರಿವಾರ)ಪ್ರಭುವಿನ ದರ್ಶನಕ್ಕೆ ಹೊರಟರು. ಭಗವಂತನಿಗೆ ನಮಸ್ಕರಿಸಿ ಮನುಷ್ಯರ ವಿಭಾಗದಲ್ಲಿ ಕುಳಿತರು ಹಾಗೂ ಭಗವಂತನ ದಿವ್ಯಧ್ವನಿಯ ಮಧ್ಯಮದಿಂದ ಉಪದೇಶ ಕೇಳಿದರು. ಉಪದೇಶ ಕೇಳಿ ಅವರಿಗೆ ಭೋಗಗಳಿಂದ ವೈರಾಗ್ಯವಾಯಿತು ಅವರ ಮನಸ್ಸಿನಲ್ಲಿ–ಈ ಸಂಸಾರವಂತೂ ಅಸಾರವಾಗಿದೆ ಇದರಲ್ಲಿ ಏನಿದೆ? ಇದು ನಮಗೆ ಅನಂತ ಬಾರಿ ದೊರಕಿದೆ ಮತ್ತು ಇದನ್ನು ನಾವು ಭೋಗಿಸಿ ಬಿಟ್ಟಿದ್ದೇವೆ. ನಾವು ಭೋಗಿಸದೇ ಇರುವಂತಹ ಯಾವ ವಿಷಯ ಸುಖವಿದೆ. ಎಷ್ಟೋಬಾರಿ ದೇವ ಪರ್ಯಾಯ ಪಡೆದಿದ್ದೇವೆ, ಅಲ್ಲಿ ಕೋಟಿ ಕೋಟಿ ದೇವಿಯರನ್ನು ಪಡೆದು ವಿವಿಧ ರೀತಿಯ ಭೋಗ ಪಡೆದೆವು, ಅನೇಕ ಸಾರಿ ರಾಜನಾಗಿದ್ದೆವು. ಶ್ರೇಷ್ಠಿಯಾಗಿದ್ದೆವು. ನಾವು ಎಲ್ಲವನ್ನು ಪಡೆದಿದ್ದೆವು ಇದ್ಯಾವುದು ಹೊಸತಲ್ಲ, ಇದೆಲ್ಲವೂ ಎಂಜಲಿನಂತಿದೆ. ಈ ವಿಷಯಗಳಲ್ಲಿ ರಾಗ ಮಾಡುವುದರಿಂದ ಕರ್ಮಬಂಧವಾಗುತ್ತದೆ, ಅಸಂಯಮ ಅವಸ್ಥೆ ಇದ್ದರೆ ದುಃಖ ಪಡೆಯುತ್ತೇವೆ. ಆದ್ದರಿಂದ ನಮಗೆ ಸಂಯಮ ಧರ್ಮವನ್ನು ಧಾರಣೆ ಮಾಡಬೇಕು ಅದರಿಂದ ನಾವು ಕರ್ಮ ಬಂಧದಿಂದ ರಕ್ಷಿಸಿಕೊಳ್ಳ ಬಹುದು.

ರಾಜಕುಮಾರ(ಗಜಕುಮಾರ)ನ ಮನಸ್ಸಿನಲ್ಲಿ ತ್ಯಾಗದ ಭಾವನೆ ಬಂದಾಗ ತಾಯಿ–ತಂದೆ ಬಂಧು–ಬಾಂಧವರಿಂದ ಕ್ಷಮಾಯಾಚನೆ ಮಾಡಿ ಭಗವಂತನ ಚರಣಗಳಲ್ಲಿ ಮುನಿ ದೀಕ್ಷೆ ಹೊಂದಲು ಎಲ್ಲ ಪರಿಗ್ರಹಗಳನ್ನು ಬಿಟ್ಟು ಬಿಟ್ಟರು. ವಸ್ತ್ರ ಅಲಂಕಾರಗಳನ್ನು ಕಳಗಿಳಿಸಿ ಕೇಶಲೋಚ ಮಾಡಿಕೊಂಡರು. ಮುನಿಯಾಗಿ ಕಾಡಿನಲ್ಲಿ ಧ್ಯಾನ ಮಾಡತೊಡಗಿದರು. ಈಗ ಅವರು ತಮ್ಮ ಆತ್ಮನಲ್ಲಿ ಲೀನರಾದರು. ಉಪೇಕ್ಷಾ ಸಂಯಮ ಪ್ರಾಪ್ತವಾಯಿತು, ಕರ್ಮಗಳ ಕ್ಷಯ ಮಾಡುತ್ತಿದ್ದರು, ಇಲ್ಲಿ ಮದುವೆ ಏನು ನಿಶ್ಚಯವಾಗಿದ್ದಿತು. ವಿವಾಹಕ್ಕೆ ಎಲ್ಲ ಸಿದ್ಧತೆಗಳು ಆಗಿದ್ದವು, ಸ್ವಲ್ಪ ಸಮಯದ ನಂತರ ಅವರಿಗೆ ರಾಜಕುಮಾರ ಮುನಿದೀಕ್ಷೆ ತೆಗೆದು ಕೊಂಡಿದ್ದು ಗೊತ್ತಾಯಿತು. ಸೋಮಶರ್ಮನಿಗೆ ಇದನ್ನು ಕೇಳಿ ಬಹಳ ಕ್ರೋಧ ಬಂದಿತು. ಅರೇ ಹೀಗೆ ಮಾಡುವುದಿದ್ದರೆ ನನ್ನ ಮಗಳೊಂದಿಗೆ ವಿವಾಹ ವಾಗಲು ಯಾಕೆ ಸಿದ್ಧರಾಗಿದ್ದರು. ಯಾಕೆ ಸಂಬಂಧವನ್ನು ಮಾಡಿಕೊಂಡರು, ಹೀಗೆ ಮಾಡುವುದಿದ್ದರೆ ನನ್ನ ಮಗಳೊಂದಿಗೆ ನಿಶ್ಚಯ ಯಾಕೆ ಮಾಡಿಕೊಂಡು ಅವಳ ಜೀವನವನ್ನು ಹಾಳು ಮಾಡಿದರು. ಈಗ ಅವಳದೇನಾಗುವುದು? ನೋಡಿ ಸಹೋದರರೇ ಇವೆಲ್ಲಾ ಅವರವರ ಕರ್ಮಗಳು, ಇದರಲ್ಲಿ ಯಾರು ಏನು ಮಾಡಬಲ್ಲರು? ಕರ್ಮಗಳ ವಿನಹ ಏನೂ ಆಗುವುದಿಲ್ಲ. ಮುನಿ ಗಜ ಕುಮಾರರದು ಬಹಳ ದೊಡ್ಡ ಪರೀಕ್ಷೆಯೇ ಆಯಿತು.

ಒಂದು ದಿನ ಮುನಿ ಗಜಕುಮಾರರು ಏಕಾಂತದಲ್ಲಿ ಪ್ರತಿಮಾ ಯೋಗದಲ್ಲಿ ವಿರಾಜಮಾನರಾಗಿದ್ದರು, ಕಾಡಿನಲ್ಲಿ ಆಗ ಸೋಮಶರ್ಮರು ಅಲ್ಲಿಗೆ ಆಗಮಿಸಿದರು ಅವರು ಅಲ್ಲಿ ಮುನಿ ಗಜಕುಮಾರರನ್ನು ನೋಡಿದಾಗ ಕ್ರೋಧದಿಂದ ವಿವೇಕಹೀನರಾದರು. ಅಜ್ಞಾನತೆಯಿಂದ ಒಂದು ಅಗ್ಗಿಷ್ಟಿಕೆ ತೆಗೆದುಕೊಂಡು ಅದರಲ್ಲಿ ಬೆಂಕಿ ಹಾಕಿ ಉರಿಯುತ್ತಿರುವ ಅಗ್ಗಿಷ್ಟಿಕೆಯನ್ನು ಮುನಿರಾಜರ ತಲೆಯ ಮೇಲೆ ಇಟ್ಟು ಬಿಟ್ಟರು. ಉರಿಯುತ್ತಿರುವ ಅಗ್ಗಿಷ್ಟಿಕೆ ಬಿಸಿಯಾಗಿ ಮುನಿರಾಜರ ಕೂದಲನ್ನು ಸುಡತೊಡಗಿತು, ಆದರೆ ಮುನಿರಾಜರ ಧ್ಯಾನ ಅತ್ಯಂತ ಉತ್ಕೃಷ್ಟವಾಗಿದ್ದು ಅವರು ಎಲ್ಲವನ್ನು ಮರೆತು ಬಿಟ್ಟು ಈ ಜಗತ್ತಿನಲ್ಲಿ ನನ್ನದೇನೂ ಇಲ್ಲವೆನ್ನುವ ಸ್ಥಿತಿಯಲ್ಲಿದ್ದರು. ಜಗತ್ತಿನಲ್ಲಿ ನನ್ನದೇನೂ ಇಲ್ಲ ನಾನು ಸಂಪೂರ್ಣವಾಗಿ ಒಬ್ಬನೇ ಇದ್ದೇನೆ.

**ಏಗೋ ಮೇ ಸಾಸ್ಸದೋ ಆದಾ ಣಾಣ ದಂಸಣ ಲಕ್ಖಣೋ।**
**ಸೇಸಾ ಮೇ ಬಾಹಿರಾ ಭಾವಾ ಸವ್ವ ಸಂಜೋಗ ಲಕ್ಖಣಾ॥48॥ ಸ.ಸಾ**

ಮುನಿರಾಜರು ಸಾಮ್ಯಭಾವದಿಂದ ಈ ದಾರುಣ ಯಂತ್ರಣವನ್ನು ಸಹಿಸಿದರು. ಅವರ ಶರೀರ ಉರಿಯ ತೊಡಗಿತು ಅವರಂತೂ ಅವರ ಆ ಧ್ಯಾನದ ಮೂಲಕ ಅವರ ಅಷ್ಟಕರ್ಮಗಳು ಕ್ಷಯವಾಗುವಂತೆ ಆತ್ಮನಲ್ಲಿ ಲೀನರಾಗಿದ್ದರು. ಆದ್ದರಿಂದ ಅವರು ಕೃತ ಕೇವಲಿಗಳಾಗಿ ಸಿದ್ಧ ಪರಮಾತ್ಮರಾದರು. ಸಹೋದರರೇ ವಿಚಾರ ಮಾಡಿ ಅವರು ಸಂಯಮವನ್ನು ಹೇಗೆ ಹೊಂದಿದ್ದರು. ಒಂದು ವೇಳೆ ಆ ಸಮಯದಲ್ಲಿ ಸಂಯಮ ಹೊಂದಿರದಿದ್ದರೆ ಅವರಿಗೆ ಈ ಭಗವಂತತ್ವ/ಸಿದ್ಧ ಪದವಿ ದೊರೆಯುತ್ತಿರಲಿಲ್ಲ. ಅವರು ತಮ್ಮ ಶರೀರದ ಮೇಲೆ ಮಾತುಗಳ ಮೇಲೆ, ಎಲ್ಲ ಪ್ರಕಾರದ ಸಂಯಮ ಹೊಂದಿದ್ದರು ಹಾಗೂ ಉಪಸರ್ಗವನ್ನು ಸಾಮ್ಯಭಾವದಿಂದ ಸಹಿಸಿದ್ದರು. ಗಜಕುಮಾರ ಮುನಿರಾಜರು ಅಂತಹ ಮಹಾನ್ ಆತ್ಮರಾಗಿ ಮೋಕ್ಷಕ್ಕೆ ಹೋದರು. ಮಹಾರಾಷ್ಟ್ರದಲ್ಲಿ ಗಜಪಂಥ ಎನ್ನುವ ತೀರ್ಥಕ್ಷೇತ್ರವಿದ್ದು ಅಲ್ಲಿ ಜಿನಾಲಯವು ಇದೆ. ಅಲ್ಲಿಂದ ಅವರು ಮುಕ್ತಿ ಪಡೆದಿದ್ದರು. ನಾವು ಸಹ ನಮ್ಮ ಜೀವನದಲ್ಲಿ ಅಂತಹ ಸಂಯಮ ಧರ್ಮವನ್ನು ಧಾರಣೆ ಮಾಡಬೇಕು, ನಮ್ಮ ಜೀವನವನ್ನು ಮಹಾನ್ ಮಾಡಲು ನಮ್ಮ ನಿಜವಾದ ಸ್ವರೂಪವನ್ನು ನಾವು ಸದಾ ಕಾಲ ಧ್ಯಾನಿಸಬೇಕು.

ನಾವು ಸಂಸಾರದಲ್ಲಿ ಇಂದಿನವರೆಗೂ ಪರಿಭ್ರಮಣೆ ಮಾಡುತ್ತಿದ್ದೇವೆ. ಇದರ ಒಂದೇ ಕಾರಣವೆಂದರೆ ನಾವು ವಾಸ್ತವಿಕವಾದಿ ನಮ್ಮ ಪರಿಚಯವನ್ನು ಮಾಡಿಕೊಂಡಿಲ್ಲ. ಒಂದು ವೇಳೆ ವಾಸ್ತವಿಕ ಪರಿಚಯವಾದರೆ ಈ ಜಗತ್ತಿನಿಂದ ಪಾರಾಗಿ ಬಿಡುತ್ತೇವೆ. ಆದರೆ ಯಾವ ಆತ್ಮನಿಗೆ ತನ್ನ (ತನ್ನಾತ್ಮನ)ವಾಸ್ತವಿಕ ಪರಿಚಯ ಗೊತ್ತಿಲ್ಲವೋ, ಅವರ ಹೊರಗಿನ ದೇಶ, ಪ್ರದೇಶ, ನಗರ, ಗ್ರಾಮ, ಗೃಹ ಮತ್ತು ಶರೀರ ಮುಂತಾದವುಗಳ ಪರಿಚಯವನ್ನ ತಿಳಿದು ಸಹ ಮೂಢಾತ್ಮರ ವರ್ಗದಲ್ಲಿ ಬರುತ್ತಾರೆ. ಯಾಕೆಂದರೆ ಅವರು ಪುದ್ಗಲ ಮತ್ತು ಆತ್ಮನ ಭೇದವನ್ನು ತಿಳಿದಿಲ್ಲ. ಆದ್ದರಿಂದ ಅನಾದಿಕಾಲದಿಂದ ಈ ಜೀವನ ಭ್ರಮಣೆ ಸಂಸಾರದಲ್ಲಿಯೇ ಆಗುತ್ತಲಿದೆ. ನಮ್ಮ ಈ ಭವ ಭ್ರಮಣೆಯನ್ನು ದೂರ ಮಾಡ ಬಯಸುವುದಾದರೆ ಮುಕ್ತಿಯನ್ನು ಪಡೆಯ ಬೇಕೆಂದರೆ ದಿನ–ಪ್ರತಿದಿನ ನಮ್ಮ ವಾಸ್ತವಿಕ ಪರಿಚಯದ ಬಗ್ಗೆ ಅವಶ್ಯ ಚಿಂತನೆ ಮಾಡಬೇಕು. ಒಂದು ವೇಳೆ ವಾಸ್ತವಿಕ ಪರಿಚಯ ತಿಳಿದರೆ ಮತ್ತೆ ಅಸಂಯಮ ಆಗುವುದಿಲ್ಲ. ಬಹಳ ಸಂಯಮಿತವಾಗಿ ಬಿಡುತ್ತದೆ. ಆಗಮ ಗ್ರಂಥ **ಕ್ಷತ್ರಚೂಡಾಮಣಿ**ಯಲ್ಲಿ ಒಂದು ಶ್ಲೋಕವು, ಆತ್ಮ ಪರಿಚಯಕ್ಕೆ ಸಂಭಂಧಿಸಿದಂತೆ ಹೇಳಲಾಗಿದೆ. ಅದನ್ನು ನಿತ್ಯ ಚಿಂತನೆ ಮಾಡಬೇಕು. ಅದರಿಂದ ನಮ್ಮ ಆತ್ಮ ಪರಿಚಯದ ಜ್ಞಾನ ವಾಗಬಲ್ಲದು. ಜೊತೆಗೆ ಕುಮಾರ್ಗದಲ್ಲಿ ತಿರುಗಾಡುವುದು ತಪ್ಪಿ ನಿಜವಾದ ಮಾರ್ಗ ಮೋಕ್ಷ ಮಾರ್ಗ ಪ್ರಾಪ್ತವಾಗಬಹುದು. ಆಚಾರ್ಯರು ಹೀಗೆ ಹೇಳಿದ್ದಾರೆ–

**ಕೋಹಂ ಕೀದೃಗ್ಗುಣಃ ಕ್ವತ್ಯಃ ಕಿಮ್ ಪ್ರಾಪ್ಯಃ ಕಿಮ್ ನಿಮಿತ್ತಕಃ**
**ಇತ್ಯೂಹ: ಪ್ರತ್ಯಹಂ ನೋ ಚೆ–ದನ್ಯ ಸ್ಥಾನೇ ಮತಿರ್ಭವೇತ್॥(ಕ್ಷ.ಚೂಡಾಮಣಿ)**

ಅರ್ಥಾತ್ ನಾನು ಯಾರಾಗಿದ್ದೇನೆ? ನನ್ನಲ್ಲಿ ಎಂತಹ ಗುಣಗಳಿವೆ? ನಾನು ಎಲ್ಲಿಂದ ಬಂದಿದ್ದೇನೆ? ಏನು ಪಡೆಯಲು ಯೋಗ್ಯವಾಗಿದೆ? ಹಾಗೂ ನಾನು ಯಾವ ನಿಮಿತ್ತದಿಂದ ಇದ್ದೇನೆ? ಹೀಗೆ ಪ್ರತಿದಿನ ಚಿಂತನೆ ಮಾಡದಿದ್ದರೆ ಮನುಷ್ಯರ ಬುದ್ಧಿ ವಿಪರೀತ ಸ್ಥಾನಗಳಲ್ಲಿ ಪ್ರವೃತ್ತವಾಗುತ್ತದೆ.

ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ನಮ್ಮ ಆತ್ಮನಲ್ಲಿ ಕೇಳಬೇಕು ಹಾಗೂ ಒಂದು ವೇಳೆ ನಿಮ್ಮ ಮನಸ್ಸು ಧರ್ಮವೆಂಬ ನೀರಿನಿಂದ (ಗುರೂಪದೇಶ ಹಾಗೂ ಶಾಸ್ತ್ರ ಸ್ವಾಧ್ಯಾಯದಿಂದ) ಪವಿತ್ರವಾಗಿದ್ದರೆ ಸಮೀಚೀನ ಉತ್ತರ ಅವಶ್ಯವಾಗಿ ಸಿಗುತ್ತದೆ. ಆತ್ಮ ಅವಶ್ಯವಾಗಿ ನಾನು ಒಂದು ಆತ್ಮನಿದ್ದೇನೆ ಎಂಬ ಉತ್ತರ ನೀಡುತ್ತದೆ. ನಾನು ಜನ್ಮ-ಮರಣ, ಹಸಿವು-ನೀರಡಿಕೆ ಇತ್ಯಾದಿ ದು:ಖಗಳಿಂದ ದೂರ ಆ ಮೋಕ್ಷ ಅವಸ್ಥೆಯನ್ನು ಪಡೆಯಲು ಬಂದಿದ್ದೇನೆ. ಆ ಮೋಕ್ಷದ ಪ್ರಾಪ್ತಿಯು ನಿಜವಾದ ವೀತರಾಗಿ ದೇವ, ಶಾಸ್ತ್ರ ಮತ್ತು ಗುರುವಿನ ಸಾಕ್ಷಿಯಲ್ಲಿ ರತ್ನತ್ರಯ ಅರ್ಥಾತ್ ಸಮ್ಯಗ್ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗದ ಲಾಭದಿಂದ ಬೇಗನೆ ಪ್ರಾಪ್ತವಾಗುತ್ತದೆ. ಈ ನಿಮಿತ್ತದಿಂದ ನಾನು ಇಲ್ಲಿ ಈ ಅವಸ್ಥೆಯನ್ನು ಪಡೆದಿದ್ದೇನೆ. ಇದೇ ವಾಸ್ತವಿಕ ಪರಿಚಯವಾಗಿದೆ. ಇಂತಹ ಉತ್ತರ ಸಿಗುತ್ತಲೇ ಬರುವ ವಿಚಾರವೆಂದರೆ, ಈ ಸಂಸಾರದಲ್ಲಿ ಅರಹಂತ ದೇವ, ನಿರ್ಗ್ರಂಥ ಗುರು, ಹಾಗೂ ಜಿನವಾಣಿಯ ಸಮಾಗಮ ಬಹಳ ದೊಡ್ಡ ದುರ್ಲಭತೆಯಿಂದ ವಿಶೇಷ ಪುಣ್ಯಾತ್ಮಗಳಿಗೇನೆ ದೊರೆಯುತ್ತದೆ. ಈ ಸಂಸಾರವನ್ನು ಅಲೆದಾಟುವುದರಿಂದ ದೂರವಾಗಬೇಕಾದರೆ ನಮ್ಮ ವಾಸ್ತವಿಕ ಪರಿಚಯವನ್ನು ಯಾವಾಗಲೂ ನೆನಪಿನಲ್ಲಿಡಿರಿ. ಈ ಪರಿಚಯವೇ ಸಂಸಾರದ ಎಲ್ಲ ಜಂಜಾಟ, ಭ್ರಮಣೆ ಹಾಗೂ ದುಃಖ ಇತ್ಯಾದಿಗಳಿಂದ ಹೊರಬಂದು ಉತ್ತಮ ಸುಖದಲ್ಲಿ ತಲುಪಿಸುತ್ತದೆ.

ಮನ-ವಚನ-ಕಾಯಗಳನ್ನು ನಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳುವಷ್ಟು ಸಂಯಮ ನಮ್ಮೊಳಗಿರಬೇಕು. ನಮ್ಮ ಆತ್ಮ ಯಾವ ಕಾರಣಗಳಿಂದ ಪಾಪ ಕರ್ಮಗಳಿಂದ ಬಂಧಿತನಾಗಿದ್ದಾನೆ ಹಾಗೂ ಯಾವ ಕರ್ಮಗಳಿಂದ ಬಿಡುಗಡೆ ಹೊಂದುತ್ತಾನೆ. ಇಷ್ಟು ಗಮನದಲ್ಲಿಟ್ಟುಕೊಂಡರೆ ಇದೇ ಎಲ್ಲಕ್ಕಿಂತ ದೊಡ್ಡ ಸಂಯಮವಾಗುತ್ತದೆ. ಪಂಚ ಪಾಪಗಳು ನಮ್ಮ ಜೀವನದಲ್ಲಿ ಬಾಧಕವಾಗಿವೆ. ಇವುಗಳನ್ನು ಬಿಡುತ್ತ ಸಾಗಿರಿ. **ಪದ್ಮನಂದಿಪಂಚವಿಂಶತಿಕಾ**ದಲ್ಲಿ ಹೀಗೆ ಹೇಳಿದ್ದಾರೆ-

**ದೇವಪೂಜಾ ಗುರುಪಾಸ್ತಿ ಸ್ವಾದ್ಯಾಯ: ಸಂಯಮಸ್ತಪಃ**
**ದಾನಂ ಚೇತಿ ಗೃಹಸ್ಥಾಣಾಂ ಷಟ್‌ಕರ್ಮಾಣಿ ದಿನೇ ದಿನೇ॥40॥**

ಈ ಆರು ಕರ್ಮಗಳನ್ನು ಮಾಡುತ್ತಾ ಸಾಗಿರಿ, ಇವು ಪಾಪಗಳಿಂದ ನಮ್ಮನ್ನು ರಕ್ಷಿಸುತ್ತವೆ ಹಾಗೂ ಮುಂದೆ ಸಾಗುತ್ತೇವೆ. ಎಲ್ಲ ಪರಿಗ್ರಹಗಳನ್ನು ಬಿಟ್ಟು ಧ್ಯಾನ ಮಾಡಿದರೆ ಎಲ್ಲಿ ಪಾಪಗಳಿಂದ ಮುಕ್ತರಾಗುತ್ತೀರಿ. ಸಂಯಮವು ಸಮ್ಯಗ್ ದರ್ಶನ ಜ್ಞಾನ-ಚಾರಿತ್ರಗಳನ್ನು ಬಲ ಪಡಿಸುತ್ತದೆ. ದರ್ಶನ-ಜ್ಞಾನ, ಚಾರಿತ್ರಗಳ ವರ್ಧನೆಗಾಗಿ ಸಂಯಮವು ಪೌಷ್ಟಿಕ ಟಾನಿಕ್ ರೀತಿಯಲ್ಲಿದೆ, ಭಗವಂತನದರ್ಶನ ಪೂಜೆ ಇತ್ಯಾದಿ ಆರು ಆವಶ್ಯಕ ಕ್ರಿಯೆಗಳು ಇತ್ಯಾದಿ ಸಮ್ಯಗ್ ದರ್ಶನದ ವಿಶುಧ್ಧಿಯಲ್ಲಿ ಅಭಿವೃದ್ಧಿ ಮಾಡುತ್ತವೆ. ಯಾವ ಆತ್ಮನ ಜೀವನದಲ್ಲಿ ಸಂಯಮವಿರುವುದೋ ಅದು ತನ್ನ ಶಕ್ತಿಯ ಪ್ರಯೋಗವನ್ನು ಧ್ಯಾನ, ಯೋಗ,ಮತ್ತು

ಜನಕಲ್ಯಾಣಗಳಲ್ಲಿ ಸರಿಯಾದ ರೀತಿಯಲ್ಲಿ ಮಾಡಬಲ್ಲದು.

**A Man whose Heart is pure**
**Has the strength of Ten**

ಯಾವ ವ್ಯಕ್ತಿಯ ಹೃದಯ ಸಂಯಮಿತ?ಶುದ್ದ/ಪವಿತ್ರವಾಗಿದೆಯೋ ಅದರ ಬಳಿ ಹತ್ತು ವ್ಯಕ್ತಿಗಳ ಸಮಾನ ಶಕ್ತಿ ಇರುತ್ತದೆ. ಸತ್ಪುರುಷರು-ಈ ಮನುಷ್ಯ ಜೀವನದ ಒಂದು ಮಹತ್ವ ಪೂರ್ಣ ಸೋಲು ಮತ್ತು ವಿಶೇಷ ನಿಧಿ ಎಂದರೆ ಅವರ ಸಂಯಮ, ಯಾರು ಈ ಧರ್ಮದ ಪೇಟೆಗೆ

ಬಂದು ಸಂಯಮ ರೂಪದ ನಿಧಿಯನ್ನು ಪಡೆಯದಿದ್ದರೆ ಆತನು ಅಕ್ಷಮ್ಯ ತಪ್ಪು ಮಾಡಿದ– ಎಂದು ಹೇಳುತ್ತಾರೆ. ಕವಿವರ ದೌಲತರಾಯರು ಆತ್ಮನನ್ನು ಸಂಭೋಧಿಸುತ್ತ ಹೀಗೆ ಹೇಳಿದ್ದಾರೆ–

**ಕಾಯ ಛಹೋ ಪ್ರತಿಪಾಲ, ಪಂಚೇಂದ್ರಿಯ ಮನ ವಶಕರೋ।**
**ಸಂಜಮ ರತನ ಸಮ್ಹಾಲ, ವಿಷಯ ಚೋರ ಬಹು ಫಿರತ ಹೈ॥6॥**

ನಾಲ್ಕೂ ದಿಕ್ಕಿನಲ್ಲಿ ಪಂಚೇಂದ್ರ್ರಯಗಳ ವಿಷಯ ರೂಪದ ಲಂಪಟ ಕಳ್ಳ ನಿರಂತರ ತಿರುಗಾಡುತ್ತಿದ್ದಾನೆ. ಆದ್ದರಿಂದ ಷಟ್ ಕಾಯ ಜೀವಗಳ ಸುರಕ್ಷೆ ಮಾಡಿರಿ. ಐದು ಇಂದ್ರಿಯ ಮತ್ತು ಮನವನ್ನು ವಶದಲ್ಲಿಟ್ಟು ಕೊಳ್ಳಿರಿ, ಸಂಯಮ ರೂಪದ ಬಹುಮೂಲ್ಯ ರತ್ನವನ್ನು ರಕ್ಷಿಸಿಕೊಂಡಿರಿ, ಅದರಿಂದಾಗಿ ನಿಮ್ಮ ಜೀವನ ಸುರಕ್ಷಿತವಾಗಿರಬಹುದು. ನಾಲ್ಕೂ ಗತಿಗಳಲ್ಲಿ ಮನುಷ್ಯ ಗತಿಯೇ ಒಂದು ಗತಿಯಾಗಿದ್ದು ಅದರಲ್ಲಿಯೇ ಸಂಯಮದ ಪೂರ್ಣಪಾಲನೆ ಮಾಡಬಹುದಾಗಿದೆ ಹಾಗೂ ಅದೇ ಭವದಿಂದ ಮುಕ್ತಿ ಶ್ರೇಯಲಾಭವನ್ನೂ ಪಡೆಯಬಹುದಾಗಿದೆ. ಆಚಾರ್ಯ ಕುಂದ ಕುಂದ ಸ್ವಾಮಿಗಳು–ಎಲ್ಲ ತೀರ್ಥಂಕರರ ನಿರ್ವಾಣ ನಿಶ್ಚಿತವಾಗಿದೆ ಆದರೂ ಅವರಿಗೆ ಸಂಯಮದ ಆಶ್ರಯ ಪಡೆಯದೇ ಮುಕ್ತಿ ದೊರೆಯುವುದಿಲ್ಲ. ಕ್ಷಾಯಿಕ ಸಮ್ಯಗ್ ದೃಷ್ಟಿ ಈಗ ಮನೆಯಲ್ಲಿರುವ ತೀರ್ಥಂಕರ ಪ್ರಭುವಿಗೂ ಸಿದ್ಧಿಯೂ ಸಂಯಮದ ಹೊರ್ತಾಗಿ ಆಗಿಲ್ಲ. ಸಂಯಮ ಒಂದೇ ಮುಕ್ತಿಯ ಸಾಧನವಾಗಿದೆ–ಪೂಜೆಯಲ್ಲಿ ಓದುತ್ತವೆ–

**ಜಿಸ ಬಿನಾ ನಹೀ ಜಿನರಾಜ ಸೀಝೆ, ತೂ ರೂಲ್ಯೋ ಜಗ ಕೀಚ ಮೇ।**
**ಇಕ ಘರೀ ಮತ ವಿಸರೋ ಕರೋ ನಿತ, ಆಯು ಜಗ ಮುಖ ಬೀಚ ಮೇ॥6॥**

ಕವಿವರರು ನಿರಂತರ ಮರಣದ ಆಶಂಕದಿಂದ ಬಿದ್ದ ಮಾನವನಿಗೆ ಪ್ರೇರಣೆ ನೀಡುತ್ತಾ ಹೀಗೆ ಬರೆದಿದ್ದಾರೆ–ಮೃತ್ಯುವಿನ ಮುಖದ ಮಧ್ಯದಲ್ಲಿ ಹೋಗದಿರುವವರೆಗೆ ನಮ್ಮ ಕಲ್ಯಾಣವನ್ನು ಮಾಡಿಕೊಳ್ಳಬೇಕು. ಯಮನ ಮುಖದ ಮಧ್ಯದಲ್ಲಿ ಬಂದು ಬಿಟ್ಟರೆ ಆಗ ಏನು ಮಾಡಲಾದೀತು ಹಾಗೂ ಸಂಯಮವಿಲ್ಲದೇ ಯಾರ ಕಲ್ಯಾಣವು ಆಗುವುದಿಲ್ಲ. ಅವರು ತೀರ್ಥಂಕರರೇ ಆಗಿರಬಹುದು ಅವರು ಸಹ ಸಂಯಮವಿಲ್ಲದೇ ಮೋಕ್ಷಕ್ಕೆ ಹೋಗಲಾರರು. ಆದ್ದರಿಂದ ಈ ಸಂಯಮವನ್ನು ಒಂದು ಕ್ಷಣ ಸಹ ಮರೆಯ ಬೇಡಿರಿ. ಹೇಳಿಯೂ ಇದ್ದಾರೆ–**"ಸಂಯಮ ವಿಣು ಘಡಿ ಏಕ್ಕುನ ಜಾಇ"**. ಸಂಸಾರ ಸಾಗರದ ಆಚೆ ದಂಡೆಗೆ ಇಳಿಸುವ ಏಕಮಾತ್ರವೆಂದರೆ ಸಂಯಮವಾಗಿದೆ. ಸಂಸಾರದಿಂದ ನೀವು ಸ್ವತಂತ್ರ ಪಡೆಯಬೇಕೆನ್ನುವುದಾದರೆ ಸಂಯಮದ ಬಂಧನದಲ್ಲಿ ಬಂಧಿಯಾಗಲೇ ಬೇಕು. ಈ ಬಂಧನವು ಮನವನ್ನು ಸ್ವಚ್ಛಂಧತೆಯಿಂದ ಉಳಿಸುತ್ತದೆ. ಯಾವ ಜಿತೇಂದ್ರಿಯರು ತಮ್ಮ ಮನಸ್ಸನ್ನು ಗೆದ್ದು ಸಂಯಮವನ್ನು ಸ್ವೀಕರಿಸುತ್ತಾರೋ ಅವರನ್ನು ಸ್ವರ್ಗದ ದೇವತೆಗಳು ಅವರ ಚರಣ ವಂದನೆ ಮಾಡುತ್ತಾರೆ. ಯಾರು ಸಂಯಮವನ್ನು ಧಾರಣೆ ಮಾಡುತ್ತಾರೋ ಅವನನ್ನು ಯಮನು ಸಹ ಏನು ಮಾಡಲಾರ. ಆತ್ಮನ ಆಶ್ರಯದಿಂದ ಉತ್ಪನ್ನವಾಗುವ ಅಂತರ್ಬಾಹ್ಯ ಉತ್ತಮ ಸಂಯಮ ಧರ್ಮ ನಮ್ಮೆಲ್ಲರಿಗೂ ಶೀಘ್ರಾತಿಶೀಘ್ರ ಪ್ರಕಟವಾಗಲಿ, ಈ ಪವಿತ್ರ ಭಾವನೆಯಿಂದ ಕೊನೆಯಲ್ಲಿ ಧರ್ಮಭಾವನ ಶತಕದಲ್ಲಿ ಬರೆದಿರುವುದನ್ನು ಹೇಳುತ್ತೇನೆ–

**ಸಂಯಮ ರೂಪದ ನೌಕೆಯು ಭವದಿ ಎಲ್ಲರನು ಪಾರು ಮಾಡುವುದು**
**ದೊಡ್ಡ ಭಾವದಿಂದರಲಿ ಕುಳಿತರೆ ಅದು ಮೋಕ್ಷ ಮಹಲಿಗೆ ಒಯ್ಯುವುದು**
**ಪಂಚೇಂದ್ರಿಯಗಳ ದಾಸರಾಗಲು ಎಂದಿಗೂ ಆಗದು ಸಂಯಮವು**
**ವಿಷಯ ಸುಖಗಳ ಬಿಟ್ಟಾಗವರು ಪಡೆವರು ಸಾಧು ಸುಖವನು.**

# ಉತ್ತಮ ತಪ ಧರ್ಮ

## ಇಚ್ಛೆಗಳ ನಿರೋಧವೇ ತಪ

### ಮಂಗಲಾಚರಣೆ

**ಉಪಾಹಿ ಮುತ್ತಂ ಧಣಧಾಮ ವಜ್ಜಿಯಂ, ಸುಸಮ್ಮಜುತ್ತಂ ಮಯಮೋಹ ಹಾರಯಂ**
**ವಸ್ಸೇಯ ಪಜ್ಜಂತ ಮುಪವಾಸ ಜುತ್ತಂ, ತಂ ಗೊಮ್ಮಟೇಶಂ ಪಣಮಾಮಿಣಿಚ್ಚಂ॥**

ಸದ್ಧರ್ಮ ಬಂಧುಗಳೇ,

ಇಂದು ದಶಲಕ್ಷಣ ಪರ್ವದ ಏಳನೇ ದಿನ **'ಉತ್ತಮ ತಪ'** ಧರ್ಮದ ಬಗ್ಗೆ ಚಿಂತನೆ ಮಾಡೋಣ. ಉತ್ತಮ ತಪ ಧರ್ಮ ನಮ್ಮ ಜೀವನದಲ್ಲಿ ಎಷ್ಟು ಮಹತ್ವ ಹೊಂದಿದೆ, ಅದರ ಮೌಲ್ಯ ಎಷ್ಟಿದೆ, ಇದರ ಮಾಧ್ಯಮದಿಂದ ನಮ್ಮ ಆತ್ಮನು ಎಷ್ಟು ಮಹಾನ್ ಆಗುತ್ತಾನೆ, ಆತ್ಮನಲ್ಲಿ ಎಷ್ಟು ನಿಖರತೆ ಬರುತ್ತದೆ. ಈ ವಿಷಯಗಳನ್ನು ತಿಳಿಯೋಣ. ತಪದ ತಾತ್ಪರ್ಯ ನಮ್ಮನ್ನು ತಪಿಸುವುದಾಗಿದೆ. ಕಾಯಿಸುವುದರಿಂದ ವಸ್ತು ಶುದ್ಧವಾಗುತ್ತದೆ ಹಾಗೂ ಶುದ್ಧವಸ್ತುವಿಗೆ ಇನ್ನು ಹೆಚ್ಚಿನ ಹೊಳಪು ದೊರೆಯುತ್ತದೆ. ಆಚಾರ್ಯರು ಹೀಗೆ ಹೇಳಿದ್ದಾರೆ-**"ಕರ್ಮ ಕ್ಷಯಾರ್ಥಂ ತಪ್ಯತೇ ಇತಿ ತಪ:"** ಐಹಿಕ ಆಕಾಂಕ್ಷೆಗಳಿಂದ ಮೇಲೆದ್ದು ಕೇವಲ ಕರ್ಮಕ್ಷಯಕ್ಕಾಗಿ ಬಿಸಿ ಮಾಡುವುದು(ತಪಿಸುವುದು)ತಪವಾಗಿದೆ. ತಪಸ್ಸು ಮಾಡುವವರು, ಆ ತಪವು ತ್ಯಾಗ-ಸಂಯಮ, ಕರ್ಮಗಳ ಕ್ಷಯದ ನಿಮಿತ್ತವಾಗಿರಬೇಕು ಯಾಕೆಂದರೆ ಅನಾದಿ ಕಾಲದಿಂದ ನಮ್ಮೊಳಗೆ ಕುಳಿತಿರುವ ಕರ್ಮಗಳು ನಮ್ಮನ್ನು ಚತುರ್ಗತಿಯಲ್ಲಿ ಭ್ರಮಣೆ ಮಾಡಿಸುತ್ತವೆ. ಅವುಗಳ ಮಾಧ್ಯಮದಿಂದ ನಾವು ಈ ಸಂಸಾರದಲ್ಲಿ ಭ್ರಮಣೆ ಮಾಡುತ್ತಾ ನಾನಾ ಪ್ರಕಾರದ ದುಃಖಗಳನ್ನು ಸಹಿಸುತ್ತಿದ್ದೇವೆ. ಇಂತಹ ಕರ್ಮ ಶತ್ರುಗಳನ್ನು ನಷ್ಟ ಮಾಡುವುದು ಹಾಗೂ ಅವುಗಳನ್ನು ಕ್ಷಯ ಮಾಡುವಲ್ಲಿ ಯಾವಾಗಲೂ ಸಿದ್ಧರಾಗಿರುವುದು ನಿಜವಾದ ತಪವಾಗಿದೆ.

ರಾಜವಾರ್ತಿಕ ಗ್ರಂಥದಲ್ಲಿ ಆಚಾರ್ಯ ಅಕಲಂಕ ದೇವರು ತಪದ ವಿಷಯದ ಬಗ್ಗೆ ಹೀಗೆ ಹೇಳಿದ್ದಾರೆ-**"ಕರ್ಮದಹನಾತ್ತಪಃ"** ಕರ್ಮಗಳ ದಹನ ಅರ್ಥಾತ್ ಭಸ್ಮ ಮಾಡುವ ಕಾರಣದಿಂದಲೇ ಇದನ್ನು ತಪ ವೆನ್ನುತ್ತಾರೆ. ಅಗ್ನಿಯೂ ಸಂಚಿತ ತೃಣ ಮುಂತಾದ ಇಂಧನವನ್ನು ಭಸ್ಮ ಮಾಡುವಂತೆ ತಪವು ಸಹ ಜನ್ಮ-ಜನ್ಮಾಂತರಗಳ ಸಂಚಿತ ಕರ್ಮಗಳನ್ನು ಸುಟ್ಟು ಹಾಕುತ್ತದೆ ಹಾಗೂ ಶರೀರ ಮತ್ತು ಇಂದ್ರಿಯ ವಿಷಯಗಳ ಪ್ರವೃತ್ತಿಯನ್ನು ತಡೆದು ಅವುಗಳನ್ನು ಸುಟ್ಟು ಹಾಕುತ್ತದೆ. ಹಾಗೇ ನೋಡಿದಲ್ಲಿ ಅನಾದಿ ಕಾಲದಿಂದ ಅಂತಹ ತಪಸ್ಸುಗಳನ್ನು ಬಹಳಷ್ಟು ಮಾಡುತ್ತಾ ಬಂದಿದ್ದೇವೆ. ಅವುಗಳಲ್ಲಿ ಅನೇಕ ಪ್ರಕಾರದ ವಿಧಾನಗಳು, ಆಕಾಂಕ್ಷೆಗಳು, ಸಂಸಾರದ ಭಾವನೆಗಳು ಸೇರಿಕೊಂಡಿರುತ್ತವೆ. ಅವುಗಳಿಂದ ಆ ಫಲದ ಶಾಶ್ವತ ಸುಖ ಕೊಡುವಂತಹ ಅನುಭವವಂತೂ ಆಗಲಿಲ್ಲ. ಆದರೆ ಕ್ಷಣಿಕ ಸುಖ ದೊರೆತು ಅವುಗಳನ್ನು ಪಡೆದು ದುಃಖಿಗಳಾಗುತ್ತಾ ಬಂದಿದ್ದೇವೆ, ಯಾಕೆಂದರೆ ಯಾವುದರ ಸಂಯೋಗವಿರುತ್ತದೆಯೋ ಅದರ ವಿಯೋಗವು ಸಹ ನಿಶ್ಚಿತವಾಗಿರುತ್ತದೆ. ಸಂಯೋಗಿ ಪದಾರ್ಥ ಸಿಕ್ಕಾಗ ಸುಖ ಅವು ನಮ್ಮನ್ನು ಬಿಟ್ಟಾಗ ದುಃಖವಾಗುತ್ತದೆ. ಆದ್ದರಿಂದ ಶಾಶ್ವತ ಸುಖ ಒಂದು

ಬಾರಿ ಸಿಕ್ಕರೆ ಮತ್ತೆ ಎಂದಿಗೂ ಬಿಡುವುದಿಲ್ಲ ಅಂತಹ ಪುರುಷಾರ್ಥ ಮಾಡಬೇಕು. ಅಂತಹ ಆ ಸುಖ ತನ್ನ ಅಂತರಂಗದಲ್ಲಿಯೇ ಸಿಗುವುದಿದೆ, ಇದಕ್ಕಾಗಿ ತ್ಯಾಗ-ತಪಸ್ಸು ಮಾಡಬೇಕಾಗುತ್ತದೆ. ಆಗ ಆತ್ಮನ ಮೆಲಿರುವ ಕರ್ಮಗಳ ಕಲ್ಮಶವನ್ನು ದೂರಮಾಡಿ ತನ್ನ ವಾಸ್ತವಿಕ ಸ್ವರೂಪವನ್ನು ಪಡೆಯ ಬಹುದು. ಈ ಕಾರ್ಯವು ತಪದ ಮೂಲಕವೇ ಸಾಧ್ಯವಿದೆ ಹಾಗೂ ಬೇರೆ ಯಾವುದೇ ಸಾಧನಗಳಿಂದ ಸಾಧ್ಯವಿಲ್ಲ. ಪರಮಾನಂದ ಸ್ತೋತ್ರದಲ್ಲಿ ಹೀಗೆ ಹೇಳಲಾಗಿದೆ-

**ಪಾಷಾಣೇಷು ಯಥಾ ಹೇಮಂ, ದುಗ್ಧ ಮಧ್ಯೆ ಯಥಾ ಘೃತಮ್।**
**ತಿಲಮಧ್ಯೇ ಯಥಾ ತೈಲಂ, ದೇಹ ಮಧ್ಯೆ ತಥಾ ಶಿವ:**
**ಕಾಷ್ಠ ಮಧ್ಯೆ ಯಥಾವಹ್ನಿ ಶಕ್ತಿ ರೂಪೇಣ ತಿಷ್ಠತಿ।**
**ಅಯಮಾತ್ಮಾ ಶರೀರೇಷು ಯೋ ಜಾನಾತಿ ಸ ಪಂಡಿತ: ॥24॥**

ಹೇಗೆ ಶಿಲೆಯಲ್ಲಿ ಚಿನ್ನ, ಹಾಲಿನಲ್ಲಿ ತುಪ್ಪ, ಎಳ್ಳಿನಲ್ಲಿ ಎಣ್ಣೆ ಅಡಗಿರುತ್ತದೆಯೋ ಹಾಗೆಯೇ ದೇಹದಲ್ಲಿ ಶಿವ(ಸಿದ್ಧಾತ್ಮಾ)ಶಕ್ತಿರೂಪ ವಿರಾಜಮಾನವಾಗಿರುತ್ತದೆ, ಹಾಗೆಯೇ ಕಟ್ಟಿಗೆಯಲ್ಲಿ ಅಗ್ನಿ ಶಕ್ತಿ ಅನುಸಾರ ವಿರುತ್ತದೆ ಅದೇ ಪ್ರಕಾರ ಈ ದೇಹದಲ್ಲಿ ಆತ್ಮನ ವಿದ್ಯಮಾನವಿದೆ. ಆ ಆತ್ಮನ ಅಭಿವ್ಯಕ್ತಿಯೇ ಪರಮಾತ್ಮನ ಉಪಲಬ್ಧಿಯಾಗಿದೆ. ಇದೇ ಧರ್ಮಧ್ಯಾನ, ಸಾಧನೆಯ ಮೂಲ ಧ್ಯೇಯವಾಗಿದೆ. ಚಿನ್ನದ ಶಿಲೆಯನ್ನು ಅಗ್ನಿಯಲ್ಲಿ ಕಾಯಿಸದ ವಿನಹ ಅದರಲ್ಲಿಯ ಕಲ್ಮಶ, ಕಪ್ಪು ಕಿಟ್ಟ ಹೋಗುವುದಿಲ್ಲ ಅದನ್ನು ಪ್ರಜ್ವಲಿಸುವ ಭಟ್ಟಿಯಲ್ಲಿ ಸುಡಲಾಗುತ್ತದೆ. ಆಗ ಅದರಲ್ಲಿರುವ ಚಿನ್ನವು ಸುಟ್ಟು ಶುದ್ಧ ಸ್ವರೂಪದಲ್ಲಿ ನಿಖರವಾಗಿ ಹೊರಡುತ್ತದೆ. ಒಂದು ಸಾರಿ ಅಲ್ಲ ಪೂರ್ಣ 6 ಬಾರಿ ಸುಡಲಾಗುತ್ತದೆ. ಆಗ ಅದು ಹದಿನಾರಾಣೆ ಶುದ್ಧ ಸುವರ್ಣವೆಂದು ಕರೆಯಲಾಗುತ್ತದೆ. ಅದರಲ್ಲಿ ಯಾವ ಅಶುದ್ಧತೆ ಇರುವುದಿಲ್ಲ ಅದು ನೂರಕ್ಕೆ ನೂರರಷ್ಟು ಶುದ್ಧ ಚಿನ್ನವಾಗುತ್ತದೆ ಹಾಗೆಯೇ ಯಾವ ವ್ಯಕ್ತಿಯು ತಪಸ್ಸಿನ ಅಗ್ನಿಯಲ್ಲಿ ಸುಟ್ಟು ಹೋಗುತ್ತಾರೋ ಹಾಗೂ ಸುಡುತ್ತಾ ಸುಡುತ್ತಾ ತನ್ನ ಆತ್ಮನ ಕರ್ಮ ಕಲ್ಮಷವನ್ನು ಪೂರ್ಣ ರೂಪದಿಂದ ತೆಗೆದು ಹಾಕಿದಾಗ ಆತ್ಮನು ತನ್ನ ನಿಜವಾದ ಸ್ವರೂಪವನ್ನು ಪಡೆಯುತ್ತಾನೆ, ವಾಸ್ತವಿಕ ಸುಖವನ್ನು ಪಡೆಯುತ್ತಾನೆ. ಆ ಆತ್ಮವು ಕುಂದನವಾಗಿ ಬಿಡುತ್ತದೆ.

ಹಾಲಿನಲ್ಲಿ ತುಪ್ಪ ಸೇರಿಕೊಂಡಿದೆ. ಅದು ಸಹಜ ರೂಪದಲ್ಲಿ ಉಪಲಬ್ಧವಾಗುವುದಿಲ್ಲ. ತುಪ್ಪವನ್ನು ಪಡೆಯ ಬೇಕಾದರೆ ಪೂರ್ಣ ಪ್ರಕ್ರಿಯಗಳಾಗಬೇಕು, ಆಗಲೇ ತುಪ್ಪವನ್ನು ಪಡೆಯಬಹುದು. ಹಾಗೆಯೇ ತಪಸ್ಸು ಮಾಡಿದಾಗ ಅಂತರಂಗದಲ್ಲಿ ಹರಡಿರುವ ಸಮಸ್ತ ಕಲುಷತೆಗಳು ವಿಕೃತಿಗಳು ದೂರವಾಗಿ ಬಿಡುತ್ತವೆ, ಚಿತ್ತ ಮತ್ತು ಚೇತನದ ಸಮಸ್ತ ಅಶುದ್ಧಿಗಳು ದೂರವಾಗಿ ಬಿಡುತ್ತವೆ. ಎಳ್ಳಿನಲ್ಲಿ ಎಣ್ಣೆ ಇದೆ. ಇದು ತಿಳಿದಿದೆ ಆದರೆ ಅದು ಗಾಣದಲ್ಲಿ ಅದನ್ನು ಹಾಕಿ ತಿರುಗಿಸಿದಾಗ ದೊರೆಯುತ್ತದೆ. ಕಟ್ಟಿಗೆಯಲ್ಲಿ ಬೆಂಕಿ ಇದೆ ಆದರೆ ಅದು ಸುಡುತ್ತಿರುವಾಗ ಶಕ್ತಿರೂಪದಿಂದ ಪ್ರಕಟವಾಗುತ್ತದೆ. ಅದೇ ಪ್ರಕಾರ ನಮ್ಮೊಳಗೆ ಪರಮಾತ್ಮಾ, ಭಗವಂತ, ಅಡಗಿದ್ದಾನೆ ಅದನ್ನು ಪ್ರಕಟ ಮಾಡ ಬಹುದಾಗಿದೆ. ಆ ಶಕ್ತಿಯನ್ನು ಗುರುತಿಸಿ ಹಾಗೂ ಅದಕ್ಕನುಗುಣವಾಗಿ ಪ್ರಯಾಸ ಮಾಡಬೇಕು ತತ್ತಾರ್ಥ ಸೂತ್ರ ಗ್ರಂಥದ ಟೀಕೆಯಲ್ಲಿ ಆಚಾರ್ಯ ಪೂಜ್ಯಪಾದ ಸ್ವಾಮಿಗಳು ಸರ್ವಾರ್ಥ ಸಿದ್ಧಿಯಲ್ಲಿ ಹೀಗೆ ಬರೆದಿದ್ದಾರೆ-

**ಅನಿಗೂಹಿತವೀರ್ಯಸ್ಯ ಮಾರ್ಗಾವಿರೋಧಿ ಕಾಯಕ್ಲೇಷಸ್ತಪ:।(ಅ 6.ಸೂ.24)**

ನಮ್ಮ ಶಕ್ತಿಯನ್ನು ಬಚ್ಚಿಡದೇ ಮೋಕ್ಷ ಮಾರ್ಗಕ್ಕೆ ಅನುಕೂಲವಾಗುವಂತೆ ಶರೀರಕ್ಕೆ ಉಪವಾಸ ಇತ್ಯಾದಿಗಳಿಂದ ಕ್ಲೇಶ ನೀಡುವುದು ತಪವಾಗಿದೆ **"ತವೋ ವಿಸಯ ವಿಣಿಗ್ಗಹೋ ಜತ್ಥ"** ವಿಷಯಗಳ ನಿಗ್ರಹವಾಗುವುದೇ ತಪವು, ಆಚಾರ್ಯ ಕುಂದ ಕುಂದ ಸ್ವಾಮಿಗಳು ತಪ ಧರ್ಮದ ಲಕ್ಷಣಗಳನ್ನು ಹೇಳುತ್ತಾ ಬಾರಸಾಣುವೆಕ್ಖಾ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ–

**ವಿಸಯಕಸಾಯ ವಿಣಿಗ್ಗಹ ಭಾವಂ ಕಾಊಣ ಝಾಣ ಸಜ್ಝಾಏ।**
**ಜೋ ಭಾವ ಇ ಅಪ್ಪಾಣಂ, ತಸ್ಸ ತವಂ ಹೋದಿ ಣಿಯಮೇಣ॥77॥**

ಧ್ಯಾನ ಮತ್ತು ಸ್ವಾಧ್ಯಾಯಗಳಿಂದ ಇಂದ್ರಿಯ ವಿಷಯಗಳನ್ನು ಹಾಗೂ ಕಷಾಯಗಳನ್ನು ನಿಗ್ರಹ ಮಾಡಿ ಆತ್ಮನ ಭಾವನೆ ಮಾಡುವವರಿಗೆ ತಪ ಧರ್ಮವಾಗುತ್ತದೆ. ಇಂದ್ರಿಯ ವಿಷಯಗಳ ಮೇಲೆ ವಿಜಯ, ಕಷಾಯಗಳ ನಿಗ್ರಹ ಹಾಗೂ ಸ್ವಾಧ್ಯಾಯ ಇವೆಲ್ಲವು ಮನಸ್ಸನ್ನು ಗೆಲ್ಲುವ ಸಾಧನವಾಗಿವೆ ಹಾಗೂ ಮನಸ್ಸನ್ನು ಗೆಲ್ಲುವುದೇ ನಿಜವಾದ ಸಾಧನೆಯಾಗಿದೆ. ಆಚಾರ್ಯಶ್ರೀಗಳು ಇಲ್ಲಿ ಧ್ಯಾನ ಮತ್ತು ಸ್ವಾಧ್ಯಾಯದ ಮಾತುಗಳನ್ನು ಹೇಳಿದ್ದಾರೆ. ಸ್ವಾಧ್ಯಾಯವು ಒಂದು ಸಿದ್ಧಾಂತವಾಗಿದೆ. ಆದರೆ ಅದರ ಉಪಯೋಗ ಸತರ್ಕದಿಂದಾಗ ವಿವೇಕ ಸಂಪನ್ನ ಕ್ರಿಯೆ, ಭಾವ ಪೂರ್ವಕ ಉತ್ತಮ ಮೋಕ್ಷ ಪ್ರಾಪ್ತಿ ಅಥವಾ ಕರ್ಮ ನಿರ್ಜರೆಯ ಭಾವನೆಯಿಂದ ಮಾಡಿದರೆ ಅದು ಆ ಆತ್ಮನ ಶುದ್ಧತೆಗಾಗಿ ಆಲಂಬನವಾಗುತ್ತದೆ. ಇಲ್ಲವಾದಲ್ಲಿ ಆ ಸ್ವಾಧ್ಯಾಯ ಯಾವ ಕಾರ್ಯಕಾರಿ ಆಗುವುದಿಲ್ಲ. ಕೇವಲ ಓದಿಗೆ ಸೀಮಿತವಾಗಿರುತ್ತದೆ. ಅದರಲ್ಲಿ ಆತ್ಮನಿಗೆ ಯಾವ ಸಿದ್ಧಿಯೂ ಆಗುವುದಿಲ್ಲ.

ಆಚಾರ್ಯ ಕುಂದ ಕುಂದ ಸ್ವಾಮಿಗಳು–ಮುನಿಗಳ ಬಳಿ ಇರುವ ತಪಸ್ಸು–ಧ್ಯಾನ ಮತ್ತು ಸ್ವಾಧ್ಯಾಯಗಳಿಂದ ಪಂಚೇಂದ್ರಿಯ ವಿಷಯಗಳಿಂದ ವಿರಕ್ತರಾಗಿ ಹಾಗೂ ಕ್ರೋಧ, ಮಾನ ಮಾಯಾ, ಲೋಭ ಇತ್ಯಾದಿ ನಾಲ್ಕೂ ಕಷಾಯಗಳಿಂದ ದೂರರಾಗಿ ತಮ್ಮ ಆತ್ಮನ ಚಿಂತನೆ ಮಡುತ್ತಾ ಅದರಲ್ಲಿಯೇ ಲೀನರಾಗುತ್ತಾರೆಂದು ಹೇಳುತ್ತಾರೆ. ಧ್ಯಾನ ನಿರ್ಮಲವಾಗದವರೆಗೆ ಸ್ವಾಧ್ಯಾಯ ಸಹ ಪರಮಾರ್ಥದ ಕಡೆಗೆ ಕರೆದೊಯ್ಯಲಾರದು. ಇಂದು ಜನ ಆತ್ಮ–ರೌದ್ರ ಧ್ಯಾನ ಬಿಡದೆ ಸ್ವಾಧ್ಯಾಯ ಮಾಡುವುದನ್ನು ನೋಡಿದ್ದೇನೆ. ಎಲ್ಲಿಯೋ ಸ್ವಾಧ್ಯಾಯ ಮಾಡತೊಡಗುತ್ತಾರೇ, ಅದರ ಯಾವುದೇ ಸ್ಥಾನವಿಲ್ಲ, ಯಾವ ಮಂಗಲಾಚರಣೆಯೂ ಇಲ್ಲ, ಯಾವ ವಿನಯವನ್ನು ತೋರಿಸುವುದಿಲ್ಲ, ಎಂದಾಗ ಸಹೋದರರೇ ಅಂತಹ ಸ್ವಾಧ್ಯಾಯದಲ್ಲಿ ಯಾವ ಪ್ರಯೋಜನವು ಸಿದ್ಧವಾಗುವುದಿಲ್ಲ. ಅದರ ವಿನಯ ಇತ್ಯಾದಿ ಮಾಡಬೇಕು ಯಾಕೆಂದರೆ ಹೀಗೆ ಹೇಳಿದ್ದಾರೆ–

**ವಿನಯವಿಲ್ಲದೇ ವಿದ್ಯೆ ಇಲ್ಲ, ವಿದ್ಯೆ ಇಲ್ಲದೇ ಜ್ಞಾನವಿಲ್ಲ।**
**ಜ್ಞಾನವಿಲ್ಲದೇ ಸುಖವು ಸಿಗದು, ಇದನ್ನು ನಿಶ್ಚಯದಿ ತಿಳಿ॥**

ಆಚಾರ್ಯ ಕುಂದ ಕುಂದರು ಶ್ರೇಷ್ಠ ಕ್ರಮದಲ್ಲಿ ಹೇಳಿದ್ದಾರೆ, ಮೊದಲು ಧ್ಯಾನವನ್ನು ಪ್ರಶಸ್ತಗೊಳಿಸಿ, ಆರ್ತ–ರೌದ್ರ ಧ್ಯಾನಗಳನ್ನು ಬಿಡಿ, ಧ್ಯಾನ, ಶುಭವನ್ನು ಪಡೆದುಕೊಳ್ಳಿ. ಆಗ ನಿಜವಾದ ಸ್ವಾಧ್ಯಾಯವಾಗುತ್ತದೆ, ಅರೇ! ಆಗ ಸ್ವಾಧ್ಯಾಯವಾಗುತ್ತದೆ. ಅದಕ್ಕೂ ಮುನ್ನ ಆಗದು, ಭಾವ ಶ್ರುತದ ಪ್ರಾಪ್ತಿ ಯಾವಾಗ ಆಗುತ್ತದೆ? ನೋಡಿ ಅವರಿಗೆ **'ತುಷ ಮಾಷ ಭಿನ್ನಂ'** ಸಹ ನೆನಪಿಗೆ ಬಂದಿರಲಿಲ್ಲ ಆದರೂ ಕೇವಲ ಜ್ಞಾನದ ಪ್ರಾಪ್ತಿಯಾಯಿತು ಆದ್ದರಿಂದಲೇ **'ಶುಕ್ಲೇ ಚಾದ್ಯೇ ಪೂರ್ವವಿದಃ'** ಎಂದು

ಹೇಳಿದ್ದಾರೆ. ಪ್ರಾರಂಭದ ಎರಡು ಶುಕ್ಲಧ್ಯಾನಗಳು ಪೂರ್ವವಿದರಿಗೆ ಆಗುತ್ತವೆ. ಪೃಥಕ್ತ್ವ ವಿತರ್ಕ ವಿಚಾರ ಮತ್ತು ಏಕತ್ವ ವಿತರ್ಕ ಅವಿಚಾರ, ಅಂದರೆ ದ್ವಾದಶಾಂಗದ ಜ್ಞಾನ ಆಗಬೇಕು. ಆದರೆ ಅವರಿಗೆ ಏನೂ ಇರಲಿಲ್ಲ. ಆದರೆ ಹೇಗೆ ಏನು ಆಯಿತು? ಧ್ಯಾನದಲ್ಲಿ ಕುಳಿತರೆ ಆಯಿತು. ಆರ್ತ, ರೌದ್ರ. ಧ್ಯಾನ ಇಲ್ಲದಂತಾಯಿತು ಹಾಗೂ ಆ ಸಮಯ ಭೇದ ವಿಜ್ಞಾನದ ಮೂಲಕ ಅವರು ಭಾವಶ್ರುತವನ್ನು ಪಡೆದರು ಅಷ್ಟರ ಮಟ್ಟಿಗೆ ಶ್ರೇಷ್ಠವಾದ ಧರ್ಮಧ್ಯಾನವಾಯಿತು. ಹಾಗೂ ಅದೇ ಸಮಯ ಶುಕ್ಲಧ್ಯಾನವಾಯಿತು ಪುಸ್ತಕದಲ್ಲಿ ಓದುವುದು ಬೇರೆ ಮಾತು ಹಾಗೆಯೇ ಏಕಾಗ್ರತೆ ಉಂಟಾದರೆ ಭಾವಶ್ರುತದ ಪ್ರಾಪ್ತಿಯಾಯಿತು. ಜಘನ ರೂಪದಿಂದ ಅಷ್ಟ ಪ್ರವಚನ ಮಾತೃಕಾ (ಪಂಚ ಸಮಿತಿ ತ್ರಿಶುದ್ಧಿ) ರೂಪ ಜ್ಞಾನ ಮಾತ್ರದಿಂದ ಅದೇ ಸಮಯ ಶುಕ್ಲಧ್ಯಾನವಾಯಿತು. ಹಾಗೂ ಕೇವಲಜ್ಞಾನ ಸಹ ಆಯಿತು. ಕೇವಲ ಶಾಸ್ತ್ರ ಓದುವುದರಿಂದಲೇ ಜ್ಞಾನವಾಗುತ್ತದೆ ಎಂದೇನೂ ಇಲ್ಲ, ಧ್ಯಾನದಿಂದಲೂ ಭಾವಶ್ರುತದ ಪ್ರಾಪ್ತಿಯಾಗುತ್ತದೆ. ಹೀಗೆ ಧ್ಯಾನದಿಂದಲೂ ನಿಜವಾದ ಸ್ವಾಧ್ಯಾಯವಾಗುತ್ತದೆ. ನಿಜವಾದ ಸ್ವಾಧ್ಯಾಯವೆನ್ನಿ ಇಲ್ಲವೇ ಜ್ಞಾನವೆನ್ನಿ ಒಂದೇ ಮಾತಾಗಿದೆ. ಸ್ವಾಧ್ಯಾಯದಿಂದ ಜ್ಞಾನವಾಗುತ್ತದೆ. "ಜ್ಞಾನದ ಫಲ"– **'ಣಾಣಸ್ಸ ಫಲಂ ಉಪೆಕ್ಖಾ' ಅಥವಾ 'ಜ್ಞಾನಸ್ಯ ಫಲಂ ಉಪೇಕ್ಷಾ'** ಜ್ಞಾನದ ಫಲ ಉಪೇಕ್ಷಾ ಆಗಿದೆ. ಉಪೇಕ್ಷಾ ಎಂದರೆ–ಮುಖ ತಿರುಗಿಸಿದರು, ಅದರಿಂದ ಸಂಬಂಧ ಮುರಿದುಕೊಂಡರು ಎಂದಲ್ಲ, ಬದಲಾಗಿ ಜ್ಞಾನದ ಬದಲಾಗಿ ತ್ಯಾಗ ಭಾವನೆ ಬರಬೇಕು ಮೂಲಾಚಾರದಲ್ಲಿ ಹೀಗೆ ಹೇಳಿದ್ದಾರೆ.

**ಜೇಣ ರಾಗಾ ವಿರಜ್ಜೇಜ್ಜ ಜೇಣ ಸೇಏ ಸು ರಜ್ಜದಿ।**
**ಜೇಣ ಮತ್ತಿಂಪಭಾವೇಜ್ಜ ತಂ ಣಾಣಂ ಜಿಣ ಸಾಸಣೇ॥268॥**

ಯಾವುದರಿಂದ ಜೀವವು ರಾಗದಿಂದ ವಿರಕ್ತವಾಗುವುದೋ, ಯಾವುದರಿಂದ ಮೋಕ್ಷ ಮಾರ್ಗದಲ್ಲಿ ರಾಗವಾಗುವುದೋ ಅಥವಾ ಅನುರಕ್ತವಾಗುವುದೋ ಅರ್ಥಾತ್ ರತ್ನತ್ರಯದ ಪವಿತ್ರ ಭಾವನೆ ಜಾಗೃತವಾಗುವುದೋ ಮತ್ತೆ ಯಾವುದರಿಂದ ಮೈತ್ರಿಯ ಭಾವ ಉಂಟಾಗುವುದೋ ಅದನ್ನು ಜಿನ ಶಾಸನದಲ್ಲಿ ಜ್ಞಾನವೆಂದು ಹೇಳಿದ್ದಾರೆ.

ಜ್ಞಾನದ ವಿಷಯಕ್ಕೆ ಸಂಬಂಧಿಸಿದಂತೆ ಮೂರು ಮಾತುಗಳನ್ನು ಹೇಳಿದ್ದಾರೆ–ಯಾವ ಜ್ಞಾನದಲ್ಲಿ ರಾಗ–ಸ್ನೇಹ ಬಿಡುಗಡೆಯಾಗುವುದೋ. ಪಂಚೇಂದ್ರಿಯಗಳ ವಿಷಯಗಳಿಂದ, ಸಂಸಾರದಿಂದ, ಕಾಮ–ಕ್ರೋಧಾದಿಗಳಿಂದ ಪರಾಙ್ಮುಖವಾಗುವುದೋ, ಎರಡನೆ ಮಾತೆಂದರೆ ಯಾವುದರ ಮೂಲಕ ಮೋಕ್ಷ ಮಾರ್ಗದಲ್ಲಿ ರುಚಿ ಜಾಗೃತವಾಗುವುದೋ, ರತ್ನತ್ರಯದ ಪ್ರಾಪ್ತಿಯ ತೀವ್ರ ಲಾಲಸೆ–ಭಾವನೆ ಉತ್ಪನ್ನವಾಗುವುದೋ, ಮೂರನೆ ಮಾತೆಂದರೆ ಯಾವುದರ ಮೂಲಕ ಪರಸ್ಪರರಲ್ಲಿ ಮೈತ್ರಿ ಭಾವ, ವಾತ್ಸಲ್ಯ ಭಾವ ಉತ್ಪನ್ನವಾಗುವುದೋ, ದ್ವೇಷದ ಅಭಾವವಾಗುವುದೋ, ವೈರಭಾವನೆಗಳು ಕೊನೆಗೊಳ್ಳುವವೋ ಅದರ ಹೆಸರನ್ನು ಜಿನ ಶಾಸನದಲ್ಲಿ ಜ್ಞಾನವೆಂದು ಕರೆದಿದ್ದಾರೆ. ಈ ಮೂರು ಮಾತುಗಳಿರದಿದ್ದರೆ ಜ್ಞಾನವಿಲ್ಲ. ತಾವು ಎಷ್ಟೇ ಓದಿದ್ದರೂ, ಏನೇ ಮಾಡಿದ್ದರೂ. ನಿಮ್ಮೊಳಗೆ ವೈರಭಾವವಿದ್ದರೆ ಕರ್ಮ ನಿರ್ಜರೆಯಲ್ಲಿ ಅದು ಕಾರ್ಯಕಾರಿಯಾಗುವುದಿಲ್ಲ.

ಪ್ರಸಂಗಾನುಸಾರ ಒಂದು ಮಾತು ಸ್ಮರಣೆಯಲ್ಲಿ ಬರುತ್ತಲಿದೆ, ಅದನ್ನು ಯಾರೋ ಹೇಳಿದ್ದರು, ಎಲ್ಲರಿಗೂ ವಿಚಾರಣೀಯವಾಗಿದೆ. ಸಾಮಾನ್ಯವಾಗಿ ಜನರು ಕೋಪ ಮಾಡಿಕೊಳ್ಳುತ್ತಾರೆ. ಕೋಪ ಮಾಡಿಕೊಂಡರು ಅದು ಸ್ವಲ್ಪ ಸಮಯದ ನಂತರ ಇಲ್ಲವಾದರೆ ಹುಳಿಯಂತೆ ಇದೆ. ಕೋಪ

ಕಷಾಯವಾಗಿದೆ . ಕರ್ಮಗಳನ್ನು ಬಂಧ ಮಾಡುತ್ತದೆ. ಆದರೆ ಈ ಕೋಪ ಹೆಚ್ಚು ದಿನಗಳ ಕಾಲ ಇದ್ದರೆ ಅದು ಉಪ್ಪಿನಕಾಯ-ಸಿಹಿ ಮಿಠಾಯಯಂತಾಗಿ ಬಿಡುತ್ತದೆ. ಅಂದರೆ ಪ್ರಗಾಢವಾಗಿ ಹುಳಿಯಾಗಿ ಬಿಡುತ್ತದೆ. ಅದರಲ್ಲಿ ಉಪ್ಪಿನಕಾಯಿ ಸಿಹಿ ಮಿಠಾಯಿ ಹಾಗೇ ವಿಶೇಷ ಸ್ವಾದ ಬರತೊಡಗುತ್ತದೆ. ಕಷಾಯ ಬಹಳ ದಿನಕಾಲ ಇದ್ದರೆ ವೈರದ ರೂಪವಾಗುತ್ತದೆ. ಆದ್ದರಿಂದ ವೈರವು ಉಪ್ಪಿನಕಾಯಿ ಸಿಹಿ ಮಿಠಾಯಂತೆ ಇದೆ ಎಂದು ಹೇಳುತ್ತಾರೆ. ಬಹಳಷ್ಟು ಬಂದರೆ ಅದರ ಮಾಧ್ಯಮದಿಂದ ಅಷ್ಟೇ ಪಾಪಗಳ ಅರ್ಜನೆ ಹೆಚ್ಚಾಗುತ್ತದೆ ಹಾಗೂ ಅದರೊಂದಿಗೆ ಮರಣವಾದರೆ ಅದರ ನಿದಾನ ಎಲ್ಲೆಲ್ಲಿಗೆ ಕರೆದೊಯ್ಯುತ್ತದೆಯೋ ಗೊತ್ತಿಲ್ಲ ಆದ್ದರಿಂದ ಕಷಾಯಗಳನ್ನು ಶಮನ ಮಾಡಬೇಕು.

ಹೀಗೆ ಯಾವುದರ ಮೂಲಕ ರಾಗದ ವಿರೇಚನೆಯಾಗುವುದೋ. ಮೋಕ್ಷ ಮಾರ್ಗದ ರುಚಿ ಜಾಗೃತವಾಗುವುದೋ ಹಾಗೂ ವಾತ್ಸಲ್ಯ ಭಾವನೆ ಹುಟ್ಟುವುದೋ ಅದು ಜ್ಞಾನವಿದೆ. ಇಂತಹದೇ ಜ್ಞಾನದಿಂದ ನಮ್ಮ ಜೀವನವನ್ನು ಮಹಾನ್ ಮಾಡಬಹುದಾಗಿದೆ. ಈ ಜ್ಞಾನವು ಧ್ಯಾನಕ್ಕೂ ಕಾರಣದಾಗಿದೆ. ಯಾರಿಗೋ ಯಾವಾಗಲೋ ಧ್ಯಾನ ಜ್ಞಾನ ವೃದ್ಧಿಯಲ್ಲಿ ಕಾರಣವಾಗಿಸುತ್ತದೆ. ಪರಸ್ಪರರಲ್ಲಿ ನಿಮಿತ್ತ ನೈಮಿತ್ತಿಕ ಸಂಭಂಧವಿದೆ. ಆದರೆ ಜ್ಞಾನವು ಪರಮಾರ್ಥದ ಸಾಧನೆಯೊಂದಿಗೆ ಸೇರಿಕೊಂಡಿತಿರಬೇಕು. ಎನ್ನುವುದನ್ನು ಜ್ಞಾಪಕದಲ್ಲಿಡಬೇಕು. ಒಂದು ವೇಳೆ ಆ ಜ್ಞಾನವು ಖ್ಯಾತಿ, ಲಾಭ, ಪೂಜೆ ಇತ್ಯಾದಿಗಳಿಂದ ಯಾವುದಾದರೂ ನಿದಾನ ಭಾವವನ್ನು ಹೊಂದಿದ್ದರೆ. ಆ ಜ್ಞಾನವು ಆತ್ಮನಿಗಾಗಿ ಯಾವುದೇ ರೀತಿಯಲ್ಲಿ ಕಾರ್ಯಕಾರೀ ಆಗಲಾರದು. ಜ್ಞಾನಿಯಾಗಲು ಅಶುಭ ಧ್ಯಾನಗಳ ತ್ಯಾಗ ಮಾಡಬೇಕು. ಇಲ್ಲವಾದಲ್ಲಿ ಆ ಜ್ಞಾನದಿಂದ ಸಂಸಾರದಿಂದ ಪಾರಾಗಲು ಸಾಧ್ಯವಾಗುವುದಿಲ್ಲ. ಪದ್ಮನಂದಿ ಪಂಚವಿಂಶತಿ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ–

**ಕರ್ಮಮಲ ವಿಲಯೇ ಹೇತೋರ್ಬೋಧ ದೃಶಾ ತಪ್ಯತೇ ತಪ: ಪ್ರೋಕ್ತಂ॥98॥**

ಸಮ್ಯಕ್ ಜ್ಞಾನ ರೂಪದ ನೇತ್ರದ ಧಾರಣೆ ಮಾಡಿರುವ ಸಾಧುವಿನ ಮೂಲಕ ಯಾರು ಕರ್ಮರೂಪಿ ಮಲವನ್ನು ದೂರಮಾಡಲು ತಪಿಸುವವರು–ಅದನ್ನು ತಪ ಎಂದು ಹೇಳಿದ್ದಾರೆ. ಸಮ್ಯಗ್ ಜ್ಞಾನ ರೂಪದ ಕಣ್ಣು ಯಾರ ಬಳಿ ಇದೆ, ಅಂದರೆ ಆ ಸಾಧು ಬಹಳ ವಿವೇಕಿಯಾಗಿದ್ದಾರೆ. ಅವರ ಮೂಲಕ ಕರ್ಮಗಳ ಕ್ಷಯಕ್ಕಾಗಿ ಅರ್ಥಾತ್ ಕರ್ಮಗಳನ್ನು ತೊಳೆಯಲು ತಪಿಸುವುದನ್ನು ತಪ ಎಂದು ಹೇಳುತ್ತಾರೆ. **"ತವೋ ವಿಸಯ ವಿಣಿಗ್ಗಹೋ ಜತ್ಥ"** (ನಿ.ಸಾ.ತಾ.6/15) ವಿಷಯಗಳ ನಿಗ್ರಹ ಯಾವುದರಲ್ಲಿ ಇದೆಯೋ ಅದೇ ತಪವಾಗಿದೆ. ವ್ಯಕ್ತಿಯನ್ನು ಪತನದಿಂದ ರಕ್ಷಿಸುವುದು ತಪವಾಗಿದೆ. ತಪದ ವಿಲೋಮ ಶಬ್ಧ ಪತ ಆಗಿದೆ. ಪತ ಎಂದರೆ ಬೀಳುವುದು. ಬೀಳುವುದರಿಂದ ರಕ್ಷಿಸುವುದು ಅದು ತಪವಾಗಿದೆ. ತಪದ ಪ್ರಭಾವದಿಂದಲೇ ನಮ್ಮ ಆತ್ಮನನ್ನು ಉತ್ಕೃಷ್ಟನನ್ನಾಗಿ ಮಾಡಬಹುದು. ತಪದ ಕಾರಣದಿಂದಲೇ ಸಾಧುಗಣವು ಪೂಜ್ಯರಾಗುತ್ತಾರೆ. ತಪವು ಶುದ್ಧಿಯ ಸಾಧನವಾಗಿದೆ. ತಪದಿಂದಲೇ ಆತ್ಮನಲ್ಲಿ ಪರಿಪಕ್ವತೆ ಬರುತ್ತದೆ.

ಮುಖ್ಯ ರೂಪದಿಂದ ತಪವು ಎರಡು ಪ್ರಕಾರವಾಗಿದೆ–ಬಹಿರಂಗ ತಪ ಮತ್ತು ಅಂತರಂಗ ತಪ. ಬಹಿರಂಗ ತಪವು ಆರು ಪ್ರಕಾರವಾಗಿದೆ ಹಾಗೂ ಅಂರತಂಗ ತಪವೂ ಸಹ ಆರು ಪ್ರಕಾರವಾಗಿದೆ. ಆಚಾರ್ಯ ಉಮಾಸ್ವಾಮಿಗಳು ತತ್ತ್ವಾರ್ಥಸೂತ್ರದ 9ನೇ ಅಧ್ಯಾಯದ 9–20ನೇ ಸೂತ್ರಗಳಲ್ಲಿ ಹೀಗೆ ಹೇಳಿದ್ದಾರೆ–

**"ಅನಶನಾವಮಾದರ್ಯ ವೃತ್ತಿ ಪರಿಸಂಖ್ಯಾನ ರಸ ಪರಿತ್ಯಾಗ ವಿವಿಕ್ತಶಯ್ಯಾಸನ ಕಾಯಕ್ಲೇಶಾಃ ಬಾಹ್ಯಂ ತಪ:। ಪ್ರಾಯಶ್ಚಿತ್ತವಿನಯ ವೈಯಾವೃತ್ಯಸ್ವಾಧ್ಯಾಯ ವ್ಯುತ್ಸರ್ಗ ಧ್ಯಾನಾನ್ಯುತ್ತರಮ್"**

ಬಹಿರಂಗ ತಪದ ಮೂಲಕ ಶರೀರವನ್ನು ತಪಿಸಲಾಗುತ್ತದೆ ಹಾಗೂ ಅಂತರಂಗ ತಪದ ಮೂಲಕ ಆತ್ಮನನ್ನು ತಪಿಸಲಾಗುತ್ತದೆ. ತಪವನ್ನು ಅಂತರಂಗ-ಬಹಿರಂಗ ತಪಗಳೆಂದು ವಿಂಗಡಿಸಿರಲು ಕಾರಣವೇನು? ಬಹಿರಂಗ ತಪವು ಹೊರಗಿನಿಂದ ಕಾಣುತ್ತದೆ. ಇವು ಅಂತರಂಗದೊಂದಿಗೆ ಸಂಬಂಧವನ್ನು ಹೊಂದಬಹುದು. ಇವುಗಳಲ್ಲಿ ಬಾಹ್ಯ ದ್ರವ್ಯಗಳ(ಶರೀರದ ಹಾಗೂ ಶರೀರಕ್ಕೆ ಅವಶ್ಯ ಬೀಳುವ ಭೋಜನ ಇತ್ಯಾದಿಗಳ) ತ್ಯಾಗದ ಪ್ರಧಾನತೆ ಇರುತ್ತದೆ ಹಾಗೂ ಈ ತಪಗಳನ್ನು ಜೈನರಲ್ಲದೇ ಅನ್ಯ ಮತಾವಲಂಬಿಗಳು ಸಹ ಮಾಡಬಹುದಾಗಿದೆ. ಅನ್ಯ ಮತಾವಲಂಬಿಗಳ ಬಳಿ ಒಂದಲ್ಲ ಒಂದು ಲೌಕಿಕ ಬೇಡಿಕೆಗಳು, ಭಾವನೆಗಳು ಇರುತ್ತವೆ. ಕರ್ಮಗಳ ಕ್ಷಯ ಮಾಡುವ ಉದ್ದೇಶ ಇರುವುದಿಲ್ಲ. ಆದ್ದರಿಂದ ಅವರು ಅಂತರಂಗ ತಪಗಳನ್ನು ಮಾಡಲಾಗುವುದಿಲ್ಲ. ಅಂತರಂಗ ತಪಗಳನ್ನು ತಪಿಸಲು ಪರಮಾರ್ಥದೊಂದಿಗೆ ಸೇರುವುದು ಆವಶ್ಯಕವಿದೆ. ಇವುಗಳಲ್ಲಿ ನಿರ್ಮಲ ಆತ್ಮ ದ್ರವ್ಯದ ಪ್ರಧಾನತೆ ಇರುತ್ತದೆ. ಯಥಾರ್ಥರೂಪದಿಂದ ಸಮ್ಯಗ್ ದೃಷ್ಟಿ ಆತ್ಮ ಜ್ಞಾನಿ ಸಾಧು ಜನರೇ ಮಾಡಬಲ್ಲರು. ಈ ಅಂತರಂಗ ತಪಗಳಲ್ಲಿ ಮಾನ ಹಾಗೂ ಮಾಯಾ ಕಷಾಯಗಳ ವಿಜಯತೆ ಪ್ರಮುಖವಾಗಿದೆ. ಬಹಿರಂಗ ತಪವು ಆರು ಪ್ರಕಾರವಾಗಿದೆ.

**ಅನಶನ**-ಬಹಿರಂಗ ತಪಗಳಲ್ಲಿ ಅನಶನ ಮೊದಲ ತಪವಿದೆ. ಅನ್+ಅಶನ ಅರ್ಥಾತ್ ಅಶನ ಎಂದರೆ ಭೋಜನ ಹಾಗೂ ಅನ್ಯ ಪ್ರತ್ಯಯ ಸೇರಿದೆ ಅದರ ಅರ್ಥ ಭೋಜನದ ಅಭಾವ ಅದು ಅನಶನವಾಗಿದೆ. ಭೋಜನದ ತ್ಯಾಗ ಮಾಡುವುದು ಅನಶನ ತಪವೆಂದು ಕರೆಯಲಾಗುತ್ತದೆ. ಒಂದು ವೇಳೆ ಲೋಕ ಸಂಬಂಧದ ಬಯಕೆಗಳು ಮನಸ್ಸಿನಲ್ಲಿ ಇರುತ್ತವೆ, ಅದಕ್ಕಾಗಿ ಭೋಜನ ಮಾಡದಿರುವುದು ಲಂಘನ-ಉಪವಾಸವಿದೆ. ಅದು ಅನಶನವಲ್ಲ. ಜೈನದರ್ಶನದಲ್ಲಿ ಬಹಿರಂಗ ತಪ ಮತ್ತು ಅಂತರಂಗ ತಪ ಎರಡೂ ತಪಗಳೊಂದಿಗೆ ಪರಮಾರ್ಥದ ಸಂಬಂಧ ಸೇರಿದಾಗ ಉತ್ತಮ ತಪವೆಂದು ಕರೆಯಲಾಗುತ್ತದೆ. ಅನಶನದಲ್ಲಿ ನಾಲ್ಕೂ ಪ್ರಕಾರದ ಆಹಾರ ಖಾದ್ಯ., ಸ್ವಾದ್ಯ, ಲೇಹ್ಯ, ಪೇಯ ಅಥವಾ ಅಶನ, ಪಾನ, ಖಾದ್ಯ ಲೇಹ್ಯಗಳ ತ್ಯಾಗವನ್ನು ಮಾಡಲಾಗುತ್ತದೆ. ಇದು ಕೆಲವು ಬಾರಿ ಸೀಮಿತ ಅವಧಿಗೂ ಇರುತ್ತದೆ ಹಾಗೂ ಯಾಜ್ಜೀವನ ಅರ್ಥಾತ್ ಆಜೀವನ ಪರ್ಯಂತವೂ ಇರುತ್ತದೆ. ಲೋಕೋತ್ತರ-ಮುಕ್ತಿಮುಖಕ್ಕಾಗಿ ಹಾಗೂ ಕಾಮ ಶತ್ರುವನ್ನು ಜಯಿಸಲು ನಾಲ್ಕು ಪ್ರಕಾರದ ಆಹಾರದ ತ್ಯಾಗ ಮಾಡುವುದು ಅನಶನ ತಪವಾಗಿದೆ, ಹಸಿವೆಯನ್ನು ಗೆಲ್ಲುವುದು. ಹಾಗೂ ಮನಸ್ಸನ್ನು ನಿಗ್ರಹಿಸುವುದು ಅನಶನ ತಪವಿದೆ. ಈ ತಪದಿಂದ ಶಾರೀರಿಕ ಶುದ್ಧಿಯೂ ಸಹ ಆಗುತ್ತದೆ.

ಹದಿನಾರು ಪ್ರಹರಗಳಿಗಾಗಿ ನಾಲ್ಕು ಪ್ರಕಾರದ ಆಹಾರವನ್ನು ತ್ಯಾಗ ಮಾಡುವುದು ಅನಶನ ಉಪವಾಸವೆಂದು ಕರೆಯಲ್ಪಡುತ್ತದೆ. ಉಪವಾಸದಲ್ಲಿ ಆಹಾರವನ್ನು ತ್ಯಾಗ ಮಾಡುವುದು ಸರಳ ಪರಿಭಾಷೆಯಾಗಿದೆ. ವಿಶೇಷ ರೂಪದಿಂದ'ಉಪ' ಅಂದರೆ ಹತ್ತಿರ'ವಾಸ' ಎಂದರೆ ಇರುವುದು ಅರ್ಥಾತ್ **"ಉಪಸಮೀಪಂ ವಾಸಂ ಕರೋತಿ ಇತಿ ಉಪವಾಸಃ** 'ತನ್ನ ಆತ್ಮನ ಸಮೀಪವಿರುವುದೇ ಉಪವಾಸವಾಗಿದೆ. ಇದರಲ್ಲಿ ಬಾಹ್ಯ ವಿಕಲ್ಪಗಳನ್ನು ಬಿಟ್ಟು, ಕಷಾಯಗಳನ್ನು ಕೃಷಗೊಳಿಸಲು

ಸ್ವಯಂದ ಬಳಿ ಕುಳಿತುಕೊಳ್ಳುವುದೇ ಉಪವಾಸವಾಗಿದೆ. ಉಪವಾಸದಲ್ಲಿ ಭೋಜನದ ಇಚ್ಛೆಯು ಇರುವುದಿಲ್ಲ ಹಾಗೂ ನೀರಿನ ಆಕಾಂಕ್ಷೆಯು ಇರುವುದಿಲ್ಲ ಬದಲಾಗಿ ಚಿಂತನೆಯೇ ಭೋಜನ ಮತ್ತು ಆಚರಣೆಯೇ ನೀರಾಗಿದೆ. ವಿಷಯ ಕಷಾಯದ ತ್ಯಾಗ, ಆರಂಭ, ಸಾರಂಭ. ಏನಿದೆಯೋ ಅವುಗಳನ್ನು ಬಿಟ್ಟು ಕೇವಲ ಆತ್ಮನ ಚಿಂತನೆ ಮಾಡುವುದು, ಸ್ವಾಧ್ಯಾಯ ಧ್ಯಾನ ಮತ್ತು ಷಡ್ ಅವಶ್ಯಗಳಲ್ಲಿ ಲೀನನಾಗಿರುವುದು ವಾಸ್ತವಿಕ ಉಪವಾಸವಾಗಿದೆ. ಈ ಪ್ರಕಾರ ಅನಶನ ಉಪವಾಸದಲ್ಲಿ ಭೋಜನ ತ್ಯಾಗ ಒಂದೇ ಅಲ್ಲ. ಪಂಚೇಂದ್ರಯಗಳ ವಿಷಯ, ನಾಲ್ಕು ಪ್ರಕಾರದ ಕಷಾಯಗಳ ತ್ಯಾಗ ಮಾಡಿ ಸಾಧುಗಳು ಧ್ಯಾನ, ಸಮಿತಿ, ಮತ್ತು ಆವಶ್ಯಕಗಳಲ್ಲಿ ನಿರತರಾಗಿರುವುದು ಇಂತಹ ಧರ್ಮಕಾರ್ಯಗಳಲ್ಲಿ ಲೀನರಾಗಿರುವುದರಿಂದ, ಅವರು ಪಾರಮಾರ್ಥಿಕ ಉಪವಾಸವನ್ನು ಮಾಡುತ್ತಾರೆ.

ಗೃಹಸ್ಥರ ಅಪೇಕ್ಷೆಯಿಂದ ಆಚಾರ್ಯ ಸಮಂತಭದ್ರ ಸ್ವಾಮಿಗಳು "ಉಪವಾಸದ ದಿನ ಎಲ್ಲ ಗೃಹಸ್ಥ ಕ್ರಿಯೆಗಳನ್ನು ತ್ಯಾಗ ಮಾಡಿ ಸ್ವಯಂದ ಸಮೀಪ ಕುಳಿತುಕೊಳ್ಳುವುದು, ಧ್ಯಾನ-ಸಾಧನೆ. ಜಪ ಮಾಡುವ ಪ್ರೇರಣೆರೆ, ಶರೀರದ ಎಲ್ಲ ಅನಾವಶ್ಯಕ ವೈಷಯಿಕ ಭೋಗಿ ವಿಲಾಸತೆಗಳನ್ನು ತ್ಯಾಗ ಮಾಡುವುದರ ಹೆಸರೇ ಉಪವಾಸವಾಗಿದೆ" ಎಂದಿದ್ದಾರೆ. ಪ್ರತಿಮಾಧಾರಿ ವ್ರತಿಗಳು ಅವರು ಬ್ರಹ್ಮಚರ್ಯ ಸಹಿತ ಉಪವಾಸದಲ್ಲಿ ಸ್ನಾನ ಇತ್ಯಾದಿ ಕ್ರಿಯೆಗಳನ್ನು ಮಾಡದೇ ಹಾಗೂ ವೀತರಾಗತೆಯ ಧ್ಯಾನ ಜಪಗಳಲ್ಲಿ ಲೀನರಾಗಿದ್ದರೆ ಬಹಳ ಒಳ್ಳೆಯದೆಂದು ಆಚಾರ್ಯರು ಹೇಳಿದ್ದಾರೆ. ಅವರೂ ಆರಂಭ ಸಾರಂಭಗಳಿಂದ ಎಷ್ಟು ದೂರವಿರುತ್ತಾರೆ. ಎಷ್ಟು ತ್ಯಾಗ ಮಾಡುತ್ತಾರೋ ಅಷ್ಟು ಒಳ್ಳೆಯದಾಗಿದೆ. ಅನೇಕ ಜನರ ಮನಸ್ಸಿನಲ್ಲಿ ಆಹಾರ ಇತ್ಯಾದಿ ಉಪವಾಸದ ದಿನಗಳಲ್ಲಿ ಆಹಾರ ಕೊಡಬಹುದೇ ಅಥವಾ ಇಲ್ಲವೇ ಎಂಬ ಪ್ರಶ್ನೆಗಳಿರುತ್ತವೆ. ಹಾಗೇ ಒಂದು ವೇಳೆದಾನ ನೀಡುವ ಶ್ರಾವಕರ ವ್ಯವಸ್ಥೆ ಇದ್ದರೆ ಉಪವಾಸ ಮಾಡುವವವರಿಗೆ ಉಪವಾಸದ ದಿನ ಆಹಾರ ನೀಡುವ ಯಾವ ಆವಶ್ಯಕತೆಯೂ ಇಲ್ಲ. ತಾವು ಇಬ್ಬರು ವ್ಯಕ್ತಿಗಳಿದ್ದಿರೆಂದು ಭಾವಿಸಿ ಹಾಗೂ ಇಬ್ಬರದೂ ಉಪವಾಸವಿದ್ದು, ಪಡಗಾಹನಕ್ಕಾಗಿ ನಿಂತರೆ ಮುನಿರಾಜರಿಗೆ ಯಾವುದೋ ಕಾರಣದಿಂದ ತಾವು ಉಪವಾಸ ಮಾಡುತ್ತಿದ್ದೀರಿ ಎಂದು ತಿಳಿದರೆ ಅವರು ಅಲ್ಲಿಗೆ ಹೋಗುವುದಿಲ್ಲ. ಈ ಮಾತನ್ನು ಮುನಿರಾಜರು ಗಮನದಲ್ಲಿಟ್ಟಿರುತ್ತಾರೆ. ಆಹಾರಕ್ಕಾಗಿ ಆ ಚೌಕದಲ್ಲಿ ಯಾರಾದರೂ ಶ್ರಾವಕರು ಸಹ ಭೋಜನ ಮಾಡುವವರು ಇರಬೇಕು ಯಾಕೆಂದರೆ ಅತಿಥಿ ಸಂವಿಭಾಗದ ನಿಮಿತ್ತದಿಂದ ಆಹಾರ ಮಾಡಲಾಗುತ್ತದೆ. ಮಹಾರಾಜರ ನಿಮಿತ್ತದಿಂದ ಆಹಾರ ಮಾಡಲಾಗುವುದಿಲ್ಲ. ಉಪವಾಸದ ದಿನದಂದು ಸ್ನಾನದ ವಿಷಯದಲ್ಲಿಯೂ ಸಹ-ಇನ್ನೊಬ್ಬರಿಗೆ ಕಲಿಸಲು ಅಥವಾ ಅಭಿಷೇಕ ಪೂಜೆ-ಪಾಠ ಇತ್ಯಾದಿ ಕಾರ್ಯಗಳನ್ನು ಮಾಡಲು ಸ್ನಾನ ಮಾಡುವುದು ಅವಶ್ಯಕತೆ ಇರುತ್ತದೆ ಎನ್ನುವುದು ಗಮನದಲ್ಲಿರಬೇಕು. ಈ ನಿಮಿತ್ತವನ್ನು ಅವಶ್ಯವಾಗಿ ಗಮನದಲ್ಲಿಡಬೇಕು.

ಜ್ಞಾನ ಪೂರ್ವಕವಾಗಿ ಮಾಡುವ ಸಾಧನೆ ಕರ್ಮ ಬಂಧನವನ್ನು ಮುರಿಯಲು ಕಾರಣವಾಗಿದೆ ಹಾಗೂ ಅಜ್ಞಾನ ಪೂರ್ವಕ ಮಾಡುವ ತಪ ಸಾಧನೆ ಕೇವಲ ಅಲೆದಾಡುವ ಪರಂಪರೆಯನ್ನು ಬಲ ಪಡಿಸುವಲ್ಲಿ ಕಾರಣವಾಗುತ್ತದೆ. ಮುನಿರಾಜರು ತಪ ಸಾಧನೆಯ ತಳಹದಿಯಲ್ಲಿ ಇಳಿದಾಗ ಮನ-ವಚನ-ಕಾಯದ ಚಂಚಲ ವೃತ್ತಿಗಳನ್ನು ಕೂಡಲೇ ನಿಲ್ಲಿಸಿ ಬಿಡುತ್ತಾರೆ. ತಪದಲ್ಲಿ ಪರಮ ಪ್ರಸಿದ್ಧಿಯನ್ನು ಪಡೆದ ಬಾಹುಬಲಿ ಭಗವಂತರು ದೀಕ್ಷೆಯನ್ನು ಪಡೆದ ನಂತರ ಆಹಾರವನ್ನೇ

ಮಾಡಲಿಲ್ಲ. ವರ್ಷವಿಡಿ ದೀರ್ಘಕಾಲದ ವರೆಗೆ ಅವರು ಸಾಧನೆಯನ್ನು ಮಾಡುತ್ತಲೇ ಇದ್ದರು ಹಾಗೂ ಕೈವಲ್ಯವನ್ನು ಪಡೆದುಕೊಂಡರು. ವರ್ತಮಾನ ಸಮಯದಲ್ಲಿಯೂ ಸಹ ಬಹಳಷ್ಟು ಮುನಿರಾಜರು ಅನಶನ ವ್ರತಮಾಡುತ್ತಾರೆ. ಆಚಾರ್ಯ ಶಾಂತಿಸಾಗರ ಮಹಾರಾಜರು ಚಾರಿತ್ರ ಚಕ್ರವರ್ತಿಗಳಾದರು. ಅವರು ಈ ಕಲಿಕಾಲದಲ್ಲಿ ವಿಲುಪ್ತ ವಾಗುತ್ತಿದ್ದ ಮುನಿ ಪರಂಪರೆಗೆ ಮಾರ್ಗದರ್ಶನ ನೀಡಿದರು. ಆಚಾರ್ಯ ಶ್ರೀಗಳು ಅನೇಕ ಉಪವಾಸ ಮಾಡಿದರು. ಅವುಗಳಲ್ಲಿ ಸಿಂಹ ನಿಷ್ಕ್ರೀಡಿತ ಉಪವಾಸ ವ್ರತವನ್ನು ಮಾಡಿದರು. ಈ ವ್ರತದ ಉತ್ಕೃಷ್ಟ ವಿಧಿ ಒಂದು ಆಹಾರ, ಒಂದು ಉಪವಾಸ, ಒಂದು ಆಹಾರ ಎರಡು ಉಪವಾಸ ಈ ಪ್ರಕಾರ ಕ್ರಮವಾಗಿ ಹೆಚ್ಚಾಗುತ್ತಾ ಹದಿನೈದು ಉಪವಾಸಗಳವರೆಗೆ ತಲುಪುತ್ತದೆ ಮತ್ತೆ ಒಂದು ಆಹಾರ ಹದಿನಾಲ್ಕು ಉಪವಾಸ, ಈ ಪ್ರಕಾರ ಕ್ರಮವಾಗಿ ಇಳಿಯುವ ಕ್ರಮದಲ್ಲಿ ಬರುತ್ತದೆ. ಮಧ್ಯಮ ವಿಧಿಯಲ್ಲಿ ಇದೇ ಕ್ರಮದಿಂದ ಎಂದು ಉಪವಾಸದ ವರೆಗೆ ಹೆಚ್ಚಿಸುತ್ತಾ ಕಡಿಮೆ ಮಾಡಬೇಕಾಗುತ್ತದೆ ಹಾಗೂ ಜಘನ್ಯ ವಿಧಿಯಲ್ಲಿ ಐದು ಉಪವಾಸಗಳವೆರೆಗೆ ಹೆಚ್ಚಿಸುತ್ತಾ ಕಡಿಮೆ ಮಾಡಬೇಕಾಗುತ್ತದೆ. ಸಹೋದರರೇ ಹೀಗೆ ನಮಗೆ ಉಪವಾಸ ಮಾಡಲು ಆಗದಿದ್ದರೆ ಏನೂ ಅಭ್ಯಂತರವಿಲ್ಲ ಆದರೆ ಹೀಗೇ ಉಪವಾಸ ಮಾಡುವ ತಪಸ್ವಿಗಳ ಬಗ್ಗೆ ಸದಾಕಾಲ ವಿನಯ-ಭಕ್ತಿಭಾವ ಹೊಂದಿರಬೇಕು. ಉಪವಾಸದ ದಿನ ಕೆಲವು ಜನರು ಸಮಯ ಕಳೆಯಲು. ಮನೋರಂಜನೆಯ ಸಾಧನ, ಲೌಕಿಕ ಟಿವಿ. ಕಂಪ್ಯೂಟರ, ಸಿನೆಮಾ ಮುಂತಾದವುಗಳನ್ನು ನೋಡುತ್ತಾರೆ. ಇಸ್ಪೀಟು ಆಡುತ್ತಾರೆ, ಕೇರಂ ಆಡುತ್ತಾರೆ, ಇಂದು ಟಿವಿಯಲ್ಲಿ ಮ್ಯಾಚ್‌ಗಳು ಬರುತ್ತವೆ, ಅವುಗಳನ್ನು ನೋಡುತ್ತಾರೆ, ಪೇಪರ್ ಓದುತ್ತಾರೆ. ಅನೇಕ ಪ್ರಕಾರದ ಕಥೆ, ಕಾದಂಬರಿಗಳನ್ನು ಓದುತ್ತಾರೆ. ಹಗಲಿನಲ್ಲಿಯೂ ಮಲಗುತ್ತಾರೆ, ಆದರೆ ಇವೆಲ್ಲ ಕ್ರಿಯೆಗಳು ಅನುಚಿತವಾಗಿವೆ. ಇವುಗಳಲ್ಲಿ ವಿಷಯ ಸುಖದ ಹಂಬಲವಿದೆ. ಇವುಗಳನ್ನು ಬಿಡದ ವಿನಹ ಧರ್ಮಾನುಷ್ಠಾನ ಸಾರ್ಥಕವಾಗುವುದಿಲ್ಲ. ಆದ್ದರಿಂದ ವ್ರತದ ದಿನ ಹೀಗೆ ಮಾಡಬಾರದು. ಬದಲಾಗಿ ಪೂರ್ಣದಿನದ ಆಚರಣೆ ಧರ್ಮಕಾರ್ಯದಲ್ಲಿ ವ್ಯತೀತವಾಗಬೇಕು. ಯಾಕೆಂದರೆ ಧರ್ಮ ಸಾಧನೆಯ ಮೂಲ ಒರೆಗಲ್ಲು ವಿಷಯ ವಿಕಾರಗಳ ಮೇಲೆ ವಿಜಯ ಪಡೆಯುವುದಾಗಿದೆ.

**ಅವಮೌದರ್ಯ–** ಅವಮೌದರ್ಯ ತಪ ಬಹಳ ಉಪಯೋಗಿಯಾಗಿದೆ. ಇದನ್ನು ಇಚ್ಛೆಗಳ ನಿರೋಧ ಮಾಡಲು ಮಾಡಲಾಗುತ್ತದೆ. ಸಂಯಮದ ಸಿದ್ಧಿಗಾಗಿ ಹಾಗೂ ಇಂದ್ರಿಯಗಳ ಮೇಲೆ ವಿಜಯ ಪಡೆಯಲು ಹಸಿವೆಗಿಂತ ಕಡಿಮೆ ತಿನ್ನುವುದು, ಹೊಟ್ಟೆ ತುಂಬ ಊಟ ಮಾಡದಿರುವುದು ಅವಮೌದರ್ಯ ತಪವಾಗಿದೆ. ಅವಮೌದರ್ಯ ತಪದಲ್ಲಿ ಕಠಿಣ ಪರೀಕ್ಷೆಯ ಸಮಯವಿರುತ್ತದೆ. ವಿವಿಧ ಪ್ರಕಾರದ ಸ್ವಾದಿಷ್ಟ ಸಾಮಗ್ರಿಗಳು ವ್ಯಂಜನಗಳು ಎದುರಿಗೆ ಇರುತ್ತವೆ. ತಟ್ಟೆ ತುಂಬಾ ತೋರಿಸಲಾಗುತ್ತಿರುತ್ತದೆ. ಆಗ್ರಹ ಅನುನಯದೊಂದಿಗೆ ಎಲ್ಲ ವ್ಯಂಜನಗಳನ್ನು ತೋರಿಸಲಾಗಿ ಮನಸ್ಸು ಯಾವುದನ್ನು ತೆಗೆದುಕೊಳ್ಳಲಿ ಎಂದು ಹೋಯ್ದಾಡುತ್ತಿರುವಾಗ ಅವೆಲ್ಲವುಗಳನ್ನು ಸ್ವೀಕರಿಸದಿರುವುದು ಅವಮೌದರ್ಯವಾಗಿದೆ, ತಿನ್ನಲು ಎಷ್ಟೊಂದು ಭಾವನೆಗಳು ಆಗುತ್ತಿರುವಾಗ, ಹೊಟ್ಟೆಯಲ್ಲಿ ಸ್ಥಳವಿರುವಾಗ ಆದರೂ ಇಚ್ಛೆಗಳನ್ನು ತಡೆಗಟ್ಟುವುದೇ ತಪವೆಂದು ಕರೆಯಲಾಗುತ್ತದೆ. ಈ ತಪವು ವಿಶೇಷ ರೂಪದಿಂದ ಮುನಿ ಮಹಾರಾಜರಿಗಾಗಿ ಇದೆ. ಆಹಾರ ಪಡೆಯಲು ಹೋಗಿದ್ದಾರೆ, ಎಲ್ಲವೂ ಇದೆ. ಅವುಗಳೆಲ್ಲ ಕೇವಲ ಒಂದು ತುತ್ತು ಪಡೆದು ಹಿಂದಿರುಗಿ ಬರುವುದು ಉತ್ಕೃಷ್ಟ ಅವಮೌದರ್ಯವಾಗಿದೆ. ಇದು ಉಪವಾಸಕ್ಕಿಂತಲೂ ಕಠಿಣವಾಗಿದೆ. ಇದೇ ಪ್ರಕಾರ ಹಸಿವೆಗಿಂತ ಒಂದು ತುತ್ತು ಕಡಿಮೆ ತಿನ್ನುವುದು ಜಘನ್ಯ ಅವಮೌದರ್ಯವೆಂದು ಕರೆಯಲ್ಪಡುತ್ತದೆ. ಉತ್ಕೃಷ್ಟ

ಅವಮೌದರ್ಯದಲ್ಲಿ ಉಪವಾಸಕ್ಕಿಂತ ಹೆಚ್ಚು ನಿರ್ಜರೆಯಾಗುತ್ತದೆ. ಅವಮೌದರ್ಯದಿಂದ ಏನಾಗುತ್ತದೆ? ಇದರಲ್ಲಿ ಬಹಳ ದೊಡ್ಡ ಉಪಲಬ್ಧಿಯಾಗುತ್ತದೆ. ಸಂಯಮದ ಜಾಗರೂಕತೆ, ದೋಷಗಳ ಪ್ರಶಮನ ಸಂತೋಷ, ಸ್ವಾಧ್ಯಾಯ, ಕ್ಷುಧಾ ವೇದನೆಯ ಮೇಲೆ ನಿಯಂತ್ರಣ, ಇಚ್ಛೆಗಳ ನಿರೋಧ, ಭೋಜನದ ಬಗ್ಗೆ ಇದ್ದ ಆಸಕ್ತಿಯ ತ್ಯಾಗ ಮಾಡಿ ಸಾಧನೆಯ ಪಥದ ಮೇಲೆ ನಿರಂತರ ಮುಂದೆ ಸಾಗುತ್ತಾರೆ. ನಿದ್ರಾ ವಿಜಯಿ ಮತ್ತು ಧ್ಯಾನದ ಸಿದ್ಧಿಗಾಗಿ ಅಭ್ಯಾಸದ ರೂಪದಲ್ಲಿ ಇದರ ಪಾಲನೆ ಮಾಡುತ್ತಾರೆ.

**ವೃತ್ತಿ ಪರಿಸಂಖ್ಯಾನ**–ಒಂದು ನಿಯಮ ತೆಗೆದು ಕೊಳ್ಳುವುದು, ಒಂದು ಮಿತಿಯನ್ನು ನಿರ್ಧರಿಸುವುದು, ಪರಿಧಿಯನ್ನು ನಿಗದಿ ಮಾಡಿಕೊಳ್ಳುವುದು, ನಾನು ಇಷ್ಟೇ ಸ್ಥಾನದಲ್ಲಿ ವೃತ್ತಿ ಮಾಡುತ್ತೇನೆ–ಇದು ವೃತ್ತಿ ಪರಿಸಂಖ್ಯಾನವಾಗಿದೆ. ತೃಷ್ಣೆಯ ಜ್ವಾಲೆಯನ್ನು ಶಾಂತ ಮಾಡಲು ಯಾವುದೇ ವ್ಯಕ್ತಿ ವಿಶೇಷದ ಬಗ್ಗೆ, ದಾತಾರ ಬಗ್ಗೆ ಒಲವು, ಆಸಕ್ತಿ ಇಲ್ಲದಿರುವುದು ಆದ್ದರಿಂದ ಇದು ವೃತ್ತಿ ಪರಿಸಂಖ್ಯಾನವಾಗಿದೆ. ಯಮ ಮತ್ತು ನಿಯಮದ ರೂಪದಲ್ಲಿ ವೃತ್ತಿ ಪರಿಸಂಖ್ಯಾನ ಎರಡು ಪ್ರಕಾರವಾಗಿದೆ. ಒಂದು ಸಂಕಲ್ಪ ತೆಗೆದುಕೊಂಡು, ಇಂತಹ ವಿಧಿ ಹೊಂದಿ ಆಹಾರಕ್ಕೆ ಹೊರಟಿದ್ದೇನೆ. ಎಲ್ಲಿಯವರೆಗೆ ಸಿಗುವುದಿಲ್ಲವೋ ಅಲ್ಲಿಯವರೆಗೆ ಆಹಾರ ಮಾಡುವುದಿಲ್ಲ. ಅದು ಜೀವನ ಪರ್ಯಂತ ಸಿಗದಿದ್ದರೂ ಇದನ್ನು ಯಮ ರೂಪದಲ್ಲಿ ವೃತ್ತಿ ಪರಿಸಂಖ್ಯಾನವೆಂದು ಕರೆಯಲ್ಪಡುತ್ತದೆ. ಎರಡನೆ ರೀತಿಯಲ್ಲಿ ನಿಯಮ ರೂಪದಿಂದ ವಿಧಿ ಪಡೆದು ಹೊರಡುತ್ತಾರೆ. ವಿಧಿ ದೊರೆತರೆ ಆಹಾರ ಮಾಡುವುದು ಇಲ್ಲದಿದ್ದರೆ ಅನ್ಯಥಾ ಮಾಡುವುದಿಲ್ಲ. ಈ ವಿಧಿಯೊಂದಿಗೆ ಮಾತ್ರ, ನಾಳೆ ಇನ್ನೊಂದು ವಿಧಿ ಹೊಂದುವುದು, ನಿಯಮದ ಯಾವ ಮಿತಿ ಇಲ್ಲ, ಪಡಿಗಾಹನ ಸಂಬಂಧದ, ದಿಕ್ಕಿಗೆ ಸಂಬಂಧಿಸಿದ, ಮನೆಗೆ ಸಂಬಂಧಿಸಿದ, ದಾತಾ ಸಂಬಂಧದ, ಇತ್ಯಾದಿ ಏನಾದರೂ ಆಗಬಹುದು. ಈ ತಪವು ಭೋಜನದ ಬಗ್ಗೆ ಆಸೆ ಮತ್ತು ರಾಗ–ದ್ವೇಷಗಳ ನಿವೃತ್ತಿಗಾಗಿ ತೆಗೆದುಕೊಂಡು ಮಾಡಲಾಗುತ್ತದೆ. ಕರ್ಮಗಳ ಕ್ಷಯ, ನಿರ್ಜರಾ ಹಾಗೂ ಪುಣ್ಯ ಹೆಚ್ಚಿಸಲು ವಿಧಿ ತೆಗೆದು ಕೊಳ್ಳುತ್ತಾರೆ.

ಚಾರಿತ್ರ ಚಕ್ರವರ್ತಿ ಆಚಾರ್ಯ ಶಾಂತಿಸಾಗರ ಮುನಿರಾಜರು ವರ್ತಮಾನ ಕಾಲದ ಅಪೇಕ್ಷೆಯಿಂದ ವೃತ್ತಿ ಪರಸಂಖ್ಯಾನ ತಪದಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಆಚಾರ್ಯ ಶ್ರೀಗಳು ಅದೆಷ್ಟೋ ಕಠಿಣ ಕಠಿಣವಾದ ವಿಧಿಗಳನ್ನು ತೆಗೆದು ಕೊಳ್ಳುತ್ತಿದ್ದರು ಒಂದು ಬಾರಿ ಅವರು ಚಾತುರ್ಮಾಸದ ಸಂದರ್ಭದಲ್ಲಿ **"ಎತ್ತಿನ ಕೋಡಿನಲ್ಲಿ ಬೆಲ್ಲವಿದ್ದರೆ ಆಗ ನಾನು ಅಹಾರ ಪಡೆಯುವೆ"** ಎಂಬ ನಿಯಮ ತಾಳಿದರು. ಅವರಿಗೆ ಅನೇಕ ಉಪವಾಸಗಳಾದರೂ, ಅವರಿಗೆ ವಿಧಿ ಸಿಗಲಿಲ್ಲ. ಒಂದು ದಿನ ಆಚಾರ್ಯ ಶ್ರೀಗಳು ಆಹಾರ ಚರ್ಯೆಗೆ ಹೊರಟರು ಹಾಗೂ ಸಂಯೋಗದಿಂದ ಅದೇ ಸಮಯ ವ್ಯಾಪಾರಿಯೊಬ್ಬರು ಎತ್ತಿನಗಾಡಿಯಲ್ಲಿ ಬೆಲ್ಲವನ್ನಿಟ್ಟುಕೊಂಡು ಬರುತ್ತಿದ್ದರು. ಅವರು ಅಂಗಡಿಯಲ್ಲಿ ಬೆಲ್ಲವನ್ನಿಳಿಸಿದರು. ಒಂದು ಗೂಳಿ ಓಡುತ್ತಾ ಹಸುವಿನ ಹಿಂದೆ ಬಂದಿತು. ಹಸು ಒಂದೆಡೆ ಸರಿಯಿತು ಹಾಗೂ ಆ ಗೂಳಿಯು ಕೋಪದಿಂದ ಅಂಗಡಿ ಮುಂದಿಟ್ಟಿದ್ದ ಬೆಲ್ಲದ ಚೀಲಕ್ಕೆ ಡಿಕ್ಕಿ ಹೊಡೆದಾಗ ಅದರ ಕೋಡಿಗೆ ಬೆಲ್ಲ ಸಿಕ್ಕಿ ಹಾಕಿಕೊಂಡಿತು. ಆಚಾರ್ಯ ಶ್ರೀಗಳು ನಿಯಮ ಸಹಿತ ಆಹಾರ ಚರ್ಯೆಗೆ ಹೊರಟಿದ್ದರು. ಎದುರಿಗೆ ಗೂಳಿಯನ್ನು ನೋಡಿ ಅದರ ಕೋಡಿನಲ್ಲಿ ಬೆಲ್ಲವಿದ್ದಿತು. ಮುಂದಿನ ಚೌಕದಲ್ಲಿ ಅವರನ್ನು ಪಡಿಗಾಹಿಸಲಾಯಿತು. ಮಹಾರಾಜರಿಗೆ ವಿಧಿ

ಸಿಕ್ಕಿದ್ದಿತು ಹಾಗೂ ಅವರ ಆಹಾರವಾಯಿತು. ಇದೇ ಪ್ರಕಾರ ಒಂದು ಸಾರಿ ಅವರು **"ನೆಲದ ಮೇಲೆ ಮುತ್ತು ರತ್ನ ಬಿದ್ದಿರಬೇಕು"** ಆಗ ಆಹಾರ ಸ್ವೀಕರಿಸುವೆ ಎಂಬ ವಿಧಿಯನ್ನು ತೆಗೆದು ಕೊಂಡಿದ್ದರು. ವೃತ್ತಿಪರಿಸಂಖ್ಯಾನ ತಪದಲ್ಲಿ ಭೋಜನದ ವೃತ್ತಿ, ಪಾತ್ರದ ವೃತ್ತಿ, ದಾನಿಯ ವೃತ್ತಿ ಹಾಗೂ ಗೃಹದ ವೃತ್ತಿ ಇರುತ್ತವೆ. ಇವುಗಳಲ್ಲಿ ಲಾಭಾಂತರಾಯ ಕರ್ಮದ ಕ್ಷಯೋಪಶಮದ ಪರೀಕ್ಷೆಯಾಗುತ್ತದೆ. ಆಚಾರ್ಯರು-ವೃತ್ತಿ ಪರಿಸಂಖ್ಯಾನದ ವಿಧಿ ಸಹಜ ಭಾವದಿಂದ ಉಪಲಬ್ಧವಾಗುವುದೋ ಅದೇ ಸರಿಯಾಗಿದೆ ಎಂದು ಹೇಳಿದ್ದಾರೆ. ಒತ್ತಾಯದಿಂದ ಸಿಗುವ ಅಥವಾ ಸಂಕೇತ ಮಾಡುವ ಪ್ರಯತ್ನ ಮಾಡಬಾರದು ಬದಲಾಗಿ ಸಿಗದಿದ್ದಾಗ ಅನಾಹಾರಿಯಾಗಿ ಇದ್ದು ಅಹೋರಾತ್ರಿ ಕಳೆಯಬೇಕು. ನಿಯಮ ಹೊಂದಿ ವಿಧಿವತ್ತಾಗಿ ಹೊರಡಬೇಕು. ದಾನಿಗೆ ತನ್ನ ಕೈಯಲ್ಲಿರುವ ವಸ್ತುವನ್ನು ಮಹಾರಾಜರು ಅದನ್ನು ಯಾವಾಗ ನೋಡಿದರು?ಎಂದು ಗೊತ್ತಾಗಲೇ ಬಾರದು. ಇದು ವೃತ್ತಿ ಪರಿಸಂಖ್ಯಾನ ತಪವಾಗಿದೆ.

**ರಸಪರಿತ್ಯಾಗ**-ರಸದ ಅರ್ಥ ಪ್ರೀತಿ ಹೆಚ್ಚಿಸುವ ತತ್ತ್ವ, ರಸವು ಭೋಜನದಲ್ಲಿಯೂ ಪ್ರೀತಿಯನ್ನು ಹೆಚ್ಚಿಸುತ್ತದೆ. ಕೆಲವು ರಸಗಳ ಸಂಯೋಗದಿಂದ ಭೋಜನ ಸ್ವಾದಿಷ್ಟವಾಗುತ್ತದೆ. ಹಾಗೂ ಇವುಗಳ ಅಭಾವದಲ್ಲಿ ಭೋಜನವು ನಿರಸವೆನಿಸುತ್ತದೆ. ಜಿತೇಂದ್ರಿಯರ ಸಂಯಮದ ಬಾಧೆಯ ನಿವೃತ್ತಿಗಾಗಿ ತಮ್ಮ ಇಂದ್ರಿಯ ವಾಸನಾಗಳ ಮೇಲೆ ವಿಜಯ ಪಡೆಯಲು ಉಪ್ಪು, ಎಣ್ಣೆ, ಸಕ್ಕರೆ, ಹಾಲು, ಮೊಸರು ತುಪ್ಪ ಆರು ರಸಗಳು ಅಥವಾ ಇವುಗಳಲ್ಲಿ ಒಂದು ಅಥವಾ ಎರಡು ಅಥವಾ ಎಲ್ಲ ರಸಗಳನ್ನು ತ್ಯಾಗ ಮಾಡುವುದು ರಸಪರಿತ್ಯಾಗ ತಪವಾಗಿದೆ. ರಸಗಳ ತ್ಯಾಗ ಒಂದೇ ದಿನಕ್ಕಾದರೂ ಆಗಬಹುದು ಹಾಗೂ ಆಜೀವನಕ್ಕೂ ಆಗಬಹುದು. ನಾಲಿಗೆಯ ಲೋಲುಪ್ತತೆಯನ್ನು ಬಿಡುವುದೇ ರಸ ಪರಿತ್ಯಾಗವಾಗಿದೆ. ರಸ ಪರಿತ್ಯಾಗದ ಭಾವನೆ ರಸನಾ ಇಂದ್ರಿಯದ ಮೇಲೆ ನಿಮಂತ್ರಣವನ್ನು ಮಾಡುತ್ತದೆ, ಇದರಿಂದ ಉಳಿದ ನಾಲ್ಕೂ ಇಂದ್ರಿಯಗಳು ಸಹ ವಶದಲ್ಲಿರುತ್ತವೆ. ಇದು ತುಂಬಾ ಒಳ್ಳೆಯ ತಪವಾಗಿದೆ. ರಸ ಪರಿತ್ಯಾಗ ತಪದಲ್ಲಿ ಹೇಗೆ ಏನು ಸಿಗುವುದೋ ಅವರ ಸಾಧನೆಯಾಗುತ್ತದೆ. ಸಹನ ಶೀಲತೆ ಇರಬೇಕು. ಅವರು ಇದನ್ನು ಕೊಡಲಿಲ್ಲ ಅದನ್ನು ಕೊಡಲಿಲ್ಲ ಈ ಭಾವ ಹಾಗೂ ರಾಗ-ದ್ವೇಷವಶರಾಗಿ ಕ್ರೋಧ ಬರಬಾರದು ಆಗ ರಸನೇಂದ್ರಿಯದ ಮೇಲೆ ವಿಜಯ ಪ್ರಾಪ್ತವಾಗುತ್ತದೆ.

**ವಿವಿಕ್ತ ಶಯ್ಯಾಸನ**-ಬ್ರಹ್ಮಚರ್ಯ, ಸ್ವಾಧ್ಯಾಯ, ಧ್ಯಾನ ಮುಂತಾದವುಗಳ ವೃದ್ಧಿಗಾಗಿ ಏಕಾಂತ ಸ್ಥಾನದಲ್ಲಿ ಮಲಗುವುದು, ಕುಳಿತುಕೊಳ್ಳುವುದು. ಆಸನ ಹಾಕುವುದು ಮುಂತಾದವು ವಿವಿಕ್ತ ಶಯ್ಯಾಸನ ತಪವಾಗಿದೆ. ಏಕಾಂತದಲ್ಲಿ ವಾಸ ಅಂದರೆ ಬಾಹ್ಯ ಪರಿವೇಶದಲ್ಲಿ ದ್ವೇಷವೆಂದಲ್ಲ ಬದಲಾಗಿ ಅಂತರಂಗದ ಏಕಾಗ್ರತೆಗಾಗಿ ಜನಜಂಗುಳಿಯಿಂದ ಮುಕ್ತಿಯಾಗಿದೆ. ಭಯದ ಹೆಸರನ್ನು ಗೆಲ್ಲಲ್ಲು, ಜನ ಸಂಪರ್ಕವನ್ನು ಕಡಿಮೆ ಮಾಡಲು, ವ್ಯರ್ಥವಾದ ಹರಟೆಗಳಿಂದ ದೂರ ಉಳಿಯಲು ಈ ತಪವಿದೆ. ಈ ತಪದ ಇಚ್ಛೆಉಳ್ಳವರು ಸಂಪೂರ್ಣನಾಗಿ' ನಿರ್ಜನ, ಏಕಾಂತ ಸ್ಥಾನದಲ್ಲಿ ಘಂಟೆಗಟ್ಟಲೆ ತಮ್ಮ ಆತ್ಮನಲ್ಲಿ ಧ್ಯಾನಮಗ್ನ, ಎಲ್ಲ ಸಂಬಂಧಗಳಿಂದ ಮುಕ್ತ, ಅನಾಸಕ್ತರಾಗಿ ಪರಾತ್ಮನ ಆರಾಧನೆ ಮಾಡುತ್ತಿರುತ್ತಾರೆ. ಅವರೂ ತಮ್ಮ ಪರಿಸರದಲ್ಲಿರುವವರೊಂದಿಗೂ ಸಹ ಸಂಬಂಧ ಹೊಂದುವುದಿಲ್ಲ. ಈ ತಪದಿಂದ ಅವರು ಭಯವನ್ನು ಗೆಲ್ಲುತ್ತಾರೆ, ಧ್ಯಾನದಲ್ಲಿ ಬಹಳ ಒಳ್ಳೆಯ ಏಕಾಗ್ರತೆಯ ಸುರಭಿಯ ಅನುಭವವು ಉಂಟಾಗುತ್ತದೆ.

**ಕಾಯಕ್ಲೇಶ** – ಶಾರೀರಕ ಮಮತ್ವವನ್ನು ಕಡಿಮೆ ಮಾಡಲು ಹಾಗೂ ಕಷ್ಟ ಬಾಧೆಗಳನ್ನು ಸಹಿಸಲು ಹಾಗೂ ಧರ್ಮದ ಪ್ರಭಾವನೆಗಾಗಿ ಅನೇಕ ಪ್ರಸಾರದ ಆಸನಗಳಿಂದ ಎದ್ದು ನಿಲ್ಲುವುದು, ಕುಳಿತಿರುವುದು, ಧ್ಯಾನದಲ್ಲಿರುವುದು ಇತ್ಯಾದಿ ಕಾಯಕ್ಲೇಶ ತಪವಾಗಿದೆ. ಬಿಸಿ, ತಂಪು, ಮಳೆ, ಹಸಿವೆ, ಬಾಯಾರಿಕೆ ಇತ್ಯಾದಿಗಳನ್ನು ಸಮತಾ ಪೂರ್ವಕವಾಗಿ ಸಹಿಸುವುದು, ಅನೇಕ ಪ್ರಕಾರದ ಉಪಸರ್ಗಗಳನ್ನು ಎದುರಿಸುವುದು, ಅನುಕೂಲ ಪರಿಸ್ಥಿತಿಗಳಲ್ಲಿಯೂ ಪ್ರತಿಕೂಲತೆಯನ್ನು ಸ್ವೀಕರಿಸುವುದು, 22 ಪರಿಷಹಗಳೊಂದಿಗೆ ಬಾಧೆಗಳನ್ನು ಸಹಿಸುತ್ತಾ ಮಾನಾಪಮಾನಗಳನ್ನು ಉಪೇಕ್ಷೆ ಮಾಡುತ್ತಾ ಕಷ್ಟಗಳನ್ನು ಸಹಿಸುವುದು, ಅದರ ಸಾಧನಾದಿಂದ ಶರೀರ ಮತ್ತು ಆತ್ಮನ ಭಿನ್ನತೆಯ ಜ್ಞಾನ ಹೊಂದುವುದು. ಆತ್ಮನ ಆಳದ ಸ್ಪರ್ಶ, ವೀತರಾಗತಾ ಪೂರ್ಣ ಕಾಯಕ್ಲೇಶ ತಪದಿಂದಾಗುತ್ತದೆ. ಇದೇ ತಪವು ಅನಾದಿ ಕಾಲದ ಕರ್ಮಗಳ ಧೃಡವಾದ ಬಂಧನವನ್ನು ಕತ್ತರಿಸುತ್ತದೆ. ಸಾಧಕರು ಸಂಕ್ಲೇಶಿಗಳಾಗಬಾರದು. ಬದಲಾಗಿ ಕಷ್ಟ ಸಹಿಷ್ಣುಗಳಾಗಬೇಕು. ಆಚಾರ್ಯ ಕುಂದ ಕುಂದ ಸ್ವಾಮಿಗಳು ಹೀಗೆ ಹೇಳುತ್ತಾರೆ– "ತಾವು ಭೇದ– ವಿಜ್ಞಾನವನ್ನು ದೃಡವಾಗಿರಲು ಬಯಸುವುದಾದರೆ ಕಷ್ಟ ಸಹಿಷ್ಣುಗಳಾಗಿರಿ. ಯಾರು ಎಷ್ಟೆ ಕಷ್ಟ ಸಹಿಷ್ಣುಗಳಾಗುತ್ತಾರೋ ಅವರು ಅಷ್ಟೇ ದೊಡ್ಡ ಸಾಧಕರಾಗುತ್ತಾರೆ. ಕಷ್ಟಗಳಿಗೆ ಹೆದರುವಿರಾದರೆ, ಯಾವಾಗಲಾದರೂ ವಿಚಲಿತರಾಗಬಹುದು. ಎಷ್ಟೆ ಕಷ್ಟಗಳ ಮಧ್ಯೆ ಸಾಗುವ ಪ್ರಯತ್ನ ಮಾಡುವಿರೋ ಅಷ್ಟೇ ದೃಢರಾಗುವಿರಿ". ಆಚಾರ್ಯರು ನಮ್ಮ ಮಾನಸಿಕ ಶಕ್ತಿ(will power)ಯನ್ನು ಹೆಚ್ಚಿಸ ಬೇಕೆಂದು ಹೇಳುತ್ತಾರೆ. ಒಂದು ವೇಳೆ ಸಹನ ಶಕ್ತಿಯ ಕ್ಷಮತೆಯು ಮನಸ್ಸಿನಲ್ಲಿ ಬಂದು ಬಿಟ್ಟರೆ ದೊಡ್ಡದಕ್ಕಿಂತ ದೊಡ್ಡ ಕಷ್ಟ ಮತ್ತೆ ವಿಚಲೀತ ಮಾಡಲಾರದು ಅದನ್ನು ಸಹಜತೆಯಿಂದ ಸಹಿಸಬಹುದಾಗಿದೆ ಹಾಗೂ ಒಂದು ವೇಳೆ ಸಹನ ಶಕ್ತಿ ಇರದಿದ್ದರೆ ನಾವು ಎಷ್ಟೇ ಬಲಶಾಲಿಗಳಾಗಿದ್ದರೂ ಸ್ವಲ್ಪ ಕಷ್ಟದಿಂದಲೇ ವಿಚಲಿತರಾಗಬಹುದು, ಭೇದ ಬಿನ್ನರಾಗಬಹುದು. ಪರಿಣಾಮಗಳಲ್ಲಿ ವಿಕಲ್ಪ ರೂಪತೆ ಬರಬಹುದು. ಆದ್ದರಿಂದ ಈ ತರಹದ ಸಾಧನೆಯ ಮಾಧ್ಯಮದಿಂದ ಪರಿಣಾಮಗಳಲ್ಲಿ ವಿಕಲ್ಪ ರೂಪತೆ ಬರದಂತೆ, ಪರಿಣಾಮವು ಕಿಂಚಿತ್ತೂ ಸಹ ಕೆಡದ ಹಾಗೇ ಪಾಪದಿಂದ ಮುಕ್ತರಾಗುವಂತೆ ಹಾಗೂ ನಮ್ಮ ಎಲ್ಲ ಸಾಲ ತೀರಿಸುವಂತಿರಲಿ. ಈ ಸಾಧನೆಯು ಆಳವಾದಾಗ ಅಂತರಂಗ ತಪ ಪ್ರಟವಾಗುತ್ತದೆ. ಸಮತಾಪೂರ್ವಕವಾಗಿ ಮಾಡಿರುವ ಅಲ್ಪ ತಪಕೂಡ ಸಾರ್ಥಕವಾಗುತ್ತದೆ.

ಆಚಾರ್ಯ ಕುಂದ ಕುಂದ ಸ್ವಾಮಿಗಳು ನಿಯಮಸಾರ ಗ್ರಂಥದ ಗಾಹೆ 124 ರಲ್ಲಿ ಹೀಗೆ ಹೇಳಿದ್ದಾರೆ–

**ಕಿಂ ಕಾಹದಿ ವಣವಾಸೋ, ಕಾಯಕಿಲೇಸೋ ವಿಚಿತ್ತ ಉವವಾಸೋ।**
**ಅಜ್ಝಯಣ ಮೊಣ ಪಹುದಿ ಸಮದಾ ರಹಿಯಸ್ಸ ಸಮಣಸ್ಸ ॥124॥**

ಒಂದು ವೇಳೆ ಜೀವನದಲ್ಲಿ ಸಮತೆ ಬರದಿದ್ದರೆ ಈ ಕಾಯಕ್ಲೇಶ, ಈ ವನವಾಸ, ಈ ಉಪವಾಸ, ಈ ಅಧ್ಯಯನ, ಮೌನ ಸಾಧನೆ ಯಾವ ಉಪಯೋಗಕ್ಕಾಗಿ? ನಮ್ಮ ಪರಿಣಾಮಗಳ ನಿರ್ಮಲತೆ, ಶುದ್ಧಿಯ ಧ್ಯೇಯದಿಂದ, ಕರ್ಮಗಳ ನಿರ್ಜರೆಗಾಗಿ ಸಮತೆಯ ಭಾವನೆಯಿಂದ ಮಾಡಿದ ತಪವೇ ಉತ್ತಮ ತಪವಾಗಿದೆ.

ಅಂತರಂಗ ತಪಕ್ಕೆ ಸಂಬಂಧಿಸಿದಂತೆ ಕುಂಥುನಾಥ ತೀರ್ಥಂಕರರ ಸ್ತುತಿ ಮಾಡುತ್ತಾ ಆಚಾರ್ಯ ಸಮಂತಭದ್ರ ಸ್ವಾಮಿಗಳು ಹೀಗೆ ಹೇಳಿದ್ದಾರೆ.

**ಬಾಹ್ಯಂ ತಪ: ಪರಮ ದುಶ್ಚರಮಾಚರಂಸ್ತ್ವ ಮಾಧ್ಯಾತ್ಮಿಕಸ್ಯತಪಸ:ಪರಿಬೃಂಹಣಾರ್ಥಮ್॥83॥**

"ಹೇ ಭಗವಾನ ನೀವು ನಿಮ್ಮೊಳಗಿನ ತಪವನ್ನು ಹೆಚ್ಚಿಸಲೆಂದೇ ಕಠಿಣವಾದ ಬಾಹ್ಯತಪದ ಅನುಷ್ಠಾನ ಮಾಡಿದ್ದೀರಿ, ಪರಿಣಾಮಗಳ ನಿರ್ಮಲತೆ ಮತ್ತು ಮನಸ್ಸಿನ ನಿಗ್ರಹಕ್ಕಾಗಿ ಮಾಡಲಾಗುವ ತಪ ಅಂತರಂಗ ತಪವೆಂದು ಕರೆಯಲಾಗುತ್ತದೆ ಬಹಿರಂಗ ತಪವು ಅಂತರಂಗ ತಪದ ಸಾಧನವಾಗಿದೆ". ಅಂತರಂಗ ತಪದ ಅಭಾವದಲ್ಲಿ ಬಹಿರಂಗ ತಪವು ಕಾರ್ಯಸಾಧುವಲ್ಲ. ಆದ್ದರಿಂದ ಅಂತರಂಗ ತಪಕ್ಕೆ ಎಲ್ಲಕ್ಕಿಂತ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಅಂತರಂಗ ತಪಗಳನ್ನು ತಿಳಿಯುವುದು ಅತಿ ಅವಶ್ಯಕವಾಗಿದೆ. ಅಂತರಂಗ ತಪವು ಆರು ಪ್ರಕಾರದ್ದಾಗಿದೆ. ಅವು ಹೀಗಿವೆ.

**ಪ್ರಾಯಶ್ಚಿತ ತಪ**–ಚಿತ್ತದ ಶುದ್ಧಿಗಾಗಿ, ಮಾಡಲಾದ ಅಪರಾಧಗಳ ಶೋಧನೆಯನ್ನು ಪ್ರಾಯಶ್ಚಿತವೆನ್ನುತ್ತಾರೆ. ಪ್ರಾಯ: ದ ಅರ್ಥ ಅಪರಾಧವಾಗಿದೆ ಹಾಗೂ ಚಿತ್ತದ ಅರ್ಥ ಶೋಧನೆಯಾಗಿದೆ. ಪ್ರಾಯಶ್ಚಿತ ಶಬ್ಧದ ಉತ್ಪತ್ತಿಯ ಬಗ್ಗೆ ಹೇಳುತ್ತಾ ಯಾವುದರಿಂದ ಪಾಪದ ಛೇದನವಾಗುವುದೋ, ಅದು ಪ್ರಾಯಶ್ಚಿತವೆಂದು ಹೇಳಿದ್ದಾರೆ. ಇದರಲ್ಲಿ ತನ್ನ ಅಜ್ಞಾನ ಹಾಗೂ ಪ್ರಮಾದವಶರಾಗಿ ಆದ ತಪ್ಪುಗಳು ತಿಳಿದು ಬಂದ ಕೂಡಲೇ ಮನಸ್ಸು ಪಶ್ಚಾತ್ತಾಪದಿಂದ ಈ ತಪದಲ್ಲಿ ತುಂಬಿ ಹೋಗುತ್ತದೆ ಹಾಗೂ ಭಾವದಿಂದ ತನ್ನ ಗುರುವಿನ ಸಮಕ್ಷಮದಲ್ಲಿ ಪ್ರಕಟಗೊಳಿಸುವುದು ಹಾಗೂ ಗುರುವಿನಿಂದ ಕೊಡುವ ಪ್ರಾಯಶ್ಚಿತವನ್ನು ಗ್ಲಾನಿ ರಹಿತನಾಗಿ ಸಹರ್ಷ ಸ್ವೀಕಾರ ಮಾಡುವುದು ಪ್ರಾಯಶ್ಚಿತ ತಪವಾಗಿದೆ. ಎಷ್ಟು ಬೇಗನೆ ತಪ್ಪಿನ ಪ್ರಾಯಶ್ಚಿತ ತೆಗೆದು ಕೊಳ್ಳಲಾಗುವುದೋ. ಅಷ್ಟೇ ಬೇಗನೆ ಚೇತನದ ಪರಿಶುದ್ಧಿಯಾಗುತ್ತದೆ ಹಾಗೂ ವಿಳಂಬವಾದಷ್ಟು ಅಷ್ಟೇ ಕರ್ಮದ ಆಸ್ರವ ಹೆಚ್ಚಾಗುತ್ತಿರುತ್ತದೆ.

ಪ್ರಾಯಶ್ಚಿತ ತಪದಿಂದ ದೋಷಗಳು ನಾಶವಾಗುತ್ತವೆ ಹಾಗೂ ಭಾವಗಳ ವಿಶುದ್ಧಿಯಾಗುತ್ತದೆ. ಸರಳವಾಗಿರುವುದರ ಮನಸ್ಸು, ಮಾನ ಮತ್ತು ಮಾಯಾವನ್ನು ಗೆದ್ದಿರುವವರು ಮಾತ್ರವೇ ಪ್ರಾಯಶ್ಚಿತವನ್ನು ಪಡೆಯಬಲ್ಲರು. ಇದರೊಂದಿಗೆ ಯಾವುದೇ ವಸ್ತುವಿನ ಲೋಭ ಸಹ ಇರುವುದಿಲ್ಲ. ಏನೇ ಸಿಕ್ಕರೂ ಅದರಿಂದ ಪ್ರಯೋಜನವಿಲ್ಲ ಸಾಕು; ಕರ್ಮಗಳ ನಿರ್ಜರೆಯಿಂದ ಪ್ರಯೋಜನವಿದೆ. ಸಾಧಕರು ಪ್ರಾಯಶ್ಚಿತದಿಂದ ಎಂದಿಗೂ ಹೆದರುವುದಿಲ್ಲ. ಅವರಿಗೆ ಎಷ್ಟೇ ದೊಡ್ಡ ಅಥವಾ ಚಿಕ್ಕ ಪ್ರಾಯಶ್ಚಿತವಾದರೂ ಸಹ ಅವರು ಹೆದರುವುದಿಲ್ಲ. ಯಾಕೆಂದರೆ ಪ್ರಾಯಶ್ಚಿತವನ್ನು ತನ್ನ ಆತ್ಮನ ವಿಶುದ್ಧಿಗಾಗಿ ಸ್ವತ: ಆತ್ಮನಿಂದ ಆತ್ಮಗರ್ಹಾ ಬಂದಾಗ ತೆಗೆದುಕೊಳ್ಳುತ್ತಾರೆ. ನನ್ನಿಂದ ಯಾವುದೇ ತಪ್ಪು, ಪ್ರಮಾದ ಆಗಿದ್ದರೆ ಮುಂದೆ ಆಗದಿರಲಿ ಎನ್ನುವ ಎಚ್ಚರಿಕೆ ಇರುತ್ತದೆ. ಗುರುವಿಲ್ಲದಿದ್ದರೆ ಪಂಚಪರಮೇಷ್ಠಿ ಅಥವಾ ಭಗವಂತರ ಸನ್ನಿದಿಯಲ್ಲಿ, ಬೆಳಗಿನಿಂದ ಸಾಯಂಕಾಲದ ವರೆಗಿನ ಕಾರ್ಯಗಳಲ್ಲಿ ಒಂದು ವೇಳೆ ತಪ್ಪುಗಳಾಗಿದ್ದರೆ ಆಲೋಚನೆ ಮಾಡಬೇಕು. ಇದರಿಂದ ತಿಳಿದೊ–ತಿಳಿಯದೆಯೋ ಆಗಿರುವ ಪ್ರಮಾದಗಳು ಸುಧಾರಿಸಲ್ಪಡುತ್ತದೆ ಹಾಗೂ ಪ್ರಾಯಶ್ಚಿತ ಮಾಡಿಕೊಂಡಾಗ ಮನಸ್ಸು ಹಗುರವಾಗಿ ಬಿಡುತ್ತದೆ. ಕಲ್ಮಷಗಳನ್ನು ತೊಳೆಯಲು, ಪಾಪಗಳ ಪ್ರಕ್ಷಾಲನೆ ಮಾಡಿ ಪ್ರಾಯಶ್ಚಿತತೆ ತೆಗೆದು ಕೊಳ್ಳುವುದು ಸಹಜವಾಗಿ ಬಿಡುತ್ತದೆ. ಮಾನಿ ಮತ್ತು ಮಾಯಾಚಾರಿಗಳು–ನಾನು ಪ್ರಾಯಶ್ಚಿತ ಪಡೆದರೆ ಅವರ ದೃಷ್ಟಿಯಲ್ಲಿ ಕೀಳಾಗುತ್ತೇನೆ ಮತ್ತೆ ನನಗೆ ಗೌರವ ಸಿಗುವುದಿಲ್ಲ, ಎಂದು ಅವರು ಯೋಚಿಸುತ್ತಾರೆ, ಈ ಯೋಚನೆ ಅವರಿಗೆ ಉಪಯೋಗವಿಲ್ಲ. ಬದಲಾಗಿ ಆತ್ಮನ ಶುದ್ಧಿಯನ್ನು ಮಾಡುವ ತಪವು ಪ್ರಾಯಶ್ಚಿತವಾಗಿದೆ. ಪ್ರಾಯಶ್ಚಿತವನ್ನು ಆಲೋಚನೆಯ ದೋಷಗಳಿಂದ ರಹಿತರಾಗಿ ಸ್ವೀಕರಿಸಲಾಗುತ್ತದೆ.

**ವಿನಯ ತಪ**–"ವಿಲಯಂ ನಯತಿ ಕರ್ಮಮಲಮಿತಿ ವಿನಯಃ"(ಭ.ಆ 302 ಗಾ.ಟೀ.) ಅಂದರೆ ಕರ್ಮಮಲವನ್ನು ದೂರ ಮಾಡುವುದು ವಿನಯವಾಗಿದೆ ಆದ್ದರಿಂದ ಆಚಾರ್ಯರುಗಳು ವಿನಯವನ್ನು ಉತ್ಥಾನದ ಮಾರ್ಗ, ಮೋಕ್ಷದ ದ್ವಾರವೆಂದು ಹೇಳಿದ್ದಾರೆ. ಪೂಜ್ಯ ಪುರುಷರು ಹಾಗೂ ಸಾಧಕರ ಬಗ್ಗೆ ಹಾರ್ದಿಕ ಆದರ ಭಾವವೇ ವಿನಯವಾಗಿದೆ. ವಾಸ್ತವಿಕ ವಿನಯವು ಆಂತರಿಕವಾಗಿರುತ್ತದೆ, ಗುಣಾನುರಾಗ ಪೂರ್ವಕ ನಮ್ರವೃತ್ತಿ ಮತ್ತು ಬಹುಮಾನ ಇರುವಲ್ಲಿ ಕಷಾಯಗಳ ನಿಗ್ರಹದ ಸಾಧ್ಯತೆ ಇದೆ. ಜ್ಞಾನ, ದರ್ಶನ, ಚಾರಿತ್ರ, ಇತ್ಯಾದಿಗಳ ಹಾಗೂ ಶ್ರೇಷ್ಠ ಗುರುಜನರುಗಳ ಪ್ರಶಂಸೆ, ಅವರ, ಸ್ತುತಿ, ವಂದನೆ ಇತ್ಯಾದಿಗಳನ್ನು ಮಾಡುವುದು, ರತ್ನತ್ರಯ ಅಥವಾ ರತ್ನತ್ರಯ ಧಾರಕರ ದೇವ-ಶಾಸ್ತ್ರ-ಗುರುತುಗಳ ಆದರೆ-ಸಮ್ಮಾನ ಮಾಡುವುದು ಹಾಗೂ ವಂದನೆ ಇತ್ಯಾದಿಗಳಿಂದ ವಿನಯ ಮಾಡುವುದು ವಿನಯ-ತಪವಾಗಿದೆ. ಮಾನ ಕಷಾಯದ ಮೇಲೆ ವಿಜಯ ಸಾಧಿಸುವವರು ಮಾತ್ರ ವಿನಯ ಮಾಡಬಲ್ಲರು. ವಿನಯ ಮಾಡುವವರಿಗೆ ಇನ್ನೊಬ್ಬರ ಎದುರಿಗೆ ನಮ್ರನಾಗಬೇಕಾಗುತ್ತದೆ. ಬಾಗ ಬೇಕಾಗುತ್ತಿದೆ, ತಮ್ಮ ಪೂಜ್ಯರ, ದೊಡ್ಡವರ ಬಗ್ಗೆ ಅಂತರಂಗದಿಂದ ಬಾಗ ಬೇಕಾಗುತ್ತದೆ. ಯಾರ ಮುಂದೆಯೋ ಬಾಗುವುದು ಸಹಜವಲ್ಲ. ಅಭಿಮಾನ ಕರಗಿದವರು ಮಾತ್ರ ಬಾಗಬಲ್ಲರು. ಹಾಗೇ ನೋಡಿದಲ್ಲಿ ಅಜ್ಞಾನಿಗಳಲ್ಲಿ ಅಭಿಮಾನ, ಅಹಂಕಾರ ಪ್ರಮುಖವಾಗಿರುತ್ತದೆ. ಅಹಂಕಾರವನ್ನು ಬಿಡದೇ ಅರ್ಹಮ್ ಪ್ರಾಪ್ತವಾಗುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿ ವಿನಯ ಭಾವವನ್ನು ಧಾರಣೆ ಮಾಡಲಾರ, ಸಮ್ಯಗ್ ದೃಷ್ಟಿಗಳು ಮಾತ್ರ ವಿನಯ ಭಾವವನ್ನು ಧಾರಣೆ ಮಾಡಬಲ್ಲರು. ದರ್ಶನ, ಜ್ಞಾನ ಚಾರಿತ್ರ, ತಪ ಮತ್ತು ಉಪಚಾರ ಈ ಐದು ಪ್ರಕಾರದ ವಿನಯವನ್ನು ಸಮ್ಯಗ್ ದೃಷ್ಟಿಗಳು ಮಾಡಬಹುದು. ಇದರಿಂದ ಕರ್ಮಗಳ ನಿರ್ಜರೆಯಾಗುತ್ತದೆ.

**ವೈಯಾವೃತ್ಯ ತಪ**–ಚಾರಿತ್ರ ಶೀಲ ಇತ್ಯಾದಿ ಗುಣಗಳಿಂದ ವಿಭೂಷಿತ ಸಾಧು ಜನಗಳ ಶರೀರ ಹಾಗೂ ಅನ್ಯ ಉಪಯೋಗಿ ವಸ್ತುಗಳಿಂದ ಸೇವೆ ಶುಶ್ರೂಷೆ ಮಾಡುವುದು ವೈಯಾವೃತ್ಯ ತಪವಾಗಿದೆ, ಆಚಾರ್ಯ ಶ್ರೀ ಸಮಂತಭದ್ರ ಸ್ವಾಮಿಗಳು ರತ್ನ ಕರಂಡಕ ಶ್ರಾವಕಾಚಾರದಲ್ಲಿ ಹೀಗೆ ಹೇಳಿದ್ದಾರೆ–

**ವ್ಯಾಪತ್ತಿ ವ್ಯಪನೋದ: ಪದಯೋ: ಸಂವಾಹನಂ ಚ ಗುಣರಾಗಾತ್।**
**ವೈಯಾವೃತ್ಯಂ ಯಾವಾನುಪಗ್ರಹೋನ್ಯೋಪಿ ಸಂಯಮಿನಾಮ್॥112॥**

ಗುಣಗಳ ಅನುರಾಗದಿಂದ ಸಂಯಮಿ ತಪಸ್ವಿ ಜನರ ಖೇದವನ್ನು ದೂರ ಮಾಡುವುದು, ಕಾಲು ಇತ್ಯಾದಿ ಅಂಗಗಳನ್ನು ಒತ್ತಿ ಶರೀರದ ಸೇವೆ ಮಾಡುವುದು ಮತ್ತು ಗುಣಾನುರಾಗದಿಂದ ಪೂರ್ಣ ಉಪಕಾರ ಮಾಡುವುದು ವೈಯ್ಯಾವೃತ್ಯ ವಾಗಿದೆ. ಗೃಹಸ್ಥರಂತೂ ವೈಯಾವೃತ್ಯ ಮಾಡುತ್ತಾರೆ. ಮುನಿ ಜನರು ಒಬ್ಬರಿಗೊಬ್ಬರ ವೈಯ್ಯಾವೃತ್ಯ ಮಾಡುತ್ತಾರೆ. ಗ್ಲಾನಿತನವನ್ನು ಬಿಟ್ಟು ಸೇವೆ ಮಾಡಿದಾಗ ವೀತರಾಗ ಸ್ವರೂಪದ ಗುರಿಯಿಂದ ಆಗುವ ಅಂತರಂಗ ಪರಿಣಾಮಗಳ ಶುದ್ಧತೆಗೆ ವೈಯಾವೃತ್ಯ ತಪವೆನ್ನುತ್ತಾರೆ. ತತ್ತ್ವಾರ್ಥ ರಾಜವಾರ್ತಿಕದಲ್ಲಿ ಆಚಾರ್ಯ ಅಕಲಂಕ ದೇವರು ವೈಯಾವೃತ್ಯದ ಲಾಭಗಳನ್ನು ಹೇಳುತ್ತಾ-ವೈಯಾವೃತ್ಯ ಮಾಡುವುದರಿಂದ, ಸಮಾಧಿ ಧಾರಣೆ, ಗ್ಲಾನಿತನದ ವಿಜಯ ಹಾಗೂ ಪರಸ್ಪರ ವಾತ್ಸಲ್ಯ ಭಾವನೆ ಪ್ರಕಟವಾಗುತ್ತದೆ-ಎಂದು ಹೇಳಿದ್ದಾರೆ. ಆಚಾರ್ಯ ವೀರಸೇನ ಸ್ವಾಮಿಗಳು-ವೈಯ್ಯಾವೃತ್ಯ ಮಾಡುವವರು ಉತ್ತಮ ವಜ್ರ ವೃಷಭನಾರಾಚ

ಸಂಹನನವನ್ನು ಪಡೆದುಕೊಳ್ಳುತ್ತಾರೆ. ವಜ್ರ ವೃಷಭನಾರಾಚ ಸಂಹನನವುಳ್ಳ ವ್ಯಕ್ತಿಗಳೇ ಕ್ಷಾಯಿಕ ಸಮ್ಯತ್ತ್ವ ಮತ್ತು ಕ್ಷಪಕ ಶ್ರೇಣಿಯನ್ನು ಪಡೆದುಕೊಳ್ಳುವ ಹಕ್ಕುದಾರರಾಗುತ್ತಾರೆಂದೂ ಹೇಳಿದ್ದಾರೆ.

ಗೃಹಸ್ಥರು ವೈಯಾವೃತ್ಯವನ್ನು ಮಾಡಿ ತೀವ್ರವಾಗಿ ಪುಣ್ಯೋಪಾರ್ಜನೆ ಮಾಡುತ್ತಾರೆ. ಭವಿಷ್ಯದಲ್ಲಿ ತೀರ್ಥಂಕರ ಪದದ ಹಕ್ಕುದಾರರು ಸಹ ಆಗಬಹುದು. ಪೂಜೆಯಲ್ಲಿ ತಾವೂ ಹೀಗೆ ಓದಿಯೇ ಇದ್ದಿರಾ–

**'ನಿಶದಿನ ವೈಯಾವೃತ್ಯ ಕರೈಯಾ, ಸೋ ನಿಶ್ಚಯ ಭವ ನೀರ ತಿರೈಯಾ॥**

(ರಾತ್ರಿ–ಹಗಲು ವೈಯಾವೃತ್ಯ ಮಾಡಿ, ನಿಶ್ಚಯವಾಗಿ ಭವ ಸಮುದ್ರದಿ ಪಾರಾಗಿ)

**ಸಹೋದರರೇ ಗಮನದಲ್ಲಿಡಿ**–ಮಾನ ಕಷಾಯದ ಉಪಶಮ ಅಥವಾ ಅಭಾವವಾಗದೇ ವೈಯಾವೃತ್ಯ ಇತ್ಯಾದಿಗಳನ್ನು ಮಾಡಲಾಗುವುದಿಲ್ಲ. ಅಂತರಂಗದಲ್ಲಿ ವಿನಯ, ವಾತ್ಸಲ್ಯ ಶ್ರದ್ಧೆ, ಭಕ್ತಿ, ಸಮರ್ಪಣ ಭಾವ ಇರುವವರು ಮಾತ್ರ ವೈಯಾವೃತ್ಯವನ್ನು ಮಾಡಬಲ್ಲರು. ಆಗಲೇ ಗ್ಲಾನಿಯನ್ನು ಗೆದ್ದು ಅಹಂನ್ನು ಮುರಿದು ಸೇವೆ ಶುಶ್ರೂಷೆ ಮಾಡಬಹುದು. ಸಮರ್ಥರಾಗಿದ್ದು ಸಹ ವೈಯಾವೃತ್ಯ ಮಾಡದವರು ಧರ್ಮ ಭ್ರಷ್ಟರಾಗಿದ್ದರೆ, ಜಿನಾಜ್ಞೆಯ ಭಂಗ, ಶಾಸ್ತ್ರದಲ್ಲಿ ಹೇಳಿದ ಧರ್ಮದ ನಾಶ ಅಥವಾ ಸಾಧು ವರ್ಗ ಹಾಗೂ ಆಗಮಗಳ ತ್ಯಾಗ ಇತ್ಯಾದಿ ಮಹಾದೋಷಗಳು ವೈಯಾವೃತ್ಯವನು ಉಪೇಕ್ಷೆ ಮಾಡುವುದರಿಂದ ಪ್ರಕಟವಾಗುತ್ತವೆ. ಪ್ರತಿನಿತ್ಯವು ಬಾಲ, ವೃದ್ಧ, ಯುವ, ರೋಗಿ, ಸಾಧು ಜನರ ವೈಯ್ಯಾವೃತ್ಯ ಮಾಡಬೇಕು. ಸಾಧಕರ ಸಾಧನೆಯಲ್ಲಿ ಯಾವುದೇ ಪ್ರಕಾರದಿಂದ ಸಹಯೋಗಿಯಾಗುವುದು ಸಹ ವೈಯಾವೃತ್ಯವಾಗಿದೆ. ನಾಲ್ಕು ಪ್ರಕಾರದ ದಾನಗಳನ್ನು ಮಾಡುವುದು ಸಹ ವೈಯಾವೃತ್ಯವಾಗಿದೆ.

**ಸ್ವಾಧ್ಯಾಯ ತಪ**–ಸರ್ವಜ್ಞ ಪ್ರಣೀತ–ಆರ್ಷ ಪರಂಪರೆಯ ವಾಣಿಯ ಚಿಂತನೆಮಾಡಿ ಅದನ್ನು ಓದಿ, ಕೇಳಿ ಬರೆದು, ಆಲಸ್ಯದಿಂದ ದೂರ ಸರಿದು ಸ್ವ ಆತ್ಮನಲ್ಲಿ ಅಧಿ ಅರ್ಥಾತ್ ವಸನಾ–ವಾಸಿಸುವುದು ಸ್ವಾಧ್ಯಾಯ ತಪವಾಗಿದೆ. ಸ್ವಾದ್ಯಾಯದ ವಾಸ್ತವಿಕ ಅರ್ಥ ಸ್ವದ ಅಧ್ಯಯನವಾಗಿದೆ. ಸ್ವದ ಅಧ್ಯಯನವೆಂದರೆ ತನ್ನ ಪರಿಣಾಮಗಳ ಅಂತರ್ ವಿಶ್ಲೇಕ್ಷಣೆ ಮಾಡುವುದಾಗಿದೆ. ಇದರಿಂದ ಭಾವಗಳ ವಿಶುದ್ಧಿ ಹಾಗೂ ಕರ್ಮಗಳ ನಿರ್ಜರೆಯಾಗುತ್ತದೆ. ರಾಗ ಬಿಡಲು ಸಹಾಯಕವಾದ, ಮೋಕ್ಷ ಮಾರ್ಗದಲ್ಲಿ ರುಚಿ ಹುಟ್ಟಿಸುವ ಹಾಗೂ ವಾತ್ಸಲ್ಯ ಭಾವವನ್ನು ಜಾಗೃತ ಗೊಳಿಸುವುದೇ ನಿಜವಾದ ಸ್ವಾಧ್ಯಾಯವಾಗಿದೆ. ಪರಮಾರ್ಥ ಮತ್ತು ನಿಸ್ವಾರ್ಥ ಭಾವನೆಗಳಿಂದ ಏನನ್ನು ಮಾಡಲಾಗುತ್ತದೆಯೋ ಅದೇ ಸ್ವಾದ್ಯಾಯವಾಗಿದೆ. ಸ್ವಾಧ್ಯಾಯ ಮಾಡುತ್ತಾ ತಮ್ಮ ಪರಿಣಾಮಗಳ ವಿಶುದ್ಧಿಯ ಮೇಲೆ ಧ್ಯಾನ ಕೇಂದ್ರಿತಗೊಳಿಸಬೇಕು.

ಆಚರಣೆಗಳ ಆಳಕ್ಕೆ ಇಳಿದಾಗ ಸ್ವಾಧ್ಯಾಯ ತಪ ಉಂಟಾಗುತ್ತದೆ. ಹೀಗೆ ಹೇಳಿಯೂ ಇದ್ದಾರೆ–**"ಣ ವಿ ಅತ್ಥಿ ಣವಿ ಯ ಹೋಹಿದಿ ಸಜ್ಝಾಯ ಸಮಂತವೋ ಕಮ್ಮಂ। (ಭ.ಆ.106)"** ಸ್ವಾದ್ಯಾಯಕ್ಕಿಂತ ಹೆಚ್ಚಿನ ತಪವಿಲ್ಲ, ಗೃಹಸ್ಥರಿಗಾಗಿ ಸ್ವಾಧ್ಯಾಯವು ಕರ್ಮ ರೂಪದ ಕರ್ತವ್ಯವಾಗಿದೆ ಹಾಗೂ ಮುನಿಗಳಿಗೆ ಹಾಗೂ ಆಚಾರ್ಯರುಗಳಿಗೆ ಈ ಸ್ವಾದ್ಯಾಯವು ತಪವಾಗಿದೆ. ಇದು ಕೇವಲ ಕರ್ತವ್ಯ ಮಾರ್ಗವಾಗಿದ್ದು ತಪದ ಫಲ ಮೋಕ್ಷ ಮಹಡಿಯ ಪ್ರಾಪ್ತಿಯಾಗಿದೆ. ಸಮ್ಯಗ್ ಜ್ಞಾನದ ಭಾವನೆಯಲ್ಲಿ ಆಲಸ್ಯ ಮಾಡಬಾರದು, ಜಿನ ಶಾಸ್ತ್ರಗಳಿಂದ ಸ್ವ ಅರ್ಥಾತ್ ಆತ್ಮಜ್ಞಾನವಾಗಲಿ ಎಂಬ ಸಮೀಚೀನ ಪದಾರ್ಥಗಳನ್ನು ತೋರಿಸುವ ಶುದ್ಧ ನಿರ್ದೋಷ ನಿರ್ಗ್ರಂಥರುಗಳಿಂದ ರಚಿಸಲ್ಪಟ್ಟ

ಶಾಸ್ತ್ರಗಳ ಅಧ್ಯಯನ ಮಾಡುವುದು ಮಾಡಿಸುವುದು ಹಾಗೂ ಅವುಗಳು ನೀಡುವ ಶಿಕ್ಷಣದ ಮೇಲೆ ಧ್ಯಾನ ನೀಡಬೇಕು ವಾಚನಾ, ಪೃಚ್ಛನಾ ಅನುಪ್ರೇಕ್ಷಾ, ಆಮ್ನಾಯ ಹಾಗೂ ಧರ್ಮೋಪದೇಶ ಈ ಐದು ಸ್ವಾಧ್ಯಾಯಕ್ಕೆ ಸಂಬಂಧಿಸಿವೆ.

**ವ್ಯುತ್ಸರ್ಗ ತಪ**–ಶರೀರದ ಬಗ್ಗೆ ಮಮತ್ವ ಅಹಂಕಾರ, ಮಮಕಾರ ಬುದ್ಧಿಯ ತ್ಯಾಗವು ವ್ಯುತ್ಸರ್ಗವಾಗಿದೆ. ಕ್ರೋಧಾದಿ ಅಂತರಂಗ ಹಾಗೂ ಧನ ಧಾನ್ಯಾದಿ ಬಹಿರಂಗ ಪರಿಗ್ರಹಗಳಲ್ಲಿ 'ಇದು ನನ್ನದಾಗಿದೆ' ಈ ಪ್ರಕಾರದ ಸಂಕಲ್ಪದ ತ್ಯಾಗ ಮಾಡುವುದು ವ್ಯುತ್ಸರ್ಗ ತಪವಾಗಿದೆ. ಇದಕ್ಕೆ ಕಾಯೋತ್ಸರ್ಗವೆಂದೂ ಹೇಳಿದ್ದಾರೆ. ಕಾರ್ಯ ಅರ್ಥಾತ್ ಶರೀರ, ಉತ್ಸರ್ಗ ಅರ್ಥಾತ್ ಬಿಡುವುದು. ಶರೀರದಿಂದ ಕೆಲವು ನಿಯತ ಕಾಲಕ್ಕಾಗಿ ಮಮತ್ವವನ್ನು ಬಿಟ್ಟು ಪಂಚ ಪರಮೇಷ್ಠಗಳನ್ನು ಧ್ಯಾನ ಮಾಡುವುದು, ಣಮೋಕಾರ ಮಂತ್ರದ ಸ್ಮರಣೆ ಮಾಡುವುದು, ಪಂಚ ಪರಮೇಷ್ಠಿಗಳ ಗುಣಗಳ ಸ್ಮರಣೆ ಮಾಡುವುದು, ಕಾಯೋತ್ಸರ್ಗವೆಂದು ಕರೆಯಲ್ಪಡುತ್ತದೆ. ಒಂದು ವೇಳೆ ಶರೀರ ಸಂಬಂಧದ ಯಾವುದೇ ವಿಕಲ್ಪ ಬಂದರೆ ಅಥವಾ ಯಾವುದೇ ಆರ್ತ ರೌದ್ರ ಧ್ಯಾನವಾಗತೊಡಗಿದರೆ ಅದು ಕಾಯೋತ್ಸರ್ಗವಲ್ಲವೆಂದು ತಿಳಿಯಿ. ಶರೀರದ ಬಗ್ಗೆ ಮೋಹ ಇಲ್ಲದೇ ಇರುವವರೆಗೆ, ಚಿಂತೆ ಇಲ್ಲದೇ, ಸಮತಾ ಭಾವವಿದೆ, ಆಗ ಅದು ಕಾಯೋತ್ಸರ್ಗವಾಗಿದೆ. ಕಾಯೋತ್ಸರ್ಗ ತಪದ ವಿಷಯದಲ್ಲಿ ಕಾರ್ತಿಕೇಯನು ಪ್ರೇಕ್ಷೆಯಲ್ಲಿ ಆಚಾರ್ಯರು ಹೀಗೆ ಹೇಳಿದ್ದಾರೆ–

**ಜಲ್ಲ–ಮಲ್ಲ–ಲಿತ್ತ–ಗತ್ತೋ ದುಸ್ಸಹ ವಾಹೀಸು ಣಿಪ್ಪಡಿಯಾರೋ।**
**ಮುಹ ಧೋವಣಾದಿ ವಿರಓ ಭೋಯಣ ಸೆಜ್ಜಾದಿ ಣಿರವೇಕ್ಖೋ॥467॥**
**ಸಸ ರೂವ–ಚಿಂತಣ ರಓ ದುಜ್ಜಣ–ಸುಯಣಾಣ ಜೋ ಹು ಮಜ್ಝತ್ಥೋ।**
**ದೇಹೇ ವಿ ಣಿಒಮಮತ್ತೋ ಕಾಒಸಗ್ಗೋ ತಓ ತಸ್ಸ॥468॥**

ಜಲ್ಲ ಮತ್ತು ಮಲ್ಲದಿಂದ ತಪ್ತರಾದ ಮುನಿಗಳು ಅಸಾಧ್ಯವಾದ ರೋಗದಿಂದ ಕೂಡಿದ್ದರೂ ಅದಕ್ಕೆ ಪ್ರತಿಕಾರವನ್ನು ಮಾಡದೇ, ಮುಖ ತೊಳೆಯುವ ಇತ್ಯಾದಿ ಶರೀರದ ಸಂಸ್ಕಾರಗಳಿಂದ ಉದಾಸೀನರಾಗಿದ್ದು, ಭೋಜನ, ಶಯ್ಯಾ ಇತ್ಯಾದಿಗಳ ಅಪೇಕ್ಷೆ ಪಡದಿರುವ ಹಾಗೂ ತನ್ನ ಸ್ವರೂಪದ ಚಿಂತನೆಯಲ್ಲಿಯೇ ಲೀನರಾಗಿರುವ, ದುರ್ಜನ ಮತ್ತು ಸಜ್ಜನರಲ್ಲಿ ಮಾಧ್ಯಸ್ಥಭಾವ ಹೊಂದಿರುವ ಹಾಗೂ ಶರೀರವನ್ನು ಸಹ ಮಮತ್ವ ಮಾಡದಿರುವ, ಆ ಮುನಿಗೆ ಕಾಯೋತ್ಸರ್ಗ ಹೆಸರಿನ ತಪ ಆಗುತ್ತದೆ.

ಮುನಿ ಮಹಾರಾಜರು ಶರೀರದ ಬಗ್ಗೆ ಪೂರ್ಣ ರೂಪದಿಂದ ನಿರ್ಮಮತ್ವರಾಗಿರುತ್ತಾರೆ. ಅವರು ಆತ್ಮ ಅಥವಾ ಪರಮಾತ್ಮನ ದರ್ಶನಕ್ಕಾಗಿ ದೇವ, ಮನುಷ್ಯ, ತಿರ್ಯಂಚ ಅಚೇತನ ಕೃತ ಉಪಸರ್ಗಗಳನ್ನು ಸಮತಾ ಪೂರ್ವಕ ಸಹಿಸುತ್ತಾರೆ. ವ್ಯುತ್ಸರ್ಗ ತಪ ಉಪಸರ್ಗವನು ಉಪಹಾರವನ್ನಾಗಿ ಮಾಡಿಕೊಳ್ಳುತ್ತಾರೆ. ಭಗವಾನ ಪಾರ್ಶ್ವನಾಥರ ಮೇಲೆ ಕಮಠನು ಉಪಸರ್ಗ ಮಾಡಿದಾಗ ಅವರಿಗೆ ಕೇವಲಜ್ಞಾನ ಪ್ರಾಪ್ತವಾಯಿತು. ಪಾಂಡವರಿಗೆ ಉಪಸರ್ಗದ ನಂತರವೇ ಮುಕ್ತಿ ದೊರಕಿದ್ದಿತು. ನಾನು ಶರೀರವಲ್ಲ, ಶರೀರವೂ ನನ್ನದಲ್ಲ, ಈ ಪ್ರಕಾರದ ಆಚಾರ–ವಿಚಾರ ಮಾಡುವ ಸಾಧಕರಿಗೆ ವ್ಯುತ್ಸರ್ಗ ತಪವಾಗುತ್ತದೆ. ಇದರಿಂದ ಆಶೆ ಹಾಗೂ ತೃಷ್ಣೆಗಳ ಮೇಲೆ ವಿಜಯ ದೊರೆಯುತ್ತದೆ, ನಿರ್ಮಮತೆ ಹಾಗೂ ನಿ:ಸಂಗತೆಯುಂಟಾಗುತ್ತದೆ ಹಾಗೂ ಮನಸ್ಸು ಸಹ ಹಗುರವಾಗುತ್ತದೆ.

**ಧ್ಯಾನ–** ಯಾವುದೇ ಒಂದು ಪದಾರ್ಥದ ಚಿಂತನೆಯಲ್ಲ ಮನಸ್ಸನ್ನು ತೊಡಗಿಸುವುದು, ಮನಸ್ಸಿನ ಚಂಚಲತೆಯನ್ನು ತಡೆದು, ತತ್ತ್ವಗಳ ಚಿಂತನೆಯಲ್ಲಿ ತೊಡಗಿಸುವುದು ಆತ್ಮಸ್ಥ ಭಾವಗಳಲ್ಲಿ ಸಾಧ್ಯವಿದ್ದಷ್ಟು ರಮಣ ಮಾಡುವುದು ಧ್ಯಾನವಾಗಿದೆ. ಪ್ರಾಥಮಿಕ ಭೂಮಿಕೆಯಲ್ಲಿ ಅಶುಭ ವಿಕಲ್ಪಗಳಿಂದ ದೂರ ಸರಿದು ಶುಭದಲ್ಲಿರುವುದು ಲೀನನಾಗುವುದು ಧ್ಯಾನವೆಂದು ಒಪ್ಪಲಾಗಿದೆ. ಇದರಲ್ಲಿ ಮಂತ್ರಗಳ ಜಪ, ಭಾವನೆಗಳ ಚಿಂತನೆಗಳು ಸಹ ಸಹಾಯಕವಾಗಿರುತ್ತವೆ. ರಾಗ ದ್ವೇಷಗಳಿಂದ ಮೇಲೆ ಏರಿ ಆತ್ಮ ಕೇಂದ್ರಿತನಾಗುವುದೇ ಧ್ಯಾನದ ಸಾಧ್ಯವಾಗಿದೆ. ಅದು ವಿಶೇಷ ಪ್ರಯಾಸ, ಅಭ್ಯಾಸದಿಂದಲೇ ಆಗುತ್ತದೆ. ದ್ರವ್ಯಸಂಗ್ರಹದಲ್ಲಿ ಧ್ಯಾನದ ವಿಷಯದಲ್ಲಿ ಆಚಾರ್ಯರು ಹೀಗೆ ಹೇಳಿದ್ದಾರೆ–

**ಮಾ ಮಜ್ಝಹ ಮಾ ರಜ್ಝಹ ಮಾ ದುಸ್ಸಹ ಇಟ್ಠಣಿಟ್ಠ ಅತ್ಥೇಸು।**
**ಥಿರ ಮಿಚ್ಛಹ ಜಇ ಚಿತ್ತಂ ವಿಚಿತ್ತ ಝಾಣಪ್ಪ ಸಿದ್ಧೀಏ ॥48॥**

ಹೇ ಭವ್ಯ ಜನರೇ, ಒಂದು ವೇಳೆ ನೀವು ಪರಮಧ್ಯಾನದ ಸಿದ್ಧಿಗಾಗಿ ಚಿತ್ತವನ್ನು ಸ್ಥಿರಗೊಳಿಸಲು ಬಯಸುವಿರಾದರೆ ಇಷ್ಟ ಮತ್ತು ಅನಿಷ್ಟ ಪದಾರ್ಥಗಳಲ್ಲಿ ರಾಗ–ದ್ವೇಷ ಮತ್ತು ಮೋಹವನ್ನು ಮಾಡಬೇಡಿ.

ವೀತರಾಗತೆಯನ್ನು ಸಾಧ್ಯವೆಂದು ಭಾವಿಸಿ ಆಸಕ್ತಿಯನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿದರೆ ಆಗ ಧ್ಯಾನದ ಸಿದ್ಧಿಯಾಗಬಹುದು. ಆರ್ತ ಮತ್ತು ರೌದ್ರ ಧ್ಯಾನಗಳನ್ನು ತ್ಯಾಗ ಮಾಡಿ ಮನಸ್ಸಿನ ಚಂಚಲತೆಯನ್ನು ತಡೆಗಟ್ಟುತ್ತಾ ಬಾಹ್ಯ ಪದಾರ್ಥಗಳನ್ನು ವಿಸರ್ಜನೆ ಮಾಡಿ ಪುರುಷಾರ್ಥ ಪೂರ್ವಕ, ಧರ್ಮ ಮತ್ತು ಶುಕ್ಲ ಧ್ಯಾನಗಳಲ್ಲಿ ಲೀನನಾಗುವುದು ಪ್ರಶಸ್ತವಾದ ಧ್ಯಾನ ಹೆಸರಿನ ತಪವಾಗಿದೆ. ಸಾಮಾನ್ಯವಾಗಿ ಧ್ಯಾನದ ನಾಲ್ಕು ಪ್ರಕಾರಗಳಿವೆ–ಆರ್ತಧ್ಯಾನ, ರೌದ್ರಧ್ಯಾನ, ಧರ್ಮಧ್ಯಾನ ಹಾಗೂ ಶುಕ್ಲಧ್ಯಾನ. ಪರಿಣಾಮ ಸಂಕ್ಲೇಷಿತವಾಗಿ, ದು:ಖಿಯಾಗುವುದು ಆರ್ತಧ್ಯಾನವೆಂದು ಕರೆಯಲ್ಪಡುತ್ತದೆ. ಇದು ಇಷ್ಟವಿಯೋಗ, ಅನಿಷ್ಟ ಸಂಯೋಗ, ಪೀಡೆ, ಚಿಂತನ ಮತ್ತು ನಿದಾನ–ಬಂಧದ, ಭೇದದಿಂದ ನಾಲ್ಕು ಪ್ರಕಾರವಾಗಿದೆ. ಪರಿಣಾಮ ರುದ್ರ ಅರ್ಥಾತ್ ಕ್ರೂರ ಆಶಯದಿಂದ ಕೂಡಿರುವುದು ರೌದ್ರ ಧ್ಯಾನವೆಂದು ಕರೆಯಲ್ಪಡುತ್ತದೆ. ಇದು ಹಿಂಸಾನಂದಿ, ಮೃಷಾನಂದಿ, ಚೌರ್ಯಾನಂದಿ ಮತ್ತು ಪರಿಗ್ರಹ ಸಂರಕ್ಷಣಾನಂದಿ ಎಂಬ ಭೇದಗಳಿಂದ ನಾಲ್ಕು ಪ್ರಕಾರವಾಗಿದೆ. ಅಹಿಂಸೆ, ಕ್ಷಮೆ ಮತ್ತು ಸತ್ಪಾತ್ರ ದಾನ ಇತ್ಯಾದಿ ಧರ್ಮದ ಆಸರೆ ಪಡೆದು ಅದರಲ್ಲಿ ಲೀನನಾಗುವುದು ಧರ್ಮಧ್ಯಾನವಾಗಿದೆ–ಇದು ಸಹ ಮುಖ್ಯರೂಪದಿಂದ ಆಜ್ಞಾವಿಚಯ, ಅಪಾಯವಿಚಯ, ವಿಪಾಕವಿಚಯ ಹಾಗೂ ಸಂಸ್ಥಾನವಿಚಯ ಎಂದು ನಾಲ್ಕು ಪ್ರಕಾರವಾಗಿದೆ, ಪಿಂಡಸ್ಥ, ಪದಸ್ಥ, ರೂಪಸ್ಥ ಮತ್ತು ರೂಪಾತೀತ ಇವು ನಾಲ್ಕು ಅನ್ಯ ಪ್ರಕಾರದ ಧರ್ಮಧ್ಯಾನಗಳಾಗಿವೆ. ಮನಸ್ಸು ಅತ್ಯಂತ ನಿರ್ಮಲವಾದಾಗ ಆಗುವ ಏಕಾಗ್ರತೆಯು ಶುಕ್ಲ ಧ್ಯಾನವಾಗಿದೆ, ಇದೇ ಧ್ಯಾನದಿಂದ ಆತ್ಮಾನು ಭೂತಿಯ ಬಾಗಿಲು ತೆರೆಯುತ್ತದೆ. ಈ ಧ್ಯಾನ ಸಹ– ಪೃಥಕತ್ವ ವಿತರ್ಕ ವಿಚಾರ, ಏಕತ್ವವಿತರ್ಕ ಅವಿಚಾರ, ಸೂಕ್ಷ್ಮಕ್ರಿಯಾ ಪ್ರತಿಪಾತಿ ಹಾಗೂ ವ್ಯುಪರತ ಕ್ರಿಯಾ ನಿವೃತ್ತಿ ಎಂದು ನಾಲ್ಕು ಪ್ರಕಾರವಾಗಿದೆ. ಈ ಹದಿನಾರು ಧ್ಯಾನಗಳಲ್ಲಿ ಆರ್ತ–ರೌದ್ರ ಧ್ಯಾನಗಳು ಹೇಯವಾಗಿದ್ದು ದುರ್ಗತಿಗಾಗಿ ಹಾಗೂ ಸಂಸಾರಕ್ಕಾಗಿ ಇವೆ. ಇವುಗಳನ್ನು ತ್ಯಾಗ ಮಾಡುವುದು ಪ್ರಶಸ್ತ ಧ್ಯಾನವಾಗಿದೆ. ಆರ್ತ ರೌದ್ರ ಧ್ಯಾನವು ತಿರ್ಯಂಚ ಗತಿಯ ಹಾಗೂ

ರೌದ್ರ ಧ್ಯಾನವು ನರಕಗತಿಗೆ ಕಾರಣವಾಗಿದೆ. ಧರ್ಮಧ್ಯಾನ ಮತ್ತು ಶುಕ್ಲ ಧ್ಯಾನಗಳು ಮೋಕ್ಷದ ಕಾರಣ ಅಥವಾ ಹೇತು ಆಗಿವೆ ಅಥವಾ ಉಪಾದೇಯವು ಆಗಿವೆ. ಧರ್ಮಧ್ಯಾನವು ಸ್ವರ್ಗಕ್ಕೆ ಕಾರಣ, ಆಗಾಗ ಮನುಷ್ಯ ಗತಿಗೂ ಕಾರಣವಾಗಿದೆ. ಶುಕ್ಲ ಧ್ಯಾನದ ಪ್ರಾಪ್ತಿಯು ಇಂದಿನ ಪಂಚಮ ಕಾಲದಲ್ಲಿ ಆಗುವುದಿಲ್ಲ. ಆಚಾರ್ಯರು ಹೀಗೆ ಹೇಳಿದ್ದಾರೆ–ಕೋಟಿ ಜಪ, ಕೋಟಿ ಪೂಜೆ, ಕೋಟಿ ತೀರ್ಥವಂದನೆ ಮಾಡಿದ್ದರೂ ಇವೆಲ್ಲವುಗಳಿಗಿಂತ ದೊಡ್ಡದು ಹಾಗೂ ಮಹತ್ವಪೂರ್ಣದ್ದು ಎಂದರೆ ಶುಕ್ಲ ಧ್ಯಾನ ತಪ. 48 ನಿಮಿಷಗಳ ಕಾಲ ಆತ್ಮನಲ್ಲಿ ಶುಕ್ಲ ಧ್ಯಾನ ಉಂಟಾದರೆ ಕರ್ಮಗಳಿಂದ ಮುಕ್ತಿಯಾಗಿ ಬಿಡುತ್ತದೆ. ಮನುಷ್ಯನಲ್ಲಿ ಅನಂತ ಕ್ಷಮತೆಗಳಿವೆ. ಮೋಹಾಸಕ್ತ ಪ್ರಾಣಿಯು ಇವುಗಳನ್ನು ಅಭಿವ್ಯಕ್ತಗೊಳಿಸಲಾರ ಆದರೆ ಮೋಹವು ಶಮನವಾದಂತೆ ಆತ್ಮ ಶಕ್ತಿಗಳು ಅಭಿವ್ಯಕ್ತ ವಾಗುತ್ತವೆಂದು ಅನಿಸುತ್ತದೆ.

ಪರಿಗ್ರಹದ ಆಶ್ರಯ ತೆಗೆದುಕೊಳ್ಳದಿರುವವನೇ ಜ್ಞಾನಿ ಆತನಿಗೆ ವಿಷಯ ಸುಖಗಳ ಯಾವ ಅವಶ್ಯಕತೆಗಳು ಇರುವುದಿಲ್ಲ, ಆತನು ಕೇವಲ ತನ್ನ ಆತ್ಮನ ಆಶ್ರಯವನ್ನು ಪಡೆಯುತ್ತಾನೆ. ಎಲ್ಲಿಯವರೆಗೆ ಪರಿಗ್ರಹಗಳನ್ನು ಹಿಡಿದು ಕೊಂಡಿರುತ್ತಾನೆಯೋ ಅಲ್ಲಿಯವರೆಗೆ ಮುಕ್ತಿ ಆಗುವ ಸಾಧ್ಯತೆ ಇಲ್ಲ. ಪರಿಗ್ರಹವನ್ನು ಬಿಡದೆ ಉತ್ತಮ ಧ್ಯಾನ ಆಗುವ ಸಂಭವವೂ ಇಲ್ಲ. ಜ್ಞಾನಾರ್ಣವ ಗ್ರಂಥದಲ್ಲಿ ಆಚಾರ್ಯ ಶುಭಚಂದ್ರ ಸ್ವಾಮಿಗಳು ಹೀಗೆ ಹೇಳುತ್ತಾರೆ–

**ಅನೀಷಿಧ್ಯಾಕ್ಷ ಸಂದೋಹಂ ಯ: ಸಾಕ್ಷಾತ್ ಮೋಕ್ತು ಮಿಚ್ಛತಿ।**
**ವಿದಾರಯತಿ ದುರ್ಬುದ್ಧಿ: ಶಿರಸಾ ಸಮ ಹೀ ಧರಮ್॥(20/31)**

ಧ್ಯಾನದಿಂದಲೇ ಆತ್ಮಾನುಭೂತಿಯಾಗುತ್ತದೆ. ಒಂದು ವೇಳೆ ಯಾವುದೇ ವ್ಯಕ್ತಿ ಧ್ಯಾನಕ್ಕೆ ರತ್ನತ್ರಯದ ಆಲಂಬನವಿಲ್ಲದೇ, ದಿಗಂಬರನಾಗದೇ ಸಾಧನೆಯನ್ನು ಬಯಸಿದರೆ ಆತ ತಲೆ ಗಟ್ಟಿಯಾಗಿದೆ ಎಂದು ಪರ್ವತವನ್ನು ಒಡೆಯುವ ವ್ಯರ್ಥ ಪ್ರಯತ್ನ ಮಾಡುತ್ತಾನೆ ಎನ್ನುವುದನ್ನು ಮರೆಯಬಾರದು. ಹೀಗೆ ಮಾಡುವುದರಿಂದ ಪರ್ವತವಂತೂ ಒಡೆಯುವುದಿಲ್ಲ. ಆದರೆ ಆತನ ತಲೆ ಅವಶ್ಯವಾಗಿ ಒಡೆದು ಹೋಗುತ್ತದೆ. ಆದ್ದರಿಂದ ಸಹೋದರಾ, ಸಾಧನಾ ಕ್ರಮ ಏನಿದೆಯೋ, ಅದರ ವಿಧಿ ವಿಧಾನಗಳೇನಿವೆಯೋ ಅದಕ್ಕನುಗುಣವಾಗಿ ಮಾಡಿದರೇನೇ ಮುಕ್ತಿ ದೊರೆಯುತ್ತದೆ. ದೋಷಗಳನ್ನು ತೆಗೆದು ಹಾಕಿದಾಗಲೇ ಗುಣಗಳು ಪ್ರಕಟವಾಗುತ್ತವೆ. ಗುಣಗಳೇನು ಹೊರಗಿನಿಂದ ಬರುತ್ತವೆಯೋ ಅವು ದೋಷಗಳನ್ನು ದೂರಮಾಡಿದಾಗ ಸ್ವತ: ಪ್ರಕಟವಾಗಿ ಬಿಡುತ್ತವೆ. ಗುಣಗಳಲ್ಲಿಯೇ ದೋಷಗಳಿರುತ್ತವೆ, ದೋಷಗಳ ಅಭಾವವಾದಕೂಡಲೇ ಗುಣಗಳ ಸದ್ಭಾವ ಸಹಜವಾಗಿ ಆಗಿಬಿಡುತ್ತದೆ. ಪ್ರವಚನ ಸಾರದಲ್ಲಿ ಆಚಾರ್ಯ ಶ್ರೀ ಕುಂದ ಕುಂದ ಸ್ವಾಮಿಗಳು ಹೇಗೆ ಹೇಳುತ್ತಾರೆ–

**ಜಂ ಅಣ್ಣಾಣೀ ಕಮ್ಮಂ ಖವೇದಿ ಭವಸಯ–ಸಹಸ್ಸ ಕೋಡೀಹಿಂ।**
**ತಂ ಣಾಣೀ ತಿಹಿಂ ಗುತ್ತೋ ಖವೇದಿ ಉಸ್ಸಾಸ ಮೇತ್ತೇಣ॥(3/38)**

ಯಾವ ಕರ್ಮಗಳನ್ನು ಅಜ್ಞಾನಿಯು ಸಹಸ್ರಕೋಟಿ ಭವಗಳಲ್ಲಿ ಅನುಭವಿಸುತ್ತಾನೋ, ಅದೇ ಕರ್ಮಗಳನ್ನು ಜ್ಞಾನಿಯು ಮೂರು ಗುಪ್ತಿ(ಮನ, ವಚನ, ಕಾಯ)ಗಳ ಪೂರ್ವಕದಿಂದ ಉಚ್ಛ್ವಾಸ ಮಾತ್ರದಲ್ಲಿ ಅನುಭವಿಸುತ್ತಾನೆ ಧರ್ಮ ಭಾವನಾ ಶತಕದಲ್ಲಿ ಹೀಗೆ ಬರೆದಿದ್ದಾರೆ–

**ಪ್ರಖರ ಸೂರ್ಯನಿಂದ ಗ್ರೀಷ್ಮ ಕಾಲದಲಿ ಧರತಿ ಎಷ್ಟು ತಪಿಸುವುದೋ।**

**ಅಷ್ಟೇ ಮತ್ತೇ ಮಳೆಯಾಗಿ ಎಲ್ಲ ಜೀವಗಳಿಗೆ ಸುಖವ ತರುವುದು॥**
**ಮೋಕ್ಷ ಮಾರ್ಗದಲಿ ರಮಿಸುವ ಯೋಗಿಯು ಘೋರ ತಪವನು ಮಾಡುವರು।**
**ಪಡೆದು ಮಹಾಶಾಂತಿಯ ಮಳೆಯ, ತೃಪ್ತಿಯ ಅನುಭವ ಹೊಂದುವರು॥60॥**

ಗ್ರೀಷ್ಮ ಕಾಲದ ತೀವ್ರವಾದ ಬಿಸಿಲಿನಲ್ಲಿ ಅದೆಷ್ಟು ಭೂಮಿಯು ತಪಿಸುವುದೋ ಅಷ್ಟೇ ಮಳೆಯು ಹೆಚ್ಚಾಗಿ ಸುರಿಯುತ್ತದೆ. ಹಾಗೆಯೇ ಯೋಗಿಯು ಆತ್ಮ ಧ್ಯಾನದಲ್ಲಿ ಹೆಚ್ಚು ತಪಿಸಿದಂತೆ ಅಷ್ಟೇ ಅವರೊಳಗೆ ಮಹಾ ಶಾಂತಿಯ ಮಳೆ ಹೆಚ್ಚಾಗಿ ಆಗುತ್ತದೆ. ಅವರು ತಮ್ಮೊಳಗೆ ತೃಪ್ತಿಯ ಅನುಭವ ಹೊಂದುತ್ತಾರೆ. ಉತ್ತಮ ತಪವನ್ನು ಸ್ವೀಕಾರ ಮಾಡುವವರು ಪರವನ್ನು ನೋಡುವುದಿಲ್ಲ ಒಂದು ವೇಳೆ ಪರದ ಕಡೆಗೆ ಸ್ವಲ್ಪವಾದರೂ ಸಹ ವಿಕಲ್ಪ ಹೊರಟು ಹೋದರೆ ಅವರು ಮಾರ್ಗದಲ್ಲಿಯೇ ಇದ್ದು ಬಿಡುತ್ತಾರೆ. ಅಂತಹ ಮಹಾನ್ ಯೋಗಿಗಳ ಜೀವನದ ಒಂದು ಪ್ರಸಂಗವಿದ್ದು ಅದರಿಂದ ನಾವು ನಮ್ಮ ಜೀವನಕ್ಕೆ ದಾರಿ ತೋರಿಸಬಹುದಾಗಿದೆ. ಅವರು ಮಹಾನ್ ಆತ್ಮರುಗಳಾಗಿದ್ದು ಎಂತಹದೇ ಪರಿಸ್ಥಿತಿಯಲಿಯೂ ಧರ್ಮವನ್ನು ಬಿಡಲಿಲ್ಲ.

ಆ ಪ್ರಸಂಗ ಪಂಚ ಪಾಂಡವರಿಗೆ ಸೇರಿದ್ದು ಅವರು ಸಂಸಾರದ ಅಸಾರತೆಯನ್ನು ತಿಳಿದು, ಸಂಸಾರವನ್ನು ಸ್ವಾರ್ಥಿಗಳೆಂದು ತಿಳಿದು ಜೈನೇಶ್ವರಿ ದೀಕ್ಷೆಯನ್ನು ಸ್ವೀಕರಿಸಿದ್ದರು ಹಾಗೂ ಆತ್ಮ ಧ್ಯಾನದಲ್ಲಿ ಲೀನರಾಗಿ ಬಿಟ್ಟರು. ಸಾಧನೆಯ ಆಳದಲ್ಲಿ ಪ್ರವೇಶಿಸಲು ಒಂದು ಪರ್ವತದ ಮೇಲೆ ಆ ಐವರೂ ಸಹೋದರರು ಸಾಧಾನಾರತರಾಗಿದ್ದರು. ಇಂದು ಒಂದು ಒಳ್ಳೆಯ ಅವಕಾಶ ಸಿಕ್ಕಿದೆ ಎಂದು ಯೋಚಿಸಿದ ಅವರ ಶತ್ರುಗಳು ನಾವು ಇವರ ಶರೀರವನ್ನು ಸಿಂಗರಿಸುತ್ತೇವೆ ಎಂದು ಅಂದು ಕೊಂಡರು. ಅವರು ಕಾಯಿಸಿದ ಕಬ್ಬಿಣದ ಬಿಸಿಯಾದ ಆಭರಣಗಳನ್ನು ಅವರ ಕೈ ಕಾಲು, ಕೊರಳಿಗೆ ಹಾಕಿದರು. ಕೆಂಪಾಗಿ ಕಾದ ಆಭರಣಗಳನ್ನು ಅವರಿಗೆ ತೊಡಿಸಿದಾಗ ಅವರ ಶರೀರ ಉರಿಯತೊಡಗಿತು. ಆದರೆ ಅವರು ತಮ್ಮ ತಪಸ್ಸಿನಲ್ಲಿ ಸಮಾತಾ ಪೂರ್ವಕವಾಗಿ ಲೀನರಾಗಿ ಶರೀರ ಮತ್ತು ಆತ್ಮನ ಭಿನ್ನತೆಯನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಿದ್ದರು. ಆತ್ಮಧ್ಯಾನ ಮಾಡುತ್ತಾ-ಮಾಡುತ್ತಾ ಅವರ ಜ್ಞಾನಾವರಣ ಮುಂತಾದ ಎಂಟು ಕರ್ಮಗಳು ಸುಡತೊಡಗಿದವು ಮೂವರು ಸಹೋದರರಾದ ಯುಧಿಷ್ಠರ, ಭೀಮ ಅರ್ಜುನ ಇವರುಗಳು ಯಾವುದೇ ಪ್ರಕಾರದ ವಿಕಲ್ಪಗಳು ಬರದೇ ಇರುವಂತಹ ಆತ್ಮ ಧ್ಯಾನದಲ್ಲಿ ಲೀನರಾಗಿದ್ದರು. ಭೀಷಣ ಉಪಸರ್ಗವನ್ನು ಸಮತಾಭಾವದಿಂದ ಸಹಿಸಿ ಮುಕ್ತರಾದರು ಆದರೆ ನಕುಲ ಮತ್ತು ಸಹದೇವರ ಮನಸ್ಸಿನಲ್ಲಿ- ಹೇ ಭಗವಂತಾ ಆ ಮೂರು ಮುನಿರಾಜರಿಗೆ ಏನಾಗುತ್ತಿರಬಹುದು, ಅವರು ಈ ಭೀಷಣ ಉಪಸರ್ಗವನ್ನು ಹೇಗೆ ಸಹಿಸುತ್ತಿರಬಹುದು?-ಎಂಬ ವಿಚಾರಗಳು ಉತ್ಪನ್ನವಾದವು. ಅವರು ತಮ್ಮ ಸಹೋದರರು ಎನ್ನುವ ಮೋಹ ಅವರಿಂದ ಬಿಟ್ಟು ಹೋಗಿದ್ದಿತು. ಆದರೆ ಆ ಮುನಿರಾಜರಿಗೆ ಏನಾಗುತ್ತಿರಬಹುದು ಎಂಬ ಭಾವ-ವಿಚಾರವಿದ್ದಿತು. ನಾವಂತೂ ಸಹಿಸುತ್ತಿದ್ದೇವೆ. ಇಷ್ಟೇ ಸಾಕಾಯಿತು ಅವರ ತಪಸ್ಸಿನಲ್ಲಿ ಕಪ್ಪು ಕಲೆಯಾಯಿತು. ಅವರ ಧ್ಯಾನ ಆತ್ಮನ ಕಡೆಯಿಂದ ದೂರ ಸರಿದು ಪರದ ಕಡೆಗೆ ಹೊರಟು ಹೋಯಿತು. ಅವರ ಸೇವೆಯ ಭಾವನೆ ಮುನಿರಾಜರ ಕಡೆಗೆನೇ ಹೋಗಿದ್ದಿತು, ಸ್ವಲ್ಪ ಮಾತ್ರ ಚಿಂತೆ, ವಿಕಲ್ಪವೆನ್ನಿ ಇಷ್ಟೇ ಆದರೂ ಸಿಗುತ್ತಿದ್ದ ಮೋಕ್ಷ ದೇವಗತಿಗೆ ಸೀಮಿತವಾಯಿತು. ಸಹೋದರರ ನೆನಪಾಗಿದ್ದರೆ ಮೋಹವಾಗುತ್ತಿದ್ದಿತು. ಅವರು ನವಗ್ರೈವೈಯಕದ ಮೇಲೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಮುನಿರಾಜರಿಗೆ ಏನಾಗುತ್ತಿರಬಹುದು? ಈ ಭಾವ ಉತ್ತಮ ಹಾಗೂ

ಸೇವೆಯದಾಗಿದ್ದಿತು. ಆದರೆ ದೃಷ್ಟಿ ಪರದ ಕಡೆಗೆ ಹೋಗಿದ್ದಿತು ಹಾಗೂ ಅದೇ ಸಮಯ ಅವರ ಶರೀರ ಬಿಟ್ಟು ಹೋಯಿತು. ಪರದ ಚಿಂತೆಯು ಪೂರ್ಣ ನಿರ್ಜರೆಯ ಸಾಧನೆಯನ್ನು ಮಾಡಲು ಮಾಡಲಿಲ್ಲ ಆದ್ದರಿಂದ ಮುಕ್ತಿ ಆಗಲಿಲ್ಲ. ಸರ್ವಾರ್ಥಸಿದ್ಧಿಯಲ್ಲಿ 33 ಸಾಗರಕ್ಕಾಗಿ ಸಿಲುಕಿದರು. ತಪ ಸಾಧನೆಯ ಮಾರ್ಗದಲ್ಲಿ ಮನಸ್ಸು ಸ್ವಲ್ಪ ಮಾತ್ರ ಪರದ ಕಡೆಗೆ ಹೋಯಿತು ಸಾಕು, ಅಷ್ಟೇ ಚಿಂತೆ-ವಿಕಲ್ಪ ಹುಟ್ಟಿತು ಹಾಗೂ ಸಂಸಾರ ಹಿಗ್ಗಿತು, ಸರ್ವಾರ್ಥಸಿದ್ಧಿಯಿಂದ ಬಂದು ನಿಶ್ಚಿತವಾಗಿಯೂ ಒಂದೇ ಭವದಲ್ಲಿ ಮೋಕ್ಷಕ್ಕೆ ಹೋಗುವರು.

'ಆತ್ಮ ಮತ್ತು ಶರೀರಗಳ ಭೇಧ ವಿಜ್ಞಾನವನ್ನು ತಿಳಿದು ಮಾಡುವ ತಪವು ಸಾರ್ಥಕವಾಗುತ್ತದೆ ಹಾಗೂ ಮೋಕ್ಷ ಪಡೆಯಲು ಸಹಾಯಕವಾಗುತ್ತದೆ. ಶರೀರ ಮತ್ತು ಆತ್ಮನ ಭೇದ ವಿಜ್ಞಾನವನ್ನು ತಿಳಿಯದವರು ಮಾಡುವ ತಪ ನಿಷ್ಫಲವಾಗಿದೆ ಹಾಗೂ ಈ ಭೇದವಿಜ್ಞಾನದಿಂದ ಶೂನ್ಯನಾದ ವ್ಯಕ್ತಿಯ ತಪ ಮೋಕ್ಷದ ಸಾಧನವೂ ಆಗುವುದಿಲ್ಲ. ಆಚಾರ್ಯರು-ತ್ರಿಗುಪ್ತಿಯ ಅಭಾವದಲ್ಲಿ ಪರಿಗ್ರಹ ತ್ಯಾಗ, ಪುಣ್ಯ ಪ್ರಾಪ್ತಿಗೆ ಕಾರಣವಾಗಿದೆ. ತ್ರಿಗುಪ್ತಿಗಳಿರುವಲ್ಲಿ ಕರ್ಮ ನಿರ್ಜರೆ ಇದೆ ಎಂದು ಹೇಳಿದ್ದಾರೆ. ಸ್ವರೂಪಾಚರಣೆ ಏನಿದೆ? ಕರ್ಮಗಳ ಸಾಂಪ್ರಾದಾಯಿಕ ಆಸ್ರವ ನಿಂತಿರುವಾಗ, ಅಲ್ಲಿಯೇ ಸ್ವರೂಪಾಚರಣೆ ಪ್ರಾರಂಭವಾಯಿತು-ಎಂದು ಆಚಾರ್ಯರು ಹೇಳುತ್ತಾರೆ. ದ್ವಾದಶ ತಪಪೂರ್ವಕ 10ನೇ ಗುಣಸ್ಥಾನದ ನಂತರ ಪ್ರಕಟವಾಗುವ ದರ್ಶನ ಜ್ಞಾನ-ಚಾರಿತ್ರಕ್ಕೆ ಸ್ವರೂಪಾಚರಣೆಯೆಂದು ಹೇಳಿದ್ದಾರೆ.

ಮಾನವನ ಇಚ್ಛೆಗಳು ಧ್ಯಾನ ಇತ್ಯಾದಿ ರೂಪದ ತಪದಲ್ಲಿ ಬಾಧಕವೆಂದು ಭಾವಿಸಲಾಗಿದೆ ಹಾಗೂ ಸಂಸಾರದಲ್ಲಿ ಇಚ್ಛೆಗಳಿಗೆ ಯಾವ ಕೊನೆಯೂ ಇಲ್ಲವೆನ್ನುವುದು ಸಹ ಸತ್ಯವಾಗಿದೆ. ತಪ ಈ ಇಚ್ಛೆಗಳ ಮೇಲೆ ನಿಯಂತ್ರಣ ಮಾಡುವಲ್ಲಿ ಸಹಾಯಕವಾಗಿವೆ. ನಿಯಂತ್ರಣವಿಲ್ಲದ ಜೀವನ ಬ್ರೇಕ್ ಇಲ್ಲದ ಗಾಡಿಯಂತೆ ಭಯಾನಕವಾಗಿದೆ ಸ್ವಯಂಗಾಗಿಯಂತೂ ಭಯಂಕರವಾಗಿಯೇ ಇರುತ್ತದೆ. ಇತರರನ್ನು ಸಹ ಈ ವಿಕಲ್ಪ ಸಂಕಟದಲ್ಲಿ ಹಾಕಬಹುದು ದು:ಖ ನೀಡಬಹುದು, ಕಷ್ಟಗಳನ್ನು ಕೊಡಬಹುದು. ಆದ್ದರಿಂದ ಆಚಾರ್ಯರು-**"ಇಚ್ಛಾಃ ನಿರೋಧೋ ತಪಃ"** ಎಂದು ಹೇಳಿದ್ದಾರೆ. ಇಂದ್ರಿಯಗಳನ್ನು ದಮನ ಮಾಡುವುದು ಹಾಗೂ ಇಚ್ಛೆಗಳನ್ನು ನಿರೋಧಿಸುವುದು ತಪವಾಗಿದೆ ಈ 12 ತಪಗಳಲ್ಲಿ ಇಚ್ಛೆಗಳ ನಿರೋಧ ಬಂದಿದೆಯೋ ಅಥವಾ ಇಲ್ಲವೋ? ಎಲ್ಲದರಲ್ಲಿಯೂ ಇಚ್ಛೆಗಳ ಮೇಲೆ ನಿಯಂತ್ರಣವಿದೆ.

**"ತಪಸಾ ನಿರ್ಜರಾ ಚ"** ಎಂದಿದ್ದಾರೆ. ಅರ್ಥಾತ್ ತಪದಿಂದ ನಿರ್ಜರೆ ಸಹ ಆಗುತ್ತದೆ ಹಾಗೂ ಕರ್ಮಗಳ ಸಂವರೆಯು ಆಗುತ್ತದೆ. ಅಶುಭ ಕರ್ಮಗಳ ಬರುವಿಕೆಯು ನಿಲ್ಲುತ್ತದೆ. ಇದು ಬಹಳ ದೊಡ್ಡ ಲಾಭವಿದೆ. ತಪವು ಮುನಿಗಳಿಗೆ ಹಾಗೂ ಶ್ರಾವಕರಿಗೆ ಇಬ್ಬರಿಗಾಗಿಯೂ ಇದೆ. ಮುನಿಗಳಿಗಾಗಿ ತಪದ ವಿಷಯದಲ್ಲಿ ಕಾರ್ತಿಕೇಯಾನು ಪ್ರೇಕ್ಷಾ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ-

**ಇಹ-ಪರ-ಲೋಯ ಸುಹಾಣಂ ಣಿರವೆಕ್ಖೋ ಜೋ ಕರೇದಿ ಸಮ-ಭಾವೋ।**
**ವಿವಿಹಂ ಕಾಯ, ಕಿಲೇಸಂ ತವ-ಧಮ್ಮೋ ಣಿಮ್ಮಲೋ ತಸ್ಸ॥400॥**

ಸಮಭಾವಿಯು ಈ ಲೋಕ ಮತ್ತು ಪರಲೋಕಗಳ ಸುಖದ ಅಪೇಕ್ಷೆಯನ್ನು ಮಾಡದೇ ಅನೇಕ ಪ್ರಕಾರದ ಕಾಯಕ್ಲೇಶ ಮಾಡುತ್ತಾನೆ. ಆತನದು ನಿರ್ಮಲ ತಪ ಧರ್ಮವಾಗುತ್ತದೆ. ತಪ ಧರ್ಮವನ್ನು ಪಡೆಯಲು ಮುನಿಯು ಶೀತ ಋತುವಿನಲ್ಲಿ ನದಿಯ ದಂಡೆ, ಗ್ರೀಷ್ಮ ಋತುವಿನಲ್ಲಿ

ಪರ್ವತದ ಶಿಖರ ಅಥವಾ ಬೆಟ್ಟದ ಮೇಲೆ, ಮಳೆಯ ಋತುವಿನಲ್ಲಿ ಮರದ ಕೆಳಗೆ ತಪ ಮಾಡುತ್ತಾರೆ. ಇದೇ ಪ್ರಕಾರ ಸದ್ಗೃಹಸ್ಥ ಹಾಗೂ ಶ್ರಾವಕರಿಗಾಗಿ ಪದ್ಮನಂದಿ ಪಂಚವಿಂಶತಿಕಾ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ.

**ಪರ್ವಸ್ವಥ ಯಥಾಶಕ್ತಿ ಭುಕ್ತಿ ತ್ಯಾಗಾದಿಕಂ ತಪ:।**
**ವಸ್ತ್ರ ಪೂತಂ ಪಿವೇತ್ತೋಯಂ ರಾತ್ರಿ ಭೋಜನ ವರ್ಜನಮ್ ॥421॥**

ಪರ್ವದ ದಿನಗಳಲ್ಲಿ ಶ್ರಾವಕರಿಗೆ ತಮ್ಮ ಶಕ್ತಿಗನುಗುಣವಾಗಿ ಭೋಜನದ ಪರಿತ್ಯಾಗ ಅದನ್ನು ಅನಶನವೆನ್ನುತ್ತಾರೆ. ಆ ತಪಗಳನ್ನು ಮಾಡಬೇಕು. ಇವುಗಳ ಜೊತೆಗೆ ಅವರು ರಾತ್ರಿ ಭೋಜನವನ್ನು ಬಿಟ್ಟು ಬಟ್ಟೆಯಿಂದ ಸೋಸಿದ ನೀರನ್ನು ಕುಡಿಯಬೇಕು. ತಪ ಧರ್ಮವು ನಿರ್ಮಲವಾಗಿದ್ದು ವಿಷಯದ ಆಕಾಂಕ್ಷೆಯನ್ನು ಮಾಡುವುದಿಲ್ಲ. ತಪದ ವಿಷಯದಲ್ಲಿ (ತಮಿಳಿನ) ಕುರಳ್ ಕಾವ್ಯದಲ್ಲಿ ಹೀಗೆ ಹೇಳಿದ್ದಾರೆ. ಅದರ ಹಿಂದಿ ರೂಪ ಹೀಗಿದೆ–

**ಸರ್ವೇಷಾಮೇವ ಜೀವಾನಾಂ ಹಿಂಸಾಯಾ ವಿರತಸ್ತಥಾ।**
**ಶಾಂತ್ಯಾ ಹಿ ಸರ್ವ ದು:ಖಾನಾಂ ಸಹನಂ ತಪ ಇಷ್ಯತೇ॥27/)**

ಎಲ್ಲ ಜೀವಗಳಲ್ಲಿ ಒಳ್ಳೆಯ ಕರುಣಾ ಭಾವ ಹೊಂದಿರುವುದು, ಹಿಂಸೆಯ ತ್ಯಾಗ ಮಾಡುವುದು ಹಾಗೂ ಶಾಂತಿಯೊಂದಿಗೆ ಎಲ್ಲ ದುಃಖಗಳನ್ನು ಸಹಿಸುವುದಕ್ಕೆ ತಪವೆಂದು ಹೇಳಿದ್ದಾರೆ. ಧರ್ಮ ಭಾವನಾ ಶತಕದಲ್ಲಿ ಹೀಗೆ ಹೇಳಿದ್ದಾರೆ–

**ತಪ ರೂಪ ಭಟ್ಟಿಯಲ್ಲಿ ಆತ್ಮರೂಪ ಚಿನ್ನ ಹಾಕಿದಾಗ।**
**ಧ್ಯಾನ ರೂಪ ಬೆಂಕಿ ಅದರ ಕರ್ಮ ಕಲ್ಮಶ ತೊಳೆದಾಗ॥**
**ಅಲ್ಲಿ ಇರದು ಕಲ್ಮಶವು, ಶುದ್ದಪೂರ್ಣ ಆಗುವುದು।**
**ಉತ್ತಮ ತಪ ಪ್ರಾಣಿಯು ತಪಿಸಿ ಜಗತ್ತಿಗೆ ಬಾರದು ॥67॥**

**ಹಾಲು ಕಾಸಿ ಅದರಲಿ, ಹೆಪ್ಪು ಹಾಕಿದಾಗ।**
**ಭಿನ್ನ-ಭಿನ್ನವಾಗಿ ಆಯಿತು ಮೊಸರು, ಆಗಲೇ ಅದನು ಕಡೆವರು॥**
**ಮೊಸರ ಕಡೆದಾಗ ಪಡೆವುದು ಬೆಣ್ಣೆಯ ಅವಸ್ಥೆ।**
**ಬೆಂಕಿಯಲಿ ಆ ಬೆಣ್ಣೆಯ ತಪಿಸಲು ಪಡೆವುದು ಶುದ್ಧ ಅವಸ್ಥೆ॥**
**ಹಾಗೆಯೇ ನೋಡು ಆ ಯೋಗಿಯನು ತಪದಿ ಪಡೆಯುವ ಭೇದ ಜ್ಞಾನವನು।**
**ವ್ಯವಹಾರದಿ ಹೋಗು ನಿಶ್ಚಯಕೆ, ಆಗುವೇ ಅರ್ಹಂತ-ಸಿದ್ಧನು ನೀನು ॥66॥**

ಚಿನ್ನವು ಬೆಂಕಿಯಿಂದ ಕಾಸಿದಾಗಲೂ ತನ್ನ ಚಿನ್ನತ್ವವನ್ನು ಬಿಡುವುದಿಲ್ಲ ಅಲ್ಲದೇ ಅದರಲ್ಲಿ ಇನ್ನೂ ಹೆಚ್ಚಿನ ನಿಖರತೆ ಬರುತ್ತದೆ. ಧರ್ಮಾತ್ಮರಿಗೆ ಧ್ಯಾನರೂಪದ ಬೆಂಕಿಯಲ್ಲಿ ಚಿನ್ನದಂತೆ ಶುದ್ಧರಾಗಲು ರಾಗ-ದ್ವೇಷ ಕಷಾಯಗಳು ಮತ್ತು ಪಾಪ ರೂಪದ ಕೆಟ್ಟ ಕಲ್ಮಶಗಳಿಂದ ಬೇರೆಯಾಗಿ ಆತ್ಮನನ್ನು ಪರಮಾತ್ಮನನ್ನಾಗಿ ಮಾಡಲು ಹಾಲಿನಿಂದ ತುಪ್ಪದ ವರೆಗಿನ ಯಾತ್ರೆಯಂತೆ ನಮ್ಮ ಜೀವನದಲ್ಲಿ ಪ್ರಕ್ರಿಯೆಗಳನ್ನು ಮಾಡಬೇಕಾಗುತ್ತದೆ.

ಹಾಲನ್ನು ಮೊದಲು ಒಲೆಯ ಮೇಲಿಟ್ಟು ಕಾಯಿಸಲಾಗುತ್ತದೆ ಮತ್ತು ಅದರಲ್ಲಿ ಜಾಮನ(ಹೆಪ್ಪು) ಹಾಕಲಾಗುತ್ತದೆ, ಆಗ ಅದು ಮೊಸರಾಗಿ ಬೇರೆ ಬೇರೆ ರೂಪ ತಾಳುತ್ತದೆ. ಗಟ್ಟಿ-ಗಟ್ಟಿಯಾಗಿ

ಕಾಣತೊಡಗುತ್ತದೆ. ಇದರ ನಂತರ ಅದನ್ನು ಎರಡು ಹಗ್ಗಗಳ ಕಡೆಗೋಲಿನಿಂದ ಕಡೆಯಲಾಗುತ್ತದೆ. ಆಗ ಅದರಲ್ಲಿ ಬೆಣ್ಣೆ ಬರುತ್ತದೆ ಹಾಗೂ ಆ ಬೆಣ್ಣೆಯನ್ನು ಸಹ ಒಲೆಯ ಮೇಲಿಟ್ಟು ಕಾಸುತ್ತಾರೆ. ಆಗ ಅದು ತುಪ್ಪವಾಗುತ್ತದೆ. ಇದು ಅದರ ಪರಮ ಶುದ್ಧ ಅವಸ್ಥೆಯಾಗಿರುತ್ತದೆ ಮತ್ತು ಆ ತುಪ್ಪ ಎಂದಿಗೂ ಹಿಂದಿರುಗಿ ಹಾಲು ಆಗುವುದಿಲ್ಲ. ಸಾಕು, ಇದೇ ಪ್ರಕಾರ ಆತ್ಮನನ್ನು ಮೊದಲು ತಪವೆಂಬ ಬೆಂಕಿಯಲ್ಲಿ ಕಾಯಿಸಿ ಅದರಲ್ಲಿ ತ್ಯಾಗವೆಂಬ ಜಾಮನವನ್ನು ಹಾಕಿದರೆ ಮತ್ತು ಶರೀರ ಹಾಗೂ ಆತ್ಮನನ್ನು ಭಿನ್ನ-ಭಿನ್ನವೆಂದು ತಿಳಿಯುವ ರೂಪ ಭೇದ-ವಿಜ್ಞಾನವನ್ನು ಪಡೆದು, ನಿಶ್ಚಯ-ವ್ಯವಹಾರ ರೂಪದ ಹಗ್ಗಗಳಿಂದ ಕೂಡಿದ ಮೊದಲ ಎರಡು ಶುಕ್ಲಧ್ಯಾನಿಗಳು-ಪೃಥಕ್ತ್ವ ವಿತರ್ಕ ವಿಚಾರ ಹಾಗೂ ಏಕತ್ವ ವಿತರ್ಕ ಅವಿಚಾರ ರೂಪದ ಕಡೆಗೋಲಿನಿಂದ ಕಡೆದರೆ ಬೆಣ್ಣೆಯಂತಹ ಅವಸ್ಥೆಯನ್ನು ಪಡೆಯಲಾಗುತ್ತದೆ. ಈ ಅವಸ್ಥೆಯಲ್ಲಿ ಪಾಪಕರ್ಮಗಳಂತೂ ನಷ್ಟವಾಗಿ ಬಿಡುತ್ತವೆ. ಆದರೆ ಪುಣ್ಯ ಕರ್ಮಗಳು ಉಳಿದು ಬಿಟ್ಟಿರುತ್ತವೆ. ಪರಮ ಶುದ್ಧರಾಗಲು ಅಂತಿಮ ಶುಕ್ಲಧ್ಯಾನಗಳಾದ ಸೂಕ್ಷ್ಮಕ್ರಿಯಾ ಪ್ರತಿಪಾತಿ ಮತ್ತು ವ್ಯುಪರತ ಕ್ರಿಯಾ ನಿವೃತ್ತಿ ರೂಪದ ಬೆಂಕಿಯಲ್ಲಿ ಆತ್ಮನನ್ನು ಕಾಯಿಸಿ ಅಘಾತಿ ಕರ್ಮಗಳನ್ನು ನಾಶ ಮಾಡಿ ತುಪ್ಪದಂತಹ ಪರಮ ಶುದ್ಧ ಅವಸ್ಥೆಯನ್ನು ಪಡೆದು ಸಂಸಾರೀ ಅವಸ್ಥೆಯಿಂದ ಮುಕ್ತಿ ಅಥವಾ ಮೋಕ್ಷ ಅವಸ್ಥೆಯನ್ನು ಪಡೆದು ಆ ಆತ್ಮನು 'ಸಿದ್ಧ'ನಾಗಿ ಬಿಡುತ್ತಾನೆ. ಇದು ತಪದ ಮಹಿಮೆಯಾಗಿದೆ. ಧರ್ಮ ಭಾವನಾ ಶತಕದಲ್ಲಿ ಹೀಗೆ ಬರೆಯಲಾಗಿದೆ.

**ಕರ್ಮಕ್ಷಯ ಮಾಡಲು ಯೋಗಿ, ಜೀವನದಿ ತರುವರು ತಪವ**
**ದರ್ಶನ ಜ್ಞಾನ ನಿರ್ಮಲ ಮಾಡಿ, ತಪದಿಂ ಪಡೆವರು ಉತ್ತಮ ಸುಖವ**
**ಇಡದಿರೆ ಭವಸುಖದಾಶೆಯನು, ಇರದಿರೆ ಪದದ ಇಚ್ಛೆಯುಜಗವು ಪ್ರಶಂಸಿಪ ತಪದಿ,**
**ಬೇಗನೆ ಸಿಗುವುದು ಶಿವಸುಖವು ॥59॥**

# ಉತ್ತಮ ತ್ಯಾಗ ಧರ್ಮ
## ರಾಗ ದಿಂದ ದುಃಖ; ತ್ಯಾಗದಲ್ಲಿ ಸುಖ

### ಮಂಗಲಾಚರಣೆ

**ಜಿಸನೇ ರಾಗ-ದ್ವೇಷ ಕಾಮಾದಿಕ, ಜೀತೇ ಸಬ ಜಗ ಜಾನ ಲಿಯಾ।**
**ಸಬ ಜೀವೊಂಕೋ ಮೋಕ್ಷ ಮಾರ್ಗಕಾ, ನಿಸ್ಪೃಹ ಹೋ ಉಪದೇಶ ದಿಯಾ॥**
**ಬುದ್ಧ ವೀರ ಜಿನ ಹರಿ ಹರ ಬ್ರಹ್ಮಾ, ಯಾ ಉಸಕೊ ಸ್ವಾಧೀನ ಕಹೋ।**
**ಭಕ್ತಿ ಭಾವ ಸೇ ಪ್ರೇರಿತ ಹೋ ಯಹ, ಚಿತ್ತ ಉಸೀ ಮೇ ಲೀನ ರಹೋ॥**

ಸದ್ಧರ್ಮ ಬಂಧುಗಳೇ,

ಪರ್ವರಾಜ ಪರ್ಯೂಷಣ ಪರ್ವದ ಪಾವನ ಸಮಯದಲ್ಲಿ ಇಲ್ಲಿಯವರೆಗೆ ಆತ್ಮನನ್ನು ಪರಮಾತ್ಮನನ್ನಾಗಿ ಮಾಡುವ ಉದ್ದೇಶದಿಂದ, ಸುಖ ಮತ್ತು ಶಾಂತಿಯನ್ನು ಪಡೆಯುವ ಉದ್ದೇಶದಿಂದ ಧರ್ಮದ ಹತ್ತು ಲಕ್ಷಣಗಳಲ್ಲಿ ಕ್ಷಮೆಯಿಂದ ಉತ್ತಮ ತಪದವರೆಗೆನ ಮೆಟ್ಟಿಲುಗಳನ್ನು ಕ್ರಮ ಕ್ರಮವಾಗಿ ಏರಿದೆವು. ನಾಲ್ಕೂ ಕಷಾಯಗಳನ್ನು ಶಮನ ಮಾಡಿದ ನಂತರ ಸತ್ಯದ ಪ್ರಕಾಶ ಜೀವನದಲ್ಲಿ ಬರುತ್ತದೆ. ಸತ್ಯದ ಪ್ರಭಾವದಿಂದ ಸಂಯಮವು ದೊರೆಯುತ್ತದೆ. ಇಚ್ಛೆಗಳ ನಿರೋಧಕ್ಕಾಗಿ ತಪವನ್ನು ಮಾಡಲಾಗುತ್ತದೆ. ತಪದ ಭಾವನೆಯಿಂದಲೇ ತ್ಯಾಗ ಧರ್ಮದ ಜಾಗೃತಿಯಾಗುತ್ತದೆ. ತ್ಯಾಗದ ಬಲದಿಂದ ಅದ್ಭುತ ಶಕ್ತಿ ಉತ್ಪನ್ನವಾಗುತ್ತದೆ. ನಮ್ಮ ಆತ್ಮನ ಧ್ಯಾನ ಮಾಡುವುದು ಸಹಜವಾಗಿ ಬಿಡುತ್ತದೆ. ಯಾವುದೇ ವಿಕಲ್ಪವಿಲ್ಲದೇ, ಯಾವುದೇ ಚಿಂತೆ ಇಲ್ಲದೇ ಸುಲಭ ರೂಪದಿಂದ ನಮ್ಮ ಆತ್ಮನ ಧ್ಯಾನವನ್ನು ಮಾಡಬಹುದಾಗಿದೆ. ಆತ್ಮನ ಧ್ಯಾನದಲ್ಲಿ ಪರಿಗ್ರಹವು ಬಾಧಕವಾಗಿರುತ್ತದೆ. ಸಾಂಸಾರಿಕ ವಸ್ತುಗಳಿಂದ ಮುಕ್ತರಾಗುವುದು ಅಥವಾ ಪರ ಪದಾರ್ಥಗಳ ಮೋಹ ಬಿಡುವುದು ತ್ಯಾಗ ಧರ್ಮವಾಗಿದೆ. ಆದ್ದರಿಂದ ಸಾಧುಗಳು ಪರಿಗ್ರಹಗಳಿಂದ ಮುಕ್ತರಾಗಿರುತ್ತಾರೆ, ಅವರು ಚಿಂತೆಗಳು, ವಿಕಲ್ಪಗಳಿಂದ ದೂರವಾಗಲು ಬಯಸುತ್ತಾರೆ. ರಾಜವಾರ್ತಿಕದಲ್ಲಿ ಆಚಾರ್ಯ ಅಕಲಂಕ ದೇವರು ಹೀಗೆ ಹೇಳುತ್ತಾರೆ-

**ಪರಿಗ್ರಹಸ್ಯ ಚೇತನಾ ಚೇತನ ಲಕ್ಷಣಸ್ಯ ನಿವೃತ್ತಿಸ್ತ್ಯಾಗ ಇತಿ ನಿಶ್ಚೀಯತೇ।(9/6)**

ಚೇತನ-ಅಚೇತನ ರೂಪದಲ್ಲಿರುವ ಪರಿಗ್ರಹವನ್ನು ತ್ಯಾಗ ಮಾಡುವುದೇ ಉತ್ತಮ ತ್ಯಾಗ ಧರ್ಮವಾಗಿದೆ. ಚೇತನ-ಅಚೇತನ ಎಲ್ಲ ಪ್ರಕಾರದ ಪರಿಗ್ರಹಗಳ ತ್ಯಾಗ ಮಾಡಿ ಅವರು ತಮ್ಮ ಆತ್ಮನ ಕಡೆಗೆ ಬಂದು ಬಿಡುತ್ತಾರೆ. ಪಾಪ ಮತ್ತು ಸಂಸಾರವನ್ನು ಹೆಚ್ಚಿಸುವ ಸಮಸ್ತ ವಸ್ತುಗಳನ್ನು ಬಿಟ್ಟ ನಂತರ ಸಹ ಸಾಧು ಜನರು ಅನ್ಯ ಸಂಯಮ ಜನರಿಗೆ ನೀಡಲು ಜ್ಞಾನ ಇತ್ಯಾದಿಗಳ ದಾನವು ಅವರ ತ್ಯಾಗ ಧರ್ಮವಾಗಿದೆ ಪಡೆಯದಿರುವ ಭೋಗಗಳ ಇಚ್ಛೆ ಮಾಡದಿರುವುದು ಹಾಗೂ ಪಡೆದ ಭೋಗಗಳಿಂದ ವಿಮುಖನಾಗುವುದು ತ್ಯಾಗವಾಗಿದೆ. ತಾವು ಪರಿಗ್ರಹಗಳೊಂದಿಗೆ

ಹೆಚ್ಚಿನ ಸಂಬಂಧವಿಡುತ್ತೀರಿ ಹಾಗೂ ಕಣ್ಣುಮುಚ್ಚಿಯು ಕುಳಿತು ಬಿಡುತ್ತೀರಿ ಹಾಗಾದಾಗ ಮನಸ್ಸು ಆತ್ಮ ಧ್ಯಾನದಲ್ಲಿ ಇರಲಾರದು, ಮನಸ್ಸು ನಿಯಮದಿಂದ ಹೊರಗಡೆಗೆ ಓಡುತ್ತದೆ ಹಾಗೂ ನಿಮಗೆ ಶಾಂತಿಯ ಅನುಭವ ಆಗುವುದಿಲ್ಲ. ಶಾಂತಿಯ ಅನುಭವವನ್ನು ಮಾಡಬೇಕಾದರೆ ತ್ಯಾಗ ಧರ್ಮದೊಂದಿಗೆ ಇರಬೇಕಾಗುತ್ತದೆ. ತ್ಯಾಗದಿಂದ ಶಾಂತಿ ಇದೆ. **"ಜ್ಞಾನಾತ್– ತ್ಯಾಗ:, ತ್ಯಾಗಾತ್ ಶಾಂತಃ"** ಅರ್ಥಾತ್ ಜ್ಞಾನ ಪೂರ್ವಕವಾಗಿ ಮಾಡಿದ ತ್ಯಾಗವೇ ತ್ಯಾಗವೆಂದು ಕರೆಯಲ್ಪಡುತ್ತದೆ. ಅದೇ ತ್ಯಾಗದಿಂದ ಶಾಂತಿ ದೊರೆಯುತ್ತದೆ. ತ್ಯಾಗದಿಂದ ಅವಗುಣ ಸಮೂಹವು ಸೋತು ಹೋಗುತ್ತದೆ, ನಿರ್ಮಲ ಕೀರ್ತಿಯು ವೃದ್ಧಿಯಾಗುತ್ತದೆ. ತ್ಯಾಗದಿಂದ ಶತ್ರುವು ಸಹ ಚರಣಗಳಲ್ಲಿ ನಮಸ್ಕಾರ ಮಾಡುತ್ತಾನೆ. ತ್ಯಾಗದಿಂದ ದುಷ್ಟ ವಿಕಲ್ಪಗಳು ನಾಶವಾಗುತ್ತವೆ ಹಾಗೂ ರಾಗದಲ್ಲಿ ದುಃಖವಿದೆ, ರಾಗವು ಸಂಸಾರಕ್ಕೆ ಕಾರಣವಾಗಿದೆ ಹಾಗೂ ತ್ಯಾಗವು ಮೋಕ್ಷಕ್ಕೆ ಕಾರಣವಾಗಿದೆ. ತ್ಯಾಗಶೀಲ ವ್ಯಕ್ತಿಯು ಇದ್ದರೆ ಆತನು ಮೋಕ್ಷ ಮಾರ್ಗಿ ಎಂದು ಕರೆಯಲಾಗುತ್ತದೆ. ಆಚಾರ್ಯ ಕುಂದ ಕುಂದ ಸ್ವಾಮಿಗಳು–ರಾಗವು ತ್ಯಾಗದಿಂದ ವಿಪರೀತವಾಗಿದೆ ಹಾಗೂ ಅದು ಕರ್ಮಬಂಧದ ಕಾರಣವಾಗಿದೆ–ಎಂದು ಹೇಳಿದ್ದಾರೆ. ಆಚಾರ್ಯರು **'ಪುಣ್ಯ–ಪಾಪ'** ಅಧಿಕಾರದಲ್ಲಿ ಸಮಯಸಾರ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ–

**ರತ್ತೋ ಬಂಧದಿ ಕಮ್ಮಂ ಮುಂಚದಿ ಜೀವೋ ವಿರಾಗ ಸಂಪಣ್ಣೋ।**
**ಏಸೋ ಜಣೋವದೇಸೋ ತಮ್ಹಾ ಕಮ್ಮೆಸು ಮಾ ರಜ್ಜ ॥150॥**

ಇದರ ಚಿಂತನೆಯನ್ನು ನಾವು ಮೇಲಿಂದ–ಮೇಲೆ ಮಾಡುತ್ತೇವೆ ಹಾಗೂ ಪ್ರತಿ ಕ್ಷಣವು–ರಾಗ ಮಾಡುವವರು ರಾಗಿಗಳಾಗಿದ್ದಾರೆ, ರಾಗಿಯು ಕರ್ಮಗಳನ್ನು ಬಂದಿಸಿಕೊಳ್ಳುತ್ತಾನೆ ಮತ್ತು ವಿರಾಗಿಯು ಕರ್ಮಗಳಿಂದ ಮುಕ್ತನಾಗುತ್ತಾನೆ ಇದು ಜಿನೇಂದ್ರ ಭಗವಂತರ ಉಪದೇಶವೆಂದು–ಚಿಂತಿಸಬೇಕು. ಪಂಚೇಂದ್ರಿಯಗಳ ವಿಷಯದಲ್ಲಿ ಪರಿಗ್ರಹಗಳಲ್ಲಿ ರಾಗದಿಂದ ಮುಕ್ತರಾಗಿರಿ ಇದೇ ಭಗವಂತರ ಉಪದೇಶವಾಗಿದೆ. ಹೀಗೆ ನಾವು ಮೆಲ್ಲ–ಮೆಲ್ಲನೆ ನಮ್ಮ ಆತ್ಮನ ಕಡೆಗೆ ಸಾಗಿದಾಗ ನಿಯಮದಿಂದ ಶಾಂತಿ ಮತ್ತು ಸುಖವನ್ನು ಪಡೆಯುತ್ತೇವೆ.

ವಾಸ್ತವಿಕವಾಗಿ ತ್ಯಾಗವು ಯಾವಾಗ ಪ್ರಾರಂಭವಾಗುತ್ತದೆ. ನಮ್ಮೊಳಗೆ ನಿರ್ವೇಗ ಭಾವನೆ ಬರಬೇಕು. ಸಂಸಾರದ ವಿಷಯಗಳಿಂದ ಅರುಚಿ ಭಾವ ಹುಟ್ಟಬೇಕು. ಹೊರಗಡೆ ರುಚಿ ಇದ್ದರೆ ಒಳಗಡೆ ರುಚಿ ಇರುವುದಿಲ್ಲ ಅಂತರಂಗದಲ್ಲಿ ರುಚಿ ಹೆಚ್ಚಾದರೆ ಹೊರಗಿನ ರುಚಿ ತಗ್ಗುವುದು ಆದ್ದರಿಂದ ನಾವು ಅಂತರಂಗದೊಂದಿಗೆ ಸಂಬಂಧ ಹೊಂದಲು ಅಂತರಂಗದೊಂದಿಗೆ ರುಚಿಯನ್ನು ಹೊರಗಿನಿಂದ ಸಂಬಂಧವನ್ನು ಮುರಿಯುತ್ತೇವೆ. ಕೂಡಲೇ ಸಂಬಂಧ ಮುರಿಯುವುದಿಲ್ಲ, ಸಮಯ ಬೇಕಾಗುತ್ತದೆ, ಆದರೆ ಮೆಲ್ಲ–ಮೆಲ್ಲನೆ ಪ್ರಯತ್ನ ಮಾಡುತ್ತಾ ಸಫಲತೆಯನ್ನು ಪಡೆಯ ಬಹುದಾಗಿದೆ. ಯಾಕೆಂದರೆ ನಾವೇ ಜೋಡಿಸಿದ್ದೇವೆ, ನಾವೇ ಮುರಿಯೋಣ ಹಾಗಾದರೆ ಸುಖಿಯಾಗಿರುತ್ತೇವೆ, ಅದೇ ಮುರಿದರೆ ದುಃಖವಾಗುತ್ತದೆ. ಸ್ವಯಂ ಯಾವುದೇ ವಸ್ತುವನ್ನು ತ್ಯಾಗ ಮಾಡಿದರೆ ಆನಂದವಾಗುತ್ತದೆ ಹಾಗೂ ಯಾವುದಾದರೂ ವಸ್ತು ಕಳ್ಳತನದಿಂದ ಹೋದರೆ ಅಥವಾ ಬಿಟ್ಟು ಹೋದರೆ ದುಃಖ ವಾಗುತ್ತದೆ ಅಲ್ಲವೆ? ನಾವು ಸಂಬಂಧವನ್ನು ಬಿಟ್ಟಿರಲಿಲ್ಲ. ಅದು ಅನಾಯಾಸವಾಗಿ ಬಿಟ್ಟು ಹೋದರೆ ದುಃಖವಾಗುತ್ತದೆ ಹಾಗೂ ನಾವು ತ್ಯಾಗ ಮಾಡಿದ್ದರೆ ಪ್ರಸನ್ನತೆ. ಆನಂದ ವಾಗುತ್ತಿದ್ದಿತು. ಆದ್ದರಿಂದ ನಾವು ಸ್ವತಃ ಸುಖಿ ಮತ್ತು ದುಃಖಿಯಾಗುತ್ತೇವೆ.

ಇದು ಕೇವಲ ನಮ್ಮ ಭಾವಗಳ ಆಟವಾಗಿದೆ. ನಾವು ಭಾವ ಮಾಡಿದ ಹಾಗೇ ಸುಖ ಮತ್ತು ದುಃಖ ಪಡೆಯುತ್ತೇವೆ. ಸುಖ ದುಃಖಗಳು ಹೊರಗಿನಿಂದ ಬರುವುದಿಲ್ಲ, ನಮ್ಮ ಭಾವಗಳಿಂದಲೇ ನಮ್ಮ ಜೀವನವನ್ನು ಸುಖ ದುಃಖ ರೂಪವನ್ನಾಗಿ ಮಡಿಕೊಳ್ಳುತ್ತೇವೆ ಬಾರಸ ಅಣುವೆಕ್ಖಾ ಗ್ರಂಥದಲ್ಲಿ ಆಚಾರ್ಯ ಕುಂದ ಕುಂದ ಸ್ವಾಮಿಗಳು ತ್ಯಾಗ ಧರ್ಮಕ್ಕೆ ಸಂಬಂಧಿಸಿದಂತೆ ಹೀಗೆ ಹೇಳಿದ್ದಾರೆ–

**ಣಿವ್ವೇಗತಿಯಂ ಭಾವಇ, ಮೋಹ ಚಇಊಣ ಸವ್ವದವ್ವೇಸು।**
**ಜೋ ತಸ್ಸ ಹವೇ ಚಾಗೋ, ಇದಿ ಭಣಿದಂ ಜಿಣವರಿಂದೇಹಿಂ॥78॥**

ಸಂಪೂರ್ಣ ಪರ ದ್ರವ್ಯಗಳಲ್ಲಿ ಮೋಹದ ತ್ಯಾಗ ಮಾಡಿ, ಮೂರು ಪ್ರಕಾರದ ನಿರ್ವೇಗ–ಸಂಸಾರ–ಶರೀರ ಹಾಗೂ ಭೋಗಗಳಿಂದ ನಿರ್ವಿಣ್ಣ–ವೈರಾಗಿಯಾಗಿ ಆ ಸಂಸಾರದ ವಿಷಯಗಳ ಬಗ್ಗೆ ಉದಾಸೀನನಾಗುವ ಮುನಿ, ಆ ರೂಪ ಭಾವನೆಯನ್ನು ಹೊಂದುತ್ತಾನೆ, ಆ ಮುನಿಯ, ಆ ಯೋಗಿಯ ತ್ಯಾಗ ಧರ್ಮವಾಗುತ್ತದೆಂದು ಜಿನೇಂದ್ರ ಭಗವಂತರು ಹೇಳಿದ್ದಾರೆ. ವಾಸ್ತವಿಕವಾಗಿ ಸಾಧುಗಳಾಗಿರುವವರು ತಮ್ಮ ಜೀವನದಲ್ಲಿ ಉತ್ತಮ ತ್ಯಾಗವನ್ನು ಪಡೆಯಲು ಸಂಪೂರ್ಣ ಪರದ್ರವ್ಯಗಳಿಂದ ಮೋಹವನ್ನು ಬಿಟ್ಟು ಸಂಸಾರ ಶರೀರ ಹಾಗೂ ಭೋಗಗಳಿಂದ ವಿರಕ್ತರಾಗುತ್ತಾರೆ. ಸಂಸಾರದೊಂದಿಗೆ ಮೋಹ ಮಾಡುತ್ತಾ–ಮಾಡುತ್ತಾ ನಾವು ನಮ್ಮ ಧರ್ಮವನ್ನು ಮರೆಯುತ್ತಾ ಬಂದಿದ್ದೇವೆ. ನಾವು ನಮ್ಮ ಮೋಹವನ್ನು ದೂರಮಾಡಿದಾಗ ನಮ್ಮ ಧರ್ಮದ ಪ್ರಾಪ್ತಿಯಾಗುತ್ತದೆ. ಯಾಕೆಂದರೆ ತ್ಯಾಗದಲ್ಲಿ ಮೋಹಿ ಪರಿಜನರು ಜನರು ಯಾವಾಗಲೂ ಬಾಧಕರಾಗುತ್ತಾರೆ, ಅವರಿಗೆ ಮೋಹವಿರುತ್ತದೆ, ಒಂದಲ್ಲ ಒಂದು ಸ್ವಾರ್ಥವಿರುತ್ತದೆ. ಆದ್ದರಿಂದ ಅವರು ಯಾವಾಗಲೂ ತಡೆಯುತ್ತಿರುತ್ತಾರೆ–'ಇಂತಹ ತ್ಯಾಗ ಮಾಡಬೇಡ', ಇದು ಬಹಳ ಹೆಚ್ಚಾಗುತ್ತದೆ. ಇದನ್ನು ಮಾಡಬೇಡ ಇದಕ್ಕಿಂತ ಹೆಚ್ಚು ಮತ್ತೆ ಮಾಡಿಕೊಳ್ಳಬೇಡ ಇತ್ಯಾದಿ. ಇದೇ ಪ್ರಕಾರ ಶರೀರದಿಂದಲೂ ಸಹ ಮೋಹ ಬಿಡಬೇಕಾಗುತ್ತದೆ; ಶರೀರಕ್ಕೆ ಎಷ್ಟೇ ಸ್ನಾನ ಮಾಡಿಸಿ, ತೊಳೆಯಿರಿ, ಅಲಂಕರಿಸಿ ಆದರೂ ಸಹ ಅದು ತನ್ನ ಸ್ವಭಾವವನ್ನು ಬಿಡುವುದಿಲ್ಲ, ಅದರಿಂದಂತೂ ಅನೇಕ ಪ್ರಕಾರದ ಗಲೀಜು ಪದಾರ್ಥಗಳು ಹೊರಬರುತ್ತಲಿರುತ್ತವೆ, ಇದರಿಂದಲೂ ಸಹ ಮೋಹ ಬಿಡಬೇಕು. ಅಂದರೆ ಕೆಲವು ಸಮಯಕ್ಕಾಗಿ ತಾವು ಮೋಹ ಬಿಡುತ್ತಿರಾ ಆಗ ಧ್ಯಾನದಲ್ಲಿ ಇಳಿಯಬಲ್ಲಿರಿ, ಧ್ಯಾನವಂತೂ ಆತ್ಮನದಾಗುತ್ತದೆ, ಪರ ಪದಾರ್ಥಗಳಲ್ಲಿ ಒಂದು ವೇಳೆ ಪರಪದಾರ್ಥಗಳ ಧ್ಯಾನವನ್ನು ಯಾವುದೋ ರಾಗಪೂರ್ವಕ ಮಾಡುತ್ತಿದ್ದರೆ ಅದೆಲ್ಲವೂ ದುರ್ಧ್ಯಾನದೊಳಗೆ ಬರುತ್ತದೆ. ನಮ್ಮ ಆತ್ಮನಲ್ಲಿ ಇಳಿಯಲು ಪರಪದಾರ್ಥಗಳೊಂದಿಗೆ ಅರುಚಿ ಮಾಡುವುದು ಅವಶ್ಯವಾಗಿದೆ. ಅದು ಯಾವ ಪ್ರಕಾರದಿಂದಾಗುತ್ತದೆ: ಇದಕ್ಕಾಗಿ ನಮಗೆ ಅದರ ಸ್ವರೂವನ್ನು ತಿಳಿಯಬೇಕಾಗುತ್ತದೆ.

ಸಂಸಾರದ ಸ್ವರೂಪ ಹೇಗಿದೆ? ಹಾಗಾದರೆ ಸಹೋದರರೇ ತಿಳಿದುಕೊಳ್ಳಿ, ಸಂಸಾರ ಸ್ವಾರ್ಥಿಯಾಗಿದೆ ಶರೀರದ ಸ್ವರೂಪ ಹೇಗಿದೆ? ಇದನ್ನು ಎಷ್ಟೇ ಚೆನ್ನಾಗಿಟ್ಟರೂ, ವ್ಯವಸ್ಥಿತಗೊಳಿಸಿದರೂ ಸಹ ತನ್ನ ಸ್ವಭಾವವನ್ನು ಬಿಡುವುದಿಲ್ಲ. ಈ ಶರೀರವು ದುರ್ಗಂಧ, ಅಸಹ್ಯ, ಕೊಳಕು ಮಲದಿಂದ ತುಂಬಿದೆ, ಅಚೇತನ, ಮೂರ್ತಿಕವಾಗಿದೆ ಹಾಗೂ ಇದರ ಸ್ವಭಾವ ಕೊಳೆಯುವುದು, ಕರಗುವುದು, ಬಿಳುವುದು, ಸೇರುವುದು, ಬೇರಯಾಗುವುದು ಆಗಿದೆ. ಚರ್ಮಮಯ ಅನಿತ್ಯ ನಾಶವಾನವಾಗಿದೆ. ಈ ಶರೀರವು ಅಸ್ಥಿರ ಸ್ವಭಾವವುಳ್ಳದ್ದಾಗಿದೆ. ಇದರ ಸ್ವರೂಪವನ್ನು ತಿಳಿದು ಜ್ಞಾನಿ ಜನರು ಇದರಿಂದ ಆಸಕ್ತಿಯನ್ನು ದೂರ ಮಾಡಬೇಕು. ಯಾಕೆಂದರೆ ಇದು ಸ್ವಭಾವದಿಂದಲೇ ದುಃಖ

ಹಾಗೂ ದೋಷಮಯವಾಗಿದೆ ಹಾಗೂ ಮೋಕ್ಷ ಸುಖದಲ್ಲಿ ಬಾಧಕವಿದೆ. ಶರೀರದೊಂದಿಗೆ ರಾಗ ಭಾವ ಹೊಂದಿ ಯಾರೂ ಸಹ ನಿಜವಾದ ಸುಖವನ್ನು ಪಡೆಯಲಾರರು. ಇದೇ ಪ್ರಕಾರ ಭೋಗ ಹೇಗಿದೆ? ಭೋಗವು ಸಹ ನಶ್ವರವಾಗಿದೆ ಅದು ಎಂದಿಗೂ ಶಾಶ್ವತವಾಗಿರುವಂತಹದಲ್ಲ. ಒಂದು ದಿನ ಅದರಲ್ಲಿಯೂ ಪರವರ್ತನೆ ಆಗುತ್ತದೆ. ಇವೆಲ್ಲವುಗಳಿಂದ ನಾವು ವಿರಾಮ ಪಡೆದು ನಮ್ಮ ಆತ್ಮನ ಕಡೆಗೆ ಬಂದು ಬಿಡುತ್ತೇವೆ, ಆಗ ಮನಸ್ಸು ಹೊರಗೆ ಹೋಗುವುದಿಲ್ಲ. ಸಾಕು ಇದೇ ಧ್ಯಾನವಾಗಿದೆ ಹಾಗೂ ಧ್ಯಾನ ಮಾಡಲು ಹೊರಗಿನಿಂದ ಸಂಬಂಧ ಮುರಿದು ಅಂತರಂಗದ ಕಡೆಗೆ ಇಣುಕ ಬೇಕಾಗುತ್ತದೆ.

ಈ ಲೋಕದಲ್ಲಿ ಅದೆಷ್ಟು ಪರಪದಾರ್ಥಗಳು ನಮ್ಮ ಸಂಯೋಗಕ್ಕೆ ಬರುತ್ತವೆಯೋ ಅವೆಲ್ಲವು ಒಂದಲ್ಲ ಒಂದು ದಿನ ವಿಯೋಗವನ್ನು ಹೊಂದುತ್ತವೆ ಹಾಗೂ ತ್ಯಾಗ ಮಾಡದಿದ್ದರೂ ಸಹ ಆ ಪದಾರ್ಥಗಳು ನಮ್ಮನ್ನು ಬಿಟ್ಟು ಹೋಗುತ್ತವೆ. ಆಗ ಮಾನವನಿಗೆ ಅತಿ ದುಃಖದ ಅನುಭವವಾಗುತ್ತದೆ ಆದರೆ ಅವೇ ಪದಾರ್ಥಗಳನ್ನು ಬುದ್ಧಿಪೂರ್ವಕವಾಗಿ ಉತ್ಸಾಹದೊಂದಿಗೆ ಬಿಡಬಹುದಾಗಿದೆ. ಆಗ ಬಹಳ ಆನಂದದ ಅನುಭವವಾಗುತ್ತದೆ ಹಾಗೂ ಇದೇ ರೀತಿಯ ತ್ಯಾಗ ಮೋಕ್ಷ ಮಾರ್ಗದ ಬಹುದೊಡ್ಡ ಕಾರ್ಯಕಾರಿ ಎಂದು ಭಾವಿಸಲಾಗಿದೆ. ತ್ಯಾಗ ಮಾಡುವ ವಸ್ತುವು ಸಂಯೋಗದಿಂದ ಪಡೆದ ಪರವಸ್ತುಗಳದೇ ಮಾಡಲಾಗುತ್ತದೆ. ಎಂಬುದನ್ನು ಗಮನದಲ್ಲಿಡಬೇಕಾದ ಸಂಗತಿಯಾಗಿದೆ ನಮ್ಮ ಆತ್ಮನ ಹೊರ್ತಾಗಿ ಎಷ್ಟೋ ಶರೀರ, ಮನೆ, ಪರಿಜನ ಮುಂತಾದವು ಕಾಣುತ್ತವೆ. ಅವೆಲ್ಲವೂ ಪರಪದಾರ್ಥಗಳಾಗಿವೆ ಹಾಗೂ ನಮ್ಮ ಆತ್ಮನ ಜ್ಞಾನ-ದರ್ಶನ ಮುಂತಾದ ಗುಣಗಳ ನಾಶ ಅಥವಾ ಅಭಾವ ಆಗುವುದಿಲ್ಲ ಆದರೆ ಪರವಸ್ತುಗಳ ತ್ಯಾಗದಿಂದ ಆತ್ಮನ ಗುಣ ದೊಡ್ಡ ವಿಶುದ್ಧ ಅವಸ್ಥೆಯನ್ನು ಪಡೆದುಕೊಳ್ಳುತ್ತದೆ. ಧರ್ಮ ಭಾವನಾ ಶತಕದಲ್ಲಿ ಹೀಗೆ ಬರೆದಿದ್ದಾರೆ-

**ಪರ ಪದಾರ್ಥಗಳೆಷ್ಟೇ ಇರಲಿ, ಅವೆಲ್ಲವು ನಮ್ಮನ್ನಗಲುವವು।**
**ಯಾಕೆಂದರೆ ಅವೆಲ್ಲ ಸಂಯೋಗಿಗಳು, ಆದ್ದರಿಂದಲೇ ವಿಯೋಗವು॥**
**ಈ ಪರಿ ಸಂಯೋಗಗಳ ತ್ಯಾಗದಿ, ಇರುವುದು ಪರಗಳದೇ ತ್ಯಾಗ।**
**ನಮ್ಮನು ಗುಣಗಳೆಂದೂ ಬಿಡವು, ಆಗದು ಅವುಗಳ ತ್ಯಾಗ ॥68॥**

ವಾಸ್ತವಿಕವಾಗಿ ತ್ಯಾಗಧರ್ಮ ಸಾಧುಗಳದಾಗಿದೆ. ಅದರಲ್ಲಿ ಅವರು ತಮ್ಮ ಆತ್ಮನಿಂದ ಭಿನ್ನವಾದ ಪರಭಾವಗಳನ್ನು ಪರವೆಂದು ಭಾವಿಸುತ್ತಾರೆ ಹಾಗೂ ಅವುಗಳನ್ನು ಸ್ವೀಕರಿಸುವುದಿಲ್ಲ, ಇದೇ ಅವರ ತ್ಯಾಗ ಧರ್ಮವಾಗಿದೆ. ಆಗಮ ಗ್ರಂಥಗಳಲ್ಲಿ ಆಚಾರ್ಯರು ತ್ಯಾಗ ಧರ್ಮದ ಎರಡು ಪ್ರಕಾರಗಳ ವ್ಯಾಖ್ಯಾನ ಮಾಡಿದ್ದಾರೆ. ಸಾಧುಗಳ ಅಪೇಕ್ಷೆಯಿಂದ ಪರಿಗ್ರಹಗಳ ನಿವೃತ್ತಿಯನ್ನು ತ್ಯಾಗವೆಂದು ಹೇಳಿದ್ದಾರೆ ಹಾಗೂ ಗೃಹಸ್ಥರ ಅಪೇಕ್ಷೆಯಿಂದ ತ್ಯಾಗದ ಅರ್ಥ ದಾನವೆಂದು ಸ್ವೀಕರಿಸಿದ್ದಾರೆ. ಸಾಧುಗಳು ಸರ್ವಸ್ವದ ತ್ಯಾಗಿಗಳಾಗಿರುತ್ತಾರೆ, ಅವರು ಅಪರಿಗ್ರಹೀ ಜೀವನವನ್ನು ನಡೆಸುತ್ತಾರೆ. ಗೃಹಸ್ಥರಿಗೆ ಸರ್ವಸ್ವವನ್ನು ತ್ಯಾಗ ಮಾಡುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಅವರಿಗೆ ಅವರ ಶಕ್ತಿ ಮತ್ತು ಪರಿಸ್ಥಿತಿಗಳಿಗನುಸಾರವಾಗಿ ದಾನ ನೀಡಲು ಪ್ರೇರಣೆ ನೀಡಿದ್ದಾರೆ. ಯಾಕೆಂದರೆ ಅನ್ಯಾಯ, ಅನೀತಿ, ಅಪ್ರಾಮಾಣಿಕತೆಯಿಂದ ಗೃಹಸ್ಥರು ಧನ ಸಂಚಯ ಮಾಡುತ್ತಾರೆ-ಉದಾ-ನದಿಯ ನೀರು ಹರಿಯುತ್ತದೆ ಹಾಗೂ ಮೆಲ್ಲನೆ ಹರಿಯುವ ಕಾರಣ ಕೆಳಗಿರುವ ಕೆಸರು ಒತ್ತಲ್ಪಟ್ಟಿರುತ್ತದೆ ಹಾಗೂ ಭಾರಿ ಮಳೆಯಾದಾಗ ಅದು ಹರಿದು ಹೋಗುತ್ತದೆ. ಹಾಗೆಯೇ ಹಣವನ್ನು ಸತ್ಕಾರ್ಯಗಳಲ್ಲಿ

ತೊಡಗಿಸುತ್ತಿದ್ದರೆ, ಅದನ್ನು ಸಂಗ್ರಹಿಸುವಾಗ ಸೇರುವ ಪಾಪ ರೂಪದ ಕೆಸರು ಕೊಚ್ಚಿಕೊಂಡು ಹೋಗುತ್ತದೆ.

ಆತ್ಮ ಸ್ವಭಾವದ ಪ್ರಾಪ್ತಿಯಲ್ಲಿ ತ್ಯಾಗವು ಅತ್ಯಂತ ಅವಶ್ಯಕವಾಗಿದೆ. ತ್ಯಾಗದ ಅರ್ಥ ವಿಕಾರಿ ಭಾವಗಳ ಪರಿತ್ಯಾಗ ಮಾಡುವುದಾಗಿದೆ, ಆತ್ಮನಲ್ಲಿ ಯಾವ ಬಾಹ್ಯ ಕಾರಣಗಳಿಂದ ವಿಕಾರ ಉತ್ಪನ್ನವಾಗುತ್ತಿದೆಯೋ ಅವೆಲ್ಲವುಗಳ ಪರಿತ್ಯಾಗವಾಗಬೇಕು. ಇದರಲ್ಲಿ ವಸ್ತುವಿನ ತ್ಯಾಗದೊಂದಿಗೆ ಅದರ ಬಗ್ಗೆ ಇರುವ ಮಮತ್ವ ಭಾವವನ್ನು ಸಹ ಅವಶ್ಯವಾಗಿ ತ್ಯಾಗ ಮಾಡಬೇಕು. ಯಾಕೆಂದರೆ ವಸ್ತುಗಳನ್ನು ಬಿಡುವಾಗ ಮನಸ್ಸಿನಲ್ಲಿ ದುಃಖವಾಗಬಾರದು. ದುಃಖ ವಸ್ತುವಿನ ಇರುವಿಕೆ ಅಥವಾ ಇಲ್ಲದಿರುವಿಕೆಯಿಂದ ಬರುವುದಿಲ್ಲ. ಬದಲಾಗಿ ಅದರ ಬಗ್ಗೆ ನಮಗಿರುವ ಮಮತ್ವ ಭಾವವೇ ದುಃಖಕ್ಕೆ ಕಾರಣವಾಗಿರುತ್ತದೆ. ವಾಸ್ತವಿಕವಾಗಿ ಕಷಾಯಗಳ ತ್ಯಾಗವನ್ನು ನಿಜವಾದ ತ್ಯಾಗವೆಂದು ಹೇಳಲಾಗುತ್ತದೆ. ಜ್ಞಾನಿಗಳು ವಿಷಯ ರಾಗ ಕಷಾಯಗಳಿಗೆ ಹೆದರುತ್ತಾರೆ ವಿನಹ ತ್ಯಾಗಕ್ಕಲ್ಲ ಹಾಗೂ ಅಜ್ಞಾನಿಗಳು ರಾಗದ ಆವರಣ ಮಾಡಿಕೊಂಡು ತ್ಯಾಗಕ್ಕೆ ಹೆದರುತ್ತಾರೆ. ಅಂತರಂಗ ಮತ್ತು ಬಹಿರಂಗ ಪರಿಗ್ರಹಗಳ ತ್ಯಾಗ ಮಾಡಿ ಆತ್ಮ ಧ್ಯಾನದಲ್ಲಿ ಲೀನನಾಗಿ ಬಿಟ್ಟರೆ ಅದು ಉತ್ಕೃಷ್ಟ ತ್ಯಾಗವಾಗಿದೆ. ತ್ಯಾಗ ಅಮೃತ ತತ್ತ್ವನ್ನು ಪಡೆಯುವಲ್ಲಿ ಸಹಾಯಕವಾಗಿದೆ. ಪರಿಗ್ರಹವು ದುಃಖಕ್ಕೆ ಕಾರಣವಾಗಿದೆ.

ಶಾಂತಿ–ಸುಖ ಎಲ್ಲಿವೆ? ಇವುಗಳನ್ನು ಪಡೆಯಲು ನಾವು ಪುರುಷಾರ್ಥ ಮಾಡಬೇಕು. ಆದರೆ ನಾವು ಅವುಗಳನ್ನು ಎಲ್ಲಿ ಹುಡುಕುತ್ತಿದ್ದೇವೆ? ಅವು ಅಲ್ಲಿ ಇವೆಯೆ ಅಥವಾ ಬೇರೆ ಸ್ಥಾನಗಳಲಿವಿಯೆ? ಇಲ್ಲಿಯವರೆಗಂತೂ ಸಿಕ್ಕಿಲ್ಲ. ಸಹೋದರರೇ ವಿಚಾರ ಮಾಡಿ ಅವು ಅಲ್ಲಿಲ್ಲ. ನಮಗಾಗಿ ಎಲ್ಲಿ ಹುಡುಕಬೇಕು? ಇದಕ್ಕೆ ಸಂಬಂಧಿಸಿದಂತೆ ಒಂದು ದೃಷ್ಟಾಂತ ಹೇಳುತ್ತೇನೆ.

ಒಂದು ಸಾರಿಯ ಸಂಗತಿ ಇದಾಗಿದೆ, ಒಬ್ಬ ವೃದ್ಧಳಾದ ಅಮ್ಮಾ–ಬಹಳ ದಿನಗಳಿಂದ ಒಂದು ವಸ್ತುವಿನ ಅವಶ್ಯಕತೆ ಮೇಲಿಂದ ಮೇಲೆ ಆಗುತ್ತಲಿದೆ ಎಂದು ವಿಚಾರಮಾಡಿ ಅದನ್ನು ಆ ವಸ್ತುವನ್ನು ಅಂದು ಖರೀದಿಸಿ ತರಲೇ ಬೇಕೆಂದು ಹೊರಟು ಪೇಟೆಗೆ ಹೋಗಿ ಅಂಗಡಿಯವನಿಂದ ಆ ವಸ್ತುವನ್ನು ತಂದೇ ಬಿಟ್ಟಿತು. ಆ ವಸ್ತು ಸೂಜಿಯಾಗಿದ್ದು ಅದನ್ನು ಬಟ್ಟೆ ಹೊಲೆಯಲು ಅತ್ಯಂತ ಅವಶ್ಯವೆಂದು ಅವಳು ಭಾವಿಸಿದ್ದರಿಂದ ಅದನ್ನು ತಂದಿದ್ದಳು ಆದರೆ ನೋಡಿ, ಅದನ್ನು ಅವಳು ತರುತ್ತಿರುವಾಗ ಕೈಯಿಂದ ಬಿದ್ದು ಹೋಯಿತು, ಯಾಕೆಂದರೆ ಅದರಲ್ಲಿ ದಾರವನ್ನು ಪೋಣಿಸಿರಲಿಲ್ಲ. ಈಗ ಅವಳು ಅದನ್ನು ಹುಡುಕ ತೊಡಗಿದಳು ಬಹಳಷ್ಟು ಹುಡುಕಿದಳು. ಬಿದ್ದ ಸ್ಥಳದಲ್ಲಿ ಧೂಳು ಇದ್ದಿದ್ದರಿಂದ ಆ ಸೂಜಿ ಅದರಲ್ಲಿ ಕಾಣೆಯಾಯಿತು ಆಗ ಅಲ್ಲಿಂದ ಒಬ್ಬ ವ್ಯಕ್ತಿ ಹೋಗುತ್ತಿದ್ದ, ಆ ಅಮ್ಮಾ ಇಲ್ಲಿ–ಅಲ್ಲಿ ಆತಂಕದಿಂದ ನೋಡುತ್ತಾ ಇರುವುದನ್ನು ಕಂಡು–ಅಮ್ಮಾ ಏನು ಮಾಡುತ್ತಿದ್ದಿಯಾ? ಎಂದು ಕೇಳಿದ ಏನಾದರೂ ಬಿದ್ದು ಹೋಗಿದೆಯಾ ಅದನ್ನು ಇಲ್ಲಿ ಹುಡುಕುತ್ತಿದ್ದಿಯಾ? ಎಂದ, ಹೌದು ಮಗನೇ! ನನ್ನದೊಂದು ಸೂಜಿ ಇದ್ದಿತು ಅದು ಇಲ್ಲಿ ಬಿದ್ದು ಬಿಟ್ಟಿದೆ ಅದನ್ನೇ ಹುಡುಕುತ್ತಿದ್ದೇನೆ. ಆಗ ಆ ವ್ಯಕ್ತಿ ಇಲ್ಲಿ ಯಾಕೆ ಹುಡುಕುತ್ತಿದ್ದಿಯಾ ನೀನು, ಬೆಳಕಿನಲ್ಲಿ ಹುಡುಕು, ಬೆಳಕಿನಲ್ಲಿ; ಆತನ ಹೇಳಿಕೆಯಂತೆ ಆ ಅಮ್ಮ ಬೆಳಕಿದ್ದ ಕಡೆಗೆ ಹೊರಟಳು ಹತ್ತಿರದಲ್ಲಿಯೇ ಟ್ಯೂಬ್ ಲೈಟ್ ಇದ್ದ ಕಂಬವಿದ್ದಿತು. ಅಲ್ಲಿಗೆ ಹೋಗಿ, ಈ ಉಪಾಯ ಹೇಳಿದ ಮನುಷ್ಯ ಬುದ್ಧಿವಂತ ಯುವಕ ಆತನ ಮಾತನ್ನು ಒಪ್ಪಿಕೊಂಡು ಇಲ್ಲಿಯೇ ಸೂಜಿಯನ್ನು ಹುಡುಕುತ್ತೇನೆಂದು, ಬಹುಶ: ಸಿಗಬಹುದೆಂದು

ಯೋಚಿಸಿದಳು ಅಲ್ಲಿ ಸೂಜಿಯನ್ನು ಹುಡುಕತೊಡಗಿದಳು.

ಸೂಜಿಯನ್ನು ಹುಡುಕುತ್ತಾ-ಹುಡುಕುತ್ತಾ ಅವಳು ಬಹಳ ಸಮಯ ಹೊರಟುಹೋಯಿತು. ರಾತ್ರಿಯಾಯಿತು. ಈಗ ಮತ್ತೊಬ್ಬ ವ್ಯಕ್ತಿ ಅಲ್ಲಿಗೆ ಬಂದ, ಆತನು ಆ ಅಮ್ಮನನ್ನು ನೋಡಿದ. ಅವಳನ್ನು ನೋಡಿ ಅವನಿಗೂ ಸುಮ್ಮನಿರಲಾಗಲಿಲ್ಲ ಅವಳನ್ನು -ಅಮ್ಮಾ ಇಷ್ಟೊಂದು ರಾತ್ರಿಯಲ್ಲಿ ಇಲ್ಲಿ ಏನು ಮಾಡುತ್ತಿದ್ದೀರಾ? ಏನೋ ಹುಡುಕುತ್ತಿದ್ದೀರಾ? ಎಂದು ಕೇಳಿಯೇ ಬಿಟ್ಟ, ಅವಳು ಆತನಿಗೆ-ಹೌದು ಮಗಾ! ನನ್ನ ಸೂಜಿ ಬಿದ್ದು ಹೋಗಿದೆ ಅದನ್ನೇ ಹುಡುಕುತ್ತಿದ್ದೇನೆ. ಬಹಳ ಸಮಯವಾಯಿತು ಆದರೆ ಅದು ಸಿಗುತ್ತಲೇ ಇಲ್ಲ. ಎಂದು ಹೇಳಿದಳು. ಒಳ್ಳೆಯದು ಅಮ್ಮಾ, ಸೂಜಿ ಎಲ್ಲಿ ಬಿದ್ದಿತು?ಎನ್ನುವುದನ್ನಾದರೂ ಹೇಳಿ. ಆ ಅಮ್ಮಾ-ಸೂಜಿ ಅಲ್ಲಿ ಬಿದ್ದಿತ್ತು ಮಗಾ, ನಾನು ಅದನ್ನು ಮೊದಲು ಅಲ್ಲಿಯೇ ಹುಡುಕುತ್ತಿದ್ದೆ ಎಂದು ಹೇಳಿದಳು. ಅರೇ! ಸೂಜಿ ಎಲ್ಲಿ ಬಿದ್ದಿತ್ತೋ ಅದನ್ನು ಅಲ್ಲಿಯೇ ಹುಡುಕಿ ಅಮ್ಮಾ, ಇಲ್ಲಿ ಯಾಕೆ ಹುಡುಕುತ್ತಿದ್ದಿರಾ? ಆಗ ಅವಳು ಮಗನೇ ನಿನ್ನಂತೆಯೇ ಓದು-ಬರಹ ಬಲ್ಲ ಯುವಕ ಬಂದಿದ್ದ ಹಾಗೂ ಬೆಳಕಿನಲ್ಲಿ ಹುಡುಕಿ ಎಂದು ಹೇಳಿದ ಆದ್ದರಿಂದ ಮಗನೇ ನಾನು ಇಲ್ಲಿ ಬೆಳಕಿನಲ್ಲಿ ಹುಡುಕುತ್ತಿದ್ದೇನೆ-ಎಂದಳು ಆ ವ್ಯಕ್ತಿಯು ವಸ್ತು ಸ್ಥಿತಿಯನ್ನು ಅರಿತು ಮತ್ತೇ ಹೇಳಿದ-ಹಾಗಲ್ಲ ಅಮ್ಮಾ-ಎಲ್ಲಿ ಬಿದ್ದತ್ತೊ ಅಲ್ಲಿ ಬೆಳಕನ್ನು ತಂದು ಹುಡುಕಿ ಎಂದು ಹೇಳಿರಬೇಕು. ಆಗ ಅಮ್ಮಾ-ಇಲ್ಲ ಮಗನೇ ಆತ ಬೆಳಕಿನಲ್ಲಿ ಹುಡುಕು ಎಂದೇ ಅವನು ಹೇಳಿದ್ದು ಆದ್ದರಿಂದ ನಾನು ಇಲ್ಲಿ ಬೆಳಕನ್ನು ನೋಡಿಯೇ ಹುಡುಕುತ್ತಿದ್ದೇನೆ-ಎಂದು ಹೇಳಿದಳು. ಆ ವ್ಯಕ್ತಿ ಮತ್ತೇ-ಇಲ್ಲಾ ಅಮ್ಮಾ ಹಾಗೇ ತಿಳಿಯಬೇಡಿ, ಎಲ್ಲಿ ಬಿದ್ದಿದೆಯೋ ಅಲ್ಲಿಯೇ ಬೆಳಕನ್ನು ತಂದು ಹುಡುಕಿದರೆ ಸೂಜಿ ಸಿಗುತ್ತದೆ. ಬೇರೆಡೆ ಅದು ಎಂದಿಗೂ ಸಿಗುವುದಿಲ್ಲ, ನೀವು ಎಷ್ಟೇ ಸಮಯ ಹುಡುಕಿದರೂ ಅದು ಸಿಗಲಾರದು ಅವರು ಹೇಳಿದ್ದರ ಅರ್ಥ ಇಲ್ಲಿ ಕತ್ತಲೆ ಇದೆ ಬೆಳಕನ್ನು ತಂದು ಸೂಜಿಯನ್ನು ಹುಡುಕಿ ಎನ್ನುವುದಾಗಿದ್ದಿತು-ಎಂದು ಹೇಳಿದ. ಅಮ್ಮನಿಗೆ ಈಗ ವಿಷಯದ ತಿಳುವಳಿಕೆಯಾಯಿತು ಹಾಗೂ ಎಲ್ಲಿ ಸೂಜಿ ಬಿದ್ದಿದ್ದಿತೋ ಅಲ್ಲಿ ಅವಳು ಬೆಳಕನ್ನು ತಂದು ನೋಡಿದಾಗ ಅಲ್ಲಿ ಅವಳಿಗೆ ಸೂಜಿ ಸಿಕ್ಕಿತು.

ಸಹೋದರರೇ ನೋಡಿ ನಾವು ಸಹ ಅದೇ ವೃದ್ಧ ಅಮ್ಮನ ಹಾಗೇ ಸುಖ-ಶಾಂತಿ ಎಲ್ಲಿದೆಯೋ ಅಲ್ಲಿ ಅದನ್ನು ಹುಡುಕುತ್ತಿಲ್ಲ, ಯಾರೋ ಸಂತ ಮಹಾತ್ಮರು ಮಾರ್ಗ ತೋರಿಸಿದರೂ ಅವರೂ ಹೇಳಿದ್ದರ ಅರ್ಥವನ್ನು ತಿಳಿಯಲಿಲ್ಲ ಹಾಗೂ ಅಮ್ಮನ ಹಾಗೇ ಎಲ್ಲಿ ವಿಷಯ ಭೋಗಗಳ ಬೆಳಕಿದೆ ಅದರಲ್ಲಿ ಹುಡುಕುತ್ತಿದ್ದೇವೆ. ಸಾಕು, ಹಾಗೆಯೇ ಅನಾದಿಕಾಲದಿಂದ ಆಗುತ್ತಲಿದೆ. ಸುಖ-ಶಾಂತಿ ಇರುವಲ್ಲಿ ಅವುಗಳನ್ನು ಅಲ್ಲಿ ಹುಡುಕದೇ, ಎಲ್ಲಿ ಇಲ್ಲವೋ, ಅವುಗಳಲ್ಲಿ ಹುಡುಕುತ್ತಿದ್ದೇವೆ ಹಾಗು ನಮ್ಮ ಒಂದು ಜೀವನವಲ್ಲ, ಹೀಗೇಯೇ ಅನಂತ ಜೀವನಗಳು ಕಳೆದು ಹೋಗುತ್ತಲಿವೆ. ಆಚಾರ್ಯ ಭಗವಂತರು-ನಮ್ಮ ಅಂತರಂಗದಲ್ಲಿಯೇ ಸುಖ-ಶಾಂತಿಗಳಿವೆ, ಅಂತರಂಗದಲ್ಲಿಯೇ ಹುಡುಕಿ-ಎಂದು ಹೇಳುತ್ತಾರೆ, ಹೇಗೆ ಹುಡುಕಬೇಕು? 'ಶ್ರೇಷ್ಠವಾದ ಸಮ್ಯಗ್ ಜ್ಞಾನ ರೂಪದ ಪ್ರಕಾಶದಿಂದ ನಮ್ಮ ಅಂತರಂಗದಲ್ಲಿ ಹುಡುಕಿ, ಹೊರಗಡೆ ಅಲ್ಲ, ಹೊರಗಡೆ ಎಷ್ಟೆ ಮರಕ್ಯೂರಿ ಅಥವಾ ಹಾಲೋಜಿನ ಬೆಳಕಿದ್ದರೂ ಸಿಗುವುದಿಲ್ಲ. ಎಲ್ಲಿ ಕಳೆದಿದೆ, ಬಿದ್ದಿದೆ ಅಲ್ಲಿ ಸಿಗುತ್ತದೆ. ಈ ಕಣ್ಣುಗಳಿಂದ ಸಿಗುವುದಿಲ್ಲ ಅಂತರಂಗದ ಕಣ್ಣುಗಳನ್ನು ತೆಗೆಯಬೇಕಾಗುತ್ತದೆ. ಜ್ಞಾನದ ಕಣ್ಣುಗಳನ್ನು ತೆಗೆಯಿರಿ ಹಾಗೂ ಅಲ್ಲಿ ಹುಡುಕಿದಾಗ ಅಲ್ಲಿ ಸುಖ-ಶಾಂತಿಗಳು ದೊರೆಯುತ್ತವೆ.

ಕಸ್ತೂರಿ ಮೃಗವನ್ನು ನೀವು ನೋಡಿದ್ದೀರಾ ಅದರ ನಾಭಿಯಲ್ಲಿಯೇ ಕಸ್ತೂರಿ ಇರುತ್ತದೆ. ಅದು ಬಹಳ ಸುಂಗಂಧಿತವಾಗಿರುತ್ತದೆ. ಕಸ್ತೂರಿ ಎಲ್ಲಿಯೋ ಇದೆ ಎಂದು ಆ ಮೃಗ ಯೋಚಿಸುತ್ತದೆ. ಆ ಸುಗಂಧವನ್ನ ಪಡೆಯಲು ಅದು ಹುಡುಕುತ್ತಾ –ಅರಸುತ್ತಾ ಬಹಳಷ್ಟು ದೂರ ಹೊರಟು ಹೋಗುತ್ತದೆ. ಆದರೆ ಅದು ಅದಕ್ಕೆ ಸಿಗುವುದಿಲ್ಲ. ಹೀಗೆ ಹೇಳಿಯೂ ಇದ್ದಾರೆ–

**ನಿಜ ನಾಭಿಯಲಿ ಗಂಧವಿದೆ, ಮೃಗವು ಹುಡುಕುತಿದೆ ನಾಲ್ಕೂ ದಿಕ್ಕಿನಲಿ।**

ತನ್ನ ಬಳಿಯೇ ಇದೆ ಆದರೆ ಅದಕ್ಕೆ ಗೊತ್ತೇ ಇಲ್ಲ, 'ತನ್ನ ಬಳಿಯೇ ಇದೆ' ಎಂಬ ಇಷ್ಟು ಜ್ಞಾನವೂ ಇಲ್ಲ. ಈ ಕಾರಣದಿಂದ ಅದು ನಾಲ್ಕೂ ದಿಕಿನಲ್ಲಿ ಓಡಾಡುತ್ತಿರುತ್ತದೆ. ಕೊನೆಗೆ ತನ್ನ ಪ್ರಾಣವನ್ನೂ ಕಳೆದುಕೊಳ್ಳುತ್ತದೆ. ಆದರೂ ಅದಕ್ಕೆ ಆ ಕಸ್ತೂರಿಯ ಸುಗಂಧ ದೊರೆಯುವುದಿಲ್ಲ. ಎಲ್ಲಿ ಇದ್ದಿತೋ ಅಲ್ಲಿ ಅದು ಹುಡಕಲಿಲ್ಲವೆಂದರೆ ಅದಕ್ಕೆ ಅದು ಹೇಗೆ ದೊರಕೀತು? ಹಾಗೆಯೇ, ಸುಖವನ್ನು ಸಂಸಾರದ ಪ್ರತಿಯೊಂದು ವಸ್ತುವಿನಲ್ಲಿ ಹುಡುಕುತ್ತಿದ್ದೇವೆ. ಆದರೆ ಅಲ್ಲಿ ಇಲ್ಲದೇ ಇರುವಾಗ ಅದು ಹೇಗೆ ಸಿಕ್ಕೀತು, ಎಲ್ಲಿ ಇದೆ ಆತ್ಮನಲ್ಲಿ ಗಮನವಿಟ್ಟು ಇಂದಿನವರೆಗೂ ನೋಡಿಲ್ಲ. ಅಂತರಂಗದ ಕಣ್ಣನ್ನು ತೆಗೆದೇ ಇಲ್ಲ, ಹೊರಗಡೆಯೇ ನೋಡುತ್ತಾ ಇದ್ದು–ಒಳ್ಳೆಯ ಕಟ್ಟಡ ಕಟ್ಟಿಸು, ಒಳ್ಳೆಯ ಕಾರು ತರೋಣ, ಒಳ್ಳೆಯ ಅಂಗಡಿ ತೆರೆಯೋಣ, ಒಳ್ಳೆಯ ಭೋಗವನ್ನು ಭೋಗಿಸೋಣ, ಒಳ್ಳೆಯ ಪಕ್ವಾನ್ ತಿನ್ನೋಣ, ಆದರೆ ಇವುಗಳಲ್ಲಿ ಸುಖವು ಇಲ್ಲವೇ ಇಲ್ಲ ಸಹೋದರಾ. ಒಂದು ವೇಳೆ ಸುಖವಿದ್ದಿದ್ದರೆ–ತೀರ್ಥಂಕರ, ಚಕ್ರವರ್ತಿ ಮುಂತಾದವರ ಬಳಿ ಎಷ್ಟು ವೈಭವವಿದ್ದಿತು ಅದನ್ನು ಅವರು ಯಾಕೆ ಬಿಟ್ಟರು? ಅವರ ಮುಂದೆ ನಿಮ್ಮ ವೈಭವ ಏನೂ ಅಲ್ಲ. ಅವರು ಎಲ್ಲವನ್ನು ಬಿಟ್ಟಿರುವಾಗ, ಅವರಿಗೆ ಇವುಗಳಲ್ಲಿ ಸುಖ ಸಿಗಲಿಲ್ಲ, ಇಂದಿನ ಮಾನವರಿಗೆ ಹೇಗೆ ಸಿಕ್ಕೀತು? ಈ ವಿಷಯವನ್ನು ನಾವು ತಿಳಿಯಬೇಕು. ಇದಂತೂ ಮೃಗ ಮರೀಚಿಕೆಯ ಹಾಗಿದೆ. ಮೃಗ ಮರೀಚಿಕೆಯಲ್ಲಿ ಎದುರಿಗೆ ನೀರು ಇರುವಂತೆ ತೋರುತ್ತದೆ, ಅದೆಷ್ಟು ಒಳ್ಳೆಯ ನೀರು ಕಾಣಿಸುತ್ತಲಿದೆ, ಮುಂದೆ ಸಾಗಿದರೆ ಅಲ್ಲಿ ನೀರು ಸಿಗುವುದೇ ಇಲ್ಲ, ಮುಂದೆ ನೀರು ಕಾಣಿಸುತ್ತದೆ, ಎಲ್ಲಿಗೆ ಹೋದರೂ ಅಲ್ಲಿ ದೂರದಿಂದ ನೀರು ಕಾಣಿಸುತ್ತದೆ ಎಂದು ಮುಂದೆ ಹೋದಂತೆ ಅಲ್ಲಿ ನೀರು ಇಲ್ಲವೇ ಇಲ್ಲ. ಮೃಗವು ಬಾಯಾರಿಕೆಯಿಂದ ಸತ್ತೇ ಹೋಗುತ್ತದೆ. ಹಾಗೆಯೇ ಇದೆ ಮೃಗ ಮರೀಚಿಕೆ, ಇಲ್ಲಿ ನೀರೇ ಇಲ್ಲವೆನ್ನುವುದನ್ನು ಅದು ತಿಳಿಯುವುದೇ ಇಲ್ಲ, ಮರುಭೂಮಿಯಲ್ಲಿ ಬಿಸಿಲುಗಾಲದಲ್ಲಿ ಕೆಳಗಿನಿಂದ ಬಿಸಿಲಿನಿಂದ ಗಾಳಿಯ ಅಲೆ ಏಳುತ್ತದೆ ಅದು ನೀರು ತುಂಬಿರುವಂತೆ ಅನಿಸುತ್ತದೆ. ಹಾಗೆಯೇ ಸಂಸಾರೀ ಪ್ರಾಣಿಗಳು, ಪರವಾಗಿಲ್ಲ ಈಗ ಸ್ವಲ್ಪ ಪರಿಗ್ರಹವಿದೆ. ಇನ್ನೂ ಸ್ವಲ್ಪ ಹೆಚ್ಚಿಸೋಣ ಸಿಗುತ್ತದೆ ಎಂದು ಯೋಚಿಸುತ್ತೇವೆ. ಸ್ವಲ್ಪ ಸ್ವಲ್ಪ ಎನ್ನುವ ಬಯಕೆಯಲ್ಲಿ ಜೀವನ ಕಳೆದು ಹೋಗುತ್ತದೆ. ಆದರೆ ಅದು ದೊರಕುವುದಿಲ್ಲ ಯಾಕೆಂದರೆ ಅದು(ಸುಖ)ಅದರಲ್ಲಿ ಇಲ್ಲವೇ ಇಲ್ಲ ಅದಂತೂ ಭ್ರಮೆಯಾಗಿದೆ. ಒಂದು ವೇಳೆ ಸುಖವಿದ್ದಿದ್ದರೆ ದೊಡ್ಡ ದೊಡ್ಡ ಮಹಾಪುರುಷರಿಗೆ ಸಿಗುತ್ತಿದ್ದಿತು, ಆದರೆ ಈ ಸಂಸಾರದಲ್ಲಿ ಸುಖವೇ ಇಲ್ಲದಿರುವಾಗ ಅವರಿಗೆ ಸಿಗಲಿಲ್ಲ. ಆದ್ದರಿಂದಲೇ ಅವರು ತ್ಯಾಗ ಮಾಡಿದರು. ಮುನಿಗಳಾಗಿ ಆತ್ಮನ ಧ್ಯಾನ ಮಾಡಿದರು ಹಾಗೂ ಮುಕ್ತಿಯನ್ನು ಪಡೆದರು. ತ್ಯಾಗದ ಮಾಧ್ಯಮದಿಂದಲೇ ಮುಕ್ತಿಯನ್ನು ಪಡೆಯಬಹುದು ಹಾಗೂ ಎಲ್ಲಿಯೂ ಈ ಸಂಸಾರದಲ್ಲಿ ನಮಗೆ ಸುಖ ಸಿಗಲಾರದು ಎಂಬುದನ್ನು ನಾವು ತಿಳಿಯಬೇಕು.

**ರಾಗದಲ್ಲಿ ಸುಖವಿಲ್ಲ, ತ್ಯಾಗದಲ್ಲಿ ಸುಖವಿದೆ.**

ತ್ಯಾಗ ಮಾಡಲು ಅದೆಷ್ಟು ಪುರುಷಾರ್ಥ ಮಾಡಬೇಕಾಗುತ್ತದೆ, ಮೋಹದ ಸಂಕೋಲೆಗಳನ್ನು ಮುರಿಯಲು ಸಂಸಾರ, ಶರೀರ, ಭೋಗಗಳಿಂದ ವಿರಾಗಿಯಾಗಬೇಕಾಗುತ್ತದೆ. ತೀರ್ಥಂಕರ ಭಗವಾನ ಮಹಾವೀರ ಸ್ವಾಮಿಗಳು ಮೋಕ್ಷಕ್ಕೆ ಹೋದ ಕೆಲವು ವರ್ಷಗಳ ನಂತರದ ವಿಷಯವಿದೆ. ಮಗಧ ದೇಶದ ರಾಜಗೃಹ ನಗರದಲ್ಲಿ ಅರ್ಹದ್ದಾಸ ಹೆಸರಿನ ಒಬ್ಬ ಬಹಳ ದೊಡ್ಡ ಶ್ರೇಷ್ಠಿ ಇದ್ದರು ಅವರ ಬಳಿ ರಾಜರಂತೆ ಅಪಾರ ವೈಭವವಿದ್ದಿತು ಧನ, ಸಂಪತ್ತಿನಿಂದ ಕೂಡಿದ ಖಜಾನೆಯು ಅನೇಕ ರತ್ನ, ಮುತ್ತು ಇತ್ಯಾದಿಗಳಿಂದ ಸದಾಕಾಲ ತುಂಬಿರುತ್ತಿದ್ದಿತು. ಅರ್ಹದ್ದಾಸ ಶ್ರೇಷ್ಠಿಯ ಪತ್ನಿ ಜಿನಮತಿ ರೂಪ ಲಾವಣ್ಯಗಳಿಂದ ಕೂಡಿದ ಪತಿವ್ರತೆಯಾಗಿದ್ದಳೂ ಪತಿ-ಪತ್ನಿಯರಿಬ್ಬರು ಜೈನ ಧರ್ಮದ ಉತ್ತಮ ಪಾಲಕರಾಗಿದ್ದು ಧರ್ಮನಿಷ್ಠೆ ಶ್ರಾವಕರಾಗಿದ್ದರು. ಇವರ ಮನೆಯಲ್ಲಿ ಒಬ್ಬ ಸೌಮ್ಯ ಸುಂದರ ಪುತ್ರನ ಉತ್ಪನ್ನವಾಯಿತು. ಕ್ರಮ-ಕ್ರಮವಾಗಿ ಆತ ಉತ್ತಮ ಸಂಸ್ಕಾರ ಹೊಂದುತ್ತಾ ಸಮಸ್ತ ವಿದ್ಯೆಗಳ ಶಿಕ್ಷಣ ಪಡೆದು ಯುವಾವಸ್ಥೆಯನ್ನು ಪಡೆದನು. ಆತನು ಕಾಮದೇವನಂತೆ ಸುಂದರ ರೂಪವನ್ನು ಹೊಂದಿದ್ದನು, ಮಧುರ ಭಾಷಿ, ಭದ್ರ, ದಯಾಲು ಹಾಗೂ ವೈರಾಗ್ಯಪ್ರಿಯನಾಗಿದ್ದನು. ತಾಯಿ-ತಂದೆಗಳಿಂದ ಯುವ ಪುತ್ರನಿಗೆ ಬಹಳ ಉತ್ಕೃಷ್ಟ ಸಂಸ್ಕಾರವನ್ನು ನೀಡಲಾಗಿದ್ದಿತು.

ಒಂದು ಬಾರಿ ಆ ಯುವ ಪುತ್ರನಿಗೆ ಒಂದು ಒಳ್ಳೆಯ ಸಂಯೋಗ ದೊರೆಯಿತು. ಆ ಊರಿಗೆ ಅನೇಕ ಯತಿವರ್ಯರು ಬರುತ್ತಿದ್ದರು. ಆದರೆ ಆ ಸಮಯದಲ್ಲಿ ಸುಧರ್ಮಸ್ವಾಮಿ ಗಣಧರರು ವಿಪುಲಾಚಲ ಪರ್ವತದ ಮೇಲೆ ಆಗಮಿಸಿದ್ದರು. ಯುವ ಪುತ್ರನು ಸಹ ಗಣಧರ ಮುನಿಗಳ ಆಗಮನದ ಸಮಾಚಾರ ಕೇಳಿದ ಹಾಗೂ ಆತನು ಅವರ ದರ್ಶನ ಲಾಭ ಪಡೆಯಲು ಉತ್ಸುಕನಾದನು. ಆತನು ವಿಪುಲಾಚಲ ಪರ್ವತದ ಮೇಲೆ ಅವರ ಸಮೀಪ ಹೋಗಿ ನಮೋಸ್ತು ಮಾಡಿ ಸ್ವಲ್ಪಕಾಲ ನೆಟ್ಟ ದೃಷ್ಟಿಯಿಂದ ಅವರನ್ನು ನೋಡ ತೊಡಗಿದ. ಅವರ ಬಗ್ಗೆ ಆತನ ಆಕರ್ಷಣೆ ಹೆಚ್ಚಾಗುತ್ತಿದ್ದಿತು. ಅವರ ವಾಣಿಯನ್ನು ಕೇಳಿ ಆತನು ಬಹಳ ಪ್ರಭಾವಿತನಾದನು ಹಾಗೂ ಪ್ರತಿದಿನ ಆತನು ಅವರ ಬಳಿ ಹೋಗ ತೊಡಗಿದನು, ಅಲ್ಲಿ ಅವರ ಸಮೀಪ ಹೋಗಿ ತನ್ನ ಜಿಜ್ಞಾಸೆಗಳನ್ನು ಕೇಳತೊಡಗಿದನು. ಅವುಗಳಿಗೆ ಸಮಾಧಾನಗಳನ್ನು ಪಡೆದು ಆತನಿಗೆ ಆತ್ಮಿಕ ಶಾಂತಿ ದೊರಕಿತು ಜೊತೆಗೆ ಸಂಸಾರದ ಅಸಾರತೆಯ ಜ್ಞಾನ ಸಹ ಆಯಿತು.

ಆ ಯುವಕನಿಗೆ ದೇಹ-ಭೋಗಗಳ ಬಗ್ಗೆ ಮೆಲ್ಲ-ಮೆಲ್ಲನೆ ವಿರಕ್ತತೆಯ ಭಾವ ಮನಸ್ಸಿನಲ್ಲಿ ಬರತೊಡಗಿತು. ಸಂಸಾರದಲ್ಲಿ ಏನಿದೆ? ಎಂದು ಆತ ಚಿಂತಿಸತೊಡಗಿದ. ಅನಾದಿಕಾಲದಿಂದ ಈ ಎಲ್ಲ ಭೋಗಗಳನ್ನು ಭೋಗಿಸುತ್ತಿದ್ದೇವೆ, ಏನೂ ಸಹ ಹೊಸದಿಲ್ಲ, ಇವುಗಳನ್ನು ಮೇಲಿಂದ ಮೇಲೆ ಭೋಗಿಸಿ ಎಂಜಲಿನಂತೆ ಬಿಟ್ಟವುಗಳಾಗಿವೆ, ಇವುಗಳಲ್ಲಿ ಎಲ್ಲಿಯೂ ಯಾವ ಸುಖವು ಸಿಗುವಂತಹದಲ್ಲ. ಈ ಸಂಸಾರದಲ್ಲಿ ವಿವಿಧ ರೀತಿಯ ದುಃಖಗಳಿವೆ. ಕೆಲವರು ರೋಗಗಳಿಂದ ದು:ಖಿಗಳಾಗಿದ್ದಾರೆ. ಕೆಲವರು ಪರಿವಾರದಿಂದ ದು:ಖಿಗಳಾಗಿದ್ದಾರೆ, ಕೆಲವರು ಹಣದಿಂದ ದುಃಖಿಗಳಾಗಿದ್ದಾರೆ, ಕೆಲವರು ಮನಸ್ಸಿನಿಂದ ದುಃಖಿಗಳಾಗಿದ್ದಾರೆ, ಕೆಲವರು ಶರೀರದಿಂದ ದುಃಖಿಗಳಾಗಿದ್ದಾರೆ. ಇನ್ನೂ ಹಲವಾರು ಕಾರಣಗಳಿಂದ ಜನರು ದುಃಖಿಗಳಾಗುತ್ತಾ ಇರುತ್ತಾರೆ, ಯಾರು ಸಹ ಸುಖಿಗಳೆಂದು ಕಂಡು ಬರುವುದಿಲ್ಲ. ವಾಸ್ತವಿಕವಾಗಿ ಯಾರು ಸುಖಿಯಾಗಿದ್ದಾರೆ? ಎಂದರೆ ಯಾರು ತಮ್ಮ ಬಳಿ ಏನನ್ನೂ ಇಟ್ಟುಕೊಂಡಿಲ್ಲವೋ, ಎಲ್ಲವನ್ನು ಬಿಟ್ಟಿದ್ದಾರೋ. ಅವರು ಸುಖಿಯಾಗಿದ್ದಾರೆ. ಅವರೂ ಆತ್ಮಿಕ ಧ್ಯಾನದಲ್ಲಿ  ಲೀನರಾಗಿರುತ್ತಾರೆ. ಕಾಡುಗಳಲ್ಲಿ ಪರ್ವತಗಳಲ್ಲಿ

ಗುಹೆಗಳಲ್ಲಿ ಇದ್ದು ಧ್ಯಾನ ಮಾಡುತ್ತಾರೆ ಹಾಗೂ ಆಗಾಗ ನಗರದಲ್ಲಿಯೂ ಬರುತ್ತಾರೆ, ಎಲ್ಲರಿಗೂ ಧರ್ಮಮಾರ್ಗದ ಉಪದೇಶ ನೀಡುತ್ತಿರುತ್ತಾರೆ. ಅವರ ಮುಖದಲ್ಲಿ ಯಾವಾಗಲೂ ಚಂದ್ರನಂತೆ ಶೀತಲ ಶಾಂತಿ ಹರಡಿರುತ್ತದೆ. ಎಂದಿಗೂ ಯಾವುದೇ ರೀತಿಯ ಆತಂಕ ಯಾವುದೇ ಪ್ರಕಾರದ ವಿಕಲ್ಪ ಇರುವುದಿಲ್ಲ. ಇಂತಹ ಸುಖ ನಮಗೆ ಯಾವಾಗ ಸಿಗುತ್ತದೆ? ನಾವು ಅವರ ಹಾಗೇ ಆದಾಗ ಅವರಂತಹ ಸುಖ ಸಿಗಬಲ್ಲದು, ಇಲ್ಲವಾದಲ್ಲಿ ಎಂದಿಗೂ ಸಿಗಲಾರದು. ಈ ರೂಪವನ್ನು ಸ್ವೀಕರಿಸಿದಾಗ ಸುಖ ದೊರೆಯುತ್ತದೆ ಹಾಗೂ ಮತ್ತೆಲ್ಲಿಯೂ ಸಿಗುವುದಿಲ್ಲ. ಈ ಪ್ರಕಾರ ಆತನು ಪ್ರತಿದಿನ ವಿಚಾರ-ಚಿಂತನೆ ಮಾಡಿ, ಇವರಂತೆ ಎಂದು ನಾನು ಮುನಿಪದ ಧಾರಣೆ ಮಾಡುತ್ತೇನೆ ಎನ್ನುವ ಭಾವನೆಯನ್ನು ಹೊಂದಿದ ಎಂದು ಇವರಂತೆ ಆಗಬಲ್ಲೇ? ಎಂದು ಸಂಸಾರದ ಬಂಧನದಿಂದ ಬಿಡುಗಡೆ ಪಡೆಯುತ್ತೇನೆ? ಆತನಿಗೆ ಈ ಸಂಸಾರ ಮನೆ ಪರಿವಾರ, ಒಂದು ಸೆರೆಮನೆ/ಕಾರಾಗೃಹ ಎಂದೆನಿಸತೊಡಗಿತು.

ಪ್ರತಿದಿನ ತಾಯಿ-ತಂದೆಗಳ ಮೋಹವನ್ನು ತನ್ನ ಅಂತರಂಗದಿಂದ ಬಿಡಲು ಪ್ರಯತ್ನಿಸಿದ ಆದರೆ ಅವರ ಮೋಹ ನಮ್ಮಿಂದ ಹೇಗೆ ಬಿಟ್ಟೀತು. ಅವರು ಅಳುತ್ತಾರೆ, ದು:ಖಿಗಳಾಗುತ್ತಾರೆ. ಅವರಿಗೆ ತಿಳಿಸಿಕೊಡುವ ಪ್ರಯತ್ನವನ್ನು ಹೇಗೆ ಮಾಡಲಿ, ಇದೇ ಚಿಂತನೆಯಲ್ಲಿದ್ದು ಉದಾಸೀನನಾಗಿ ಇರತೊಡಗಿದನು. ಆತನ ಮನೆಯಲ್ಲಿ ಆಹಾರ-ಪಾನೀಯಗಳಲ್ಲಿ ತಾವುದೇ ತರಹದ ವಿಷಯಗಳಲ್ಲಿ ಮನಸ್ಸು ಆಸಕ್ತವಾಗಿರಲಿಲ್ಲ. ಸಮಯ ಸಿಕ್ಕಾಗಲೆಲ್ಲಾ ಕಣ್ಣುಗಳನ್ನು ಮುಚ್ಚಿ ಚಿಂತನೆಯಲ್ಲಿ ಲೀನಾಗಿ ಬಿಡುತ್ತಿದ್ದನು. ತಾಯಿ-ತಂದೆಗಳು ಆತನನ್ನು ನೋಡುತ್ತಾ ತಮ್ಮಲ್ಲಿಯೇ ಮಗನಿಗೆ ಏನೋ ಆಗಿದೆ ಎಂದು ವಿಚಾರ ಮಾಡುತ್ತಿದ್ದರು. ಯಾವುದಾದರೂ ಚಿಂತೆ ಬಾಧಿಸುತ್ತಿದೆಯೆ? ಅಥವಾ ಮತ್ತೇನ್ನಾದರೂ ವಿಷಯವಿದೆಯೇ? ಆತನ ಆಚಾರ ವಿಚಾರಗಳಿಂದ ಆತನಿಗೆ ವೈರಾಗ್ಯ ಜಾಗೃತವಾಗಿರಲಿಕ್ಕಿಲ್ಲ. ಆತ ಹೆಚ್ಚು ಮಾತನಾಡುವುದೂ ಇಲ್ಲ, ಭೋಗಗಳಲ್ಲಿಯೂ ಹೆಚ್ಚು ರುಚಿ ಇಲ್ಲ, ಏನಾಗಿ ಬಿಟ್ಟಿದೆ, ಏನೂ ಸಹ ಗೊತ್ತಾಗುತ್ತಿಲ್ಲ, ಅವನು ನಮ್ಮನ್ನು ಬಿಟ್ಟು ಹೋಗುವಂತಾಗದಿರಲಿ. ಒಬ್ಬನೇ ಮಗನಿದ್ದಾನೆ ನಮ್ಮದೇನಾಗುತ್ತದೆ? ಆತನನ್ನು ಹೇಗಾದರೂ ಆಗಲಿ ತಡೆಯಬೇಕು.

ತಾಯಿ ತಂದೆಗಳಿಬ್ಬರೂ ಒಂದು ದಿನ ಮನಸ್ಸಿನಲ್ಲಿದ್ದ ವಿಷಯವನ್ನು ಕೇಳಿಯೇ ಬಿಟ್ಟರು- ಮಗನೇ ನಿನಗೆ ಸಂಸಾರದ ಅಸಾರತೆಯ ಚಿಂತನೆ ಆಗುತ್ತಲಿದೆ. ನಿನಗೆ ಈ ಸಂಸಾರ ನಿರಸವಾಗಿ ತೋರುತ್ತದೆಯೆ? ಮಗ ಹೇಳಿದೆ-ಹೌದು ಅಮ್ಮಾ; ಹೌದು ಅಪ್ಪಾ, ಅಂತಹ ಚಿಂತನೆ ಮನಸ್ಸಿನಲ್ಲಿ ನಡೆಯುತ್ತಲಿದೆ. ಇದು ನಿಮಗೆ ಹೇಗೆ ಗೊತ್ತಾಯಿತು ನನಗೆ ತಿಳಿಸಿರಿ. ಸಾಕು ನಾವು ತಿಳಿದೆವು. ನಿನ್ನ ಈ ಭಾವನೆಗಳು ಈಡೇರಲಿ ಎಂದು ನಾವು ಬಯಸುತ್ತೇವೆ. ಮಗನು ಹೇಳಿದ-ಒಳ್ಳೆಯದು, ಬಹಳ ಒಳ್ಳೇಯದಾಗುತ್ತದೆ. ಒಂದು ವೇಳೆ ತಾವು ನಮ್ಮ ಈ ಭಾವನೆಗಳನ್ನು ಸಮರ್ಥಿಸುವಿರೆಂದರೆ ಏನು ಹೇಳುವುದು. ನಾವು ಯಾವಾಗಲೂ ಈ ವಿಷಯ ತಿಳಿದು ದು:ಖ ಪಡುತ್ತೀರಿ ಎಂದು ವಿಚಾರ ಮಾಡುತ್ತಿದ್ದೆವು. ಈ ಕಾರಣದಿಂದ ನಮ್ಮ ಮನಸ್ಸಿನಲ್ಲಿದ್ದ ವಿಚಾರವನ್ನು ನಿಮಗೆ ಹೇಳುತ್ತಿರಲಿಲ್ಲ. ಆದರೆ ಈಗ ನೀವು ತಿಳಿದು ಬಿಟ್ಟಿದ್ದೀರಾ ಬಹಳ ಒಳ್ಳೆಯದು. ಈಗ ನಮಗೆ ಬಹುಬೇಗನೆ ಆ ಸೌಭಾಗ್ಯ ದೊರಕಲಿ, ಆತ್ಮಿಕ ಶಾಂತಿಯ ಮಾರ್ಗದ ಉಪಾಯವನ್ನು ನಾನು ಹುಡುಕುತ್ತಿದ್ದೇನೆ. ಅದು ನನಗೆ ದೊರೆಯಲಿ, ಮಗನೇ ಅವಶ್ಯವಾಗಿ ದೊರೆಯುತ್ತದೆ ಇದರಲ್ಲಿ ಚಿಂತಿಸುವ ಯಾವ ಸಂಗತಿಯೂ ಇಲ್ಲ. ಸಾಕು ನೀನು ಒಂದೇ ಕೆಲಸ ಮಾಡಬೇಕು. ನಾವು ನಿನಗೆ ಜನ್ಮ ನೀಡಿದ್ದೇವೆ,

1.

ಒಳ್ಳೆಯ ಸಂಸ್ಕಾರ ನೀಡಿ ಪಾಲನೆ-ಪೋಷಣೆ ಮಾಡಿ ದೊಡ್ಡವನನ್ನಾಗಿ ಮಾಡಿದ್ದೇವೆ, ನಿನ್ನನ್ನು ಯೋಗ್ಯನನ್ನಾಗಿ ಮಾಡಿದ್ದೇವೆ, ಎಲ್ಲವನ್ನೂ ಮಾಡಿದ್ದೇವೆ. ಆದರೆ ಈಗ ನೀನು ಕಡಿಮೆ ಎಂದರೆ ನಮ್ಮ ಒಂದು ಮಾತನ್ನು ಒಪ್ಪಬೇಕು ಮತ್ತೆ ನಿನಗೆ ಯಾವ ಮಾರ್ಗದಲ್ಲಿ ಹೋಗಬೇಕೋ ಹೊರಟು ಹೋಗು ನಾವು ನಿನ್ನನ್ನು ತಡೆಯುವುದೇ ಇಲ್ಲ. ನೀನು ಯೋಚಿಸಿರುವ ಮಾರ್ಗ ತುಂಬಾ ಒಳ್ಳೆಯದಾಗಿದೆ, ನಾವು ಸಹ ಅಂತಹ ಮಾರ್ಗದಲ್ಲಿ ಸಾಗುವಂತಾಗಲಿ ಎಂದು ಬಯಸುತ್ತೇವೆ ಆದರೆ ಈಗ ಒಂದು ಮಾತನ್ನು ಒಪ್ಪಿಕೋ. ಹೇಳು ಅಮ್ಮಾ ಅದೇನು ವಿಷಯ? ಅವಶ್ಯವಾಗಿ ಒಪ್ಪುವೆ, ಇದರಲ್ಲಿ ಏನಿದೆ? ತಾವು ನಮ್ಮ ಮಾರ್ಗದಲ್ಲಿ ಬಾಧಕರಾಗುತ್ತಿಲ್ಲವೆಂದರೆ ತಮ್ಮ ಇಚ್ಛೆಯು ಅವಶ್ಯವಾಗಿ ಪೂರ್ಣವಾಗುತ್ತದೆ. ನನಗಂತೂ ಮೋಕ್ಷ ಮಾರ್ಗ ಬೇಕು. ಸಾಕು ಮಗನೇ ನೀನು ಹೊರಟು ಹೋಗು ಆದರೆ ವಿವಾಹ ಮಾಡಿಕೊಂಡು ಹೊರಟು ಹೋಗು. ಇದೇನು ಮಾತು ಅಮ್ಮಾ? ಹೋಗುವುದೇ ಇರುವಾಗ ವಿವಾಹ ಯಾಕೆ? ವಿವಾಹ ಮಾಡಿಕೊಳ್ಳುತ್ತೇನೆಂದರೆ ಅವರನ್ನು ಸಂಭಾಳಿಸಲು ಇರುವುದು ಅವಶ್ಯವಾಗುತ್ತದೆ. ಇಲ್ಲವಾದಲ್ಲಿ ಅವರು ಬಹಳ ದು:ಖಿಗಳಾಗುತ್ತಾರೆ, ಅವರನ್ನು ಬಿಟ್ಟು ಹೋದರೆ ಅವರಿಗೆ ಬಹಳ ದುಃಖವಾಗುತ್ತದೆ. ನಾವು ಅವರ ದುಃಖದಿಂದ ದೂರವಿರಲು ಬಯಸುತ್ತೇವೆ. ಆದ್ದರಿಂದ ವಿವಾಹ ಯಾಕೆ ಮಾಡಿಕೊಳ್ಳಲಿ, ಯಾಕೆ ಸಂಬಂಧ ಮಾಡಬೇಕು. ಯಾಕೆಂದರೆ **'ಸಂಯೋಗತೋ ದುಃಖ ಮನೇಕ ಭೇದಂ'** ಸಂಯೋಗವು ಅನೇಕ ಪ್ರಕಾರದ ದು:ಖಗಳನ್ನು ನೀಡುತ್ತದೆ. ಯಾವ ವಸ್ತುಗಳಿಂದ ವಿಯೋಗ ನಿಶ್ಚಿತವಿದೆ, ಅವುಗಳ ಸಂಯೋಗದಿಂದ ಏನು ಲಾಭವಿದೆ? ಮೊದಲೇ ನಾನು ಇವೆಲ್ಲವುಗಳನ್ನು ಬಿಡಲು ಬಯಸುತ್ತೇನೆ, ಮದುವೆ-ವಿವಾಹದಿಂದ ಮತ್ತೇನೂ ಪ್ರಯೋಜನವಿದೆ. ಅಮ್ಮಾ ಹೇಳುತ್ತಾಳೆ-ಮಗನೇ ಇಲ್ಲ! ಇವೆಲ್ಲವುಗಳ ಚಿಂತೆಯನ್ನು ನೀನು ಮಾಡಬೇಡ. ನಾವೆಲ್ಲ ಸರಿಪಡಿಸಿಕೊಳ್ಳುತ್ತೇವೆ, ಅವರ ಬೇಕು-ಬೇಡಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆ. ನೀನು ಚಿಂತೆ ಮಾಡಬೇಕಾದ ಯಾವ ವಿಷಯವು ಇಲ್ಲ, ನೀನು ವಿವಾಹವಾಗು ಸಾಕು ಇಷ್ಟೇ ವಿಷಯ.

ಅಮ್ಮಾ ವಿವಾಹ ಮಾಡಿಸುವುದರಿಂದ ಏನಾಗುತ್ತದೆ? ಎನ್ನುವುದು ನನಗೆ ತಿಳಿಯುತ್ತಿಲ್ಲ. ಈ ಸಂಸಾರ ಸುಖ ಭೋಗಿಸಬೇಕಾಗಿಲ್ಲ ಯಾಕೆಂದರೆ ಇವುಗಳನ್ನು ಭೋಗಿಸುವಾಗ ಕರ್ಮಬಂಧವಾಗುತ್ತದೆ ಮತ್ತೆ ಈ ಆತ್ಮನು ಸಂಸಾರದಲ್ಲಿಯೇ ಭ್ರಮಣೆ ಮಾಡುತ್ತಿರುತ್ತಾನೆ, ನಮಗಾದರೋ ಮೋಕ್ಷ ಪಡೆಯಬೇಕಾಗಿದೆ. ಈ ಸಂಸಾರವನ್ನು ಅಪ್ಪಿಕೊಳ್ಳಲು ಅಲ್ಲ, ತಾವು ನನಗೆ ಅನುಮತಿ ಕೊಡಿ ನಾವು ಮೋಕ್ಷ, ಮಾರ್ಗದಲ್ಲಿ ಹೋಗುತ್ತೇವೆ ಹಾಗೂ ತಾವು ಹೇಳುತ್ತಿದ್ದೀರಿ ವಿವಾಹ ಮಾಡಿಸುವುದು ಅವಶ್ಯವೆಂದು ಇದರ ನಂತರ ನಾನು ಹೊರಟು ಹೋಗುತ್ತೇನೆ ಕೇಳು ಅಮ್ಮ ಮತ್ತೆ ಯಾರೂ ನನ್ನನ್ನು ತಡೆಯಲಾರರು. ಈ ಮಾತನ್ನು ನಾನು ಒಪ್ಪಬಲ್ಲೆ ಆದರೆ ಇದರ ನಂತರ ಮತ್ತೆ ಯಾವ ಮಾತನ್ನು ಒಪ್ಪುವುದಿಲ್ಲ, ಇದೇ ಕೊನೆಯದು. ತಂದೆ-ತಾಯಿಗಳಿಬ್ಬರು ಒಪ್ಪಿದರು ಹಾಗೂ ಸರಿ ಎಂದು ಹೇಳಿದರು. ಇಬ್ಬರೂ ಮೋಹದ ಮೂಲಕ ತಮ್ಮ ಮಾತಿಗೆ ಒಪ್ಪಿಸಿದರು. ಈಗ ಮದುವೆ ಸಿದ್ಧತೆಗಳು ಪ್ರಾರಂಭವಾದವು.

ಅವರ ಪರಿವಾರ ರಾಜಪರಿವಾರಕ್ಕೆ ಸಮನಾಗಿ ವೈಭವ ತಾಳಿ ಶ್ರೇಷ್ಠವಾಗಿದ್ದಿತು. ಶ್ರೇಷ್ಠಿಯ ಮಗ ಬಹಳ ರೂಪವಂತ ಸುಂದರ ಗುಣ ಸಂಪನ್ನನಾಗಿದ್ದನು. ಆದ್ದರಿಂದ ಅನೇಕ ರಾಜರು, ಶ್ರೇಷ್ಠಿಗಳು, ಸಾಹುಕಾರರು, ತಮ್ಮ ಕನ್ಯೆಯರ ವಿವಾಹ ಮಾಡಲು ಇಚ್ಛುಕರಾಗಿದ್ದರು. ಹಿಂದಿನ

ಕಾಲದಲ್ಲಿ ಅನೇಕ ಕನ್ಯೆಯರೊಂದಿಗೆ ವಿವಾಹ ಮಾಡುವ ಪರಿಪಾಠ ಇದ್ದಿತು. ಜನರು ಶಕ್ತಿ, ವೈಭವದಿಂದ ಕೂಡಿದ್ದರು. ಇಂದು ಆ ಸಮಯವಲ್ಲ. ಒಬ್ಬರನ್ನೇ ನೋಡಿಕೊಳ್ಳುವುದು ಬಹಳ ಕಠಿಣವಿದೆ. ಅನೇಕರನ್ನು ಹೇಗೆ ತಾನೇ ನೋಡಿಕೊಂಡಾರು. ಅನೇಕ ಮದುವೆಗಳನ್ನು ಒಳ್ಳೆಯದೆಂದು ಒಪ್ಪಲಾಗದು. ಮಾನವನ ಶಕ್ತಿಯು ಸಹ ಮೆಲ್ಲ ಮೆಲ್ಲನೆ ಕಡಿಮೆ ಆಗುತ್ತಾ ಇದ್ದು ವೈಭವ ಹೀನವಾಗುತ್ತಿದ್ದು ಇಂದಿನ ವಾತಾವರಣ ಸರಿಯಾಗಿಲ್ಲ ಸಂಸಾರ ನಡೆಸುವುದು ಬಹಳ ಕಷ್ಟಮಯವಾಗುತ್ತಿದೆ. ಮಾನಸಿಕ ಅಶಾಂತಿಗಳು ಸಹ ಬಹಳ ಹೆಚ್ಚಾಗುತ್ತಿವೆ. ಕಾಲಕ್ಕನುಗುಣವಾಗಿಯೇ ಜನರು ನಡೆಯಬೇಕಾಗಿದೆ. ಇಂದಿನ ಕಾಲದ ಲೆಕ್ಕದಲ್ಲಿ ಒಬ್ಬ ಪುರುಷನಿಗೆ ಇಬ್ಬರು ಪತ್ನಿಯರೆಂದರೆ ಸರಿ ಎಂದು ಒಪ್ಪುವುದಿಲ್ಲ ಯಾಕೆಂದರೆ ಜಗಳದ ಕೇಂದ್ರವಾಗುತ್ತದೆ. ಆದರೆ ಚತುರ್ಥಕಾಲದಲ್ಲಿ ಮಹಾಪುರುಷರ ಸಮಯದಲ್ಲಿ ಸಾವಿರಾರು ರಾಣಿಯರು ಇರುತ್ತಿದ್ದರು. ಅಷ್ಟೇ ತ್ಯಾಗ ಸಹ ಹೆಚ್ಚಾಗಿರುತ್ತಿದ್ದಿತು. ತ್ಯಾಗ ಮಾಡುವುದು ಕಠಿಣವಿದ್ದಿತು, ಯಾಕೆಂದರೆ ಇಷ್ಟೊಂದು ವೈಭವ ವಿದ್ದರೂ ಇವೆಲ್ಲವನ್ನು ಬಿಡುವುದು ತ್ಯಾಗ ಮಾಡುವುದು ಸರಳ ಕಾರ್ಯವಾಗಿರಲಿಲ್ಲ. ಇಂದು ಸರಳವಾಗಿದೆ, ಆದರೆ ಜನರು ಶಕ್ತಿ ಹೀನರಾಗಿದ್ದಾರೆ, ಮಾನಸಿಕ ಶಕ್ತಿ ಕಡಿಮೆಯಾಗುತ್ತಾ ಸಾಗಿದೆ, ಶಾರೀರಕ ಸಂಹನನ ಕಡಿಮೆಯಾಗುತ್ತಾ ಸಾಗುತ್ತಲಿದೆ. ಅಲ್ಲಿ ಆ ಪರಿವಾರದಲ್ಲಿ ರಾಜಪರಿವಾರದ ಹಾಗೇ ಸಿದ್ಧತೆಗಳು ಜೋರಾಗಿ ನಡೆಯ ತೊಡಗಿದವು ನಾಲ್ಕು-ನಾಲ್ಕು ರೂಪವಂತ ಸುಶೀಲ ಗುಣ ಸಂಪನ್ನ ಕನ್ಯೆರೊಂದಿಗೆ ವಿವಾಹವಾಯಿತು, ವಿವಾಹದ ನಂತರ ನವ ವಧುಗಳು ಮನೆಗೆ ಬಂದರು ಹಾಗೂ ಮಹಲಿನಲ್ಲಿ ತಮ್ಮ ಶಯನಗೃಹದಲ್ಲಿ ಕುಳಿತ್ತಿದ್ದರು.

ತಾಯಿ ತಂದೆಗಳ ಇಚ್ಛೆಯಂತೆ ಮಗ ವಿವಾಹ ಮಾಡಿಕೊಂಡ, ಆದರೆ ಆತನಿಗೆ ಕಿಂಚಿತ್ತೂ ಸಹ ಅದರಿಂದ ಪ್ರಸನ್ನತೆ ಇರಲಿಲ್ಲ. ಶರೀರದ ಮೇಲೆ ಆಭರಣಗಳಿದ್ದವು. ಯಾರೊಂದಿಗೂ ಯಾವುದೇ ರೀತಿಯ ಪ್ರೀತಿ, ಸ್ನೇಹ, ಆಕರ್ಷಣೆ ಅಥವಾ ಪ್ರಯೋಜನವೇನೂ ಇರಲಿಲ್ಲ. ಭೋಗಗಳೊಂದಿಗೆ ಯಾವುದೇ ಪ್ರಕಾರದ ರಾಗವಿರಲಿಲ್ಲ. ಸಾಕು; ರಾತ್ರಿಯಲ್ಲಿ ಕುಳಿತು ಬೆಳಗಾದೀತು ಹಾಗೂ ನಾವು ಈ ಸಂಸಾರ ಪರಿಗ್ರಹ, ಮನೆ ಪರಿವಾರದಿಂದ ಮುಕ್ತರಾಗಿ ಗುರು ಚರಣಗಳಲ್ಲಿ ದೀಕ್ಷೆ ಧಾರಣೆ ಮಾಡುತ್ತೇನೆ-ಎಂದು ವಿಚಾರ ಮಾಡತೊಡಗಿದ. ತಾಯಿ ತಂದೆಗೆ ಈ ಮೊದಲೇ ಹೇಳಿ ಬಿಟ್ಟಿದ್ದ, ಅವರೂ ಅನುಮತಿಯನ್ನು ನೀಡಿದ್ದರು. ನಾಲ್ವರೂ ನವ-ವಧುಗಳು ಏಕಕಾಲದಲ್ಲಿ ಅವನನ್ನು ನೋಡುತ್ತಾ ಕುಳಿತಿದ್ದರು. ಏನು ಮಾಡುವುದು ಇವರಂತೂ ಸಾಧುಗಳ ಹಾಗೇ ಕುಳಿತಿದ್ದಾರೆ ಎಂದು ಯೋಚಿಸುತ್ತಾ ಚರ್ಚೆಯಲ್ಲಿ ತೊಡಗಿದರು. ಅನೇಕ ಪ್ರಶ್ನೋತ್ತರಗಳು, ಕಥೆಗಳು, ದೃಷ್ಟಾಂತಗಳು ಎರಡೂ ಕಡೆಗಳಿಂದ ಆದವು, ಆದರೆ ಅವು ಅನುರಾಗ ವರ್ಧಕ ಪ್ರಭಾವ ಬೀರುವಲ್ಲಿ ಸಮರ್ಥವಾಗಲಿಲ್ಲ.

ಈ ಮಧ್ಯೆ ಕಾಡಿನಲ್ಲಿದ್ದ ಕಳ್ಳರ ಸರದಾರನಿಗೆ ಅರ್ಹದ್ದಾಸನ ಮಗನ ವಿವಾಹ ಅತ್ಯಂತ ವೈಭವದಿಂದ ಆಯಿತೆಂದು ತಿಳಿದು ಆತ-ವಿವಾಹದ ಶುಭ ಘಳಿಗೆ, ಒಳ್ಳೆಯ ಅವಕಾಶ ದೊರೆಕಿದೆ, ನನ್ನದು ಕೆಲಸವಾಗುತ್ತದೆ ಎಂದು ವಿಚಾರ ಮಾಡಿ ಆತ 500 ಸಹಚರರೊಂದಿಗೆ ಕಳ್ಳತನ ಮಾಡಲು ಹೊರಟ. ಕಾಡಿನಲ್ಲಿ ಇರುವವರು ಯಾರು-ಯಾರು ಎಂಬುದು ನಿಮಗೆ ತಿಳಿದಿದೆ. ಒಂದು ವರ್ಗ ಮನುಷ್ಯರಿಗೆ ಹೆದರುವ ದೊಡ್ಡ ದೊಡ್ಡ ತಿರ್ಯಂಚ ಇತ್ಯಾದಿ. ಇನ್ನೊಂದು ವರ್ಗ ಪೋಲಿಸರಿಗೆ ಹೆದರುವ ಕಳ್ಳರು, ದರೋಡೆಗಾರರು ಇತ್ಯಾದಿ ಮತ್ತೊಂದು ವರ್ಗ ಪಾಪಗಳಿಗೆ

ಹೆದರುವ ಹಾಗೂ ತಮ್ಮ ಆತ್ಮನಲ್ಲಿ ಲೀನರಾಗಿರುವ ಮುನಿ ಮಹಾರಾಜ ಮುಂತಾದವರು. ಈ ಮೂರು ಪ್ರಕಾರದ ಪ್ರಾಣಿಗಳು ಕಾಡಿನಲ್ಲಿರುತ್ತವೆ. ಅರ್ಧರಾತ್ರಿಯ ಸಮಯ, ನಾಲ್ಕೂ ಕಡೆಗೆ ಕತ್ತಲು ಕವಿದಿದೆ. ಶ್ರೇಷ್ಠಿಯ ಮನೆಯಲ್ಲಿ ರತ್ನಗಳ ಪ್ರಕಾಶ ಹೊಳೆಯುತ್ತಿದ್ದಿತು. ಅವರು ಶ್ರೇಷ್ಠಿಯ ಭವನದಲ್ಲಿ ಬಂದಾಗ ಎಲ್ಲರಿಗೂ ದರೋಡೆಗಾರರು ಬಂದಿದ್ದಾರೆಂದು ತಿಳಿಯಿತು ಆದರೆ ಯಾರಲ್ಲಿಯೂ ಏನಾದರೂ ಮಾಡುತ್ತೇವೆ ಎನ್ನುವ ಶಕ್ತಿ ಇರಲಿಲ್ಲ. ತಾಯಿ ಜಿನಮತಿಗೂ ತಿಳಿಯಿತು ಆಗ ಅವಳು ನಾವು ಮಾತನಾಡುತ್ತೇವೆ ಮಗನಂತೂ ಬೆಳಿಗ್ಗೆ ಹೊರಟಿದ್ದಾನೆ ಈ ವೈಭವವನ್ನೇನು ಮಾಡಲಿ ಎಂದು ಯೋಚಿಸ ತೊಡಗಿದಳು. ಈ ಎಲ್ಲ ಸಂಪತ್ತನ್ನು ಇವರಿಗೆ ಕೊಟ್ಟುಬಿಡುತ್ತೇನೆ ಹಾಗೂ ಇವರು ಮಗನಿಗೆ ಹೋಗದಂತೆ ತಡೆದರೆ ಒಳ್ಳೆಯದು. ಅಮ್ಮಾ ಹೋಗಿ ದರೋಡೆಕೋರರ ಸರದಾರನಿಗೆ ಎಲ್ಲ ವೃತ್ತಾಂತವನ್ನು ಹೇಳಿ ಆತ ಹೋಗುವುದನ್ನು ನಿಲ್ಲಿಸು ಎಂದಳು ಸರದಾರನು ಎಲ್ಲ ಮಾತುಗಳನ್ನು ಕೇಳಿ ಶ್ರೇಷ್ಠಿಯ ಮಗನ ಶಯನದ ಕೊಠಡಿಯ ಕಡೆಗೆ ಹೊರಟನು.

ಶಯನ ಕೊಠಡಿಯ ಹೊರಗಡೆ ನಿಂತ ಆತ ಒಳಗಿನ ದೃಶ್ಯವನ್ನು ನೋಡಿದ–ರಾಜಕುಮಾರನಂತಹ ನವಯುವಕ ಮತ್ತು ನಾಲ್ಕು ನವವಧುಗಳು ಕುಳಿತ್ತಿದ್ದರು, ನವವಧುಗಳು ಪೂರ್ಣ ಅಲಂಕಾರದಿಂದ ಅಲಂಕರಿಸಲ್ಪಟ್ಟಿದ್ದರು ಹಾಗೂ ಕೈ ಜೋಡಿಸಿ ಪ್ರಾರ್ಥನೆಯ ಸ್ವರದಲ್ಲಿ ಏನೋ ಮಾತನಾಡುತ್ತಿದ್ದರು. ಸರದಾರ ಅಡಗಿಕೊಂಡು ನಿಂತು ಕೊಂಡ ಹಾಗೂ ಅವರ ಮಾತುಗಳನ್ನು ಕೇಳ ತೊಡಗಿದ. ಆ ಮಾತುಗಳಲ್ಲಿ ಆತನಿಗೆ ಆಸಕ್ತಿ ಉಂಟಾಯಿತು ಹಾಗೂ ಆತ ಆ ಮಾತುಗಳಲ್ಲಿ ತನ್ಮಯನಾದ. ಹೊರಗಡೆಯಿಂದ ಸರದಾರನ ಜೊತೆಗಾರರ ಕೆಲವು ಶಬ್ದಗಳು ಕೇಳುತ್ತಿದ್ದರೆ, ಒಳಗಿನಿಂದ ನವಯುವಕನು ಕೂಗಿ ಹೊರಗಡೆ ಯಾರಿದ್ದೀರಾ? ಎಂದು ಕೇಳಿದ. ಹೊರಗಿನಿಂದ ಸರದಾರ–ನಾನು ವಿದ್ಯತ್ ಪ್ರಭವ ಚೋರನೆಂದು ಹೇಳಿದ. ಆಗ ಕುಮಾರನು–ಬಾಗಿಲು ತೆಗೆದಿದೆ ಒಳಗೆ ಬಂದು ಬಿಡು, ಎಂದು ಹೇಳಿದ ಸರದಾರ ತನ್ನ ಜೊತೆಗಿದ್ದ 500 ಕಳ್ಳರೊಂದಿಗೆ ಒಳಗೆ ಬಂದ, ಅವರೆಲ್ಲರನ್ನು ನೋಡಿ ನಾಲ್ವರೂ ನವವಧೂಗಳು ಭಯದಿಂದ ಕಂಪಿಸ ತೊಡಗಿದರು. ಕುಮಾರ ಅವರೆಲ್ಲರಿಗೂ ಕುಳಿತುಕೊಳ್ಳುವಂತೆ ಹೇಳಿದ ಇವರೆಲ್ಲರು ಯಾಕೆ ಬಂದಿದ್ದಾರೆ, ನಿಮಗೇನು ಬೇಕು? ಸರದಾರನು ನಾವು ಕಳ್ಳತನ ಮಾಡಲು ಬಂದಿದ್ದೇವೆ ಎಂದಾಗ, ಕುಮಾರ ಕೇಳಿದ–ಎಷ್ಟು ಹಣ ಬೇಕು? ಎಷ್ಟು ಸಿಗುವುದೋ ಅಷ್ಟೂ ಬೇಕು– ಆಗ ಕುಮಾರ–ಏನು ಬೇಕೊ ಎಲ್ಲವನ್ನು ತೆಗೆದುಕೋ, ಈ ಖಜಾನೆ ತೆಗೆದಿದೆ. ಎಷ್ಟು ಬೇಕೋ ಅಲ್ಲಿ ತೆಗೆದುಕೋ, ಎಂದು ಹೇಳಿದ. ನವವಧುಗಳು ಇದೆಲ್ಲವನ್ನು ಕೇಳಿ ಚಿಂತೆಯಲ್ಲಿ ಮುಳುಗಿದರು. ಎಲ್ಲರೂ ಆಶ್ಚರ್ಯಚಕಿತರಾಗಿ ಒಬ್ಬರನ್ನೊಬ್ಬರು ನೊಡತೊಡಗಿದರು.

ಒಂದು ಮಾತನ್ನು ಗಮನದಲ್ಲಿಡಬೇಕು–ಯಾವಾಗಲಾದರೂ ಯಾವುದೇ ವಸ್ತು ಎಲ್ಲಿಯೋ ಬಿದ್ದಿದ್ದರೂ–ಅದನ್ನು ಬೇರೆ ಯಾರೂ ನೋಡುತ್ತಿಲ್ಲ ಎನ್ನುವುದಾದರೆ ಯಾವುದೇ ವ್ಯಕ್ತಿ ಅದನ್ನು ಬೇಗನೆ ಎತ್ತಿಕೊಳ್ಳುತ್ತಾನೆ. ಆದರೆ ಎಲ್ಲರೂ ಒಂದು ವೇಳೆ ನೋಡುತ್ತಿದ್ದರೆ ಅದನ್ನು ಎತ್ತಿಕೊಳ್ಳುವುದಿಲ್ಲ. ಇದು ಒಂದು ರೀತಿಯ ಕಳ್ಳತನವೆಂದು ಅವರಿಗೆ ಗೊತ್ತಿರುವುದಿಲ್ಲ. ಯಾರದೋ ಇಟ್ಟಿರುವ ವಸ್ತು, ಬಿದ್ದ ವಸ್ತು, ಮರೆತು ಹೋದ ವಸ್ತು, ನಮ್ಮದಲ್ಲದ ವಸ್ತುವನ್ನು ತೆಗೆದುಕೊಳ್ಳುವುದು ಕಳ್ಳತನವಾಗಿದೆ. ಸರದಾರ ನೋಡಿದ ಮತ್ತೆ ಕೇಳಿದ ಆದರೆ ಜೊತೆಗಾರರಿಗೆ ಈಗ ನಿಲ್ಲಿ–ತಾಳಿ ಎಂದು ಹೇಳಿದ, ಸ್ವಲ್ಪ ಸಮಯದ ನಂತರ ನೋಡೋಣ, ಎಲ್ಲರ ಸಮ್ಮುಖದಲ್ಲಿ ಹೇಗೆ ತೆಗೆದುಕೊಳ್ಳುವುದು, ರಹಸ್ಯವೇನು

ಇಲ್ಲವಲ್ಲ? ಸರದಾರ ಕುಮಾರನಿಗೆ–ನಮಗೆ ಸ್ವಲ್ಪ ಸಂದೇಹವಿದೆ ಅದನ್ನು ನೀವು ಬಗೆಹರಿಸಿ–ನೀವು ಈ ವೈಭವ–ಸಂಪತ್ತನ್ನು ಹೀಗೆ ಯಾಕೆ ಕೊಡುತ್ತಿದ್ದೀರಾ? ಎಂದು ಕೇಳಿದ. ಆಗ ಕುಮಾರನು–ನಾನಂತೂ ಈ ವೈಭವ–ಸಂಪತ್ತನ್ನು ಎಲ್ಲವನ್ನು ಬಿಟ್ಟು ಹೋಗುವವನಿದ್ದೇನೆ. ಆದ್ದರಿಂದ ನೀನು ಕೇಳಿದೆ, ಆದ್ದರಿಂದ ನಿನಗೆ ಕೊಡುತ್ತಿದ್ದೇನೆ ಎಂದು ಹೇಳಿದ. ಆಗ ಸರದಾರನು–ಒಳ್ಳೆಯದು, ಹಾಗಾದರೆ ನೀವು ಇವೆಲ್ಲವನ್ನು ಬಿಟ್ಟು ಎಲ್ಲಿಗೆ ಹೋಗುವವರಿದ್ದೀರಿ? ನಾವಂತೂ ಕಾಡಿನೊಳಗೆ ಹೋಗುತ್ತವೆ, ದೀಕ್ಷೆ ಧಾರಣೆ ಮಾಡುತ್ತೇವೆ. ಅಲ್ಲಿ ಯಾರಿದ್ದಾರೆ? ಅಲ್ಲಿ ನಮ್ಮ ಗುರುಗಳಿದ್ದಾರೆ. ದೀಕ್ಷೆ ಧಾರಣೆ ಮಾಡಿ ಏನು ಮಾಡುತ್ತೀರಾ? ನಾವು ಆತ್ಮ ಸಾಧನೆಯಿಂದ ನಮ್ಮ ಕರ್ಮಗಳನ್ನು ನಾಶ ಮಾಡುತ್ತೇವೆ. ನಿಮ್ಮ ಬಳಿ ಯಾವ ಯಾವ ಕರ್ಮವಿದೆ? ಕರ್ಮವನ್ನು ನಮ್ಮಂತವರು ಮಾಡುತ್ತೇವೆ. ನೀವಂತೂ ಅಂತಹ ಯಾವುದೇ ಕಳ್ಳತನ ಹಿಂಸೆ ಮುಂತಾದವುಗಳನ್ನು ಮಾಡುವುದಿಲ್ಲ ಮತ್ತೆ ಯಾಕೆ? ಹಾಗಲ್ಲ ಸಹೋದರ ಹಾಗಲ್ಲ, ಅನಾದಿಕಾಲದಿಂದ ಕರ್ಮಗಳನ್ನು ಮಾಡಿದ್ದೇವೆ. ಅನಂತಕಾಲವಾಯಿತು. ಆ ಕರ್ಮಗಳು ಆತ್ಮನಲ್ಲಿ ಕುಳಿತಿವೆ, ಆ ಕರ್ಮಗಳನ್ನು ಹೊರಹಾಕಲು ತಪಸ್ಸು ಮಾಡುತ್ತೇವೆ ಹಾಗೂ ಕರ್ಮಗಳ ಕ್ಷಯ ಮಾಡುತ್ತೇವೆ. ಆಗ ಯಾವಾಗಲೋ ಮೋಕ್ಷ ಪಡೆಯುತ್ತೇವೆ. ಸರದಾರ–ವೈಭವವನ್ನು ಭೋಗಿಸುವುದರಿಂದ ಏನಾಗುತ್ತದೆ? ಎಂದು ಕೇಳಿದ. ಕುಮಾರನು–ವೈಭವವನ್ನು ಭೋಗಿಸುವುದರಿಂದ ಪಾಪವಾಗುತ್ತದೆ ಎಂದು ಹೇಳಿದ, ಪಾಪದಿಂದ ಏನಾಗುತ್ತದೆ? ಪಾಪದಿಂದ ದುರ್ಗತಿ ಆಗುತ್ತದೆ. ದುರ್ಗತಿಯಿಂದ ಏನಾಗುತ್ತದೆ? ದುರ್ಗತಿಯಿಂದ ದುಃಖ ಸಿಗುತ್ತದೆ. ಸರಿ, ವೈಭವವನ್ನು ಭೋಗಿಸುವುದರಿಂದ ಪಾಪವಾಗುತ್ತದೆ. ಪಾಪದಿಂದ ದುರ್ಗತಿಯಾಗುತ್ತದೆ, ದುರ್ಗತಿಯಲ್ಲಿ ದುಃಖವಾಗುತ್ತದೆ. ಪಾಪ ಕರ್ಮ ಭೋಗಿಸುತ್ತಿದ್ದರೆ ಆ ಸಮಯ ನಮ್ಮ ಆತ್ಮನು ಅನೇಕ ಪ್ರಕಾರದ ದುಃಖಗಳಿಂದ ಪೀಡಿತನಾಗುತ್ತಾನೆ. ಕುಮಾರನ ವೈರಾಗ್ಯ ತುಂಬಿದ ಸೌಮ್ಯ ದೃಷ್ಟಿ ಮತ್ತು ಮಾತಿನ ಪ್ರಭಾವ ಆ ಕಳ್ಳರ ಮೇಲೆ ಉಂಟಾಯಿತು. ವಿದ್ಯುತ್, ಪ್ರಭವನು–ನೋಡಿ, ಇವರಂತು ಅಂತಹ ಯಾವ ಪಾಪವನ್ನು ಮಾಡಿಲ್ಲ. ಆದರೂ ಸಹ ಇವೆಲ್ಲವನ್ನು ಬಿಡುವವನಿದ್ದಾನೆ. ನಾವಂತೂ ಅದೆಷ್ಟು ಹಿಂಸೆ ಮಾಡಿದ್ದೇವೆಯೋ ಜೀವನದಲ್ಲಿ, ಅದೆಷ್ಟು ಜನರ ಲೂಟಿ ಮಾಡಿದ್ದೇವೆಯೋ, ಗೊತ್ತಿಲ್ಲ. ಜೀವನವಿಡೀ ಅದೆಷ್ಟು ಪಾಪಗಳನ್ನು ಮಾಡಿದ್ದೇವೋ ಗೊತ್ತಿಲ್ಲ. ಈ ಜೀವನದಲ್ಲಿಯೇ ಇಷ್ಟು ಮಾಡಿರುವಾಗ ಅನಂತಕಾಲದಲ್ಲಿ ಎಷ್ಟಿರಬೇಕೆಂಬುದಕ್ಕೆ ಮಿತಿಯೇ ಇಲ್ಲ ಇವರಂತೂ ಈ ಜೀವನದಲ್ಲಂತೂ ಇಂತಹದೇನನ್ನು ಮಾಡಿಲ್ಲ, ದೇವಾಂಗನೆಯರಂತಹ ಅತ್ಯಂತ ರೂಪವತಿ ನವಯುವತಿಯರು ಆತನ ಆಜ್ಞಾಪಾಲನೆಗಾಗಿ ತತ್ಪರರಾಗಿದ್ದಾರೆ, ಅಪಾರವಾದ ಧನ ವೈಭವವಿದೆ ಆದರೂ ಯಾವುದರ ಯಾವ ಪ್ರಭಾವವು ಇಲ್ಲ. ಇಂತಹ ವಿಭೂತಿಗಳನ್ನು ಬಿಟ್ಟು ಇವರು ದೀಕ್ಷೆ ತೆಗೆದುಕೊಳ್ಳುತ್ತಿದ್ದಾರೆ. ಕರ್ಮಗಳನ್ನು ಕತ್ತರಿಸಲು ತತ್ಪರರಾಗಿದ್ದಾರೆ. ನಾವಂತೂ ಜೀವನವೆಲ್ಲಾ ಕರ್ಮ ಮಾಡಿದ್ದೇವೆ ಹಾಗೂ ಅದಕ್ಕಾಗಿಯೇ ಇಲ್ಲಿಗೂ ಬಂದಿದ್ದೇವೆ. ಕುಮಾರನ ಜೀವನ ಧನ್ಯವಾಗಿದೆ. ಮಹಾನ್ ಇದೆ. ಇವರಿಂದ ನಾವು ಶಿಕ್ಷಣ ಪಡೆಯಬೇಕು. ನಮ್ಮ ಬಳಿಯೂ ಏನೂ ಕಡಿಮೆ ಇಲ್ಲ. ಸಾಕು. ನಮ್ಮ ಜೀವನದಲ್ಲಿ ಕಡಿಮೆ ಇದೆ ಎಂದರೆ ಧರ್ಮವಿಲ್ಲ. ಪಾಪಗಳಿಂದ ಪಡೆದಿರುವ ಸಾಲವನ್ನು ತೀರಿಸುವ ವಿವೇಕವಿಲ್ಲ ಒಂದು ವೇಳೆ ಈಗಲಾದರೂ ಎಚ್ಚರಗೊಂಡರೆ ನಮ್ಮ ಜೀವನ ಸಹ ಧನ್ಯವಾಗಬಲ್ಲದು. ಮುಂದಿನ ಜೀವನವೂ ಸಹ ಒಳ್ಳೆಯದಾಗಬಲ್ಲದು. ಇಲ್ಲವಾದಲ್ಲಿ ನಮ್ಮನ್ನು ದುರ್ಗತಿಯಿಂದ ರಕ್ಷಿಸುವವರು ಯಾರೂ ಕಾಣುತ್ತಿಲ್ಲ. ದುರ್ಗತಿಯಲ್ಲಿ ಹೋಗಿ ಪಾಪ ಕರ್ಮಗಳ ಫಲ ನರಕ, ನಿಗೋದಗಳ ದುಃಖವೇ ಸಿಗುತ್ತದೆ. ಎಂದು ಯೋಚಿಸಿದ.

ರಾತ್ರಿಯ ಅಂತಿಮ ಪ್ರಹರ, ರಾತ್ರಿ ಎಲ್ಲಾ ಚಿಂತನ ಧಾರೆ ಮತ್ತು ಚರ್ಚೆ ನಡೆಯಿತು. ಸರದಾರ, ಕುಮಾರನನ್ನು ತಡೆಯುವ ಕಥೆ ಹೇಳಿದ ಹಾಗೂ ಕುಮಾರ ವೈರಾಗ್ಯದ ಕಥೆ ಹೇಳಿ ಆತನನ್ನು ನಿರುತ್ತರಗೊಳಿಸುತ್ತಿದ್ದ ಕೊನೆಯಲ್ಲಿ ಸಂಸಾರ ವೃಕ್ಷದ ಕಥೆ ಹೇಳಿದ. ದೀಕ್ಷೆಗಾಗಿ ಕುಮಾರನ ದೃಢ ನಿಶ್ಚಲವನ್ನು ನೋಡಿ ಅವರೆಲ್ಲರ ವಿಚಾರಗಳು ಪರವರ್ತನೆಯಾದವು. ನಾವೆಲ್ಲರೂ ಸಹ ದೀಕ್ಷೆ ಪಡೆದು ಆತ್ಮ ಸಾಧನೆ ಮಾಡೋಣ, ಅವರೆಲ್ಲರೂ ಕುಮಾರನಿಗೆ–ತಾವು ನಮಗೆ ನೀಡುವ ವೈಭವ, ಅದು ನಮಗೆ ಬೇಕಿಲ್ಲ ಯಾಕೆಂದರೆ ಅದು ಅಪಕಾರ ಮಾಡುವ ವಸ್ತು ಅದನ್ನು ನಾವು ತೆಗೆದುಕೊಳ್ಳುವುದಿಲ್ಲ. ನಾವೆಲ್ಲರೂ ವಿಚಾರ ವಿಮರ್ಶೆ ಮಾಡಿ ಎಲ್ಲಕ್ಕಿಂತ ಮೊದಲು ನಮಗೆ ವೈಭವವನ್ನು ಬಿಡಬೇಕಾಗಿದೆ, ನಾವೇ ಹೆಚ್ಚು ಪಾಪಕರ್ಮಗಳನ್ನು ಮಾಡಿದ್ದೇವೆ ಆದ್ದರಿಂದ ತಪಸ್ಸು ಮಾಡುವ ಅವಶ್ಯಕತೆ ನಮಗೆ ಹೆಚ್ಚಾಗಿದೆ–ಎಂದು ಹೇಳಿದರು. ವಿಧ್ಯುತ್(ಪ್ರಭವ)ಸಹಿತ ಆ 500 ಜೊತೆಗಾರರು ಎಲ್ಲ ಚೋರ ಕರ್ಮಗಳನ್ನು ಪರಿತ್ಯಾಗ ಮಾಡಿ ದೀಕ್ಷೆ ಪಡೆಯಲು ತತ್ಪರರಾದರು. ಗುರುವಿನ ವಿಷಯದಲ್ಲಿ ತಿಳಿದುಕೊಂಡು ಎಲ್ಲರೂ ಕೂಡಲೇ ಹೋಗಿ ತಲುಪಿದರು.

ಗುರುವರರ ಬಳಿ ತಲುಪಿ ಅವರೆಲ್ಲರೂ ದಿಗಂಬರ ಪರಮ ವೀತರಾಗಿ ಶಾಂತ ಚಿತ್ತ ಮುದ್ರೆಯ ದರ್ಶನ ಮಾಡಿ ತಮ್ಮ ಅಹೋಭಾಗ್ಯವೆಂದು ಭಾವಿಸಿದರು. ಅವರು ನಗ್ನ ಪರಮ ದಿಗಂಬರ ನಿರ್ಗ್ರಂಥರನ್ನು ಎಂದೂ ಭೇಟಿಯಾಗಿರಲಿಲ್ಲ. ಪರಿಗ್ರಹದಿಂದ ಕೂಡಿದವರು ಒತ್ತಡಕೊಳ್ಳಗಾಗಿರುತ್ತಿದ್ದರು, ಆದರೆ ಇವರ ಬಳಿ ಯಾವ ಒತ್ತಡವೂ ಇಲ್ಲ ಯಾಕೆಂದರೆ ಇವರಿಗೆ ಸಂಸಾರದ ಬಗ್ಗೆ ಯಾವುದೇ ರೀತಿಯಲ್ಲಿಯೂ ಸಂಬಂಧವನ್ನು ಹೊಂದಿರಲಿಲ್ಲ. ಯಾವುದೇ ಪ್ರಕಾರದ ಬಯಕೆಯ ವಿಷಯವೇ ಇಲ್ಲ. ಈ ಸಂಸಾರದಿಂದ ಮುಕ್ತರಾಗಿದ್ದೇವೆ ಎನ್ನುವ ರೀತಿಯಲ್ಲಿ ಅವರು ಆತ್ಮಧ್ಯಾನದಲ್ಲಿ ಕುಳಿತು ಬಿಟ್ಟರು. ಎಲ್ಲರೂ ಆ ಗುರುವರರ ಶ್ರೀಚರಣಗಳಲ್ಲಿ ನಮೋಸ್ತು ಮಾಡಿ ಅಲ್ಲಿಯೇ ಕುಳಿತರು. ಗುರುವರರ ಮುಂದೆ ಕೈ ಜೋಡಿಸಿ ನತಮಸ್ತಕರಾಗಿ ಬಹಳ ಆದರದಿಂದ ಪ್ರಾರ್ಥನೆ ಮಾಡುತ್ತಾ–ಹೇ ದಯೆಯ ಸಾಗರರೇ! ನಾವು ಜನ್ಮ ಮರಣ ರೂಪದ ದುಃಖಗಳಿಂದ ತುಂಬಿದ ಕುಯೋನಿ ರೂಪದ ಸಮುದ್ರದ ಆವರ್ತಗಳಲ್ಲಿ ಮುಳುಗುತ್ತಿದ್ದೇವೆ. ಕೃಪೆ ಮಾಡಿ ತಾವು ಉದ್ಧಾರ ಮಾಡುವ ಜಿನ ದೀಕ್ಷೆಯನ್ನು ನೀಡಿರಿ. ಇದೇ ನಿಜವಾದ ಜೀವನವಾಗಿದೆ ಹಾಗೂ ಶಾಂತಿಯ ಉಪಾಯದ ನಿಜವಾದ ಮಾರ್ಗವಾಗಿದೆ. ನಮ್ಮ ಜೀವನದಲ್ಲಿ ಕರ್ಮಗಳ ಸಾಲ ತೀರಿಸಲು ಮತ್ತು ಕರ್ಮಗಳನ್ನು ಕಳೆಯಲು ಇದೇ ಉಪಾಯವಾಗಿದೆ. ಈ ಜೀವನದಲ್ಲಿ ನಾವು ಸಹ ಆತ್ಮ ಸಾಧನೆ ಮಾಡಿ ಪಾಪಗಳನ್ನು ಕಳೆಯುತ್ತೇವೆ ಮತ್ತು ದುರ್ಗತಿಗಳ ದುಃಖಗಳಿಂದ ರಕ್ಷಿಸಿಕೊಳ್ಳುತ್ತೇವೆ. ಹೇ ಪ್ರಭುವರರೇ! ಕರುಣಾಸಾಗರರೇ; ಬೇಗನೆ ನಮಗೆ ನಿಮ್ಮ ಶರಣದಲ್ಲಿ ಸ್ವೀಕರಿಸಿರಿ, ದಯೆ ಮಾಡಿ ಪ್ರಭು! ಎಂದು ಅಂಗಲಾಚುತ್ತಾ ಅವರೆಲ್ಲರೂ ಅಸ್ತ್ರ ಶಸ್ತ್ರಗಳನ್ನು ಎಸೆದು ಮತ್ತು ಅಶ್ರುಪೂರ್ಣ ಕಣ್ಣುಗಳಿಂದ ಗುರುವರರನ್ನು ನೋಡ ತೊಡಗಿದರು. ಗುರುವರರಂತೂ ತಮ್ಮ ಧ್ಯಾನದಲಿ ಲೀನರಾಗಿದ್ದರು. ಬೆಳಗಾಯಿತು. ಆಗ ವಿದ್ಯುತ ಪ್ರಭವ ಮತ್ತು ಆತನ ಜೊತೆಗಾರರ ಹೃದಯದ ಅಜ್ಞಾನಾಂಧಕಾರ ಸಹ ದೂರವಾಗಿ ವೈರಾಗ್ಯದ ನೀರು ತುಂಬಿ ಹರಿಯುತ್ತಿದ್ದಿತು. ಕೂಡಲೇ ಎಲ್ಲರೂ ಗುರುಗಳನ್ನು ನೋಡಿ ಪ್ರಾರ್ಥನೆ ಮಾಡುತ್ತಾ–ತಾವು ನಮ್ಮನ್ನು ತಮ್ಮ ಹಾಗೇ ಮಾಡಿಕೊಳ್ಳಿ ಎಂದರು, ಗುರುಗಳು ಎಲ್ಲರ ಪವಿತ್ರ ಭಾವನೆಗಳನ್ನು ನೋಡಿ ಅವರಿಗೆ ನಿರ್ಗ್ರಂಥ ಮುನಿ ದೀಕ್ಷೆಯನ್ನು ನೀಡಿದರು. ಅವರೆಲ್ಲರೂ ಆತ್ಮ ಶುದ್ಧಿಗಾಗಿ ಧ್ಯಾನದಲ್ಲಿ ಕುಳಿತರು.

ಈ ಕಡೆ ಕುಮಾರನ ವಿಚಾರ ವಿನಿಮಯದಲ್ಲಿಯೇ ರಾತ್ರಿ ಕಳೆದು ಹೋಯಿತು ಬೆಳಕಾಯಿತು. ಕುಮಾರನು ಎದ್ದು ತನೆಲ್ಲ ಶೃಂಗಾರವನ್ನು ಕಳಚಿದ ಹಾಗೂ ತಾಯಿ-ತಂದೆಯರಿಗೆ ನಮಸ್ಕರಿಸುತ್ತಾ-ತಾವು ನನಗೆ ಹೇಳಿದಂತೆ ನಾವು ತಮ್ಮ ಮಾತುಗಳನ್ನು ಪೂರೈಸಿದ್ದೇವೆ. ಈಗ ನಾವು ಗುರುವರರ ಚರಣಗಳಲ್ಲಿ ಹೋಗಿ ಜೈನೇಶ್ವರಿ ದೀಕ್ಷೆಯ ಧಾರಣೆ ಮಾಡುತ್ತೇವೆ ಎಂದು ಹೇಳಿದ. ಆಗ ತಾಯಿಯು; ಅರೇ ಏನಾಯಿತು. ನಾಲ್ಕು ವಧುಗಳು ರೂಪವತಿಯರು, ಗುಣವಂತಿಯರನ್ನು ವಿವಾಹ ಮಾಡಿಕೊಂಡು ತಂದಿದ್ದೇವೆ. ನಿನಗೇನು ಕಷ್ಟವಾಯಿತು? ಎಲ್ಲ ಸುಖ-ವೈಭವ ಇಲ್ಲಿಯೇ ಇವೆ-ಎಂದಳು. ಅಮಾ ಇಲ್ಲಾ, ಈ ವೈಭವವನ್ನು ಅನೇಕ ಸಾರಿ ಪಡೆದಿದ್ದೇವೆ ಹಾಗು ಬಿಟ್ಟಿದ್ದೇವೆ. ತಾವು ಮೋಹವಶರಾಗಿ ನಮ್ಮನ್ನು ತಡೆಯಬೇಡಿ. ಈ ಸಂಸಾರವು ಸ್ವಾರ್ಥದ ಜೊತೆಗಾರ. ನಾವು ಮೋಹದ ಸಂಕೊಲೆಗಳನ್ನು ಮುರಿದು ಹೋಗುತ್ತಿದ್ದೇವೆ. ತಾಯಿ ತಂದೆಗಳು-ಹೇ ಮಗನೇ ನಿನ್ನ ಇಷ್ಟೊಂದು ಸುಕುಮಾರ ಕೋಮಲ ಶರೀರ ಹಾಗೂ ಅದೆಲ್ಲಿಯ ಅಸಿಧಾರೆಯಂತಿರುವ ಜೈನೇಶ್ವರಿ ದೀಕ್ಷೆ, ತಪಶ್ಚರಣದ ಬಾಧೆಗಳನ್ನು ಹೇಗೆ ತಾನೇ ಸಹಿಸಿಕೊಳ್ಳುವೆ, ನಗ್ನ ಶರೀರ ಎಷ್ಟು ಕಠಿಣದಾಯಿಕ, ಕ್ರಿಮಿ-ಕೀಟಗಳು, ಸೊಳ್ಳೆ, ಬಿರುಗಾಳಿ, ಶೀತ, ಬಿಸಿಲು, ಮಳೆ ಮುಂತಾದ ಭೀಕರವಾದ ಸ್ಥಿತಿಗಳಲ್ಲಿ ನಿನ್ನನ್ನು ನಿಶ್ಚಲವಾಗಿಟ್ಟು ಕೊಳ್ಳುವುದು ಇದೆಲ್ಲ ಹೇಗೆ ಸಾಧ್ಯವಿದೆ? ಎಂದು ಹೇಳಿದರು.

ಸದೃಢ ಸಂಕಲ್ಪಿ ಕುಮಾರನು ಇದನ್ನು ಕೇಳಿ-ಅಮ್ಮಾ! ಈ ಸಂಸಾರ ಅನಿತ್ಯ, ಅಶರಣವಾಗಿದೆ ಇದರಲ್ಲಿ ಎಲ್ಲಿಯೂ ಸುಖವಿಲ್ಲ, ದುಃಖವೇ ದುಃಖ ಕಂಡು ಬರುತ್ತದೆ. ಅನೇಕ ಜನ್ಮಗಳಲ್ಲಿ ಇಂದ್ರಿಯ ವಿಷಯಗಳ ಸುಖವನ್ನು ಅನೇಕ ಬಾರಿ ಉಪಯೋಗಿಸಿದ್ದಾಗಿದೆ ಹಾಗೂ ಅವುಗಳನ್ನು ಎಂಜಲಿನಂತೆ ಬಿಟ್ಟೂ ಆಗಿದೆ. ಈ ಸುಖವು ಅತೃಪ್ತಿಕಾರಿಯಾಗಿದೆ. ಹೇ ಅಮ್ಮ ಹಾಗಿರುವಾಗ ಈ ಸುಖಗಳ ಕಡೆಗೆ ಹೇಗೆ ಹೋಗಲಿ? ಎಂದು ಹೇಳಿದನು ವೈರಾಗ್ಯ ಭಾವನೆಯಲ್ಲಿ ಹೀಗೆ ಹೇಳಿಯೂ ಇದ್ದಾರೆ-

**ಸಂಸಾರದಾ ವಿಷಯಗಳಲಿ ಸುಖವಿರೆ, ತೀರ್ಥಂಕರರ್ಯಾಕೆ ಬಿಡುತ್ತಿದ್ದರು।**
**ಶಿವಸಾಧನೆ ಮಾಡುತ ಸಂಯಮದ ಅನುರಾಗವೇಕೆ ಮಾಡುತ್ತಿದ್ದರು॥8॥**

ತೀರ್ಥಂಕರರ ಬಳಿ ಅಪಾರ ವೈಭವವಿದ್ದಿತು. ಮೂರು ತೀರ್ಥಂಕರರು ಚಕ್ರವರ್ತಿಗಳಾಗಿದ್ದರು, ಅವರು ಆರು ಖಂಡಗಳ ಅಧಿಪತಿಗಳಾಗಿದ್ದರು. ಆದರೂ ಸಹ ಅವರು ವೈಭವದಿಂದ ಮುಕ್ತರಾದರು. ನಾವಂತೂ ಏನೂ ಇಲ್ಲ.

ನಾಲ್ಕೂ ನವವಧುಗಳು ಅತ್ಯಂತ ಶೋಕದಿಂದ ಸಂತಪ್ತರಾಗಿ ಅಳುತ್ತಾ-ಹೇ ನಾಥ! ತಾವು ನಮ್ಮೆಲ್ಲರನ್ನು ಅನಾಥರನ್ನಾಗಿ ಮಾಡಿ ಎಲ್ಲಿಗೆ ಹೊರಟಿರಿ, ಹೇಗೆ ಚಂದ್ರನಿಲ್ಲದ ರಾತ್ರಿಗೆ ಶೋಬೆ ಇಲ್ಲವೋ, ಕಮಲವಿಲ್ಲದ ಸರೋವರಕ್ಕೆ ಶೋಭೆ ಇಲ್ಲವೋ ಹಾಗೆಯೇ ತಾವಿಲ್ಲದೇ ನಮ್ಮೆಲ್ಲರ ಜೀವನವು ಸಹ ನಿರರ್ಥಕವಾಗಿದೆ. ಹೇ ನಾಥ! ತಾವು ತಮ್ಮ ವಿಚಾರವನ್ನು ಬಿಡಿ ಸ್ವಲ್ಪ ಸಮಯದ ನಂತರ ತಾವು ಪರಿತ್ಯಾಗ ಮಾಡಿ, ಆದರೆ ಈಗಂತೂ ಗೃಹಸ್ಥ ಅವಸ್ಥೆಯಲ್ಲಿ ಇದ್ದು ಪ್ರಸನ್ನತೆ ಪಡೆಯಿರಿ-ಎಂದು ಹೇಳಿದರು. ಆಗ ಕುಮಾರನು-ನಾವು ಸಂಸಾರದ ಬಂಧನಗಳನ್ನು ಮುರಿದು ಪರಮಾರ್ಥದ ಮಾರ್ಗದಲ್ಲಿ ಮುನ್ನಡೆಯುತ್ತಿರುದಕ್ಕೆ ತಾವೆಲ್ಲರೂ ಪ್ರಸನ್ನರಾಗಬೇಕು. ಈ ಪಾವನ ಕಾರ್ಯದಲ್ಲಿ ಸಹಯೋಗಿಗಳಾಗಬೇಕು ಎಂದು ಹೇಳಿದನು. ಹೀಗೆ ಕುಮಾರನು ಎಲ್ಲರಿಗೂ ಸಂಭೋಧನೆ ಮಾಡಿ ಗುರುಗಳ ಶ್ರೀ ಚರಣಗಳ ಕಡೆಗೆ ಹೊರಟು ಬಿಟ್ಟ, ಅಲ್ಲಿ ತಲುಪಿ

ಗುರುಗಳಿಗೆ ವಿನಯ ಪೂರ್ವಕ ನಮೋಸ್ತುಗಳನ್ನು ಮಾಡಿ ಪ್ರಾರ್ಥನಾ ಪೂರ್ವಕವಾಗಿ ಹೇ ಗುರುವರ್ಯರೇ!ಕೃಪೆ ಮಾಡಿ ನಮ್ಮ ಉದ್ಧಾರ ಮಾಡಿ ಅದರಿಂದಾಗಿ ನಾವು ಆತ್ಮಸಾಧನೆಯಿಂದ ಸ್ವಾತ್ಮ ನಿಧಿಯನ್ನು ಪಡೆಯುವಂತಾಗಲಿ ಎಂದು ಹೇಳಿದ. ಗುರುಗಳಾದ ಸುಧರ್ಮ ಸ್ವಾಮಿಗಳು ದೀಕ್ಷೆ ನೀಡಿ ಆತನಿಗೆ ಮಹಾವ್ರತಿಯನ್ನಾಗಿ ಮಾಡಿದರು. ಸಂಸ್ಕಾರಗಳಿಂದ ಸಂಸ್ಕಾರಿತಗೊಳಿಸಿದರು. ವ್ರತಗಳ ಆರೋಪಣೆಯಾಯಿತು. 28 ಮೂಲಗುಣಗಳನ್ನು ಪಾಲಿಸುತ್ತಾ ಆತ್ಮ ಧ್ಯಾನ ಇತ್ಯಾದಿಗಳಲ್ಲಿ ಲೀನರಾಗಿರ ತೊಡಗಿದರು. ಅವರು ಮುನಿರಾಜರಾಗಿಬಿಟ್ಟಿದ್ದರು. ಅತ್ಯಂತ ಸಹಿಷ್ಣು, ಸಾಹಸಿ, ಧೈರ್ಯವಾನ ಹಾಗೂ ವಿವೇಕಿಗಳಾಗಿದ್ದರು. ಯಾವಾಗಲೋ ಪರ್ವತಗಳಲ್ಲಿ, ಗುಹೆಗಳಲ್ಲಿ ಇರುತ್ತಿದ್ದರು. ಯಾವಾಗಲೋ ಬೇರೆ ಸ್ಥಾನಗಳಲ್ಲಿ ವಿಹಾರ ಮಾಡುತ್ತಿದ್ದರು. ಧ್ಯಾನ ಮತ್ತು ಅಧ್ಯಾನಗಳಲ್ಲಿ ಪ್ರವೃತ್ತಿಯ ಕಾರಣ ದ್ವಾದಶಾಂಗಗಳ ಪಾರಗಾಮಿ ಶ್ರುತಕೇವಲಿಗಳಾದರು. ಬಹಳ ದೊಡ್ಡ ಪುರುಷಾರ್ಥ ಮಾಡಿದರು. ಘಾತಿಯ ಕರ್ಮಗಳನ್ನು ಕ್ಷಯ ಮಾಡಿ ಕೇವಲ ಜ್ಞಾನವನ್ನು ಪಡೆದರು. ಇಂತಹ ಮಹಾ ಪುರುಷರು ಧನ್ಯರಾಗಿದ್ದಾರೆ. ಅವರ ವಿಚಾರಗಳಿಂದ ಕಳ್ಳರಿಗೆ ವೈರಾಗ್ಯವಾಗಿದ್ದಿತು. ಆ ಕೇವಲ ಜ್ಞಾನಿ ಮಹಾನ್ ಆತ್ಮವು ಒಂದು ದಿನ ಉಳಿದ ಕರ್ಮಗಳನ್ನು ಅಭಾವ ಮಾಡಿ ಮುಕ್ತಿ ಪಡೆದರು.

ಚತುರ್ಥಕಾಲದಲ್ಲಿ **'ಜನ್ಮ ತಾಳಿದ್ದರು, ವಜ್ರ ವೃಷಭನಾರಾಚ'** ಸಂಹನವನವನ್ನು ಅವರು ಪಡೆದಿದ್ದರು. ಪಂಚಮ ಕಾಲದಲ್ಲಿ ಮೋಕ್ಷಕ್ಕೆ ತೆರಳಿದರು ಇಂತಹ ಉತ್ತಮ ತ್ಯಾಗದ ಒಡೆಯ ಮುನಿರಾಜರು ತಮ್ಮ ಜೀವನವನ್ನು ಮಹಾನ್ ಮಾಡಿಕೊಂಡಿದ್ದರು. ಇದು ಬಾಹ್ಯ ಅಭ್ಯಂತರ ಪರಿಗ್ರಹ ತ್ಯಾಗದ ಫಲವಾಗಿದ್ದಿತು. ಅವರು ಯಾರಾಗಿದ್ದರು ಎಂಬುದು ನಿಮಗೆ ಗೊತ್ತೆ? ಸಹೋದರರೇ ಅವರು ಜಂಬೂ ಸ್ವಾಮಿ ಕೇವಲಿಗೆ 75ನೇ ವಯಸ್ಸಿನಲ್ಲಿ ಅವಿನಾಶ ಪದ ದೊರಕಿದ್ದಿತು. ಗುರುವಿನ ಸಂಯೋಗ, ಸಂತ್ಸಂಗವನ್ನು ನೋಡಿ ಯಾರು ತಾನೇ ಮಹಾನ್ ಆಗಲಾರರು? ಪುರುಷಾರ್ಥ ಮಾಡುವ ಅವಶ್ಯಕತೆ ಇದೆ. ಸಂಯೋಗ ಸಿಕ್ಕಿ ಹಾಗೇ ಜೀವನ ರೂಪಗೊಳ್ಳುತ್ತದೆ. ಅಂದರೆ ಸತ್ಸಂಗ ದೊರೆತ ಹಾಗೇ ಆತ್ಮನು ತನ್ನ ಜೀವನದಲ್ಲಿ ಉನ್ನತಿ ಅಥವಾ ಅವನತಿಯನ್ನು ಹೊಂದುತ್ತಾನೆ. ಮಳೆ ಒಂದೇ ರೀತಿಯಲ್ಲಿ ಸುರಿಯುತ್ತದೆ. ಅದರ ಹನಿಗಳು ಎಲ್ಲೆಡೆ ಬೀಳುತ್ತವೆ. ಅವು ಸಮುದ್ರದಲ್ಲಿ ಬಿದ್ದರೆ ಉಪ್ಪಾಗುತ್ತದೆ. ಒಂದು ವೇಳೆ ಸ್ವಾತಿ ನಕ್ಷತ್ರದಲ್ಲಿ ಚಿಪ್ಪಿನಲ್ಲಿ ಬಿದ್ದರೆ ಮುತ್ತುಗಳಾಗುತ್ತವೆ, ಅದೇ ನೀರಿನ ಹನಿ, ಆದರೆ ಎಲ್ಲವೂ ಸಂಯೋಗ-ಸತ್ಸಂಗದ ಪರಿಣಾಮವಿದೆ. ಸಂಯೋಗ-ಸತ್ಸಂಗ ದೊರಕಿದ ಹಾಗೇ ಜೀವನ ರೂಪಗೊಳ್ಳುತ್ತದೆ. ಒಂದು ವೇಳೆ ಕೆಟ್ಟ ಸಂಗಾತಿ ದೊರಕಿದರೆ ಕೆಟ್ಟ ಜೀವನವಾಗುತ್ತದೆ. ಒಳ್ಳೆಯ ಸಂಗಾತಿ ದೊರಕಿದರೆ ಒಳ್ಳೆಯ ಜೀವನವಾಗುತ್ತದೆ. ಧರ್ಮಭಾವನಾ ಶತಕದಲ್ಲಿ ಹೀಗೆ ಬರೆದಿದ್ದಾರೆ-

**ಮಾಡಲಿಲ್ಲ ಜಂಬೂಸ್ವಾಮಿ ರತ್ನಗಳ ವೈಭವ ರಾಗವ।**
**ವಿವಾಹದ ನಂತರ ನೋಡಲಿಲ್ಲ, ರಾಣಿಗಳ ಎಲ್ಲರ ಮಾಡಿದ ತ್ಯಾಗವ॥**
**ಅವರ ವಿರಾಗಿ ಭಾವ ನೋಡಿ, ವಿದ್ಯುತ್ ಆದಿ ಕಳ್ಳರು।**
**ಮುಕ್ತರಾದರು ಎಲ್ಲ ಪಾಪಗಳಿಂದ, ಸಾಧುಗಳವರು ಆದರು॥74॥**

ತ್ಯಾಗ ಧರ್ಮವು ಮುಖ್ಯವಾಗಿ ಮುನಿಗಳ ಧರ್ಮವಾಗಿದೆ. ಮುನಿಗಳು ಸರ್ವಸ್ವಗಳ ತ್ಯಾಗಿಗಳಾಗಿರುತ್ತಾರೆ. ಅವರು ಧನ ಪರಿಗ್ರಹದ ಆಸಕ್ತಿಯಿಂದ ರಹಿತರಾಗಿ ಅಪರಿಗ್ರಹ ಜೀವನ

ನಡೆಸುತ್ತಾರೆ. ಈ ಅಪೇಕ್ಷೆಯಿಂದ ಪರಿಗ್ರಹಗಳ ನಿವೃತ್ತಿಯನ್ನು ತ್ಯಾಗವೆಂದು ಕರೆದಿದ್ದಾರೆ. ಆದಾಗ್ಯೂ ಗೃಹಸ್ಥರಿಗೆ ಸರ್ವಸ್ವವನ್ನು ತ್ಯಾಗಮಾಡಲು ಸಾಧ್ಯವಿಲ್ಲ. ಅವರ ಶಕ್ತಿ ಮತ್ತು ಪರಿಸ್ಥಿತಿಗಳ ಪ್ರಕಾರದ ವ್ಯವಸ್ಥೆಗಳು ಆಗಮಗಳಲ್ಲಿ ದೊರಕುತ್ತವೆ. ಹೀಗೆ ತ್ಯಾಗ ಧರ್ಮದ ಎರಡೂ ಪ್ರಕಾರದ ವ್ಯವಸ್ಥೆಗಳು ಆಗಮಗಳಲ್ಲಿ ದೊರಕುತ್ತವೆ. ಆಚಾರ್ಯ ಪೂಜ್ಯವಾದ ಸ್ವಾಮಿಗಳು ತಮ್ಮ ಪ್ರಸಿದ್ಧ ಗ್ರಂಥ **'ಸರ್ವಾರ್ಥಸಿದ್ಧಿ'** ಹಾಗೂ **'ಭಗವತಿ ಆರಾಧನಾ'**ಗಳಲ್ಲಿ ತ್ಯಾಗವನ್ನು ದಾನದ ರೂಪದಲ್ಲಿ ವ್ಯಾಖ್ಯಾನ ಮಾಡುತ್ತಾ ಹೀಗೆ ಹೇಳಿದ್ದಾರೆ–

**ಸಂಯತಸ್ಯ ಯೋಗ್ಯಂ ಜ್ಞಾನಾದಿ ದಾನಂ ತ್ಯಾಗಃ। 9/6(ಸರ್ವಾರ್ಥಸಿದ್ಧಿ)**
**ಸಂಯತ ಪ್ರಯೋಗ್ಯಾಹಾರಾದಿ ದಾನಂ ತ್ಯಾಗಃ\(45) ಭಗವತಿ ಆರಾಧನೆ)**

ಸಂಯಮಿಗಳಿಗೆ ಯೋಗ್ಯವಾದ ಜ್ಞಾನ ಮುಂತಾದವುಗಳನ್ನು ದಾನ ಮಾಡುವುದು ಮುನಿಗಳ ತ್ಯಾಗ ಧರ್ಮವಾಗಿದೆ. ಗೃಹಸ್ಥ ಜೀವನ ನಡೆಸುವ ಧರ್ಮ ಜನರ ಮಧ್ಯದಲ್ಲಿ ರತ್ನತ್ರಯಧಾರಕ ಸಂಯಮಿಗಳಿಗೆ, ಆಹಾರ, ಔಷಧ, ಧರ್ಮೋಪಕರಣ ಹಾಗೂ ನಿವಾಸಸ್ಥಾನ ರೂಪದ ನಾಲ್ಕು ಪ್ರಕಾರದ ದಾನಗಳನ್ನು ಶ್ರಾವಕರಿಗೆ ಹೇಳಲಾಗಿದ್ದು ಇವು ಅವರ ತ್ಯಾಗ ಧರ್ಮವಾಗಿದೆ. ತೀರ್ಥಂಕರ ಪ್ರಕೃತಿಯ ಬಂಧದಲ್ಲಿ ಕಾರಣವಾಗುವ ತ್ಯಾಗ ಭಾವನೆಯ ಅಂತರ್‌ಗತ ಧವಲಾ ಗ್ರಂಥದಲ್ಲಿ ಆಚಾರ್ಯ ಶ್ರೀಗಳು ಹೀಗೆ ಸ್ಪಷ್ಟ ಪಡಿಸಿದ್ದಾರೆ–

**ದಯಾ ಬುದ್ಧೀಏ ಸಾಹೂಣಂ ಣಾಣ–ದಂಸಣ–ಚರಿತ್ತ ಪರಿಚ್ಚಾಗೋ ದಾಣಂ**
**ಪಾಸುಅಪರಿಚ್ಚಾಗ ದಾಣಾಮ।**
**ಣ ಚೇವ ಕಾರಣಮ್ ಘರತ್ಥೇಸು ಸಂಭವದಿ, ತತ್ಥ ಚರಿತ್ತಾ ಭಾವಾದೋ**
**॥ಪುಟ 8 ಸೂತ್ರ 87॥**

ದಯಾ ಬುದ್ಧಿಯಿಂದ ಸಾಧುಗಳಿಂದ ಮಾಡಲಾಗುವ ಜ್ಞಾನ ದರ್ಶನ ಹಾಗೂ ಚಾರಿತ್ರದ ಪರಿತ್ಯಾಗ ಅಥವಾ ದಾನದ ಹೆಸರು ಪ್ರಾಸುಕ ಪರಿತ್ಯಾಗತೆ ಇದೆ. ಈ ಕಾರಣವು ಗೃಹಸ್ಥರಲ್ಲಿ ಸಾಧ್ಯವಿಲ್ಲ ಯಾಕೆಂದರೆ ಅವರಲ್ಲಿ ಚಾರಿತ್ರದ ಅಭಾವವಿದೆ. ಇದಂತೂ ಶ್ರಮಣ ಸಾಧು ಜನರ ತ್ಯಾಗ ಧರ್ಮವಾಗಿದೆ. ಜೀವನ ಪರ್ಯಂತ ತ್ಯಾಗ ಮಾಡುವ ವಸ್ತುಗಳನ್ನು ಯಮ ಅಥವಾ ಸಂಪೂರ್ಣ 'ಜೀವನ ತ್ಯಾಗವೆಂದು ಹೇಳುತ್ತಾರೆ ಹಾಗೂ ಯಾವುದಾದರೂ ನಿಶ್ಚಿತ ಸಮಯಕ್ಕಾಗಿ ತ್ಯಾಗ ಮಾಡಿರುವುದನ್ನು ನಿಯಮ ತ್ಯಾಗವೆಂದು ಹೇಳುತ್ತಾರೆ. ಜೂಜು, ಕಳ್ಳತನ, ಬೇಟೆ, ಮಾಂಸ ಭಕ್ಷಣೆ, ಮಧ್ಯಪಾನ, ಪರಸ್ತ್ರೀ ಸೇವನೆ, ಹಾಗೂ ವೇಶ್ಯಾಗಮನ ರೂಪದ ಸಪ್ತ ವ್ಯಸನಗಳು, ರಾತ್ರಿ ಭೋಜನ ಹಾಗೂ ಕಂದಮೂಲ ಇತ್ಯಾದಿಗಳನ್ನು ಆಜೀವನ ತ್ಯಾಗ ಮಾಡಲಾಗುತ್ತದೆ. ಯಾವ ವ್ಯಕ್ತಿಯು ಈ ವಸ್ತುಗಳನ್ನು ತ್ಯಾಗ ಮಾಡುವುದಿಲ್ಲವೋ ಅವರ ತೀರ್ಥಯಾತ್ರೆ, ಜಪ–ತಪ ಮುಂತಾದ ಕ್ರಿಯೆಗಳು ವ್ಯರ್ಥ ಹಾಗೂ ನಿರರ್ಥಕವಾಗಿವೆ. ಗೃಹಸ್ಥ ಜೀವನವನ್ನು ಮುನ್ನೆಡೆಸಲು ಗೃಹಸ್ಥರಿಗೆ ಧನಾರ್ಜನೆ ಮಾಡುವುದು ಅತಿ ಆವಶ್ಯಕವಾಗಿದೆ. ಅವರಿಗೆ ಧನಾರ್ಜನೆ ಮಾಡುವಾಗ ಆರಂಭ ಪರಿಗ್ರಹದ ಪಾಪ ತಗುಲಿದಾಗ್ಯೂ ಅದರ ಶುದ್ಧಿಗಾಗಿ ನಮ್ಮ ಆಚಾರ್ಯರುಗಳು ದಾನದ ಉಪದೇಶ ನೀಡಿದ್ದಾರೆ.

ದಾನದ ಅರ್ಥ ಕೊಡುವುದು ಈ ಲೋಕದಲ್ಲಿ ಜಡ ಹಾಗೂ ಚೇತನವಾಗಿರುವ ಎಲ್ಲ ಪದಾರ್ಥಗಳು ಪರಸ್ಪರರಿಗೆ ಏನನ್ನಾದರೂ ಕೊಡುತ್ತಿರುತ್ತವೆ. ಹೊಲವು ಫಸಲನ್ನು ನೀಡುತ್ತದೆ,

ಮರವು ಫಲವನ್ನು ನೀಡುತ್ತದೆ. ಸೂರ್ಯನು ಪ್ರಕಾಶವನ್ನು ನೀಡುತ್ತಾನೆ, ನದಿ-ಸರೋವರ ಜಲಪಾತ ಹಾಗೂ ಮೋಡ ಇವೆಲ್ಲವೂ ನೀರನ್ನು ಕೊಡುತ್ತವೆ. ಹಸುಗಳು ಹಾಲನ್ನು ಕೊಡುತ್ತವೆ. ಸಾಧು ಜನರು ಶಾಂತಿ ಹಾಗೂ ಜ್ಞಾನವನ್ನು ಕೊಡುತ್ತಾರೆ, ವೀತರಾಗ ಭಗವಂತನ ಪ್ರತಿಮೆಯು ವೀತರಾಗತೆಯನ್ನು ನೀಡುತ್ತಲಿದೆ. ಆದರೆ ಯೋಚಿಸಿ ಮನುಷ್ಯ ಏನು ಕೊಡುತ್ತಾನೆ? ಮೋಸ ಅಪ್ರಮಾಣಿಕತೆ, ಸುಳ್ಳು, ಅನಾಚಾರ, ಅತ್ಯಾಚಾರ ಅಥವಾ ಇತರ ಸತ್ಕಾರ್ಯ, ಸ್ವತ: ದಾನದ ಕ್ರಿಯೆ ಅನಾದಿಕಾಲದಿಂದ ನಡೆದುಕೊಂಡು ಬರುತ್ತಲಿದೆ, ಆದರೆ ಕೆಲವು ಕ್ರಿಯೆಗಳನ್ನು ಪುರುಷಾರ್ಥ ಪೂರ್ವಕವಾಗಿಯೂ ಮಾಡಲಾಗುತ್ತದೆ, ಯಾವುದು ದುಃಖಗಳನ್ನು ನಾಶಮಾಡುತ್ತದೋ ಅದನ್ನು ದಾನವೆಂದು ಹೇಳುತ್ತಾರೆ. ನಿದಾನ ರಹಿತ ದಾನವು ಶತ್ರುಗಳನ್ನು ಸಹ ಮಿತ್ರರನ್ನಾಗಿ ಮಾಡುತ್ತದೆ. ಕಷ್ಟಗಳನ್ನು ದೂರ ಮಾಡುತ್ತದೆ, ದುರ್ಗತಿಯ ನಿರಾಕರಣೆ ಮಾಡುತ್ತದೆ, ಸೂರ್ಯಬಿಂಬದಂತೆ ಸಮಸ್ತ ಅಜ್ಞಾನ-ಅಂಧಕಾರವನ್ನು ದೂರ ಮಾಡಿಬಿಡುತ್ತದೆ. ಸ್ವ ಮತ್ತು ಪರಗಳ ಉಪಕಾರಕ್ಕಾಗಿ ನಮ್ಮ ಧನದ ತ್ಯಾಗ ಮಾಡುವುದು ದಾನವೆಂದು ಕರೆಯಲ್ಪಡುತ್ತದೆ. ದಾನದ ಸ್ವರೂಪವನ್ನು ಹೇಳುತ್ತಾ ಆಚಾರ್ಯ ಉಮಾಸ್ವಾಮಿಗಳು ತತ್ವಾರ್ಥಸೂತ್ರದಲ್ಲಿ ಹೀಗೆ ಬರೆದಿದ್ದಾರೆ-

**ಅನುಗ್ರಹಾರ್ಥಂ ಸ್ವಸ್ವಾತಿಸರ್ಗೋ ದಾನಮ್ ।(7/48)**

ಸ್ವ-ಪರಗಳ ಅನುಗ್ರಹಕ್ಕಾಗಿ ತನ್ನ ಧನ ಮುಂತಾದ ವಸ್ತುಗಳ ತ್ಯಾಗ ಮಾಡುವುದು ದಾನವಾಗಿದೆ. ಅನುಗ್ರಹ ಅರ್ಥಾತ್ ಉಪಕಾರದ ಬುದ್ಧಿ ಇರಬೇಕು. ವಾಸ್ತವಿಕವಾಗಿ ಅನುಗ್ರಹ 'ಸ್ವ' ದ್ದಿದೆ. 'ಪರ'ದ್ದು ನಿಮಿತ್ತ ಮಾತ್ರವಾಗಿದೆ. ಈ ಉಪಕಾರ ದಾತಾ ಮತ್ತು ಪಾತ್ರ ಇಬ್ಬರನ್ನು ಸೇರಿಸಿದೆ. ಇದರಲ್ಲಿ ಇಬ್ಬರ ಹಿತವು ಸೇರಿದೆ. ಇನ್ನೊಂದು ಮಾತು ಇದರಲ್ಲಿ ಇದೆ, ಅದೆಂದರೆ ದಾನವು ತನ್ನ ವಸ್ತುವಿನದಾಗಿರಲಿ ಅದೆಂದರೆ ತನ್ನ ಮೂಲಕ ಉಪಾರ್ಜಿತ ಅಥವಾ ತನ್ನ ಸ್ವಾಮಿತ್ವ ಅಥವಾ ಅಧಿಕಾರವುಳ್ಳ ವಸ್ತುವಿರಲಿ ಹೀಗೆ ತನ್ನ ಅಧಿಕಾರದಲ್ಲಿರುವ ವಸ್ತುವಿನ ಕೆಲವು ಯೋಗ್ಯ ಅಹಿಂಸಕ ವಸ್ತುವನ್ನು ಕೊಡುವುದು ದಾನವಾಗಿದೆ. ಬೇರೆಯವರ ವಸ್ತು ಅಥವಾ ಸಾಮಾಗ್ರಿಯನ್ನು ಎತ್ತಿಕೊಡುವುದಲ್ಲ. ಯಾಕೆಂದರೆ ಇಲ್ಲಿ 'ಸ್ವಸ್ಯಾತಿ ಸರ್ಗ': ರೂಪದಿಂದ ನಿಜವಾದ ದಾನವೆನ್ನಲಾಗದು. ದಾನದಲ್ಲಿ ಪರೋಪಕಾರದ ಭಾವ ಮುಖ್ಯದಾಗಿರುತ್ತದೆ. ದಾನವು ಒಂದು ಸಮಿಚೀನ ವ್ಯವಹಾರ ಧರ್ಮವಾಗಿದೆ.

ಆಚಾರ್ಯರುಗಳು ದಾನದ ನಾಲ್ಕು ಪ್ರಕಾರಗಳನ್ನು ಹೇಳಿದ್ದಾರೆ. ರತ್ನಕರಂಡಕ ಶ್ರಾವಕಾಚಾರದಲ್ಲಿ ಆಚಾರ್ಯ ಸಮಂತಭದ್ರ ಸ್ವಾಮಿಗಳು ಹೇಗೆ ಹೇಳಿದ್ದಾರೆ-

**ಆಹಾರೌಷಧಯೋರಪ್ಯುಪಕರಣಾ ವಾಸಯೋಶ್ಚ ದಾನೇನ।**<br>
**ವೈಯಾವೃತ್ಯಂ ಬ್ರುವತೇ, ಚತುರಾತ್ಮತ್ವೇನ ಚರುತಸ್ನಾಃ॥117॥**

ನಾಲ್ಕು ಜ್ಞಾನಧಾರಿ ಗಣಧರ ದೇವರು ಆಹಾರ, ಔಷಧಿ, ಉಪಕರಣ ಹಾಗೂ ಆವಾಸದ್ದನ್ನು ಸಹ ದಾನದಿಂದ ವೈಯಾವೃತ್ತವನ್ನು ನಾಲ್ಕು ಪ್ರಕಾರದ್ದೆಂದು ಹೇಳುತ್ತಾರೆ. ಗೃಹಸ್ಥರು ಈ ನಾಲ್ಕು ದಾನಗಳನ್ನು ಮಾಡಬೇಕು. ಕವಿವರ ದ್ಯಾನತರಾಯರು ದಶಲಕ್ಷಣ ಹಿಂದಿ ಪೂಜೆಯಲ್ಲಿ ಹೀಗೆ ಬರೆದಿದ್ದಾರೆ-

**ನಾಲ್ಕು ಪ್ರಕಾರದ ದಾನಗಳನ್ನು ನೀಡಿರಿ ನಾಲ್ಕು ಸಂಘಕೆ।**<br>
**ಧನವು ಮಂಜಿನಂತೆ, ನರ ಭವ ತರುವುದು ಪಡೆಯಿರಿ॥**

ಋಷಿ, ಯತಿ, ಅನಗಾರ ಅಥವಾ ಮುನಿ, ಆರ್ಯಿಕಾ, ಶ್ರಾವಕ ಮತ್ತು ಶ್ರಾವಿಕಾ ಈ ನಾಲ್ಕು ಪ್ರಕಾರದ ಒಪ್ಪಲಾದ ಸಂಘಗಳಿವೆ. ಔಷಧಿ, ಶಾಸ್ತ್ರ, ಅಭಯ, ಆಹಾರ ಈ ನಾಲ್ಕು ಪ್ರಕಾರಗಳ ದಾನಗಳನ್ನು ಜ್ಞಾನಿಗಳು ಶಕ್ತಿ ಮತ್ತು ಭಕ್ತಿ ಪೂರ್ವಕ ನೀಡಬೇಕು.

**ಆಹಾರದಾನ** – ಧರ್ಮ ಸಾಧನೆಯ ಸಾಧನ ಶರೀರವಾಗಿದೆ ಹಾಗೂ ಶರೀರದ ಸ್ಥಿತಿಯನ್ನು ಚೆನ್ನಾಗಿಡಲು ಆಹಾರ–ನೀರು ಅತ್ಯಂತ ಅವಶ್ಯಕವಿದೆ, ಆದ್ದರಿಂದ ಉತ್ತಮ ಯೋಗ್ಯ ಪಾತ್ರರಿಗೆ ಆಹಾರ ನೀಡಿ ಅವರ ಹಸಿವೆಯನ್ನು ಶಾಂತಗೊಳಿಸುವುದು ಆಹಾರ ದಾನವಾಗಿದೆ. ಬೇರೆ ರೂಪದಿಂದ ಹಸಿವಾದವನಿಗೆ, ಬಡವರಿಗೆ, ಪಶು ಪಕ್ಷಿಗಳಿಗೆ ಭೋಜನ ನೀಡುವುದು ದಯಾದತ್ತಿ ಆಹಾರ ದಾನವೆಂದು ಕರೆಯಲ್ಪಡುತ್ತದೆ.

**ಔಷಧದಾನ** – ಈ ಶರೀರವು ವ್ಯಾಧಿಗಳ ಮನೆಯಾದಾಗ್ಯೂ ಯಾವುದೋ ಕಾರಣದಿಂದ ಯಾವುದೇ ರೀತಿಯ ಅಸ್ವಸ್ಥತೆ, ರೋಗ ಬರುವ ಸಂಗತಿ ತಿಳಿದರೆ ಅದರ ನಿವಾರಣೆಗಾಗಿ ಶುದ್ಧ ಔಷಧಿ ದಾನ ಮಾಡುವುದು, ಔಷಧ ದಾನವಾಗಿದೆ. ಔಷಾಧಾಲಯ ತೆರೆಸುವುದು, ರೋಗಿಗಳ ಸೇವೆ ಮಾಡುವುದು. ಅವರನ್ನು ಆರೋಗ್ಯವಾಗಿಡಲು ಸಾಧನಗಳನ್ನು ಸಂಗ್ರಹಿಸುವುದು ದಯಾದತ್ತಿ ದಾನದೊಳಗೆ ಬರುತ್ತದೆ. ಔಷಧದಾನ ಮಾಡುವುದರಿಂದ ನಿರೋಗ ಶರೀರ ಪ್ರಾಪ್ತವಾಗುತ್ತದೆ. ಒಂದು ವೇಳೆ ಸಂಯಮ ಸಾಧಕರು ಆಹಾರದ ಪ್ರತಿಕೂಲತೆ ಅಥವಾ ಹವಾಮಾನ ಮುಂತಾದವುಗಳ ಪ್ರತಿಕೂಲತೆಯ ಕಾರಣ ಅಸ್ವಸ್ಥರಾದರೆ ಔಷಧಿ ಸಹ ಆವಶ್ಯಕವಾಗುತ್ತದೆ ಯಾಕೆಂದರೆ ಒಂದು ವೇಳೆ ಅವರು ನಿರೋಗಿಗಳಾದರೆ ಸಾಧನೆ ಮಾಡಬಹುದು. ಆದ್ದರಿಂದ ವಿವೇಕವಂತ ಗೃಹಸ್ಥರು ಈ ಮಾತಿನ ವಿಶೇಷ ಗಮನ ನೀಡುತ್ತಾರೆ. ಅವರು ಸರಿಯಾದ ಔಷಧ ದಾನ ಮಾಡುತ್ತಾರೆ.

**ಉಪಕರಣ ದಾನ** – ಸಂಯಮಿ ಸಾಧಕ ಜನರ ಸಂಯಮದ ರಕ್ಷಣೆಗಾಗಿ ಹಾಗೂ ಜ್ಞಾನವರ್ಧನೆಯ ಕಾರಣ ಅವರಿಗೆ ಶಾಸ್ತ್ರ ಹಾಗೂ ಸಂಯಮೋಪಕರಣ ರೂಪಿ ಪಿಂಛಿ ಕಮಂಡಲು ಇತ್ಯಾದಿ ಉಪಕರಣಗಳನ್ನು ದಾನ ನೀಡುವುದು ಇದನ್ನು ಆಚಾರ್ಯ ಸಮಂತಭದ್ರ ಸ್ವಾಮಿಗಳು ರತ್ನಕರಂಡಕ ಶ್ರಾವಕಾಚಾರದಲ್ಲಿ ಈ ದಾನಕ್ಕೆ ಉಪಕರಣ ದಾನವೆಂದಿದ್ದಾರೆ. ಇದರಿಂದ ಇದರ ವ್ಯಾಪಕತೆ ಸ್ಪಷ್ಟವಾಗುತ್ತದೆ. ಸಮ್ಯಗ್ ಜ್ಞಾನದ ಸಾಧನಗಳನ್ನು ಸಂಗ್ರಹಿಸುವುದು, ಪಾಠಶಾಲೆಗಳನ್ನು ತೆಗೆಯುವುದು, ಪಾರಮಾರ್ಥಿಕ ದಾನಗಳಾಗಿವೆ. ಇವಲ್ಲದೇ ಬೇರೆ ಜನರಲ್ಲಿ ಬುದ್ಧಿ, ವಿದ್ಯೆ ಹಾಗೂ ಜ್ಞಾನ ವೃದ್ಧಿಯಾಗಲಿ ಅದಕ್ಕಾಗಿ ವಿದ್ಯಾಲಯ ತೆರೆಸುವುದು, ಮಕ್ಕಳಿಗೆ–ದೊಡ್ಡವರಿಗೆ ಪುಸ್ತಕಗಳನ್ನು ನೀಡುವುದು, ಉಚ್ಚ ಶಿಕ್ಷಣಕ್ಕಾಗಿ ಸವಲತ್ತುಗಳನ್ನು ಕೊಡುವುದು ಲೌಕಿಕ ಜ್ಞಾನದಾನವೆಂದು ಹೇಳಲಾಗುತ್ತದೆ.

**ಆವಾಸ ದಾನ** – ಇದರ ಇನ್ನೊಂದು ಹೆಸರು ವಸತಿಕಾ ದಾನಎಂದೂ ಇದೆ ಧರ್ಮಧ್ಯಾನ ಸಾಧನೆ ಮಾಡಲು ಸಾಧಕರಿಗಾಗಿ ಯೋಗ್ಯ ಧರ್ಮಶಾಲೆ, ಭವನ ಮಂದಿರ ಗುಹೆ. ವಸತಿಗೃಹ ಇತ್ಯಾದಿಗಳನ್ನು ನಿರ್ಮಿಸುವುದು, ಅಲ್ಲಿಗೆ ಹೋಗಿ ಸಾಧಕರು ಬಾಧೆ ಇಲ್ಲದೇ ತಪ ಹಾಗೂ ಸ್ವಾಧ್ಯಾಯ ಸಾಧನೆ ಮಾಡುವಂತಿರಬೇಕು ಅದನ್ನು ಅವಾಸದಾನವೆಂದು ಹೇಳುತ್ತಾರೆ ಹಾಗೂ ಯಾವ ಕಾರಣಗಳಿಂದ ಇತರರಿಗೆ ಭಯ ದೂರವಾಗುವುದೋ ಆ ಕಾರಣಗಳನ್ನು ರೂಪಿಸಿ ಕೊಡುವುದು, ಮನುಷ್ಯ, ಪಶು, ಪಕ್ಷಿ, ಒಂದು ಇಂದ್ರಿಯದಿಂದ ಪಂಚೇಂದ್ರಿಯದವರೆಗಿನ

ರಕ್ಷಣೆ ಮಾಡುವುದು. ಅನ್ಯರೂ ಯಾರೇ ಇರಲಿ ಭಯ ಭೀತರಾಗದಂತೆ ನೋಡಿಕೊಳ್ಳುವುದು ಅಭಯದಾನವಾಗಿದೆ.

ದಾನ ನೀಡುವಾಗ ಪಾತ್ರತೆಗೆ ವಿಶೇಷ ಗಮನ ನೀಡಬೇಕು. ಪಾತ್ರತೆಯು ಮೂರು ಪ್ರಕಾರವಾಗಿರುತ್ತದೆ–ಸುಪಾತ್ರ, ಕುಪಾತ್ರ ಹಾಗೂ ಅಪಾತ್ರ, ಸಮ್ಯಗ್ ದರ್ಶನ ಮುಂತಾದ ಗುಣಗಳಿಂದ ಕೂಡಿರುವವರು ಸುಪಾತ್ರರಾಗಿದ್ದಾರೆ. ಅವರು ಉತ್ತಮ, ಮಧ್ಯಮ ಜಘನ್ಯಗಳ ಭೇದದಿಂದ ಮೂರು ಪ್ರಕಾರವಾಗಿದ್ದಾರೆ, ಸಮಸ್ತ ಪರಿಗ್ರಹಗಳಿಂದ ರಹಿತರು ಗುಣರೂಪದ ಸಂಪತ್ತಿನಿಂದ ಸಹಿತರು, ರತ್ನತ್ರಯದಿಂದ ವಿಭೂಷಿತರು, ಸಮಸ್ತ ಪ್ರಾಣಿಗಳ ಹಿತದಲ್ಲಿ ತತ್ಪರ ಭವ್ಯ ಜೀವಿಗಳಿಗೆ ಸಂಬೋಧನೆ ಮಾಡುವವರು. ಪಾಪದಿಂದ ಭಯಭೀತರು, ಇಂದ್ರಿಯ ಮತ್ತು ಮನರೂಪದ ಆನೆಯನ್ನು ಪರಾಜಿತಗೊಳಿಸುವಲ್ಲಿ ಸಿಂಹದಂತೆ ಮಹಾ ಧೈರ್ಯವಂತರು, ಅಸಂಖ್ಯಾತ ಗುಣಗಳ ಸಾಗರರು. ತೃಣ(ಹುಲ್ಲು)ಚಿನ್ನ ಶತ್ರು–ಮಿತ್ರರಲ್ಲಿ ಸಮಭಾವ ಹೊಂದಿರುವವರು, ಪರಧನವನ್ನು ಎಂಜಲು ಎಂದು ಭಾವಿಸುವವರು, ಸಮಸ್ತ ಶರೀರ ಮೋಹಗಳಿಂದ ನಿರ್ಲಿಪ್ತರು, ಸಂಸಾರದಿಂದ ಪಾರಾಗುವವರೂ, 28 ಮೂಲ ಗುಣಗಳನ್ನು ಯಥಾಯೋಗ್ಯ ಪಾಲಿಸುವ ಮುನಿಮಹಾರಾಜರು ಉತ್ತಮ ಪಾತ್ರರಾಗಿದ್ದಾರೆ. ಆರ್ಯಿಕೆಯರು ಹಾಗೂ ಐಲಕ, ಕ್ಷುಲ್ಲಕರು ಹಾಗೂ ಒಂದರಿಂದ ಹನ್ನೊಂದನೆ ಪ್ರತಿಮಾ ಧಾರಿ ವ್ರತಿಕ ಶ್ರಾವಕರು ಮಧ್ಯಮ ಪಾತ್ರತೆಯವರಾಗಿರುತ್ತಾರೆ. ಸಮ್ಯಗ್ ದರ್ಶನದ 25 ಮಲ ದೋಷಗಳಿಂದ ರಹಿತರು ನಿಜವಾದ ವೀತರಾಗಿ ದೇವ–ಶಾಸ್ತ್ರ ಗುರುಗಳ ಭಕ್ತರು ಅವ್ರತಿ ಸಮ್ಯಗ್ ದೃಷ್ಟಿಗಳು ಜಘನ್ಯ ಪಾತ್ರತೆಯನ್ನು ಹೊಂದಿದವರಾಗಿದ್ದಾರೆ. ಸಮ್ಯಗ್ ದರ್ಶನರಹಿತರು, ಸರಾಗಿ ದೇವ–ದೇವತೆಗಳ ಭಕ್ತರು ಮಿಥ್ಯಾದೃಷ್ಟಿಗಳು, ಕುಲಿಂಗಿ ಜೀವಗಳು ಅಥವಾ ವ್ರತಸಹಿತರಾಗಿದ್ದು ಸಹ ಮಿಥ್ಯಾದೃಷ್ಟಿ ಜೀವಗಳು ಕುಪಾತ್ರರೆಂದು ಕರೆಯಲ್ಪಟ್ಟಿದ್ದಾರೆ. ಘೋರ ಮಿಥ್ಯಾತ್ವೀ ಜೀವಗಳು, ವ್ರತ, ಶೀಲ, ಸಂಯಮದ ಶ್ರದ್ಧೆಯಿಂದಲೂ ರಹಿತ ವ್ಯಸನಿಗಳು ಹಾಗೂ ಅಭಕ್ಷ್ಯ ಸೇವನೆ ಮಾಡುವ ಮಿಥ್ಯಾದೃಷ್ಟಿಗಳು ಅಪಾತ್ರರೆಂದು ಕರೆಯಲ್ಪಟ್ಟಿದ್ದಾರೆ.

ಸುಪಾತ್ರರಿಗೆ ದಾನ ನೀಡುವ ಸಮ್ಯಗ್ ದೃಷಿ ಜೀವವು ಸ್ವರ್ಗದ ಅಥವಾ ಮುನಿಯಾಗಿ ಮೋಕ್ಷ ಪಡೆಯುತ್ತಾರೆ ಹಾಗೂ ಮಿಥ್ಯಾದೃಷ್ಟಿ ಜೀವವು ಭೋಗಭೂಮಿಯನ್ನು ಪಡೆಯುತ್ತದೆ. ಸುಪಾತ್ರದಲ್ಲಿ ತೊಡಗಿಸಿರುವ ಹಣವು ಪರಲೋಕದಲ್ಲಿ ಅನಂತಗುಣಗಳಷ್ಟೆ ವೃದ್ಧಿಯಾಗುತ್ತದೆ. ಕುಪಾತ್ರ ದಾನದಿಂದ ಸುಭೋಗ ಭೂಮಿ ಇತ್ಯಾದಿಗಳು ಪ್ರಾಪ್ತವಾಗುತ್ತವೆ. ಹಾಗೂ ಅಪಾತ್ರದಾನದಿಂದ ದುರ್ಗತಿ ಪ್ರಾಪ್ತವಾಗುತ್ತದೆ, ಆದ್ದರಿಂದ ದಾನ ನೀಡುವಾಗ ಪಾತ್ರದ ಕಡೆಗೆ ಗಮನ ನೀಡಬೇಕು. ಅಪಾತ್ರ–ಪಾಪ ವ್ಯಸನಿಗಳಿಗೆ ನೀಡುವ ದಾನ ಪುಣ್ಯದ ಸ್ಥಾನದಲ್ಲಿ ಪಾಪ ನೀಡುವಂತಾಗುತ್ತದೆ. ಸತ್ಪಾತ್ರರಿಗೆ ನೀಡಿದ ದಾನ ಚಾರಿತ್ರದ ಸಂಚಯ ಮಾಡುತ್ತದೆ, ವಿನಯವನ್ನು ಹೆಚ್ಚಿಸುತ್ತದೆ. ಜ್ಞಾನದ ವೃದ್ಧಿ ಮಾಡುತ್ತದೆ. ತಪವನ್ನು ಪ್ರಬಲಗೊಳಿಸುತ್ತದೆ. ಆಗಮ ಜ್ಞಾನವನ್ನು ಉಲ್ಲಸಿತಗೊಳಿಸುತ್ತದೆ, ಪಾಪಗಳನ್ನು ನಷ್ಟಮಾಡಿ ಪುಣ್ಯದ ಜಡವನ್ನು ಪುಷ್ಟಿಗೊಳಿಸುತ್ತದೆ ಹಾಗು ಮಹಾವ್ರತಗಳೊಂದಿಗೆ ಮೋಕ್ಷಕ್ಕೇ ಕಾರಣವಾಗುತ್ತದೆ. ಆದರೆ ದಾನ ನೀಡುವಾಗ ಪರಿಣಾಮ ವಿಶುದ್ಧಿಯಾಗಿರಬೇಕು. ಆಗಲೇ ಸುಗತಿಯು ದೊರೆಯುತ್ತದೆ. ತ್ಯಾಗ ಮಾಡಿದಷ್ಟೆ ಹೆಚ್ಚು ಸುಖ ಹಾಗೂ ಸಾಂಸಾರಿಕ ಪದಾರ್ಥಗಳ ಪ್ರಾಪ್ತಿ ಸಂಸಾರದ ಅವಸ್ಥೆಯಲ್ಲಿ ಆಗುತ್ತಲೇ ಇರುತ್ತವೆ. ಧಾರ್ಮಿಕ ಕಾರ್ಯಗಳ ನಿಮಿತ್ತದಿಂದ ಧನ ಇತ್ಯಾದಿಗಳ ತ್ಯಾಗ ಹಾಗೂ ದಾನ ಮಾಡುವುದರಿಂದ ಆ ಧನ ಇತ್ಯಾದಿಗಳು

ಹೆಚ್ಚೇ ಆಗುತ್ತವೆ, ಕಡಿಮೆಯಾಗುವುದಿಲ್ಲ. ಇದು ವಿಶ್ವಾಸ ಮತ್ತು ಶ್ರದ್ಧೆಯ ಸಂಗತಿಯಾಗಿದೆ. ದಾನದ ಮಹತ್ವ ಇದ್ದೇ ಇದೆ. ಜೊತೆಗೆ ಅನುಮೋದನೆಯನ್ನು ಶುದ್ಧಭಾವ ಪೂರ್ವಕವಾಗಿ ಮಾಡಿದರಂತೂ ಇಹಲೋಕ ಮತ್ತು ಪರಲೋಕಲ್ಲಿ ಸುಖ ಸಮೃದ್ಧಿಯಾಗುತ್ತದೆ. ಅನುಮೋದನೆ ಮಾಡುವವರು ಸಹ ಉತ್ತಮ ಭೋಗಭೂಮಿಯಲ್ಲಿ ಹುಟ್ಟುತ್ತಾರೆ. ರಾಜಾ ವಜ್ರಜಂಘ ಮತ್ತು ರಾಣಿ ಶ್ರಿಮತಿಯರು ಭಕ್ತಿ ಪೂರ್ವಕವಾಗಿ ಇಬ್ಬರು ಮುನಿಗಳಾದ ಸಾಗರಸೇನ ಹಾಗೂ ದಮವರ ಮುನಿರಾಜರಿಗೆ ಆಹಾರದಾನ ನೀಡುತ್ತಿದ್ದರು. ಆಗ ಸಿಂಹ, ಮುಂಗುಸಿ, ಮಂಗ, ಹಂದಿ ಮುಂತಾದ ಪಶುಗಳು ಆಹಾರದ ಪ್ರಶಂಸೆ ಮಾಡುತ್ತಿದ್ದವು. ದಾನದ ಅನುಮೋದನೆ ಮಾಡಿದ್ದರಿಂದ ಆ ಪಶುಗಳಿಗೆ, ಆ ರಾಜರಾಣಿಯರು ಪಡೆದಿದ್ದ ಭೋಗಭೂಮಿಯೇ ದೊರೆಯಿತೆಂದು ಶಾಸ್ತ್ರಗಳಲ್ಲಿ ವರ್ಣನೆ ಬಂದಿದೆ. ಕರ್ಮಭೂಮಿಯ ಪ್ರಾರಂಭದಲ್ಲಿ ರಾಜಾ ವಜ್ರಜಂಘನ ಜೀವ ಪ್ರಥಮ ತೀರ್ಥಂಕರ ಶ್ರೀ ಋಷಭನಾಥರ ರೂಪದಲ್ಲಿ ಅವತರಿಸಿತು ಹಾಗೂ ರಾಣಿ ಶ್ರೀಮತಿಯ ಜೀವ ರಾಜಾ ಶ್ರೇಯಾಂಸನಾಯಿತು ಹಾಗೂ ದಾನದ ಪ್ರಥಮ ಪ್ರವರ್ತಕರಾದರು. ಇದೇ ಪ್ರಕಾರ ರಾಜ ಶ್ರೀಷೇಣನು ಅನಂತಗತಿ ಹಾಗೂ ಅರಿಂಜಯ ಹೆಸರಿನ ಮುನಿರಾಜರುಗಳಿಗೆ ಆಹಾರ ದಾನ ನೀಡಿದರು. ಇದರ ಪ್ರಭಾವದಿಂದ ಅವರು 2ನೇ ಭವದಲ್ಲಿ 6ನೇ ತೀರ್ಥಂಕರ ಶಾಂತಿನಾಥರಾದರು, ಅವರು ಮಹಾನ್ ಪದಗಳನ್ನು ಪಡೆದು ಸಿದ್ಧ ಪದವಿ ಪಡೆದರು. ಔಷಧ ದಾನದ ಪುಣ್ಯ ಪ್ರಭಾವದಿಂದ ವೃಷಭಸೇನರು ಸರ್ವೌಷಧ ಋದ್ಧಿಯನ್ನು ಪಡೆದರು.ಶ್ರಾಸ್ತ್ರದಾನದ ಪ್ರಭಾವದಿಂದ ಕೌಂಡೇಶ ಹೆಸರಿನ ಗೌಳಿ ಕಾಲಾಂತರದಲ್ಲಿ ಶ್ರುತ ಪಾರಗಾಮಿ ಮುನಿಯಾದರು ಹಾಗೂ ಆವಾಸದಾನ ನೀಡಿದ ತಿರ್ಯಂಚ ಪರ್ಯಾಯದಲ್ಲಿದ್ದ ಹಂದಿಯು ಶುಭ ಭಾವದಿಂದ ಮರಣ ಹೊಂದಿ ದೇವ ಪರ್ಯಾಯವನ್ನು ಪಡೆಯಿತು. ತೀರ್ಥೋದಯ ಕಾವ್ಯದಲ್ಲಿ ಇವುಗಳ ಬಗ್ಗೆ ಹೀಗೆ ಬರೆದಿದ್ದಾರೆ–

**ಇದ್ದರು ಅವರು ಆಹಾರೌಷಧ ಉಪಕರಣ ಆವಾಸ ದಾನದಲಿ।**
**ಜಿನಧರ್ಮಿಗಳು ಇವುಗಳನು ಕೂಡುತಿರೆ ನಿತ್ಯ, ಬೇಗನೆ ಮೋಕ್ಷದ ನಿವಾಸ ಮಾಡುವರು॥**
**ಶ್ರೀಷೇಣ, ಮಹಿಳೆ ವೃಷಭಸೇನೆ ಮತ್ತು ಕೌಂಡೇಶ, ವರಾಹ ಸಹ।**
**ಸುಖ ಅಥವಾ ದುಃಖಗಳಲಿ ಇರುವ, ಖ್ಯಾತರಾಗಿದ್ದರು ಈ ದಾನಗಳಲಿ॥295॥**

**ಪಡೆದಿದ್ದರು ಶಾಂತಿನಾಥ ಪದವ, ಸರ್ವೋಷಧಿ ಶುಭ ಋದ್ಧಿಯ।**
**ಕೌಂಡೇಶ ಜ್ಞಾನಮುನಿಪದವ, ಸ್ವರ್ಗಕೆ ಹೋಗಿ ಶುಭ ಋದ್ಧಿಯ।**
**ಆ ನಾಲ್ಕು ದಾನಗಳಿಂದ ಕ್ರಮಶ: ಪಡೆದರು ಇವರು ಉಪರಿಮ ಸುಖವ।**
**ಆದ್ದರಿಂದಲೇ ಶಾಸ್ತ್ರದಲಿ ಸಾಧುಗಳು ಇವರ ಗುಣಗಳ ತೋರುವರು॥296॥**

ದಾನದ ಮಹಿಮೆ ಅದೆಷ್ಟು ಅದ್ಭುತವಾಗಿದೆ ಎಂದರೆ ಒಂದು ಚಿಕ್ಕ ವಟದ ಬೀಜವು ದೊಡ್ಡ ನೆರಳು ಕೊಡುವ ವಟವೃಕ್ಷವಾಗುತ್ತದೆ. ಹೀಗೆಯೇ ಅಲ್ಪ ಧನ ತ್ಯಾಗ ರೂಪಿ ದಾನವು ತೀರ್ಥಂಕರ, ಚಕ್ರವರ್ತಿ ಅಥವಾ ಇಂದ್ರ ವಿಭೂತಿಯಂತಹ ಸುಖದ ಫಲವನ್ನು ನೀಡುತ್ತಾ ಮೋಕ್ಷದ ಶಾಶ್ವತ ಸುಖದ ಫಲವನ್ನು ಸಹ ನೀಡುತ್ತದೆ. ತೀರ್ಥಂಕರ ಋಷಭ ದೇವರು ರಾಜ್ಯಾವಸ್ಥೆಯಲ್ಲಿ ಒಂದು ಛತ್ರವನ್ನು ಬಿಟ್ಟಿದ್ದರಿಂದ ಅರ್ಹಂತರಾಗಿ ಸಮವರಸರಣದಲ್ಲಿ ಛತ್ರತ್ರಯವನ್ನು ಪಡೆದಿದ್ದರು. ರಾಮ, ಹನುಮಾನ್, ಮಹಾವೀರ ಇವರಿಗೆ ದೊರೆತ ಮೋಕ್ಷವು ಅವರು ಸಂಸಾರದಲ್ಲಿ ಆ ಭೋಗಗಳನ್ನು

ತ್ಯಾಗ ಮಾಡಿದ್ದರಿಂದಲೇ ದೊರೆತಿದ್ದಿತು. ಆಚಾರ್ಯ ಸಮಂತಭದ್ರ ಸ್ವಾಮಿಗಳು ರತ್ನಕರಂಡಕ ಶ್ರಾವಕಾಚಾರದಲ್ಲಿ ಹೀಗೆ ಹೇಳಿದ್ದಾರೆ–

**ಕ್ಷಿತಿಗತಮಿವ ವಟಬೀಜಂ ಪಾತ್ರಗತಂ ದಾನ ಮಲ್ಪಮಪಿ ಕಾಲೇ।**
**ಫಲ ತಿಚ್ಛಾಯಾ ವಿಭವಂ ಬಹುಫಲಮಿಷ್ಟಂ ಶರೀರ ಭೃತಾಮ್॥116॥**

ಭೂಮಿಯಲ್ಲಿ ಸರಿಯಾದ ಸಮಯದಲ್ಲಿ ಕಸಕಸಿಯ ಕಾಳಿನಂತಿರುವ ಅತಿ ಚಿಕ್ಕದಾದ ವಟದ ಬೀಜ ಗೊಬ್ಬರ ಮತ್ತು ನೀರನ್ನು ಪಡೆದು ವಟ ವೃಕ್ಷದ ರೂಪವನ್ನು ತಾಳುವಂತೆ, ಸತ್ಪಾತ್ರರಿಗೆ ಸರಿಯಾದ ಸಮಯದಲ್ಲಿ ಕೊಡಲಾಗುವ ಅಲ್ಪದಾನವು ಸಹ ಬಹುಫಲವನ್ನು ನೀಡುತ್ತದೆ. ಬಾವಿಯಿಂದ ನೀರನ್ನು ತೆಗೆಯದಿದ್ದರೆ ಅದು ಕೆಟ್ಟು ಹೋಗುತ್ತದೆ. ಎಲೆಯನ್ನು ತಿರುವಿ ಹಾಕದಿದ್ದರೆ ಅದು ಕೆಟ್ಟು ಹೋಗುತ್ತದೆ. ರೊಟ್ಟಿಯನ್ನು ತಿರುವಿ ಹಾಕದಿದ್ದರೆ. ಅದು ಸುಟ್ಟು ಹೋಗುತ್ತದೆ ಹಾಗೂ ಕುದುರೆಯನ್ನು ನಡೆದಾಡಿಸದಿದ್ದರೆ ಹಟ ಮಾಡುತ್ತದೆ, ಆದ್ದರಿಂದ ಹಣವನ್ನು ತೆಗೆಯದಿದ್ದರೆ ಮರಣದ ನಂತರ ಅದು ಭೂಮಿಯಲ್ಲಿಯೇ ಬಿದ್ದಿರುತ್ತದೆ. ಇದೇ ಭಾವವನ್ನು ತೀರ್ಥೋದಯ ಕಾವ್ಯದಲ್ಲಿ ಬರೆದಿದೆ.

**ತೆಗೆದಷ್ಟು ನೀರು ಬಾವಿಯಿಂದ, ಸಿಗುವುದಷ್ಟು ಶುದ್ಧನೀರು**
**ತೆಗೆಯದಿದ್ದರೆ ನೀರಲ್ಲಿ ದುರ್ಗಂಧ ಆಗುವುದು ನೀರು**
**ಎಲ್ಲಿ ಸಂಪದವ ಧರ್ಮಕಾರ್ಯದಲ್ಲಿ ದಾನ ಕಾರಣದಿ ಕೊಡಲು**
**ಅಲ್ಲಿ ಬೀಜದಿ ವಟ ಮರದ ಹಾಗೇ, ಆಗುವುದು ಸಂಪದವು॥294॥**

ವಾಸ್ತವಿಕವಾಗಿ ಧನ ತ್ಯಾಗದ ಮಹಿಮೆ ಅಪಾರವಾಗಿದೆ, ಧನವು ತನು–ಮನ–ಜೀವನ ಹಾಗೂ ಚೇತನವನ್ನು ಸಹ ಪಾವನ ಗೊಳಿಸಲು ಕಾರಣವಾಗಿದೆ. ಇದಕ್ಕಾಗಿ ಆಚಾರ್ಯರು ಹೇಳುತ್ತಾರೆ–

**ಜಿನ ಬಿಂಬದಲಿ, ಜಿನಾಗಾರದಲಿ, ಜಿನಯಾತ್ರೆಯಲಿ, ಮಹೋತ್ಸವದಲಿ।**
**ಜಿನ ತೀರ್ಥದಲಿ, ಜಿನಾಗಮದಲಿ, ಜಿನಾಯತನಗಳಲಿ ಸಪ್ತ ಸ್ಥಾನಗಳಲಿ॥**
**ಜಿನ ಬಿಂಬದಲಿ, ಜಿನಾಗಾರದಲಿ, ಜಿನಯಾತ್ರೆಯಲಿ ಪ್ರತಿಷ್ಠಾನಗಳಲಿ**
**ದಾನ, ಪೂಜೆ ಹಾಗು ಸಿದ್ಧಾಂತ ಲೇಖನಗಳ ಕ್ಷೇತ್ರ ಸಪ್ತಕಗಳಲಿ॥**

ಜಿನ ಪ್ರತಿಮೆ, ಜಿನಮಂದಿರ, ಜಿನಯಾತ್ರೆಯಲಿ ಪ್ರತಿಷ್ಠಾ ಮಹೋತ್ಸವ ಇತ್ಯಾದಿ, ಜಿನತೀರ್ಥ, ಜಿನಾಗಮ, ಜಿನಭಗವಂತರಿಗೆ ಸಂಬಂಧವಿರುವ ಯಾವುದಾದರೂ ಆಯತನಗಳಲ್ಲಿ ಈ ಏಳು ಕ್ಷೇತ್ರಗಳಲ್ಲಿ ದಾನ ನೀಡಬೇಕು. ದಾನದ ಫಲವು ಕೂಡಲೇ ಸಿಗುತ್ತದೆ. ಕಾಲಾಂತರದಲ್ಲಿಯೂ ಸಹ ಸಿಗುತ್ತದೆ. ಹೇಳುವ ತಾತ್ಪರ್ಯವಿಷ್ಟೇ ಹೇಗೆ ದಾನ ನೀಡಲಾಗುತ್ತದೋ ಹಾಗೆಯೇ ಪಡೆಯಲಾಗುತ್ತದೆ. ದಾನ ನೀಡುವಾಗ ವಿಶೇಷವಾಗಿ ಗಮನ ನೀಡಬೇಕಾದ ಅಂಶವೆಂದರೆ ಮೊದಲು ಚೆನ್ನಾಗಿ ಗಳಿಸೋಣ ನಂತರ ಕೋಡೋಣವೆಂದು ಎಂದಿಗೂ ಯೋಚಿಸಬಾರದು ಯಾಕೆಂದರೆ ಪುಣ್ಯವಿಲ್ಲದೇ ವ್ಯಕ್ತಿಗೆ ಇಚ್ಛಾನುಸಾರವಾಗಿ ಹಣವು ಎಂದಿಗೂ ದೊರಕುವುದಿಲ್ಲ. ಯಾವಾಗ ಎಷ್ಟಿದೆಯೋ ಅಷ್ಟರಲ್ಲಿಯೇ ನಮ್ಮ ಧರ್ಮಕಾರ್ಯವನ್ನು ಮಾಡಿಕೊಳ್ಳಬೇಕು. ಭವಿಷ್ಯವನ್ನು ಯಾರು ನೋಡಿದ್ದಾರೆ ಅದಂತೂ ಅಂಧಕಾರಮಯವಾಗಿರುತ್ತದೆ. ಹಣದ ಮೂರು ಗತಿಗಳನ್ನು ಆಚಾರ್ಯರು ಹೇಳಿದ್ದಾರೆ ದಾನ, ಭೋಗ ಮತ್ತು ನಾಶ, ದಾನ ನೀಡಿ ಈ ಭವ

ಹಾಗೂ ಪರ ಭವದಲ್ಲಿ ಯಶದ ಪ್ರಾಪ್ತಿ ಹಾಗೂ ಸುಖವನ್ನು ಪಡೆಯ ಬಹುದಾಗಿದೆ. ಹೀಗೆ ಹೇಳಿಯೂ ಇದ್ದಾರೆ–

**ದಾನ ದೇಯ ಮನ ಹರಷ ವಿಶೇಖೈ, ಇಹಭವ**
**ಜಸ ಪರಭವ ಸುಖ ದೇಖೈ।**

ಧನವನ್ನು ಭೋಗಿಸಿ ಪರಭವದಲ್ಲಿ ಅಲ್ಲದೇ ಈ ಭವದಲ್ಲಿಯೇ ಆನಂದದ ಅನುಭವವಾಗುತ್ತದೆ ಹಾಗೂ ದಾನ ಅಥವಾ ಭೋಗ ಮಾಡದಿದ್ದರೆ ಧನದ ಅಂತಿಮ ಗತಿ ನಾಶವಾಗುತ್ತದೆ. ಕಾರ್ತಿಕೇಯಾನು ಪ್ರೇಕ್ಷೆಯಲ್ಲಿ ಹೀಗೆ ಹೇಳಿದ್ದಾರೆ–ಲಕ್ಷ್ಮಿಯನ್ನು ಕೇವಲ ಸಂಚಯ ಮಾಡುತ್ತಿರುವ ಮನುಷ್ಯರು ಅದನ್ನು ಭೋಗಿಸುವುದೂ ಇಲ್ಲ ಹಾಗೂ ದಾನವನ್ನಾಗಿಯೂ ನೀಡುವುದಿಲ್ಲ ಅವರು ತಮ್ಮನ್ನು ತಾವೇ ಮೋಸ ಮಾಡಿಕೊಳ್ಳುತ್ತಾರೆ ಹಾಗೂ ಅವರ ಮನುಷ್ಯ ಜನ್ಮ ನಿರರ್ಥಕವಾಗಿದೆ. ಇದಕ್ಕೆ ವಿರುದ್ಧವಾಗಿ ಲಕ್ಷ್ಮಿಯನ್ನು ಸದಾಕಾಲ ಧರ್ಮಕಾರ್ಯದಲ್ಲಿ ತೊಡಗಿಸುವ ವ್ಯಕ್ತಿಗಳ ಲಕ್ಷ್ಮಿಯು ಸಮೃದ್ಧಿ ಸಫಲವೆಂದು ಹೇಳಲಾಗುತ್ತದೆ ಹಾಗೂ ಅವರೇ ಪ್ರಶಂಸೆಗೆ ಪಾತ್ರರಾಗಿದ್ದಾರೆ. ದಯೆ, ಕರುಣಾಪೂರ್ಣ ಭಾವಗಳಿಂದ ಎಲ್ಲರ ಸೇವೆ, ಸಹಯೋಗ ಮಾಡುವುದು ಅವರ ಆವಶ್ಯಕತೆಗಳನ್ನು ಪೂರ್ಣಗೊಳಿಸುವುದು ಸಹ ಬಹಳ ದೊಡ್ಡ ಧರ್ಮ/ದಾನವಾಗಿದೆ ಇದನ್ನು ಕರುಣಾ ದಾನವೆನ್ನುತ್ತಾರೆ. ದಾನದ ಕೆಲವು ಆಭರಣಗಳಿವೆ, ಆ ಭೂಷಣಗಳು ಯಾವವು ನಿಮಗೆ ತಿಳಿದಿದೆಯೆ? ಆನಂದದ ಕಣ್ಣೀರು ಬರುವುದು, ಶರೀರ ರೋಮಾಂಚನವಾಗುವುದು, ಬಹುಮಾನವಾಗುವುದು, ಪ್ರಿಯ ವಚನಗಳನ್ನಾಡುವುದು ಹಾಗೂ ನಂತರ ದಾನದ ಅನುಮೋದನೆ ಮಾಡುವುದು, ಈ ಐದು ದಾನದ ಆಭರಣಗಳಾಗಿವೆ ಹಾಗೂ ಇದಕ್ಕೆ ವಿಪರೀತವಾಗಿ ಅನಾದರದಿಂದ ದಾನ ಕೊಡುವುದು, ತಡಮಾಡುವುದು, ವಿಕೃತ ಮುಖ ಮಾಡಿಕೊಳ್ಳುವುದು, ಕಟು ಮಾತುಗಳನ್ನಾಡುವುದು, ದಾನ ನೀಡಿ ಪಶ್ಚಾತ್ತಾಪ ಪಡುವುದು ಹಾಗೂ ದುಃಖಿತನಾಗುವುದು ಇವು ದಾನದ ದೋಷಗಳಾಗಿವೆ.

ಇಂದಿನ ದಿನಗಳಲ್ಲಿ ಕೆಲವರು ದಾನ, ವ್ರತ, ಪೂಜೆ, ತಪ ಇತ್ಯಾದಿ ಅನುಷ್ಠಾನಗಳನ್ನು ಕೆಟ್ಟದೆಂದು ಹೇಳಿ ಭ್ರಮೆ ಉಂಟು ಮಾಡುತ್ತಿರುವುದನ್ನು ತಾವು ಕೇಳಿರಬಹುದು ನೋಡಿ ಸಹೋದರರೇ, ಶ್ರಾವಕ ಧರ್ಮದ ವಿಷಯದಲ್ಲಿ ಧವಲಾ ಗ್ರಂಥದಲ್ಲಿ ಹೀಗಿದೆ–

**ದಾಣಂ ಪೂಜಾ ಸೀಲಮುಪವಾಸೋಚೇದಿ ಚಹುವ್ವಿವಿಹೋ ಸಾವಯ ಧಮ್ಮೋ।**
**(82/100/2)**

ಸತ್ಪಾತ್ರ ದಾನ ಕೊಡುವುದು, ಪೂಜೆ ಮಾಡುವುದು. ಶೀಲದ ಪಾಲನೆ ಮತ್ತು ಉಪವಾಸ ಮಾಡುವುದು, ಈ ನಾಲ್ಕು ಶ್ರಾವಕನ ಧರ್ಮಗಳಾಗಿವೆ. ಹಾಗಾದರೆ ವ್ರತ, ಪೂಜೆ, ದಾನ, ತಪ ಇತ್ಯಾದಿ ಅನುಷ್ಠಾನಗಳನ್ನು ಯಾರು ಹೇಯವೆಂದು ಹೇಳುತ್ತಾರೋ ಅವರು ಇನ್ನೂ ಸ್ಯಾದ್ವಾದ ರೂಪದ ಧರ್ಮವನ್ನು ತಿಳಿದಿರುವುದಿಲ್ಲ. ಸ್ವಯಂ ವ್ರತ, ಉಪವಾಸ ಇತ್ಯಾದಿಗಳ ಪಾತ್ರತೆ ಇರದಾಗ ಮಾರ್ಗವನ್ನು ಸರಿಯಲ್ಲವೆಂದು ಹೇಳುವುದು, ಸತ್ಯಕ್ಕೆ ಆವರಣ ಮಾಡುವುದು ವಿವೇಕಿ ಜನರ ಲಕ್ಷಣವಲ್ಲ. ಇದು ಧರ್ಮದ ಅವರ್ಣವಾದವಾಗಿದೆ. ಕೊನೆಯಲ್ಲಿ ಹೇಳುವುದಿಷ್ಟೇ ಜೀವನದಲ್ಲಿ

ಧರ್ಮಧಾರಣೆ ಮಾಡಿಕೊಳ್ಳುವವರು ಅಂತರಂಗದ ಧ್ವನಿಯನ್ನು ಕೇಳಿ ಅಳವಡಿಸಿಕೊಳ್ಳುವವರು ಮಹಾನ್‌ರಾಗಿರುತ್ತಾರೆಂದು-ಗುರು ಮಹಾರಾಜರು ಹೇಳುತ್ತಿದ್ದರು. ಹೀಗೆ ಹೇಳಿಯೂ ಇದ್ದಾರೆ-

**ಚಹರೆಯ ಮೇಲೆ ಚಹರೆ ಇದೆ, ಬಹಳ ಬಹಳ ಆಳವಿದೆ।**
**ಆದರೆ ಖೇದದ ಮಾತೆಂದರೆ-**
**ತ್ಯಾಗ-ತಪಸ್ಸಿನ ಕ್ಷೇತ್ರದಲಿ- ಕುರುಡರು ಹಾಗೂ ಕಿವುಡರು ಇದ್ದಾರೆ.**

ಇಲ್ಲಿಯ ವರೆಗೆ ನಾವು ತ್ಯಾಗವನ್ನು ನಮಗಾಗಿ ಮಾಡುತ್ತೇವೆ, ದಾನವನ್ನು ಇನ್ನೊಬ್ಬರಿಗೆ ನೀಡಲಾಗುತ್ತದೆ ಎಂಬುದನ್ನು ತಿಳಿದೆವು. ತ್ಯಾಗವು ಸ್ವ ಸಾಪೇಕ್ಷವಾಗಿದೆ ಹಾಗೂ ದಾನವು ಪರ ಸಾಪೇಕ್ಷವಾಗಿದೆ. ತ್ಯಾಗ ಮತ್ತು ದಾನಗಳಲ್ಲಿ ಧರ್ಮವಿದೆ, ಪುಣ್ಯವಿದೆ, ತ್ಯಾಗವು ಉಪಯೋಗಿ ಹಾಗೂ ಅನುಪಯೋಗಿ ಎರಡೂ ಪ್ರಕಾರಗಳಿಂದ ಮಾಡಲಾಗುತ್ತದೆ. ಉಪಯೋಗಿ ವಸ್ತುಗಳನ್ನು ದಾನವಾಗಿ ನೋಡಲಾಗುತ್ತದೆ. ತ್ಯಾಗದಿಂದ ಸ್ವ ಉಪಕಾರವಾಗುತ್ತದೆ. ಪರ ಉಪಕಾರವು ಆಗಬಹುದು. ಆದರೆ ದಾನದಿಂದ ಸ್ವ-ಉಪಕಾರ ಅವಶ್ಯವಾಗಿ ಆಗುತ್ತದೆ. ನೋಡಿ ತ್ಯಾಗವಂತೂ ರಾಗ-ದ್ವೇಷದ್ದನ್ನು ಮಾಡಲಾಗುತ್ತದೆ. ಬಾಹ್ಯವಸ್ತುಗಳ ತ್ಯಾಗದೊಂದಿಗೆ ಅಂತರಂಗ ಕಷಾಯಗಳನ್ನು ಸಹ ಕೃಶ ಮಾಡಬೇಕಾಗುತ್ತದೆ. ಜ್ಞಾನದ್ದಂತೂ ದಾನವೇ ಮಾಡಬಲ್ಲದು. ಆದರೆ ಆಹಾರ ಮತ್ತು ಔಷಧಿ ಇತ್ಯಾದಿಗಳ ತ್ಯಾಗ ಹಾಗೂ ದಾನ ಎರಡನ್ನು ಮಾಡಬಹುದು. ವಾಸ್ತವಿಕಗಾಗಿ ಮಮತ್ವವನ್ನು ಬಿಟ್ಟು ಪರಿಣಾಮಗಳಲ್ಲಿ ನಿರ್ಮಲತೆ ಬರುವುದೇ ತ್ಯಾಗದ ಪ್ರಯೋಜನವಾಗಿದೆ. ತ್ಯಾಗವು ಶ್ರೇಷ್ಠವಾಗಿದೆ. **"ತ್ಯಾಗಾಚ್ಛಾಂತಿಃ"** ಅರ್ಥಾತ್ ತ್ಯಾಗದಿಂದ ಶಾಂತಿ ಪ್ರಾಪ್ತವಾಗುತ್ತದೆ. ತ್ಯಾಗವೇ ಶಾಂತಿಯ ಸೋಪಾನವಾಗಿದೆ, ತ್ಯಾಗವೇ ಜೀವನವನ್ನು ಮೇಲಕ್ಕೇತ್ತುತ್ತದೆ. ತ್ಯಾಗವೇ ಮುಕ್ತಿಯ ಮಾರ್ಗವಿದೆ, ತ್ಯಾಗದಿಂದಲೇ ಸುಖದ ಪ್ರಾಪ್ತಿಯಾಗುತ್ತದೆ. ತೀರ್ಥೋದಯ ಕಾವ್ಯದಲ್ಲಿ ತ್ಯಾಗದ ವಿಷಯದಲ್ಲಿ ಹೀಗೆ ಬರೆಯಲಾಗಿದೆ-

**ಮೋಕ್ಷಮಾರ್ಗದ ಭವಿ ಜನರು ತ್ಯಾಗ ಮಾರ್ಗದಲಿ ಸಾಗುವರು।**
**ಮೋಹವ ಸರಿಸಿ ಸಮತೆಯಲಿ ವಿಷಯ ಭೋಗವ ಬಿಡುವರು॥370॥**
**ಭೋಗ ಸಂಪತನು ಹೇಗೆ-ಹೇಗೆ ಮಾನವ ತ್ಯಜಿಸುವನೋ।**
**ಹಾಗೇ ಹಾಗೇ ಧರ್ಮಧ್ಯಾನದಿ ಪರಮಾತ್ಮನನು ಭಜಿಸುವನು॥**
**ಜನ್ಮ-ಜನ್ಮದಿ ಬಂಧಿತ ಅಶುಭ ಕರ್ಮವು ಕ್ಷಯಿಸುವುದು।**
**ಪುಣ್ಯ ಸಂಪದದಿ ಪಡೆದು ಸಮವಸರಣ ಪ್ರಾಣಿ ಅಕ್ಷಯವಾಗುವುದು॥378॥**

ಕೇವಲ ಜ್ಞಾನವಾದ ನಂತರವೂ ಭಗವಾನರ ಕೆಳಗೆ ಮುಂದೆ, ಹಿಂದೆ ಎಲ್ಲೆಡೆ ಸಮವಸರಣ ರೂಪದಲ್ಲಿ ಸಂಪತ್ತು ವಿದ್ಯಮಾನವಾಗಿರುತ್ತದೆ. ಆದರೆ ಅವರಂತೂ ಕಮಲಾಸನದ ಮೇಲೆಯೂ ಸಹ ನಾಲ್ಕು ಅಂಗುಲ ಮೇಲೆ ಅಂತರಿಕ್ಷದಲ್ಲಿ ವಿರಾಜಮಾನರಾಗಿರುತ್ತಾರೆ. ಆ ವಿಶಾಲ ಸಮವಸರಣದ ಒಂದು ಕಣವನ್ನು ಸಹ ಮುಟ್ಟುವುದಿಲ್ಲ ಹಾಗೂ ಕೊನೆಯಲ್ಲಿ ಯೋಗ ನಿಗ್ರಹ ಅರ್ಥಾತ್ ಮನ-ವಚನ-ಕಾಯಗಳ ಸೂಕ್ಷ್ಮ ಕ್ರಿಯೆಗಳನ್ನು ಸಹ ವಿರೋಧ ಮಾಡಲು ಹೊರಡುತ್ತಾರೆ. ಸಮವಸರಣದ ಆ ವಿಶಾಲ ಸಂಪತ್ತು ಹಿಂದೆ ಉಳಿದು ಬಿಡುತ್ತದೆ. ಇದು ತ್ಯಾಗದ ಅಂತಿಮ ಸೋಪಾನವಾಗಿದೆ. ಆಗ ಅವರಿಗೆ ಮುಕ್ತಿ ದೊರೆಯುತ್ತದೆ. ತೀರ್ಥಂಕರ ಪದವಿ ಅಥವಾ ಸಂಪತ್ತು ಜೊತೆಗೆ ಹೋಗುವುದಿಲ್ಲ ಹಾಗೂ ಅವರು ಅನಂತ ಸುಖಗಳು ಈಗ ಮೋಕ್ಷ ಅವಸ್ಥೆಯನ್ನು

ಪಡೆಯುತ್ತಾರೆ. ಸಹೋದರರೇ ವೀತರಾಗರಾಗಿರುವವರು ಉತ್ತಮ ತ್ಯಾಗ ಧರ್ಮ ಧಾರಣೆ ಮಾಡಿದ್ದಾರೆ, ಮೋಕ್ಷ ಲಾಭವಾಗುವವರೆಗೆ ಅವರ ಬಗ್ಗೆ ನಮ್ಮ ಪ್ರಶಸ್ತ ಅನುರಾಗವಿರಲಿ. ಅವರ ತ್ಯಾಗವನ್ನು ನಾವು ಅನುಮೋದನೆ ಮಾಡುತ್ತೇವೆ ಹಾಗೂ ಉತ್ತಮ ತ್ಯಾಗ ಧರ್ಮದ ಭಾವನೆ ಒಂದು ದಿನ ಈ ಸಂಸಾರದಿಂದ ಬಿಡುಗಡೆ ಮಾಡಿ ನಮಗೂ ಸಹ ಮುಕ್ತಿಯ ಅಪರಿಮಿತ ಸುಖವನ್ನು ಕೊಡಿಸಲಿ ಸಾಕು.

**ಆಚರಣೆಯು ರಾಕ್ಷಸನನ್ನು ಮನುಷ್ಯನನ್ನಾಗಿ ಮಾಡುವುದು;**
**ಮಾಲಿಯು ಕಾಡನ್ನು ತೋಟವನ್ನಾಗಿ ಮಾಡಿ ಬಿಡುವನು.**
**ಮೋಕ್ಷಮಾರ್ಗದ ಏಣಿಯನ್ನೇರಿದಾಗ, ಏನೆಂದು ಹೇಳಲಿ,**
**ತ್ಯಾಗವು ಮನುಷ್ಯನನ್ನು ದೇವನನ್ನಾಗಿ ಮಾಡಿ ಬಿಡುತ್ತದೆ.**

# ಉತ್ತಮ ಆಕಿಂಚನ್ಯ ಧರ್ಮ
## ನನ್ನದೂ ಏನೂ ಇಲ್ಲ–ಇದೇ ಆಗಿದೆ ಆಕಿಂಚನ್ಯ

### ಮಂಗಲಾಚರಣೆ

**ವಿಶ್ವ ವಿಜ್ಞಂ ವಿಧಿಂ ವೇದಂ, ವೀರಂ ವಿರಾಗ ವೈಭವಂ।**
**ಸಂಗ ಮುಕ್ತ ಯಜೇ ಬುದ್ಧಂ, ಕೇಶವಂ ಶಂಭವಂ ಶಿವಂ॥**

ಸದ್ಧರ್ಮ ಬಂಧುಗಳೇ,

ನೆನ್ನೆಯ ದಿನ ಉತ್ತಮ ತ್ಯಾಗಧರ್ಮವಿದ್ದಿತು ಹಾಗೂ ಇಂದು ಉತ್ತಮ ಆಕಿಂಚನ್ಯ ಧರ್ಮವಿದೆ. ಎಲ್ಲವನ್ನೂ ಬಿಟ್ಟಿರುವಾಗ, ಪರಪದಾರ್ಥದ ಎಳ್ಳಷ್ಟು ಸಂಬಂಧ ಉಳಿಯುವುದಿಲ್ಲ. ಆಗ ಆಕಿಂಚನ್ಯಧರ್ಮ ಬರುತ್ತದೆ, ಅಂತರಂಗದಿಂದ ಮಿಥ್ಯಾತ್ವ ಹಾಗೂ ಕಷಾಯ ವಿಕಲ್ಪ ಪರಿಣಾಮಗಳನ್ನು ಸಹ ತ್ಯಾಗ ಮಾಡಬೇಕಾಗುತ್ತದೆ. ಯಾಕೆಂದರೆ ಆತ್ಮನು ಪೂರ್ಣ ರೂಪದಿಂದ ಶುದ್ಧನಾಗಲಿ ಎನ್ನುವುದಾಗಿದೆ, ಆದರೆ ಸಾಧನೆಯ ಮೂಲಕ ಹನ್ನೊಂದನೆ ಗುಣಸ್ಥಾನದ ವರೆಗೆ ತಲುಪಿದಾಗಲೂ ಅಲ್ಪ ಕಷಾಯದ ಉದಯ ಬಂದು ಬಿಡುತ್ತದೆ ಮತ್ತು ಅಲ್ಲಿ ಸಾಧಕ ಸಾಧನೆಯಿಂದ ಬಿದ್ದು ಬಿಡುತ್ತಾನೆ ಎಂಬ ಅಂಶವನ್ನು ಗಮನದಲ್ಲಿಡ ಬೇಕು. ಸ್ವಲ್ಪವಾದರೂ ಕಷಾಯ ಭಾವ ಅಥವಾ ಅಶುಭಕರ್ಮ ಸಾಧಕರಿಗೆ ಮುಕ್ತಿ ಪಡೆಯುವಲ್ಲಿ ಬಾಧಕವಾಗಿ ಬಿಡುತ್ತದೆ. ಹಾಗಿರುವಾಗ ಸಹೋದರರೇ ತ್ಯಾಗದ ನಂತರ ಆಕಿಂಚನ್ಯ ಧರ್ಮವಿದೆ ಹಾಗೂ ಇದರ ನಂತರ ಉತ್ತಮ ಬ್ರಹ್ಮಚರ್ಯ ಬರುತ್ತದೆ. ಆಗ ಆತ್ಮನಲ್ಲಿ ರಮಣನಾಗಲು ಸಾಧ್ಯವಾಗುತ್ತದೆ. ಆಗ ನಾವು ಸಂಪೂರ್ಣವಾಗಿ ಹಗುರವಾದ ಹೂವಿನಂತಾಗಿರುತ್ತೇವೆ. ಇದಕ್ಕಾಗಿ ಖಾಲಿಯಾಗಬೇಕಾಗುತ್ತದೆ ಪರಪದಾರ್ಥಗಳ ಸಹಿತದಿಂದ ರಹಿತ ಹಾಗೂ ಯುಕ್ತದಿಂದ ಮುಕ್ತ, ಸೃಜನದಿಂದ ವಿಸರ್ಜನದ ಕಡೆಗೆ ಹೆಜ್ಜೆ ಹಾಕಿದರೆ ಆಗ ಆತ್ಮನ ನಿರ್ಮಲತೆಯ ವಿಕಾಸವಾಗುತ್ತದೆ. ಯಾವುದೇ ಕಡೆಯಿಂದ ಯಾವುದೇ ಸಂಬಂಧವುಳ್ಳ ಸಂಗತಿ ಆಗುವುದಿಲ್ಲ. ಆಗಲೇ ಅಂತರಂಗದೊಂದಿಗೆ ಸೇರಿರಲು ಸಾಧ್ಯ ಇಲ್ಲವಾದಲ್ಲಿ ಸೇರುವುದಿಲ್ಲ. ಪರಮಾಣುವಿನಷ್ಟು ಸಹ ರಾಗ ಬಾಧಕವಾಗಿ ಬಿಡುತ್ತದೆ. ಸಕಲ ಕಾರ್ಯವು ಕ್ರಮ ಪೂರ್ವಕವಾಗಿಯೇ ನಡೆಯುತ್ತದೆ.

ಎಲ್ಲಕ್ಕಿಂತ ಮೊದಲು ನಾಲ್ಕು ಕಷಾಯಗಳು ಕ್ರೋಧ, ಮಾನ, ಮಾಯಾ, ಲೋಭಗಳನ್ನು ದೂರಮಾಡಿದರೆ ಕ್ಷಮೆ, ಮಾರ್ದವ, ಆರ್ಜವ ಮತ್ತು ಶೌಚ ಧರ್ಮಗಳು ಬರುತ್ತವೆ. ಆಗ ಪವಿತ್ರತೆಯು ಪ್ರಕಟವಾಗುತ್ತದೆ ಮತ್ತೆ ಸತ್ಯ ಬಂದಾಗ ಸತ್ಯ ಪ್ರಕಟವಾಗಿ ಸಾಧು ಅಥವಾ ಸಜ್ಜನರಿಂದ ಆಗಮಕ್ಕನುಗುಣವಾಗಿ ಹಿತಕ್ಕಾಗಿ ಹೇಳಿದ ಸತ್ಯಧರ್ಮವಾಗುತ್ತದೆ. ಸತ್ಯವನ್ನು ಆಚರಣೆಗೆ ತಂದನಂತರ ಸಂಯಮ ಧಾರಣೆ ಮಾಡುತ್ತೇವೆ. ಅದರಲ್ಲಿ ಇಂದ್ರಿಯ ಸಂಯಮ ಪ್ರಾಣಿ ಸಂಯಮಗಳಿವೆ, ಇಂದ್ರಿಯಗಳ ಮೇಲೆ ಕುದುರೆಯ ಮೇಲೆ ಲಗಾಮು ಹೊಂದಿರುವಂತೆ ನಮ್ಮ ಇಂದ್ರಿಯಗಳ ಮೇಲೆ ಲಗಾಮು ಹಾಕಿ ಮತ್ತೆ ಆಮೆಯ ಹಾಗೆ ಸಂಕುಚಿತ ಗೊಳಿಸುತ್ತಾ ನಮ್ಮನ್ನು ಪಾಪಗಳಿಂದ

ಸಂರಕ್ಷಿಸಿಕೊಳ್ಳುತ್ತೇವೆ. ಪ್ರಾಣಿಗಳ ಸಂಯಮದ ಪಾಲನೆ ಮಾಡಿ ಷಟ್ ಜೀವ ನಿಕಾಯಗಳ ಹಿಂಸೆಯನ್ನು ಬಿಟ್ಟೆವು, ನಂತರ ತಪ ಮಾಡಿದೆವು. ಇಂದ್ರಿಯ ನಿರೋಧ ಇಲ್ಲದವರೆಗೆ ತಪಸ್ಸು ಹೇಗೆ ಸಾಧ್ಯ? ಇಂದ್ರಿಯಗಳು ಮತ್ತು ತ್ರಸ ಇತ್ಯಾದಿಗಳ ಹಿಂಸೆಗಳಿಂದ ಪಾಪಗಳ ಆಸ್ರವ ಆಗುತ್ತಿರುತ್ತದೆ ಹಾಗೂ ಪಾಪಗಳ ಆಸ್ರವ ನಿಂತ ಮೇಲೆಯೇ ಸಂವರವಾಗಿ ತಪ ಆಗುತ್ತದೆ. ಹೊಸ ಕರ್ಮಗಳ ಆಗಮನ ನಿಲ್ಲುವುದು ತಪವಾಗಿದೆ. ಆಗ ಹಿಂದಿನ ಕರ್ಮಗಳ ನಿರ್ಜರೆಯಾಗುತ್ತದೆ. ಸಂವರವೂ ಆಗುತ್ತದೆ. ತತ್ವಾರ್ಥ ಸೂತ್ರದಲ್ಲಿ ಆಚಾರ್ಯ ಉಮಾಸ್ವಾಮಿಗಳು 'ತಪಸಾ ನಿರ್ಜರಾ ಚ' ಎಂದು ಹೇಳಿದ್ದಾರೆ. ಇಷ್ಟೆಲ್ಲಾ ಆದ ಮೇಲೆ ಒಳಗಿರುವ ವಿಭಾವ ಪರಿಣತಿಗಳೆಲ್ಲವೂ ಹೊರಗೆ ಬರುತ್ತವೆ. ಪೂರ್ಣ ರೂಪದಿಂದ ತ್ಯಾಗವಾಗುತ್ತದೆ ಹಾಗೂ ಖಾಲಿಯಾಗಿ ಬಿಡುತ್ತವೆ. ಹಾಲಿನಿಂದ ನೀರಿನ ಅಂಶ ಪೂರ್ಣ ಸಮಾಪ್ತಿಯಾದಾಗಲೇ ಅಲ್ಲಿ ತುಪ್ಪ ರೂಪಗೊಳ್ಳುತ್ತದೆ. ಹಾಗೆಯೇ ಪೂರ್ಣರೂಪದಿಂದ ಅಂತರಂಗ ಪರಿಗ್ರಹವು ಸಹ ಹೊರಗೆ ಹೋದಾಗ ಆಕಿಂಚನ್ಯ ಅವಸ್ಥೆ ಬರುತ್ತದೆ. ತ್ಯಾಗದ ನಂತರ ಆಕಿಂಚನ್ಯವನ್ನು ಕ್ರಮವಾಗಿ ಹೇಳಿರುವ ಉದ್ದೇಶವು ಸಹ ಇದೆ ಆಗಿದೆ. ಏನನ್ನು ತ್ಯಾಗ ಮಾಡಿದೆ ಅದರ ಮೇಲೆ ಪುನ: ಮಮತ್ವ ಅಥವಾ ಅಹಂಕಾರ ಉತ್ಪನ್ನವಾಗಬಾರದು ವಾಸ್ತವಿಕ ಸ್ಥಿತಿಯಲ್ಲಿ ಮೋಹ ಹಾಗೂ ಆಸಕ್ತಿಯ ಕ್ಷಯದಿಂದ ಆಕಿಂಚನ್ಯ ಧರ್ಮವನ್ನು ಪಡೆಯುವುದು ಭೇದ ವಿಜ್ಞಾನದ ಮಾರ್ಗವಾಗಿದೆ ಮತ್ತು ತನ್ನ ಸ್ವಭಾವದಲ್ಲಿ ಲೀನವಾಗಿ ಬಿಡುವುದೇ ಬ್ರಹ್ಮಚರ್ಯವಾಗಿದೆ. ಕೇವಲ ಹಾಗೆಯೇ ಬ್ರಹ್ಮಚರ್ಯದ ಪಾಲನೆ ಮಾಡಲಾಗದು. 18 ಸಾವಿರ ಶೀಲಗಳಿವೆ, ಅವುಗಳು ಬಂದಾಗ ಆತ್ಮನಲ್ಲಿ ಲೀನರಾಗಲು ಬಹಳ ದೊಡ್ಡ ಸುಯೋಗ ಅಥವಾ ಅವಕಾಶ ದೊರೆಯುತ್ತದೆ ಅದು ಹೊರಗಿನಿಂದ ಒಳಗಡೆಗೆ ಕರೆದೊಯ್ಯುತ್ತದೆ. ಇಂದು ನಾವು ಸಂಪೂರ್ಣವಾಗಿ ಖಾಲಿಯಾದರೆ ಇಲ್ಲಿಗೆ ಹೋಗಬಹುದು. ಯಾವುದರಿಂದ ಖಾಲಿಯಾಗುತ್ತವೆ? ಯಾವುದರಲ್ಲಿ ಹೆಚ್ಚಿನ ಮೋಹವಿದೆ ಅದರಿಂದ ಖಾಲಿಯಾಗಬೇಕು ಹಗುರವಾಗಬೇಕು.

ಆಕಿಂಚನ್ಯ ಧರ್ಮದ ಬಗ್ಗೆ ಶಾಸ್ತ್ರಗಳಲ್ಲಿ–**'ನ ಕಿಂಚನಃ ಇತಿ ಆಕಿಂಚನ್ಯ'** ಎಂದು ಹೇಳಿದ್ದಾರೆ. ಅಂದರೆ ಕಿಂಚಿತ್ತೂ ಸಹ ಏನೂ ನನ್ನದಲ್ಲ ಎಂಬ ಅರ್ಥವಾಗುತ್ತದೆ. ಆಕಿಂಚನ್ಯದ ಅರ್ಥ–**'ನ ಕಿಂಚನ: ಅ ವಸ್ಥಿತಃ ಸಃ ಆಕಿಂಚನಃ'** ಕಿಂಚಿತ್ತೂ ಸಹ ವಿಕಾರ ವಿಭಾವ ಪರ ಪದಾರ್ಥಗಳದು ಇರಬಾರದು, ಇದರ ಹೆಸರು ಆಕಿಂಚನ್ಯ, ರಾಗವಿಲ್ಲ, ದ್ವೇಷವಿಲ್ಲ, ಮೋಹ, ಕ್ರೋಧ, ಲೋಭವಿಲ್ಲ ಏನೂ ಇಲ್ಲ. ಮತ್ತೇನಿದೆ? ಜ್ಞಾತಾ–ದೃಷ್ಟಾ ಮಾತ್ರ ಉಳಿದಿದೆ ಸಾಕು, ಸ್ವಸಂವೇದನೆಯಲ್ಲಿ ಲೀನನಾಗುವುದು. ಸ್ವ ಆತ್ಮನಲ್ಲಿ ಲೀನರಾಗಿರುವವರು ಅವರು ಆಕಿಂಚನ್ಯ ಧರ್ಮಉಳ್ಳವರು. ಆಚಾರ್ಯ ಪೂಜ್ಯಪಾದ ಸ್ವಾಮಿಗಳು ಸರ್ವಾರ್ಥಸಿದ್ಧಿ ಗ್ರಂಥದಲ್ಲಿ **'ನಾಸ್ಯ ಕಿಂಚನಾಸ್ತಿತ್ಯಕಿಂಚನ: ತಸ್ಯ ಭಾವ: ಕರ್ಮ ವಾ ಆಕಿಂಚನ್ಯಮ್'** ಎಂದು ಬರೆದಿದ್ದಾರೆ. ಯಾರ ಬಳಿ ಏನೂ ಇರುವುದಿಲ್ಲವೋ ಅವರು ಅಕಿಂಚನರು(ಅರ್ಥಾತ್ ಯಾರು ಎಲ್ಲ ಸಂಯೋಗ ಪದಾರ್ಥಗಳನ್ನು ತ್ಯಜಿಸಿರುವವರು ಅವರು)ಹಾಗೂ ಅವರ ಭಾವ ಅಥವಾ ಕರ್ಮ ಆಕಿಂಚನ್ಯವಾಗಿದೆ ಅವರು ಈ ಆಕಿಂಚನ್ಯ ಧರ್ಮವನ್ನು ಪಡೆಯುತ್ತಾರೆ. ಅದೇ ಭಾವ ಅಥವಾ ಕರ್ಮದ ಹೆಸರನ್ನು ಆಕಿಂಚನ್ಯವೆಂದು ಕರೆಯಲಾಗುತ್ತದೆ. ಆದಾಗ್ಯೂ ಇದು ಆತ್ಮನ ಸ್ವರೂಪವಾಗಿದೆ. ಆದ್ದರಿಂದ ಇದಕ್ಕೆ ಆಕಿಂಚನ್ಯ ಧರ್ಮವೆಂದು ಹೇಳುತ್ತಾರೆ.

ತನ್ನ ವಾಸ್ತವಿಕ ಸ್ವರೂಪವನ್ನು ಪಡೆಯಲು ಯೋಚನೆ ಮಾಡುವ ಆತ್ಮನು ಕರ್ಮಗಳ ಸಂಯೋಗದಿಂದ, ಕರ್ಮಗಳಿರಲಿ, ಶರೀರವಿರಲಿ ಅಥವಾ ಪದಾರ್ಥಗಳಿರಲಿ ಇವೆಲ್ಲವು

ಆತ್ಮನಿಂದ ಬೇರೆಯಾಗಿದೆ. ಇವು ವಾಸ್ತವಿಕ ಸ್ವರೂಪ–ಸ್ವಭಾವವನ್ನು ಮರೆಮಾಡುತ್ತವೆ. ಅದರಲ್ಲಿ ಮಲೀನತೆಯನ್ನು ತರುತ್ತವೆ ಹಾಗೂ ವಿಭಾವ ಪರಿಣತಿಯನ್ನು ಉತ್ಪನ್ನ ಮಾಡುತ್ತವೆ ಆದ್ದರಿಂದ ಇವುಗಳನ್ನು ನಾನು ಮನ–ವಚನ–ಕಾಯ ಪೂರ್ವಕವಾಗಿ ಬಿಡುತ್ತೆನೆಂದು ಆಚಾರ್ಯರು ಹೇಳುತ್ತಾರೆ. ಹೀಗೆ ಭಾವನೆ ಮಾಡುವವರೇ ಆಕಿಂಚನ್ಯ ಧರ್ಮವನ್ನು ಹೊಂದುತ್ತಾರೆ. ಯಾವುದರ ತ್ಯಾಗ ಮಾಡುತ್ತೇವೆಯೋ ಅವೆಲ್ಲವು ಪರವೇ ಆಗಿವೆ, ತನ್ನದೇನೂ ತ್ಯಾಗವಾಗುವುದಿಲ್ಲ, ಇಂದಿನವರೆಗೂ ನಾವು ಮಾಡಿಲ್ಲ ಹಾಗೂ ಮಾಡಲು ಸಾಧ್ಯವಿಲ್ಲವೆಂಬುದನ್ನು ನಾವು ಗಮನದಲ್ಲಿಡಬೇಕು. ಹೀಗೆ ಯಾಕೆ? ಹೀಗೆ ಯಾಕೆಂದರೆ ಸಂಯೋಗವಾಗುವ ಪದಾರ್ಥಗಳದೇ ತ್ಯಾಗವಾಗುತ್ತದೆ. ಹಾಗೇ ನೋಡಿದಲ್ಲಿ ಅವು ಪರವೇ ಆಗಿವೆ. ನಮ್ಮ ವಸ್ತುವನ್ನು ಅವು ಅವಶ್ಯವಾಗಿ ಮಲೀನ ಮಾಡುತ್ತಲಿವೆ. ಸಂಯೋಗದ ವಿಯೋಗ ಅವಶ್ಯವಾಗಿ ಆಗುತ್ತದೆ. ಬಾಹ್ಯ ಸಂಯೋಗಗಳಲ್ಲಿ ಮಮತ್ವ ಬುದ್ಧಿ ಹೊಂದಿರುವವರು ಅವುಗಳನ್ನು ತಮ್ಮವೆಂದು ಭಾವಿಸುತ್ತಾರೆ. ಅವರು ಅನುಕೂಲ ಸಂಯೋಗಗಳು ಪ್ರಾಪ್ತನಾದಾಗ ಪ್ರಸನ್ನರಾಗುತ್ತಾರೆ ಹಾಗೂ ಸಂಯೋಗಗಳು ಬಿಟ್ಟು ಹೋದಾಗ ವಿಷಾದ ಪಡುತ್ತಾರೆ, ದು:ಖಿಗಳಾಗುತ್ತಾರೆ. ಆದರೆ ಸಂಯೋಗ ಕೇವಲ ಸಂಯೋಗವೇ ಆಗಿರುತ್ತದೆ ಅದು ಅನುಕೂಲವಾಗಿರಲಿ ಅಥವಾ ಪ್ರತಿಕೂಲವಾಗಿರಲಿ ಅವು ಹೆಚ್ಚು ಕಾಲ ಇರುವುದಿಲ್ಲ ಕಾರಣವೆಂದರೆ ಜಗತ್ತಿನಲ್ಲಿ ಶಾಶ್ವತವಾಗಿರುವ ಯಾವ ಸಂಯೋಗವೂ ಇಲ್ಲ. ಹೊರಗಿನಿಂದ ಬಂದಿರುವುದು ಅದು ಒಂದು ದಿನ ಹೋಗಿಯೇ ಹೋಗುತ್ತದೆ. ನಮ್ಮದಾಗಿರುವ ಜ್ಞಾನ ದರ್ಶನ ಮುಂತಾದ ಗುಣಗಳು ಅವುಗಳನ್ನು ಎಂದಿಗೂ ತ್ಯಾಗ ಮಾಡಲಾಗುವುದಿಲ್ಲ. ಮಾತಿನ ದೃಷ್ಟಿಯಿಂದ ನಾವು ತ್ಯಾಗ ಮಾಡಿದೆವು ಎಂದು ಹೇಳುವುದರಲ್ಲಿ ನಾವು ಅಹಂ ಬುದ್ಧಿಯನ್ನು ತರುತ್ತೇವೆ. ಈ ನನ್ನದು ನಿನ್ನದು ಎನ್ನುವ ಭಾವನೆಯೇ ಮೋಹದ ಪ್ರತೀಕವಾಗಿದೆ. ಸಂಯೋಗವು ಸುಖ ದುಃಖಗಳನ್ನು ಕೊಡುವುದಿಲ್ಲ, ಸಂಯೋಗಗಳೊಂದಿಗೆ ಇರುವ ಮಮತ್ವವೇ ಅದರಲ್ಲಿ ಕಾರಣವಾಗುತ್ತದೆ. ಪರ ವಸ್ತುವಿನೊಂದಿಗೆ ಸಂಬಂಧವನ್ನು ಜೋಡಿಸಿದೆ, ಅದರಲ್ಲಿ ಮಮತ್ವ ಭಾವ ಮಾಡಿದರೆ, ಅದರಿಂದ ಮೋಹ ಹೊಂದಿದರೆ, ಅದು ನನ್ನದು ಎಂದು ಭಾವಿಸಿದರೆ ಸಾಕು ನಾವು ಅಜ್ಞಾನತೆಯಲ್ಲಿ ಹೋಗಿ ಬಿಡುತ್ತೇವೆ. ಆಚಾರ್ಯ ಕುಂದ–ಕುಂದ ಸ್ವಾಮಿಗಳು ಸಮಯಸಾರ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ.

**ಕಮ್ಮೆ ಣೋಕಮ್ಮಮ್ಹಿ ಯ ಅಹಮಿದಿ ಅಹಕಂ ಚ ಕಮ್ಮ ಣೋಕಮ್ಮಂ।**
**ಜಾ ಏಸಾ ಖಲು ಬುದ್ಧೀ ಅಪ್ಪಡಿ ಬುದ್ಧೋ ಹವದಿ ತಾವ॥19॥**

ಅಷ್ಟಕರ್ಮ, ನೋಕರ್ಮ, ಶರೀರ ಹಾಗೂ ಇನ್ನೂ ಅನ್ಯ ಪದಾರ್ಥಗಳು ಇವು ನನ್ನವಾಗಿವೆ ಅಥವಾ ನಾನು ಈ ರೂಪದವನಾಗಿದ್ದೇನೆ ಹೀಗೆ ನನ್ನ–ನಿನ್ನ ಎಂಬ ಭಾವನೆ ಮಾಡುತ್ತಿರವವರು ಜ್ಞಾನಿಗಳಲ್ಲ ಅಜ್ಞಾನಿಗಳಾಗಿದ್ದಾರೆ. ಅವರು ಅಪ್ರತಿ ಬುದ್ಧರಾಗಿದ್ದಾರೆ. ಮಮತ್ವ ಬುದ್ಧಿಯ ಮೂಲ ಕಾರಣ ಅಪ್ರತಿಬುದ್ಧತೆಯಾಗಿದೆ. ಬಾಹ್ಯ ಪದಾರ್ಥಗಳಲ್ಲಿ ನಾನು ಹಾಗೂ ನನ್ನತನದ ಭಾವ ಇರುವವರೆಗೆ ಅಪ್ರತಿಬುದ್ಧತೆಯಾಗಿದೆ. ಬಾಹ್ಯಪದಾರ್ಥಗಳಲ್ಲಿ ನಾನು ಹಾಗೂ ನನ್ನತನದ ಭಾವ ಇರುವವರೆಗೆ ಅಪ್ರತಿಬುದ್ಧತೆ ಇದೆ. ನಾವು ನಮ್ಮ ವಸ್ತುವಿನ ತ್ಯಾಗ ಮಾಡಿದ್ದೇವೆ ಎಂದು ನಾವು ಹೇಳುತ್ತೇವೆ. ಯಾವುದನ್ನು ನಮ್ಮದೆಂದು ಒಪ್ಪಿದ್ದೇವೆ? ಪರವನ್ನು ನಮ್ಮದೆಂದು ಭಾವಿಸಿದ್ದೇವೆ ಇದಕ್ಕೂ ಮೊದಲು ಅಜ್ಞಾನದಲ್ಲಿ ಹೋಗಿ ಆಗಲೇ ಅಜ್ಞಾನದಲ್ಲಿ ಹೋಗಿ ನಮ್ಮ ದೆಂದು ಭಾವಿಸಿ ಪರ ವಸ್ತುವಿನ ತ್ಯಾಗ ಮಾಡುತ್ತಿದ್ದೇವೆ ಹಾಗೂ ಅಹಂ ಬುದ್ಧಿಯನ್ನು ತರುತ್ತಿದ್ದೇವೆ. ನಾವು ನಮ್ಮ

ವಸ್ತುವಿನ ತ್ಯಾಗ ಮಾಡಿದೆವು ಎಂದು ಭಾವಿಸುವುದು ಸಹ ಅಜ್ಞಾನವಾಗಿದೆ ಮತ್ತು ಹೇಳುವುದು ಸಹ ಅಜ್ಞಾನವಾಗಿದೆ ಹಾಗೂ ಅದರ ಹಿಂದೆ ನಮ್ಮ ಹೆಸರು ಮಾಡಿಕೊಳ್ಳುವುದು ಇದು ಇನ್ನೂ ದೊಡ್ಡ ಅಜ್ಞಾನವಾಗಿದೆ. ಸಹೋದರರೇ ಪರ ವಸ್ತುವಿನ ತ್ಯಾಗವಾಗುತ್ತದೆ. ಅದರೆ ಪರವಸ್ತು ನಮ್ಮದಲ್ಲವೇ ಅಲ್ಲ. ಎಂದಿಗೂ ನಮ್ಮದಾಗಿರಲಿಲ್ಲ ಹಾಗೂ ಆಗುವುದೂ ಇಲ್ಲ. ಅದನ್ನು ತ್ಯಾಗ ಮಾಡಲು ಇಷ್ಟೊಂದು ಯಾಕೆ ಯೋಚಿಸಬೇಕೆಂದು ತಿಳಿಯುವುದಿಲ್ಲ. ಪರವಸ್ತುವನ್ನು ತ್ಯಾಗ ಮಾಡುವುದಿಲ್ಲವಾದರೆ, ಬಿಡದಿದ್ದರೂ ಸಹ ಅದು ಬಿಟ್ಟು ಹೋಗುವುದೇ ಆಗಿದೆ. ಯಾರೊಂದಿಗೂ ಬಂಧಿತವಾಗಿ ಎಲ್ಲಿಯೂ ಹೋಗುವುದಿಲ್ಲ ಹಾಗೂ ಎಂದೂ ಹೋಗಿಯೂ ಇಲ್ಲ. ಹಾ! ಒಂದೇ ವಸ್ತು ಹೋಗುತ್ತದೆ ಅದು "ಅನಾದಿ ಸಂಬಂಧೇ ಚ' 'ಸರ್ವಸ್ಯ'. ಇದೇನು? ಎಲ್ಲ ಜೀವಗಳ ಬಳಿ ಕಾರ್ಮಣ ಮತ್ತು ತೈಜಸ ಎಂಬ ಎರಡು ಶರೀರಗಳು ಯಾವಾಗಲೂ ಇರುತ್ತವೆ ಹಾಗೂ ಜೊತೆಯಲ್ಲಿ ಹೋಗುತ್ತವೆ. ಆದರೆ ಮೋಕ್ಷ ಸಿಗದೇ ಇರುವವರೆಗೆ ಈ ಸ್ಥಿತಿ ಇರುತ್ತದೆ. ಇದು ಸಂಸಾರ ಅವಸ್ಥೆಯ ಮಾತಾಗಿದೆ ವಿನಹ ಮೋಕ್ಷ ಅವಸ್ಥೆಯದಲ್ಲ. ಮೋಕ್ಷವಾದಾಗ ಏನೂ ಜೊತೆಯಲ್ಲಿ ಹೋಗುವುದಿಲ್ಲ. ಸಂಸಾರದಲ್ಲಿ ಅನಾದಿ ಕಾಲದಿಂದ ಇರುವ ಕರ್ಮಗಳ ಸಂಯೋಗ ಅದಂತೂ ಜೊತೆಯಲ್ಲಿ ಹೋಗುತ್ತದೆ. ಅದು ಸಹ ಪರ ಇದೆ, ಅದು ಜೊತೆ ಬಿಡುವುದಿಲ್ಲ ನಿಮ್ಮ ದೊಡ್ಡ ಸಂಗಾತಿಯಾಗಿದೆ, ಬಹಳಷ್ಟು ಜೊತೆಯಾಗಿರುತ್ತದೆ. ಈ ಜಗತ್ತಿನಲ್ಲಿ ಅದೇ ಸುತ್ತಿಸುತ್ತದೆ ಅದರ ಕಾರಣದಿಂದಲೇ ಪುನ: ಕರ್ಮ ಬರುತ್ತದೆ. ಅದರ ಕಾರಣದಿಂದಲೇ ಸಂಸಾರದಲ್ಲಿ ನಾವು ನೋಡುತ್ತಿರುವ ಸ್ಥಿತಿಗಳು ಅದೇ ಅವುಗಳಿಗೆ ಕಾರಣವಾಗಿದೆ. ಉಳಿದ ಏನೂ ಸಹ ಜೊತೆಯಲ್ಲಿ ಹೋಗುವುದಿಲ್ಲ. ಶರೀರವಾಗಲಿ, ವೈಭವವಾಗಲಿ, ಪರಿಜನರಾಗಲಿ, ಹಾಗೂ ಬೇರೆ ಯಾರೂ ಸಹ ಜೊತೆಯಲ್ಲಿ ಹೋಗುವುದಿಲ್ಲ. ನೀವು ಬಿಡುತ್ತಿರಾದರೆ ಜ್ಞಾನಿಗಳೆಂದು ಕರೆಯಲ್ಪಡುತ್ತಿರಿ, ಬಿಡದಿದ್ದರೆ ಅಜ್ಞಾನಿಗಳೆಂದು ಕರೆಯಲ್ಪಡುತ್ತೀರಿ. ತಮ್ಮದನ್ನು ಬಿಟ್ಟಿದ್ದರೂ ಹಾಗೇ ಅದನ್ನು ತಮ್ಮದು ಎಂದು ಹೇಳಿದರೂ ಸಹ ಅಜ್ಞಾನಿಗಳೆಂದು ಕರೆಯಲ್ಪಡುತ್ತೀರಿ. ತಮ್ಮದನ್ನು ಬಿಟ್ಟಿದ್ದರೂ ಹಾಗೇ ಅದನ್ನು ತಮ್ಮದು ಎಂದು ಹೇಳಿದರೂ ಸಹ ಅಜ್ಞಾನಿಗಳಾಗಿದ್ದೀರಾ. ತಾವು, ನಾನು ಪರವಸ್ತುವನ್ನು ಬಿಟ್ಟು ಬಿಟ್ಟೆ ಎಂದು ಹೇಳಿದಾಗ ಸ್ವಲ್ಪ ಮಟ್ಟಿಗೆ ಸರಿ ಈಗ ಸ್ವಲ್ಪ ಜ್ಞಾನಿಗಳಾದೀರಿ ಮುನಿಗಳು ಎಲ್ಲಿಯವರೆಗೆ ಆತ್ಮನಲ್ಲಿ ಲೀನರಾಗಿ ತ್ಯಾಗ ಮಾಡುವ ರೂಪ ವಿಕಲ್ಪವನ್ನೂ ಸಹ ಬಿಡದಿದ್ದರೆ ಅಥವಾ ಪರದ ಚಿಂತೆಯ ರೂಪ ಬುದ್ಧಿಯನ್ನು ಬಿಡದಿದ್ದರೆ ಅಲ್ಲಿಯವರೆಗೆ ಪೂರ್ಣ ಆಕಿಂಚನ್ಯ ಧರ್ಮವನ್ನು ಪಡೆಯಲಾರರು. ಆಚಾರ್ಯ ಅಕಲಂಕ ದೇವ ಸಹ ರಾಜವಾರ್ತಿಕ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ–

**ಮಮೇದಮಿತ್ಯಮಿಸಂಧಿ ನಿವೃತ್ತಿರಾಕಿಂಚನ್ಯಮ್।(9/6)**

ಇದು ನನ್ನದು ಈ ಪ್ರಕಾರದ ಅಭಿಸಂಧಿಯ ತ್ಯಾಗ ಮಾಡುವುದು ಆಕಿಂಚನ್ಯವಾಗಿದೆ. ಮನೆ–ಬಾಗಿಲು, ಹಣ–ಸಂಪತ್ತು, ಬಂಧು–ಬಾಂಧವ, ಪರಿಜನ ಇತ್ಯಾದಿ ಅಲ್ಲದೇ ಶರೀರ ಸಹ ನನ್ನದಲ್ಲ ಈ ಪ್ರಕಾರದ ಅನಾಸಕ್ತಿ ಭಾವ ಉತ್ಪನ್ನವಾಗುವುದು ಉತ್ತಮ ಆಕಿಂಚನ್ಯ ಧರ್ಮವಾಗಿದೆ. ಆಕಿಂಚನ್ಯ ಧರ್ಮದಲ್ಲಿ ತ್ಯಾಗದ ಬಗ್ಗೆ ಆಗುವ ಮಮತ್ವವನ್ನು ಸಹ ತ್ಯಾಗ ಮಾಡಲಾಗುತ್ತದೆ.

ನನ್ನದೇನೂ ಇಲ್ಲ, ಪರಮಾಣ ಮಾತ್ರ ಸಹ ನನ್ನದಲ್ಲ ಎಂಬುದು ಆಕಿಂಚನ್ಯದ ಅರ್ಥವಾಗಿದೆ. ಆಕಿಂಚನ್ಯ ಸಕಲ ಗ್ರಂಥ ತ್ಯಾಗಃ ಸಂಪೂರ್ಣ ಪರಿಗ್ರಹಗಳನ್ನು ತ್ಯಾಗ ಮಾಡುವುದು ಆಕಿಂಚನ್ಯ ಧರ್ಮವಿದೆ. ಸಂಪೂರ್ಣ ರೂಪದಿಂದ ತ್ಯಾಗವಾಗುವುದು, ಏನೂ ಇರದೇ ಇರುವುದು,

ಕಿಂಚಿತ್ತೂ ಸಹ ರಾಗ ಮೋಹ ಪರಪದಾರ್ಥದೊಂದಿಗೆ ತನ್ನ ಬಳಿ ಇರದೇ ಇರುವುದು ಇದೇ ಆಕಿಂಚನ್ಯತ್ವವಾಗಿದೆ. ಯಾವುದೇ ಪರಪದಾರ್ಥವನ್ನು ಮಹತ್ವ ಭಾವದಿಂದ ಸ್ವೀಕರಿಸುವುದು, ಅದರಲ್ಲಿ ಮಮತೆ, ಆಸಕ್ತಿ, ಲೋಲುಪತೆ ಹೊಂದಿರುವುದು ಪರಿಗ್ರಹವಾಗಿದೆ. ಪೂರ್ಣ ಆಕಿಂಚನ್ಯ ಧರ್ಮದ ಒಡೆಯರಾಗಲು ಅಂತರಂಗ–ಬಹಿರಂಗ ಎರಡೂ ಪ್ರಕಾರದ ಪರಿಗ್ರಹಗಳ ತ್ಯಾಗ ಮಾಡಬೇಕಾಗುತ್ತದೆ. ಮಥ್ಯಾತ್ವಿ, ಕ್ರೋಧ, ಮಾನ, ಮಾಯಾ, ಲೋಭ, ಹಾಸ್ಯ,ರತಿ, ಅರತಿ, ಶೋಕ, ಭಯ, ಜಿಗುಪ್ಸೆ ಹಾಗೂ ಸ್ತ್ರಿ–ಪುರುಷ ಹಾಗೂ ನಪುಂಸಕ ಈ ಮೂರು ವೇದಗಳು ಸೇರಿ14 ಅಂತರಂಗ ಪರಿಗ್ರಹ ಹಾಗೂ ಕ್ಷೇತ್ರ, ವಾಸ್ತು, ಹಿರಣ್ಯ, ಸುವರ್ಣ, ಧನ, ಧಾನ್ಯ, ದಾಸ, ದಾಸೀ, ಕುಪ್ಯ ಮತ್ತು ಭಾಂಡ ಈ ಹತ್ತು ಬಹಿರಂಗ ಪರಿಗ್ರಹ ಈ ಪ್ರಕಾರ 24 ಪ್ರಕಾರದ ಪರಿಗ್ರಹಗಳ ತ್ಯಾಗ ಮಾಡುವುದು ಆಕಿಂಚನ್ಯ ಧರ್ಮವಾಗಿದೆ. ಅಂತರಂಗ–ಬಹಿರಂಗ ಪರಿಗ್ರಹಗಳೆಲ್ಲವು ಆತ್ಮನ ವಿಕಾರೀ ಭಾವಗಳಾಗಿವೆ, ಇವುಗಳಿಂದ ಸ್ವಯಂ ತನ್ನನ್ನು ಭಿನ್ನನೆಂದು ತಿಳಿಯುವುದು, ಮತ್ತು ಆತ್ಮನ ಆಶ್ರಯ ಮಾಡುವುದು, ಅದರಿಂದ ಪರ್ಯಾಯಗಳಲ್ಲಿ ಆಗುವ ವಿಕಾರಗಳ ಅಭಾವವಾಗುವುದು ವಿಕಾರಗಳ ಅಭಾವವಾಗುವುದು. ಅವುಗಳೊಂದಿಗೆ ಪರಿಗ್ರಹಗಳ ತ್ಯಾಗವು ಸಹ ಅವಶ್ಯವಾಗಿ ಸಂಭವಿಸುತ್ತದೆ. ದಶಲಕ್ಷಣ ಪೂಜೆಯಲ್ಲಿ ಹೀಗೆ ಓದುತ್ತೇವೆ–

**ಮುನಿರಾಜರು ಇಪತ್ನಾಲ್ಕು ಭೇದದ ಪರಿಗ್ರಹ ತ್ಯಾಗ ಮಾಡುವರು।**
**ಜೀವನ ಕಳೆಯುತಿರಲು ತೃಷ್ಣಾ ಭಾವವ ಕಳೆಯುವರು ॥9॥**

ಜೀವನ ಪ್ರತಿ ಕ್ಷಣ ಕಳೆಯುತ್ತಿದೆ. ನಿರಂತರವಾಗಿ ಆಯುವು ಕಡಿಮೆ ಹೊಂದಿತ್ತಲಿದೆ ಹಾಗೆಯೇ ಹೃದಯದಿಂದ ನಿರಂತವಾಗಿ ತೃಷ್ಣಾ ಭಾವವನ್ನು ಕಳೆಯುತ್ತಿರಬೇಕು ಮುನಿರಾಜರು ಆತ್ಮನಲ್ಲಿ ಪ್ರವೇಶ ಹೊಂದಲು 24 ಪ್ರಕಾರಗಳ ಪರಿಗ್ರಹಗಳನ್ನು ತ್ಯಾಗ ಮಾಡುತ್ತಾರೆ ಯಾಕೆಂದರೆ ಪತಂಗವು ಹಗುರವಾಗಿರುವಷ್ಟು ಎತ್ತರ ಹೋಗಿ ಆಕಾಶದಲ್ಲಿ ಚೆನ್ನಾಗಿ ಸುಶೋಭಿತವಾಗುತ್ತದೆ. ಒಂದು ವೇಳೆ ಅದರ ಭಾರ ಒಂದು ಕಡೆ ಸ್ವಲ್ಪವೇ ಹೆಚ್ಚಾದರೂ ಸಹ ಅದು ಗಿರಕಿ ಹೊಡೆಯುತ್ತದೆ. ಕೆಳಗಡೆ ಭೂಮಿಯ ಬಳಿ ಬಂದು ಬೀಳುತ್ತದೆ. ಸಾಕು ಹಾಗೆಯೇ ಅಂತರಂಗ–ಬಹಿರಂಗ ಪರಿಗ್ರಹಗಳು ಆತ್ಮನನ್ನು ಮೇಲೆ ಸಿದ್ಧಾಲಯವರಿಗೆ ತಲುಪಿಸಲು ಬಾಧಕವಾಗುತ್ತವೆ. ಕಷಾಯಗಳು ಆತ್ಮನ ಗುಣಗಳನ್ನು ಘಾತಕ ಮಾಡುತ್ತವೆ. ಆತ್ಮನನ್ನು ಅಲೆದಾಡಿಸುತ್ತವೆ, ಈ ಆಸ್ರವ 11ನೇಯ ಗುಣಸ್ಥಾನದಿಂದ 13ನೇ ಗುಣಸ್ಥಾನದವರೆಗೂ ಆಗುತ್ತದೆ–ಇದಕ್ಕೂ ಪೂರ್ವದಲ್ಲಿ ಆಗುವುದಿಲ್ಲವೆಂದು ಆಚಾರ್ಯರು ಹೇಳಿದ್ದಾರೆ. ಆಚಾರ್ಯ ಕುಂದಕುಂದಸ್ವಾಮಿಗಳು ಭಾವಪಾಹುಡದಲ್ಲಿ ಹೀಗೆ ಹೇಳುತ್ತಾರೆ– ಬಹಿರಂಗ ತ್ಯಾಗವು ಆವಶ್ಯಕವಾಗಿದೆ ಆದರೆ ಜೊತೆಗೇನೇ ಒಂದು ವೇಳೆ ಅಂತರಂಗ ಪರಿಗ್ರಹಗಳನ್ನು ತ್ಯಾಗ ಮಾಡದಿದ್ದರೆ, ಅವರು ಬಹಿರಂಗ ಪರಿಗ್ರಹಗಳ ತ್ಯಾಗ ಸಹ ವ್ಯರ್ಥವಾಗಿದೆ. ಎಳ್ಳಿನಷ್ಟು ಪರಿಗ್ರಹವನ್ನು ಹೊಂದಿದ್ದರು ಮಹಾಕಷ್ಟವನ್ನು ಅನುಭವಿಸ ಬೇಕಾಗುತ್ತದೆ. ಆದ್ದರಿಂದ ಅತಿ ಪರಿಗ್ರಹ ಹೊಂದಿರುವುದರಿಂದ ಅದೇಷ್ಟು ದುಃಖಗಳನ್ನು ಅನುಭವಿಸುತ್ತಿರಬೇಕು? ಆತ್ಮಾನುಶಾಸನದಲ್ಲಿ ಆಚಾರ್ಯರು–**"ಸುಖಂ ಸಕಲ ಸಂನ್ಯಾಸೋ ದುಃಖಂ ತಸ್ಯ ವಿಪರ್ಯಯಃ"–** ಪರಿಗ್ರಹ ತ್ಯಾಗವೇ ಸುಖದ ಮೂಲವಾಗಿದೆ ಹಾಗೂ ಪರಿಗ್ರಹವೇ ದುಃಖವಾಗಿದೆ–ಎಂದು ಹೇಳಿದ್ದಾರೆ. ಆದ್ದರಿಂದ ಆಚಾರ್ಯರು–"ಆಕಿಂಚನೋಮಿತ್ಯಾಸ್ಸವ ತ್ರೇಲೋಕ್ಯಾಧಿಪತಿರ್ಭವೇಃ"– ಆಂಕಿಚನ್ಯ–ವಾದಾಗಲೇ ತ್ರೈಲೋಕ್ಯದ ಅಧಿಪತಿ ಭಗವಂತರಾಗುತ್ತಾರೆಂದು ಹೇಳಿದ್ದಾರೆ. ಇದಕ್ಕೆ ವಿಪರೀತವಾಗಿ ಸಂಪೂರ್ಣ ಶಾಸ್ತ್ರಗಳ ಅರಿವು ಉಂಟಾಗಿದ್ದರೂ ಸಹ ಯಾರಿಗೆ ಪರಿಮಾಣು

ಮಾತ್ರದಷ್ಟು ಪರಿಗ್ರಹಗಳ ಬಗ್ಗೆ ರಾಗವಿದ್ದರೆ ಆ ವ್ಯಕ್ತಿಯು ಆತ್ಮನಲ್ಲಿ ಧ್ಯಾನಮಾಡಲಾರ, ಆತ್ಮನನ್ನು ತಿಳಿಯಲಾರನೆಂದು ಆಚಾರ್ಯಕುಂದಕುಂದರು ಸಮಯಸಾರ ಗ್ರಂಥದಲ್ಲಿ ಹೇಳುತ್ತಾರೆ.

**ಪರಮಾಣುಮಿತ್ತಿಯಂ ಪಿ ಹು ರಾಗಾದೀಣಂ ತು ವಿಜ್ಜದೇ ಜಸ್ಸ।**
**ಣವಿ ಸೊ ಜಾಣದಿ ಅಪ್ಪಾ ಣಯಂ ತು ಸವ್ವಾಗಮ ಧರೋವಿ ॥201॥**

ಪ್ರತಿಯೊಂದು ಆತ್ಮನಿಗೆ ಧ್ಯಾನದ ಸಮಯದಲ್ಲಿ ಚಿಂತನೆ ಮಾಡಬೇಕು_ನಾನು ಸ್ವಾಶ್ರೀತನೇ? ನಾನು ಸ್ವತಂತ್ರನು, ನಾನು ಒಬ್ಬನೇ ಇದ್ದೇನೆ ಎಂದು ಅದೇ ಆಕಿಂಚನ್ಯವಾಗಿದೆ ಇಂತಹ ಧರ್ಮದಲ್ಲಿ ಸಂಪೂರ್ಣ ಪರಿಗ್ರಹಗಳಿಂದ ಬಿಡುಗಡೆ ಹೊಂದುವುದರಿಂದ ಈ ಆತ್ಮನು ತನ್ನೊಳಗೆ ಇರುವ ಅನಂತ ಶಕ್ತಿಗಳ ಉದ್ಘಾಟನೆ ಮಾಡಿ, ಅನಂತಕಾಲದವರೆಗೆ ಮೋಕ್ಷದಲ್ಲಿದ್ದು ಮತ್ತೆ ಎಂದೆಂದಿಗೂ ಸಹ ತುಪ್ಪದಿಂದ ಹಾಲಿನ ರೂಪಕ್ಕೇ ಬರದೇ ಇರುವಂತೆ ಕೆಳಗೆ ಬರುವುದಿಲ್ಲ. ಅಲ್ಲಿಯೇ ಸಾಕ್ಷಾತ್ ಅನಿಭವ ಆಗುತ್ತಿರುತ್ತದೆ. ಆಚಾರ್ಯಕುಂದಕುಂದಸ್ವಾಮಿಗಳು ನಿಯಮಸಾರದಲ್ಲಿ ಹೀಗೆ ಹೇಳುತ್ತಾರೆ–

**ಏಗೋ ಮೇಂ ಸಸದೋ ಆದಾ ಣಾಣ ದಂಸಣ ಲಕ್ಖಣೋ।**
**ಸೇಸಾ ಮೇಂ ಬಾಹಿರಾ ಭಾವಾ ಸವ್ವೇ ಸಂಜೋಗ ಲಕ್ಖಣಾ ॥102॥**

ನಾನು ಒಬ್ಬನೇ ಒಬ್ಬ ಶಾಶ್ವತ ಆತ್ಮನಿದ್ದೇನೆ. ತಿಳಿಯುವುದು, ನೋಡುವುದು ನನ್ನ ಸ್ವಭಾವವಾಗಿದೆ. ಉಳಿದ ಯಾವುದೇ ಭಾವಗಳು, ಅವೆಲ್ಲವೂ ಹೊರಗಿನವುಗಳಾಗಿವೆ ಹಾಗೂ ಸಂಗೋಗದಿಂದ ಉತ್ಪನ್ನವಾಗಿವೆ. ಸಂಸಾರದ ಎಲ್ಲ ಸಂಬಂಧಗಳ ಮಧ್ಯದಲ್ಲಿಯೂ ನಾನು ಒಬ್ಬನೇ ಇದ್ದೇನೆ, ಇದೇ ಭಾವನೆಯಲ್ಲಿರುವುದು ಆಕಿಂಚನ್ಯ ಧರ್ಮದ ಸೂಚಕವಾಗಿದೆ. ಸಮಯಸಾರ ಗ್ರಂಥದಲ್ಲಿಯೂ ಸಹ ಸುಂದರವಾದ ಮಾತನ್ನೂ ಹೇಳಿದ್ದಾರೆ–

**ಅಹಮಿಕ್ಕೊ ಖಲು ಸುದ್ಧೊ ದಂಸಣ ಣಾಣ ಮಇಓ ಸದಾರೂವೀ।**
**ಣವಿ ಅತ್ಥಿ ಮಜ್ಝ ಕಿಂಚಿವಿ ಅಣ್ಣಂ ಪರಮಾಣು ಮಿತ್ಥಂ ಪಿ ॥38॥**

ನಾನು ಒಬ್ಬನೇ ಇದ್ದೇನೆ, ಶುದ್ಧ ಆತ್ಮ ರೂಪನಾಗಿದ್ದೇನೆ, ನಾನು ಜ್ಞಾನವಂತನಾಗಿದ್ದೇನೆ ಮತ್ತು ದರ್ಶನವಂತನಾಗಿದ್ದೇನೆ. ನಾನು ರೂಪ, ರಸ, ಗಂಧ ಮತ್ತು ಸ್ಪರ್ಶ ರೂಪಗಳಿಲ್ಲಿಲ್ಲ, ಸದಾ ಅರೂಪಿಯಾಗಿದ್ದೇನೆ. ಯಾವುದೇ ಬೇರೆ ದ್ರವ್ಯ ಪರಮಾಣುವಿನಷ್ಟು ಸಹ ನನ್ನದಲ್ಲ, ಈ ಪ್ರಕಾರದ ಭಾವನೆ ಸದಾಕಾಲ ಯಾರ ಹೃದಯದಲ್ಲಿ ಇರುತ್ತದೆಯೋ ಅವರ ಸಂಸಾರ ಸಮುದ್ರದ ದಡ ಸಂಪೂರ್ಣವಾಗಿ ಹತ್ತಿರ ಬಂದು ಬಿಟ್ಟಿದೆ, ಇದರಲ್ಲಿ ಯಾವುದೇ ಸಂದೇಹವಿಲ್ಲವೆಂಬುದಲ್ಲಿ ನೆನಪಿನಲ್ಲಿಡಬೇಕು. ಆತ್ಮನ ವಾಸ್ತವಿಕ ಸ್ವರೂಪವನ್ನು ತಿಳಿಸುತ್ತಾ ಧರ್ಮ ಭಾವನಾ ಶತಕದಲ್ಲಿ ಹೀಗೆ ಬರೆದಿದ್ದಾರೆ–

**ನಾನು ಶುದ್ಧ ಸ್ವರೂಪಿ ಏಕಾಂಗಿ, ದರ್ಶನ, ಜ್ಞಾನಮಯಿ ರೂಪವಿಲ್ಲ।**
**ಪರಮಾಣು ಸಮ ಯಾವುದೇ ವಸ್ತು, ಶರೀರ ಇತ್ಯಾದಿ ರೂಪವಿಲ್ಲ॥**
**ರಸ, ಗಂಧ ಎಲ್ಲ ಶಬ್ದಗಳಿಂದ, ದೂರವಿದ್ದು ಸುಖಧಾಮದಲಿ।**
**ಸಂಸ್ಥಾನವು ಇಲ್ಲ ಲಿಂಗವೂ ಇಲ್ಲ, ನಿಜದಲಿ ಮಾತ್ರ ಆರಾಮದಿ ಇರುವೆ॥**

ಪರಿಗ್ರಹಗಳಿಂದ ಕೂಡಿದ ವ್ಯಕ್ತಿ ಎಂದಿಗೂ ಶಾಂತಿಯ ಅನುಭವವನ್ನು ಹೊಂದಲಾರ. ಆತ

ಕೇವಲ ಭ್ರಮೆಯಲ್ಲಿಯೇ ಬದುಕುತ್ತಾನೆ, ಇನ್ನೊಂದೆಡೆ ಪರಿಗ್ರಹಗಳನ್ನು ಹೊಂದಿರದವನು ತ್ಯಾಗ ಪ್ರವೃತ್ತಿಯವನು ಸದಾಕಾಲ ಸುಖ-ಶಾಂತಿಯ ಅನುಭವ ಹೊಂದಿರುತ್ತಾನೆ, ಅಂತಹ ವ್ಯಕ್ತಿಯೇ ಮಹಾನ್ ಆಗುತ್ತಾನೆ ಅವರೇ ಸ್ವತಃ ಆದರ್ಶಪೂರ್ಣ ಜೀವನದಲ್ಲಿ ಬದುಕುತ್ತಾರೆ, ಬೇರೆಯವರನ್ನು ಸಹ ಆದರ್ಶವಂತರಾಗಲು ದಾರಿ ತೋರಿಸುತ್ತಾರೆ.

ಆಗ್ರಾದಲ್ಲಿ ಒಬ್ಬ ಬಹಳ ದೊಡ್ಡ ವಿದ್ವಾಂಸರಿದ್ದರು. ದೊಡ್ಡ ದೊಡ್ಡ ಶಾಸ್ತ್ರಗಳನ್ನು ಓದುವವರಾಗಿದ್ದರು. ಅವರು ನಾಲ್ಕು ಅನುಯೋಗಗಳನ್ನು ಸ್ವಾಧ್ಯಾಯಮಾಡಿ ಜ್ಞಾನ ಪಡೆದಿದ್ದರು ಹಾಗೂ ಕೊನೆಯಲ್ಲಿ ಆಚಾರ್ಯ ಕುಂದಕುಂದರಿಂದ ರಚಿಸಲ್ಪಟ್ಟ ಸಮಯಸಾರ ಗ್ರಂಥದ ಅಧ್ಯಯನ ಮಾಡಿ ಅವರು ಅದರ ಮೇಲೆ ಒಂದು ನಾಟಕವನ್ನೇ ರಚಿಸಿದರು. ಅವರದೊಂದು ಸಿಮೀತವಾದ ಬಟ್ಟೆ ಅಂಗಡಿ ಇದ್ದಿತು ಅದರಿಂದ ಅವರ ಜೀವನ ಸರಿಯಾಗಿ ಸಾಗುತ್ತಿದ್ದಿತು. ಪರವಸ್ತುಗಳನ್ನು ತ್ಯಾಗ ಮಾಡಬೇಕು ಈ ಮಾತು ಸದಾಕಾಲ ಅವರ ಸ್ಮರಣೆಯಲ್ಲಿ ಇದ್ದಿದ್ದರಿಂದ ಅವರು ಕೇವಲ ಅವಶ್ಯಕವಾಗಿರುವಷ್ಟು ಕಾರ್ಯವನ್ನು ಮಾಡುತ್ತಾ ಅವರೊಂದು ಮಿತಿಯನ್ನು ಹಾಕಿಕೊಂಡಿದ್ದರು ಅದಕ್ಕಿಂತ ಹೆಚ್ಚು ತೆಗೆದುಕೊಳ್ಳುತ್ತಿರಲಿಲ್ಲ. ತಮ್ಮ ಸಮಯದ ಸದುಪಯೋಗವನ್ನು ಧರ್ಮ ಭಾವನೆಯಲ್ಲಿ ಮಾಡುತ್ತಿದ್ದರು. ಅವರ ಧಾರ್ಮಿಕ ವೃತ್ತಿಯ ಚರ್ಚೆ ಎಲ್ಲೆಡೆ ಆಗುತ್ತಿದ್ದಿತು. ಒಂದು ದಿನ ರಾತ್ರಿ ಅವರು ಮಲಗಿದ್ದಾಗ ಅರ್ಧರಾತ್ರಿಯ ಸಮಯದಲ್ಲಿ ಎಲ್ಲೆಡೆ ಕಗ್ಗತ್ತಲೂ ಹರಡಿದ್ದಿತು. ಅವರಿಗೆ ಯಾರೋ ಬರುತ್ತಿರುವ ಸಪ್ಪಳ ಕೇಳಿತು. ಅವರು ಮಲಗಿದ್ದರು ಸ್ವಲ್ಪ ಎಚ್ಚರವಾಯಿತು ಹಾಗೂ ನಾವು ಬಾಗಿಲು ತೆರೆಯಬಹುದು. ಆದರೆ ಏನಿದೆಯೋ ಅವರೇ ಪ್ರಯತ್ನಮಾಡಿ ತೆಗೆದುಕೊಳ್ಳಲು ಬಿಡೋಣವೆಂದು ಯೋಚನೆ ಮಾಡಿದರು. ಬಹಳ ಕತ್ತಲೆ ಇದ್ದಿತು ದೂರದಲ್ಲಿ ದೀಪ ಮಿಣುಕುತ್ತಿದ್ದಿತು.

ಕಿಟಕಿಯ ಬಾಗಿಲುಗಳು ತೆರೆದವು. ಏನೋ ಬಿದ್ದ ಸಪ್ಪಳ ಕೇಳಿಸಿತು. ಮೆಲ್ಲ ಮೆಲ್ಲನೇ ನಾಲ್ಕು ಜನರು ಅಂಗಡಿಯೊಳಗೆ ಬಂದರು. ಅಂಗಡಿಯಲ್ಲಿ ಬಟ್ಟೆಗಳಿದ್ದವು, ಆ ಜನರು ಬಟ್ಟೆಗಳ ನಾಲ್ಕು ಚೀಲಗಳನ್ನು ಕಟ್ಟಿದರು ಹಾಗೂ ಒಬ್ಬರು ಇನ್ನೊಬ್ಬರ ತಲೆಯ ಮೇಲೆ ಆ ಚೀಲಗಳನ್ನಿಟ್ಟರು ಮೂರು ಜನರು ಒಬ್ಬೊಬ್ಬರಾಗಿ ಹೊರಟು ಹೋದರು. ಈಗ ಉಳಿದ ನಾಲ್ಕನೇ ಚೀಲವನ್ನು ಉಳಿದ ಒಬ್ಬನ ಮೇಲೆ ಇಡಬೇಕಾಗಿದ್ದಿತು ಆದರೆ ಅದು ಬಹಳ ಭಾರವಾಗಿದ್ದಿತು ಹಾಗೂ ದೊಡ್ಡದಾಗಿದ್ದಿತು. ಆತನೊಬ್ಬನೇ ಅದನನು ಎತ್ತಲಾಗುತ್ತಿರಲಿಲ್ಲ. ಪಂಡಿತರು ಎಲ್ಲವನ್ನು ಮಲಗಿಕೊಂಡೇ ನೋಡುತ್ತಿದ್ದರು ಸ್ವಲ್ಪ ಸಮಯವಾಯಿತು ಆತ ಬಹಳ ಪ್ರಯತ್ನಿಸಿ ಹತಾಶನಾಗಿದ್ದ, ಇಷ್ಟರಲ್ಲಿ ಪಂಡಿತರೇ ಸ್ವತಃ ಸುಮ್ಮನೆ ಎದ್ದು ಆ ಚೀಲವನ್ನು ಆತನ ಮೇಲೆ ಇಟ್ಟು ಬಿಟ್ಟರು. ಚೀಲವನ್ನು ತಲೆ ಮೇಲೆ ಇಟ್ಟುಕೊಂಡು ಅವರು ಹೊರಟು ಹೋದರು. ಆತ ಎಷ್ಟೊಂದು ಆತಂಕಕ್ಕೆ ಒಳಗಾಗಿದ್ದನೆಂದರೆ ಆತ ತನ್ನ ಮೇಲೆಚೀಲವನ್ನು ಯಾರು ಇಟ್ಟರು ಎಂಬುದನ್ನು ನೋಡಲಿಲ್ಲ. ಆ ನಾಲ್ಕನೇ ವ್ಯಕ್ತಿಯು ಸಹ ನಾತು ಹೋಗಬೇಕಾದ ಸ್ಥಾನವನ್ನು ತಲುಪಿದ. ಎಲ್ಲರೂ ಸೇರಿ ಆನಂದದಿಂದ ಇರುವಾಗ ಮಧ್ಯದಲ್ಲಿ ಪರಸ್ಪರರಲ್ಲಿ ಚರ್ಚೆ ಮಾಡುತ್ತಾ-ಇವತ್ತು ತುಂಬಾ ಒಳ್ಳೆಯದಾಯಿತು. ಸುಲಭವಾಗಿ ಸಾಮಾನುಗಳು ದೊರಕಿದವು - ಯಾರು ನೋಡಲೇ ಇಲ್ಲ ಹಾಗೂ ನಮ್ಮ ಕೆಲಸವಾಯಿತು ಎಂದು ಮಾತಾಡಿದರು. ಅಷ್ಟರಲ್ಲಿ ಅವರಲ್ಲೊಬ್ಬ ಅರೇ ಇಷ್ಟೊಂದು ಭಾರದ ಚೀಲವನ್ನು ನೀನು ಎಲ್ಲರ ತಲೆಮೇಲೆ ಇಟ್ಟೆ, ಆದರೆ ನಿನ್ನ ತಲೆ ಮೇಲೆ ಯಾರು ಚೀಲವನ್ನಿಟ್ಟರು? ಎಂದು ಕೇಳಿದ.

ಆಗ ಅವರೆಲ್ಲರ ಆನಂದ ಕೊನೆಗೊಂಡು ಅವರೆಲ್ಲರೂ ಆ ಐದನೆ ವ್ಯಕ್ತಿ ಯಾರಿದ್ದರು, ಯಾರು ಅಷ್ಟು ಭಾರವಾದ ಚೀಲವನ್ನು ನಿನ್ನ ತಲೆ ಮೇಲೆ ಯಾರಿಟ್ಟರು? ಎಂದು ಯೋಚಿಸತೊಡಗಿದರು. ಆಗ ಆ ವ್ಯಕ್ತಿ ನಿಮ್ಮಲ್ಲಿಯೇ ಯಾರೋ ಒಬ್ಬರು ವಾಪಸ್ ಬಂದಿರಬೇಕು ಆತನೇ ಇಟ್ಟಿರಬೇಕು, ಎಲ್ಲರೂ ನಾವು ಯಾರು ವಾಪಸ್ ಬರಲಿಲ್ಲ ಎಂದರು. ಎಲ್ಲರಿಗೂ ಆಶ್ಚರ್ಯವಾಗಿ ಹಾಗಾದರೆ ಈ ಕೆಲಸ ಯಾರು ಮಾಡಿರಬೇಕು? ಎಂದು ಯೋಚಿಸುತ್ತಾ ಗೊಂದಲದಲ್ಲಿ ಬಿದ್ದರು.

ಆ ನಾಲ್ಕು ವ್ಯಕ್ತಿಗಳು ಪರಸ್ಪರವಾಗಿ ಯೋಚಿಸುತ್ತಾ ನಾವು ಯಾರಲ್ಲಿ ಕಳ್ಳತನ ಮಾಡಿದ್ದೇವೆ? ಅವರು ಯಾರು? ಒಪ್ಪಿ ಅಥವಾ ಒಪ್ಪದಿರಲಿ ಅವರು ದೊಡ್ಡ ಸಜ್ಜನರು, ಧರ್ಮಾತ್ಮರಿರಬೇಕು. ಆದ್ದರಿಂದಲೇ ಅವರು ನಮ್ಮ ಮುಂದೆ ಬರಲಿಲ್ಲ. ಅಷ್ಟರಲ್ಲಿ ಒಬ್ಬ ವ್ಯಕ್ತಿ ಅರೇ ಅವರು ಪಂಡಿತರಿರಲಿಕ್ಕಿಲ್ಲ ತಾನೇ, ಅದು ಅವರ ಅಂಗಡಿಯಾಗಿರಲಿಕ್ಕಿಲ್ಲ, ಪಂಡಿತರೋ ಬಹಳ ಸರಳ ಸ್ವಭಾವದ ಧರ್ಮಾತ್ಮರು, ಎಲ್ಲರೂ ಒಕ್ಕೊರಲಿನಿಂದ ಅವರೇ ಇರಬಹುದು ಪಂಡಿತರ ಹೆಸರು ಬರುತ್ತಲೇ ಸಹೋದರರೇ ಅದು ಅವರದೇ ಅಂಗಡಿ. ಅವರು ಅಂತಿಂಥವರಲ್ಲಿ ಅವರು ಬಹಳ ದೊಡ್ಡ ವಿದ್ವಾಂಸರು, ಬಹಳ ದೊಡ್ಡ ಜ್ಞಾನಿಗಳು. ಸಂಪೂರ್ಣ ಸಮಾಜ ಅವರಿಗೆ ಗೌರವ ನೀಡುತ್ತದೆ. ಅವರು ಒಂದು ಪೈಸೆಯನ್ನು ಆ ಕಡೆಯಿಂದ ಈ ಕಡೆಗೆ ಮಾಡುವವರಲ್ಲ ಜೊತೆಯಲ್ಲಿ ಅವರು ಎಲ್ಲರಿಗೂ ಪರೋಪಕಾರ ಮಾಡುತ್ತಾರೆ, ಸಮಯಕ್ಕೆ ಸರಿಯಾಗಿ ಅಂಗಡಿ ತೆರೆಯುತ್ತಾರೆ ಹಾಗೂ ಸಮಯಕ್ಕೆ ಸರಿಯಾಗಿ ಮುಚ್ಚಿ ಬಿಡುತ್ತಾರೆ. ಅವರಿಗೆ ಮಿತಿ ಇದೆ, ಮರ್ಯಾದೆ ಇದೆ ಅದಕ್ಕಿಂತ ಹೆಚ್ಚು ಅವರು ಯಾರಿಂದಲೂ ಏನ್ನನ್ನೂ ಪಡೆಯುವುದಿಲ್ಲ. ಯಾರೇ ಬರಲಿ ಹೆಚ್ಚು ಕಡಿಮೆ ಮಾಡುವುದಿಲ್ಲ. ಇಂತಹ ವ್ಯಕ್ತಿಯದನ್ನು ನಾವೆಲ್ಲರೂ ಕದ್ದಿದ್ದೇವೆ ಇದು ಬಹಳ ಕೆಟ್ಟದ್ದನನು ನಾವು ಮಾಡಿದ್ದೇವೆ. ಆದರೆ ಈಗ ಅದನ್ನು ಅರಗಿಸಿಕೊಳ್ಳುವುದು ಬಹಳ ಕಷ್ಟವಿದೆ. ಅವರ ಸಾಮಾನುಗಳನ್ನು ತಂದು ಬಿಟ್ಟಿದ್ದೇವೆ ಆದರೆ ಈ ಪರಿಶ್ರಮದ ಹಾಗೂ ಸತ್ಯದ ಗಳಿಕೆ ನಮ್ಮಲ್ಲಿರಲು ಸಾಧ್ಯವೇ? ಅರೇ, ಸ್ವಯಂ ಕಳ್ಳತನ ಮಾಡಿ ಗಳಿಸುವವರ ಮನೆಯಲ್ಲಿ ನಾವು ಏನಾದರೂ ಕಳ್ಳತನ ಮಾಡಿದರೆ ಕಳ್ಳಕಳ್ಳರು ಸೋದರ ಸಂಬಂಧಿ ಕಳ್ಳರೆಂದು ಕರೆಯಲ್ಪಡುತ್ತಾರೆ. ಆದರೆ ಇವರು ಮಹಾನ್ ವ್ಯಕ್ತಿಗಳಾಗಿದ್ದು ತಮ್ಮ ಪ್ರಾಮಾಣಿಕತನದಿಂದ ಹಣ ಗಳಿಸಿದ್ದಾರೆ. ಆದರೆ ನಾವು ಇಂತಹ ಕೆಲಸ ಮಾಡಿದ್ದೇವೆ. ನಾವು ಎಲ್ಲಿಗೆ ಹೋಗುತ್ತೇವೆ? ಹೀಗೇ ಕಳ್ಳತನ ಮಾಡುವುದರ ಫಲ ದುರ್ಗತಿಯಾಗಿದೆ. ಈ ಪಾಪವನ್ನು ನಾವು ಎಲ್ಲಿ ಭೋಗಿಸುವುದು? ಅದರ ಸಾಲವನ್ನು ಹೇಗೆ ತೀರಿಸುವುದು? ಬಹಳ ಕಷ್ಟವಿದೆ, ಕಳ್ಳರ ಹಣ ಕಳ್ಳರ ಬಳಿ ಇರುವುದಿಲ್ಲವೆಂದು ಹೇಳುತ್ತಾರೆ. ಪುಣ್ಯಾತ್ಮರ ಹಣ ಪುಣ್ಯಸ್ಥಾನದಲ್ಲಿರುತ್ತದೆ. ಇಂತಹ ಸ್ಥಾನದಲ್ಲಿರುವುದಿಲ್ಲ. ಅವರೆಲ್ಲರೂ ವಿಚಾರು ಮಾಡುತ್ತಲಿದ್ದರು ಅವರ ಬುದ್ಧಿ ಪರಿವರ್ತನೆಯಾಯಿತು.

ಎಲ್ಲರೂ ವಿಚಾರಮಾಡಿ, ಇದನ್ನು ಇಲ್ಲಿ ಇಟ್ಟುಕೊಳ್ಳಬಾರದು. ಎಲ್ಲಿಂದ ತಂದಿದ್ದೇವೋ ಅಲ್ಲಿಗೆ ಕೊಂಡೊಯ್ಯೋಣ. ಪಂಡಿತರು ನಮ್ಮೆಲ್ಲರ ಅಪರಾಧವನ್ನು ಕ್ಷಮಿಸುವಷ್ಟು ಉಪಕಾರಿಗಳು ಸಮ್ಯಗ್‌ದೃಷ್ಟಿಗಳಾಗಿದ್ದು ಮಹಾ ಪುರುಷರಾಗಿದ್ದಾರೆ. ಅವರು ಉಪಗೂಹನ ಮತ್ತು ಸ್ಥಿತಿಕರಣ ಅಂಗಗಳನ್ನು ತಿಳಿದಿದ್ದಾರೆ. ಅವರು ಕಳ್ಳರ ವಿಷಯವನ್ನು ಕೂಡಲೇ ಪ್ರಚಾರ ಮಾಡುವಂತವರಲ್ಲ. ಹಾಗಿದ್ದರೆ ಅವರು ಕಳ್ಳರಿಗೆ ಚೀಲವನ್ನು ಎತ್ತಿ ಅವರ ತಲೆ ಮೇಲೆ ಇಟ್ಟರು. ಅವರು ಬಹಳ ದಯೋಲಿ ಹಾಗೂ ಕರುಣಾಳು ಆಗಿದ್ದಾರೆ ನಡೆಯಿರಿ ನಾವೆಲ್ಲರು ಈ ಸಾಮಾನನ್ನು ಅವರಿಗೆ

ಹಿಂದಿರುಗಿಸೋಣ ಹಗಲಾಗಿದ್ದಿತು, ಈಗ ಇನ್ನೂ ತಡ ಮಾಡಬಾರದೆಂದು ಅವರು ಯೋಚಿಸಿದರು ಕೊಡುವುದೇ ಎಂದ ಮೇಲೆ ರಾತ್ರಿಯನ್ನು ಯಾಕೆ ಕಾಯಬೇಕು? ಹಗಲಿನಲ್ಲಿಯೇ ಹೋಗೋಣ, ಎಲ್ಲರೂ ಚೀಲಗಳನ್ನೆತ್ತಿಕೊಂಡು ಅಂಗಡಿ ತಲುಪಿದರು.

ಅಂಗಡಿಗೆ ಬಂದ ಅವರು ಪಂಡಿತರಿಗೆ ನಮಸ್ಕರಿಸಿ ಬಟ್ಟೆಯ ಚೀಲಗಳನ್ನು ಅವರೆದುರಿಗೆ ಇಟ್ಟುರು ಕೈ ಜೋಡಿಸಿ ತಾವು ಮಹಾಜ್ಞಾನಿಗಳು ಧರ್ಮಾತ್ಮರು ನಮ್ಮನ್ನು ಕ್ಷಮಿಸಬೇಕೆಂದು ಹೇಳಿದರು. ನಾಲ್ಕನೆಯ ಚೀಲವನ್ನು ಎತ್ತಿ ಇಟ್ಟವರು ಯಾರು ಎಂಬುದು ನಮ್ಮೆಲ್ಲರಿಗೂ ತಿಳಿದು ಬಂದಿದೆ. ಐದನೇ ವ್ಯಕ್ತಿ ನೀವೆಲ್ಲದೇ ಬೇರೆ ಯಾರೂ ಇರಲು ಸಾಧ್ಯವೇ ಇಲ್ಲ. ಇವು ನಿಮ್ಮ ಎಲ್ಲ ಸಾಮಾನುಗಳು; ನೀವು ನಮಗೆ ಯಾವ ದಂಡವನ್ನಾದರೂ ನೀಡಬಹುದು. ನಮಗೆ ಅದು ಸ್ವೀಕಾರವಿದೆ. ನಿಮ್ಮಂತಹ ಮಹಾನ್ ಆತ್ಮರಿಗೆ ನಾವು ಇಲ್ಲಿ ಇಂತಹ ಕಾರ್ಯ ಮಾಡಿರುವುದು ಬಹಳ ದೊಡ್ಡ ಅಪರಾಧವಾಗಿದೆ. ಈಗ ನಾವು ನಿಮ್ಮಿಂದ ಏನಾದರೂ ಕಲಿಯಬೇಕೆಂದಿದ್ದೇವೆ ಅದರಿಂದ ನಮ್ಮ ಜೀವನಕ್ಕೆಸ್ವಲ್ಪ ಹೊಸ ದಿಕ್ಕು ಸಿಗುವಂತಾಗಲಿ. ತಾವು ಏನಾದರೂ ಹೇಳಿರಿ ಎಲ್ಲ ವಿಷಯವನ್ನು ತಿಳಿದ ಪಂಡಿತರು – ಸಾಕು, ಏನೂ ಎಲ್ಲ ನಿಮಗೆ ಪಶ್ಚಾತ್ತಾಪವಾಗಿದೆಯಲ್ಲಾ. ನಾವು ನಿಮ್ಮನ್ನು ಕ್ಷಮಿಸಿದ್ದೇವೆ. ನೀವು ಏನು ತೆಗೆದುಕೊಂಡು ಹೋಗಿದ್ದಿರೋ ಅದನ್ನು ನಿಮಗೆ ಕೊಟ್ಟುಬಿಡುತ್ತೇವೆ. ನೀವು ತೆಗೆದುಕೊಂಡು ಹೋಗಿ–ಎಂದು ಹೇಳಿದರು. ಅವರೆಲ್ಲರೂ ಒಕ್ಕೊರಲಿನಿಂದ – ಇಲ್ಲ ಪಂಡಿತರೇ ಇದನ್ನು ನಾವು ತೆಗೆದುಕೊಳ್ಳುವುದಿಲ್ಲ. ನಾವು ಕಳ್ಳತನ ಮಾಡಿದ್ದೆವು, ಇದೆಲ್ಲವೂ ನಿಮ್ಮದೇ ಆಗಿದೆ. ಇದೆಲ್ಲವನ್ನು ನೀವೇ ಇಟ್ಟುಕೊಳ್ಳಿ – ಎಂದರು. ಪಂಡಿತರು – ಅರೇ ಸಹೋದರರೇ ನೀವು ಕಳ್ಳತನ ಮಾಡಿದ್ದೀರಿ ಹಾಗೂ ನೀವು ಅದನ್ನು ಕಳ್ಳತನ ಎಂದು ಒಪ್ಪಿದ್ದೀರಿ, ಸರಿ ಇದೆ. ಆದರೆ ನಮಗೆ ಒಳ್ಳೆಯ ಸೌಭಾಗ್ಯ ಮತ್ತು ಶ್ರೇಷ್ಠ ಅವಕಾಶ ದೊರಕಿದೆ? ನಾನು ಪರಿಗ್ರಹ ಪರಿಮಾಣಿಯಾಗಿದ್ದೇನೆ. ಪರಿಗ್ರಹ ಪರಿಮಾಣ ನನ್ನ ವ್ರತವಾಗಿದೆ ಹಾಗೂ ನಾನು ಒಳ್ಳೆಯದಾಯಿತೆಂದು ಯೋಚಿಸಿದೆ. ಏನು ಹೇಳದೇ ಯಾರಿಗೂ ಏನೂ ಕೊಡದೇ ಹಾಗೂ ದಾನ ನೀಡದೆಯೇ ಪರಿಗ್ರಹಗಳಿಂದ ಹಗುರವಾಗುತ್ತಿದ್ದೇನೆ ನಾನು ಅಷ್ಟು ಪರಿಗ್ರಹದಿಂದ ಅದೇ ಸಮಯದಲ್ಲಿ ಮೋಹವನ್ನು ಬಿಟ್ಟಿದ್ದೇನೆ ಹಾಗೂ ಅದೇ ಸಮಯದಲ್ಲಿ ತ್ಯಾಗ ಮಾಡಿದ್ದೇನೆ, ಅಷ್ಟಕ್ಕೇ ಮಿತಿ ಮಾಡಿ ಸಂತೋಷ ಮಾಡಿಕೊಂಡಿದ್ದೇನೆ ಇದು ನನ್ನ ಸೌಭಾಗ್ಯಪೂರ್ಣ ಅವಕಾಶವಾಗಿದ್ದಿತು.

ನೋಡಿ, ಪಂಡಿತ ಬನಾರಸೀದಾಸರ ಜೀವನದ ಈ ಅದ್ಭುತವಾದ ಉತ್ತಮ ದೃಷ್ಟಾಂತ ಎಷ್ಟು ವಿಚಿತ್ರವಾಗಿದ್ದಿತು. ಮೆಲ್ಲ–ಮೆಲ್ಲನೆ ಮಳೆಯಾದಾಗ ನೀರು ಭೂಮಿಯ ಒಳಗೆ ಹೋಗುತ್ತದೆ ಹಾಗೂ ಮಳೆ ಬಹಳ ಜೋರಾಗಿ ಆದಾಗ ಅದೇ ನೀರು ಮೇಲಿಂದ ಹರಿದು ಹೋಗುವುದನ್ನು ನೀವು ನೋಡಿದ್ದೀರಿ. ಅದರ ಚಿಂತನೆ ಎಷ್ಟು ಶ್ರೇಷ್ಠವಾಗಿದ್ದಿತು. ಸರಿ ನನ್ನ ಪರಿಗ್ರಹ ಕಡಿಮೆಯಾಯಿತು. ನಾನು ಹಗುರವಾದೆ, ಯಾವ ಪ್ರಯತ್ನವನ್ನು ಮಾಡದೇ ಇದೆಲ್ಲವೂ ಬಿಟ್ಟು ಹೋಯಿತು. ಏನಾದರೂ ಬೇಕಿದ್ದರೆ ಕೊಂಡೊಯ್ಯಲಿ ಎನ್ನುವ ಮಾತು ಅದೆಷ್ಟು ಶ್ರೇಷ್ಠ. ಈ ಎಲ್ಲ ಮಾತುಗಳಿಂದ ವ್ಯಕ್ತಿ ಇನ್ನೂ ಹೆಚ್ಚು ಪ್ರಭಾವಿತನಾಗುತ್ತಾನೆ. ಆತನು ಸುಧಾರಿಸುತ್ತಾನೆ, ಆತನಲ್ಲಿ ಬುದ್ಧಿ, ವಿವೇಕ ಬರುತ್ತದೆ. ಆ ನಾಲ್ಕೂ ಕಳ್ಳರು ಪಂಡಿತರ ವ್ಯವಹಾರದಿಂದ ಪ್ರಭಾವಿತರಾಗಿ ಅಳತೊಡಗಿದರು – ನಾವು ಮಾಡಿರುವ ಅಪರಾಧವನ್ನು ಕ್ಷಮಿಸಿ ಬಿಡಿ. ನಮ್ಮೆಲ್ಲರಿಗೂ ಕೃಪೆಯಿಟ್ಟು ಮಾರ್ಗದರ್ಶನ ನೀಡಿ, ಮಾರ್ಗ ತೋರಿಸಿ ಎಂದಷ್ಟೇ ಹೇಳಿದರು. ಪಂಡಿತರು ಕರುಣಾಭಾವದಿಂದ – ಮೊದಲು ಕಳ್ಳತನ ಬಿಡಿ ಆಗ ಕ್ಷಮೆಯಾಗುತ್ತದೆ – ಎಂದು ಹೇಳಿದರು. ಆಗ ಕಳ್ಳರು – ನಾವು ಕಳ್ಳತನದ ತ್ಯಾಗ ಮಾಡುತ್ತೇವೆ. ಆದರೆ ನಮ್ಮ ಜೀವನ ಇದರಿಂದಲೇ ನಡೆಯುತ್ತದೆ ಮತ್ತು ಅದು ಹೇಗೆ

ತಾನೇ ನಡೆದೀತು ಆಯಿತು ಸರಿ, ಮೊದಲು ಕಳ್ಳತನವನ್ನು ತ್ಯಾಗ ಮಾಡಿ. ಆಗ ನಾವು ನೀವು ಏನು ಮಾಡಬೇಕೆಂದು? ಹೇಳುತ್ತೇವೆ. ನಿಮ್ಮ ಜೀವನ ಅದರಿಂದ ಚೆನ್ನಾಗಿಯೇ ಇರುತ್ತದೆ, ಮಂಗಲಮಯವಾಗಿರುತ್ತದೆ. ಸರಿ, ಹಾಗಿದ್ದರೆ ನಾವು ಇಂದಿನಿಂದ ಕಳ್ಳತನದ ತ್ಯಾಗ ಮಾಡುತ್ತೇವೆ. ಆಗ ಪಂಡಿತರು – ಈಗ ನಾವು ನಿಮ್ಮ ಜೀವನಕ್ಕಾಗಿ ಮಾರ್ಗವನ್ನು ಹೇಳುತ್ತೇವೆ. ಇಲ್ಲಿರುವ ಸಾಮಾನನ್ನು ನಾವು ನಿಮಗೆ ಪುರಸ್ಕಾರದಲ್ಲಿ ನೀಡುತ್ತಲಿದ್ದೇವೆ, ಇದನ್ನು ಕೊಂಡೊಯ್ದು ಊರು – ಊರುಗಳಲ್ಲಿ ಮಾರಿ ವ್ಯಾಪಾರ ಮಾಡಿರಿ ಹಾಗೂ ಬರುವ ಆದಾಯದಿಂದ ಮತ್ತೆ ಸಾಮಾನು ಖರೀದಿಸಿ ಮಾರಾಟ ಮಾಡಿರಿ. ಹಾಗೇ ಮಾಡುತ್ತೇವೆ ಪಂಡಿತರೇ! ಹೀಗೆ ಹೇಳಿ ಆ ನಾಲ್ವರು ಸಾಮಾನು ಒಯ್ದು ಕಾರ್ಯಮಾಡತೊಡಗಿದರು. ಆ ಪಂಡಿತರಿಂದಲೇ ಸಾಮಾನು ಒಯ್ದು. ಅವರು ಸುಧಾರಿಸತೊಡಗಿ ತಮ್ಮ ಜೀವನವನ್ನು ಪರಿಶ್ರಮ ಹಾಗೂ ಪ್ರಾಮಾನಿಕತನದಿಂದ ನಡೆಸತೊಡಗಿದರು. ವ್ಯಕ್ತಿ ಸ್ವತಃ ಅಂತರಂಗದಿಂದ ತನ್ನ ಜೀವನದಲ್ಲಿ ಪರಿವರ್ತನೆ ತರಬಲ್ಲ. ತನ್ನ ಜೀವನನ್ನು ಒಳ್ಳೆಯದನ್ನಾಗಿ ಮಾಡಿಕೊಳ್ಳಬಲ್ಲ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು.

ಜಗತ್ತಿನಲ್ಲಿರುವ ವಸ್ತುಗಳೆಲ್ಲ ನಮ್ಮಿಂದ ಬೇರೆಯಾಗಿವೆ ಎನ್ನುವುದನ್ನು ನಾವು ತಿಳಿದಿದ್ದೇವೆ. ಆದರೂ ಅವುಗಳಲ್ಲಿ ಮೋಹ ಉಂಟಾಗುತ್ತದೆ. ಅವು ಬೆಲೆಬಾಳುವಂತಹವು ಎನಿಸುತ್ತದೆ. ಅವುಗಳನ್ನು ಬಿಡಲಾರೆವು. ತಾವು ಗೃಹಸ್ತರು. ಕೆಸರಿನ್ಲಲಿ ಕಮಲವಿರುವಂತೆ ನಿಮ್ಮ ಜೀವನವನ್ನು ಕಳೆಯಬಹುದು. ಹಾಗೇ ಮಾಡುವವರೇ ಆಕಿಂಚನ್ಯ ಧರ್ಮದ ಏಕದೇಶ, ಒಂದು ಅಂಶ ಪಾಲನೆ ಮಾಡುತ್ತಾರೆ. ನಾಲ್ಕನೆ ಗುಣಸ್ಥಾನದ ಶ್ರಾವಕನಿಂದಲೇ ಆಕಿಂಚನ್ಯ ಧರ್ಮದ ಸಾಧನೆ ಪ್ರಾರಂಭ ಮಾಡಬಹುದಾದರೂ ಪೂರ್ಣರೂಪದಿಂದ ಪರಿಗ್ರಹ ಬಿಡದೇ ಪೂರ್ಣರೂಪದ ಆಕಿಂಚನ್ಯ ಧರ್ಮದ ಪಾಲನೆಯಾಗುವುದಿಲ್ಲ. ವ್ಯಕ್ತಿಯು ವೀತರಾಗದ ಅವಸ್ಥೆಯಲ್ಲಿಯೇ ಬಾಹ್ಯ ಅಭ್ಯಂತರ ಪರಿಗ್ರಹಗಳ ತ್ಯಾಗದಿಂದ ಆಕಿಂಚನ್ಯ ಧರ್ಮದ ಪಾಲನೆ ಮಾಡಬಲ್ಲ. ಆಕಿಂಚನ್ಯ ಧರ್ಮ ಚರ್ಚೆಯ ವಿಷಮವಾಗಿರದೇ ಚರ್ಯೆಯ ವಿಷಯವಾಗಿದೆ. ಇದರ ಉಗಮ ತ್ಯಾಗದ ನಂತರ ಆಗುತ್ತದೆ. ಆಚಾರ್ಯ ಕುಂದಕುಂದ ಸ್ವಾಮಿಗಳು ಬಾರಸಾಣುವೆಕ್ಖಾ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ–

**ಹೋಊಣ ಯ ಣಿಸ್ಸಂಗೋ, ಣಿಯಭಾವಂ, ಣಿಗ್ಗಹಿತ್ತು ಸುಹ ದುಹದಂ।**
**ಣಿದ್ದಂದೇಣ ದು ವಟ್ಟದಿ ಅಣಯಾರೋ ತಸ್ಸ ಆಕಿಂಚಣ್ಣಂ ॥79॥**

ಸಮಸ್ತ ಪರಿಗ್ರಹಗಳನ್ನು ಬಿಟ್ಟ ಮುನಿಯು, ಸುಖ–ದುಃಖಗಳನ್ನು ನೀಡುವ ಕರ್ಮ ಜನ್ಯ ನಿಜ ಪರಿಣಾಗಳನ್ನು ನಿಗ್ರಹ ಮಾಡಿ ನಿಶ್ಚಿಂತ ಹಾಗೂ ನಿರ್ದ್ವಂದ್ವ ಆಚರಣೆ ಮಾಡುವವರಲ್ಲಿ (ಭಯಭೀತರಾಗುವುದಿಲ್ಲ) ಆಕಿಂಚನ್ಯ ಧರ್ಮವಿರುತ್ರದೆ.

ದೃಷ್ಟಿ ಬದಲಾದರೆ ಸೃಷ್ಟಿಯು ಸಹ ಬದಲಾಗುತ್ತದೆ ಹಾಗೂ ಜೀವನ ಸಹ ಬದಲಾಗುತ್ತದೆ. ವಸ್ತುಗಳು ಎಷ್ಟಿವೆಯೋ ಅವುಗಳಲ್ಲಿ ಮಿತಿ ಹಾಕಿಕೊಂಡು ಸೀಮಿತವಾಗಿದ್ದರೆ. ಅದೊಂದು ಪ್ರಕಾರದ ಒಳ್ಳೆಯ ಜೀವನವೆನಿಸುತ್ತದೆ. ಗೃಹಸ್ಥ ಜೀವನದಲ್ಲಿಯೂ ಸಹ ಮರ್ಯಾದಾಪೂರ್ವಕವಾಗಿ ಇರಬಹುದು. ಆದರೆ ತ್ಯಾಗ ಮಾಡಿದ ವಸ್ತುಗಳನ್ನು ಪುನಃ ಮೋಹಿಸತೊಡಗುವ ಜನರು ತಮ್ಮ ಜೀವನಕ್ಕೆ ಬಹಳ ತೊಂದರೆ ಕೊಡುತ್ತಾರೆ. ಅಂತವರು ತಮ್ಮ ವಸ್ತುವಿನ ಹೊರ್ತಾಗಿ ಎಷ್ಟೇ ವಸ್ತುಗಳಿದ್ದರೂ ಅವೆಲ್ಲವೂ ಪುದ್ಗಲವಾಗಿವೆ. ಅವೆಲ್ಲವೂ ಮಣ್ಣಿನ ಸಮಾನವಾಗಿವೆ ಎಂದು ವಿಚಾರ ಮಾಡಬೇಕು ಮಣ್ಣು ಸಹ ಪುದ್ಗಲವಾಗಿದೆ. ಮಣ್ಣಿನಿಂದಲೇ ಎಲ್ಲ ವಸ್ತುಗಳು ರೂಪಗೊಂಡಿವೆ. ತಾನು ನೋಡುವ ವಸ್ತುಗಳೆಲ್ಲವೂ ಮಣ್ಣಿನಿಂದಲೇ ರೂಪಗೊಂಡಿವೆ. ಉದಾ: ಮರ ಅದು ಹೇಗೆ

ಆಯಿತು? ಮಣ್ಣಿನಿಂದ ಬಂದ ರಸದಿಂದ ಸತ್ತ್ವದೊರಕಿತು ಹಾಗೂ ಮರ ದೊಡ್ಡದಾಯಿತು ಹಾಗೂ ಒಂದು ದಿನ ಆಯು ಪೂರ್ಣಗೊಂಡಿತು. ಅದು ಮಣಿನಲ್ಲಿ ಸೇರಿಕೊಂಡಿತು ಮಣ್ಣಿನಿಂದ ಆಗಿದೆ. ಮಣ್ಣಿನಿಂದ ಬಂದ ಸತ್ತ್ವ ಧಾನ್ಯಗಳಲ್ಲಿ ಬಂದಾಗ ಆ ಧಾನ್ಯವನ್ನು ಮನುಷ್ಯ ತಿಂದಾಗ ಅದರಿಂದ ಶರೀರ ರೂಪಗೊಳ್ಳುತ್ತದೆ. ಜೀವನ ಸಾಗುತ್ತದೆ. ಒಂದು ದಿನ ಆಯುಷ್ಯ ಪೂರ್ಣವಾದಾಗ ಶರೀರವು ಮತ್ತೇ ಆ ಮಣ್ಣಿನಲ್ಲಿ ವಿಲೀನವಾಗಿ ಬಿಡುತ್ತದೆ. ಮಣ್ಣಿನ ಶರೀರ, ಮಣ್ಣಿನಲ್ಲಿ ಸೇರಿ ಬಿಡುತ್ತದೆ. ಎಲ್ಲ ವಸ್ತುಗಳು ಮಣ್ಣಿನಿಂದಲೇ ಹೊರಡುತ್ತವೆ. ಅದು ಚಿನ್ನವಾಗಿರಬಹುದು ಬೆಳ್ಳಿ ಹಾಗೂ ಇನ್ನಿತರ ಲೋಹಗಳಾಗಿರಬಹುದು ಅವೆಲ್ಲವೂ ಸಹ ಮಣ್ಣಿನ (ಪೃಥ್ವಿ) ರೂಪದ ಪುದ್ಗಲಗಳಾಗಿವೆ – ಎಂದು ತಿಳಿಯಬೇಕು. ಜೀವನದ ದಿಕ್ಕನ್ನೇ ಬದಲಾಯಿಸಬಲ್ಲ ಒಂದು ಸುಂದರ ದೃಷ್ಟಾಂತವಿದೆ.

ಪತಿ-ಪತ್ನಿಯರಿಬ್ಬರೂ ಒಂದು ಬಾರಿ ಯಾತ್ರೆಗೆ ಹೊರಟಿದ್ದರು. ಅವರಿಬ್ಬರೂ ಅಣುವ್ರತಿಗಳಾಗಿದ್ದರು. ತಮ್ಮ ಜೀವನವನ್ನು ವ್ಯವಸ್ಥಿತವಾಗಿ ರೂಪಿಸಿಕೊಂಡಿದ್ದರು. ಬೆಳಿಗಿನಿಂದ ಸಂಜೆಯವರೆಗೆ ಎಲ್ಲ ಸಮಯವನ್ನು ವಿವೇಕಪೂರ್ಣವಾದ ಚರ್ಯೆಗಳಲ್ಲಿ ಕಳೆಯುತ್ತಿದ್ದರು. ಹೆಚ್ಚಾಗಿ ಧರ್ಮಧ್ಯಾನ ಮಾಡುತ್ತಿದ್ದರು. ತ್ಯಾಗಮಯ ಜೀವನ ನಡೆಸುತ್ತಿದ್ದರು. ಅವರು ಅವಶ್ಯಕತೆಗನುಗುಣವಾಗಿ ಪರಿಗ್ರಹ ಹೊಂದಿರುತ್ತಿದ್ದರು, ಉಳಿದದ್ದನ್ನು ತ್ಯಾಗ ಮಾಡುತ್ತಿದ್ದರು. ಅವರು ಪ್ರತಿಮಾಧಾರಿಗಳಾಗಿದ್ದರು, ಬರಿಗಾಲಿನಿಂದ ಯಾತ್ರೆಗೆ ಹೊರಟಿದ್ದರು. ಅವರು ಅಣುವ್ರತಿಗಳಾಗಿದ್ದರಿಂದ, ತ್ರಸ ಜೀವಿಗಳ ಹಿಂಸೆಯ ತ್ಯಾಗ ಮಾಡಿದ್ದರಿಂದ, ಅವರು ಪಾದರಕ್ಷೆ (ಚಪ್ಪಲಿ)ಗಳನ್ನು ಧರಿಸಿರಲಿಲ್ಲ. ಚಪ್ಪಲಿಯಲ್ಲಿ ಕಠೋರತೆ ಇರುವುದರಿಂದ ಯಾವುದೇ ಜೀವದ ಮೇಲೆ ಕಠೋರ ವಸ್ತುವಿನಿಂದ ಕಾಲನ್ನು ಇಟ್ಟರೆ ಹಿಂಸೆ ಆಗಿಯೇ ಬಿಡುತ್ತದೆ. ಅವರು ಯಾತ್ರೆ ಮಾಡುತ್ತಾ ಸಾಗಿದ್ದರು. ಸಿದ್ಧಕ್ಷೇತ್ರ, ಅತಿಶಯ ಕ್ಷೇತ್ರ, ಮುನಿಗಳು ಮುಂತಾದವರ ದರ್ಶನ ಅವರಿಗೆ ಆಗುತ್ತಿದ್ದಿತು. ಪತಿ-ಪತ್ನಿಯರಿಬ್ಬರು ಜೊತೆ-ಜೊತೆಯಾಗಿ ಆನಂದದಿಂದ ಪ್ರಸನ್ನಚಿತ್ತರಾಗಿ ಹೊರಟಿದ್ದರು ಹಾಗೂ ಭಜನೆ, ಸ್ತುತಿ, ಗೀತೆ, ಪಾಠ ಇತ್ಯಾದಿಗಳನ್ನು ಸಹ ಮಾಡುತ್ತಾ ಸಾಗಿದ್ದರು, ಯಾತ್ರೆ ಮಾಡುತ್ತಾ ಅನೇಕ ದಿನಗಳು ಕಳೆದವು. ಬಹಳ ಭಕ್ತಿಭಾವದಿಂದ ಅವರು ದರ್ಶನ ಇತ್ಯಾದಿಗಳನ್ನು ಅವರು ಮಾಡುತ್ತಿದ್ದರು.

ಒಂದು ದಿನ ಅವರು ಯಾತ್ರೆ ಮಾಡುತ್ತಾ ಜೊತೆ-ಜೊತೆಯಾಗಿ ಹೊರಟಿದ್ದರು. ಇಬ್ಬರೂ ಸ್ತುತಿ ಇತ್ಯಾದಿಗಳನ್ನು ಓದುತ್ತಾ ತಮ್ಮಲ್ಲಿಯೇ ಮಗ್ನರಾಗಿದ್ದರು. ಪತ್ನಿಯು ನಡೆಯುತ್ತಾ ಸ್ವಲ್ಪ ಮುಂದೆ ಹೊರಟು ಹೋದಳು, ಅವಳಿಗೆ ತನ್ನ ಪತಿ ಜೊತೆಯಲ್ಲಿಯೇ ಬರುತ್ತಿದ್ದಾರೆಯೋ ಇಲ್ಲವೋ ಎನ್ನುವುದು ಅವಳ ಗಮನಕ್ಕೆ ಬರಲಿಲ್ಲ. ಆದರೆ ಸ್ವಲ್ಪ ಹೊತ್ತು ಸಾಗಿದ ಮೇಲೆ ಅವಳಿಗೆ ಜೊತೆ-ಜೊತೆಯಾಗಿ ನಡೆಯುವ ಸಪ್ಪಳ ಕೇಳಿಸಲಿಲ್ಲ. ಪತಿ ಜೊತೆಗಿರದಿದ್ದಾಗ ಅವಳು ಅಲ್ಲಿಯೇ ನಿಂತು ಸ್ವಲ್ಪ ಸಮಯ ಕಾಯ್ದು ತನ್ನ ಪತಿ ಹಿಂದೆ ಬರುತ್ತಿರಬೇಕೆಂದು ಭಾವಿಸಿದಳು. ಆದರೆ ಆತ ಒಂದು ಸ್ಥಳದಲ್ಲಿ ಏನೋ ಮಾಡುತ್ತಿದ್ದ ಆಗ ಅವಳು ಅಲ್ಲಿಗೆ ಹೋಗಿ ಇಲ್ಲಿ ಏನು ಮಾಡುತ್ತಿದ್ದಿರಾ? – ಎಂದು ಕೇಳಿದಳು, ಏನಾಯಿತು ನಿಮಗೆ ಹಿಂದೆ ಉಳಿದು ಬಿಟ್ಟಿರಲ್ಲ, ಮುಳ್ಳೇನಾದರೂ ನೆಟ್ಟಿತೆ? ಅದನ್ನು ತೆಗೆಯುತ್ತಿದ್ದಿರಾ. ಅರೆ ಇಲ್ಲ ಮಹಾರಾಯಿತಿ ಏನೂ ಆಗಿರಲಿಲ್ಲ, ನಾನು ಹಾಗೆಯೇ ಸ್ವಲ್ಪ ಮಣ್ಣು ಎತ್ತಿ ಹಾಕುತ್ತಿದ್ದೆ ಮತ್ತೇನೂ ಇಲ್ಲ ಎಂದು ಹೇಳಿದ.

ಅಲ್ಲಿ ಮಣ್ಣನ್ನು ಯಾಕೆ ಹಾಕುತ್ತಿದ್ದಿರಿ; ಅಲ್ಲೇನಿದ್ದಿತು? ಎಂದು ಪತ್ನಿ ಕೇಳಿದಳು. ವಿಷಯವೇನೆಂದರೆ ಅಲ್ಲಿ ಒಂದು ಚಿನ್ನದ ಹಾರ ಬಿದ್ದಿದ್ದಿತು, ನಾವಂತೂ ತೆಗೆದುಕೊಳ್ಳುವ ಹಾಗಿಲ್ಲ,

ನಮ್ಮದು ತ್ಯಾಗವಿದೆ. ಅಣುವ್ರತ ತೆಗೆದುಕೊಂಡಿದ್ದೇವೆ – ಎಷ್ಟಿದೆಯೋ ಅಷ್ಟಕ್ಕಿಂತ ಹೆಚ್ಚು ಇಟ್ಟುಕೊಳ್ಳುವ ಹಾಗಿಲ್ಲ. ನನ್ನ ಮನಸ್ಸು ಇದನ್ನು ನೋಡಿ ಬದಲಾಗಿಲ್ಲ. ಆದರೆ ಬೇರೆಯವರು ಇದನ್ನು ನೋಡಿ ಮೋಹವಾಗಬಾರದು, ರಾಗವಾಗಬಾರದು, ಅವರ ಮನಸ್ಸು ಪರಿವರ್ತನೆಯಾಗಬಾರದು, ಈ ಕಾರಣದಿಂದ ಸ್ವಲ್ಪ ಮಣ್ಣನ್ನು ತೆಗೆದುಕೊಂಡು ಅದರ ಮೇಲೆ ಹಾಕುತ್ತಿದ್ದೇನೆ ಅಷ್ಟೇ – ಎಂದು ಪತಿ ಹೇಳಿದ.ಅರೇ! ಸ್ವಲ್ಪ ವಿಚಾರವನ್ನಾದರೂ ಮಾಡಿ ನಿಮಗೆ ಈಗಲೂ ಸಹ ಮಣ್ಣಿನಲ್ಲಿ ವ್ಯತ್ಯಾಸ ಕಾಣುತ್ತಲಿದೆ. ಜಗತ್ತಿನಲ್ಲಿ ಎಷ್ಟು ಪರ ಪದಾರ್ಥಗಳಿವೆ ಅವೆಲ್ಲವೂ ಮಣ್ಣೇ ಆಗಿವೆ. ನಾನಂತೂ ಮೊದಲಿನಿಂದಲೇ ನನ್ನ ವಸ್ತುಗಳನ್ನು ಬಿಟ್ಟು ಬೇರೆಲ್ಲ ವಸ್ತುಗಳು ಮಣ್ಣಿನ ಸಮಾನವೆಂದೇ ಭಾವಿಸಿದ್ದೇನೆ. ಈಗಲೂ ನಿಮಗೆ ಆ ಮಣ್ಣು ಮತ್ತು ಈ ಮಣ್ಣು ಬೇರೆ–ಬೇರೆ ಎಂದು ಕಾಣುತ್ತಿದೆ. ಈ ಮಣ್ಣನ್ನು ಹೇಗೆ ನೋಡಿಕೊಂಡು ಹೊರಟಿದ್ದಿರಿ ಹಾಗೆಯೇ ಅದನ್ನು ನೋಡುತ್ತಾ ಬರಬೇಕಾಗಿತ್ತು. ನಿಮಗೆ ಆ ಕಡೆ ಯಾಕೆ ಗಮನ ಹೋಯಿತು? ನೀವು ಸ್ವಲ್ಪ ಯೋಚಿಸಿ – ಎಂದು ಪತ್ನಿ ಹೇಳಿದಳು.

ನಾವು ಬೇರೆಯದನ್ನು ಪರವಸ್ತುವೆಂದು ಭಾವಿಸಿರುವಾಗ ಇದು ಸಹ ಪರ ವಸ್ತುವೇ ಆಗಿದೆ. ಇದು ಮೊದಲನೆ ಮಾತು, ಇದರಿಂದ ವ್ರತದಲ್ಲಿ ದೋಷ ಬರುತ್ತದೆ. ನಮಗಂತೂ ಎರಡೂ ಮಣ್ಣಿನ ಸಮಾನವಾಗಿವೆ ಎಂದಾಗ ಅದರ ಮೇಲೆ ಮಣ್ಣು ಯಾಕೆ ಹಾಕಬೇಕು? ಎರಡನೆಯ ಸಂಗತಿ ಎಂದರೆ – ನೀವು ಅದನ್ನು ವಿಶೇಷವೆಂದು ನೋಡಿದಿರಿ ಅಂದರೆ ಅದರ ಬಗ್ಗೆ ರಾಗ ಭಾವ ಹೊಂದಿದಿರಿ, ಮೋಹ ಭಾವ ತಾಳಿದಿರಿ ಆದ್ದರಿಂದಲೇ ಮಣ್ಣು ಹಾಕುತ್ತಿದ್ದಿರಿ. ಇದು ಸಹ ನಮ್ಮ ವ್ರತದಲ್ಲಿ ಕಲಂಕ ಹಚ್ಚಲು ಕಾರಣವಾಯಿತು. ಮೂರನೇ ಸಂಗತಿಯೆಂದರೆ – ನೀವು ಅದನ್ನು ವಿಶೇಷ ರೂಪದಿಂದ ನೋಡಿದಾಗ, ಒಂದು ವೇಳೆ ಆ ಸಮಯದಲ್ಲಿ ವಸ್ತುವಿನ ಮಾಲಿಕ ಬಂದಿದ್ದರೆ ಆತನಿಗೆ ಯಾರೋ ಏನೋ ಮಾಡುತ್ತಿದ್ದಾರೆಂಬ ಸಂದೇಹ ಉಂಟಾಗುತ್ತಿದ್ದಿತು, ನಿಮಗೇನು ಅದನ್ನು ತೆಗೆದುಕೊಳ್ಳುವುದಿರಲಿಲ್ಲ ಆದರೂ ಅದನ್ನು ಮುಚ್ಚಿಡುತ್ತಿದ್ದಿರಿ ಆದರೂ ಜಗಳವಾಗಬಹುದಿತ್ತು ಹಾಗೂ ಅದು ಯಾರ ವಸ್ತು ಆಗಿದ್ದಿತೋ, ಅದನ್ನು ಮುಚ್ಚಿದ್ದರೆ ಅದನ್ನು ಹುಡುಕುತ್ತಾ ಬರುವವರಿಗೆ ಏನಾಗುತ್ತಿದ್ದಿತು? ಎಂದು ಯೋಚಿಸಿ ನೋಡಿ. ಅವರಿಗೆ ವಸ್ತು ಸಿಗುತ್ತಿರಲಿಲ್ಲ ಅಲ್ಲದೇ ಎಷ್ಟು ಕಷ್ಟವಾಗುತ್ತಿದ್ದಿತು? ಎಷ್ಟು ದುಃಖವಾಗುತ್ತದೆ? ಎಷ್ಟು ಪೀಡೆಯಾಗುತ್ತದೆ? ನೀವು ಇದರ ಮೇಲೆ ಮಣ್ಣು ಹಾಕುತ್ತಿದ್ದಿರಾ ಹಾಗೂ ಹೀಗೆಯೇ ಯಾರಾದರೂ ನೋಡಿದರೆ ಮತ್ತು ಕೇಳಿದರೆ ಎಚ್ಚರವಾಗಿರಿ. ನೀವು ಏನು ಮಾಡುತ್ತಿದ್ದಿರಾ? ಆಗ ಕೋಪವಂತೂ ಬಂದೇ ಬಿಡುತ್ತದೆ ಹಾಗೂ ಕಷಾಯವು ಉತ್ಪನ್ನವಾಗುತ್ತದೆ – ಹೇ ನಡಿ ನಿನ್ನ ಕೆಲಸ ನೋಡಿಕೋ ಎಂದು ಹೇಳಲು ಬಹುದು, ಇಷ್ಟಂತೂ ಕೇಳಲೇಬೇಕಾಗುತ್ತದೆ – ಅದರಿಂದ ಮನಸ್ಸಿನಲ್ಲಿ ಖಿನ್ನತೆ ಉಂಟಾಗುತ್ತದೆ. ಜಗತ್ತಿನಲ್ಲಿ ಒಂದೊಂದು ಕೆಲಸ ಮಾಡುವುದು ಕಷ್ಟಕರವಾಗಿದೆ. ಇದರಲ್ಲಿ ಆಗಾಗ ಅಸತ್ಯದ ಸಮರ್ಥನೆಯಾಗುತ್ತದೆ ಮತ್ತು ಕಳ್ಳತನ ಇತ್ಯಾದಿಗಳ ಸಮರ್ಥನೆಯೂ ಆಗಬಹುದು. ಪ್ರತಿಯೊಂದು ಸಂಗತಿಯಲ್ಲಿಯೂ ಸಂದೇಹ ಉತ್ಪನ್ನವಾಗಬಹುದು, ಊಟ–ಪಾನೀಯ, ಏಳುವ–ಕುಳಿತುಕೊಳ್ಳುವ, ನಡೆದಾಟ – ಅಲೆದಾಟ, ಅಳು–ನಗುಗಳಲ್ಲಿ ಇತ್ಯಾದಿಗಳಲ್ಲಿ ಒಂದು ವೇಳೆ ಯಾರಾದರೂ ನಗುತ್ತಿದ್ದರೆ ನೋಡುವವರಿಗೆ ಅವರು, ಅವರು ನನ್ನನ್ನು ನೋಡಿ ಅಥವಾ ನನ್ನ ಬಗ್ಗೆ ನಗುತ್ತಿದ್ದಾರೆಂದು ಅನಿಸಬಹುದು ಯಾರಾದರೂ ಅಳುತ್ತಿದ್ದರೆ ಅವರಿಗೆ ಏನೋ ಬೇಕಾಗಿದೆ ಎಂಬ ಸಂದೇಹ ಬರಬಹುದು ವಸ್ತು ಎಲ್ಲಿ ಬಿದ್ದಿದೆಯೋ ಅದನ್ನು ಅಲ್ಲಿಯೇ ಬಿದ್ದಿರುವುದು ಒಳ್ಳೆಯದು ಮಣ್ಣಿನ ಮೇಲೆ ಮಣ್ಣು ಹಾಕಬೇಡಿ ಇಲ್ಲವೇ ದೃಷ್ಟಿಯನ್ನು ಬೇರೆಡೆ ತಿರುಗಿಸಿ.

ಈ ಜಗತ್ತು ಪಾಪಗಳಿಂದ ತುಂಬಿದೆ, ಆಸ್ರವವು ಎಲ್ಲಿಯೂ ನಿಲ್ಲುತ್ತಿಲ್ಲ ಅದು ಸಾಗುತ್ತಿರುತ್ತದೆ. ಆದ್ದರಿಂದ ಆಚಾರ್ಯರು – ಕ್ರಿಯೆಯನ್ನು ಎಷ್ಟು ಕಡಿಮೆ ಮಾಡಲು ಸಾಧ್ಯವೋ ಅಷ್ಟು ಕಡಿಮೆ ಮಾಡಿ, ಹೆಚ್ಚು ಮಾಡಬೇಡಿ. ಇಲ್ಲಿ – ಅಲ್ಲಿಯ ಕೆಲಸ ಮಾಡಬೇಡಿ ಧರ್ಮದ ಒಂದು ಕ್ರಿಯೆ ಮಾತ್ರ ಮಾಡಿ ಬೇರೆ ಯಾವುದೇ ಕೆಲಸದಲ್ಲಿ ಆಸಕ್ತರಾಗಬೇಡಿ. ಧರ್ಮದ ಕಾರ್ಯಮಾಡಿ. ಅದರಲ್ಲಿಯೂ ಸಹ ಆಸ್ರವವಾಗುತ್ತದೆ. ಆದರೆ ಅದು ಪುಣ್ಯಕ್ಕೆ ಕಾರಣವಾಗಿದೆ. ಪಾಪದ್ದಲ್ಲ. ಆ ಕ್ರಿಯೆ ಮೋಕ್ಷಮಾರ್ಗದ ಸೌಲಭ್ಯವನು ಒದಗಿಸುತ್ತದೆ ಕೊನೆಯಲ್ಲಿ ಆ ಕ್ರಿಯೆಯು ಸಹ ನಿಂತು ಹೋಗುತ್ತದೆ. ಸಾಕು ನಾಸಾಗ್ರ ದೃಷ್ಟಿ ಹೊಂದಿದ, ಕೈ ಮೇಲೆ ಕೈಯಿಟ್ಟು ಕುಳಿತು ಬಿಡಿ. ಮೋಹದ ಉದಯದಿಂದ ಮಮಕಾರ ಮತ್ತು ಅಹಂಕಾರವಾಗುತ್ತದೆ. ಮಮಕಾರ ಮತ್ತು ಅಹಂಕಾರ ಪಡುವುದರಿಂದ ಆತ್ಮನಲ್ಲಿ ರಾಗ ಭಾವ ಉತ್ಪನ್ನವಾಗುತ್ತದೆ. ಈ ಶರೀರ ಇತ್ಯಾದಿಗಳು ನನ್ನವು, ಈ ಅಭಿಪ್ರಾಯವಿದ್ದಾಗ ಮಮಕಾರವೆನ್ನುತ್ತಾರೆ ಹಾಗೂ ನಿಶ್ಚಯವಾಗಿ ಇದು ಆತ್ಮನಿಂದ ಭಿನ್ನವಾಗಿದೆ, ಪ್ರತೇಕವಾಗಿದೆ ಆದರೂ ಅದರಲ್ಲಿ ಇರುವುದನ್ನು ನಮ್ಮದೆಂದು ಭಾವಿಸುವುದು ಅಹಂಕಾರವಾಗಿದೆ. ಮಮಕಾರ ಮಾಡುವುದು ಪರಿಗ್ರಹವಾಗಿದ್ದರೆ ಅದನ್ನು ಈಗಾಗಲೇ ನಾವು ತ್ಯಾಗಮಾಡಿದ್ದೇವೆ ಅದನ್ನೇ ಪ್ರಕಾರಾಂತರದಿಂದ ನನ್ನದೆನ್ನುವುದು, ಆ ಕಡೆ ದೃಷ್ಟಿ ಹರಿಸುವುದು. ಮನವನ್ನು ಹರಿಬಿಡುವುದು ಪರಿಗ್ರಹವೇ ಆಗಿದೆ. ಮಮಕಾರ ಮತ್ತು ಮಮತ್ವವನ್ನು ಬಿಡುವ ಭಾವ ಬಹಳಷ್ಟು ಜನರಲ್ಲಿ ಬರುತ್ತಿರಬಹುದು. ಆದರೆ ಜಗತ್ತಿನ ಆಸಕ್ತಿ ಅವರಿಗೆ ಅವರನ್ನು ತನ್ನೆಡೆಗೆ ಆಕರ್ಷಿಸುತ್ತದೆ. ಸಂಸಾರದ ಆಸಕ್ತಿಯಿಂದ ಹೇಗೆ ರಕ್ಷಿಸಿಕೊಳ್ಳುವುದು ಇದಕ್ಕೆ ಬೇರೆ ಏನಾದರೂ ಉಪಾಯವಿದೆಯೆ? ಈ ವಿಷಯದಲ್ಲಿ ಆಚಾರ್ಯ ಉಮಾಸ್ವಾಮಿಗಳು ತತ್ತ್ವಾರ್ಥ ಸೂತ್ರದಲ್ಲಿ ಮಮತ್ವವನ್ನು ಕಡಿಮೆ ಮಾಡಿಕೊಳ್ಳುವ ಉಪಾಯವನ್ನು ತಿಳಿಸುತ್ತಾ ಹೀಗೆ ಹೇಳಿದ್ದಾರೆ –

**ಜಗತ್ಕಾಯ ಸ್ವಭಾವೌ ವಾ ಸಂವೇಗ ವೈರಾಗ್ಯರ್ಥಮ್ ॥7/12॥**

ಸಂವೇಗ ಮತ್ತು ವೈರಾಗ್ಯಭಾವಗಳ ವೃದ್ಧಿಗಾಗಿ ಸಂಸಾರ ಮತ್ತು ಶರೀರದ ನಶ್ವರತೆ ಹಾಗೂ ಭೋಗಗಳ ಅಸಾರತೆ ರೂಪದ ಸ್ವಭಾವದ ಚಿಂತನೆ ಬೇಕಿದ್ದರೆ ಮಾಡುತ್ತಾ ಇರಿ, ಮಮತ್ವವು ತನ್ನಷ್ಟಕ್ಕೆ ತಾನೇ ಕ್ಷೀಣಿಸುತ್ತದೆ. ಒಂದು ಸಾರಿ ಸಂಸಾರದ ಅಸಾರತೆಯನ್ನು ತಿಳಿದರೆ, ಮತ್ತೇ ಅವು ನಮ್ಮನ್ನು ತಮ್ಮೆಡೆಗೆ ಆಕರ್ಷಣೆ ಮಾಡಿಕೊಳ್ಳಲಾರವು. ಸಂಸಾರದ ನಶ್ವರತೆ ಮತ್ತು ಆತ್ಮನ ಅಮರತ್ವನ್ನು ತಿಳಿಯುವವರೇ ಮಮತ್ವ–ಮಮಕಾರಗಳ ಮೇಲೆ ವಿಜಯ ಪಡೆಯಬಲ್ಲರು. ಆಚಾರ್ಯ ಉಮಾಸ್ವಾಮಿಗಳು ತತ್ತಾರ್ಥಸೂತ್ರದ ಏಳನೇ ಅಧ್ಯಾಯದಲ್ಲಿಯೇ ಮೂರ್ಚ್ಛೆಯನ್ನು ಪರಿಗ್ರಹವೆಂದು ಪರಿಭಾಷಿತ ಮಾಡಿದ್ದಾರೆ. "ಮೂರ್ಚ್ಛಾ ಪರಿಗ್ರಹಃ" ಆಸಕ್ತಿಯ ಅರ್ಥವೇ ಪರಿಗ್ರಹವಾಗಿದೆ, ಪರ ದ್ರವ್ಯದಲ್ಲಿ ಮಮತ್ವ ಬುದ್ಧಿಯ ಹೆಸರು ಮೂರ್ಚ್ಛಾ (ಆಸಕ್ತಿ) ಆಗಿದೆ. ಈ ಸಂದರ್ಭದಲ್ಲಿ ಆಚಾರ್ಯ ಅಮೃತಚಂದ್ರ ಸ್ವಾಮಿಗಳು ಪುರುಷಾರ್ಥ ಸಿದ್ಧ್ಯುಪಾಯದಲ್ಲಿ ಹೀಗೆ ಹೇಳಿದ್ದಾರೆ –

**ಯಾ ಮೂರ್ಚ್ಛಾಂ ನಾಮೇಯಂ ವಿಜ್ಞಾತವ್ಯಃ ಪರಿಗ್ರಹೋ ಹ್ಯೇಷಃ।**
**ಮೋಹೊದಯಾದುದೀರ್ಣೋ ಮೂರ್ಚ್ಛಾ ತು ಮಮತ್ವ ಪರಿಣಾಮಃ॥111॥**

ಇಲ್ಲಿ ಇರುವ ಮೂರ್ಚ್ಛೆಯನ್ನೇ ನಿಶ್ಚಯವಾಗಿ ಪರಿಗ್ರಹವೆಂದು ತಿಳಿಯಬೇಕು. ಮೋಹದ ಉದಯದಿಂದ ಉತ್ಪನ್ನವಾದ ಮಮತ್ವ ಸ್ವರೂಪ ಪರಿಣಾಮವೇ ಮೂರ್ಚ್ಛೆ ಆಗಿದೆ.

ಯಾವುದೇ ಪರ ಪದಾರ್ಥವನ್ನು ಮಮತ್ವಭಾವದಿಂದ ಗ್ರಹಣೆ ಮಾಡುವುದು ಅದರಲ್ಲಿ ಮಮತ್ವ, ಮೂರ್ಛ್ಛಾ, ಲೋಲುಪತೆ, ಆಸಕ್ತಿಯನ್ನು ಹೊಂದಿರುವುದು ಪರಿಗ್ರಹವಾಗಿದೆ. ಪರಿಗ್ರಹವೇ ದುಃಖ, ಆಕುಲತೆ, ವ್ಯಾಕುಲತೆ, ಅಶಾಂತಿ, ಸಮಸ್ತ ಸಂಕಲ್ಪ, ವಿಕಲ್ಪಗಳು, ಹೃದಯದ ಕಲುಷತೆಯನ್ನು ಉತ್ಪನ್ನ ಮಾಡುವಲ್ಲಿ ಕಾರಣೀಭೂತವಾಗಿವೆ. ಪರಿಗ್ರಹವೇ ಸಮತಾಭಾವದ ಶತ್ರು. ಆಪತ್ತುಗಳ ಜನಕ, ಪಾಪಗಳ ಕಣಜ, ನಯ ರೂಪದ ಸನ್ಮಾರ್ಗದ ಘಾತಕ, ಸಮಸ್ತ ಅನರ್ಥಗಳು, ಜಗಳಗಳ ಮೂಲ, ದುರ್ಗತಿಯ ಹೆಬ್ಬಾಗಿಲು, ಸ್ವರ್ಗ ಮತ್ತು ಮೋಕ್ಷಮಾರ್ಗದ ನಿರೋಧಕ, ಆರ್ತ ರೌದ್ರ ಧ್ಯಾನಗಳ ಕಾರಣ, ನರಕದ ಸರಳ ಮಾರ್ಗವಾಗಿದೆ. ಸಹೋದರರೇ, ಸಂಸಾರದಲ್ಲಿ ಪರಿಗ್ರಹವೇ ಪಾಪದ ಮೂಲವಾಗಿದೆ. ಯಾರು ಇದರೊಂದಿಗೆ ಸಂಬಂಧ ಮಾಡಿದ್ದಾರೆ ಜಗತ್ತಿನಲ್ಲಿ ಅವರದೇ ಪತನವಾಗಿದೆ. ಅವರು ಸುಭೌಮರಾಗಿರಬಹುದು, ಬ್ರಹ್ಮದತ್ತ ಚಕ್ರವರ್ತಿ ಇರಬಹುದು, ರಾವಣ ಪ್ರತಿನಾರಾಯಣರಿರಬಹುದು ಅಥವಾ ಬೇರೆ ಯಾರೇ ಆಗಿರಬಹುದು ಅವರು ಕಷ್ಟಗಳನ್ನೇ ಪಡೆದಿದ್ದಾರೆ. ಇನ್ನೊಂದೆಡೆ ಭರತ ಚಕ್ರವರ್ತಿ, ಬಾಹುಬಲಿ ಮುಂತಾದವರಂತಹ ಮಹಾನ್ ವ್ಯಕ್ತಿತ್ವಗಳಾಗಿದ್ದು ನಿಷ್ಪರಿಗ್ರಹಿಗಳಾಗಿ ಸಮಸ್ತ ಸಂಪತ್ತನ್ನು ತ್ಯಾಗಮಾಡಿ ಮುನಿಗಳಾದರು ಹಾಗೂ ಕೇವಲಜ್ಞಾನ ಪಡೆದು ಮೋಕ್ಷವನ್ನು ಪಡೆದರು. ಆಚಾರ್ಯ ಶುಭಚಂದ್ರರು ತಮ್ಮ ಜ್ಞಾನಾರ್ಣವ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ–

**ಆಕಿಂಚನ್ಯೋ ಹಮಿತ್ಯಾಸ್ಸವ ತ್ರೈಲೋಕ್ಯಾದಿಪತಿರ್ಭವೇಃ।**
**ಯೋಗಿಗಮ್ಯಂ ತವ ಪ್ರೋಕ್ತಂ ರಹಸ್ಯಂ ಪರಮಾತ್ಮನಃ ॥110॥**

ನಾನು ಆಕಿಂಚನ್ಯನಾಗಿದ್ದೇನೆ, ಹೀಗೆ ನಿರ್ಧಾರ ಮಾಡಿಕೊಳ್ಳಿ ಮೂರು ಲೋಕದ ಅಧಿಪತಿಗಳಾಗಿ ಬಿಡುತ್ತೀರಿ. ಯೋಗಿಗಳ ಮೂಲಕ ಪಡೆದ ಪರಮಾತ್ಮರದು ಇದೇ ರಹಸ್ಯವಿದೆ. ಯಾರು ಈ ರಹಸ್ಯವನ್ನು ತಿಳಿಯುತ್ತಾರೋ, ಅವರು ಬಾಹ್ಯ ವೈಭವದಲ್ಲಿ ಸಿಲುಕುವುದಿಲ್ಲ. 24 ಪರಿಗ್ರಹಗಳಿಂದ ಒಂದು ವೇಳೆ ನಾವು ಜೀವನದಲ್ಲಿ ಬಿಡುಗಡೆ ಪಡೆದರೆ ಆಕಿಂಚನ್ಯವು ಸಹಜವಾಗಿ ಪ್ರತಿಫಲಿತವಾಗುತ್ತದೆ. ಧರ್ಮಭಾವನಾ ಶತಕದಲ್ಲಿ ಹೀಗೆ ಬರೆದಿದ್ದಾರೆ.

**ಎಲ್ಲಿ ಸಕಲಗ್ರಂಥಿಗಳ ತ್ಯಾಗವಿದೆ, ಅಲ್ಲಿ ಶುಭ ಆಕಿಂಚನ್ಯವಿದೆ।**
**ಯಾರ ಸುಖ–ದುಃಖ ಜನಿತಭಾವದಲಿ ನಿತ್ಯವೂ ಸುಧನ್ಯಭಾವವಿದೆ॥**
**ಎಲ್ಲ ರೀತಿಯ ಚಿಂತೆಗಳಿಂದ ಯಾರ ಮನವು ದೂರವಿರುವುದೋ।**
**ಸಂಯಮ, ತ್ಯಾಗ, ತಪಗಳಿಂದ ಧ್ಯಾನದಲಿ ಯಾವ ಮನವು ಪೂರ್ಣವಿರುವುದೋ ॥77॥**
**ಅಂತರಂಗ ಬಹಿರಂಗ ಸಂಗವು ಭವವನದಲಿ ತಡೆಯುವವು**
**ಸಮತಾಧಾರಕ ಮುನಿಜನರು ಎಲ್ಲ ಬಿಟ್ಟು ಸುಖವನು ಪಡೆಯುವರು ॥78॥**

ಇಪ್ಪತ್ನಾಲ್ಕು ಪರಿಗ್ರಹಗಳಲ್ಲಿ 14 ಪ್ರಕಾರದ ಅಂತರಂಗ ಪರಿಗ್ರಹಗಳಲ್ಲಿ ಎಲ್ಲಕ್ಕಿಂತ ಮೊದಲು ಮಿಥ್ಯಾತ್ವ ಪರಿಗ್ರಹವಿದೆ ಇದು ಭವ ಭ್ರಮಣೆಗೆ ಕಾರಣವಾಗಿದೆ. ತತ್ತ್ವಾರ್ಥದ ಶ್ರದ್ಧೆ ಇರದಿರುವುದೇ ಮಿಥ್ಯಾತ್ವವಾಗಿದೆ. ಅಗೃಹಿತಮಿಥ್ಯಾತ್ವವಿದ್ದರೆ ಶರೀರ ಇತ್ಯಾದಿಗಳಲ್ಲಿ ಏಕತ್ವವಿದೆ ಹಾಗೂ ಒಂದು ವೇಳೆ ಮಿಥ್ಯಾತ್ವವಿರದಿದ್ದರೆ ಶರೀರದ ಉತ್ಪತ್ತಿಯಲ್ಲಿ ತನ್ನ ಉತ್ಪತ್ತಿಯನ್ನು ಒಪ್ಪುವುದಿಲ್ಲ.

ಸಹೋದರರೇ ಮಿಥ್ಯಾತ್ವ ಪರಿಗ್ರಹ ಬಿಟ್ಟು ಹೋದರೆ ಉಳಿದ 23 ಪರಿಗ್ರಹಗಳು ಒಂದು ದಿನ ಬಿಟ್ಟು ಹೋಗುತ್ತವೆ. ಹಾಗೂ ಒಂದು ವೇಳೆ 23 ಪರಿಗ್ರಹಗಳನ್ನು ಬಿಟ್ಟಿದ್ದು ಮಿಥ್ಯಾತ್ವವನ್ನು

ಬಿಡದಿದ್ದರೆ ಆ 23 ಪರಿಗ್ರಹಗಳು ಪುನಃ ಹಿಂದಿರುಗಿ ಬರುತ್ತವೆ. ಅನೇಕ ಸಾರಿ ಬಹಿರಂಗ ಪರಿಗ್ರಹಗಳನ್ನು ಬಿಟ್ಟಿದ್ದೇವೆ ಹಾಗೂ ಅನೇಕ ಸಾರಿ ಅವು ಹಿಂದಿರುಗಿಯೂ ಬಂದಿವೆ. ಇದರ ಕಾರಣ ಏನೆಂದು ತಿಳಿದಿದೆಯೇ? ಜಮೀನಿನ ಕೆಲಸ ಮಾಢುವವರಿಗೆ ಉತ್ತಮ ಫಸಲಿಗಾಗಿ ಬೀಜದ ಪಾತ್ರ ಬಹಳ ಮಹತ್ವಪೂರ್ಣವಾಗಿದೆ ಎಂದು ತಿಳಿದಿರುತ್ತದೆ. ಕಬ್ಬಿನ ಫಸಲು ಬೇಕೆಂದರೆ ಒಂದು ಸಾರಿ ಕಬ್ಬಿನ ಫಸಲನ್ನು ತೆಗೆದುಕೊಂಡ ನಂತರ ಅದರಲ್ಲಿ ಪುನಃ ಕಬ್ಬಿನ ಬೀಜವನ್ನು ಬಿತ್ತುವುದಿಲ್ಲ ಎನ್ನುವುದು ಚೆನ್ನಾಗಿ ಗೊತ್ತಿರುತ್ತದೆ ಯಾಕೆಂದರೆ ಅವರು ಕಬ್ಬನ್ನು ಮಾತ್ರ ಕತ್ತರಿಸಿರುತ್ತಾರೆ ಅದನ್ನು ಮೂಲದಿಂದ ಕಿತ್ತಿರುವುದಿಲ್ಲ ಹಾಗೂ ಅದು ಜಮೀನಿನಲ್ಲಿ ಮೂಲ ಬೀಜದ ರೂಪದಲ್ಲಿ ಉಳಿದಿರುತ್ತದೆ. ಅದರಿಂದ ಫಸಲು ಪುನಃ ಹುಟ್ಟುತ್ತದೆ. ಅದು ಉಳಿದ ಮೂಲ ಕಬ್ಬನ್ನು ಉತ್ಪನ್ನ ಮಾಡುವಲ್ಲಿ ಕಾರಣವಾಗಿರುತ್ತದೆ. ಇದೇ ಪ್ರಕಾರ ಮಿಥ್ಯಾತ್ವ ಪರಿಗ್ರಹವು ದುಃಖ ಮತ್ತು ಸಮಸ್ತ ಅನರ್ಥಗಳ ಮೂಲವಾಗಿದೆ. ಮಿಥ್ಯಾತ್ವಕ್ಕೆ ಯಾವ ಕೊನೆಯು ಸಹ ಇಲ್ಲ ಮಿಥ್ಯಾತ್ವವನ್ನು ಬಿಡದೇ ಇದ್ದವರು ಏನನ್ನೂ ಪಡೆದಿಲ್ಲ, ಒಂದು ವೇಳೆ ತಮ್ಮ ಜೀವನದಿಂದ ಅಗೃಹೀತ ಮಿಥ್ಯಾತ್ವವನ್ನು ಬಿಡಲು ಆಗದಿದ್ದರೆ ಕಡಿಮೆ ಕಡಿಮೆ ಎಂದರೂ ಗೃಹಿತ ಮಿಥ್ಯಾತ್ವವನ್ನು ಬಿಟ್ಟುಬಿಡಬಹುದು. ಒಂದು ವೇಳೆ ಗೃಹಿತ ಮಿಥ್ಯಾತ್ವವನ್ನಾದರೂ ಬಿಟ್ಟರೆ ತಾವು ಆಧ್ಯಾತ್ಮ ತತ್ತ್ವಜ್ಞಾನದ ಮೊದಲ ಮೆಟ್ಟಿಲಿನ ಕಡೆಗೆ ಸಾಗಿದ್ದಿರಿ ಎಂದು ತಿಳಿಯಿರಿ ಹಾಗೂ ಗೃಹಿತ ಮಿಥ್ಯಾತ್ವ ಜೊತೆಯಲ್ಲಿ ಇರುವವರೆಗೆ ಎಷ್ಟೇ ಧರ್ಮ-ಕರ್ಮ, ಪೂಜಾಪಾಠ, ತೀರ್ಥಯಾತ್ರೆ ಜಪ ಇತ್ಯಾದಿ ಮಾಡಿದರೂ ಅವೆಲ್ಲವೂ ನಿರರ್ಥಕವೆನಿಸುತ್ತವೆ. ಅವು ಬಂಜರು ಭೂಮಿಯಲ್ಲಿ ಬೀಜ ಬಿತ್ತಿದ ಹಾಗೇ ಆಗುತ್ತದೆ ಆದ್ದರಿಂದ ಮಿಥ್ಯಾತ್ವದಿಂದ ಬಿಡುಗಡೆ ಹೊಂದುವ ಪ್ರಯತ್ನವನ್ನು ಎಲ್ಲಿಯವರೆಗೆ ಮಾಡುವುದಿಲ್ಲ ಅಲ್ಲಿಯವರೆಗೆ ಆಕಿಂಚನ್ಯ ಧರ್ಮ ತಿಳುವಳಿಕೆಯಿಂದ ಮುಕ್ತವಾಗುವ ಪ್ರಯತ್ನ ಮಾಡುವುದಿಲ್ಲ, ಅಲ್ಲಿಯವರೆಗೆ ಆಕಿಂಚನ್ಯ ಧರ್ಮ ತಿಳಿಯಲು ಆಗುವುದಿಲ್ಲ, ಪಾಲನೆ ಮಾಡುವುದಂತೂ ದೂರದ ಮಾತಾಗುತ್ತದೆ. ಈ ಕಡೆ ಕೇಳುವುದು ಹಾಗೂ ಆ ಕಡೆ ಹೊರಹಾಕಿ ಬಿಡುವುದು, ಆಗುವುದಿಷ್ಟೇ ತಳವಿಲ್ಲದ ಕೊಡದ ಅವಸ್ಥೆಯಾಗುತ್ತದೆ ಅದರಲ್ಲಿ ನೀರು ನಿಲ್ಲುವುದಿಲ್ಲವೆನ್ನುವುದು ಎಲ್ಲರಿಗೂ ತಿಳಿದಿದೆ.

ವಾಸ್ತವಿಕ ಒಬ್ಬ ಆತ್ಮನ ಹೊರ್ತಾಗಿ ಮತ್ತೆ ಏನೂ ನನ್ನದಲ್ಲ, ಯಾವ ಪದಾರ್ಥವೂ ನನ್ನದಲ್ಲ, ಎಲ್ಲ ಪದಾರ್ಥಗಳು ಪರ ಆಗಿವೆ, ನಾನು ಒಬ್ಬ ಪರಮಾತ್ಮ ಸ್ವರೂಪನಾಗಿದ್ದೇನೆ, ಅತೋ ನ ಕಿಂಚಿತ್ ಪರತೋನ ಕಿಂಚಿತ್, ಯತೋ ಯತೋ ಯಾಮಿ ತತೋ ನ ಕಿಂಚಿತ್- ಇಲ್ಲಿ ಏನೂ ಇಲ್ಲ, ಅಲ್ಲಿಯೂ ಏನೂ ಇಲ್ಲ. ಎಲ್ಲೆಲ್ಲಿ ಹೋಗುವಿರೋ ಅಲ್ಲಿಯೂ ಏನೂ ಇಲ್ಲ ಅರ್ಥಾತ್ ಎಲ್ಲವೂ ದೃಷ್ಟಿಯ ಭ್ರಮೆಯಾಗಿದೆ. ಚಿಂತನೆ ಮಾಡಿದರೆ ಸಂಸಾರ ಏನೂ ಇಲ್ಲ ಎಂಬ ಅನುಭವವಾಗುತ್ತದೆ. ಇಲ್ಲಿ ಆತ್ಮದ ಬೋಧದಿಂದ ವಿಶಿಷ್ಟ ಪ್ರಾಪ್ತಿ ಏನೂ ಇಲ್ಲವೆಂದು ತಿಳಿದು ಆತ್ಮನಲ್ಲಿ ಲೀನನಾಗುವುದು ಆಕಿಂಚನ್ಯ ಧರ್ಮವಾಗಿದೆ ಹಾಗೂ ಅದೇ ಮುಕ್ತಿಯ ಮಾರ್ಗವಾಗಿದೆ. ಆಕಿಂಚನ್ಯದ ಜ್ಞಾನವೇ ತತ್ತ್ವಗಳ ಸಾರವಿದೆ. ಮನುಷ್ಯ ಆಕಿಂಚನ್ಯ ಧರ್ಮವನ್ನು ತಿಳಿದಾಗ ಆತ ಎಲ್ಲವನ್ನು ತ್ಯಾಗ ಮಾಡುತ್ತಾನೆ. ಕಾರ್ತಿಕೇಯಾನುಪ್ರೇಕ್ಷೆ ಗ್ರಂಥದಲ್ಲಿ ಆಚಾರ್ಯರು ಹೀಗೆ ಬರೆದಿದ್ದಾರೆ-

**ತಿ ವಿಹೇಣ ಜೋ ವಿವಿಜ್ಜದಿ, ಚೇಯಣಮಿಯರಂ ಯ ಸವ್ವಹಾ ಸಂಗಂ।**
**ಲೋಯ ವವಹಾರ-ವಿರದೋ ಣಿಗ್ಗಂಥತ್ತಂ ಹವೇ ತಸ್ಸ ॥402॥**

ಲೋಕ ವ್ಯವಹಾರಗಳಿಂದ ವಿರಕ್ತನಾದ ಮುನಿ ಚೇತನ ಮತ್ತು ಅಚೇತನ ಪರಿಗ್ರಹಗಳನ್ನು ಮನ, ವಚನ ಕಾಯಗಳಿಂದ ಸದಾಕಾಲಕ್ಕೂ ಬಿಟ್ಟು ಆಕಿಂಚನ್ಯ ಧರ್ಮದ ಪಾಲನೆ ಮಾಡುತ್ತಾರೆ. ತ್ಯಾಗ ಮಾಡಿದ ನಂತರ ದೃಷ್ಠಿ ಮತ್ತೆಲ್ಲಿಯೂ ತಿರುಗದಂತೆ ಗಮನಿಸಬೇಕು ಯಾಕೆಂದರೆ ತ್ಯಾಗದಿಂದ ಆಕಿಂಚನ್ಯದ ಬೋಧನೆಯಾಗಬೇಕು, ಅವರಿಗೆ ಮನಸ್ಸಿನಲ್ಲಿ ಸ್ವಲ್ಪವೂ ಖೇದವಾಗಬಾರದು. ಆಕಿಂಚನ್ಯವು ಶುದ್ಧ ಧ್ಯಾನದ ಶಕ್ತಿಯ ಪುಂಜವಾಗಿದೆ ಹಾಗೂ ಇದು ನಿರ್ಭಯತೆಯನ್ನು ನೀಡುವುದಾಗಿದೆ. ಮಮತ್ವವನ್ನು ಕರಗಿಸುವುಂತಹದಾಗಿದೆ. ಪ್ರತಿ ಸಮಯ ಪೂರ್ಣ ಆಕಿಂಚನ್ಯದವರೆಗೆ ತಲುಪಬಲ್ಲೆವು.

ನಾನು ಮದ್ರಾಸ(ಚೆನ್ನೈ)ನ ಮಾತನ್ನು ಹೇಳುತ್ತೇನೆ. ತಮಿಳುನಾಡಿನಲ್ಲಿ ಸಸಂಘ ವಿಹಾರ ಸಾಗುತ್ತಿದ್ದಾಗ ಮದ್ರಾಸಿನ ಡಿ.ಜಿ.ಪಿ(ಎಸ್.ಶ್ರೀಪಾಲ) ಹಾಗೂ ಬೇರೆ ಜನರು ಮದ್ರಾಸಿಗೆ ಮಹಾರಾಜರು ಬಂದರು ಹಾಗೂ ಅವರು ಅಲ್ಲಿಯ ವಿಹಾರದ ವ್ಯವಸ್ಥೆ ಮಾಡಿದರು ಎನ್ನುವ ಭಾವನೆ ಇದ್ದಿತು. ಅವರಿಗೆ ಬಹಳ ಚಿಂತೆ ಆಗಿದ್ದಿತು ಯಾವುದೇ ಅಪ್ರಿಯ ಘಟನೆಯಾಗಬಾರದು ಆದರೆ ಎಲ್ಲ ವಿಹಾರ ಮಾರ್ಗದಲ್ಲಿ ಸಂಬಂಧಪಟ್ಟ ಆರಕ್ಷಕ ಠಾಣೆಗಳಲ್ಲಿ ಸಂದೇಶ ಕಳಿಸಿದ್ದರಿಂದ ಕೆಲವು ಪೋಲಿಸ ಗಾರ್ಡಗಳು ವಿಹಾರದಲ್ಲಿ ಜೊತೆಯಲ್ಲಿರುತ್ತಿದ್ದರು. ಎಲ್ಲಿ ವಿಹಾರ ಮಾಡುತ್ತಾ ಸಾಗುತ್ತಿದ್ದೇವೋ ಅಲ್ಲಿ ಬರುತ್ತಿದ್ದ ಪೋಲಿಸ್ ಸ್ಟೇಷನ್ ಪೋಲಿಸ್ ಅಧಿಕಾರಿ ಇತ್ಯಾದಿ ಎಲ್ಲರೂ ಬಂದು ಗೌರವ ನೀಡುತ್ತಿದ್ದರು, ವಿನಯ ತೋರಿಸುತ್ತಿದ್ದರು ಹಾಗೂ ಅನೇಕ ಸಾರಿ ಜೊತೆಗೆ ನಡೆದು ಬರುತ್ತಿದ್ದರು. ನಾವು ತಲುಪಬೇಕಾದ ಮದ್ರಾಸ್‌ನ ದಿಗಂಬರ ಜೈನ ಮಂದಿರ ಸುಮಾರು 20ಕಿ.ಮೀ ದೂರದಲ್ಲಿದ್ದಿತು. ನಾವು ಸಂಘ ಸಹಿತ ಹೊರಟಿದ್ದೆವು. ಬೆಳಗಿನ ಸಮಯವಿದ್ದಿತು ಆ ದಿನ ಡಿ.ಜಿ.ಪಿಯವರ ತಂದೆಯವರು ಸಹ ಜೊತೆಗಿದ್ದರು. ಅಲ್ಲಿಂದ ಸುಮಾರು ಒಂದು ಕಿ.ಮೀ ದೂರದಲ್ಲಿ ಒಂದು ಫಾರ್ಮ್‌ನಲ್ಲಿ ಶೌಚ ಕ್ರಿಯೆಗೆ ತೆರಳಿದ್ದೆವು. ಅಲ್ಲಿಂದ ಹಿಂದಿರುಗಿ ಬಂದಾಗ ಒಬ್ಬ ವ್ಯಕ್ತಿ ಎದುರಿಗೆ ಬಂದು ಬಹಳ ರೋಷದಿಂದ ನೋಡತೊಡಗಿದ. ಯಾರು ಸಹ ಆತನಿಗೆ ಏನನ್ನು ಹೇಳಲಿಲ್ಲ. ಆತ ಕೇವಲ ನೋಡಿ ಹೊರಟು ಹೋದ. ಡಿ.ಜಿ.ಪಿ.ಯ ತಂದೆಯವರು ಹಾಗೂ ಇತರರು ಎಲ್ಲರೂ ಹೊರಟೆವು. ಸ್ವಲ್ಪ ದೂರ ಸಾಗಿದ್ದೆವು, ಹತ್ತು ಹೆಜ್ಜೆಗಳಷ್ಟು ದೂರದವರೆಗೆ, 10–15 ಜನರು ಅಸ್ತ್ರ–ಶಸ್ತ್ರಗಳೊಂದಿಗೆ ತಯಾರಾಗಿ ಎದುರಿಗೆ ಬಂದರು. ಅವರ ನಾಯಕ ಆತನಂತೂ ಕೈಯಲ್ಲಿ ತೆರೆದ ತಲವಾರ(ಖಡ್ಗ)ದೊಂದಿಗೆ ಮುಂದೆ ಇದ್ದನು. ಆ ದಿನ ಪಾಂಡಿಚೇರಿಯಿಂದ ಅಲ್ಲಿಯ ರಾಜ್ಯಪಾಲರು ಬರುತ್ತಿದ್ದರು. ಈ ಕಾರಣದಿಂದಾಗಿ ಅಲ್ಲಿ ಪೋಲಿಸ್ ಗಾರ್ಡಗಳನ್ನು ಸಹ ಅದೇ ವ್ಯವಸ್ಥೆಯಲ್ಲಿ ನಿಯೋಜನೆ ಮಾಡಲಾಗಿದ್ದಿತು. ಅಲ್ಲಿ ಪ್ರತಿ 10ಕಿ.ಮೀ ಅಂತರದಲ್ಲಿ ಒಬ್ಬ ಎಸ್.ಪಿ. ಇರುವ ವ್ಯವಸ್ಥೆ ಇದೆ. ನಾವು ಹೊರಟ ಸ್ಥಾನದ ಸಮೀಪದಿಂದಲೇ ಗವರ್ನರ ಸಾಗಬೇಕಾಗಿದ್ದಿತು. ಅಸ್ತ್ರ–ಶಸ್ತ್ರಗಳಿಂದ ಸಿದ್ಧರಾಗಿ ಬಂದವರು ಕೂಡಲೇ ಎದುರಿಗೆ ಬಂದರು. ಇದಕ್ಕೂ ಮುನ್ನ ಯಾರಿಗೂ ಈ ಪ್ರಕಾರದ ಘಟನೆ ಆಗಬಹುದೆಂಬ ಶಂಕೆಯೂ ಯಾರಿಗೂ ಇರಲಿಲ್ಲ. ಆದರೆ ಇಲ್ಲಿ ಜನರು ನೋಡಿದರು ಯಾರೂ ಏನೂ ಹೇಳಲಿಲ್ಲ, ನಾವು ನಿಲ್ಲದೇ ಸಾಗುತ್ತಲಿದ್ದೆವು. ಅಷ್ಟರಲ್ಲಿ ನಮಗೆ ಗೊತ್ತಿಲ್ಲದಂತೆ ಹಿಂದಿನಿಂದ ಇಬ್ಬರೂ ಪೋಲಿಸರು ಎಲ್ಲಿಂದ ಬಂದರೋ ಏನೋ ಬಂದು ಅವರು ಅವರನ್ನು ಕೂಡಲೇ ಬಂಧಿಸಿದರು. ಖಡ್ಗ ಹಿಡಿದಿದ್ದವನ್ನನು ಒಂದೆಡೆ ಸರಿಸಿದ ಸಂಗತಿ ಯಾರಿಗೂ ಗೊತ್ತಾಗಲಿಲ್ಲ, ಆಕಸ್ಮಿಕವಾಗಿ ಅವರು ಬಂದಿದ್ದು, ಪೋಲಿಸರು ಸಹ ಎಲ್ಲಿಂದ ಬಂದರು ಎಂಬುದು ತಿಳಿಯಲಿಲ್ಲ. ನಾವಂತೂ ಆ ಸಮಯದಲ್ಲಿ ಇಂದು ಏನು ಆಗಬೇಕೋ ಆಗಿ

ಬಿಡುತ್ತದೆ ಶರೀರದ ತ್ಯಾಗವು ಸಹ ಆಗಬಹುದೆಂದು ಯೋಚಿಸಿದ್ದೆವು. ಎಲ್ಲವು ಬಿಟ್ಟು ಹೋಗಿದ್ದಿತು ಈಗ ಏನು ಉದ್ದೇಶವಿರಲಿಲ್ಲ. ನಮ್ಮ ಚಿಂತನೆಯಲ್ಲಿ ಲೀನರಾಗಿ ನಡೆಯುತ್ತಿದ್ದೆವು. ಮನಸ್ಸಿನಲ್ಲಿ ಗುರುವಿನ ಮೂಲಕ ನೀಡಿದ ಮಂತ್ರದ ಜಪ ನಡೆದಿದ್ದಿತು ಹಾಗೂ ಎಲ್ಲವೂ ತನ್ನಷ್ಟಕ್ಕೆ ತಾನೇ ದೂರವಾಯಿತು. ನೋಡಿ ಹೇಗೋ ಜನರ ಪುಣ್ಯೋದಯವಾಯಿತು. ಇಂತಹ ಅತಿಶಯಗಳು ಆಗ–ಆಗ ಆಗಿ ಬಿಡುತ್ತವೆ.

ಘಟನೆ ಏನು ಆಗಬೇಕಾಗಿದ್ದಿತೋ ಅದು ಆಯಿತು. ನಾವು ನಮ್ಮ ಸ್ಥಾನವನ್ನು ತಲುಪಿದೆವು. ಆಹಾರ ಚರ್ಯೆ ಆಯಿತು. ಸಾಮಾಯಿಕ ಇತ್ಯಾದಿ ಮಾಡಿ ಎದ್ದಾಗ ನಗರದಿಂದ ಹಲವರು ಬರತೊಡಗಿದ್ದರು. ಅವರು ಬಂದು ಕುಳಿತುಕೊಂಡರು. ನಾವು ಬಹುಶಃ ಇವರಿಗೆ ಮಹಾರಾಜರು ಬಂದ ವಿಷಯ ತಿಳಿದಿರಬೇಕೆಂದು ಆದ್ದರಿಂದ ಪ್ರವಚನ ಕೇಳಲು ಬಂದಿದ್ದಾರೆಂದು ಭಾವಿಸಿದೆವು. ನಾವು ಪ್ರವಚನ ಪ್ರಾರಂಭಿಸಿ ಬಿಟ್ಟೆವು. ಪ್ರವಚನದ ಸಮಯ ಪೂರ್ಣವಾದಾಗ ಹಾಗೂ ನಾವೆಲ್ಲ ಎದ್ದು ಕೆಳಗೆ ಬಂದಾಗ ಹೊರಗಡೆ ಎರಡೂ ಬದಿಯಲ್ಲಿ ಸಾಲಾಗಿ ಪೋಲಿಸರು ನಿಂತಿದ್ದರು, ಕೆಂಪು ದೀಪದ ಗಾಡಿಗಳು ನಿಂತಿದ್ದವು ಅಕ್ಕಪಕ್ಕದಲ್ಲಿ ಮಾಳಿಗೆಗಳ ಮೇಲೆ ಜನರು ನಿಂತು ನೋಡುತ್ತಿದ್ದರು ಬಹಳಷ್ಟು ಜನ ಜಂಗುಳಿ ಇದ್ದಿತು. ಇದೆಲ್ಲಾ ಏನಾಗುತ್ತಿದೆ ಎಂದು ನಮಗೆ ತಿಳಿಯಲಿಲ್ಲ. ನಾವು ನಗರದ ಕಡೆ ವಿಹಾರ ಮಾಡಿದೆವು, ವಿಹಾರ ಮಾಡುತ್ತಿರುವಾಗ ಬೆಳಿಗ್ಗೆ ಆದ ಪ್ರಸಂಗದ ಕಾರಣ ಈ ವ್ಯವಸ್ಥೆಯಾಗಿರಬೇಕೆಂದು ಗಮನಕ್ಕೆ ಬಂದಿತು. ಇಲ್ಲಿಂದ 10–15ಕಿ.ಮೀ ಸಾಗಬೇಕಾಗಿದ್ದಿತು. ಡಿ.ಜಿ.ಪಿ. ದಿಗಂಬರ ಜೈನರಾಗಿದ್ದು ಅವರ ತಂದೆಯವರು ಸಹ ಜೊತೆಯಲ್ಲಿ ಸಾಗುತ್ತಿದ್ದರು. ನೀವು ಯಾಕೆ ನಡೆದು ಹೋಗುತ್ತಿದ್ದಿರಾ ಗಾಡಿಯಲ್ಲಿ ಕುಳಿತುಕೊಳ್ಳಿ ಎಂದು ಎಸ್.ಪಿ. ಹೇಳಿದರು. ಅವರು(ಡಿ.ಜಿ.ಪಿ ತಂದೆ) ಎಸ್.ಪಿ.ಯವರಿಗೆ ನೀವು ಸಹ ಗಾಡಿಯಲ್ಲಿ ಕುಳಿತುಕೊಳ್ಳಿ ಎಂದು ಹೇಳಿದರು ಆದರೆ ಎಸ್.ಪಿ.ಯವರು ಕಾಲು ನಡಿಗೆಯಲ್ಲಿಯೇ ಆದೇಶ ನೀಡುತ್ತಾ ನಡೆಯುತ್ತಿದ್ದರು, ಸ್ವರ್ಣಭದ್ರರನ್ನು ಗಾಡಿಯಲ್ಲಿ ಕುಳ್ಳಿರಿಸಲಾಗಿದ್ದಿತು. ಎಸ್.ಪಿಯವರು 10ಕಿ.ಮೀ ಕಾಲು ನಡಿಗೆಯಲ್ಲಿಯೇ ಬಂದರು. ಅವರು ಸಮಸ್ತ ಶರೀರ ಬೆವರಿನಿಂದ ತೊಯ್ದು ಹೋಗುತ್ತಿದ್ದಿತು. ಆದರೂ ಅವರು ಯಾವ ಯೋಚನೆಯನ್ನು ಮಾಡಲಿಲ್ಲ. ಅವರ ಕ್ಷೇತ್ರ ಪೂರ್ಣವಾದ ನಂತರ ಅವರು ಅಲ್ಲಿಯೇ ನಿಂತು ನಮಸ್ಕಾರ ಮಾಡಿದರು. ನಾವು ಅವರಿಗೆ ಆಶೀರ್ವಾದ ಮಾಡಿದೆವು. ಮತ್ತೊಬ್ಬ ಎಸ್.ಪಿ. ಯವರು ಜೊತೆಗೆ ಬಂದಿದ್ದರು. ನೋಡಿ ಆ ಎಸ್.ಪಿ.ಯವರು ನಡಿಗೆಯಲ್ಲಿ ಬಂದು ತಮ್ಮ ವಿನಯ ವ್ಯಕ್ತಪಡಿಸಿ ತಮ್ಮ ಕರ್ತವ್ಯವನ್ನು ಅರಿತಿದ್ದರು. ಅವರು ಬಯಸಿದ್ದರೆ ಗಾಡಿಯಲ್ಲಿ ಕುಳಿತುಕೊಳ್ಳಬಹುದಾಗಿದ್ದಿತು. ಅವರು ನಡೆದು ಬರುವ ಯಾವ ಅವಶ್ಯಕತೆಯೂ ಇರಲಿಲ್ಲ. ಆದರೆ ಅವರು ತಮ್ಮ ಕರ್ತವ್ಯವನ್ನು ಅರಿತಿದ್ದರು. ಬೆಳಿಗ್ಗೆ ಆಗಬಹುದಾಗಿದ್ದ ತಲವಾರ(ಖಡ್ಗ)ದ ಉಪಸರ್ಗದ ಘಟನೆ ದೂರವಾಗಿದ್ದಿತಾದರೂ ಅದಕ್ಕಾಗಿ ಅವರು ನಡೆದು ಬಂದು ಒಂದು ಪ್ರಾಯಶ್ಚಿತ ಮಾಡಿಕೊಂಡರು ಎಂದು ಭಾವಿಸಬಹುದು. ಆದರೆ ನಾನು ಖಡ್ಗವನ್ನು ನೋಡಿದೊಡನೆ ಶರೀರ ಮುಂತಾದವುಗಳಿಂದ ಮಮತ್ವವನ್ನು ತ್ಯಜಿಸಿ ಆಕಿಂಚನ್ಯ ಭಾವವನ್ನು ಧಾರಣೆ ಮಾಡಿದ್ದೇನು ಹಾಗೂ ಪ್ರಭುವಿನ ನಾನುಸ್ಮರಣೆಯ ಜಪ ಮಾಡುತ್ತಿದ್ದೇನು.

ಮಮತ್ವ ದೂರ ಹೋದಾಗ, ನನ್ನದೂ ಏನೂ ಇಲ್ಲ ಎನ್ನುವ ಭಾವ ಬಂದಾಗ ಅಲ್ಲಿಯೇ ಆಕಿಂಚನ್ಯ ಧರ್ಮವಿದೆ ಎಂದು ಆಚಾರ್ಯರು ಹೇಳುತ್ತಾರೆ. ಧರ್ಮಭಾವನಾ ಶತಕದಲ್ಲಿ ಹೀಗೆ ಬರೆದಿದ್ದಾರೆ–

**ಕೂದಲೆಳೆಯಷ್ಟು ಪರಿಗ್ರಹ ಸಂಗಮ, ಆಗುವುದು ಪಾಪಕೆ ಕಾರಣ।**
**ರಾಗ ಭಾವದ ಜನನ ಮಾಡಿ, ದುಃಖದ ಸಂಪಾದನೆ ಮಾಡುವರು॥**
**ಪರ ಪದಾರ್ಥದ, ಮಮತೆಯ ಬಿಟ್ಟವ ಆಗುವನು, ಜ್ಞಾನಿ।**
**ಆತನ ವ್ರತವು ಆಗುವುದು ಆಕಿಂಚನ, ಆಗುವನವನು ಧ್ಯಾನಿ ॥84॥**

ಆತ್ಮ ಸ್ವಭಾವದಲ್ಲಿ ಸಂತುಷ್ಟನಾಗಿರುವವನು, ಆತ್ಮನಲ್ಲಿಯೇ ರಮಿಸುತ್ತಾನೆ. ಆತನೇ ಪರಪದಾರ್ಥಗಳನ್ನು ಬಿಟ್ಟು ಆತ್ಮನ ಶುದ್ಧತೆಯನ್ನು ಪಡೆದಿದ್ದಾನೆ. ನನ್ನ ಆತ್ಮನ ಹೊರ್ತಾಗಿ ನನ್ನದೇನೂ ಇಲ್ಲ, ಈ ಮಾತನ್ನು ಹೇಳುವುದು ಸರಳವಿದೆ ಆದರೆ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅಷ್ಟೇ ಕಠಿಣವಿದೆ. ನಾವು ಸಹ ಇಂತಹ ಆಕಿಂಚನ್ನ ಧರ್ಮವನ್ನು ಪಡೆಯಲು ಪುರುಷಾರ್ಥ ಮಾಡೋಣ ಹಾಗೂ ಮಹಾನ್ ಆತ್ಮರುಗಳು ತ್ಯಾಗಮಾಡಿದಂತೆ, ಪುರುಷಾರ್ಥ ಮಾಡಿದಂತೆ, ಅವರು ತೀರ್ಥಂಕರ ಭಗವಂತರಿರಬಹುದು, ಅವರು ಮುನಿರಾಜರಾದ ಬಾಹುಬಲಿ, ಜಂಬೂಸ್ವಾಮಿ, ಸನತ್‌ಕುಮಾರ ಚಕ್ರವರ್ತಿ, ಸುಕುಮಾಲ ಸ್ವಾಮಿ ಅಥವಾ ಸುಕೌಶಲ, ಗಜಕುಮಾರ, ಯಶೋಧರ ಇತ್ಯಾದಿ ಮುನಿರಾಜರು ಅವರ ಜೀವನ ಚರಿತ್ರವನ್ನು ತಿಳಿದು ಅವರ ತ್ಯಾಗ ಮತ್ತು ಪುರುಷಾರ್ಥವನ್ನು ತಿಳಿದು ಆಕಿಂಚನ್ಯ ಧರ್ಮವನ್ನು ಪಡೆಯಲು ಪುರುಷಾರ್ಥ ಪೂರ್ವಕವಾಗಿ ಸ್ವಲ್ಪ ಸ್ವಲ್ಪ ತ್ಯಾಗ ಮಾಡುತ್ತಾ ಸಾಗೋಣ. ಬನಾರಸಿದಾಸರಂತಹ ಭಾವ ಶ್ರಾವಕರು ಸಹ ತಮ್ಮ ಜೀವನದಲ್ಲಿ ಹೋದರೆ ಹೋಗಲಿ ನಾವು ಹಗುರವಾದೇವು ಎಂಬ ಭಾವವನ್ನು ತಾಳೋಣ. ಆ ಪತಿಪತ್ನಿಯರ ದೃಷ್ಟಾಂತದಿಂದ ಯಾವುದೇ ವಸ್ತುವನ್ನು ಹೆಚ್ಚಾಗಿ ನೋಡಿದರೆ ರಾಗದಿಂದ ಅದರಲ್ಲಿಯೂ ವ್ಯತ್ಯಾಸವಾಗಿ ಬಿಡುತ್ತದೆ. ನಮ್ಮ ವ್ರತಕ್ಕೆ ಕಲಂಕ ಹತ್ತಬಹುದು ಎಂಬ ಶಿಕ್ಷಣವನ್ನು ಪಡೆಯೋಣ. ಆದ್ದರಿಂದ ಸಹೋದರರೇ ಎಲ್ಲವನ್ನು ಮಣ್ಣು ಎಂದು ತಿಳಿಯಿರಿ ಗಹನತೆಯಿಂದ ಚಿಂತನೆಯಾಗುವುದಿಲ್ಲ ಆಗ ನಾವು ದಾರಿ ತಪ್ಪಬಹುದು. ನಾವು ಸ್ವಯಂ ತ್ಯಾಗ ಮಾಡಿದಾಗ ಅದರಿಂದ ಪುಣ್ಯ ದೊರೆಯುತ್ತದೆ, ಆದರಿಂದಲೇ ಧರ್ಮ ಉಂಟಾಗುತ್ತದೆ. ಅದರಲ್ಲಿಯೇ ಕರ್ಮಗಳ ನಿರ್ಜರೆಯಾಗುತ್ತದೆ ಹಾಗೂ ಒಂದು ವೇಳೆ ನಾವು ಅದನ್ನು ತಾಗ್ಯ ಮಾಡದಿದ್ದರರೆ ಅಥವಾ ಬಿಡದಿದ್ದರೆ ಅದು ಸ್ವಯಂ ಬಿಟ್ಟು ಹೋಗುವುದೇ ಆಗಿದೆ. ಅದೆಷ್ಟು ಪದಾರ್ಥಗಳಿವೆ ಅವೆಲ್ಲವೂ ಚಿಂತೆಗಳನ್ನು ಉತ್ಪನ್ನಮಾಡುತ್ತವೆ ಹಾಗೂ ನಾವು ಅವುಗಳ ಬಗ್ಗೆ ವಷ್ಟು ಚಿಂತೆ ಮಾಡುತ್ತೇವೆ ಅಷ್ಟೇ ಆತಂಕವನ್ನು ಹೊಂದುತ್ತೇವೆ. ಸಹೋದರರೇ ಎಷ್ಟು ಪರಿಗ್ರಹಗಳನ್ನು ಹೆಚ್ಚಿಸಿ ಕೊಳ್ಳುತ್ತಿರೋ ಅಷ್ಟೇ ಒತ್ತಡಕ್ಕೊಳಗಾಗುತ್ತಿರಾ. ತಾವು ಪ್ರತಿ ನಿತ್ಯ ನೋಡುತ್ತಿರಬಹುದು–ಎಷ್ಟು ದೊಡ್ಡವರಾಗುತ್ತಿರೋ, ಅಥವಾ ದೊಡ್ಡವರಿದ್ದಿರೋ, ರಾಜ ಅಥವಾ ಮಹಾರಾಜಾ, ಮಂತ್ರಿ ಇತ್ಯಾದಿ ಏನೇ ಇರಬಹುದು ಅವರನ್ನು ಕೇಳಿ ನೋಡಿ, ಅವರಿಗೆ ಊಟ ಮಾಡಲು ಸಹ ಪುರಸೋತ್ತು ಇರುವುದಿಲ್ಲ ಹಾಗೂ ಒಂದು ವೇಳೆ ಊಟಕ್ಕೇ ಕುಳಿತಿದ್ದರೂ ಸಹ ಅವರಿಗೆ ಈ ಊಟ ಸರಿಯಾಗಿ ಇದೆಯಾ ಎನ್ನುವ ಸಂದೇಹ, ಇದರಲ್ಲಿ ಯಾರಾದರೂ ವಿಷ ಬೆರಸಿರ ಬಹುದೆ? ಯಾಕೆಂದರೆ ಎಷ್ಟು ದೊಡ್ಡ ಜನರಾಗುತ್ತೇವೆಯೋ, ಅಷ್ಟು ಪರಿಗ್ರಹಿಯಾಗುತ್ತೇವೆ, ಅಷ್ಟೇ ಶತ್ರುತ್ವವು ಬೆಳೆಯುತ್ತದೆ. ಆದ್ದರಿಂದ ಸಹೋದರರೇ ಚಿಕ್ಕವರಾಗೆ–ಸಜ್ಜನರಾಗಿ ಇರುವುದು ಒಳ್ಳೆಯದು ಬೇಡಿಕೆಯ ದಾಹವನ್ನು ತ್ಯಜಿಸುವವರೇ ಮಹಾರಾಜಾಧಿರಾಜರಾಗುತ್ತಾರೆನ್ನುವುದು ಗಮನದಲ್ಲಿ ಇರಲಿ. ಹೀಗೆ ಹೇಳಿಯೂ ಇದ್ದಾರೆ–

**ಬೇಡಿಕೆ ಇಲ್ಲದೊಡೆ ಚಿಂತೆ ದೂರ, ಮನುಜನೇ ಅದನು ಗಮನಿಸು**
**ಯಾವ ಬೇಡಿಕೆ ಇಲ್ಲದವನೇ, ರಾಜರ ರಾಜ॥**

# ಉತ್ತಮ ಬ್ರಹ್ಮಚರ್ಯ ಧರ್ಮ

## ಆತ್ಮರಮಣತೆಯೇ ಬ್ರಹ್ಮಚರ್ಯ

### ಮಂಗಲಾಚರಣೆ

**ಧರ್ಮಃ ಸರ್ವಸುಖಾಕರೋ ಹಿತಕರೋ, ಧರ್ಮಂಬುಧಾಶ್ಚಿನ್ವತೇ।**
**ಧರ್ಮೇಣೈವ ಸಮಾಪ್ಯತೇ ಶಿವ ಸುಖಂ ಧರ್ಮಾಯ ತಸ್ಮೈನಮಃ॥**
**ಧರ್ಮಾನ್ನಾಸ್ತ್ಯಪರಃ ಸುಹೃದ್ಭವಭೃತಾಂ ಧರ್ಮಸ್ಯಮೂಲಂ ದಯಾ।**
**ಧರ್ಮೇ ಚಿತ್ತಮಹಂ ದಧೇ ಪ್ರತಿದಿನಂ ಹೇಧರ್ಮ! ಮಾಂ ಪಾಲಯ॥**

ಸದ್ಧರ್ಮ ಬಂಧುಗಳೇ,

ಪರ್ಯೂಷಣ ಪರ್ವದ ಪಾವನ ಸಮಯದಲ್ಲಿ ಇಂದು ಅಂತಿಮದಿನ ಉತ್ತಮ ಬ್ರಹ್ಮಚರ್ಯ ಧರ್ಮದ ಮೇಲೆ ಚಿಂತನೆ ಮಾಡೋಣ ಜೊತೆಯಲ್ಲಿ ನಮ್ಮೆಲ್ಲರಿಗೂ ಮತ್ತೊಂದು ಮಹಾಮಂಗಲ ಸುಅವಸರ ದೊರಕಿದೆ. ಇಂದು ದೇವಾಧಿದೇವ 12ನೇ ತೀರ್ಥಂಕರ ಭಗವಾನ ವಾಸುಪೂಜ್ಯರ ನಿರ್ವಾಣ ದಿವಸವನ್ನು ಎಲ್ಲರೂ ಆಚರಿಸಿದ್ದಾರೆ. ಇಂತಹ ಬಾಲ ಬ್ರಹ್ಮಚಾರಿ ತೀರ್ಥಂಕರರು ಯಾವ ಸ್ಥಿತಿಯಲ್ಲಿ ಮುಕ್ತರಾದರೋ ಪ್ರಭುವೇ ನಮಗೂ ಸಹ ಅಂತಹ ದಶಲಕ್ಷಣ, ಷೋಡಶಕಾರಣ ಇತ್ಯಾದಿ ವ್ರತಗಳ ಮಾಧ್ಯಮದಿಂದ ನಿಮ್ಮಂತಹ ಮುಕ್ತಿಯ ಲಾಭ ಉಂಟಾಗಲಿ ಎನ್ನುವ ಭಾವನೆಯನ್ನು ತಾಳೋಣ, ನಾವೆಲ್ಲರೂ ಇಂದಿನ ಬ್ರಹ್ಮಚರ್ಯ ಧರ್ಮದ ಮೇಲೆ ಚರ್ಚೆ ಮಾಡಲು ಕುಳಿತಿದ್ದೇವೆ, ಬ್ರಹ್ಮಚರ್ಯದ ಪಾಲನೆಯನ್ನು ಹೇಗೆ ಮಾಡಬೇಕು? ಇದಕ್ಕೂ ಮೊದಲು ಬ್ರಹ್ಮಚರ್ಯವೆಂದು ಯಾವುದಕ್ಕೆ ಹೇಳುತ್ತಾರೆ? ಎನ್ನುವುದನ್ನು ತಿಳಿದುಕೊಳ್ಳೋಣ.

**'ಬ್ರಹ್ಮಣಿ ಆತ್ಮನಿ ಚರತೀತಿ ಬ್ರಹ್ಮಚರ್ಯಃ'** ಬ್ರಹ್ಮದರ ಅರ್ಥ ನಿರ್ಮಲ ಜ್ಞಾನ ಸ್ವರೂಪ ಆತ್ಮ. ಶುದ್ಧವಾಗಿರುವ ಬುದ್ಧನಾಗಿರುವ ಶಾಶ್ವತ ಆನಂತ ಸ್ವರೂಪನಾಗಿರುವ ಆತ್ಮ. ಚರ್ಯ, ಚರಣ, ಲೀನತೆ ಇತ್ಯಾದಿಗಳು ಏಕಾರ್ಥವಾಚಕ ಶಬ್ದಗಳಾಗಿವೆ. ಈ ಪ್ರಕಾರ ತನ್ನಾತ್ಮನಲ್ಲಿ ಇಳಿದು ಆತನಲ್ಲಿ ಚರ್ಯ ಮಾಡುವುದು ಬ್ರಹ್ಮಚರ್ಯಯಾಗಿದೆ. ಮನುಷ್ಯ ಎಲ್ಲಿಯವರೆಗೆ ಬ್ರಹ್ಮ ಅರ್ಥಾತ್ ಆತ್ಮನಲ್ಲಿ ಚರ್ಯ ಮಾಡುವುದಿಲ್ಲ ಅಲ್ಲಿಯವರೆಗೆ ಆತ್ಮನು ಭಿನ್ನ ದ್ರವ್ಯಗಳಲ್ಲಿ ರತಿಭಾವವನ್ನು ಹೊಂದಿರುತ್ತಾನೆ. ಹಾಗೂ ರತಿ ಅಥವಾ ರಾಗ ಮುಂತಾದವುಗಳಿಂದ ಕರ್ಮಗಳ ಬಂಧನದಲ್ಲಿ ಬಂಧಿಸಲ್ಪಟ್ಟಿರುತ್ತಾನೆ. ಸಂಸಾರದ ಅಸಾರತೆಯನ್ನು ತಿಳಿಯುವ ಭವ್ಯ ಜೀವ ಉತ್ತಮ ಬ್ರಹ್ಮಚರ್ಯದ ಪಾಲನೆ ಮಾಡಿ ಕರ್ಮ ನಿರ್ಜರೆಯಿಂದ ಮೋಕ್ಷ ಪಥವನ್ನು ಪ್ರಶಸ್ತ ಮಾಡಿಕೊಳ್ಳುತ್ತದೆ. ಪ್ರಾಕೃತದಲ್ಲಿ ಆಚಾರ್ಯದೇವರು ಹೀಗೆ ಹೇಳಿದ್ದಾರೆ– **"ಸೀಲಂ ಮೋಕ್ಖಸ್ಸ ಸೋಪಾಣಂ"** (ಶೀ.ಪಾ.ಗಾ.20) ಶೀಲವು ಮೋಕ್ಷದ ಮೆಟ್ಟಿಲಾಗಿದೆ. ಆತ್ಮನಲ್ಲಿಯೇ ರಮಣ ಮಾಡುವುದು ಉತ್ತಮ ಬ್ರಹ್ಮಚರ್ಯವಾಗಿದೆ. ಉತ್ತಮ ಬ್ರಹ್ಮಚರ್ಯದ ಪಾಲನೆ ಕ್ರೋಧ, ಮಾನ, ಮಾಯಾ ಮತ್ತು ಲೋಭ ರೂಪದ ಕಷಾಯಗಳನ್ನು ತ್ಯಾಗ ಮಾಡುವುದರಿಂದಲೇ ಸಾಧ್ಯವಿದೆ. ಆತ್ಮನಲ್ಲಿ ಅರ್ಥಾತ್ ಆತ್ಮ ಸ್ವರೂಪದಲ್ಲಿ ಆಚರಣೆ

ಅಥವಾ ರಮಣ ಮಾಡುವವರೇ ನಿಶ್ಚಯ ದೃಷ್ಟಿಯಿಂದ ಉತ್ತಮ ಬ್ರಹ್ಮಚರ್ಯದ ಪಾಲನೆ ಮಾಡುತ್ತಾರೆ. ವ್ಯವಹಾರದಲ್ಲಿ ಸಂಯಮಿಯಾಗಿರುವುದು ಬ್ರಹ್ಮಚರ್ಯವಾಗಿದೆ. ವ್ಯವಹಾರದಲ್ಲಿ ಬ್ರಹ್ಮಚರ್ಯ ವ್ರತವನ್ನು ಯಥಾಶಕ್ತಿ ಸ್ವೀಕರಿಸಿ ಗೃಹಸ್ಥರು ಸಹ ಜೀವನವನ್ನು ಧರ್ಮಮಯ ಮಾಡಿಕೊಂಡು ಕ್ರಮಶಃ ವೀತರಾಗತೆಯನ್ನು ಅಭ್ಯಾಸ ಮಾಡುತ್ತಾ ಅಧ್ಯಾತ್ಮದೆಡೆಗೆ ಜೀವನವನ್ನು ಮುನ್ನೆಡೆಸಬಹುದಾಗಿದೆ.

ಬ್ರಹ್ಮಚರ್ಯದ ಪಾಲನೆಯಿಂದ ತಮ್ಮ ಶಾರೀರಕ ಹಾಗೂ ಆತ್ಮಿಕ ಶಕ್ತಿಯ ಪ್ರಯೋಗವನ್ನು ಧ್ಯಾನ ಮಾಡವಲ್ಲಿ ತೊಡಗಿಸಲಾಗುತ್ತದೆ. ಸಾಮಾನ್ಯ ವ್ಯಕ್ತಿಗಳ ಶಕ್ತಿ ಕುಶೀಲಗಳಲ್ಲಿ ವ್ಯರ್ಥವಾಗಿ ಹೋಗುತ್ತದೆ, ಆದ್ದರಿಂದ ಅವರಿಗೆ ಧ್ಯಾನದ ಸಿದ್ಧಿಯಾಗುವುದು ದುರ್ಲಭವಾಗಿದೆ. ಯೋಗಮಾರ್ಗದಲ್ಲಿ ಸಾಗಲು ಭೋಗ ಮಾರ್ಗಕ್ಕೆ ತಿಲಾಂಜಲಿ ನೀಡುವುದು ಪರಮಾವಶ್ಯಕವಾಗಿದೆ. ವ್ರತ ಮತ್ತು ಚಾರಿತ್ರದ ಸಿದ್ಧಿಯು ಬ್ರಹ್ಮಚರ್ಯವಿಲ್ಲದೇ ಆಗುವುದಿಲ್ಲ.

ಬ್ರಹ್ಮಚರ್ಯವನ್ನು ಸಾಮಾನ್ಯರೂಪದಿಂದ ಗೃಹಸ್ಥ ಜೀವನದಲ್ಲಿದ್ದುಕೊಂಡು ವ್ರತದ ಯಾವುದಾದರೂ ವಿಶೇಷ ರೂಪದಿಂದ ಮಿತಿ ಹಾಕಿಕೊಂಡು ಪ್ರಾರಂಭ ಮಾಡಬಹುದು. ಪರಸ್ತ್ರಿ ಮತ್ತು ವ್ಯಸನಗಳ ತ್ಯಾಗದಿಂದ, ಇದನ್ನು ಸಾಧನಾ ರೂಪದಿಂದ ಪ್ರಾರಂಭಿಸಬಹುದು. ಪರಸ್ತ್ರಿ ಮತ್ತು ವೇಶ್ಯಾಗಮನದ ತ್ಯಾಗದಿಂದ ಅಥವಾ ಕ್ರಮವಾಗಿ ಮುಂದೆ ಸಾಗುತ್ತಾ ಪೂರ್ಣ ಬ್ರಹ್ಮಚರ್ಯ ವ್ರತ ಅಥವಾ ಕ್ರಮವಾಗಿ ಬ್ರಹ್ಮಚರ್ಯ ಅಣು ವ್ರತದ ರೂಪದಲ್ಲಿ ಸ್ವದಾರ ಸಂತೋಷವ್ರತ, ಆ ನಂತರ ಶ್ರಾವಕರ ಪ್ರತಿಮಾಗಳ ರೂಪದಲ್ಲಿ ದ್ವಿತೀಯ ಇತ್ಯಾದಿ ಪ್ರತಿಮಾಗಳಲ್ಲಿ ಪರ್ವ ಇತ್ಯಾದಿ ನಿಮಿತ್ತದಿಂದ ಸಾಧನೆಯನ್ನು ಹೆಚ್ಚಿಸಲಾಗುತ್ತದೆ ಹಾಗೂ ಏಳನೇ ಪ್ರತಿಮಾದಲ್ಲಿ ಮನ-ವಚನ-ಕಾಯಗಳಿಂದಲೂಸಹ ಪೂರ್ಣ ಬ್ರಹ್ಮಚರ್ಯವನ್ನು ಸ್ವೀಕರಿಸಲಾಗುತ್ತದೆ. ಇದರೊಳಗೆ ಸ್ವಂತ ಸ್ತ್ರೀಯನ್ನು ಸಹ ಸಹೋದರಿಯಂತೆ, ತನ್ನ ಪತಿಯನ್ನು ಸಹೋದರನಂತೆ ಸ್ವೀಕರಿಸಲಾಗುತ್ತದೆ ಮತ್ತೆ 10ನೇ ಪ್ರತಿಮಾಕ್ಕಿಂತ ಮುಂದೆ ಮನೆಯನ್ನು ತ್ಯಾಗ ಮಾಡಲಾಗುತ್ತದೆ. ಆ 11ನೇ ಪ್ರತಿಮಾಧಾರಿಗಳ ಬ್ರಹ್ಮಚರ್ಯವು ಶ್ರಾವಕರಲ್ಲಿ ಶ್ರೇಷ್ಟವಾಗಿರುತ್ತದೆ ಯಾಕೆಂದರೆ ಗಡಿಗಳು ವಿಸ್ತರಿಸುತ್ತಾ ಸಾಗುತ್ತವೆ. ಬ್ರಹ್ಮಚರ್ಯ ಮಹಾವ್ರತವು ಮುನಿಗಳ ಬ್ರಹ್ಮಚರ್ಯದ ರೂಪದಲ್ಲಿ 18 ಸಾವಿರ ಶೀಲಗಳ ಭೇದಗಳೊಂದಿಗೆ ಪಾಲಿಸಲಾಗುತ್ತದೆ. ಇದರಲ್ಲಿ ಮನ,ವಚನ,ಕಾಯ,ಕೃತ,ಕಾರಿತ, ಅನುಮೋದನೆಗಳಿಂದ ಅಬ್ರಹ್ಮದ ಸೇವನೆಯ ತ್ಯಾಗಮಾಡಿ ಮಾಡಲಾಗುತ್ತದೆ. ಮುನಿರಾಜರು ತಮ್ಮ ಪುರುಷಾರ್ಥದಿಂದ ಎಲ್ಲ ಪ್ರಕಾರದ ಪಾಪಗಳ ತ್ಯಾಗಮಾಡಿ ತಮ್ಮ ಆತ್ಮನನ್ನು ವಿಶುದ್ಧಗೊಳಿಸುತ್ತಾರೆ, ಮನಸ್ಸನ್ನು ಏಕಾಗ್ರಗೊಳಿಸುತ್ತಾರೆ, ಗುಪ್ತಿಗಳಲ್ಲಿ ಲೀನರಾಗಿ ಎದುರಿಗೆ ಯಾವುದೇ ರೂಪವನ್ನು ನೋಡಿದರೂ ಅವರಿಗೆ ವಿಕಾರ ಉತ್ಪನ್ನವಾಗದಂತಹ ರೀತಿಯಲ್ಲಿ ಆತ್ಮನನ್ನು ವಿಶುದ್ಧಿಗೊಳಿಸುತ್ತಾರೆ. ಅವರ ಭಾವನೆಗಳು ಅದೆಷ್ಟು ಶ್ರೇಷ್ಠವಾಗಿ ಬಿಡುತ್ತವೆ ಎನ್ನುವುದನ್ನು ತಿಳಿಯಬೇಕಾದ ವಿಷಯವಾಗಿದೆ. ಉತ್ತಮ ಬ್ರಹ್ಮಚರ್ಯದ ಪಾಲನೆಯು ಆರನೇ, ಏಳನೇ ಗುಣಸ್ಥಾನಗಳಲ್ಲಿರುವ ಮುನಿಗಳಿಂದ ಪ್ರಾರಂಭವಾಗುತ್ತದೆ. ಮುನಿರಾಜರು ಸರ್ವಶ್ರೇಷ್ಠ ಬ್ರಹ್ಮ ಅರ್ಥಾತ್ ಆತ್ಮ, ಚರ್ಯ ಅರ್ಥಾತ್ ಚರ್ಯ ಮಾಡುವುದು ಅರ್ಥಾತ್ ಬ್ರಹ್ಮರೂಪಿ ಆತ್ಮನಲ್ಲಿ ಚರ್ಯ ಮಾಡುತ್ತಾರೆ ಇದೇ (ಆತ್ಮನ) ಸ್ವಭಾವವಾಗಿದೆ. ಇಂತಹ ಬ್ರಹ್ಮಚರ್ಯದ ಪರಿಪೂರ್ಣತೆಯು 13ನೇ-14ನೇ ಗುಣಸ್ಥಾನಗಳಲ್ಲಿ ಹೋಗಿ ಆಗುತ್ತದೆ. ಪರಿಪೂರ್ಣ ಪಾಲನೆಯು ಕೇವಲಿ ಭಗವಂತರಾದ ನಂತರ ಯೋಗದ

ನಿರೋಧವಾದಾಗ 14ನೇ ಗುಣಸ್ಥಾನದಲ್ಲಿ ಶೀಲದ 18 ಸಾವಿರ ಭೇದಗಳಿಂದ ಅಲ್ಲಿ ಆತ್ಮನನು ವಿಭೂಷಿತನಾಗುತ್ತಾನೆ. ಹಾಗೂ ಮರುಕ್ಷಣದಲ್ಲಿಯೇ ಪರಮ ಬ್ರಹ್ಮ ಪರಮಾತ್ಮರಾಗುತ್ತಾರೆ. ಶೀಲದ ಪರಿಪೂರ್ಣತೆಯೇ ಪರಮಾತ್ಮ ಅವಸ್ಥೆಯಾಗಿದೆ. ಸಿದ್ಧ ಪರಮಾತ್ಮನಾಗುವ ಒಂದು ಸಮಯ ಮೊದಲಿನವರಗೆ ಶುಕ್ಲಧ್ಯಾನಕ್ಕಾಗಿ ಉತ್ತಮ ಬ್ರಹ್ಮಚರ್ಯ ಧರ್ಮದ ಸ್ಥಾನವು ದಶಧರ್ಮಗಳಲ್ಲಿ ವಿಶಿಷ್ಟ ಹಾಗೂ ಮಹತ್ವದ ಸ್ಥಾನವಿದೆ. ಬ್ರಹ್ಮಚರ್ಯ ಧರ್ಮದ ಧ್ಯಾನದ ಪ್ರಸಿದ್ಧಿಯಲ್ಲಿ ವಿಶೇಷ ಮಹತ್ವವಿದೆ. ಧರ್ಮ ಭಾವನಾ ಶತಕದಲ್ಲಿ ಸಾರರೂಪದಲ್ಲಿ ಹೀಗೆ ಬರೆದಿದ್ದಾರೆ–

**ಪರಮ ಬ್ರಹ್ಮರು ನಿಜಾತ್ಮರಾಗಿದ್ದು ಅದರೊಳು ಮತಿಜನ ರಮಿಸುವರು।**
**ಅವರೇ ಆತ್ಮ ತತ್ತ್ವದ ಅಧಿಕಾರಿಗಳು, ಶೀಲ ಗುಣಗಳಿಂದ ಅಲಂಕೃತರು॥**

**ಯಾರ ಶೀಲವು ಹದಿನೆಂಟು ಸಾಸಿರವಿದೆ, ಅವರೇ ಪಾಲಿಪ ಮುನಿಜನರು।**
**ನಿರ್ವಿಕಾರದಿ ನಿರ್ಭಯದಿಂ ಪಾಪ ಮೈಲಿಗೆಯ ತೊಳೆಯುವರು॥**

**ಆತ್ಮ ಬ್ರಹ್ಮನಲಿ ಚರ್ಯಮಾಡುವ ಯತಿ ಸಮತಾ ರಸದ ಪಾನ ಮಾಡುವರು।**
**ವಿಷಯ ಸುಖಗಳ ತ್ಯಜಿಸಿದ ಮುನಿವರರು, ಶುಕ್ಲ ಧ್ಯಾನವ ಮಾಡುವರು॥**

**ಅವರು ಜೀವನ ಪಾವನದಿಂದ, ಎಲ್ಲರ ಮನದ ಮೈಲಿಗೆ ಕಳೆಯುವರು।**
**ಜಗದ ಶುಭಗುಣಗಳ ಸೇವೆ ಮಾಡುತ, ಜಯ–ಜಯಕಾರವ ಪಡೆಯುವರು॥**

ಉತ್ತಮ ಆ ಶ್ರೇಷ್ಠ ಬ್ರಹ್ಮಚರ್ಯವು ಪ್ರಾಪ್ತವಾಗುವ ಮುನಿಗಳು ಹೇಗಿರುತ್ತಾರೆ? ಈ ವಿಷಯದಲ್ಲಿ ಆಚಾರ್ಯ ಕುಂದಕುಂದ ಸ್ವಾಮಿಗಳು ಬಾರಸ ಅಣುವೆಕ್ಖಾ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ.

**ಸವ್ವಂಗಂ ಪೆಚ್ಛಂತೋ ಇತ್ಥೀಣಂ ತಾಸು ಮುಯದಿ ರದಿಭಾವಮ್।**
**ಸೋ ಬಮ್ಹಚೇರ ಭಾವಂ ಸಕ್ಕದಿ ಖಲು ದುದ್ಧರಂ ಧರದಿ ॥80॥**

ಸ್ತ್ರೀಯರ ಸಮಸ್ತ ಅಂಗಗಳನ್ನು ನೋಡುತ್ತಿದ್ದರೂ ಆ ಸ್ತ್ರೀಯರಲ್ಲಿ ರತಿ ಭಾವರಾಗ ಭಾವವನ್ನುಂಟು ಮಾಡಲಾರದ ಮುನಿಯು ಅರ್ಥಾತ್ ಅವರಲ್ಲಿ ರಾಗರೂಪ ಕೆಟ್ಟ ಪರಿಣಾಮ ಮಾಡುವುದನ್ನು ಬಿಡುವ ಮುನಿಯು ನಿಶ್ಚಯವಾಗಿಯೂ ದುರ್ಧರ ಬ್ರಹ್ಮಚರ್ಯ ಧರ್ಮವನ್ನು ಸ್ವೀಕರಿಸಲು ಸಮರ್ಥರಾಗಿದ್ದಾರೆ ಅಂದರೆ ಯಾವುದೇ ರೂಪ–ಸ್ವರೂಪ ನೋಡಿದರೆ ಅದು ಕೇವಲ ಒಂದು ದೃಶ್ಯವಿದೆ ಹಾಗೂ ದೃಶ್ಯದಲ್ಲಿ ರಾಗ–ದ್ವೇಷ ಮಾಡಿಕೊಂಡರೆ ಕರ್ಮ ಬಂಧದ ಕಾರಣವಾಗುತ್ತದೆ ಎನ್ನುವುದು ಇದರ ಅರ್ಥವಾಗಿದೆ. ಇಲ್ಲವಾದಲ್ಲಿ ಅದೇ ಸಂಗತಿಯು–

**ಅಚೇತನಮಿದಂ ದೃಶ್ಯ, ಮದೃಶ್ಯಂ ಚೇತನಂ ತಥಾ।**
**ಕ್ವರುಷ್ಯಾಮಿ ಕ್ವತುಷ್ಯಾಮಿ ಮಧ್ಯಸ್ಥೋऽ ಹಮ್ ಭವಾಮ್ಯತಃ ॥46॥**

ನಮ್ಮ ಕಣ್ಣೆದುರಿಗೆ ಕಾಣುವ ಈ ದೃಶ್ಯವು ಅಚೇತನವಾಗಿದೆ. 'ಇದಂ ದೃಶ್ಯಂ ಅಚೇತನಂ ಹಾಗೂ ಅದೃಶ್ಯಂ ಚೇತನಂ ತಥಾ' ನಮ್ಮ ಆತ್ಮನಂತೂ ಅದೃಶ್ಯನಾಗಿದ್ದಾನೆ ಚೇತನನಾಗಿದ್ದಾನೆ, ಯಾವುದರಲ್ಲಿ ರಾಗ ಮಾಡಲಿ, ಯಾವುದರಲ್ಲಿ ದ್ವೇಷ ಮಾಡಲಿ ಎಂದು ವಿಚಾರ ಮಾಡುತ್ತಾರೆ ಯಾಕೆಂದರೆ ಕಾಣುತ್ತಿರುವುದು ನಾನಲ್ಲ, ನಾನಾಗಿರುವುದು ಕಾಣುವುದಿಲ್ಲ, ನನ್ನ ಭಾವವನ್ನು ಯಾವುದರಲ್ಲಿ ತೊಡಗಿಸಲಿ. ಕಣ್ಣಿನ ಮುಂದೆ ಏನೆಲ್ಲ ಇದೆ ನಿಶ್ಚಿತವಾಗಿಯೂ ನನ್ನದಲ್ಲ ಹಾಗೂ

ಯಾವುದು ನನ್ನವಾಗಿದೆ, ಅದನ್ನು ಕಣ್ಣು ನೋಡುವುದಿಲ್ಲ. ಆದ್ದರಿಂದ ಆಚಾರ್ಯಶ್ರೀಗಳ (ಮುನಿಶ್ರೀ ವಿದ್ಯಾಸಾಗರ ಮಹಾರಾಜರ) ಮೂಕಮಾಟಿಯಲ್ಲಿ ಇದೇ ಭಾವವನ್ನು ಹೊಂದಿದ ಪದ್ಯವಿದೆ–

**ಹೊರಗಡೆಗೆ ಏನೆಲ್ಲ ಕಾಣುತಿದೆ**
**ಅದೆಲ್ಲವೂ...ನಾನಲ್ಲ ಹಾಗೂ ಅವು ಸಹ ನನ್ನವೂ ಅಲ್ಲ.**

(ಪುಟ 345)

ಅರ್ಥಾತ್ ಕಾಣುತ್ತಿರುವ ಈ ಬಾಹ್ಯ ಜಗತ್ತು, ಅದು ನಾನಲ್ಲ, ಅಲ್ಲದೇ ಅವು ನನ್ನವೂ ಅಲ್ಲ, ನಾನು ಇವುಗಳಿಂದ ಭಿನ್ನನಾಗಿದ್ದೇನೆ. ನಾನು ವಿಶ್ವ ರೂಪನು ಅಲ್ಲ ಅರ್ಥಾತ್ ಪುದ್ಗಲ ರೂಪನಿದ್ದೇನೆ. ಈ ಜಡ ನನ್ನ ರೂಪವಲ್ಲ. ನಾನು ನೋಡ ಬಲ್ಲೆ ಆದರೆ ಕಣ್ಣಿದ್ದರೂ ಸಹ ಸ್ವವನ್ನು ನೋಡಲಾರೆ. ಹಾಂ ಸ್ವಯಂದ ಸೃಜನಕರ್ತಾ ಆಗಿದ್ದೆ, ಇದ್ದೇನೆ ಹಾಗೂ ಇರುತ್ತೆನೆ ಹಾಗೂ ಎಲ್ಲದರ ದರ್ಶಕನಾಗಿದ್ದೆ, ಇದ್ದೇನೆ ಹಾಗೂ ಇರುತ್ತೆನೆ. ಈ ಪ್ರಕಾರದಿಂದ ನಾವು ತಿಳಿಯಬೇಕು, ಅರಿಯಬೇಕು. ಸ್ತ್ರೀಯರ ಯಾವುದೇ ರೂಪ ಯಾಕಾದರೂ ಕಾಣಲಿ, ಎಂದಿಗೂ ಅದರಲ್ಲಿ ರಾಗ–ದ್ವೇಷ ಮಾಡದಿರುವುದೇ ಉತ್ತಮ ಬ್ರಹ್ಮಚರ್ಯವಾಗಿದೆ. ಇದರಲ್ಲಿಯೂ ಐದೂ ಇಂದ್ರಿಯಗಳ ವಿಷಯಗಳ ತ್ಯಾಗವಾಗುತ್ತದೆ. ಕಾರ್ತಿಕೇಯಾನು ಪ್ರೇಕ್ಷೆಗ್ರಂಥ ದಲ್ಲಿ ಆಚಾರ್ಯರು ಉತ್ತಮ ಬ್ರಹ್ಮಚರ್ಯ ಧರ್ಮದ ವ್ಯಾಖ್ಯಾನ ಮಾಡುತ್ತಾ ಹೀಗೆ ಬರೆದಿದ್ದಾರೆ–

**ಜೋ ಪರಿಹರೇದಿ ಸಂಗಂ ಮಹಿಲಾಣಂ ಣೇವ ಪಸ್ಸದೇ ರೂವಂ।**
**ಕಾಮ ಕಹಾದಿ ಣೀರೀಹೋ ಣವ–ವಿಹ–ಬಂಭಂ ಹವೇ ತಸ್ಸ ॥403॥**

ಸ್ತ್ರೀಯರ ಸಂಗ ಮಾಡದಿರುವ ಮುನಿ ಅವರ ರೂಪವನ್ನು ನೋಡುವುದಿಲ್ಲ, ಕಾಮದ ಕಥೆ ಮುಂತಾದ ಶಬ್ದಗಳಿಂದ ಸ್ಮರಣೆ ಇತ್ಯಾದಿ ರಹಿತರಾಗಿರುತ್ತಾರೆ. ಅವರ ಮನ ವಚನ–ಕಾಯ ಮತ್ತು ಕೃತ–ಕಾರಿತ ಅನುಮೋದನದ ಭೇದಗಳಿಂದ ಒಂಬತ್ತು ಪ್ರಕಾರದ ಬ್ರಹ್ಮಚರ್ಯವಾಗುತ್ತದೆ.

ಐದು ಇಂದ್ರಿಯಗಳ ಮೇಲೆ ವಿಜಯ ಪಡೆದಾಗಲೇ ಬ್ರಹ್ಮಚರ್ಯದ ಪಾಲನೆಯಾಗುತ್ತದೆ. ಆಚಾರ್ಯರು–ಸ್ಪರ್ಶನ ಇಂದ್ರಿಯದ ಎಂಟು, ರಸನಾದ ಐದು, ಘ್ರಾಣದ ಎರಡು, ಚಕ್ಷುವಿನ ಐದು, ಕರ್ಣದ ಏಳು ಹಾಗೂ ಮನಸ್ಸಿನ ಒಂದು ವಿಷಯ ಈ 28 ವಿಷಯಗಳಲ್ಲಿ ರಾಗ–ದ್ವೇಷವನ್ನು ಪೂರ್ಣವಾಗಿ ತ್ಯಾಗ ಮಾಡುವುದೇ ಬ್ರಹ್ಮಚರ್ಯವಾಗಿದೆ. ಇಂತಹ ತ್ಯಾಗಿಯೇ 28 ಮೂಲ ಗುಣಧಾರಿಗಳು ಮುನಿಯೇ ಆಗಿರುತ್ತಾರೆ. ಗೃಹಸ್ಥ ಅವಸ್ಥೆಯಲ್ಲಿ ಕೇವಲ ಬ್ರಹ್ಮಚರ್ಯದ ಶುಭಾರಂಭವಾಗುತ್ತದೆ. ಹಾಗೆಯೇ ಸ್ಪರ್ಶನ, ಮತ್ತು ರಸನಾ ಈ ಎರಡು ಇಂದ್ರಿಯಗಳನ್ನು ಕಾಮೇಂದ್ರಿಯಗಳೆಂದು ಸ್ವೀಕರಿಸಿದ್ದಾರೆ. ಸ್ಪರ್ಶ ಮಾಡುವುದರಿಂದ ಚೆನ್ನಾಗಿದೆ ಎಂಥು ಅನಿಸಿದಾಗ ಅದನ್ನು ಭೋಗಿಸಬೇಕೆನ್ನುವ ಇಚ್ಛೆಯಲ್ಲಿ ಸಮತಾ ಭಾವ ಹೊಂದಲು ಸಾಧ್ಯವಾಗುವುದಿಲ್ಲ, ಅದರಲ್ಲಿ ರಾಗ–ದ್ವೇಷ ಮಾಡಿಕೊಳ್ಳುತ್ತೇವೆ. ಅವರು ಬ್ರಹ್ಮಚರ್ಯವನ್ನು ಪಾಲಿಸಲಾರರು. ಇದೇ ಪ್ರಕಾರ ರಸನಾ ಇಂದ್ರಿಯದ ಆಹಾರ, ಪಾನೀಯಗಳಲ್ಲಿ ಸಮತೆಯನ್ನು ಹೊಂದಿ ವಿಜಯ ಪಡೆಯದಿರುವವರು ಸಹ ಬ್ರಹ್ಮಚರ್ಯದ ಪಾಲನೆ ಮಾಡಲಾರರು. ಆದ್ದರಿಂದ ಎರಡೂ ಇಂದ್ರಿಯಗಳನ್ನು ವಶದಲ್ಲಿ ತರಬೇಕು. ಇವೆರಡರ ಮೇಲೆ ಲಗಾಮು ಹಾಕಿದಾಗ ಸಮಸ್ತ ಇಂದ್ರಿಯಗಳಷ್ಟೇ ಯಾಕೆ ಎಷ್ಟು ವಿಷಯಗಳಿವೆ ಎಲ್ಲವುಗಳ ಮೇಲೆ ವಿಜಯ ಸಾಧಿಸಬಹುದಾಗಿದೆ.

ಈ ಎರಡು ಇಂದ್ರಿಯಗಳನ್ನು ನಿಯಂತ್ರಿಸುವುದು ಬಹಳ ಅವಶ್ಯಕತೆ ಇದೆ. ಯಾಕೆಂದರೆ ಇವುಗಳ ವಶೀಭೂತವಾಗುವ ಪಂಚೇಂದ್ರಿಯಗಳ ದಾಸರಾಗಿ ಅನೇಕ ಪ್ರಕಾರದ ಆಸ್ರವಗಳ ಮೂಲಕ ದುರ್ಗತಿಯ ಬಾಗಿಲುಗಳು ತೆರೆಯುತ್ತವೆ.

ನಮ್ಮ ಆಚಾರ್ಯರು, ಮಹಾಮುನಿಗಳಿಂದ ನಾವು–ಅವರು ಧಾರಣೆ ಮಾಡುವ ಮಹಾನ್ ಬ್ರಹ್ಮಚರ್ಯವು ಸಾಧನೆಯ ಕ್ಷೇತ್ರದಲ್ಲಿ ವೃದ್ಧಿಂಗತವಾಗುತ್ತಾ ತಮ್ಮ ಆತ್ಮನಲ್ಲಿಯೂ ಲೀನರಾಗಿ ಬಿಡುತ್ತಾರೆ, ಬಾಹ್ಯದಲ್ಲಿ ಏನೂಸಂಬಂಧವಿರದಿದ್ದಾಗಲೇ 18ಸಾವಿರ ಪ್ರಕಾರಗಳ ಶೀಲ ರೂಪದ ಬ್ರಹ್ಮಚರ್ಯ ಪಾಲನೆಯಾಗುತ್ತದೆ ಎಂಬ ಪಾಠವನ್ನು ಕಲಿಯುತ್ತೇವೆ. ಸಚೇತನ ಸ್ತ್ರೀಯಂತೂ ದೂರದ ಮಾತು, ಕಾಷ್ಠ(ಮರ), ಶಿಲೆ, ಚಿತ್ರ ಮುಂತಾದವುಗಳಲ್ಲಿರುವ ಅಚೇತನ ಸ್ತ್ರೀಯನ್ನು ಸಹ ಸ್ಪರ್ಶ ಮಾಡುವುದಿಲ್ಲ, ಸ್ತ್ರೀಯರೂ ಅವರನ್ನು ಸ್ಪರ್ಶಿಸುವಂತಿಲ್ಲ. ಒಂದು ವೇಳೆ ತಿಳಿಯದೇ, ಮೋಸದಿಂದ ಯಾವುದಾದರೂ ಸ್ತ್ರೀ ಸ್ಪರ್ಶ ಮಾಡಿದರೆ ಅವರು ಪ್ರಾಯಶ್ಚಿತ ಮಾಡಿಕೊಳ್ಳುತ್ತಾರೆ. ಹೀಗೆ ಈ ಬ್ರಹ್ಮಚರ್ಯ ಧರ್ಮವು ಮಹಾನ್ ವ್ರತವಾಗಿದೆ. ಇದಕ್ಕಾಗಿಯೇ ಆಚಾರ್ಯರು– **'ಸ್ವಭಾವತೌ ಶುಚೌ ಕಾಯೇ ರತ್ನತ್ರಯ ಪವಿತ್ರಿತೇ'** –ಎಂದು ಹೇಳಿದ್ದಾರೆ. ಅಂದರೆ ಸ್ವಭಾವದಿಂಧ ಅಶುಚಿಯಾಗಿಯೂ ಸಹ ಈ ಶರೀರವು ರತ್ನತ್ರಯಗಳ ಮಾಧ್ಯಮದಿಂದ ಪವಿತ್ರವಾಗುತ್ತದೆ. ಪೂಜ್ಯವಾಗಿ ಬಿಡುತ್ತದೆ. ರತ್ನತ್ರಯರೂಪಿ ಧರ್ಮದ ಮಾಧ್ಯಮದಿಂದ ತನ್ನ ಆತ್ಮನನ್ನು ಪೂಜ್ಯ ಮಾಡುವ ಪ್ರಯತ್ನ ಮಾಡಿದಾಗ, ಸಂಪೂರ್ಣರೂಪದಿಂದ ಪಾಪಗಳಿಂದ ದೂರರಾಗಿ ಕರ್ಮಗಳ ಕ್ಷಯಮಾಡಿ ಪರಮ ಶುದ್ಧರಾದಾಗ ಈ ಆತ್ಮನು ತನ್ನಷ್ಟಕ್ಕೆ ತಾನೇ ಪೂಜ್ಯವಾಗುತ್ತದೆ. ಪೂಜ್ಯನಾಗಲು ಇಚ್ಛಿಸುವುದಲ್ಲ ಆಗಬೇಕಾಗುತ್ತದೆ. ಇದಂತೂ ಸ್ವತಃ ಅದಕ್ಕೇ ಯೋಗ್ಯವಾಗಿ ಬಿಡುತ್ತದೆ. ಯಾರ ಹೃದಯದಲ್ಲಿ ಬ್ರಹ್ಮಚರ್ಯದ ಭಾವನೆ ಇದೆ ಅವರು ಸದಾ ಶುದ್ಧತೆಯನ್ನು ಪಡೆದಿರುತ್ತಾರೆ ಹಾಗೂ ಇದೇ ವ್ರತವು ಮೋಕ್ಷ–ಮಾರ್ಗದ ಮೂಲವ್ರತವೆಂದು ಹೇಳಲಾಗುತ್ತದೆ. ಅನಗಾರ ಧರ್ಮಮೃತದಲ್ಲಿ ಆಶಾಧರರು ಬ್ರಹ್ಮಚರ್ಯ ವಿಷಯದಲ್ಲಿ ಹೀಗೆ ಹೇಳಿದ್ದಾರೆ– "ಶುದ್ಧ ಮತ್ತು ಬುದ್ಧವು ನಮ್ಮ ಚಿತ್ತ ಸ್ವರೂಪ ಬ್ರಹ್ಮನಲ್ಲಿ ಪರದ್ರವ್ಯಗಳನ್ನು ತ್ಯಾಗ ಮಾಡುವ ವ್ಯಕ್ತಿಯ ಅಪ್ರತಿಹತ ಪರಿಣಿತಿ ರೂಪವಿರುವ ಚರ್ಯೆಗೆ ಬ್ರಹ್ಮಚರ್ಯವೆಂದು ಹೇಳುತ್ತಾರೆ. ಈ ವ್ರತವು ಸಮಸ್ತ ವ್ರತಗಳಲ್ಲಿ ಸಾರ್ವಭೌಮನಂತಿದೆ. ಇದನ್ನು ಪಾಲನೆ ಮಾಡುವವರೇ ಸರ್ವೋತ್ಕೃಷ್ಟ ಆನಂದ ಮೋಕ್ಷ ಸುಖವನ್ನು ಪಡೆಯುತ್ತಾ ಇರುತ್ತಾರೆ."– ಆತ್ಮೋಪಲಬ್ಧಿಗಾಗಿ ಮಾಡುವ ಆಚರಣೆಯೇ ಬ್ರಹ್ಮಚರ್ಯವಾಗಿದೆ. ಆತ್ಮೋಪಲಬ್ಧಿಯೇ ಪರಮ ಬ್ರಹ್ಮದ ಉಪಲಬ್ಧಿಯಾಗಿದೆ. ಆತ್ಮಜ್ಞಾನದ ಅಭಾವದಲ್ಲಿ ಬ್ರಹ್ಮಚರ್ಯವು ಆಗಲಾರದು. ಆತ್ಮನಲ್ಲಿ ಮುಳುಗುವುದೇ ಯಥಾರ್ಥವಾದ ಬ್ರಹ್ಮಚರ್ಯವಾಗಿದೆ. ಆತ್ಮಾನುರಾಗವಂತೂ ಅಮೃತದಿಂದ ಅನುಪ್ರಾಣಿತವಾಗಿದೆ.

ಜೈನದರ್ಶನದಲ್ಲಿ ಬ್ರಹ್ಮಚರ್ಯದ ವಿಷಯವನ್ನು ಎಷ್ಟು ಸೂಕ್ಷ್ಮತೆಯಿಂದ ಹೇಳಲಾಗಿದೆಯೇ ಅಷ್ಟನ್ನು ಎಲ್ಲಿಯೂ ಸಹ ಹೇಳಿಲ್ಲ. ನಾನು ಭೂಪಾಲನಲ್ಲಿದ್ದಾಗ ಅಲ್ಲಿಂದ ವಿಹಾರ ಮಾಡುತ್ತಾ ಭೋಜಪುರಕ್ಕೆ ಹೋಗುತ್ತಿದ್ದೆ. ಮಧ್ಯದಲ್ಲಿ ಒಂದು ಸ್ಥಾನವಿದ್ದು ಅಲ್ಲಿ ಒಂದು ಹೊಸ ಮಂದಿರವು ರೂಪಗೊಳ್ಳುತ್ತಿದ್ದಿತು. ಒಂದು ದಿನ ಅಲ್ಲಿ ತಂಗಿದೆವು. ಬೆಳಿಗ್ಗೆ ಹೊರಗಡೆ ಕಾಡಿನ ಕಡೆಗೆ ಹೊರಟಿದ್ದೆವು ಮುಖ್ಯ ರಸ್ತೆಯನ್ನು ದಾಟುತ್ತಿದ್ದೆವು ಆಗ ಯಾವುದೋ ಕಡೆಗೆ ಹೋಗುತ್ತಿದ್ದ ಗಾಡಿಯಿಂದ ಯಾವುದೋ ವ್ಯಕ್ತಿ ನಮ್ಮನ್ನು ನೋಡಿ_ಸ್ವಲ್ಪ ದೂರ ಸಾಗಿ ಗಾಡಿ ನಿಲ್ಲಿಸಿದ ಹಾಗೂ

ಯಾರಲ್ಲಿಯೋ ಆತ ಸಂತರು ಎಲ್ಲಿಗೆ ಹೊರಟಿದ್ದಾರೆಂದು ಕೇಳುತ್ತಿದ್ದ. ಆತ ಈಗ ಹೊರಗೆ ಕಾಡಿನ ಕಡೆಗೆ ಹೋಗಿದ್ದಾರೆ ಸ್ವಲ್ಪ ಸಮಯದಲ್ಲಿ ಬರುತ್ತಾರೆ, ಒಂದು ಸ್ಥಾನದಲ್ಲಿ ಪ್ರವಚನದ ವ್ಯವಸ್ಥೆ ಇದೆ, ಅಲ್ಲಿ ಪ್ರವಚನ ಆಗುತ್ತದೆ_ಎಂದು ಹೇಳಿದರು. ಆ ವ್ಯಕ್ತಿ ಸರಿ ಎನ್ನುತ್ತಾ ನಾವು ಮತ್ತೆ ಬರುತ್ತೇವೆ ಎಂದು ಹೇಳಿದ.

ಆ ವ್ಯಕ್ತಿ ಮತ್ತೆ ಪ್ರವಚನದಲ್ಲಿ ಬಂದ. ಪ್ರವಚನದ ನಂತರ–ನಾವು ಕ್ರಿಶ್ಚಿಯನ್ ಚರ್ಚಿನ ಮುಖ್ಯಸ್ಥನೆಂದು, ಚರ್ಚಿನ ವ್ಯವಸ್ಥೆಯನ್ನು ನೋಡಿಕೊಳ್ಳುತ್ತೇನೆ ಎಂದು ಹೇಳಿದ. ನಿಮ್ಮನ್ನು ನೋಡಿ ಮತ್ತು ಕೇಳಿ ನಮಗೆ ಬಹಳ ಒಳ್ಳೆಯದೆನಿಸಿತು ಹೀಗೂ ಯಾವುದೇ ಒಂದು ರೂಪಿದೆ, ಹೀಗೂ ಒಂದು ಸಾಧನೆ ಇದೆ. ಈ ರೂಪದಲ್ಲಿ ಇದ್ದೂ ಸಹ ಇಷ್ಟೊಂದು ಒಳ್ಳೆಯ ಮನೋಭಾವದೊಂದಿಗೆ ಇರಬಹುದಾಗಿದೆ ಯಾವುದೇ ವಿಕಾರಭಾವವಿಲ್ಲದೇ ಎಂದು ಹೇಳಿ ನಾನು ನಿಮ್ಮನ್ನು ನೋಡಲು ಬಂದೆ. ನಿಮ್ಮಿಂದ ನಾನು ಮತ್ತೆ ಏನನ್ನು ಕೇಳಬಹುದು? ನಾವು, ಯಾಕೆ ಕೇಳಬಾರದು? ಎಂದು ಹೇಳುತ್ತಾ ಈಗಂತೂ ನಮ್ಮ ಸಮಯವಾಗುತ್ತಾ ಇದೆ ಬೇರೆ ಕಾರ್ಯವಿದೆ ಮತ್ತೆ ಬೇರೆ ಸಮಯ ಅಥವಾ ಮಧ್ಯಾಹ್ನ ಸಾಮಾಯಿಕದ ನಂತರ ಸಮಯ ನೋಡಬಹುದು ಎಂದು ಹೇಳಿದೆವು.

ಮಧ್ಯಾಹ್ನದ ಸಮಯದಲ್ಲಿ ಆ ವ್ಯಕ್ತಿ ಇನ್ನೂ ಕೆಲವು ಜನರೊಂದಿಗೆ ಬಂದರು, ಹಿಂದಿ ಮಾತನಾಡುತ್ತಿದ್ದರು. ಮಾತುಕತೆ ಪ್ರಾರಂಭವಾಯಿತು. ಅವರು ನಾವು ತಮಿಳುನಾಡಿನ 8–10 ಜನರಿದ್ದೇವೆ ಅವರೆಲ್ಲರೂ ಬಂದಿದ್ದಾರೆ ಎಂದು ಹೇಳಿದರು. ಮಾತು ಮಾತಿನಲ್ಲಿ ಅವರ– ನಾವು ಬ್ರಹ್ಮಚರ್ಯ ಪೂರ್ವಕವಾಗಿರುತ್ತೇವೆ ಎಂದು ಹೇಳಿದರು. ನಾವು ಅವರಿಗೆ ನಿಮ್ಮ ವೇಷ ಭೂಷಣದಿಂದ ಹಾಗೇ ಕಂಡು ಬರುತ್ತಿಲ್ಲ, ತಾವು ಬ್ರಹ್ಮಚಾರಿಗಳೆಂದು ತೋರುತ್ತಿಲ್ಲವೆಂದು ಹೇಳಿದೆವು. ನಮ್ಮ ವೇಷ ಭೂಷಣ ಹೇಗಿರಬೇಕೆಂದರೆ ಅದರಿಂದ ಯಾರಿಗೂ ರಾಗ ಉತ್ಪನ್ನವಾಗಬಾರದು ಹಾಗೂ ಮನೆಯಲ್ಲಿದ್ದು ಬ್ರಹ್ಮಚರ್ಯ ಪಾಲನೆ ಮಾಡುವವರಿಗೆ ಪತಿ–ಪತ್ನಿಯರಿದ್ದಾರೆ, ಮಕ್ಕಳಿದ್ದಾರೆ ಅವರದು ಬೇರೆ ಪ್ರಕಾರವಿದೆ. ಆದರೆ ತಾವು ಆಶ್ರಮದಲ್ಲಿ ಇರುತ್ತೀರಿ ಆದರೂ ಈ ವೇಷ ಭೂಷಣ, ನೀವಂತೂ ಪೂರ್ಣರೂಪದಲ್ಲಿ ಟಿಪ್–ಟಾಪ್ ಆಗಿದ್ದೀರಿ. ಇದಂತೂ ನಮ್ಮ ಸಂಸ್ಕೃತಿಯಲ್ಲಿ ಬ್ರಹ್ಮಚರ್ಯದ ಲಕ್ಷಣದಲ್ಲಿ ಮನೆಯಲ್ಲಿಯೇ ಇರುತ್ತಿರುವುದಾದರೆ ಮನೆಯಲ್ಲಿ ಕೂಡಲೇ ಅಂತರ ಕಾಣುವುದಿಲ್ಲ ಸ್ವಲ್ಪ ಸಮಾನರಾಗಿ ಇರಬೇಕಾಗುತ್ತದೆ ಹಾಗೂ ಸಾಧನೆಯನ್ನು ಎಲ್ಲರೂ ಮಾಡುತ್ತಿರುತ್ತಾರೆ ಆದರೂ ಎಷ್ಟು ಸಾಧ್ಯವೋ ಅಷ್ಟು ಲೌಕಿಕಯಿಂದ ಉಳಿಯುತ್ತೇವೆ. ಎಲ್ಲರೂ ಮಾಡುತ್ತಾರೆ. ಆಹಾರ, ಪಾನೀಯಗಳಲ್ಲಿ ಪರಿವರ್ತನೆ ತರುತ್ತೇವೆ. ಬ್ರಹ್ಮಚರ್ಯಕ್ಕೆ ಬಾಧಕವಾಗುವ ನಿಮಿತ್ತಗಳಿಂದ ರಕ್ಷಿಸಿಕೊಳ್ಳಬಹುದು ತಾಮಸಿಕ ವಸ್ತುಗಳ ತ್ಯಾಗವಾಗಿ ಬಿಡುತ್ತವೆ. ಕಂದಮೂಲ ಇತ್ಯಾದಿ ವಸ್ತುಗಳ ತ್ಯಾಗವೂ ಆಗುತ್ತದೆ. ವೇಷ ಭೂಷಣಗಳೂ ಸರಳವಾಗುತ್ತವೆ. ಜೊತೆ ಜೊತೆಯಲ್ಲಿ ಆಹಾರ, ಪಾನೀಯಗಳಲ್ಲಿಯೂ ಸಹ ಗರಿಷ್ಠ ವಸ್ತುಗಳನ್ನು ಸಹ ತ್ಯಾಗ ಮಾಡುವ ಅಭ್ಯಾಸ ಮಾಡುತ್ತೇವೆ. ನಮ್ಮ ರಸನಾ ಇಂದ್ರಿಯದ ಮೇಲೆಯೂ ನಿಯಂತ್ರಣ ಮಾಡುತ್ತೇವೆ.

ಅವರೆಲ್ಲ ಗಂಭೀರವಾಗಿ ಕೇಳುತ್ತಲಿದ್ದರು. ಮತ್ತೆ ನಾವು ಅವರನ್ನು ಬಹುಶಃ ತಾವು ಬೇರೆ ಏನೂ ತೆಗೆದುಕೊಳ್ಳಲಿಕ್ಕಿಲ್ಲ, ತಾಮಸಿಕ ವಸ್ತುಗಳನ್ನು ಪೂರ್ಣ ರೂಪದಲ್ಲಿ ತ್ಯಾಗ ಮಾಡಿರಲಿಕ್ಕೆ ಬೇಕು, ಮಾಂಸ, ಮಧ್ಯ, ಮೀನು, ಮೊಟ್ಟೆ ಇತ್ಯಾದಿಗಳನ್ನು ನೀವು ತೆಗೆದುಕೊಳ್ಳಲಿಕ್ಕಿಲ್ಲ, ಬ್ರಹ್ಮಚರ್ಯ

ಪಾಲಿಸುತ್ತಿದ್ದರೆ ಇವುಗಳ ತ್ಯಾಗವಿರುತ್ತದೆ ಎಂದು ಕೇಳಿದೆವು. ಅವರು–ಇಲ್ಲ ಮಹಾರಾಜರೇ ಹಾಗಿಲ್ಲ ಇವೆಲ್ಲವು ನಡೆಯುತ್ತವೆ ಎಂದು ಹೇಳಿದರು. ನಾವು–ಆಶ್ಚರ್ಯದಿಂದ; ನಡೆಯುತ್ತದೆ ಇದೇನಿದೆ? ಎಂದೆವು ಅವರು–ಮಹಾರಾಜರೇ ನಮಲ್ಲಂತೂ ನಡೆಯುತ್ತವೆ, ನೀವು ಕೃಪೆ ಇಟ್ಟು ಬ್ರಹ್ಮಚರ್ಯ ಪಾಲನೆಗಾಗಿ ಏನು ಮಾಡಬೇಕು? ಎಂದು ಹೇಳಬೇಕು–ಎಂದು ಕೇಳಿದರು. ಅವರಿಗೆ ಮತ್ತೆ ಬ್ರಹ್ಮಚರ್ಯಕ್ಕೆ ಸಂಬಂಧಿಸಿದಂತೆ ಎಲ್ಲವನ್ನು ಹೇಳಿದೆವು. ಅಹಿಂಸೆಗೆ ಸಂಬಂಧಿಸಿದಂತೆ ಮಾನವನು ಯಾಕೆ ಶಾಖಾಹಾರಿಯಾಗಿರುತ್ತಾನೆಂದು ತಿಳಿಸಿದೆವು. ಬ್ರಹ್ಮಚರ್ಯದ ಸಾಧನೆಗಾಗಿ ಏನೇನು ಮಾಡಬೇಕು. ಅವರು ಎಲ್ಲ ಮಾತುಗಳನ್ನು ಕೇಳಿ_ಮಹಾರಾಜರೇ ಇಂದು ನಾವು ಬ್ರಹ್ಮಚರ್ಯದ ಸಾಧನೆಗಾಗಿ ಏನು ಮತ್ತು ಹೇಗೆ ಮಾಡಬೇಕೆಂದು ತಿಳಿದೆವು, ಇದು ನಮ್ಮ ಜೀವನದ ಬಹಳ ಶ್ರೇಷ್ಠ ಉಪಲಬ್ಧಿಯಾಗಿದೆ. ಇದು ನಮ್ಮೆಲ್ಲರ ಸೌಭಾಗ್ಯವಾಗಿದೆ. ನಿಮ್ಮ ಮುಖಾರವಿಂದದಿಂದ ಬ್ರಹ್ಮಚರ್ಯದ ನಿಜವಾದ ಸಾಧನೆ ಏನು ಎಂದು ತಿಳಿಯುವ ಸುಅವಕಾಶ ದೊರೆತಿದೆ. ಆದರೆ ಒಂದು ಪ್ರಶ್ನೆ ಇದೆ. ತಾವು ಅನುಮತಿ ನೀಡಿದರೆ ಅದನ್ನು ತಿಳಿಯ ಬಯಸುತ್ತೇವೆ.

ಏನು ಹೇಳಿ? ಎಂದು ನಾವು ಹೇಳಿದೆವು. ಅವರು–ಮಹಾರಾಜರೇ ಜೈನದರ್ಶನದಲ್ಲಿ ತಾವು ನಗ್ನ ದಿಗಂಬರರಾಗಿ ಯಾಕೆ ಇರುತ್ತಿರಾ? ಎಂದು ಕೇಳಿದರು. ಅದಕ್ಕೆ ನಾವು ಧ್ಯಾನದ ಪ್ರಸಿದ್ಧಿಯ ವಿನಹ ನಗ್ನತೆ ಆಗುವುದಿಲ್ಲ. ಧ್ಯಾನದ ಪ್ರಸಿದ್ಧಿಗಾಗಿ ಸಂಪೂರ್ಣ ಪರಿಗ್ರಹದ ತ್ಯಾಗವಾಗುವುದು ಅವಶ್ಯಕವಾಗಿದೆ. ಎಳ್ಳಿನಷ್ಟು ಸಹ ಪರಿಗ್ರಹವಿದ್ದರೆ ಅದು ಧ್ಯಾನಕ್ಕೆ ಬಾಧಕವಿದೆ. ಜೈನದರ್ಶನದಲ್ಲಿ ಐದು ಮಹಾವ್ರತಗಳನ್ನು ಹೇಳಲಾಗಿದೆ. ಅವುಗಳಲ್ಲಿ ಬ್ರಹ್ಮಚರ್ಯವು ಎಲ್ಲಕ್ಕಿಂತ ಪ್ರಧಾನ ವ್ರತವಾಗಿದೆ. ಈ ವ್ರತವು ಎಲ್ಲ ವ್ರತಗಳ ರಾಜನಾಗಿದೆ. ಈ ವ್ರತವನ್ನು ಪಾಲಿಸಿದಿದ್ದರೆ ಪಂಚವ್ರತಗಳ ಪಾಲನೆ ಬಹಳ ಸರಳವಾಗಿದೆ. ಹಾಗೂ ಒಂದು ವೇಳೆ ಇದನ್ನು ಪಾಲಿಸದರೆ ಎಲ್ಲವೂ ಕಠಿಣವಿದೆ. ಆದ್ದರಿಂದ ಮೋಕ್ಷ ಮಾರ್ಗದಲ್ಲಿ ನಡೆಯ ಬಯಸುವವರಿಗೆ ಅವರು ಮೊದಲು ಗುರು ಸಂಘಗಳಲ್ಲಿ ಬ್ರಹ್ಮಚರ್ಯ ಪಾಲನೆ ಮಾಡಲು ಹೇಳುತ್ತಾರೆ. ಇದಕ್ಕೂ ಮುನ್ನ ಅವರಿಗೆ ರಾತ್ರಿ ಭೋಜನನ ಹಾಗೂ ಅಭಕ್ಷ ವಸ್ತುವಿನ ತ್ಯಾಗ ಮಾಡುವುದನ್ನು, ಮತ್ತು ಯಾವಾಗ ಮಲಗಬೇಕು? ಯಾವಾಗ ಏಳಬೇಕು? ಹೇಗೆ ಇರಬೇಕು? ಇತ್ಯಾದಿ ವಿಷಯಗಳ ಮೇಲೆ ಗಮನ ನೀಡಬೇಕಾಗುತ್ತದೆ. ರಾತ್ರಿ ಭೋಜನ ತ್ಯಾಗಕ್ಕೆ ಅನೇಕ ಕಾರಣಗಳಿವೆ ಆದರೆ ಬ್ರಹ್ಮಚರ್ಯಕ್ಕಾಗಿ ರಾತ್ರಿಯಲ್ಲಿ ಭೋಜನ ಮಾಡಿ ಮಲಗಿ ಬಿಟ್ಟರೆ ಭಾವನೆಗಳಲ್ಲಿ ಅವಶ್ಯವಾಗಿ ಅಂತರಗಳು ಬರುತ್ತವೆ, ಎಂಬುದನ್ನು ಗಮನದಲ್ಲಿಡಬೇಕು. ಅರ್ಧದಷ್ಟು ಆಹಾರ ಪಚನವಾಗುವ ಮೊದಲೇ ಮಲಗುವುದರಿಂದ ಹೆಚ್ಚಾಗಿ ಕೆಟ್ಟ ಕನಸುಗಳು ಬೀಳಬಹುದು ವಿವಿಧ ರೀತಿಯಾಗಿ ನಮ್ಮೊಳಗೆ ಕೆಟ್ಟ ವಿಚಾರಗಳು ಬರಬಹುದು. ಸೂರ್ಯಸ್ತದ ನಂತರ ಸೂಕ್ಷ್ಮ ಜೀವಿಗಳ ಉತ್ಪತ್ತಿ ಹೆಚ್ಚಾಗಿ ಆಗುತ್ತದೆ ಹಾಗೂ ಪಚನ ಶಕ್ತಿ ಸಹ ಮಂದವಾಗಿ ಬಿಡುತ್ತದೆ. ಆದ್ದರಿಂದ ಹಗಲಿನಲ್ಲಿಯೇ ಭೋಜನ ಮಾಡುವುದು ಉತ್ತಮವಾಗಿದೆ. ನಿಃಸಂಗತಾ ಮತ್ತು ಆತ್ಮ ನಿರ್ಮಲತೆಗಾಗಿ ದಿಗಂಬರ ರೂಪದಲ್ಲಿ ಇರುವುದು ಆವಶ್ಯಕವಾಗಿದೆ ಆಗಲೇ ವ್ರತಗಳ ಪಾಲನೆಯನ್ನು ಮಾಡಬಹುದು. ಒಂದು ಕೇವಲ ಬ್ರಹ್ಮಚರ್ಯವ್ರತ ತೆಗೆದುಕೊಳ್ಳುವುದರಿಂದ ಬಹಳಷ್ಟು ವಿಷಯ ವಾಸನೆಗಳು ಹಾಗೂ ಇಚ್ಛೆಗಳು ಸಮಾಪ್ತವಾಗಿ ಬಿಡುತ್ತವೆ. ಮತ್ತೆ ಇದರ ನಂತರವೇ ನಿಜವಾದ ಧ್ಯಾನವನ್ನು ಪಡೆಯಲು ಅರ್ಧರಸ್ತೆಯನ್ನು ಪಾರು ಮಾಡಿರುತ್ತೇವೆ, ಅರ್ಧ ಮಾತ್ರ ಇರುತ್ತದೆ. ಬ್ರಹ್ಮಚರ್ಯದ ಸಮಯದಲ್ಲಿ ಕಂದಮೂಲ ಇತ್ಯದಿಗಳ ತ್ಯಾಗ ಅವಶ್ಯಕವಾಗಿ ಆಗಬೇಕು, ಕೆಟ್ಟ ಚಿತ್ರಗಳನ್ನು ನೋಡುವುದು ತ್ಯಾಗವಾಗಬೇಕು. ಕೆಟ್ಟ ಕಥೆಗಳನ್ನು ಓದುವ

ಕೇಳುವುದೆಲ್ಲವನ್ನು ಬಿಡಬೇಕು. ಮಲಗುವುದನ್ನು ದೂರ–ದೂರ ಮಾಡಬೇಕು. ಪುರುಷರಿದ್ದರೆ, ಮಹಿಳೆಯರನ್ನು ಮುಟ್ಟಬಾರದು ಹಾಗೂ ಸ್ತ್ರೀಯರಿದ್ದರೆ ಪುರುಷರನ್ನು ಮುಟ್ಟಬಾರದು. ಸಾತ್ವಿಕಭೋಜನ ಮಾಡಬೇಕು. ವೇಷ ಭೂಷಣಗಳು ರಾಗಾತ್ಮಕವಾಗಿರಬಾರದು. ಈ ಮಾತುಗಳ ಪಾಲನೆಯ ನಂತರ ಅಣುವ್ರತಗಳನ್ನು ಪಾಲಿಸಲಾಗುತ್ತದೆ. ಹಾಗೂ ನಂತರ ಮಹಾವ್ರತಗಳನ್ನು ಪಾಲಿಸುತ್ತಾರೆ. ಜೈನದರ್ಶನದಲ್ಲಿ ಮುನಿಗಳು ಯಥಾಜಾತ ರೂಪರಾಗಿರುತ್ತರೆ. ಜನ್ಮಜಾತ ಬಾಲಕ ನಗ್ನರೂಪನಾಗಿರುವಂತೆ ನಗ್ನ ರೂಪ ದಿಗಂಬರ ಮುದ್ರೆ ಇದೆ. ಅಂತಹ ಸಾಧುಗಳು ತಮ್ಮ ಹಸ್ತದಿಂದ ಎಳ್ಳಿನಷ್ಟು ಸಹ ಪರಿಗ್ರಹವನ್ನು ಸ್ವೀಕರಿಸುವುದಿಲ್ಲ. ಬಾಲಾಗ್ರನಂತೆ ಪರಿಗ್ರಹದ ಸಂಚಯವನ್ನು ಸಹ ಸಾಧು ಮಾಡುವುದಿಲ್ಲ, ಹಸ್ತಾಂಜುಲಿಯೇ ಅವರ ಆಹಾರ ಪಾತ್ರೆಯಾಗಿದೆ. ಆಹಾರವು ದಿನಕ್ಕೆ ಒಂದು ಸಾರಿ ನಿಂತು ಕೊಂಡೆ ಬ್ರಹ್ಮಚರ್ಯ ಪೂರ್ವಕ ನಗ್ನತೆಯಿಂದ ಮುಕ್ತಿಯನ್ನು ಪಡೆಯಬಹುದಾಗಿದೆ. ಆದ್ದರಿಂದ ನಗ್ನತೆಯೇ ಮೋಕ್ಷ ಮಾರ್ಗವಾಗಿದೆ.

ಬ್ರಹ್ಮಚರ್ಯ ಮತ್ತು ಶೀಲ ಕೇವಲ ಚರ್ಚೆಯ ವಿಷಯಗಳಲ್ಲ; ಜೀವನದಲ್ಲಿ ಪ್ರಯೋಗ ಮಾಡುವ ಆಚರಣದ ವಿಷಯಗಳಾಗಿವೆ. ನೀವೆಲ್ಲರೂ ಬಹುಶಃ ತಿಳಿದಿರಬೇಕು – ಗಾಂಧೀಜಿಯವರು ತಮ್ಮ ಆಚರಣೆಗಳ ಕಾರಣ ಮಹಾತ್ಮರೆಂದು ಕರೆಯಲ್ಪಟ್ಟರು ಅವರು ಬ್ರಹ್ಮಚರ್ಯದ ಪಾಲನೆಗಾಗಿ ಅಸ್ವಾದ ವ್ರತವನ್ನು ಸ್ವೀಕರಿಸಿದ್ದರು. ಅವರು **ಜೀವಿನಿ ಎಲೆಯ ಚಟ್ನಿ, ಕುದಿಸಿದ ಆಕ**ವನ್ನು ತೆಗೆದು ಕೊಳ್ಳುತ್ತಿದ್ದರು. ನಾಲಿಗೆಯ ಸಿದಾ ಸಂಬಂಧ ಕಾಮವಾಸನೆಯೊಂದಿಗಿದೆ. ಎಂದು ಅವರಿಗೆ ವಿಶ್ವಾಸವಿದ್ದಿತು, ನಾಲಿಗೆಯನ್ನು ತಮ್ಮ ವಶದಲ್ಲಿ ಇಡದಿರುವವರು ಅವರು ಕಾಮೇಂದ್ರಿಯವನ್ನು ಎಂದಿಗೂ ವಶದಲ್ಲಿಟ್ಟುಕೊಳ್ಳಲಾರರು. ಬೇರೆ ದೇಶಗಳ ದೃಷ್ಟಿಯಿಂದ ಶೀಲ ಮತ್ತು ಸಂಯಮಗಳು ಭಾರತದೇಶದಲ್ಲಿ ಹೆಚ್ಚಾಗಿ ಸಿಗುತ್ತವೆ. ಬ್ರಹ್ಮಚರ್ಯದ ವಿನಹ ವ್ರತ,ತಪ, ಇತ್ಯಾದಿ ಎಲ್ಲವೂ ಅಸಾರವಾಗಿವೆ. ಶರೀರವನ್ನು ಮನಸ್ಸು ಬಯಸಿದರೆ ಭೋಗಿಸದೇನೆ (ಜೈನ ದರ್ಶನದಲ್ಲಿ ಇದನ್ನು ಕಾಯಕ್ಲೇಶ ವೆನ್ನುತ್ತಾರೆ) ಬ್ರಹ್ಮಚರ್ಯ ವ್ರತವಾಗುತ್ತಿದೆ. ಬ್ರಹ್ಮಚರ್ಯವು ಧರ್ಮಾಂಗವಾಗಿದೆ, ಧರ್ಮ ಧರ್ಮ ಪಾಲನೆಯಾಗಿದೆ. ಉತ್ತಮ ಶ್ರೇಷ್ಠ ಜನರು ಪ್ರಾಣ ತ್ಯಾಗ ಮಾಡುತ್ತಾರೆ ಆದರೆ ಸಂಯಮ, ಶೀಲದ ಮಹಿಮೆಯನ್ನು ಹೊಂದಿರುವ ಬ್ರಹ್ಮಚರ್ಯವನ್ನು ತ್ಯಾಗ ಮಾಡುವುದಿಲ್ಲ. ಆದ್ದರಿಂದ ಬ್ರಹ್ಮಚಾರಿಗಳು ಕೆಲವೊಂದು ಸಂಗತಿಗಳ ಬಗ್ಗೆ ವಿಶೇಷ ಗಮನ ನೀಡಬೇಕು. ಉದಾ–ಸರಸಾಹಾರ ಅಂದರೆ ಅತ್ಯಂತ ಸುಸ್ವಾದ ಕಾಮೋತ್ಪಾದಕ ಪೌಷ್ಠಿಕ ಆಹಾರವನ್ನು ತೆಗೆದುಕೊಳ್ಳಬಾರದು, ಸುಗಂಧ ಸಂಸ್ಕಾರ–ಎಣ್ಣೆ, ಅಂಗಲೇಪ ಇತ್ಯಾದಿ ಸುಗಂಧಿತ ಪದಾರ್ಥಗಳಿಂದ ಶರೀರದ ಸಂಸ್ಕಾರ ಮಾಡಬಾರದು. ಕೋಮಲ ಹಾಸಿಗೆ–ಕೋಮಲವಾದ, ಮೃದುವಾದ ಹಾಸಿಗೆ ಮೇಲೆ ಮಲಗುವುದು ಕುಳಿತುಕೊಳ್ಳುವುದನ್ನು ಮಾಡಬಾರದು. ಶರೀರ–ಮಂಡನ–ಶರೀರದ ಶೃಂಗಾರ ಮಾಡಬಾರದು. ಕಾಮೋತ್ಪಾದಕ ಗೀತೆ, ವಾದನ, ನೃತ್ಯ, ನಾಟಕ ಇತ್ಯಾದಿಗಳನ್ನು ಕೇಳುವುದಾಗಲಿ, ನೋಡುವುದಾಗಲಿ ಮಾಡಬಾರದು. ಕುಶೀಲ ಅಥವಾ ವ್ಯಸನೀ ಜನರ ಸಂಗತಿ ಮಾಡಬಾರದು. ಯಾಕೆಂದರೆ ಕುಶೀಲ ಹಾಗೂ ದುಷ್ಟರು ಪವಿತ್ರತೆ, ತ್ಯಾಗ, ವಿವೇಕ, ಧರ್ಮ, ಸಮ್ಮಾನ ಇತ್ಯಾದಿಗಳಿಗೆ ತಿಲಾಂಜಲಿ ನೀಡಿರುತ್ತಾರೆ. ಅಲ್ಲದೇ ಅವರು ತಮ್ಮ ಪ್ರಾಣವನ್ನು ಬಿಟ್ಟು ಬಿಡುತ್ತಾರೆ. ಆದ್ದರಿಂದ ಅಂತಹ ಜನರ ಸಂಗತಿ ಮಾಡಬಾರದು. ಸಂಯಮ ಮತ್ತು ಸದಾಚಾರ ಬ್ರಹ್ಮಚರ್ಯದಿಂದಲೇ ದೊರೆಯುತ್ತವೆ.

ಬ್ರಹ್ಮಚರ್ಯವು ಅಹಿಂಸಾಗುಣದ ವೃದ್ಧಿ ಮಾಡುತ್ತದೆ. ಧರ್ಮದ ಶ್ರೇಷ್ಠಗುಣಗಳನ್ನು ನೀಡುವ ಸಂಸಾರದಿಂದ ಪಾರುಮಾಡುವುದಾಗಿದೆ. ಯೋಗಶಾಸ್ತ್ರದಲ್ಲಿ ಹೀಗೆ ಹೇಳಿದೆ–

**ಚಿರಾಯುಷಃ ಸುಸಂಸ್ಥಾನಾ ದೃಢಸಂಹನನಾ ನರಾಃ।**
**ತೇಜಸ್ವಿನೋ ಮಹಾವೀರ್ಯಾ ಭವೇಯುಬ್ರಹ್ಮಚರ್ಯತಃ ॥2/105॥**

ಬ್ರಹ್ಮಚರ್ಯದ ಪಾಲನೆಯಿಂದ ಜನರು ದೀರ್ಘಾಯು, ದೃಢ ಶರೀರ, ತೇಜಸ್ವಿ ಹಾಗೂ ಮಹಾಬಲಶಾಲಿಗಳಾಗುತ್ತಾರೆ. ಜೀವನ ಶಕ್ತಿಯನ್ನು ಶರೀರದಲ್ಲಿ ಧಾರಣೆ ಮಾಡುವ ಸಾಮಥ್ಯವೇ ಬ್ರಹ್ಮಚರ್ಯವಾಗಿದೆ, ಅದೇ ಶರೀರದಲ್ಲಿ ಶಕ್ತಿ ಮತ್ತು ಕಾಂತಿಯ ಉತ್ಪಾದಕವಾಗಿದೆ. ಸ್ವರ್ಗ ಮತ್ತು ಮುಕ್ತಿ ರೂಪಿ ಗೃಹದ ಪ್ರಾಪ್ತಿಗಾಗಿ ಕಾರಣವಾಗಿದೆ, ದುಃಖ ರೂಪದ ಸಮುದ್ರವನ್ನು ಪಾರುಮಾಡಲು ಸೇತುವೆಯಾಗಿದೆ. ದೇವತೆಗಳಿಂದಲೂ ಸಹ ಪೂಜ್ಯವಾಗಿದೆ ಈ ಬ್ರಹ್ಮಚರ್ಯವು ಉದಾರತೆ, ಶೂರವೀರತ್ವ, ಧೀರತೆ, ಸುಂದರತೆ, ವೀರ್ಯತೆಯನ್ನು ನೀಡುತ್ತದೆ. ಬ್ರಹ್ಮಚರ್ಯದ ಪಾಲಕರು ಪೂಜ್ಯರ ಪೂಜ್ಯಸಹ ಆಗಿ ಬಿಡುತ್ತಾರೆ. ಯೋಗಶಾಸ್ತ್ರದಲ್ಲಿ ಆಚಾರ್ಯರು ಹೀಗೆ ಬರೆದಿದ್ದಾರೆ–

**ಪ್ರಾಣಭೂತಂ ಚರಿತ್ರಸ್ಯ ಪರಬ್ರಹ್ಮೈಕ ಕಾರಣಮ್।**
**ಸಮಾಚರನ್ ಬ್ರಹ್ಮಚರ್ಯ ಪೂಜಿತೈರಪಿ ಪೂಜ್ಯತೇ ॥12/104॥**

ಬ್ರಹ್ಮಚರ್ಯವು ಧರ್ಮದ ಪ್ರಾರಂಭದ ದ್ವಾರವಾಗಿದೆ ಹಾಗೂ ಬ್ರಹ್ಮಚರ್ಯವ್ರತವೇ ಧರ್ಮದ ಪೂರ್ಣತೆಯ ಕೊನೆಯ ದ್ವಾರವೂ ಆಗಿದೆ ಬ್ರಹ್ಮಚರ್ಯದ ಮಾಧ್ಯಮದಿಂದ ಮೋಕ್ಷಮಾರ್ಗ ಪ್ರಾರಂಭವಾಗುತ್ತದೆ ಹಾಗೂ ಬ್ರಹ್ಮಚರ್ಯದ ಮಾಧ್ಯಮದಿಂದಲೇ ಮೋಕ್ಷ ಮಾರ್ಗ ಪೂರ್ಣವಾಗುತ್ತದೆ. ಬ್ರಹ್ಮಚರ್ಯವು ವಾಸ್ತವಿಕವಾಗಿ ತಪಮಾಡಿ ಆತ್ಮನನ್ನು ಕುಂದನ ಮಾಡುವ ಅಗ್ನಿಯಾಗಿದೆ. ಆ ಅಗ್ನಿಯಲ್ಲಿ ಅನಂತ–ಅನಂತ ಕಾಲದಿಂದ ಅಡಗಿರುವ ಕರ್ಮಮಲವು ಸುಟ್ಟು ಭಸ್ಮವಾಗಿಬಿಡುತ್ತದೆ. ಬ್ರಹ್ಮಚರ್ಯದ ಸಾಧನೆ ಎಂದರೆ ಶರೀರ ಮತ್ತು ಆತ್ಮಗಳೆರಡನ್ನು ಶಕ್ತಿಶಾಲಿಯನ್ನಾಗಿ ಮಾಡುವುದಾಗಿದೆ ಅಲ್ಲಿಯೇ ಶೀಲ ಅರ್ಥಾತ್ ಬ್ರಹ್ಮಚರ್ಯ ರೂಪದ ಆಭೂಷಣದಿಂದ ಸುಸಜ್ಜಿತ ಸಾಧಕರನ್ನು ಮುಕ್ತಿರೂಪದ ಲಕ್ಷ್ಮೀ ಸ್ವಯಂ ಬಂದು ಬಣ್ಣ ಹಚ್ಚುತ್ತಾಳೆ. ಶೀಲದ ಪ್ರಭಾವದಿಂದ ಸ್ವರ್ಗದಲ್ಲಿ ಇಂದ್ರರ ಆಸನ ಕಂಪಾಯ ಮಾನವಾಗಿ ಬಿಡುತ್ತದೆ, ದೇವತೆಗಳು ಬಂದು ನೌಕರರ ಹಾಗೇ ಶೀಲವಂತರ ಚರಣಗಳ ಸೇವೆ ಮಾಡುತ್ತಾರೆ. ಹೀಗೆ ಬ್ರಹ್ಮಚರ್ಯ ಅರ್ಥಾತ್, ಶೀಲದ ಮಹಿಮೆ ಇದೆ. ಇದರಿಂದ ಸುಖದ ಪ್ರಾಪ್ತಿಯಾಗುತ್ತದೆ. ನಿರ್ಮಲವಾದ ಯಶಸ್ಸು ದೊರೆಯುತ್ತದೆ. ಮೋಕ್ಷ ದೊರೆಯುತ್ತದೆ, ಆದ್ದರಿಂದ ಈ ವ್ರತವು ಶ್ರೇಷ್ಠವಾಗಿದೆ. ಧರ್ಮ ಭಾವನಾ ಶತಕದಲ್ಲಿ ಹೀಗೆ ಬರೆದಿದ್ದಾರೆ.,

**ರಾಜರುಗಳಲಿ ಹೇಗೆ ಚಕ್ರಿಯನು ಬಹಳ ಶ್ರೇಷ್ಠನೆನ್ನುವರು।**
**ಹಾಗೆಯೇ ವ್ರತರಾಜಗಳ ರಾಜನೆಂದು ಬ್ರಹ್ಮಚರ್ಯಕೆನ್ನುವರು॥**
**ಸ್ಪರ್ಶ, ರಸನಾ ಕಾಮೇಂದ್ರಿಯಗಳನು ವಶದಲಿ ಹೊಂದಿರುವವರು।**
**ಸರ್ವೋತ್ತಮ ಧರ್ಮಿ ಶಾಸಕರಾಗಿ, ಬ್ರಹ್ಮಚರ್ಯವ ಭಜಿಸುವರು॥88॥**

ಬ್ರಹ್ಮಚರ್ಯಕ್ಕೆ ಸಮಾನವಾದ ಉತ್ತಮ ವ್ರತವಿಲ್ಲ. ಈ ಮಹಾನ್ ವ್ರತದಿಂದ ಅನೇಕ ಪ್ರಕಾರಗಳ ಋದ್ಧಿಗಳು ಪ್ರಾಪ್ತವಾಗುತ್ತವೆ. ಪುಣ್ಯದ ಸಂಚಯವಾಗುತ್ತದೆ. ಪಾಪಗಳ ವಿನಾಶವಾಗುತ್ತದೆ.

ಬ್ರಹ್ಮಚರ್ಯ ವ್ರತದ ಆಶ್ರಯ ಹೊಂದುವವರಿಗೆ ಅವರ ಎಲ್ಲ ಉಪಸರ್ಗಗಳು ಅನಾಯಾಸವಾಗಿ ದೂರವಾಗಿ ಬಿಡುತ್ತವೆ ಹಾಗೂ ಸ್ವರ್ಗದ ದೇವತೆಗಳು ಸಹ ಅವರಿಗೆ ವಂದನೆ ಮಾಡುತ್ತಾರೆ. ಬ್ರಹ್ಮಚರ್ಯದ ಪಾಲನೆ ಮಾಡುವ ಮಾನವನು ದೇವತೆಗಳಿಗಿಂತಲೂ ಪೂಜ್ಯನಾಗಿದ್ದಾನೆ– ಹೀಗೂ ಸಹ ಹೇಳಿದ್ದಾರೆ–

**ಧಮ್ಮೋ ಮಂಗಲಮುಕ್ಕಿಟ್ಠಂ ಅಹಿಂಸಾ ಸಂಯಮೋ ತವೋ।**
**ದೇವಾವಿ ತಸ್ಸ ಣಮಂಸಂತಿ ಜಸ್ಸ ಧಮ್ಮೇ ಸಯಾ ಮಣೋ॥(ವೀ.ಭ.8)**

ಅದು ಧರ್ಮ ಮಂಗಲ ಸ್ವರೂಪವಾಗಿದೆ, ಉತ್ಕೃಷ್ಟವಾಗಿದೆ, ಅಹಿಂಸೆ, ಸಂಯಮ ಹಾಗೂ ತಪದಿಂದ ಕೂಡಿದೆ. ಈ ಧರ್ಮದ ವಾಸವಿರುವ ಹೃದಯದ ವ್ಯಕ್ತಿಗೆ ದೇವತೆಗಳು ಸಹ ನಮಸ್ಕಾರ ಮಾಡುತ್ತಾರೆ. ಈ ಪ್ರಕಾರ ಬ್ರಹ್ಮಚರ್ಯವು ಉತ್ಕೃಷ್ಟ ಧರ್ಮ ಹಾಗೂ ವ್ರತವಾಗಿದೆ. ಮೋಕ್ಷಮಾರ್ಗದ ಪ್ರವೇಶ ದ್ವಾರವಾಗಿದೆ. ಬ್ರಹ್ಮಚರ್ಯ ಇರುವವರು ಸದಾ ಶುದ್ಧತೆಯನ್ನು ಹೊಂದಿರುತ್ತಾರೆ. ಕಾತಂತ್ರ ರೂಪಮಾಲಾದಲ್ಲಿ ಹೀಗೂ ಹೇಳಿದ್ದಾರೆ–

**ಶುಚಿರ್ಭೂಮಿಗತಂ ತೋಯಮ್, ಶುಚಿರ್ನಾರೀ ಪತಿವ್ರತಾ।**
**ಶುಚಿರ್ಧರ್ಮಪರೋ ರಾಜಾ, ಬ್ರಹ್ಮಚಾರೀ ಸದಾ ಶುಚಿಃ॥**

ಭೂಮಿಯ ಅತಿ ಒಳಗೆ ಹೋದಂತೆ ನೀರು ಶುದ್ಧವಾಗಿರುತ್ತದೆ. ಪತಿವ್ರತಾ ಸ್ತ್ರೀ ಪವಿತ್ರಳಾಗಿರುತ್ತಾಳೆ. ಧರ್ಮನಿಷ್ಠ ರಾಜನು ಸಹ ಪವಿತ್ರನಾಗಿರುತ್ತಾನೆ. ಇದೇ ಪ್ರಕಾರ ಬ್ರಹ್ಮಚಾರಿಯು ಸದಾಕಾಲ ಪವಿತ್ರನಾಗಿರುತ್ತಾನೆ. ಎಂದಿಗೂ ಅನ್ಯಾಯ ಮಾಡದಿರುವವರು ಅವರು ನಮ್ಮ ಪರಿವಾರದ ಸದಸ್ಯರೇ ಆಗಿರಬಹುದು ಅವರು ಧರ್ಮದಲ್ಲಿ ತತ್ಪರರಾಗಿರುತ್ತಾರೆ. ರಾಜಾ ಶ್ರೇಣಿಕನಿಗೆ ಜನರು ವಾರಿಷೇಣನ ಬಗ್ಗೆ ಅವರಿಗೆ ಸಂದೇಹವಿದ್ದು ಆತನು ರಾಣಿಯ ಹಾರವನ್ನು ಕದ್ದಿದ್ದಾನೆಂದು ಹೇಳಿದರು. ರಾಜಾ ಶ್ರೇಣಿಕನು ಆತನಿಗೆ ಪ್ರಾಣದಂಡ ನೀಡಿದನು. ಆತನು ತನ್ನ ಪುತ್ರನೆಂದು ತಿಳಿದು ಸಹ ಈ ಆಜ್ಞೆಯನ್ನು ಸೇವಕರಿಗೆ ನೀಡಿದನು. ಇವರು ಧರ್ಮಪರವಾಗಿರುವ ರಾಜರಾಗಿರುತ್ತಾರೆ. ಅವರು ಯಾರೊಂದಿಗೂ ಪಕ್ಷಪಾತ ಮಾಡುವುದಿಲ್ಲ. ವಾರಿಷೇಣನ ಪುಣ್ಯ ಪ್ರಭಾವದಿಂದ ಖಡ್ಗವು ಹೂವಿನ ಹಾರವಾದ ಸಂಗತಿ ಬೇರೆ ವಿಷಯವಾಗಿದೆ. ಇದೇ ಪ್ರಕಾರ ರಾಮಚಂದ್ರರೂ ಆಗಿದ್ದಾರೆ. ಸೀತೆಯ ಮೇಲೆ ಅಪವಾದ ಬಂದಾಗ, ಸೀತೆ ನಿರ್ದೋಷಿ ಎಂದು ಅವರಿಗೆ ತಿಳಿದಿದ್ದರೂ, ಅವಳ ಮೇಲೆ ವಿಶ್ವಸವಿದ್ದರೂ ಪ್ರಜೆಗಳು ಅನ್ಯರ ಮನೆಯಲ್ಲಿ ಇದ್ದು ಬಂದ ಸ್ತ್ರೀಯನ್ನು ತನ್ನ ಮನೆಯಲ್ಲಿ ಇಟ್ಟುಕೊಂಡರೆ ಅದೊಂದು ತಪ್ಪು ಪರಂಪರೆಯಾಗಬಹುದು. ಪ್ರಜೆಗಳು ಏನೆಂದಾದರೂ ಎನ್ನುವ ಭಯದಿಂದ ಅವರು ರಾಜಾ ಆಗಿದ್ದರೂ, ತನ್ನಿಂದ ಯಾವುದೋ ತಪ್ಪು ಮಾರ್ಗ ಪ್ರಾರಂಭವಾಗಬಾರದು ಎಂದು ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬರುವ ಮೂಲಕ ಒಬ್ಬ ಮಹಾನ್ ವ್ಯಕ್ತಿತ್ವವನ್ನು ಪಡೆದುಕೊಂಡರು. ಇಂತಹ ಧರ್ಮಪರವಾಗಿರುವ ರಾಜರು ಸದ್ಧರ್ಮವನ್ನು ಅಂಗೀಕಾರ ಮಾಡುತ್ತಾರೆ. ಅವರು ಸದಾಕಾಲ ಪವಿತ್ರರಾಗಿರುತ್ತಾರೆ. ಇದರಲ್ಲಿ ಅವರ ಅಪೇಕ್ಷೆಯನ್ನು ತಿಳಿದು ಅವರ ಆತ್ಮ ಪವಿತ್ರ ಪಾವನ ರೂಪದ ಧರ್ಮದ ಕಡೆಗೆ ಸಾಗುತ್ತಲಿದೆ ಎಂದು ತಿಳಿದುಕೊಳ್ಳಬೇಕು. ಅವರು ವಿಷಯ ವಾಸನೆಯಿಂದ ದೂರವಿದ್ದಾರೆಂದು ಅಲ್ಲ, ಇಲ್ಲಿ ಆತ್ಮನಲ್ಲಿ ಪವಿತ್ರತೆಯ ಮಾತನ್ನು ಹೇಳಲಾಗುತ್ತಿದೆ.

ಆತ್ಮನ, ಆರೋಗ್ಯ ಸಂಸ್ಕೃತಿ ಹಾಗೂ ರಾಷ್ಟ್ರದ ಪವಿತ್ರತೆಯ ದೃಷ್ಟಿಯಿಂದ ಹಾಗೂ ರಾಗ, ದ್ವೇಷ ರೂಪ ಭಾವಕರ್ಮ ಮತ್ತು ಜ್ಞಾನವರಣ ಇತ್ಯಾದಿ ದ್ರವ್ಯಕರ್ಮಗಳಿಂದ ರಕ್ಷಿಸಿಕೊಳ್ಳಲು ದಶಧರ್ಮಗಳಲ್ಲಿ ಹೇಳಿರುವ ಸಂಯಮ ಹಾಗೂ ಶೀಲಗಳ ಪೂರ್ಣತೆಯು ಬ್ರಹ್ಮಚರ್ಯ ವ್ರತದಲ್ಲಿಯೇ ಆಗಬಲ್ಲದು. ಇಂದು ಮತ್ತೊಂದು ಮಾತನ್ನು ತಿಳಿಯಿರಿ, ಪೂಜಾ ಪಾಠಗಳನ್ನು, ಸ್ತುತಿಗಳನ್ನು ಓದುವುದನ್ನು ಎಲ್ಲರೂ ತಿಳಿದಿದ್ದಿರಾ, ಸ್ವಾಧ್ಯಾಯವನ್ನು ಮಾಡುತ್ತೀರಾ. ಆದರೆ ಯಾವ ಸಮಯ ಯಾವುದು ಉಪಯೋಗವಾಗುತ್ತದೆ. ಆ ಸಮಯ ಅದನ್ನು ಅವಶ್ಯವಾಗಿ ಮಾಡಬೇಕು. ನಿರ್ವಾಣಕಾಂಡ ಎಲ್ಲರಿಗೂ ಗೊತ್ತಿದೆ. ಆದರೆ ಇಂದೇ ಅದನ್ನು ವಿಶೇಷರೂಪದಿಂದ ಯಾಕೆ ಓದಿದಿರಿ. ಯಾಕೆಂದರೆ ಇಂದು ತೀರ್ಥಂಕರ ವಾಸುಪೂಜ್ಯ ಸ್ವಾಮಿಯ ನಿರ್ವಾಣ ಕಲ್ಯಾಣವಿದ್ದಿತು. ಆದ್ದರಿಂದ ಯಾವ ಭಾವನೆ ಯಾವ ಕಾರ್ಯ ಯಾವ ದಿನ ಮಾಡಲು ಯೋಗ್ಯವಿದೆ ಆ ಸಮಯ ಅವಶ್ಯವಾಗಿ ಮಾಡಬೇಕು. ಹಾಗೇ ನೋಡಿದರೆ ಸಾಮಾನ್ಯವಾಗಿ ಓದುತ್ತಿರುತ್ತವೆ. ಆದರೆ ಸಾಮಾನ್ಯ ರೂಪದಿಂದಲೂ ಅದರ ಮಹತ್ವವಿದ್ದೆ ಇದೆ. ಪೂಜಾ ಭಕ್ತಿಗಳಲ್ಲಿ ನಮ್ಮ ಪಾವನ ಉದ್ದೇಶ **"ವಂದೇ ತದ್ ಗುಣ ಲಬ್ಧಯೇ"** ಯಾಗಿರಬೇಕು ಸ್ವಾಧ್ಯಾಯವನ್ನು ಸಾಧ್ಯವಿದ್ದಷ್ಟು ಎಲ್ಲರೂ ಮಾಡುತ್ತಾರೆ. ಆತ್ಮಹಿತಕಾರಿ ಶಾಸ್ತ್ರಗಳನ್ನು ಸಾವಧಾನದಿಂದ ಓದುವ-ಕೇಳುವ ವಿಚಾರ ಇತ್ಯಾದಿ ಮಾಡಬೇಕು ಯಾಕೆಂದರೆ ಸ್ವಾಧ್ಯಾಯದ ಸಮಾನ ಬೇರೊಂದು ಕರ್ಮಗಳ ಕ್ಷಪಣತೆಯಲ್ಲಿ ಸಮರ್ಥವಿಲ್ಲ ಸ್ವಾಧ್ಯಾಯವು ಸಹ ರತ್ನತ್ರಯದ ಮೂಲ ಆಧಾರವೆಂದು ಸ್ವೀಕರಿಸಲಾಗಿದೆ.

ಸಿದ್ಧಾಂತ ರೂಪದಿಂದ ಇರುವ ಗ್ರಂಥಗಳು, ಮಹಾವ್ರತಧಾರಿಗಳೇ ಅವುಗಳನ್ನು ಓದಬಲ್ಲರು ಒಂದು ವೇಳೆ ಮಹಾವ್ರತಿಯಾಗಿರದಿದ್ದರೆ ಅವುಗಳನ್ನು ಓದಲಾರರು. ಇದಕ್ಕೆ ಸಂಬಂಧಿಸಿದಂತೆ ಒಂದು ದೃಷ್ಟಾಂತ ಜ್ಞಾಪಕ್ಕೆ ಬರುತ್ತಲಿದೆ. ಈ ದೃಷ್ಟಾಂತವು ಕರ್ನಾಟಕ ಪ್ರಾಂತದ ಶ್ರವಣಬೆಳಗೊಳ ಕ್ಷೇತ್ರಕ್ಕೆ ಸಂಬಂದಿಸಿದೆ. ಇದು ವಿಶ್ವ ವಿಖ್ಯಾತವಾದ ಭಗವಾನ ಬಾಹುಬಲಿಯ ಪ್ರತಿಮೆ ಇಲ್ಲದಿದ್ದ ಕಾಲಕ್ಕೆ ಸಂಬಂಧಿಸಿದೆ. ಇಂದಿಗೆ ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ಈ ಪ್ರತಿಮೆ ನಿರ್ಮಿತವಾಗಿದೆ. ಶ್ರವಣಬೆಳಗೊಳದ ಚಂದ್ರಗಿರಿಯಲ್ಲಿ ಭದ್ರಬಾಹು ಸ್ವಾಮಿಗಳು ತಪಸ್ಸು ಮಾಡಿದ್ದರು. ಅದು ಪವಿತ್ರ ಸ್ಥಾನವಾಗಿದ್ದಿತು, ಒಂದು ಗುಹೆ ಇದ್ದಿತು. ಕೆಲವು ಮಂದಿರಗಳನ್ನು ಚಂದ್ರಗುಪ್ತ ಮುಂತಾದವರ ಪರಂಪರೆಯಲ್ಲಿ ನಿರ್ಮಿಸಿರಬಹುದು. ನೇಮಿಚಂದ್ರಾಚಾರ್ಯರು ಚಂದ್ರಗಿರಿ ಪರ್ವತದ ಮೇಲೆ ಇರುತ್ತಿದ್ದರು, ಧ್ಯಾನ ಸ್ವಾಧ್ಯಾಯ ಮಾಡುತ್ತಿದ್ದರು. ತಮ್ಮ ಸಂಘಕ್ಕೂ ಮಾಡಿಸುತ್ತಿದ್ದರು.

ಮೈಸೂರಿನ ರಾಜರ(ತಲಕಾಡಿನ ಗಂಗ ದೊರೆ 4ನೇ ರಾಚಮಲ್ಲ)ಲ್ಲಿ ಚಾಮುಂಡರಾಯ ಹೆಸರಿನ ಒಬ್ಬ ಸೇನಾಪತಿ ಇದ್ದರು. ಆತ ರಾಜರಂತೆ ವೈಭವ ಸಂಪನ್ನ ಜೈನಧರ್ಮ ಮುನಿ ಭಕ್ತನಾಗಿದ್ದನು. ಆತ ಅನೇಕ ಸಾರಿ ಮುನಿ ನೇಮಿಚಂದ್ರಾಚಾರ್ಯರ ಬಳಿ ಬರುತ್ತಿದ್ದನು. ಒಂದು ಸಾರಿ ಆತ ಸಪರಿವಾರ ಮುನಿಗಳ ದರ್ಶನಕ್ಕಾಗಿ ಬಂದನು. ಆಗ ಆಚಾರ್ಯ ಶ್ರೀಗಳು ತಮ್ಮ ಶಿಷ್ಯರೊಂದಿಗೆ ಸ್ವಾಧ್ಯಾಯ ಮಾಡುತ್ತಿದ್ದರು. ಚಾವುಂಡರಾಯ ಸಪರಿವಾರ ಬಂದೊಡನೆ, ದರ್ಶನ ಮಾಡಿ ಅಲ್ಲಿಯೇ ಕುಳಿತರು. ಆಚಾರ್ಯ ಶ್ರೀಗಳು ಯಾವ ಶಾಸ್ತ್ರವನ್ನು ಅವರು ಸ್ವಾಧ್ಯಾಯ ಮಾಡುತ್ತಿದ್ದರೋ ಅದನ್ನು ಓದುವ ಅಧಿಕಾರ ಶ್ರಾವಕರಿಗೆ ಇಲ್ಲ ಎಂದು ಯೋಚಿಸುತ್ತಾ ಅವರು ಏನೂ ಹೇಳದೇ ಶಾಸ್ತ್ರವನ್ನು ಮುಚ್ಚಿಬಿಟ್ಟರು. ಇದೆಲ್ಲವನ್ನು ನೋಡಿದ ಚಾಮುಂಡರಾಯನ

ಮನಸ್ಸಿನಲ್ಲಿ ವಿಚಾರ ಉಂಟಾಗಿ ಇದೇನಾಯಿತು? ಇನ್ನೂ ಸ್ವಾಧ್ಯಾಯ ಪೂರ್ಣವಾಗಿಯೇ ಇಲ್ಲ ಆದರೂ ಮಧ್ಯದಲ್ಲಿಯೇ ಮುಚ್ಚಿ ಬಿಟ್ಟರಲ್ಲ; ಏನು ಕಾರಣವಿರಬಹುದು? ಬಹುಶಃ ನಾವು ಬಂದಿದ್ದಕ್ಕಾಗಿಯೇ ಆಚಾರ್ಯ ಶ್ರೀಗಳು ಸ್ವಾಧ್ಯಾಯ ನಿಲ್ಲಿಸಿರಬೇಕು. ಆತ ವಿನಮ್ರ ಭಾವದಿಂದ– ಆಚಾರ್ಯರೇ, ತಾವು ಸ್ವಾಧ್ಯಾಯ ನಿಲ್ಲಿಸಿ ಬಿಟ್ಟಿರಿ, ನಾವು ಸಹ ಸ್ವಾಧ್ಯಾಯವನ್ನು ಕೇಳುತ್ತಿದ್ದೆವು ನಾವು ಇದಕ್ಕೆ ಪಾತ್ರರಿಲ್ಲವೇ– ಎಂದು ಕೇಳಿದ.

ಆಚಾರ್ಯರು ಹೇಳಿದರು ಹೌದು! ಈಗ ನೀವು ಇದಕ್ಕೆ ಪಾತ್ರರಲ್ಲ. ಕಾರಣವೆಂದರೆ, ಈ ಶಾಸ್ತ್ರ ಓದಲು ಮಹಾವ್ರತಿಯಾಗಿರಬೇಕು. ಆಗ ಚಾಮುಂಡರಾಯ–ಒಳ್ಳೆಯದು ವಿಷಯ ಹೀಗಿದೆ. ಹಾಗಾದರೆ ಆಚಾರ್ಯರೇ ನಮಗೆ ಹೇಗೆ ಜ್ಞಾನ ದೊರಕುತ್ತದೆ? ಎಂದು ಕೇಳಿದ. ನಾವು ಮಹಾವ್ರತಿಗಳಾಗಲಾರೆವೆಂದು ಭಾವಿಸಿರಿ ಆದರೆ ಆಗಬೇಕೆಂಬ ಭಾವನೆ ಬಹಳಷ್ಟಿದೆ. ಆದರೆ ಒಂದು ವೇಳೆ, ಆಗದಿದ್ದರೆ ನಾವು ಈಗ ಈ ಜ್ಞಾನವನ್ನು ಕೇಳಲಾರೆವಾ. ಆಚಾರ್ಯರು ಚಾಮುಂಡರಾಯನ ಮಾತುಗಳನ್ನು ಶಾಂತ ಭಾವದಿಂದ ಕೇಳುತ್ತಲೇ ಇದ್ದರು. ಚಾಮುಂಡರಾಯ ಮತ್ತೆ ಹೇಳಿದ–ಆಚಾರ್ಯರೇ ನಮ್ಮ ಮೇಲೆ ತಾವು ಅವಶ್ಯವಾಗಿ ಕೃಪೆ ಮಾಡಿ, ನಮಗೆ ಇದರ ಜ್ಞಾನ ದೊರಕಲಿ, ಯಾವುದಾದರೂ ಮಾರ್ಗವನ್ನು ಅವಶ್ಯವಾಗಿ ತಿಳಿಸಿರಿ. ಆಗ ಆಚಾರ್ಯ ಶ್ರೀಗಳು ಸರಿ, ಸಮಯಾನುಸಾರ ವಿಚಾರ ಮಾಡುತ್ತೇವೆಂದು ಹೇಳಿದರು.

ಆಚಾರ್ಯ ನೇಮಿಚಂದ್ರರು ಮಾರ್ಗ ಹುಡುಕಿದರು ಹಾಗೂ ಅವರು ಷಟ್‌ಖಂಡಾಗಮ ಗ್ರಂಥವನ್ನು ಓದಿ ಅದರ ಸಾರರೂಪದಲ್ಲಿ ಒಂದು ಶಾಸ್ತ್ರವನ್ನು ರಚಿಸಿದರು. ಅ ಶಾಸ್ತ್ರವು ಒಂದು ಮಹಾನ್ ಶಾಸ್ತ್ರವಾಗಿದ್ದಿತು. ಅದನ್ನು ಈಗ ನಾವು ಜೀವಕಾಂಡ ಮತ್ತು ಕರ್ಮಕಾಂಡಗಳ ರೂಪದಲ್ಲಿ ಓದುತ್ತಿದ್ದೇವೆ. ಅದಕ್ಕೆ ಒಳ್ಳೆಯ ಹೆಸರನ್ನಿಡಲಾಗಿದ್ದಿತು–ಗೊಮ್ಮಟ ಸಾರ. ಇದಕ್ಕೇ ಸಂಬಂಧಿಸಿದಂತೆ– ಚಾಮುಂಡರಾಯನ ಅಮ್ಮ ಒಂದು ಸಂಕಲ್ಪವನ್ನು ಹೊಂದಿದ್ದು ನಾನು ಇತಿಹಾಸದಲ್ಲಿ ಓದಿರುವಂತೆ ಬಾಹುಬಲಿ ಭಗವಂತರ 525 ಧನುಷ್, ಪ್ರಮಾಣದ ಸುವರ್ಣ ಪ್ರತಿಮೆಯನ್ನು ಭರತ ಚಕ್ರವರ್ತಿಯು ರಚಿಸಿದ್ದನೋ ಅದರ ದರ್ಶನ ಮಾಡಬೇಕಾಗಿದೆ. ಅದು ಎಲ್ಲಿದೆ? ಇಡೀ ಭಾರತದಲ್ಲಿ ಅಷ್ಟೆ ಏಕೆ. ವಿದೇಶಗಳಲ್ಲಿಯೂ ನೋಡಲಾಯಿತು. ಎಲ್ಲಿಯೂ ಸಿಗಲಿಲ್ಲ–ಎಂದು ಹೇಳಲಾಗುತ್ತದೆ. ಎಲ್ಲಿಗೆ ಹೋಗುವುದು. ಎಲ್ಲೆಡೆಗೂ ಗುಪ್ತಚರರನ್ನು ಕಳಿಸಲಾಯಿತು, ಎಲ್ಲರೂ ನಿರಾಶರಾಗಿ ಹಿಂದಿರುತಿದರು. ಆದರೆ ಪ್ರತಿಮೆ ಸಿಗಲಿಲ್ಲ. ಅಮ್ಮಾ–ಎಲ್ಲಿಯವರೆಗೆ ಪ್ರತಿಮೆಯ ದರ್ಶನವಾಗುವುದಿಲ್ಲವೋ ಅಲ್ಲಿಯವರೆಗೆ ಹಾಲಿನ ತ್ಯಾಗವಿರಲಿ ಎಂಬ ಸಂಕಲ್ಪ ಮಾಡಿದ್ದರು. ಚಾಮುಂಡರಾಯ ಏನು ಮಾಡಬೇಕೆಂದು ಚಿಂತಿತನಾಗಿದ್ದನು. ಸರಿ ಎಂದು ಅಮ್ಮನಿಂದ ಅನುಮತಿ ಪಡೆದು, ಗುರುಗಳ ಆಶೀರ್ವಾದ ಪಡೆದನು. ಚಂದ್ರಗಿರಿ ಪರ್ವತದ ಎದುರಿಗೆ ಇಂದ್ರಗಿರಿ ಎಂದೂ ಕರೆಯಲ್ಪಡುವ ವಿಂದ್ಯಗಿರಿ ಯೋಗ್ಯವೆಂದು ಹೇಳಿದ್ದರಿಂದ ಅಲ್ಲಿಯೇ ಬಾಹುಬಲಿ ಭಗವಂತರ ಪ್ರತಿಮೆಯನ್ನು ನಿರ್ಮಾಣ ಮಾಡಲಾಯಿತು. ಕಥೆಯು ವಿಸ್ತಾರವಾಗಿರುವುದರಿಂದ ಇಂದು ಸಂಕ್ಷಿಪ್ತವಾಗಿ ಹೇಳುತ್ತೇನೆ.

ವಿಂದ್ಯಗಿರಿ ಪರ್ವತದ ಯೋಗ್ಯ ಶಿಲೆಯನ್ನು ತಿಳಿದನಂತರ ಪ್ರತಿಮೆಯನ್ನು ರೂಪಿಸುವ ಕಾರ್ಯವನ್ನು ಪ್ರಾರಂಭಿಸಬೇಕಾಗಿದ್ದಿತು. ಪ್ರತಿಮೆಯನ್ನು ಮಾಡುವ ಶಿಲ್ಪಿ ಬಂದನು. ದಿನನಿತ್ಯ ಎಷ್ಟು ಶಿಲೆಯನ್ನು ತುಂಡರಿಸುವನೋ ಅಷ್ಟು ತೂಕದಷ್ಟು ಚಿನ್ನವನ್ನು ಆತನಿಗೆ ಕೊಡುವುದೆಂದು

ನಿಶ್ಚಯವಾಯಿತು. ಶಿಲ್ಪಿ ಒಪ್ಪಿಕೊಂಡು ಬ್ರಹ್ಮಚರ್ಯ ವ್ರತ ಹಾಗೂ ಶುದ್ಧ ಆಹಾರ, ಆಚಾರ ಸ್ವೀಕರಿಸಿ ಪ್ರತಿಮೆಯ ನಿರ್ಮಾಣ ಕಾರ್ಯ ಮಾಡಲು ಸಿದ್ಧನಾದ ಪ್ರಥಮ ದಿನ ಎಷ್ಟು ಶಿಲೆಯನ್ನು ತುಂಡರಿಸಿದನೋ ಅಷ್ಟು ಚಿನ್ನ ನೀಡಲಾಯಿತು. ಆ ಚಿನ್ನದೊಂದಿಗೆ ಆತ ಮನೆಗೆ ತೆರಳಿದ. ಚಿನ್ನವನ್ನು ನೋಡಿದ ಆತನ ತಾಯಿ–ಮಗನೇ ನೀನು ಏನು ಮಾಡುತ್ತಿದ್ದಿಯಾ ಎಂದು ಕೇಳಿದರು. ಒಂದು ಕಡೆ ನಿನ್ನ ಒಡೆಯ ಚಿನ್ನವನ್ನು ಕೊಡುವ ಮೂಲಕ ಎಂತಹ ತ್ಯಾಗ ಮಾಡುತ್ತಿದ್ದಾನೆ. ಅದೆಷ್ಟು ಒಳ್ಳೆಯ ಭಾವನೆ ತಾಳಿದ್ದಾನೆ ಆತ ತನ್ನ ಅಮ್ಮನಿಗಾಗಿ ಮಾಡುತ್ತಿದ್ದಾನೆ ಹಾಗೂ ನೀನು ಇಷ್ಟೊಂದು ಲೋಭ ಮಾಡುತ್ತಿದ್ದಿಯಾ. ಧರ್ಮದಿಂದ ಹೀಗೆ ಲೋಭ ಮಾಡುವುದು ಸರಿಯಲ್ಲ. ನಿನ್ನ ಉಪಜೀವನ ನಡೆದರೆ ಸಾಕು ಅಷ್ಟೇ ಮಾಡು ನಿನಗೆ ಚಿನ್ನ ಕೊಡುತ್ತಿರುವವರು ನಿನ್ನ ಉಪಜೀವನ ನಡೆಸಲು ವ್ಯವಸ್ಥೆ ಮಾಡಲಾರರೇ? ಅವಶ್ಯವಾಗಿ ಮಾಡುತ್ತಾರೆ. ನೀನು ಸಮರ್ಪಿತನಾಗು ಹಾಗೂ ನನ್ನ ಉಪಜೀವನವನ್ನು ನಡೆಸಿ ನನ್ನನ್ನು ನೀವು ನಿಮ್ಮ ಮನೆಯ ಸದಸ್ಯನೆಂದ ಭಾವಿಸಿದರೆ ಸಾಕು ನನಗೆ ಏನೂ ಬೇಡ ಎಂದು ಹೇಳು–ಎಂದು ಹೇಳಿದಳು.

ಅಮ್ಮನ ಮಾತುಗಳನ್ನು ಕೇಳಿದ ಶಿಲ್ಪಿಯು ಚಾಮುಂಡರಾಯನಿಗೆ ಹಾಗೆಯೇ ಹೇಳಿದ ಹಾಗೂ ನಿರ್ಲೋಭತೆಯೊಂದಿಗೆ ಪ್ರತಿಮೆಯ ನಿರ್ಮಾಣಕಾರ್ಯ ಮಾಡಿದ ಪ್ರತಿಮೆಯು ಶಿಲ್ಪಿಯ ಕಾರ್ಯ ಕ್ಷಮತೆಯಿಂದ ಬಹಳೇ ಮನೋಮುಗ್ಧಕಾರಿಯಾಗಿ ರೂಪಗೊಂಡಿತು ಪ್ರತಿಮೆ ಸಿದ್ಧವಾದಾಗ ಅದರ ಪ್ರತಿಷ್ಠಾಪನೆಗಾಗಿ ಪಂಚಕಲ್ಯಾಣ(?) ಮಹೋತ್ಸವ ಪ್ರತಿಷ್ಠಾಪನೆ ಪೂಜೆಯನ್ನು ಏರ್ಪಡಿಸಲಾಯಿತು, ಅಭಿಷೇಕ ಮಾಡುವ ಆಯೋಜನೆಯನ್ನು ಸಮಾರೋಹ ಪೂರ್ವಕವಾಗಿ ಇಡಲಾಯಿತು. ಯಾಕೆಂದರೆ ಚಾಮುಂಡರಾಯನ ತಾಯಿ ಪ್ರತಿಮೆಯ ದರ್ಶನದ ನಂತರವೇ ಹಾಲು ಸ್ವೀಕರಿಸುವ ವ್ರತ ಮಾಡಿದ್ದರು ಇಂತಹ ಪ್ರಸಂಗದಲ್ಲಿ ಒಂದು ಭಾವ ಮತ್ತೆ ಅವರ ಮನಸ್ಸಿನಲ್ಲಿ ಬಂದು ಈ ನಿರ್ಮಾಣಗೊಂಡ ಪ್ರತಿಮೆಗೆ ಹಾಲಿನಿಂದ ಸ್ನಾನಮಾಡಿಸಿಯೇ ತಾವು ಹಾಲು ಕುಡಿಯುವ ನಿರ್ಧಾರ ಮಾಡಿದರು. ಅವರ ಈ ಭಾವನೆಯನ್ನು ಅವರ ಪುತ್ರ ಪೂರ್ಣಗೊಳಿಸಿದರು. ಪ್ರತಿಮೆಗೆ ಹಾಲಿನಿಂದ ಅಭಿಷೇಕ ಮಾಡಿಸಿದರು. ಅನೇಕ ಜನರು ಮಾಡಿದರು ಆದರೆ. ಪ್ರತಿಮೆಯು ಹಾಲಿನಿಂದ ತೊಯ್ಯಲಿಲ್ಲ. ಇದೇ ಜನರ ಮದ್ಯದಲ್ಲಿ ಒಬ್ಬ ವೃದ್ಧ ಮಾತೆಯು ತಮ್ಮ ಬಟ್ಟಲಿನಲ್ಲಿ ಹಾಲು ತಂದಿದ್ದು ಎಲ್ಲರಿಗೂ ತಾನು ಅಭಿಷೇಕ ಮಾಡಬೇಕೆಂದು ಹೇಳುತ್ತಿದ್ದರು. ಆದರೆ ಯಾರೂ ಅವರಿಗೆ ಮುಂದೆ ಸಾಗಲು ಬಿಡುತ್ತಿರಲಿಲ್ಲ. ನಂತರ ಯಾರೋ ಅವರನ್ನು ಮೇಲೆ ಕರೆದೊಯ್ದು ಅವರ ಬಟ್ಟಲಿನಿಂದ ಅಭಿಷೇಕ ಮಾಡಿಸಿದರು. ಅವರ ಬಟ್ಟಲಿನಿಂದ ಹಾಲು ಪ್ರತಿಮೆಯ ಮೇಲೆ ಹಾಕಿದಾಗ ಅದರ ಅನಿಯಂತ್ರಿತ ಧಾರೆ ಸಂಪೂರ್ಣ ಪ್ರತಿಮೆಯ ಮೇಲೆ ಹರಿಯ ತೊಡಗಿತು. ಬಾಹುಬಲಿ ಭಗವಂತರಿಗೆ ಹಾಲಿನ ಸ್ನಾನ ಪೂರ್ಣಗೊಂಡಿತು. ಈ ಪ್ರಕಾರ ಆಶ್ಚರ್ಯಜನಕ ಅತಿಶಯಕಾರಿ ಅಭಿಷೇಕವಾಯಿತು. ಆ ವೃದ್ಧಮಾತೆಗೆ ಅಲ್ಲಿ ಗುಳ್ಳಕಾಯಜ್ಜಿ ಎಂದು ಹೇಳುತ್ತಾರೆ. ಇದರ ನಂತರವೇ ಚಾಮುಂಡರಾಯನ ಅಮ್ಮಾ ಹಾಲಿನ ಸೇವನೆ ಮಾಡಿದರು.

ಹೀಗೆ ಹಾಲಿನ ಅಭಿಷೇಕ ಮಾಡುವ ಪರಂಪರೆ ದಕ್ಷಿಣದಲ್ಲಿ ಪ್ರಾರಂಭವಾಯಿತೆಂದು ಇತಿಹಾಸ ಹೇಳುತ್ತದೆ. ನಾವು ಇತಿಹಾಸ ಬಲ್ಲವರಿಂದ ಕೇಳಿರುವುದರಿಂದ ಹೀಗೆ ಹೇಳಿದ್ದೇವೆ. ಇದು ಯಾವುದೇ ಆಗಮ ಅಥವಾ ಸಿದ್ಧಾಂತವಲ್ಲ. ಬಾಹುಬಲಿಯ ಪ್ರತಿಮೆಯ ಮೇಲೆ ಹಾಲಿನ ಅಭಿಷೇಕ ಮಾಡುವುದು ವಿಚಾರಣೀಯ ಸಂಗತಿಯಾಗಿದೆ. ಕೇವಲ ಜ್ಞಾನಿಯಾದ ಮೇಲೆ ಹಸಿವು

ಇರುವುದಿಲ್ಲ. ಬಾಯಾರಿಕೆಯೂ ಇಲ್ಲ. ಅಲ್ಲದೇ ಭಗವಂತ ತಿನ್ನುವ, ಕುಡಿಯುವ ಸಂಗತಿಯೇ ಇಲ್ಲವೆಂದಾಗ ಆತನ ಮೇಲೆ ಇವೆಲ್ಲಾ ಯಾಕೆ? ಹೀಗೆ ಹೇಳಿದರೆ ಜಲಾಭಿಷೇಕವಾದರೂ ಯಾಕೆ? ಎಂದು ನೀವು ಕೇಳಬಹುದು. ನೀರು ಯಾಕೆಂದರೆ ನಾವು ಗಂಧೋದಕ ಪಡೆಯುವುದರಿಂದ ಶರೀರ ಇತ್ಯಾದಿ ಪವಿತ್ರವಾಗುತ್ತವೆ. ಅಹಿಂಸೆಯ, ರೀತಿಯಲ್ಲಿ ಶುದ್ಧತಾ ಪೂರ್ವಕವಾಗುವ ಕಾರ್ಯ, ದೋಷವಿರದಿರುವುದನ್ನು ಮಾಡಬೇಕು. ಈ ವಿಷಯದಲ್ಲಿ ಸಮಾಜ ವಿಚಾರಮಾಡಿ ತನ್ನ ಪರಂಪರೆಯನ್ನು ರೂಪಿಸಬೇಕು.

ಭಗವಂತ ಬಾಹುಬಲಿಯ ಪ್ರತಿಮೆಯನ್ನು ಗೊಮಟೇಶ ಬಾಹುಬಲಿ ಎಂದೂ ಸಹ ಹೇಳಲಾಗುತ್ತದೆ. ಈ ಹೆಸರು ಹೇಗೆ ಬಂದಿತೆಂದು ನಿಮಗೆ ತಿಳಿದಿದೆಯೇ? ಚಾಮುಂಡಾರಾಯ ಚಿಕ್ಕವರಿದ್ದಾಗ, ನೀವು ನಿಮ್ಮ ಮಕ್ಕಳನ್ನು ಚಿಂಟೂ, ಮಿಂಟೂ, ಗುಡ್ಡು, ಚಿನ್ನು ಇತ್ಯಾದಿಯಾಗಿ ಕರೆಯುವಂತೆ ಅವರ ಅಮ್ಮಾ ಅವರನ್ನು ಮೊಮ್ಮಟ ಎಂದು ಕರೆಯುತ್ತಿದ್ದರು. ಗೊಮ್ಮಟ ಇದು ಚಾವುಂಡರಾಯನ ಹೆಸರಾಗಿದ್ದಿತು. ಗೊಮ್ಮಟನು ರೂಪಿಸಿದ ಬಾಹುಬಲಿ ಭಗವಂತ, ಗೊಮ್ಮಟ+ಈಶ= ಗೊಮ್ಮಟೇಶ ಅರ್ಥಾತ್ ಗೊಮ್ಮಟನ ಈಶ–ಗೊಮ್ಮಟೇಶ ಬಾಹುಬಲಿ. ಗೊಮ್ಮಟನು ಪ್ರತಿಮೆಯನ್ನು ಮೂಡಿಸಿದ್ದರಿಂದ ಗೊಮ್ಮಟೇಶನೆಂದು ಕರೆಯಲಾಯಿತು. ಇದು ಅವರ ಅಮ್ಮ ನೀಡಿದ್ದ ಶಬ್ಧವಾಗಿದ್ದಿತು. ಅದೇ ರೂಢಿಯಾಗಿ ಬಂದಿತು. ನೇಮಿಚಂದ್ರಚಾರ್ಯರು ಚಾಮುಂಡರಾಯನಿಗಾಗಿ ಶಾಸ್ತ್ರ ರಚನೆ ಮಾಡಿದಾಗ, ಎಲ್ಲರೂ ಪ್ರತಿಮೆಯನ್ನು ಗೊಮ್ಮಟೇಶನೆಂದು ಕರೆಯುತ್ತಿರುವಾಗ ತಾವು ತಮ್ಮ ಶಾಸ್ತ್ರಕ್ಕೆ 'ಗೊಮ್ಮಟಸಾರ' ಎಂದು ಯಾಕೆ ಹೆಸರಿಡಬಾರದು ಎಂದು ಯೋಚಿಸಿದರು. ಗೊಮ್ಮಟನಿಗಾಗಿ ನೀಡಿದ ಸಿದ್ಧಾಂತಗ್ರಂಥಗಳ ಸಾರಕ್ಕೆ ಗೊಮ್ಮಟಸಾರ ಜೀವಕಾಂಡ–ಕರ್ಮಕಾಂಡ ಎಂದು ಹೆಸರಿಟ್ಟರು. ಇಂತಹ ಗ್ರಂಥಗಳನ್ನು ನಾವೆಲ್ಲರೂ ಓದಬಹುದು. ಆದರೆ ಸಿದ್ಧಾಂತ ಗ್ರಂಥಗಳ ಸ್ವಾಧ್ಯಾಯವನ್ನು ಕೇವಲ ಮುನಿಗಳೇ ಮಾಡಬಲ್ಲರು. ಮಹಾವ್ರತಿಗಳು ಮಾಡಬಲ್ಲರು. ಶ್ರಾವಕ ಜನರು ಷಟ್‌ಖಂಡಾಗಮದಂತಹ ಸಿದ್ಧಾಂತ ಗ್ರಂಥಗಳ ದರ್ಶನ ಮಾಡಬಲ್ಲರು.

ಬ್ರಹ್ಮಚರ್ಯವ್ರತದ ರಕ್ಷಣೆಗಾಗಿ ಆಗಮಗಳಲ್ಲಿ ಉತ್ಕೃಷ್ಟ ರೀತಿಯಲ್ಲಿ ಭಾವನೆಗಳನ್ನು ಹೇಳಿದ್ದಾರೆ. ಅವು ಬಹಳ ಉಪಯೋಗಿ ಎಂದು ಸಿದ್ಧವಾಗುತ್ತವೆ. ಭಗವತಿ ಆರಾಧನೆಯಲ್ಲಿ ಹೀಗೆ ಹೇಳಿದ್ದಾರೆ–

**ಮಹಿಲಾಲೋಯಣ ಪುವ್ವರದಿ ಸರಣಂ ಸಂಸತ್ತವಸಹಿವಿಕಹಾಯಿಂ।**
**ಪಣಿದರಸೇಹಿಂ ಯ ವಿರದೀ ಭಾವನಾ ಪಂಚ ಬಂಭಸ್ಸ॥1204॥**

ಸ್ತ್ರೀಯರ ರೂಪ–ಸ್ವರೂಪವನ್ನು ನೋಡುವುದು, ಪೂರ್ವಾನುಭೂತ ಭೋಗ ಇತ್ಯಾದಿಗಳ ಸ್ಮರಣೆ ಮಾಡುವುದು, ಅವರಲ್ಲಿ ರಾಗ ಉಂಟಾಗುವುದು, ಸ್ತ್ರೀಯರು ಹೆಚ್ಚಾಗಿರುವ ಸ್ಥಳದಲ್ಲಿ ವಾಸ ಮಾಡುವುದು, ಬಯಕೆ ಇರುವುದು, ವಿಕಥೆ ಮಾಡುವುದು(ಶೃಂಗಾರ ಕಥೆ ಹೇಳುವುದು). ಉನ್ಮತ್ತತೆಯನ್ನುಂಟು ಮಾಡುವ (ಗರಿಷ್ಠ) ಪದಾರ್ಥಗಳ ಸೇವನೆ ಮಾಡುವುದು, ಈ ಐದು ಸಂಗತಿಗಳಿಂದ ವಿರಕ್ತನಾಗಿರಬೇಕು. ಇವುಗಳ ತ್ಯಾಗ ಮಾಡಬೇಕು ಅಥವಾ ಇವುಗಳನ್ನು ಬಿಟ್ಟು ಬಿಡಬೇಕು–ಇವು ಬ್ರಹ್ಮಚರ್ಯದ ಭಾವನೆಗಳಾಗಿವೆ. ತತ್ತ್ವಾರ್ಥಸೂತ್ರದಲ್ಲಿ ಬ್ರಹ್ಮಚರ್ಯದ ಐದು

ಭಾವನೆಗಳನ್ನು ಹೇಳಿದ್ದಾರೆ. ಅವುಗಳ ಪಾಲನೆಯನ್ನೂ ಮಾಡಬೇಕು. ಅವುಗಳನ್ನು ಪುರುಷ ವೇದದ ಅಪೇಕ್ಷೆಯಿಂದ ಹೇಳಲಾಗಿದೆ. ಸ್ತ್ರೀಯರು ಸಹ ಇವುಗಳಂತೆಯೇ ಪಾಲನೆ ಮಾಡಬೇಕು. ಆಚಾರ್ಯ ಉಮಾಸ್ವಾಮಿಗಳು ತತ್ತ್ವಾರ್ಥ ಸೂತ್ರ ಶಾಸ್ತ್ರದಲ್ಲಿ ಹೇಗೆ ಬರೆದಿದ್ದಾರೆ–

**ಸ್ತ್ರೀ ರಾಗಕಥಾಶ್ರವಣ, ತನ್ಮನೋಹರಾಂಗನಿರೀಕ್ಷಣ, ಪೂರ್ವರತಾನುಸ್ಮರಣ**
**ವೃಷ್ಯೇಷ್ಟರಸ ಸ್ವಶರೀರಸಂಸ್ಕಾರ ತ್ಯಾಗಾಃ ಪಂಚ॥7/7॥**

**1. ಸ್ತ್ರೀ–ರಾಗ–ಕಥಾಶ್ರವಣ ತ್ಯಾಗ–** ಬ್ರಹ್ಮಚರ್ಯ ವೃತ ಧಾರಣೆ ಮಾಡುವ ಪುರುಷರು– ಸ್ತ್ರೀಯರ ರಾಗಪೂರ್ವಕ ಕಥೆಗಳನ್ನು ಕೇಳುವುದನ್ನು ತ್ಯಾಗ ಮಾಡಬೇಕು. ಒಂದು ಬೇಳೆ ಬ್ರಹ್ಮಚರ್ಯ ವೃತದ ಉತ್ತಮ ರೀತಿಯಲ್ಲಿ ಪಾಲನೆ ಮಾಡಬೇಕೆಂದರೆ ಅವರಿಗೆ ಸ್ತ್ರೀಯರಿಗೆ ಸಂಬಂಧಿಸಿದ ರಾಗವನ್ನು ಹೆಚ್ಚಿಸುವ ಕಥೆಗಳನ್ನು ಕೇಳಬಾರದು. ಇಂತಹ ಕಥೆಗಳು ಎಲ್ಲಿರುತ್ತವೆ? ಎಲ್ಲಿಯೋ ಯಾವುದೋ ಸ್ನೇಹಿತರ ಬಳಿ ಇರುತ್ತವೆ. ಅಥವಾ ದೂರದರ್ಶನ ನೋಡುತ್ತಿದ್ದರೆ ಈ ಪ್ರಕಾರದ ಕಥೆಗಳು ಅಲ್ಲಿ ಬರುತ್ತವೆ. ಯಾವುದಾದರೂ ಮ್ಯಾಗ್‌ಝೀನ್ ಪತ್ರಿಕೆ ಇತ್ಯಾದಿಗಳನ್ನು ಓದುತ್ತಿದ್ದರೆ ಅವುಗಳಲ್ಲಿಯೂ ಈ ರೀತಿಯ ಮಾತುಗಳು ಬರುತ್ತವೆ, ಪತ್ರಿಕೆಗಳಲ್ಲಿಯೂ ಸಹ ವಿವಿಧ. ರೀತಿಯ ಮಾತುಗಳು ಛಾಯಾಚಿತ್ರ ಮುಂತಾದವು ಬರಬಹುದು. ಆದ್ದರಿಂದ ಬ್ರಹ್ಮಚರ್ಯ ವ್ರತದ ರಕ್ಷಣೆಗಾಗಿ ಈ ವಿಷಯಗಳಲ್ಲಿ ದೂರವಿರಬೇಕು. ಪುರುಷರ ಬ್ರಹ್ಮಚರ್ಯದ ರಕ್ಷಣೆಗಾಗಿ ಈ ಸಂಗತಿಗಳಿಂದ ಸದಾಕಾಲ ದೂರವಿರಬೇಕು ಪುರುಷರು ಬ್ರಹ್ಮಚರ್ಯ ವ್ರತದ ಧಾರಣೆ ಮಾಡಿದರೆ ಸ್ತ್ರೀಯರಿಗೆ ಸಂಬಂಧಿಸಿದ, ಹಾಗೂ ಒಂದು ವೇಳೆ ಸ್ತ್ರೀಯರು ವ್ರತ ಧಾರಣೆ ಮಾಡಿದರೆ ಪುರುಷರಿಗೆ ಸಂಬಂಧಿಸಿದ ಈ ಕಾರಣಗಳಿಂದ ರಕ್ಷಿಸಿಕೊಳ್ಳಬೇಕು.

**2. ತನ್ಮನೋಹರಾಂಗ ನಿರೀಕ್ಷಣೆ ತ್ಯಾಗ–** ಸ್ತ್ರೀಯರ ಮನೋಹರ ಅಂಗಗಳನ್ನು ನೋಡುವುದು ಅಥವಾ ನೀರಿಕ್ಷಣೆ ಮಾಡುವುದು, ರಾಗ ಪೂರ್ವಕವಾಗಿ ಅವುಗಳನ್ನು ನೋಡುವುದನ್ನು ಸಹ ತ್ಯಾಗ ಮಾಡಬೇಕು. ನಮ್ಮ ತಾಯಿ, ಸಹೋದರೆ ಅಥವಾ ಮಗಳಂತೆ ಅವರನ್ನು ನೋಡಬೇಕು. ಇದರಿಂದ ವ್ರತವನ್ನು ಉತ್ತಮ ರೀತಿಯಿಂದ ನಮ್ಮ ಹೃದಯವನ್ನು ಪವಿತ್ರಗೊಳಿಸುತ್ತದೆ. ತಾವು ಪೌರಾಣಿಕ ಗ್ರಂಥಗಳನ್ನು ಓದುತ್ತೀರಿ ಅವುಗಳಲ್ಲಿ ರಾಮ–ಸೀತೆ–ಲಕ್ಷ್ಮಣರ ಜೀವನಕ್ಕೆ ಸಂಬಂಧಿಸಿದಂತೆ ಓದಿರಬಹುದು. ಕಾಡಿನಲ್ಲಿ ವನವಾಸದಲ್ಲಿದ್ದಾಗ ರಾಮ–ಸೀತೆ–ಲಕ್ಷ್ಮಣರ ಜೀವನಕ್ಕೆ ಸಂಬಂಧಿಸಿದಂತೆ ಓದಿರ ಬಹುದು. ಕಾಡಿನಲ್ಲಿ ವನವಾಸದಲ್ಲಿದ್ದಾಗ ರಾಮ–ಸೀತೆ–ಲಕ್ಷ್ಮಣರು ಇರುತ್ತಿದ್ದರು. ಲಕ್ಷ್ಮಣನು ಸೀತೆಯನ್ನು ಅತ್ತಿಗೆ ಎಂದು ಕರೆಯುತ್ತಿದ್ದನು. ಆತನು ಸೀತೆಯನ್ನು ಎಂದಿಗೂ ಕಣ್ಣೆತ್ತಿ ನೋಡಲಿಲ್ಲ. ಆತನ ದೃಷ್ಟಿ ಸದಾಕಾಲ ಸೀತೆಯ ಚರಣಗಳ ಮೇಲೆಯೇ ಇರುತ್ತಿದ್ದಿತು. ಎಂದಿಗೂ ಸ್ವಲ್ಪವೂ ಸಹ, ಯಾವುದೇ ಪ್ರಕಾರದ ದುರ್ಭಾವನೆ ಆಗದಿರಲಿ ಅಥವಾ ತಪ್ಪು ಆಗದಿರಲಿ ಹೀಗೆ ಲಕ್ಷ್ಮಣನು ಸದಾಕಾಲ ಗಮನವಿಟ್ಟು ಚರಣಗಳ ಕಡೆಗೆ ದೃಷ್ಟಿ ಹೊಂದಿರುತ್ತಿದ್ದನು. ಈ ಪ್ರಕಾರ ಧರ್ಮಾತ್ಮರು ನಮ್ರ ದೃಷ್ಟಿಯೊಂದಿಗೆ ವ್ಯವಹರಿಸುತ್ತಾರೆ. ಅತ್ತಿಗೆಯನ್ನು ತಾಯಿಯಂತೆ, ಅಣ್ಣನನ್ನು ತಂದೆಯಂತೆ ಭಾವಿಸುವ ವ್ಯವಹಾರವೇ ತುಂಬಾ ಒಳ್ಳೆಯದು. ಇದೇ ಆತ್ಮಶುದ್ಧಿಯ ಉಪಾಯವಾಗಿದೆ.

ವಿಚಾರ ಮಾಡಿ ನೋಡಿ ಒಂದು ವೇಳೆ ಸ್ತ್ರೀ ಪುರುಷರರು ಪರಸ್ಪರ ಮಾತನಾಡಿದರೆ ಲಕ್ಷ್ಮಣ–ಸೀತೆಯರಂತೆ ಮಾತನಾಡಬೇಕು. ಆಗ ವಿಕಾರವುಳ್ಳ ಭಾವನೆಗಳು ಒಳಗೆ ಬರುವುದೇ

ಇಲ್ಲ. ನಿಮಿತ್ತಗಳ ಪ್ರಭಾವ ಬೀಳುತ್ತದೆ. ಇದು ಸರಿ ಆದರೆ ಭಾವನೆಗಳು ಉತ್ತಮವಾಗಿದ್ದರೆ ಎಲ್ಲವೂ ಸರಿಯಾಗಿ ಸಾಗಬಲ್ಲದು.

ಭಾವನೆಗಳೇನೋ ಒಳ್ಳೆಯವುಗಳಿವೆ ಆದರೆ ನಿಮಿತ್ತಗಳ ಪ್ರಭಾವ ಉಂಟಾಗುತ್ತದೆ ಎಂದು ನಾವು ಒಪ್ಪುತ್ತೇವೆ ಇಲ್ಲವಾದಲ್ಲಿ ಅಳುವವರನ್ನು ಕಂಡಾಗ ಅಳು ಏಕೆ ಬರುತ್ತದೆ? ನಗುವವರನ್ನು ಕಂಡಾಗ ನಗು ಏಕೆ ಬರುತ್ತದೆ? ಹಾಗೆಯೇ ರಾಗಿ ಭಾವನೆಯುಳ್ಳವರನ್ನು ಕಂಡಾಗ ರಾಗ ಭಾವನೆ ಬರಬಹುದು, ವಿರಾಗಿಯನ್ನು ಕಂಡಾಗ ವೈರಾಗ್ಯ ಭಾವನೆಯು ಬರಬಹುದು. ಒಳ್ಳೆಯ ಭಾವಗಳದೂ ಫಲ ದೊರೆಯುತ್ತದೆ, ಹಾಗೂ ಕೆಟ್ಟ ಭಾವಗಳದೂ ಫಲ ದೊರೆಯುತ್ತದೆ. ವ್ಯಕ್ತಿ ಕೆಟ್ಟ ಭಾವಗಳೊಂದಿಗೆ ಪಾಪ ಕರ್ಮಗಳೊಂದಿಗೆ ಒಪ್ಪಂದವಾಗುತ್ತದೆ ದುರ್ಗತಿ ಹೊಂದುತ್ತಾನೆ ಹಾಗೂ ಒಳ್ಳೆಯ ಭಾವಗಳೊಂದಿಗೆ ಒಳ್ಳೆಯ ಸುಖವನ್ನು ಪಡೆದುಕೊಳ್ಳುತ್ತಾನೆ. ಆದ್ದರಿಂದ ಒಳ್ಳೆಯ ಭಾವಗಳಿಗಾಗಿ ಒಳ್ಳೆಯ ನಿಮಿತ್ತಗಳನ್ನು ಪಡೆಯಬೇಕು ಹಾಗೂ ಕೆಟ್ಟ ಭಾವಗಳಿಂದ ರಕ್ಷಿಸಿಕೊಳ್ಳಬೇಕು. ನಾವು ಭಾವನೆಗಳನ್ನು ಮಾಡಿದ ಹಾಗೇಯೇ ನಮ್ಮ ಜೀವನ ರೂಪಗೊಳ್ಳುತ್ತದೆ. ಯಾವ ನಿಮಿತ್ತಗಳು ಮಾಧ್ಯಮದಿಂದ ನಮ್ಮೊಳಗೆ ಏನಾದರೂ ಪರಿವರ್ತನೆ ಅಥವಾ ಏನಾದರೂ ಭಾವನೆಗಳು ಜಾಗೃತವಾದರೆ ಇದಕ್ಕೆ ಕಾರಣಗಳೇನು? ಎಂದು ಸ್ವತಃ ತಿಳಿಯಬಹುದು. ಆ ಕಾರಣಗಳನ್ನು ಬಿಟ್ಟಾಗಲೇ ಎಲ್ಲವೂ ವ್ಯವಸ್ಥಿತವಾಗುತ್ತದೆ. ನಮ್ಮ ವ್ರತಗಳು ಶುದ್ಧವಾಗಿರಬೇಕು. ಅವು ಅದೇ ರೀತಿಯಲ್ಲಿ ಆಗುತ್ತವೆ. ಈಗ ನಾವು ಬ್ರಹ್ಮಚರ್ಯ ವ್ರತದ ಎರಡನೆ ಭಾವನೆಯನ್ನು ತಿಳಿಯುತ್ತಿದ್ದೆವು. ಸ್ತ್ರೀಯರ ಶರೀರ ಇತ್ಯಾದಿಗಳನ್ನು ರಾಗ ಭಾವದಿಂದ ನೋಡಬಾರದು. ಈಗ

**3. ಪೂರ್ವ ರತಾನುಸ್ಮರಣೆ**–ಈ ಮೊದಲು ಭೋಗಿಸಿದ ಭೋಗಗಳನ್ನು ನೆನಪಿಗೆ ತಂದುಕೊಳ್ಳಬಾರದು. ವ್ರತವನ್ನು ಸ್ವೀಕರಿಸಿದ್ದರೆ ಭೋಗಗಳನ್ನು ಸ್ಮರಣೆಗೆ ತಂದುಕೊಳ್ಳಬಾರದು. ಒಂದು ವೇಳೆ ಏನಾದರೂ ಸ್ಮರಣೆಗೆ ಬಂದರೆ ಅವುಗಳನ್ನು ಯೋಗಜನ್ಯವೆನ್ನುತ್ತಾರೆ ಹಾಗೂ ಸ್ಮರಿಸಿದರೆ ಅದನ್ನು ಕಷಾಯಜನ್ಯವೆನ್ನುತ್ತಾರೆ. ಸ್ವಯಂ ಸ್ಮರಣೆಗೆ ಬರುವುದು ಯೋಗ ಮತ್ತೆ ಒತ್ತಾಯದಿಂದ ಸ್ಮರಿಸುವುದು ಕಷಾಯವೆನ್ನಲಾಗುತ್ತದೆ. ಯೋಗ ಜನ್ಯದಲ್ಲಿ ಕಡಿಮೆ ಆಸ್ರವವಾಗುತ್ತದೆ. ಹಾಗೂ ಕಷಾಯಜನ್ಯದಲ್ಲಿ ಹೆಚ್ಚು ಆಸ್ರವವಾಗುತ್ತದೆ. ಯೋಗಜನ್ಯ ಆಸ್ರವವನ್ನು ಸಹ ಬಿಡಬಹುದು. ಅಲ್ಲಿಯೂ ಸಹ ಒಳ್ಳೆಯ ಭಾವನೆಗಳ ಬಲದಿಂದ, ನಮ್ಮ ಮನಸ್ಸನ್ನು ಬದಲಾಯಿಸಿ ಒಳ್ಳೆಯ ಪ್ರಶಸ್ತ ಭಾವನೆಗಳನ್ನು ಹೊಂದುವುದರಿಂದ, ಹನ್ನೆರಡು ಭಾವನೆ ಮುಂತಾದವುಗಳ ಚಿಂತನೆ ಮಾಡುವುದರಿಂದ ಅಶುಭದ ಚಿಂತನೆಯು ಹೊರಟು ಹೋಗುತ್ತದೆ.

**4. ವೃಷ್ಟೇಷ್ಟರಸ**–ಗರಿಷ್ಠ ರಸಗಳನ್ನು ಸಹ ತ್ಯಾಗ ಮಾಡಬೇಕು. ಗರಿಷ್ಠ ರಸಗಳು ನಮ್ಮ ಮನಸ್ಸಿನ ಮೇಲೆ ಅಪಾರ ಪ್ರಭಾವ ಬೀರುತ್ತವೆ. ಬಹಳಷ್ಟು ಸಾರಿ ನಮಗೆ, ಹೆಚ್ಚು ಗರಿಷ್ಠ ವಸ್ತುವಿನ ಸೇವನೆ ಮಾಡಿದಾಗ ಮನಸ್ಸು ವಿಕೃತವಾಗುವುದರ ಅನುಭವಬಂದಿರಬೇಕು. ಬ್ರಹ್ಮಚರ್ಯ ವ್ರತದ ಸಾಧನೆ ಮಾಡುವ ಕೆಲವರಿಗೂ ಸಹ ಇದು ಅನುಭವದಲ್ಲಿ ಬಂದಿರಬೇಕು. ಸಾಧನೆಯ ಗುರಿ ಇಲ್ಲದವರಿಗೆ ಯಾವಾಗ ಮನಸ್ಸಿನಲ್ಲಿ ವಿಕಾರ ಬರುತ್ತದೆ. ಉತ್ತೇಜನ ಉಂಟಾಗುತ್ತದೆ ಎಂದು ಅನುಭವಕ್ಕೆ ಹೇಗೆ ಬಂದೀತು? ಆದ್ದರಿಂದ ಗರಿಷ್ಠ ರಸಗಳನ್ನು ತ್ಯಾಗ ಮಾಡಬೇಕು. ತಮ್ಮ ತಮ್ಮ ಪ್ರಕೃತಿಗೆ ತಕ್ಕಂತೆ ಬೇರೆ–ಬೇರೆ ವಸ್ತುಗಳು ಗರಿಷ್ಠವಾಗಬಹುದು ಆದರೂ ಸಾಮಾನ್ಯರೂಪದಿಂದ ಕೆಲವು ವಸ್ತುಗಳಂತೂ ಗರಿಷ್ಠವಾಗಿಯೇ ಇವೆ. ಕರಿದ ವಸ್ತುಗಳು, ಪಕ್ವಾನ್ನ, ಖೋವಾ, ಮಿಠಾಯಿಗಳು,

ಅನೇಕ ಪ್ರಕಾರದ ಶಕ್ತಿವರ್ಧಕ ವಸ್ತುಗಳು ಬಹುಶಃ ಗರಿಷ್ಠವಾಗಿರುತ್ತವೆ. ಅವುಗಳ ಸೇವನೆಯಿಂದ ಉತ್ತೇಜನ ಉಂಟಾಗಬಹುದು, ಭಾವಗಳಲ್ಲಿ ವಿಕೃತಿ ಉಂಟಾಗುವ ಸಂಭವ ಹೆಚ್ಚಾಗಿದೆ. ಈ ಕಾರಣಗಳಿಂದ ಇವುಗಳನ್ನೂ ಸಹ ತ್ಯಾಗ ಮಾಡಬೇಕು. ಉತ್ತಮ ರೀತಿಯಿಂದ ಬ್ರಹ್ಮಚರ್ಯ ವ್ರತದ ಪಾಲನೆ ಮಾಡಬೇಕೆಂದರೆ–ಇಲ್ಲವಾದಲ್ಲಿ ಜನರು ಸುಮ್ಮನೆ ವ್ರತ ತೆಗೆದುಕೊಳ್ಳುತ್ತಾರೆ ಆಗ ಏನನ್ನೂ ತ್ಯಾಗ ಮಾಡದಿದ್ದರೆ ಅಲ್ಲಿ ಬ್ರಹ್ಮಚರ್ಯ ವ್ರತದಲ್ಲಿ ಶುದ್ಧತೆ ಇರುವುದಿಲ್ಲ. ಕೇವಲ ಹೇಳುವುದರಿಂದ ಅಥವಾ ಹೆಸರಿಗಾಗಿ ಬ್ರಹ್ಮಚರ್ಯವಾಗುತ್ತದೆ. ಗರಿಷ್ಠ ರಸಗಳ ತ್ಯಾಗದೊಂದಿಗೇನೇ ಇಷ್ಟ ರಸಗಳನ್ನು ಸಹ ತ್ಯಾಗ ಮಾಡಬೇಕು. ನಮಗೆ ಹೆಚ್ಚು ಪ್ರಿಯವಾಗಿರುವವುಗಳೇ ಇಷ್ಟ ರಸಗಳಾಗಿರುತ್ತವೆ. ಅವುಗಳಿಲ್ಲದೇ ಭೋಜನ ರುಚಿಸುವುದಿಲ್ಲ. ಆ ರಸಗಳನ್ನು ಸಹ ತ್ಯಾಗ ಮಾಡಬೇಕು. ಆಗಲೇ ರಸನಾ ಇಂದ್ರಿಯದ ಮೇಲೆ ಹತೋಟಿ ಹೊಂದಬಹುದು. ಒಂದು ವೇಳೆ ಗರಿಷ್ಠ ಹಾಗೂ ಇಷ್ಟ ರಸಗಳನ್ನು ತ್ಯಾಗ ಮಾಡದಿದ್ದರೆ ರಸನಾ ರೂಪದ ಕಾಮ ಇಂದ್ರಿಯದ ಮೇಲೆಯೂ ನಿಯಂತ್ರಣ ಮಾಡಲಾಗದು. ಹಾಗೂ ಬ್ರಹ್ಮಚರ್ಯವನ್ನು ಪೂರ್ಣರೂಪದಲ್ಲಿ ಪಾಲನೆ ಮಾಡಲು ಸಾಧ್ಯವಾಗುವುದಿಲ್ಲ. ಒಂದು ವೇಳೆ ಯಾವುದೇ ಒಂದು ರಸದ ವಶಕ್ಕೆ ಒಳಗಾಗಿ ಬಿಟ್ಟರೆ ಬ್ರಹ್ಮಚರ್ಯ ವ್ರತವನ್ನು ಪೂರ್ಣರೂಪದಲ್ಲಿ ಮಾಡಲಾಗದು. ಆದ್ದರಿಂದ ಅತಿಪ್ರಿಯವಾದ ವಸ್ತುವನ್ನು ಯಾವಾಗಲೂ ಆಗದಿದ್ದರೆ ಆಗಾಗಿ ಅದನ್ನು ಸಹ ಬಿಟ್ಟು ನೋಡಬೇಕು, ಇದು ಸಾಧನೆಯಲ್ಲಿರುವ ಪ್ರತಿಲಯ ಅವಶ್ಯವಾಗಿ ಮಾಡಲೇ ಬೇಕು.

**5. ಸ್ವ–ಶರೀರ, ಸಂಸ್ಕಾರ,** ತ್ಯಾಗ–ಶರೀರದ ಸಂಸ್ಕಾರ ಅರ್ಥಾತ್ ಅಲಂಕಾರವನ್ನು ತ್ಯಾಗ ಮಾಡಬೇಕು. ಬ್ರಹ್ಮಚಾರಿಯು ಅತ್ತರ, ಎಣ್ಣೆ, ಮುಲಾಮು, ಪಾವಡರ ಮುಂತಾದವುಗಳಿಂದ ಅಲಂಕಾರ ಮಾಡಿಕೊಳ್ಳಬಾರದು. ಇದರಿಂದ ಸ್ವ–ಪರರ ಮನಸ್ಸಿನಲ್ಲಿ ಆಸಕ್ತಿ ಉಂಟಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಶಾರೀರಿಕ ಶೃಂಗಾರ ಮಾಡುವುದರಿಂದ ಮನ್ಮಥ ಅಥವಾ ಮಾನಸಿಕ ವಿಕಾರ ಉತ್ಪನ್ನವಾಗುತ್ತದೆ, ಇದರಲ್ಲಿ ಬ್ರಹ್ಮಚರ್ಯ ವ್ರತದ ಘಾತವಾಗುತ್ತದೆ. ಆದ್ದರಿಂದ ಸ್ವ ಶರೀರ ಸಂಸ್ಕಾರದ ತ್ಯಾಗ ಮಾಡಬೇಕು.

ಆತ್ಮನ ನಿರ್ಮಲ ಪರಿಣತಿಯ ಹೆಸರೇ ಬ್ರಹ್ಮಚರ್ಯ, ಬ್ರಹ್ಮಚರ್ಯದ ಸಾಧನೆಯನ್ನು ಕರ್ಮಗಳ ಸಂವರ ಹಾಗೂ ನಿರ್ಜರೆಗಾಗಿ ಮಾಡಲಾಗುತ್ತದೆ. ಪತೀತದಿಂದ ಪಾವನವಾಗುವ ಸಮಸ್ತ ಆತ್ಮಗಳು ಬ್ರಹ್ಮಚರ್ಯದ ಮಹತ್ವವನ್ನು ಸ್ವೀಕರಿಸಿದ್ದಾರೆ ಹಾಗೂ ಅದರ ಧಾರಣೆ ಮಾಡಿದ್ದಾರೆ. ಇದರಲ್ಲಿ ಅಪಾರ ಶಕ್ತಿ ಇದೆ. ಬ್ರಹ್ಮಚರ್ಯದ ಉತ್ಕೃಷ್ಟ ಸಾಧನೆಯ ಸುಅವಸರ ಕೇವಲ ಮನುಷ್ಯರಿಗೆ ಮಾತ್ರ ಇದೆ. ಯಾಕೆಂದರೆ ಅವರ ಬಳಿ ಬುದ್ಧಿ, ವಿವೇಕ, ಚಿಂತಿಸುವ ತಿಳಿಯುವ ಸಾಮರ್ಥ್ಯವಿದೆ, ಅವರು ವಾಸನಾ ದುಃಖದ ಕಾರಣ, ಮರೆವಿಗೂ ಕಾರಣವಾಗಿದೆ. ತಮ್ಮ ಶಕ್ತಿಯನ್ನು ಅಧೋಗಾಮಿನಿಯಾಗುವಂತೆ ಮಾಡಿ ವ್ಯರ್ಥವಾಗಿ ಹರಿದು ಹೋಗಿ ಅಲೆದಾಡುವಂತೆ ಮಾಡುತ್ತದೆಂದು ಅವರಿಗೆ ತಿಳಿದಿದೆ. ಹೃದಯವನ್ನು ಕಾಮವಾಸನೆಗಳ ಮನೆಯನ್ನಾಗಿ ಮಾಡಿದರೆ ಉತ್ತಮ ವೃತ್ತಿಗಳು ಅವರನ್ನು ಬಿಟ್ಟು ಬಿಡುತ್ತದೆ. ಆದ್ದರಿಂದ ಸ್ವಯಂವನ್ನು ಸಂಯಮದಿಂದಿಡಲು ಪ್ರತಿಯೊಬ್ಬ ವಿವೇಕ ಶೀಲ ಪ್ರಾಣಿಯು ಪ್ರಯತ್ನಿಸಬೇಕು. ಸಂಸಾರದ ಸಮಸ್ತ ಆದರ್ಶಗಳು ಬ್ರಹ್ಮಚರ್ಯದಲ್ಲಿಯೇ ಇರುತ್ತವೆ. ಬೆಂಕಿಯು ನೀರಾಗುವುದು, ಶೂಲೆಯು ಸಿಂಹಾಸನವಾಗುವುದು, ನಾಗವು ಹೂವಿನ ಹಾರವಾಗುವುದು. ಕಾಡಿನಲ್ಲಿ ದುಷ್ಟರಿಂದ ಬಿಡುಗಡೆ ಹೊಂದುವುದು ಇವೆಲ್ಲವೂ

ಬ್ರಹ್ಮಚರ್ಯದ ಅತಿಶಯಗಳಾಗಿವೆ. ಅಖಂಡ ಬ್ರಹ್ಮಚರ್ಯದ ಪಾಲನೆ ಮಾಡುವವರಿಗೆ ಅನೇಕ ತಪ ಹಾಗೂ ಋದ್ಧಿಗಳು ಪ್ರಾಪ್ತವಾಗುತ್ತವೆ. ಆದರೆ ಬ್ರಹ್ಮಚರ್ಯದ ಅಂತಿಮ ಫಲ ಮೋಕ್ಷ ಸುಖವೇ ಆಗಿದೆ. ಆದ್ದರಿಂದ ಬ್ರಹ್ಮಚರ್ಯದ ರಕ್ಷಣೆಗಾಗಿ ಮನ, ವಚನ, ಕಾಯಗಳ ಬಾಹ್ಯ ಚೇಷ್ಠೆಗಳನ್ನು ಬಿಟ್ಟು ಆಮೆಯಂತೆ ಸ್ವಯಂನಲ್ಲಿ ರಮಣ ಮಾಡುವುದು ಅತಿ ಆವಶ್ಯಕವಾಗಿದೆ.

ಸಾಮಾನ್ಯವಾಗಿ ಜನರು ಮನೆ–ಸಂಸಾರವನ್ನು ಬಿಟ್ಟ ನಂತರವೇ ಬ್ರಹ್ಮಚರ್ಯದ ಸಾಧನೆ ಮಾಡಲಾಗುತ್ತದೆಂದು ತಿಳಿದಿದ್ದಾರೆ. ಆದರೆ ಸಹೋದರರೇ ವಾಸ್ತವಿಕವಾಗಿ ಗೃಹತ್ಯಾಗಿ ಅವಸ್ಥೆಯಲ್ಲಿಯೇ ಮಹಾವ್ರತೀ ಹಾಗೂ ಹನ್ನೊಂದನೇ ಪ್ರತಿಮಾಧಾರಿಯ ಅವಸ್ಥೆಯಾಗಿದೆ. ಆದರೆ ಗೃಹಸ್ಥರು ಸಹ ಬ್ರಹ್ಮಚರ್ಯದ ಪಾಲನೆಯನ್ನ ಮಾಡಬಹುದು. ಅಲ್ಲಿಯೂ ಸಹ ಬ್ರಹ್ಮಚಾರಿಯ ಜೀವನವನ್ನು ನಡೆಸ ಬಹುದು. ಜೈನ ದರ್ಶನದಲ್ಲಿ ಗೃಹಸ್ಥನು ವಿವಾಹ ಮಾಡಿಕೊಂಡ ನಂತರವೇ ಗೃಹಸ್ಥಾವಸ್ಥೆಯಲ್ಲಿ ಪ್ರವೇಶ ಮಾಡುತ್ತಾನೆ. ಆದರೆ ಆತ ವಾಸನಾಗಳಲ್ಲಿ ಮುಳುಗುವುದಿಲ್ಲ. ಆತನ ವಿವಾಹದ ಉದ್ಧೇಶ ಧರ್ಮ, ಅರ್ಥ, ಮತ್ತು ಕಾಮ ಪುರುಷಾರ್ಥಗಳ ಸಮ್ಯಕ್ ರೂಪದಿಂದ ಪಾಲನೆ ಮಾಡುವುದಾಗಿರುತ್ತದೆ. ವಾಸ್ತವಿಕವಾಗಿ ವಿವಾಹವು ವಾಸನಾದ ನಿಯಂತ್ರಣವಾಗಿದೆ–ಕೇಂದ್ರಿಯ ಕರಣವಾಗಿದೆ. ತನ್ನ ಸ್ವಚ್ಛಂದ ಅಸಂಯಮದಿಂದ ಮೇಲೆ ನಿಯಂತ್ರಣ ಹೊಂದಿ ಸದ್ ಗೃಹಸ್ಥನಾಗುವುದೇ ವಿವಾಹದ ಪ್ರಮುಖ ಧ್ಯೇಯವಾಗಿದೆ. ಜೈನಧರ್ಮದಲ್ಲಿ ಸಾಮಾಜಿಕ ಮರ್ಯಾದೆ ಮತ್ತು ಸಂಬಂಧಗಳ ಪವಿತ್ರತೆಗಳನ್ನು ಸ್ಥಾಪಿತಗೊಳಿಸುವುದಕ್ಕಾಗಿ ವಿವಾಹದ ವ್ಯವಸ್ಥೆಯನ್ನು ಮಾಡಿದ್ದಾರೆ. ವಿವಾಹದ ನಂತರ ಪುರುಷನು ತನ್ನ ಪತ್ನಿಯನ್ನು ಹೊರತುಪಡಿಸಿ ಅನ್ಯ ಎಲ್ಲ ಸ್ತ್ರೀ ಯರನ್ನು ತಾಯಿ, ಸಹೋದರಿ, ಮಗಳ ಸಮಾನವೆಂದು ತಿಳಿಯಲಿ. ಅದೇ ಪತ್ನಿಯು ತನ್ನ ಪತಿಯ ಹೊರ್ತಾಗಿ ಬೇರೆ ಎಲ್ಲ ಪುರುಷರನ್ನು ತಂದೆ, ಸಹೋದರ ಹಾಗೂ ಮಕ್ಕಳಂತೆ ತಿಳಿಯಲಿ. ಆ ಪತಿ–ಪತ್ನಿಯರು ಹೀಗೆ ಜೀವನವನ್ನು ನಡೆಸಿ ಸಂಯಮದಿಂದ ಸಂತುಷ್ಟರಾಗಿರ ಬಹುದು. ಅವರು ಸ್ವ–ದಾರ ಸಂತೋಷ ವ್ರತ ಪಡೆದು ಸಂತುಷ್ಟರಾಗಿರಬಹುದು. ಆಚಾರ್ಯ ಉಮಾಸ್ವಾಮಿಗಳು ತತ್ವಾರ್ಥಸೂತ್ರದಲ್ಲಿ ಹೀಗೆ ಹೇಳುತ್ತಾ ಬ್ರಹ್ಮಚರ್ಯದ ಐದು ಅತಿಚಾರಗಳಿಂದ ರಹಿತರಾಗಿ ಪಾಲನೆ ಮಾಡಬೇಕೆಂದಿದ್ದಾರೆ. ಆ ಅತಿಚಾರಗಳು ಹೀಗಿವೆ–

**ಪರವಿವಾಹಕರಣೇತ್ವರಿಕಾಪರಿಗೃಹೀತಾಪರಿಗೃಹೀತಾಗ ಮನಾನಂಗಂಗ–ಕ್ರೀಡಾ ಕಾಮತೀವ್ರಾಭಿನಿವೇಶಾಃ॥7/28॥**

ಪರವಿವಾಹಕರಣ, ಇತ್ವರಿಕಾ ಪರಿಗೃಹೀತಾ ಗಮನ, ಇತ್ವರಿಕಾ ಅಪರೀಗೃಹಿತಾ ಗಮನ, ಅನಂಗಕ್ರೀಡಾ ಹಾಗೂ ಕಾಮ ತೀವ್ರಾಭಿ ನಿವೇಶ–ಇವೈದು ಸ್ವದಾರ ಸಂತೋಷ ವ್ರತ ಅಥವಾ ಬ್ರಹ್ಮಚರ್ಯಾಣುವ್ರತದ ಅತಿಚಾರಗಳಾಗಿವೆ. ಬೇರೆಯವರ ಮಗ–ಮಗಳ ವಿವಾಹ ಮಾಡಿಸುವುದು, ಮಾಡುವುದು, ಪರವಿವಾಹ ಕರಣ ಅತಿಚಾರವಾಗಿದೆ. ಪತಿ ಸಹಿತ ವ್ಯಭಿಚಾರಿಣಿ ಸ್ತ್ರೀಯರ ಬಳಿ ಬರುವುದು ಹೋಗುವುದು, ಕೊಡುವ–ಕೊಳ್ಳುವ ವ್ಯವಹಾರ, ರಾಗ, ದ್ವೇಷ ಪೂರ್ವಕ ವಾರ್ತಾಲಾಪ ಮಾಡುವುದು ಇತ್ವರಿಕಾ ಪರಿಗೃಹೀತಾಗಮನ ಅತಿಚಾರವಾಗಿದೆ. ಪತಿರಹಿತ ವ್ಯಭಿಚಾರಿಣಿ ಸ್ತ್ರೀಯರ(ವೇಶ್ಯೆ ಮುಂತಾದವರು, ಅನಾಥ ಸ್ತ್ರೀಯರು, ಕುಮಾರಿಯರು ಇತ್ಯಾದಿ) ಬಳಿ ಬರುವುದು–ಹೋಗುವುದು, ಕೊಡುವ, ಕೊಳ್ಳುವ ವ್ಯವಹಾರ ಹೊಂದಿರುವುದು, ಇತ್ವರಿಕಾ ಅಪರೀಗೃಹಿತಾ ಗಮನವೆಂಬ ಅತಿಚಾರವಾಗಿದೆ.ಅರ್ಥಾತ್ ಚಾರಿತ್ರಹೀನ ಸ್ತ್ರೀ–ಪುರುಷರ

ಸಂಗತಿಯಲ್ಲಿರುವುದು ಸಹ ಇದರಲ್ಲಿ ನಿಷಿದ್ಧವಾಗಿದೆ. ವಿಕೃತ ಮತ್ತು ಉಚ್ಛೃಂಬಲ ಯೌನಾಚಾರದಲ್ಲಿ ರುಚಿ ಹೊಂದುವುದು, ಅಪ್ರಾಕೃತಿಕ ಮೈಥುನ ಮಾಡುವುದು ಅನಂಗ ಕ್ರೀಡೆಯಾಗಿದೆ. ಕಾಮ ಸೇವನೆಯ ತೀವ್ರ ಅಭಿಲಾಷೆ–ಲಾಲಸೆ ಹೊಂದುವುದು, ನಿರಂತರ ಅದರದೇ ಚಿಂತನೆಯಲ್ಲಿರುವುದು. ಇದರ ಹೊತಾಗಿ ಅನ್ಯಕಾರ್ಯಗಳಲ್ಲಿ ರುಚಿ ಇಲ್ಲದಿರುವುದು ಕಾಮೋತ್ತೇಜಿಕ ನಿಮಿತ್ತಗಳ ಸಂಯೋಜನೆ ಮಾಡುವುದು ಕಾಮತ್ರೀವ್ರಾಭಿ ನಿವೇಶವಾಗಿದೆ. ಇವೈದು ಅತಿಗಳಿಂದ ಸ್ವದಾರ ಸಂತೋಷ ವ್ರತ ಅಥವಾ ಬ್ರಹ್ಮಚರ್ಯಾಣುವ್ರತದ ಧಾರಕರು ಬ್ರಹ್ಮಚರ್ಯವನ್ನು ಪಾಲಿಸುತ್ತಾರೆ. ಇದನ್ನು ಶೀಲವ್ರತವೆಂದೂ ಹೇಳುತ್ತಾರೆ. ಬ್ರಹ್ಮಚರ್ಯದೊಂದಿಗೆ ಪರಮಾರ್ಥ ಅರ್ಥಾತ್ ಮೋಕ್ಷದ ಸಂಬಂಧವಿದೆ. ಆದ್ದರಿಂದಲೇ ಉತ್ತಮ ಶಬ್ದವನ್ನು ಜೋಡಿಸಲಾಗಿದೆ.

ತಮ್ಮ ಶರೀರದ ಬಗ್ಗೆಯೂ ಯಾರ ಮನಸ್ಸು ನಿರ್ಮಮತ್ವ ಹೊಂದಿದೆಯೋ ಅವರೇ ನಿಜವಾಗಿಯೂ ಬ್ರಹ್ಮಚರ್ಯದ ಪಾಲನೆ ಮಾಡುತ್ತಾರೆ. ಸಮಸ್ತ ವಿಷಯ ವಾಸನೆಗಳು, ಭೋಗ ಸಾಮಗ್ರಿಗಳನ್ನು ತಿಲಾಂಜಲಿ ನೀಡಿ ಕ್ಷಮೆ, ಮಾರ್ದವ, ಆರ್ಜವ, ಶೌಚ, ಸತ್ಯ ಸಂಯಮ, ತಪ, ತ್ಯಾಗ ಮತ್ತು ಆಕಿಂಚನ್ಯ ಧರ್ಮಗಳ ಮತ್ತು ಅಹಿಂಸೆ, ಸತ್ಯ, ಅಚೌರ್ಯ ಮತ್ತು ಅಪರಿಗ್ರಹ ಮಹಾವ್ರತಗಳ ಸಮ್ಯಕ್ ಪಾಲನೆ ಮಾಡುತ್ತಾ ಐದೂ ಇಂದ್ರಿಯಗಳ ಮತ್ತು ಆರನೇಯದಾದ ಮನಸ್ಸಿನ ಮೇಲೆ ಪೂರ್ಣ ನಿಯಂತ್ರಣ ಮಾಡಿ ಸಮಸ್ತ ಬಾಹ್ಯ ಹಾಗೂ ಅಂತರಂಗ ವಿಷಯ ವಿಕಾರಗಳನ್ನು ತಡೆದು ಹಾಗೂ ತೆಗೆದುಹಾಕಿ ಹೊರಹಾಕುತ್ತಾರೋ ಅವರು ಉತ್ತಮ ಬ್ರಹ್ಮಚರ್ಯದ ಪಾಲನೆ ಮಾಡುತ್ತಾರೆ. ಇದನ್ನು ಮುನಿಗಳ ಉತ್ತಮ ಬ್ರಹ್ಮಚರ್ಯವೆನ್ನುತ್ತಾರೆ. ಗೃಹಸ್ಥರು ಗೃಹಸ್ಥರಾಗುವ ಮೊದಲಿನಿಂದಲೇ ಸಪ್ತವ್ಯಸನಗಳ ತ್ಯಾಗ ಮತ್ತು ಗೃಹಸ್ಥರಾದ ನಂತರ ಸ್ವದಾರ ಸಂತೋಷ ಮತ್ತು ಗೃಹಸ್ಥಾವಸ್ಥೆಯಲ್ಲಿ ಶ್ರಾವಕರ ಏಳನೇ ಪ್ರತಿಮೆಯನ್ನು ಧಾರಣೆ ಮಾಡಿ ತಮ್ಮ ವಿವಾಹಿತ ಸ್ತ್ರೀಯೊಂದಿಗೆ ರಮಿಸುವ ಇಚ್ಛೆಯ ಭಾವನೆಯನ್ನು ತ್ಯಾಗ ಮಾಡುವುದು, ಹಿಂದೆ ಭೋಗಿಸಿದ ಭೋಗಗಳನ್ನು ಮನ, ವಿಚಾರಗಳಲ್ಲಿ ತರದಿರುವುದು, ಹಾಗೂ ಸ್ತ್ರೀರಾಗ ಕಥೆಗಳಿಂದಲೂ ವಿರತರಾಗುವುದು ಸ್ಥೂಲ ಮಧ್ಯಮ ಬ್ರಹ್ಮಚರ್ಯವಾಗಿದೆ. ಇದು ಖಡ್ಗದ ಧಾರೆಯ ಮೇಲೆ ನಡೆಯುವಂತಹ ಕಾರ್ಯವಾಗಿದೆ. ಈ ವ್ರತದ ಪಾಲಕರು ತಮ್ಮ ಬ್ರಹ್ಮಚರ್ಯವನ್ನು ಶೀಲದ ಬೇಲಿಯಿಂದ ಬಂಧಿಸಿ ತಮ್ಮಷ್ಟಕ್ಕೇ ತಮ್ಮನ್ನು ಸುರಕ್ಷಿತವಾಗಿಟ್ಟು ಕೊಳ್ಳುತ್ತಾರೆ. ಯುವಾವಸ್ಥೆಯನ್ನು ಹೊಂದುವವರಿಗೆ ಅವರ ಪರಿಕ್ಷಾರ್ಥ ಸಮೀಪವಿರುವ ಅನೇಕ ಆಕರ್ಷಕ ಸಾಧನಗಳಿರುತ್ತವೆ. ಆದರೂ ಸಹ ಅವರು ಬ್ರಹ್ಮಚರ್ಯದ ಪೂರ್ಣಪಾಲನೆ ಮಾಡುತ್ತಾರೆ. ಅದನ್ನು ಅಸಿಧಾರಾ ವ್ರತವೆನ್ನುತ್ತಾರೆ. ಅನಗಾರ ಧರ್ಮಾಮೃತದ ನಾಲ್ಕನೇ ಅಧ್ಯಾಯ 99ನೇ ಶ್ಲೋಕದಲ್ಲಿ ಪಂ. ಆಶಾಧರರು ಹೀಗೆ ಹೇಳಿದ್ದಾರೆ–ಯೌವನ ರೂಪದ ದುರ್ಗಮ ವನದಲ್ಲಿ ವಿಹಾರ ಮಾಡುತ್ತಾ ಯುವಾವಸ್ಥೆಯಲ್ಲಿ ಸಂಯಮ ಧಾರಣೆ ಮಾಡುವ ಜನರಿಗೆ ಒಳ್ಳೆಯ ಶಿಕ್ಷಣ ನೀಡುತ್ತದೆ. ಅದು ವೃದ್ಧಾವಸ್ಥೆ ಇಲ್ಲದೇ ಸಹ ವೃದ್ಧರಂತೆ ಸನ್ಮಾನ ಪಡೆಯುತ್ತದೆ.

ಭಾರತದ ಭೂಮಿಯಲ್ಲಿ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲು ಯೋಗ್ಯವಾಗಿರುವ ಅನೇಕ ಅಂತಹ ಮಹಾಪುರುಷರು ಆಗಿ ಹೋಗಿದ್ದಾರೆ. ಒಂದು ದೃಷ್ಟಾಂತ ಅತ್ಯಂತ ಮಹತ್ವ ಪೂರ್ಣವಾಗಿದ್ದು ಅದರಿಂದ ವೈರಾಗ್ಯ ಹಾಗೂ ಬ್ರಹ್ಮಚರ್ಯದ ಬಹು ದೊಡ್ಡ ಶಿಕ್ಷಣವನ್ನು ಪಡೆಯ ಬಹುದಾಗಿದೆ.

ಒಬ್ಬ ಮಹಾನ್‌ಯೋಗಿ ಮುನೀಶ್ವರ ಆಗಾಗ ಕಾಡಿನಲ್ಲಿ. ಆಗಾಗ ಉಪವನಗಳಲ್ಲಿ ಆಗಾಗ ನಗರ ಮುಂತಾದ ಸ್ಥಾನಗಳಲ್ಲಿ ವಿಹಾರ ಮಾಡುತ್ತಾ ಒಂದು ನಗರವನ್ನು ತಲುಪಿದರು. ಅಲ್ಲಿ ಎಲ್ಲ ಜನರ ಬಹಳ ದಿನಗಳ ಪ್ರತೀಕ್ಷೆಯ ನಂತರ ಗುರು ದರ್ಶನದ ಲಾಭವಾಗಿದ್ದಿತು. ಎಲ್ಲ ಶ್ರಾವಕ ಜನರು ಬಹಳ ಒಳ್ಳೆಯ ರೀತಿಯಿಂದ ಅವರ ವಿನಯ ಅನುನಯ ಮಾಡಿದರು. ವೈಯ್ಯಾವೃತ್ತಿ ಮಾಡಿದರು, ಕೆಲವು ದಿನ ಅಲ್ಲಿ ಅವರು ತಂಗಿದ್ದರು. ಮಹಾರಾಜರ ಉಪದೇಶದ ಪ್ರಭಾವ ಉಂಟಾಯಿತು. ಆಗಾಗ ಕೆಲವೊಂದು ಜೀವಿಗಳು ತಮ್ಮ ಅಂತರಂಗದಲ್ಲಿ ಅಡಗಿರುವ ಶಕ್ತಿಗಳಿಗೆ ಕೆಲವು ನಿಮಿತ್ತಗಳ ಮಾಧ್ಯಮದಿಂದ ಜಾಗೃತಿ ಮಾಡಿಕೊಳ್ಳುವ ಜೀವಗಳು ಇರುತ್ತವೆ. ಆ ಆತ್ಮಗಳು ತಮಗೂ ಸಹ ಏನಾದರೂ ಜ್ಞಾನಗಳು ದೊರಕಲಿ ಹಾಗೂ ಆ ಜ್ಞಾನ ಜೀವನದಲ್ಲಿ ಇಳಿದರೆ ಹೇಳುವುದೇನಿದೆ ಎಂದೂ ಸಹ ವಿಚಾರ ಮಾಡುತ್ತವೆ. ಮಹಾರಾಜರ ಕೃಪೆ ಹಾಗೂ ಆಶೀರ್ವಾದವೇ ಇದರಲ್ಲಿ ನಿಮಿತ್ತವಾಗ ಬಲ್ಲವು. ಅವು ಮಹಾರಾಜರ ಬಳಿ ಬಂದು ಮಹಾರಾಜರೇ, ತಾವು ನಮಗೆ ತಮ್ಮಂತೆ ಜ್ಞಾನಿಗಳನ್ನಾಗಿ ಮಾಡಿಕೊಳ್ಳಿರಿ ಎಂದು ನಿವೇದಿಸಿಕೊಂಡರು. ನಮಗೆ ಯೋಗ್ಯವಾಗಿರುವ ಜ್ಞಾನವನ್ನು ನಮಗೆ ನೀಡಿರಿ. ನಾವು ನಿಮ್ಮ ಚರಣಗಳಲ್ಲಿ ಸಮರ್ಪಿತರಾಗುತ್ತೇವೆ. ಹೀಗೆ ವಿಚಾರ ಮಾಡುತ್ತಾ ಅವರು ಮಹಾರಾಜರ ಬಳಿಗೆ ಬಂದು ಗುರುದೇವರೇ, ತಮ್ಮ ಚರಣಗಳಲ್ಲಿ ಕೋಟಿ-ಕೋಟಿ ನಮೋಸ್ತುಗಳು ಅರ್ಪಿತವಾಗಿವೆ, ತಾವು ನಮಗೆ ತಮ್ಮ ಹಾಗೇ ಮಾಡಿಕೊಳ್ಳಿರಿ, ನಮಗೂ ಸಹ ಸ್ವಲ್ಪ ಜ್ಞಾನ ನೀಡಿರಿ ಎಂದು ಹೇಳಿದರು.

ಗುರುದೇವರು ಅವಶ್ಯವಾಗಿ ಈ ಕಾರ್ಯ ಆಗಬಲ್ಲದು ಎಂದು ಹೇಳಿದರು. ನಿಮ್ಮ ಗಂಭೀರತೆ, ವಿನಯ ಶೀಲತೆಯ ಅನವರತ ಪ್ರವೃತ್ತಿ ನಿಮ್ಮ ಜೀವನವನ್ನು ಬಹಳ ದೊಡ್ಡದನ್ನಾಗಿ ಮಾಡುತ್ತದೆ. ಆದರೆ ಒಂದು ವೇಳೆ ನಿಮ್ಮ ತಾಯಿ-ತಂದೆಗಳ ಆಜ್ಞೆ ದೊರಕಿದರೆ. ಅವರ ಸಹಯೋಗ ನಿಮಗೆ ದೊರೆತರೆ ಈ ಕಾರ್ಯ ಸಫಲವಾಗುತ್ತದೆಂದು ಹೇಳಿದರು. ಮಹಾರಾಜರೇ, ಸರಿಯಾಗಿದೆ. ಸಾಕು ನಾವು ಅವಶ್ಯವಾಗಿ ತಾಯಿ-ತಂದೆಗಳ ಸಮಕ್ಷ ನಮ್ಮ ಆಂತರಿಕ ಭಾವನೆಗಳನ್ನು ವ್ಯಕ್ತಮಾಡುತ್ತೇವೆ. ಅವರು ತಾಯಿ, ತಂದೆಗಳ ಬಳಿ ತೆರಳಿದರು. ಹಾಗೂ ನಮಗೆ ಈ ಪ್ರಕಾರದ ಮನೋಭಾವ ಆಗುತ್ತಲಿದೆ. ನಾವು ಮುನಿರಾಜರಿಂದ ಜ್ಞಾನ ಪಡೆಯಲು ಅವರಿಂದ ಶಿಕ್ಷಣ ಪಡೆಯ ಬೇಕಾಗಿದೆ ಎಂದು ಹೇಳಿದರು. ತಾಯಿ-ತಂದೆಗಳು ಮಕ್ಕಳ ಮಾತುಗಳನ್ನು ಕೇಳಿದರು ಹಾಗೂ ಮತ್ತೇ ಮಕ್ಕಳೇ ಬಹಳ ಚೆನ್ನಾಗಿದೆ ಹೋಗಿರಿ ಅವಶ್ಯವಾಗಿ ಹೋಗಿ ಎಂದು ಹೇಳಿದರು. ಸಂಪನ್ನ ಕುಟುಂಬವಿದೆ, ಯಾವುದೇ ಪ್ರಕಾರದ ಯಾವ ಕೊರತೆಯೂ ಇಲ್ಲ ಇಲ್ಲಿ ಎಲ್ಲವೂ ಇದೆ, ನೀವು ಹೋಗ ಬಯಸುತ್ತಿರಾ ಎಂದಾಗ ಹೊರಟು ಹೋಗಿ ಎಂದು ಹೇಳಿದರು. ಆದರೆ ಮಕ್ಕಳೇ ನಮಗೆ ನಿಮ್ಮಲ್ಲಿ ಅಪಾರವಾದ ಮೋಹವಿದೆ. ಅಲ್ಲಿ ಹೋಗಿ ನೀವು ದೀಕ್ಷೆ ಪಡೆದು ಬಿಟ್ಟಿರಾ ಅಲ್ಲಿಯೇ ಇದ್ದು ಬಿಟ್ಟಿರಾ, ಮಕ್ಕಳೇ ಅವಶ್ಯವಾಗಿ ಹಿಂದಿರುಗ ಬೇಕು ನಾವು ನಿಮ್ಮ ದಾರಿಯನ್ನೇ ನೋಡುತ್ತಿರುತ್ತೇವೆ. ಹೌದು ಅಮ್ಮಾ-ಅಪ್ಪಂದಿರೇ ನಾವು ಅವಶ್ಯವಾಗಿ ಹಿಂದಿರುಗುತ್ತೇವೆ ನಿಮಗೆ ಏನೂ ಕೇಳದೇ ಏನನ್ನೂ ಮಾಡುವುದಿಲ್ಲವೆಂದರು. ತಾವು ಈಗ ಹೇಳಿಯೂ ಆಗಿದೆ ಇಲ್ಲವಾಗಿದ್ದರೆ ನಮ್ಮ ಇನ್ನೂ ಭಾವದ ಧರ್ಮ ಮಾರ್ಗದ ಮೇಲೆ ಸಾಗಿ ಮುಂದೆ ಹೋಗುತ್ತಿದ್ದೆವು. ಇಲ್ಲ ಮಕ್ಕಳೇ, ಜ್ಞಾನ ಪಡೆದು ಮನೆಗೆ ಬನ್ನಿ ಮತ್ತೆ ಬೇಕಾದರೆ ಮುಂದೆ ಸಾಗಬಹುದು. ಸರಿಯಾಗಿದೆ, ಯಾವ

ಮಾತುಗಳಲ್ಲಿ ನಾವು ಅವಶ್ಯವಾಗಿ ಬರುತ್ತವೆ. ಆಜ್ಞೆ ದೊರಕಿತು. ತಾಯಿ ತಂದೆಗಳಿಂದ ಅವರು ಗುರುದೇವರ ಜೊತೆಗೆ ಹೊರಟರು. ಮಹಾರಾಜರು ಮೊದಲೇ 'ನೋಡಿ ನಮ್ಮ ಬಳಿ ಇರಲು ನಿಮಗೆ ನಿಮ್ಮ ವೇಶಭೂಷಣಗಳಲ್ಲಿ ಪರಿವರ್ತನೆ ಮಾಡಬೇಕಾಗುತ್ತದೆ ಎಂದಾಗ ಅವರು ಬಿಳಿ ಉಡುಪನ್ನು ಧರಿಸಿದರು, ಕೂದಲನ್ನು ಕತ್ತರಿಸಿಕೊಂಡರು. ಯಾಕೆಂದರೆ ಯಾರಿಗೆ ಆಗಲಿ ರಾಗಕ್ಕೆ ಕಾರಣವಾಗಬಾರದು ಈ ಮಾತಿನ ಕಡೆಗೆ ಗಮನ ನೀಡಬೇಕಾಗುತ್ತದೆ. ತಮ್ಮನ್ನು ಸಹ ಸ್ವಯಂ ರಾಗ ಮಾಡಬಾರದು ಹಾಗೂ ಬೇರೆಯವರದೂ ಸಹ ನಮ್ಮ ಮೇಲೆ ಪ್ರಭಾವ ಬೀಳಬಾರದು.

ಎಲ್ಲೇಡೆ ವಿಹಾರ ಮಾಡುತ್ತಾ ಚಾತುರ್ಮಾಸ ಇತ್ಯಾದಿಗಳಲ್ಲಿ ನಿಮಮಿತರೂಪದಿಂದ ಮುನಿರಾಜರು ಶಿಕ್ಷಣ ನೀಡಲು ಪ್ರಾರಂಭಿಸಿದರು. ಕ್ರಮವಾಗಿ ಪ್ರಥಮಂ–ಕರಣಂ–ಚರಣಂ–ದ್ರವ್ಯಂ ನಮಃ ಶಾಸ್ತ್ರಾಭ್ಯಾಸೋ ಅರ್ಥಾತ್ ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ, ದ್ರವ್ಯಾನುಯೋಗಗಳ ಸ್ವಾಧ್ಯಾಯ ಮಾಡುತ್ತಾ ಜ್ಞಾನಾಭ್ಯಾಸ ಸಾಗುತ್ತಿದ್ದಿತು. ಅವರು ಗುರು ಮಹಾರಾಜರ ಸೇವೆ, ವೈಯ್ಯಾವೃತ್ತಿ ಮಾಡುತ್ತಾ ಜ್ಞಾನಾಭ್ಯಾಸ ಸಾಗುತ್ತಿದ್ದಿತು. ಅವರು ಗುರುಮಹಾರಾಜರ ಸೇವೆ, ವೈಯ್ಯವೃತ್ತಿ ಮಾಡುತ್ತಾ ತಮ್ಮನ್ನು ಧರ್ಮಸಂಸ್ಕಾರಗಳಿಂದ ಕೂಡಿರುವಂತೆ ಸತತ ಪ್ರಯತ್ನ ಮಾಡುತ್ತಾ ಇತರ ಶಿಕ್ಷಣವನ್ನು ಪಡೆಯುತ್ತಲೇ ಇದ್ದರು. ನಾಲ್ಕು ಅನುಯೋಗಗಳ ಜ್ಞಾನ ಪಡೆಯುವಲ್ಲಿ ಅನೇಕ ವರ್ಷಗಳು ಕಳೆದವು. ಸ್ವಾದ್ಯಾಯ ಪೂರ್ಣವಾದಾಗ ಮಹಾರಾಜರು ಒಂದು ದಿನ–ನೋಡಿ ನಿಮಗಾಗಿ ಈ ಅವಸ್ಥೆಯಲ್ಲಿ ನೀಡಬೇಕಾದ ಯೋಗ್ಯ ಜ್ಞಾನವನ್ನು ನೀಡಲಾಗಿದೆ. ಈಗ ಇದಕ್ಕಿಂತ ಮುಂದಿನ ಜ್ಞಾನ ಬೇಕಾದಲ್ಲಿ ಮುನಿಯಾಗ ಬೇಕಾಗುತ್ತದೆ ಯಾಕೆಂದರೆ ಸಿದ್ಧಾಂತ ಗ್ರಂಥಗಳನ್ನು ಓದಲು ಭಾವ ಶುದ್ಧಿಯೊಳಗೆ ಮಹಾವ್ರತಿತ್ವ ಇರಬೇಕು, ಮಹಾವ್ರತ ಇರದಿದ್ದರೆ ಅವುಗಳನ್ನು ಓದಲು ಆಗುವುದಿಲ್ಲ ನೀವು ಓದಬೇಕೆನಿಸಿದರೆ ಮುನಿಯಾಗಬೇಕು–ಎಂದು ಹೇಳಿದರು. ಸರಿ, ಮಹಾರಾಜರೇ ನಿಮ್ಮ ಆಶೀರ್ವಾದವಿದ್ದರೆ ಮುನಿಯಾಗಿ ಈ ಶಾಸ್ತ್ರಗಳ ಜ್ಞಾನವನ್ನು ಪಡೆಯಬಲ್ಲೆವು ಅಂತಹ ಶಕ್ತಿಯನ್ನು ನೀಡಿರಿ, ಹಾಗಾದರೆ ಸರಿ; ನಿಮ್ಮ ತಾಯಿ–ತಂದೆಗಳು ಎಷ್ಟು ಆಜ್ಞೆ ನೀಡಿದ್ದರು, ಈಗ ಏನು ಮಾಡಬೇಕು? ಎಂದು ಯೋಚಿಸಿರಿ.

ಆಗಲಿ ಮಹಾರಾಜರೇ, ಸಾಕು; ಅವರು ಸ್ವಾಧ್ಯಾಯವನ್ನು ಪೂರ್ಣಗೊಳಿಸಿ ಜ್ಞಾನಾರ್ಜನೆ ಮಾಡಿಕೊಂಡು ನಂತರ ಮನೆಗೆ ಬನ್ನಿ ಎಂದೇ ಅವರು ಹೇಳಿದ್ದರು. ಆದ್ದರಿಂದ ಗುರುದೇವರೇ ಸರಿಯಾಗಿದೆ, ಮನೆಯ ಕಡೆಗೆ ಹೊರಡುತ್ತೇವೆ, ತಮ್ಮ ಆಶೀರ್ವಾದವಿದ್ದರೆ ಬೇಗನೇ ಮತ್ತೆ ತಮ್ಮ ಚರಣಗಳಲ್ಲಿ ಬಂದು ಮಹಾವ್ರತ ಧಾರಣೆ ಮಾಡುತ್ತೇವೆ. ಇಷ್ಟು ಹೇಳಿ ನಮೋಸ್ತು ಮಾಡಿದರು ಹಾಗೂ ಅವರು ಹೊರಡತೊಡಗಿದರು. ಆಗ ಮಹಾರಾಜರು ಅರೇ, ಅರೇ. ಹಾಗೆಯೇ ಹೊರಟು ಬಿಟ್ಟಿರಾ, ಇಷ್ಟು ದಿನಗಳ ಕಾಲ ಓದಿಸಿದೆವು, ಸ್ವಾದ್ಯಾಯ ಮಾಡಿಸಿದೆವು, ಇಷ್ಟೊಂದು ಸಮಯ ನೀಡಿದೆವು ಹಾಗೂ ನೀವು ಗುರುದಕ್ಷಿಣೆ ಕೊಡದೇ ಹೊರಟಿದ್ದಿರಲ್ಲಾ? ಎಂದು ಕೇಳಿದರು. ಗುರುದಕ್ಷಿಣೆ; ಅವರು ಬಹಳ ಆಶ್ಚರ್ಯದಿಂದ ಹೇ ಗುರುದೇವರೇ ನಿಮಗೆಂತಹ ಗುರುದಕ್ಷಿಣೆ ನೀಡುವುದು, ತಾವಂತೂ ಪರಮ ನಿರ್ಗ್ರಂಥರಾಗಿದ್ದೀರಿ. ತಾವೇನು ಸ್ವೀಕರಿಸುತ್ತೀರಿ? ತಾವು ದುಡ್ಡು–ಕಾಸು ಇತ್ಯಾದಿಗಳನ್ನು ಹೊಂದುವುದಿಲ್ಲ. ನಾವು ನಿಮಗೆ ಏನು ಗುರುದಕ್ಷಿಣೆ ನೀಡಬಲ್ಲೆವು?

ಅವರ ಮಾತುಗಳನ್ನು ಕೇಳಿದ ಮಹಾರಾಜರು, ಅರೆ! ಯಾರು ಹೇಗೆ ಇರುತ್ತಾರೆ ಅವರಿಗನುಸಾರವಾಗಿ ಅಂತಹ ವ್ಯವಹಾರವನ್ನೇ ಮಾಡಲಾಗುತ್ತದೆ ಎಂಬುದನ್ನು ನೀವು ತಿಳಿಯಲಿಲ್ಲವೇ? ಗುರು ನಿರ್ಗ್ರಂಥರಾಗಿದ್ದರೆ ಅವರಿಗೆ ನೀವು ಯಾವ ಗುರುದಕ್ಷಿಣೆ ನೀಡಬೇಕು? ಯಾವುದಾದರೂ ನಿಯಮ-ಸಂಯಮವೇ ಗುರುದಕ್ಷಿಣೆಯಾಗುತ್ತದೆ. ಹಾಗಾ ಗುರುಗಳೇ ಹಾಗಾದರೆ ಯಾವುದಾದರೂ ನಿಯಮ-ಸಂಯಮ ನೀಡಿರಿ, ಎಲ್ಲರಿಗೂ ಸ್ವೀಕಾರವಿದೆ. ನಾವು ವಿಧಿಯಾನುಸಾರ ಅವುಗಳ ಪಾಲನೆಯನ್ನು ಅವಶ್ಯವಾಗಿ ಮಾಡುತ್ತೇವೆ. ಇಲ್ಲ ನಿಯಮ-ಸಂಯಮಗಳನ್ನು ನಿಮ್ಮ ಶಕ್ತಿ ನೋಡಿಕೊಂಡು ತೆಗೆದುಕೊಳ್ಳಬೇಕು, ನಿಮಗೆ ಎಷ್ಟು ಶಕ್ತಿ ಇದೆ, ಅಷ್ಟೇ ನಿಯಮ ತೆಗೆದುಕೊಳ್ಳಿ. ಸರಿ, ಮಹಾರಾಜರೇ, ಒಂದು ವ್ರತ ತೆಗೆದುಕೊಳ್ಳುತ್ತೇವೆ ಅದೆಂದರೆ ನಾವು ಆಜೀವನ(ಜೀವನ ಪರ್ಯಂತ)ವರೆಗೆ ಶುಕ್ಲ ಪಕ್ಷದಲ್ಲಿ ಬ್ರಹ್ಮಚರ್ಯ ವ್ರತದ ಪಾಲನೆ ಮಾಡುತ್ತೇವೆ. ಸರಿ ನಮ್ಮ ಆಶೀರ್ವಾದವಿದೆ ಹೀಗೆ ಧರ್ಮ ಸಂಸ್ಕಾರಗಳಿಂದ ಕೂಡಿದ ಶಿಕ್ಷಣ ಪಡೆದು ಅವರು ಮನೆಯ ಕಡೆ ಹೊರಟರು.

ಮನೆಗೆ ಬರುವ ಸಮಾಚಾರವನ್ನು ತಿಳಿಸಲಾಯಿತು. ಅವರು ಮನೆಯ ಕಡೆಗೆ ಹೊರಟರು ಅವರು ಮನೆಗೆ ಬಂದಾಗ ಎಲ್ಲರೂ ಅವರನ್ನು ಸ್ವಾಗತಿಸಿದರು. ಮನೆಯಲ್ಲಿ ಪ್ರಸನ್ನತೆಯ ವಾತಾವರಣ ಹರಡಿತು. ಮುನಿರಾಜರ ಬಳಿ ಕಲಿತ ಧರ್ಮಧ್ಯಾನ ಹಾಗೂ ಆ ಎಲ್ಲ ನಿಯಮಗಳನ್ನು ಪಾಲನೆ ಮಾಡುತ್ತಾ ಧರ್ಮಧ್ಯಾನದಲ್ಲಿ ತಮ್ಮ ನಿಯಮಿತ ದಿನಚರ್ಯೆಯಲ್ಲಿ ಕಳೆಯ ತೊಡಗಿದರು. ಶ್ರಾವಕರ ಷಟ್ ಕರ್ಮಗಳನ್ನು ಪಾಲಿಸಿದರು. ಶಾಸ್ತ್ರ, ಸ್ವಾಧ್ಯಾಯ ಇತ್ಯಾದಿಗಳಿಂದ ಜನರು ಧರ್ಮ ಧ್ಯಾನ ಕಲಿಯುತ್ತಾರೆ. ಜ್ಞಾನಾರ್ಜನೆಯಲ್ಲಿ ಅಭಿವೃದ್ಧಿ ಹೊಂದಿದರು ಬಹಳಷ್ಟು ಜನರು ಜ್ಞಾನಿಗಳಾಗುತ್ತಿದ್ದರು. ಬಹಳ ಚೆನ್ನಾಗಿ ಸಮಾಜದ ಕಲ್ಯಾಣವಾಗುತ್ತಲಿದ್ದಿತು.

ಹೀಗೆಯೇ ಇನ್ನೊಂದು ನಗರದಲ್ಲಿ ಒಂದು ಸಮಯ ಜ್ಞಾನಿ ಆರ್ಯಿಕೆಯರು ಸಸಂಘ ಆಗಮನವಾಯಿತು. ಅವರ ಸಾಧನೆ ಮತ್ತು ಉಪದೇಶಗಳಿಂದ ಬಹಳ ಜನರು ಪ್ರಭಾವಿತರಾದರು. ಅನೇಕ ಜನರು ವ್ರತ-ನಿಯಮ-ಸಂಯಮ ಧಾರಣೆ ಮಾಡಿದರು. ಇಲ್ಲಿ ಒಬ್ಬ ಕನ್ಯೆಯ ಮನಸ್ಸಿನಲ್ಲಿ ತಾನು ಸಹ ಅರ್ಯಿಕೆಯರಂತೆ ಜ್ಞಾನ ಪಡೆದು ತನ್ನ ಭಾವನೆಯನ್ನು ಆರ್ಯಿಕೆಯರ ಶ್ರೀ ಚರಣಗಳಲ್ಲಿ ನಿವೇದಿಸಿಕೊಳ್ಳುತ್ತಾ-ಮಾತಾಜಿ ತಾವು ನನಗೆ ತಮ್ಮಂತೆ ಮಾಡಿಕೊಳ್ಳಿ, ಕಡಿಮೆ ಎಂದರೂ ಜ್ಞಾನದ ಕ್ಷೇತ್ರದಲ್ಲಿ ನನಗೆ ಆಶೀರ್ವಾದ ಮಾಡಿರಿ ಎಂದು ಹೇಳಿದರು. ಆರ್ಯಿಕೆಯರು-ಸರಿ ಜ್ಞಾನವನ್ನು ಅವಶ್ಯವಾಗಿ ನೀಡುತ್ತೇವೆ, ಆದರೆ ಮೊದಲು ನಿಮ್ಮ ತಾಯಿ-ತಂದೆಗಳಿಂದ ಆಜ್ಞೆ ಪಡೆದು ಬನ್ನಿ, ಎಂದು ಹೇಳಿದರು. ತಾಯಿ-ತಂದೆಗಳಿಂದ ಆಜ್ಞೆ ದೊರೆತ ನಂತರ ಆ ಕನ್ಯೆಯು ಆರ್ಯಿಕೆಯರ ಜೊತೆಯಲ್ಲಿ ಇರತೊಡಗಿದರು. ಆರ್ಯಿಕೆಯರು ಮೊದಲು ಶಿಕ್ಷಣ ನೀಡುತ್ತಾ ಸಂಘದಲ್ಲಿ ಮರ್ಯಾದೆಯಿಂದ ಸರಳವಾಗಿ ಇರುವುದನ್ನು ಹಾಗೂ ಯಾರಿಗೂ ರಾಗ ಉತ್ಪನ್ನವಾಗದಂತೆ ಹಾಗೂ ಸ್ವಯಂ ಸಹ ರಾಗ ಮಾಡದಂತೆ ಧವಲ ವಸ್ತ್ರ ಧಾರಣೆ ಮಾಡುವಂತೆ ಹೇಳಿದರು ಸ್ವಾದ್ಯಾಯ ಪ್ರಾರಂಭವಾಯಿತು ಕ್ರಮದಿಂದ ಕೆಲವೇ ವರ್ಷಗಳಲ್ಲಿ ಶಿಕ್ಷಣ ಪಡೆದರು. ಧರ್ಮದ ಸಂಸ್ಕಾರ ಪಡೆದು ಅಂತಿಮವಾಗಿ ಗುರುದಕ್ಷಿಣೆಯ ರೂಪದಲ್ಲಿ ಆರ್ಯಿಕೆಯರಿಂದ ಆಜೀವನದವರೆಗೆ ಕೃಷ್ಣ ಪಕ್ಷದಲ್ಲಿ ಬ್ರಹ್ಮಚರ್ಯ ವ್ರತದ ಪಾಲನೆ ಮಾಡುವ ನಿಯಮ ಪಡೆದರು.

ಆರ್ಯಿಕೆಯರು, ನೋಡು ನಿಮ್ಮ ಪರೀಕ್ಷೆಯೂ ಆಗುತ್ತದೆ ಎಂದು ಹೇಳಿದರು. ಆರ್ಯಿಕೆಯರಿಂದ ಆ ಕನ್ಯೆಯು–ಮಾತಾಜಿ ನಾನು ನನ್ನ ವ್ರತದಲ್ಲಿ ದೃಢವಾಗಿರುತ್ತೆನೆ. ವ್ರತದ ಪಾಲನೆಯನ್ನು ಪ್ರತಿಯೊಂದು ಪರಿಸ್ಥಿತಿಯಲ್ಲಿ ಆಚರಿಸುತ್ತೇನೆ–ಎಂದು ಹೇಳಿದರು. ಒಳ್ಳೆಯದು ವ್ರತದಲ್ಲಿ ದೃಢತೆ ಇರಲಿ, ಆರ್ಯಿಕೆಯರ ಆಶೀವಾದವನ್ನು ಪಡೆದು ಆ ಕನ್ಯೆಯು ತಮ್ಮ ಮನೆಗೆ ಬಂದರು.

ಯೌವನಾವಸ್ಥೆ ಇದ್ದಿತು, ಆದ್ದರಿಂದ ವಿವಾಹದ ಸಂಯೋಗಕ್ಕಾಗಿ ಮನೆಯ ಜನರು ಚಿಂತನೆ ನಡೆಸಿದರು. ಅವರಿಬ್ಬರೂ ಬೇರೆ–ಬೇರೆ ನಗರಗಳಲ್ಲಿ ವಾಸಿಸುತ್ತಿದ್ದರು. ಇಬ್ಬರ ಮನಸ್ಸಿನಲ್ಲಿ ಪೂರ್ಣ ಪಾಪಗಳಿಂದ ಪೂರ್ಣವಾಗಿ ಅಲಿಪ್ತರಾಗಿರಬೇಕು ಮತ್ತು ಮೋಕ್ಷ ಮಾರ್ಗದಲ್ಲಿ ಸಾಗಬೇಕು, ಆದರೆ ಏನು ಮಾಡುವುದು ತಾಯಿ–ತಂದೆ, ಬಂಧು ಬಳಗ ಒಪ್ಪುವುದಿಲ್ಲ ಸರಿ ಎಷ್ಟು ವ್ರತ ತೆಗೆದುಕೊಂಡಿದೆ ಅಷ್ಟನ್ನಾದರೂ ನಾವು ಪಾಲಿಸಿಯೇ ಪಾಲಿಸುತ್ತೇವೆ, ಒಂದು ವೇಳೆ ಜೀವನದಲ್ಲಿ ಅವಕಾಶ ಸಿಕ್ಕರೆ ಪೂರ್ಣ ರೂಪದಿಂದ ವಿರಕ್ತರಾಗಬಹುದು ಎಂಬ ಭಾವನೆಗಳನ್ನು ಭಾವಿಸಿದರು, ಇಬ್ಬರಿಗೂ ಪರಸ್ಪರ ಪರಿಚಯವೂ ಇರಲಿಲ್ಲ, ಸಂಯೋಗದಿಂದ ಇಬ್ಬರ ಪರಿವಾರದ ಜನರು ವಿವಾಹಕ್ಕೆ ಯೋಗ್ಯ ಕಾರ್ಯಗಳನ್ನು ಪ್ರಾರಂಭಿಸಿದರು. ಜನ್ಮ ಕುಂಡಲಿಗಳನ್ನು ಪರಿಶೀಲಿಸಿದರು ಗುಣಗಳನ್ನು ಸೇರಿಸಿ ನೋಡಿದರು. (ನಿಮಗೆ ತಿಳಿದಿರಬೇಕು. ಎಲ್ಲರ ಗುಣಗಳನ್ನು ಸೇರಿಸಲಾಗುತ್ತದೆ; ಯಾಕೆಂದರೆ ಗುಣಗಳು ಏಕಸಮಾನವಾಗಿ ಸೇರಿದರೆ ಯಾರೂ ಒಂದು ಹೇಳಿದರೆ ಅದನ್ನು ಇನ್ನೊಬ್ಬರು ಸ್ವೀಕರಿಸುತ್ತಾರೆ. ಅದನ್ನೇ ಹಾಗೇ ಸಾಮಂಜಸ್ಯವೆಂದು ತಿಳಿದು ನಡೆಯುತ್ತಾರೆ. ಪರಸ್ಪರರ ಮನೋಭಾವ ಸಾದೃಶ್ಯವಾಗಿರಲಿ, ನಮ್ಮ ಜೈನಧರ್ಮದಲ್ಲಿ ವಾತ್ಸಲ್ಯತೆ ಮುಂತಾದ ಎಲ್ಲವುಗಳನ್ನು ಹೇಳಲಾಗಿದೆ. ಜೀವನದಲ್ಲಿ ಚೆನ್ನಾಗಿ ಕೂಡಿ ಬಾಳಬೇಕು. ಇಂದಿನ ದಿನಗಳಲ್ಲಿ ತಲ್ಲಾಕ, ಅಸಂಬದ್ಧ ವಿವಾಹ, ಅಂತರ್–ಜಾತೀಯ ವಿವಾಹ ಇತ್ಯಾದಿ ತಿಳಿಯದಿರುವ ಅದೆಷ್ಟೋ ಘಟನೆಗಳು ಸಮಾಜದಲ್ಲಿ ಆಗುತ್ತಲಿವೆ. ಬೇರೆಯವರನ್ನು ಮೇಲಕ್ಕೆ ತರುವುದೆಂದರೆ ಇದರ ಅರ್ಥ ನಾವು ಕೆಳಗೆ ಬೀಳಬೇಕೆಂದೇನೂ ಅಲ್ಲ, ನಾವು ಸ್ವತಃ ರಕ್ಷಿಸಿಕೊಂಡು ಬೇರೆಯವರನ್ನು ಬಿಳದಿರುವಂತೆ ಅವಶ್ಯವಾಗಿ ಗಮನಿಸ ಬೇಕು.) ಅತ್ಯಂತ ವೈಭವದಿಂದ ಅವರ ವಿವಾಹವಾಯಿತು.

ಮದುವೆಯಾಗಿ ನವವಧು ವರನ ಮನೆಗೆ ಬಂದಳು. ಇಬ್ಬರೂ ಪರಸ್ಪರ ಮಾತನಾಡುತ್ತಾ ಕುಳಿತಿದ್ದರು, ಪರಸ್ಪರರು ತಮ್ಮನ್ನು ತಮ್ಮ ವಿಷಯಗಳನ್ನು ತಿಳಿಯಬಯಸಿದ್ದರು. ಸ್ವಾಧ್ಯಾಯ ಮುಂತಾದ ವಿಷಯಗಳಲ್ಲಿ ಮಾತನಾಡುತ್ತಾ ವ್ರತಗಳ ಬಗ್ಗೆ ಮಾತುಗಳನ್ನು ಹೇಳಿಕೊಂಡರು. ವಿಜಯ ಎಂಬ ಹೆಸರಿನ ಆ ಯುವಕ ತನ್ನ ಪತ್ನಿ ವಿಜಯಾಳಿಗೆ–ನಾನು ವಿವಾಹಕ್ಕಿಂತ ಮುಂಚೆ ಶುಕ್ಲ ಪಕ್ಷದಲ್ಲಿ ಬ್ರಹ್ಮಚರ್ಯ ವ್ರತದ ನಿಯಮ ತೆಗೆದುಕೊಂಡಿದ್ದೇನೆ. ಯಾಕೆಂದರೆ ಒಂದು ತಿಂಗಳಲ್ಲಿ ಎರಡೇ ಪಕ್ಷಗಳಿರುತ್ತವೆ. ಒಂದು ಶುಕ್ಲ ಪಕ್ಷ ಇನ್ನೊಂದು ಕೃಷ್ಣ ಪಕ್ಷ. ಕೃಷ್ಣ ಪಕ್ಷದಲ್ಲಿ. ತನ್ನ ಇಂದ್ರಿಯಗಳ ಮೇಲೆ ವಿಜಯ ಸಾದಿಸಲಾಗಲಿಲ್ಲ. ಆದ್ದರಿಂದ ಸಾಧನೆ ಮಾತ್ರ ಮಾಡುತ್ತೆನೆ ಉಳಿದ ಶುಕ್ಲ ಪಕ್ಷದಲ್ಲಿ ದೃಢತಾಪೂರ್ವಕ ಬ್ರಹ್ಮಚರ್ಯ ವ್ರತದ ಪಾಲನೆ ಮಾಡುತ್ತವೆ–ಎಂದು ಹೇಳಿದ. ಈ ಮಾತುಗಳನ್ನು ಕೇಳಿ ವಿಜಯಾ–ಹೇ ಸ್ವಾಮಿ! ನನ್ನ ಕೊರತೆ ಕ್ಷಮಾ ಯೋಗ್ಯವಾಗಲಿ ಒಂದು ಸಂಗತಿ ನನ್ನ ಅಜ್ಞಾನದ ವಶದಿಂದ ಆಗಿ ಹೋಗಿದೆ. ನಾನು ಸಹ ಆರ್ಯಿಕಾ ಮಾತಾಜಿಗಳಿಂದ ಕೃಷ್ಣಪಕ್ಷದಲ್ಲಿ ಬ್ರಹ್ಮಚರ್ಯ ವ್ರತವನ್ನು ಸ್ವೀಕಾರ ಮಾಡಿದ್ದೇನೆ. ನಾನಂತೂ ಜೀವನವಿಡಿ ಈ ವ್ರತದ

ಪಾಲನೆ ಮಾಡುತ್ತೇನೆ. ತಾವು ಪುರುಷರು. ಪುರುಷರು ಮತ್ತೆ ಮದುವೆ ಮಾಡಿಕೊಳ್ಳಬಹುದು, ತಾವು ಇನ್ನೊಂದು ಮದುವೆ ಮಾಡಿಕೊಳ್ಳಿ, ನಾನು ನಿಮ್ಮನ್ನು ನೋಡಿಯೇ ಸಂತುಷ್ಟಳಾಗಿರುತ್ತೇನೆ. ನನಗೆ ನಿಮ್ಮ ಬಗ್ಗೆ ಎಂದಿಗೂ ಯಾವುದೇ ಪರಿಣಾಮವನ್ನು ಕೆಡಿಸುವುದಿಲ್ಲ. ಬಹಳ ಒಳ್ಳೆಯದು! ಎಂದು ವಿಜಯ ಹೇಳುತ್ತಾ ಇರುವ ಸಂಗತಿ ಎಂದರೆ ಸ್ತ್ರೀಯರು ತ್ಯಾಗದ ಪರಾಕಾಷ್ಠೆಯನ್ನು ಸ್ಪರ್ಶಿಸಿ ಬಿಡುತ್ತಾರೆ, ಮಮತೆ ಮತ್ತು ಸಹನ ಶೀಲತೆಯ ಪರಾಕಾಷ್ಠೆ ಅವರಲ್ಲಿರುತ್ತದೆ. ಅವರು ವ್ರತಗಳ ಪಾಲನೆಯನ್ನು ದೃಢತೆಯಿಂದ ಮಾಡಬಲ್ಲವರಾದರೆ ಮೋಕ್ಷಕ್ಕೆ ಹೋಗುವ ಯೋಗ್ಯತೆ ಹೊಂದಿರುವ ಈ ಪುರುಷನು ಸ್ತ್ರೀಯರಿಗಿಂತ ಹಿಂದಂತೂ ಇರುವುದಿಲ್ಲ. ಆದ್ದರಿಂದ ನಾವು ಸಹಾ ನಮ್ಮ ವ್ರತದ ಪಾಲನೆಯನ್ನು ಅವಶ್ಯ ಮಾಡುತ್ತೇವೆ.

ವಿವಾಹದ ಅರ್ಥ ಕೇವಲ ಭೋಗಗಳ ಸಮರ್ಥನೆ ಅಷ್ಟೇ ಅಲ್ಲ, ಆದರೆ ಇಲ್ಲಿಯವರೆಗೆ ಅಮರ್ಯಾದಿತವಾಗಿದ್ದ ಭೋಗಗಳನ್ನು ಏಕೀಕರಣದಿಂದ ಸಿಮೀತ ಮಾರ್ಗದಲ್ಲಿ ತರುವುದಾಗಿದೆ. ಅನೇಶದಿಂದ ಏಕೀಕರಣದ ಕಡೆಗೆ ಬರುವುದು ಉಳಿದದ್ದನ್ನು ಮರೆಯುವುದು ಇದೇ ಗೃಹಸ್ಥ ಧರ್ಮವಾಗಿದೆ. ಇಬ್ಬರ ವ್ರತಗಳು ಕಡಿಮೆಯಾಗಿರಲಿಲ್ಲ, ವಿಜಯನು ಬಯಸಿದ್ದರೆ ಇನ್ನೊಂದು ವಿವಾಹವಾಗ ಬಹುದಿದ್ದಿತು. ಆತನ ವ್ರತದಲ್ಲಿ ಯಾವ ದೂಷಣೆಯೂ ಬರುತ್ತಿರಲಿಲ್ಲ, ಆದರೆ ಆತ–ಬಹಳ ಒಳ್ಳೆಯವನು, ಈಗ ನಮ್ಮ ಸಾಂಸಾರಿಕ ವೃದ್ಧಿಯ ಜೀವನ ಸಮಾಪ್ತವಾಗಿದೆ. ನಾವು ಪ್ರಸನ್ನರಾಗಿದ್ದೇವೆ, ನಮ್ಮ ವ್ರತವನ್ನು ಜೀವನ ಪರ್ಯಂತ ಪಾಲಿಸೋಣ ಚರ್ಚೆ ಮಾಡುವುದು ಯಾರಿಗೂ ಅವಶ್ಯಕವಿಲ್ಲ–ವೆಂದು ಹೇಳಿದ. ಇಬ್ಬರೂ ಸಂಕಲ್ಪ ಮಾಡಿಕೊಂಡು, ಇಂದಿನಿಂದ ಆಜೀವನ ಸಹೋದರ, ಸಹೋದರಿಯರಂತೆ ಇರೋಣವೆಂದು ನಿರ್ಧಾರ ಮಾಡಿದರು. ಈ ವಿಷಯ ಜನರಿಗೆ ಅಥವಾ ತಾಯಿ–ತಂದೆಗಳಿಗೆ ತಿಳಿದು ಬಂದ ದಿನವೇ ಸನ್ಯಾಸ ಸ್ವೀಕರಿಸೋಣವೆಂದೂ ನಿರ್ಧರಿಸಿದರು.

ಇಬ್ಬರೂ ಧಾರ್ಮಿಕ ಜೀವನ ನಡೆಸಲು ಪ್ರಾರಂಭಿಸಿದರು. ಯಾತ್ರೆಗಳನ್ನು ಮಾಡುತ್ತಾ ಸ್ವಾಧ್ಯಾಯ ಇತ್ಯಾದಿಗಳನ್ನು ಮಾಡುತ್ತಾ ಮಾಡಿಸುತ್ತಾ ಹಾಗೂ ಸಂತ ಸಮಾಗಮದಲ್ಲಿರುತ್ತಾ. ಹೀಗೆ ಮಾಡುತ್ತಾ–ಮಾಡುತ್ತಲೇ ಬಹಳಷ್ಟು ಸಮಯ ಕಳೆದು ಹೋಯಿತು. ಮದುವೆಯಾಗಿ ಬಹಳ ವರ್ಷಗಳು ಕಳೆದರೂ ಇನ್ನೂ ಮಕ್ಕಳಾಗಲಿಲ್ಲವಲ್ಲವೆಂದು ತಾಯಿ ತಂದೆಗಳು ಯೋಚಿಸಿದರು, ಜನರು ಪರಸ್ಪರ ಮಾತನಾಡಿಕೊಳ್ಳುತ್ತಾ ಇವರದು ಬಹಳ ದೊಡ್ಡ ದುರ್ಭಾಗ್ಯವೆಂದರು. ಇಬ್ಬರೂ ಶಾಂತಭಾವದಿಂದ ಎಲ್ಲವನ್ನು ಕೇಳುತ್ತಾ, ನಮ್ಮ ಬಳಿ ಯಾವ ವ್ರತವಿದೆ ಎಂದು ಯಾರಿಗಾದರೂ ಹೇಳಲು ಈಗ ಸಾಧ್ಯವೆ? ಎಂದು ಯೋಚಿಸಿದರು.

ಒಂದು ದಿನ ಒಂದು ಸ್ಥಾನದಲ್ಲಿ ಒಬ್ಬ ವೃದ್ಧ ಶ್ರಾವಕಿ ಇದ್ದರು. ಒಳ್ಳೆಯ ವ್ರತಾದಿಗಳನ್ನು ಪಾಲಿಸುತ್ತಿದ್ದರು. ಅಹಿಂಸೆಯ ಬಗ್ಗೆ ತುಂಬಾ ಗಮನ ನೀಡುತ್ತಿದ್ದರು. ಎಲ್ಲ ಕ್ರಿಯೆಗಳನ್ನು ವಿವೇಕದಿಂದ ಮಾಡುತ್ತಿದ್ದರು. ಅವರು ಬಾವಿಯಿಂದ ನೀರು ತೆಗೆದುಕೊಂಡರೆ ಜೀವಾದಿಗಳನ್ನು ವಿಧಿಪೂರ್ವಕವಾಗಿ ಅದೇ ಬಾವಿಯಲ್ಲಿಯೇ ಹಾಕುತ್ತಿದ್ದರು. ಜೈನ ಬಸದಿಗಳಲ್ಲಿ ಬಾವಿಗಳನ್ನು ತೋಡುತ್ತಿದ್ದುದರು ತಾತ್ಪರ್ಯ ಇದೇ ಆಗಿದ್ದಿತು. ಮಂದಿರದಲ್ಲಿ ಭಗವಂತರ ಅಭಿಷೇಕದೊಂದಿಗೆ ಅನ್ಯ ಗೃಹಸ್ಥರು ಸಹ ಅಹಿಂಸಾಪೂರ್ವಕ ನೀರಿನ ಉಪಯೋಗ ಮಾಡಲಿ ಹಾಗೂ ಬಾವಿಯಿಂದ ಹೆಚ್ಚು ನೀರು ತೆಗೆದಷ್ಟು ಅಷ್ಟೇ ಶುದ್ಧ ನೀರು ಬರುತ್ತದೆ. ಭೂಮಿಯಿಂದ ಈ ನಿಮಿತ್ತದಿಂದ

ಬಾವಿಗಳನ್ನು ನಿರ್ಮಿಸುತ್ತಿದ್ದರು, ಬಸದಿಗಳ ಬಾವಿಗಳಿಂದ ನೀರನ್ನು ಒಯ್ಯುವಲ್ಲಿ ಯಾವ ದೋಷವು ಇಲ್ಲ, ಶ್ರಾವಕರಿಗಾಗಿತರುತ್ತಾರೆ. ವ್ರತದ ಹೆಸರು ವಿದ್ವೇಷವಲ್ಲ, ಬದಲಾಗಿ ಅವಕಾಶ ದೃಷ್ಟಿರೂಪ ಪರಿಣಾಮವಾಗಿದೆ. ಇಪ್ಪತ್ತಾಲ್ಕು ಗಂಟೆ ನಿಮಿತ್ತ ದೊರಕಿ ಮತ್ತು ಅದರ ನಂತರವೂ ಮನಸ್ಸಿನಲ್ಲಿ ಯಾರಿಗೆ ವಿಕಾರಭಾವ ಬರುವುದಿಲ್ಲವೋ ಅವರಿಗೆ ಈ ವ್ರತದ ಸಮಾನವಾಗಿರುವ ಇನ್ನೊಂದು ಶ್ರೇಷ್ಠವ್ರತ ಜಗತ್ತಿನಲ್ಲಿ ಇಲ್ಲವೇ ಇಲ್ಲ ಮದುವೆ ಆಗದಿರುವುದು ಬೇರೆ ವಿಷಯ ಅವರು ದೂರ ದೂರವಿರುತ್ತಾರೆ ಅಥವಾ ಪತ್ನಿಯ ಮೃತ್ಯುವಾದರೆ ಬೇರೆ ವಿಷಯವಾಗಿದೆ. ಹಾಗೂ ಪತಿಯ ಮೃತ್ಯುವಾದರೂ ಬೇರೆ ವಿಷಯವಿದೆ, ಆದರೆ ಪತಿ-ಪತ್ನಿ ಆಗಿದ್ದಾರೆ ಹಾಗೂ ಜೊತೆಯಲ್ಲಿಯೇ ಇರುತ್ತಾರೆ, ಒಂದೇ ಸ್ಥಾನದಲ್ಲಿ ಮತ್ತು ಜೊತೆ ಜೊತೆಯಾಗಿ ಒಂದೇ ರೀತಿಯ ವ್ರತದ ಪಾಲನೆ ಮಾಡುತ್ತಾರೆ. ಒಂದು ವೇಳೆ ಅವರು ಯಾರೂ ನೋಡುತ್ತಿಲ್ಲವೆಂದು ಯೋಚಿಸಿದರೆ, ಕರ್ಮವಂತೂ ನೋಡುತ್ತಿರುತ್ತದೆ, ಭಗವಂತನನ್ನು ಒಪ್ಪುವುದಾದರೆ ಆತನಾದರೂ ನೋಡುತ್ತಿರುತ್ತಾನೆ, ಇಷ್ಟೇ ಅಲ್ಲ ಸ್ವಯಂ ಅಂತೂ ನಮ್ಮನ್ನೆ ನಾವು ನೋಡುತ್ತಲೇ ಇದ್ದೇವೆ. ಈ ಮಾತನ್ನು ನಾವು ಗಮನದಲ್ಲಿಡಬೇಕು.

ಶ್ರಾವಿಕೆಯು ಮಹಾರಾಜರಿಗೆ-ಮಹಾರಾಜರೇ ಅಸಿಧಾರಾ ವ್ರತವೇನೆಂದು ತಿಳಿಯಿತು. ಆದರೆ ನಾವು ಅತಿಥಿಗಳಿಗೆ ನಿಮ್ಮದು ಅಸಿಧಾರ ವ್ರತ ಇದೆಯಾ ಅಥವಾ ಇಲ್ಲವೋ ಎಂದು ಹೇಗೆ ಕೇಳುವುದು? ಆದ್ದರಿಂದ ನಮಗೆ ಹೇಗೆ ಗೊತ್ತಾಗಬೇಕು. ಆದ್ದರಿಂದ ತಾವು ಕೃಪೆ ಇಟ್ಟು ಇದರ ಸಂಕೇತವನ್ನು ತಿಳಿಸಿಬಿಡಿ, ಯಾವುದರಿಂದ ನಾವು ತಿಳಿಯಬಹುದು ಯಾಕೆಂದರೆ ಯಾರಿಗಾದರೂ ಇಂತಹ ವ್ರತಕ್ಕೆ ಸಂಬಂಧಿಸಿದಂತೆ ಕೇಳುವುದು ಸರಿಯಲ್ಲ-ಎಂದು ಕೇಳಿದಳು ಇದಕ್ಕೆ ಮಹಾರಾಜರು-ಈ ಮಾತು ಸರಿಯಾಗಿದೆ, ನೋಡಿ ನಿಮ್ಮ ಮನೆಯ ಚೌಕಾದ ಮೇಲೆ ಚಂದೋವಾವನ್ನು ಕಟ್ಟಲಾಗಿದೆ, ಅದು ಕಪ್ಪಾಗಿ ಹೋಗಿದೆ. ಆ ಚಂದೋವಾ ಆ ದಿನ ಬೆಳ್ಳಗಾಗಿ ಬಿಡುತ್ತದೆ. ಯಾವ ದಿನ ಅಸಿಧಾರಾ ವ್ರತ ಮಾಡುವವರ ಆಹಾರ ನಿಮ್ಮ ಮನೆಯಲ್ಲಿ ಆಗಿ ಬಿಡುವುದೋ ಅದು ಸಹ ಇದರ ಸಂಕೇತಕ್ಕಾಗಿ ಅಂದು ಪ್ರಾಯಶ್ಚಿತ ಪೂರ್ಣವಾಗಿ ಬಿಡುತ್ತದೆ-ಎಂದು ಹೇಳಿದರು. ಶ್ರಾವಿಕೆಯು- ಹಾಗೇ ಆಗಲಿ ಮಹಾರಾಜರೆ! ಈಗ ನಾವು ಪ್ರತಿದಿನ ಚಂದೋವಾವನ್ನು ನೋಡುತ್ತಿರುತ್ತೇವೆ-ಎಂದಳು.

ಅವಳು ಮನೆಗೆ ಹಿಂದಿರುಗಿದಳು. ಪ್ರತಿದಿನ ವ್ರತಿಗಳಿಗೆ ಆಹಾರ ಮಾಡಿಸಿದಳು ಮತ್ತು ಚಂದೋವಾವನ್ನು ನೋಡುತ್ತಿರುತ್ತಾಳೆ. ಹೀಗೆ ಬಹಳ ಸಮಯ ಕಳೆದು ಹೋಯಿತು. ಈಗ ಅವಳ ಮನಸ್ಸಿನಲ್ಲಿ ಉದ್ವೇಗ ಭಾವನೆ ಉಂಟಾಗಿ ಇನ್ನೂ ನನ್ನ ಪ್ರಾಯಶ್ಚಿತ ಪೂರ್ಣವಾಗಲಿಲ್ಲ ಇಲ್ಲಿ ಚಂದೋವಾ ಯಾವಾಗ ಬೆಳ್ಳಗಾದೀತು ಎನ್ನುವ ಚಿಂತೆ ಕಾಡತೊಡಗಿತು. ಯಾವುದೇ ದಿನ ಯಾವುದೇ ವ್ರತಿಗೆ ಆಹಾರವಾದರೆ ಅವಳು ಆಹಾರ ಕೊಡುತ್ತಾ ಇದ್ದಳು ಮೇಲೆ ಚಂದೋವಾವನ್ನು ನೋಡುತ್ತಾ ಅದು ಬೆಳ್ಳಗಾಯಿತೆ ಇಲ್ಲವೇ ಎಂದು ನೋಡುತ್ತಿದ್ದಳು. ಉತ್ತಮರಲ್ಲಿ ಉತ್ತಮ ತ್ಯಾಗಿ ವ್ರತಿ, ಗೃಹಸ್ಥರಿಗೆ ಭೋಜನ ಮಾಡಿಸಿದಳು, ಅದರೂ ಚಂದೋವಾ ಬೆಳ್ಳಗಾಗಲಿಲ್ಲ.

ಒಂದು ದಿನದ ಸಂಗತಿ ಎಂದರೆ ವಿಜಯ ಮತ್ತು ವಿಜಯಾ ಇಬ್ಬರೂ ತೀರ್ಥಕ್ಷೇತ್ರಗಳ ಯಾತ್ರೆ ಮಾಡುತ್ತಾ ಮುನಿ-ಮಹಾರಾಜರ ದರ್ಶನ ಮಾಡುತ್ತಾ ತಮ್ಮ ನಗರಕ್ಕೆ ಬಂದರು. ಆ

ಶ್ರಾವಿಕೆಯು ಮಂದಿರದಲಿ ಅತಿಥಿ ಜೋಡಿ ಎಂದು ತಿಳಿದು ಜಯ ಜಿನೇಂದ್ರ ಎಂದು ಹೇಳಿ ಇಬ್ಬರಿಗೂ ಭೋಜನಕ್ಕಾಗಿ ಆಮಂತ್ರಿಸಿದಳು. ಆಗ ಇವರು ಇವು ನಾವು ಮನೆಯಲ್ಲಿ ಆಹಾರ ಮಾಡುತ್ತೇವೆ ಎಂದು ಹೇಳಿದರು. ಶ್ರಾವಿಕೆ ಒಪ್ಪದೇ ಕೊನೆಗೆ ಅವರು ಭೋಜನ ಮಾಡಲು ತಮ್ಮ ಸ್ವೀಕೃತಿ ನೀಡಿದರು. ಅವರಿಬ್ಬರೂ ಶ್ರಾವಿಕೆಯ ಮನೆಗೆ ಹೋಗುತ್ತಿರುವಾಗ ಮೆಲ್ಲ, ಮೆಲ್ಲನೆ ಕೆಳಗಡೆ ನೋಡುತ್ತಾ ಸಾಗುತ್ತಿದ್ದರು. ಅವರು ಅಲ್ಲಿ-ಇಲ್ಲಿ ನೋಡುತ್ತಿರಲಿಲ್ಲ ಮನೆ ತಲುಪಿದ ಕೂಡಲೇ ಎದುರಿಗೆ ನಿಂತು ಬಿಟ್ಟರು. ಶ್ರಾವಕಿ ಮಹಿಳೆಯು-ಬನ್ನಿರಿ, ಮನೆಯನ್ನು ಪ್ರವೇಶಿಸಿರಿ ಎಂದಾಗ ಅವರು ಮನೆಯೊಳಗೆ ಬಂದರು. ಶುದ್ಧ ನೀರಿನಿಂದ ಕಾಲುಗಳನ್ನು ತೊಳೆದುಕೊಂಡರು, ಮತ್ತೆ ಎದ್ದು ನಿಂತರು, ಯಕೆಂದರೆ ಯಾರದೋ ಚೌಕಾದಲ್ಲಿ ಕೂಡಲೇ ಯಾರೂ ಹೋಗಬಾರದು, ಕರೆದಾಗಲೇ ಚೌಕಾವನ್ನು ಪ್ರವೇಶಿಸಿದರು. ಭೋಜನಕ್ಕಾಗಿ ಆಸೀನರಾಗಿ ಎಂದು ಹೇಳಿದಾಗ ಕುಳಿತುಕೊಂಡರು ಎಲ್ಲ ವಸ್ತುಗಳನ್ನು ತಟ್ಟೆಯಲ್ಲಿ ಬಡಿಸಲಾಗಿದ್ದಿತು. ಸರಿಯಾಗಿ ಅವುಗಳ ಶೋಧನೆ ಮಾಡಿದರು. ಅವರಿಗೆ ಬೇಕಾದವುಗಳನ್ನು ತೆಗೆದುಕೊಂಡು, ಬೇಡವಾದ ಉಳಿದವುಗಳನ್ನು ತಟ್ಟೆಯಿಂದ ಹೊರಗಡೆ ಇಟ್ಟರು. ಮೌನಪೂರ್ವಕ ಭೋಜನ ಮಾಡಿದರು. ಅವರು ಆಹಾರ ಮಾಡುತ್ತಿದ್ದಂತೆ ಹಾಗೇ ಹಾಗೆಯೇ ಶ್ರಾವಿಕಾಳ ಚೌಕಾದ ಮೇಲೆ ಕಟ್ಟಿದ್ದ ಚಂದೋವಾ ಬಿಳಿಯಾಗುತ್ತಲಿದ್ದಿತು. ಭೋಜನ ಪೂರ್ಣವಾದಾಗ ಆ ಚಂದೋವಾ ಕಪ್ಪು ಬಣ್ಣದಿಂದ ಬಿಳಿ ಬಣ್ಣವನ್ನು ಪಡೆಯಿತು. ಆದರೆ ಅವರ ಗಮನವು ಆ ಕಡೆ ಇರಲಿಲ್ಲ. ಇಬ್ಬರೂ ಭೋಜನವಾದ ನಂತರ ತಮ್ಮ ಮನೆಯ ಕಡೆಗೆ ಹೊರಟು ಹೋದರು.

ಭೋಜನ ಮಾಡಿಸಿದ ನಂತರ ಶ್ರಾವಿಕಾ ಮಹಿಳೆಯ ದೃಷ್ಟಿ ಆಕಸ್ಮಿಕವಾಗಿ ಚಂದೋವಾದ ಮೇಲೆ ಹೋಯಿತು. ಆ ಕಪ್ಪು ಬಣ್ಣದ ಸ್ಥಾನವದಲ್ಲಿ ಬಿಳಿಯಾಗಿರುವುದನ್ನು ನೋಡಿದಳು. ಅವಳು ಆಶ್ಚರ್ಯಚಕಿತಳಾದಳು ಹಾಗೂ ಕೂಡಲೇ ಬ್ರಹ್ಮಚರ್ಯ ಧರ್ಮಕ್ಕೆ ಜಯವಾಗಲಿ ಅಸಿಧಾರಾ ವ್ರತಕ್ಕೇ ಜಯವಾಗಲಿ ಎಂದು ಹೇಳುತ್ತಾ ಇಬ್ಬರ ಹಿಂದೆ, ಹಿಂದೆ ಅವರ ಮನೆಯವರೆಗೆ ಹೋದಳು, ಮನೆಯ ಜನರು ಹಾಗೂ ಇತರರು ಅವಳನ್ನು ನೋಡಿದರು. ಕೇಳಿದರು. ಅಮ್ಮಾ ಏನಾಯಿತು ಎಂದು ಕೇಳಿದರು ತಾವು ಜಯಕಾರ ಯಾಕೆ ಹೇಳುತ್ತಿದ್ದಿರಾ? ಆಗ ಅವಳು-ಅರೇ, ಅರೇ ಇವರುಗಳು ಮಹಾನ್ ಆತ್ಮರಿದ್ದಾರೆ. ಎಲ್ಲರೂ ಏಕಕಾಲದಲ್ಲಿ ಯಾರು ಮಹಾನ್ ಆತ್ಮರಿದ್ದಾರೆ ಸ್ವಲ್ಪ ನಮಗೂ ಹೇಳಿರಲ್ಲ ಎಂದು ಕೇಳಿದರು. ಅವಳು ವಿಜಯ ಮತ್ತು ವಿಜಯಾರ ಮನೆಯ ಕಡೆ ತೋರಿಸುತ್ತಾ ಅರೇ ತಮ್ಮ ಮನೆಯಲ್ಲಿ ಅಸಿಧಾರಾ ವ್ರತವಿರುವ ಮಹಾನ್ ಆತ್ಮರಿದ್ದಾರೆ ಎಂದು ಹೇಳಿದಳು.

ಅಸಿಧಾರಾ ವ್ರತ:-ಇದು ಯಾವ ವ್ರತವಾಗಿದೆ? ಖಡ್ಗಾದಿಗಳನ್ನು ಧಾರಣೆ ಮಾಡಿದ್ದಾರೆಯೇ? ಅಂತವರು ಯಾರೂ ನಮ್ಮ ಮನೆಯಲ್ಲಿ ಇಲ್ಲವಲ್ಲ, ಅಮ್ಮ ನಿಮಗೇನು ಆಗಿದೆ? ಅರೇ ಇಲ್ಲ-ಇಲ್ಲ ಈ ವ್ರತವು ಬಹಳ ಶ್ರೇಷ್ಠವಾಗಿದೆ-ಹೇಳುವುದೇನಿದೆ? ಈ ವ್ರತವೆಂದರೆ ವಿವಾಹವಾದ ನಂತರವೂ ಬ್ರಹ್ಮಚರ್ಯ ವ್ರತವನ್ನು ಪಾಲಿಸುತ್ತಾರೆ. ಹೀಗೇನು? ಹಾ.ಅರೇ ನಾವು ಇಷ್ಟುಕಾಲ ಮಕ್ಕಳಾಗಲಿಲ್ಲವೆಂದು ಯೋಚಿಸುತ್ತಿದ್ದೆವು. ಎಂತಹ ಅಭಾಗ್ಯರು ನಮ್ಮ ಮನೆಗೆ ಬಂದರಲ್ಲ, ಇವರೆಲ್ಲಿಂದ ಅಭಾಗಿನ ಬಂದರು ಎನ್ನುವ ಮಾತುಗಳನ್ನಾಡುತ್ತಿದ್ದೆವು. ಇದೇನಾಯಿತು ನಮ್ಮಿಂದ?

ಎಂದು ದುಃಖದ ಸ್ವರದಲ್ಲಿ ಹೇಳಿದರು. ಇಂದು ತಿಳಿಯಿತು ವ್ರತದ ಶ್ರೇಷ್ಠತೆಯ ಬಗ್ಗೆ ಹಾಗೂ ಎಲ್ಲರಿಗೂ ತಿಳಿಯಿತು. ನಗರದ ಜನರು ಅವರ ಆದರ–ಸತ್ಕಾರ ಮಾಡಿದರು, ಎಲ್ಲರಿಗೂ ಆನಂದವಾಯಿತು ಹಾಗೂ ಮನೆಯಲ್ಲಿ ಎಲ್ಲರಿಗೂ ಅಪಾರವಾದ ಸಂತೋಷವಾಯಿತು.

ಇಬ್ಬರೂ ಪರಸ್ಪರವಾಗಿ ಚರ್ಚಿಸುತ್ತಾ ಈಗ ಎಲ್ಲ ರಹಸ್ಯವು ಬಯಲಾಗಿದೆ. ನಾವು ಗುರು ಚರಣಗಳಲ್ಲಿ ಜಿನದೀಕ್ಷೆ ಪಡೆಯಬೇಕು ಎಂದು ಭಾವಿಸಿ ತಾಯಿ–ತಂದೆಗಳ ಚರಣಗಳಿಗೆ ನಮಸ್ಕರಿಸುತ್ತಾ–ಹೇ ಪೂಜ್ಯರೇ! ಈಗ ನಮಗೆ ಜಿನದೀಕ್ಷೆ ಹೊಂದಲು ಆಶೀರ್ವಾದ ಹಾಗೂ ಆಜ್ಞೆ ನೀಡಿರಿ. ನಾವು ನಮ್ಮ ಕಲ್ಯಾಣ ಮಾಡಿಕೊಳ್ಳಲು ಬಯಸುತ್ತೇವೆ–ಎಂದು ನಿವೇದಿಸಿಕೊಂಡರು. ನಾವು ಎಲ್ಲಿಯವರೆಗೆ ಈ ಮಾತು ಗುಪ್ತವಾಗಿರುವುದೋ ಅಲ್ಲಿಯವರೆಗೆ ತಾಯಿ–ತಂದೆಗಳ ಸೇವೆ ಮಾಡುತ್ತಿರೋಣ ಹಾಗೂ ಯಾವ ದಿನ ಈ ರಹಸ್ಯ ಬಯಲಾಗುವುದೋ ಅದೇ ದಿನ ಜಿನದೀಕ್ಷೆಗೆ ಹೊರಟು ಹೋಗೋಣವೆಂದು ಯೋಚಿಸುತ್ತಿದ್ದೆವು. ಆದ್ದರಿಂದ ನಾವಿಬ್ಬರು ಮುನಿ–ಆರ್ಯಿಕೆಯಾಗಿ ಆತ್ಮ ಕಲ್ಯಾಣ ಮಾಡಿಕೊಳ್ಳಬಯಸುತ್ತೇವೆ. ನಿಮಗೆ ಈಗ ನಾವು ಒಳ್ಳೆಯ ವ್ರತ ಪಾಲನೆ ಮಾಡಬಲ್ಲರು ಎಂಬ ವಿಶ್ವಾಸ ಆಗಿದೆ. ನಾವು ವಿಚಲಿತರಾಗುವುದಿಲ್ಲ. ತಾವು ತಮ್ಮ ಮೋಹವನ್ನು ಬಿಡಿ ಹಾಗೂ ನಮಗೆ ದೀಕ್ಷೆಗಾಗಿ ಆಜ್ಞೆ ಮತ್ತು ಆಶೀರ್ವಾದ ನೀಡಿರಿ. ಎಲ್ಲರೂ ಅವರಿಗೆ ಆಶೀರ್ವಾದ ಮಾಡಿದರು ಹಾಗೂ ಅವರು ಎಲ್ಲರಿಗೂ ಕ್ಷಮಾವಾಣಿ ಪೂರ್ವಕ ಧನ್ಯವಾದಗಳನ್ನು ಹೇಳಿದರು. ಎಲ್ಲರೂ ಬಹಳ ಸಂತೋಷದೊಂದಿಗೆ ಅವರನ್ನು ಗುರು ಮಹಾರಾಜರ ಬಳಿ ಕರೆದೊಯ್ದರು. ಅಲ್ಲಿಗೆ ತಲುಪಿ ಗುರುಗಳ ಚರಣಗಳಲ್ಲಿ ದೀಕ್ಷೆ ನೀಡುವಂತೆ ನಿವೇದನೆ ಮಾಡಿದರು. ಇಬ್ಬರೂ ದೀಕ್ಷೆಯನ್ನು ಗ್ರಹಣೆ ಮಾಡಿ ಆತ್ಮ ಕಲ್ಯಾಣ ಮಾಡ ತೊಡಗಿದರು. ನೋಡಿ ಬ್ರಹ್ಮಚರ್ಯ ವ್ರತ ಎಷ್ಟು ಶ್ರೇಷ್ಠವಾಗಿದೆ. ಒಬ್ಬ ಗೃಹಸ್ಥ ಜೀವನದಲ್ಲಿ ಬ್ರಹ್ಮಚರ್ಯ ಸ್ವೀಕರಿಸುವವರ ಬಳಿ ಇಷ್ಟೊಂದು ಫಲವಿದೆ ಎಂದರೆ 84,000 ಮುನಿಗಳಿಗೆ ಆಹಾರದಾನ ನೀಡಿದ ಪುಣ್ಯ ಅವರಿಗೆ ಸಹಜವಾಗಿ ದೊರಕಿ ಬಿಡುತ್ತದೆ. ಮೂರು ಲೋಕದಲ್ಲಿ ಬ್ರಹ್ಮಚರ್ಯ ಒಂದೇ ಅತ್ಯಂತ ಶ್ರೇಷ್ಠ ವ್ರತವಾಗಿದ್ದು, ಯಾವ ಆತ್ಮ ಈ ವ್ರತದ ಪಾಲನೆ ಮಾಡುತ್ತದೆಯೋ ಅದು ನಿಯಮದಿಂದ ಸುಗತಿಯನ್ನು ಪಡೆಯುತ್ತದೆ. ಇದು ವಿಜಯ ಮತ್ತು ವಿಜಯಾರ ಕಥೆಯಾಗಿದ್ದು ಅವರು ಅಸಿಧಾರಾ ವ್ರತದ ಪಾಲನೆ ಮಾಡಿದರು ಮತ್ತು ದೀಕ್ಷೆಯನ್ನು ಅಂಗೀಕರಿಸಿ ಆತ್ಮ ಕಲ್ಯಾಣ ಮಾಡಿಕೊಂಡರು. ಇದು ಶೀಲವ್ರತದ ಅಪೂರ್ವ ಮಹಿಮೆಯಾಗಿದೆ.

ವಿಶ್ವದಲ್ಲಿ ಯಾವುದಾದರೂ ಗೌರವಶಾಲಿ ಸ್ಥಾನವಿದ್ದರೆ ಅದು ಮಾನವನ ಶೀಲವ್ರತಚಾರಿತ್ರ, ಶೀಲವ್ರತಿಯಾಗಿರುವ ಮನುಷ್ಯ, ಶೀಲ ಧರ್ಮದಿಂದ ವಿಭೂಷಿತರಾಗಿರುವವರು. ಅವರ ಕೀರ್ತಿ ಈ ಯುಗದಲ್ಲಿ ಅಷ್ಟೆ ಅಲ್ಲ ಪರಲೋಕ, ಪರಭವದಲ್ಲಿಯೂ ಸಹ ಇರುತ್ತದೆ. ಚಂದನಬಾಲೆ, ಸತಿ ಮನೋರಮೆ, ಮೈನಾಸುಂದರಿ, ಅಂಜನಾಸತಿ, ಹಾಗೂ ಸತಿ ಸೀತಾರಂತಹ ಆತ್ಮಗಳು ಧನ್ಯವಾಗಿವೆ. ಅವರು ಶೀಲವ್ರತದ ಪಾಲನೆ ಮಾಡಿದರು ಹಾಗೂ ದೇವತೆಗಳು ಆಗಮಿಸಿ ಅವರ ರಕ್ಷಣೆ ಮಾಡಿದರು. ನಿಮಗೆ ತಿಳಿದಿರಲೇ ಬೇಕು. ಸೀತಾಮಾತೆಯು ಅಗ್ನಿಕುಂಡದ ಬಳಿ ನಿಂತಾಗ, ಹಾಗೂ ಅಗ್ನಿಯನ್ನು ಪ್ರವೇಶಿಸಿದಾಗ ಧರ್ಮ ಮತ್ತು ಶೀಲದ ರಕ್ಷಣೆಗಾಗಿ ದೇವತೆಗಳು ಬಂದು ಆ ಅಗ್ನಿಕುಂಡವನ್ನು ಸಹ ಜಲವನ್ನಾಗಿ ಮಾಡಿದರು. ಸುದರ್ಶನ ಶ್ರೇಷ್ಠಿಯು ಸಹ ಮಹಾನ್ ಆಗಿದ್ದಾರೆ ಅವರ ಮೇಲೆ ಖಡ್ಗಗಳ ಭಾರವಿದ್ದರೂ ಸಹ ದೇವತೆಗಳು ಖಡ್ಗದ ಭಾರವನ್ನು ಹೂವಿನ

ಹಾರವಾಗಿ ಬದಲಾಯಿಸಿ ಅವರನ್ನು ಶೂಲೆಯಿಂದ ಸಿಂಹಾಸನದ ಮೇಲೆ ಕುಳ್ಳಿರಿಸಿದರು. ಚಂದನ-ಬಾಲೆಯ ಮೇಲೆ ಅತ್ಯಾಚಾರದ ಪ್ರಯತ್ನ ನಡೆದಾಗ ದೇವತೆಗಳು ರಕ್ಷಿಸಿದರು. ಮರ್ಯಾದೇ ಪುರುಷೋತ್ತಮ ರಾಮ ಹಾಗೂ ಸೀತಾ 14ವರ್ಷಗಳವರೆಗೆ ವನವಾಸದಲ್ಲಿ ಸಂಯಮದಿಂದ ಇದ್ದರು. ಗುಣಭದ್ರಾಚಾರ್ಯರು ಉತ್ತರಪುರಾಣದಲ್ಲಿ ಅವರ ಶುದ್ಧ ಹಾಗೂ ಮರ್ಯಾದಿತ ಆಚರಣೆಯ ಕಾರಣದಿಂದಾಗಿ ಅಯೋಧ್ಯೆ ವಾಸಿಗಳು ಅವರನ್ನು ಇಕ್ವ್ವಾಕು ವಂಸ ಕುಲಕೇಸರಿಯ ಪದವಿಯಿಂದ ವಿಭೂಷಿತಗೊಳಿಸಿದರೆಂದು ಬರೆದಿದ್ದಾರೆ. ರಾಮರು ಸಹ ಶ್ರೇಷ್ಠರಾಗಿದ್ದರು ಅವರು ಲಂಕೆಯನ್ನು ಗೆದ್ದ ನಂತರವೂ ಅದನ್ನು ಸ್ವೀಕರಿಸಲಿಲ್ಲ- ತಾವು ಲಂಕೆಯ ಮೇಲೆ ವಿಜಯ ಪಡೆದಿದ್ದಿರಿ ಆದ್ದರಿಂದ ರಾಜ್ಯಭಾರ ಮಾಡಿರಿ-ಎಂದು ರಾಮನಿಗೆ ಮಂಡೋದರಿ ಹೇಳಿದರು, ವಿಭೀಷಣರು ಸಹ ಈ ರಾಜ್ಯವನ್ನು ನೀವೇ ನಿರ್ವಹಿಸಿರಿ ಎಂದು ಹೇಳಿದರು, ರಾಮನು ಮಂಡೋದರಿಗೆ ಇಲ್ಲ ಅಮ್ಮಾ ನಾವು ಈ ರಾಜ್ಯವನ್ನು ಪಡೆಯಲು ಯುದ್ಧ ಮಾಡಲಿಲ್ಲ ಬದಲಾಗಿ ನಾವಂತೂ ನಮ್ಮ ಸೀತೆಯ ಶೀಲದ ರಕ್ಷಣೆಗಾಗಿ ಯುದ್ಧ ಮಾಡಿದ್ದೆವು, ಅವಳ ಧರ್ಮದ ರಕ್ಷಣೆಗಾಗಿ ಮಾಡಿದ್ದೆವು. ಆದ್ದರಿಂದ ನಾನು ಇಲ್ಲಿ ರಾಜ್ಯ ಮಾಡಲಾರೆ. ಆಗ ಮಂಡೋದರಿಯು-ತಾವು ಧನ್ಯರು ಶ್ರೇಷ್ಠರು ಎಂದು ಹೇಳಿದರು. ಆಗ ರಾಮನು ಹೇ ಮಾತೆಯೇ ರಾಜ್ಯವನ್ನು ಮಾಡುವಲ್ಲಿ ಏನಾದರೂ ತೊಂದರೆ ಎನಿಸಿದರೆ ನಾನು ನಿಮ್ಮ ರಕ್ಷಣೆಗಾಗಿ ಅವಶ್ಯವಾಗಿ ಬರುತ್ತೇನೆ, ಆದರೆ ಇಲ್ಲಿ ವಿಭೀಷಣರೇ ರಾಜ್ಯ ಮಾಡುತ್ತಾರೆ ಎಂದು ಹೇಳಿದನು. ಮಂಡೋದರಿಯು

**ಧನ್ಯಾ ರಾಮ ತ್ವಯಾ ಮಾತಾ, ಧನ್ಯಾ ರಾಮ ತ್ವಯಾ ಪಿತಾ।**
**ಧನ್ವಾ ರಾಮ ತ್ವಯಾ ವಂಶಃ ಪರದಾರಾ ನ ಪಶ್ಯತಿ॥**

ಅರ್ಥಾತ್-ಹೇ ರಾಮ ತಮ್ಮ ತಾಯಿ ಧನ್ಯರು, ತಮ್ಮ ತಂದೆ ಧನ್ಯರು ತಮ್ಮ ವಂಶ ಧನ್ಯರು ಯಾಕೆಂದರೆ ತಾವು ಪರದಾರ (ಸ್ತ್ರೀ)ರನ್ನು ಕೆಟ್ಟದೃಷ್ಟಿಯಿಂದ ನೋಡಲಿಲ್ಲ. ತಾವು ತಾಯಿಯ ದೃಷ್ಟಿಯಿಂದ ಕಂಡಿದ್ದಿರಾ ತಾವು ಧನ್ಯರು. ತಮ್ಮಂತಹ ಮಹಾನ್ ಆತ್ಮರು ಸದಾಕಾಲ ಈ ಜಗತ್ತಿನಲ್ಲಿ ಆಗುತ್ತಿರಲಿ ಅದರಿಂದ ಶೀಲದ ಉಪದೇಶ ದೊರಕುತ್ತಿರಲಿ, ಶೀಲ ಧರ್ಮವನ್ನು ತಾವು ಪಾಲನೆ ಮಾಡುತ್ತಾ ಇರಿ. ಪ್ರತಿಯೊಬ್ಬ ವ್ಯಕ್ತಿ ಸ್ವಲ್ಪವಾದರೂ ಶೀಲದ ಬಗ್ಗೆ ನಿಯಮ ಪಡೆಯಲಿ ಎಂಬ ಸದ್ಭಾವನೆ ನನ್ನದು. ಆತ್ಮನ ಸೌಂದರ್ಯವನ್ನು ಸಿದ್ಧಗೊಳಿಸುವಲ್ಲಿ ಶೀಲ ವ್ರತದ ಭೂಮಿಯ ಆವಶ್ಯಕವಿದೆ. 24ತೀರ್ಥಂಕರರುಗಳಲ್ಲಿ ಐವರು ಬಾಲಬ್ರಹ್ಮಚಾರಿ(ಬಾಲಯತಿ)ತೀರ್ಥಂಕರರಿಗೆ ವಿಶೇಷ ಮಹತ್ವ ನೀಡಿದ್ದಾರೆ. ಶೀಲದ ಪೂರ್ಣತೆಯಲ್ಲಿಯೇ ಪರಮಾತ್ಮನ ಪದವಿದೆ. 18 ಸಾವಿರ ಶೀಲಗಳ ಪಾಲನೆ ಮಾಡುವವರಿಗೆ ಯಾವಾಗಲೂ ಅರ್ಹಂತರೆಂದು ಭಾವಿಸಿ ಪ್ರಣಾಮ ಮಾಡಲಾಗಿದೆ. ಪರಮ ಶೀಲದ ಮಹಿಮೆಯನ್ನು ತಿಳಿದು ಉತ್ತಮ ಬ್ರಹ್ಮಚರ್ಯವನ್ನು ಅಂಗೀಕಾರ ಮಾಡಿ ಅಂತಹ ಮಹಾವ್ರತವನ್ನು ಪಾಲಿಸಬೇಕು. ಈ ಉತ್ತಮ ಬ್ರಹ್ಮಚರ್ಯ ಧರ್ಮವು ದಶಲಕ್ಷಣ ಧರ್ಮ ರೂಪದ ಮಂದಿರದ ಸುವರ್ಣ ಕಲಶವಾಗಿದೆ. ಆಜೀವನವಾಗದಿದ್ದರೂ ಸಾಧನೆಯ ರೂಪದಲ್ಲಿ ಅಷ್ಟಮಿ-ಚತುರ್ದಶಿಯ ವ್ರತ ಮಾಡಿರಿ, ಸ್ವದಾರ ಸಂತೋಷ ವ್ರತದ ಪಾಲನೆ ಮಾಡಿರಿ. ಶೀಲವಾನರಾಗಿರಿ ಇದೇ ಎಲ್ಲರಿಗೂ ಆಶೀರ್ವಾದವಿದೆ. ಧರ್ಮ ಭಾವನಾ ಶತಕದಲ್ಲಿ ಹೀಗೆ ಬರೆಯಲಾಗಿದೆ-

ಪರಮ ಶೀಲದ ಪಾಲನೆ ಮಾಡಲು, ಕುಶೀಲದ ತ್ಯಾಗವ ಮಾಡಿರಿ।
ಶೀಲವಿಲ್ಲದೆ ಜಗದೊಳು ಸುಖವಿಲ್ಲ, ಎಂದು ಮನದಲಿ ಭಾವಿಸಿರಿ॥
ವಿಜಯ ಹಾಗೂ ವಿಜಯಾರು ಜಗದಲಿ ಆದರು ವಿಖ್ಯಾತ ಅಸಿಧಾರಾ ವ್ರತದಿಂದ।
ಶೀಲವಾನ ಸುದರ್ಶನ ಶ್ರಾವಕರು, ಆದರಿಸಲ್ಪಟ್ಟರು ದೇವತೆಗಳಿಂದ॥ ॥90॥

ಸೀತೆಗಾಗಿ ದೇವತೆಗಳು, ನೀರಿನಲಿ ರಚಿಸಿದರು ಕಮಲವ।
ಶ್ರೇಷ್ಠಿ ಸುದರ್ಶನರ ಶೂಲೆಯನು ಮಾಡಿದರು ಸಿಂಹಾಸನವ॥
ವಿಜಯ-ವಿಜಯಾರಿಂದ ಚಂದೋವಾ ಆಯಿತು ಧವಲಪೂರ್ಣ।
ಧನ್ಯಶೀಲಧಾರಿಯರನು ಮಾಡಿದರು ದೇವತೆಗಳು ಗುಣಗಾನ॥ ॥96॥

**॥ ಭಗವಾನ ಮಹಾವೀರರಿಗೆ ಜಯವಾಗಲಿ॥**

ನಿಷ್ಠೆಯಿಂದ ದೀಪ ಜ್ವಲಿಸಲು ಬಿರು ಗಾಳಿ ಆಗದು ಬಾಧಕ।
ಮನುಷ್ಯನಲಿ ದೃಢತೆ ಇದ್ದರೆ ವಿವಶತೆ ಆಗದು ಬಾಧಕ॥
ಸೋಲುವರು ಅವರು, ಯಾರಿಗಿಲ್ಲ ವಿಶ್ವಾಸ ಅವರ ಮೇಲೆ।
ಪಥಿಕ ಸರಿ ದಾರಿಯಲಿ ಸಾಗಿದರೆ ಜಗವು ಆಗದು ಬಾಧಕ॥

# ವಾತ್ಸಲ್ಯದ ಪರ್ವ-ಕ್ಷಮಾವಾಣಿ

## ಮಂಗಲಾಚರಣೆ

**ಪಾವಂ ಖವಇ ಅಸೇಸಂ, ಖಮಾಏ ಪರಿಮಂಡಿಯೋಯ ಮುಣಿಪವರೋ**
**ಖೇಯರ ಅಮರ ಣರಾಣಂ ಪಸಂಸಣಿಓ ಧುವಂ ಹೋಈ॥**

ಸದ್ಧರ್ಮ ಬಂಧುಗಳೇ,

ದಶಲಕ್ಷಣ ಮಹಾಪರ್ವವು ಕ್ಷಮಾ ಧರ್ಮದಿಂದ ಪ್ರಾರಂಭವಾಗುತ್ತದೆ ಹಾಗೂ ಇದರ ಸಮಾಪನೆಯಂದು ಸಹ ಕ್ಷಮಾವಾಣಿ ಪರ್ವರೂಪದಲ್ಲಿ ಉತ್ಸವವನ್ನು ಆಚರಿಸಲಾಗುತ್ತದೆ. ನಮ್ಮ ಸಹಧರ್ಮಿ ಜನರೊಂದಿಗೆ ಕ್ಷಮಾಭಾವದಿಂದ ಮೋಕ್ಷ ಮಾರ್ಗದಲ್ಲಿ ದೀಕ್ಷೆ ಧಾರಣೆ ಮಾಡಲಾಗುತ್ತದೆ ಹಾಗೂ ಜೀವನದ ಅಂತಿಮ ಸಮಯದಲ್ಲಿ ಕ್ಷಮಾಭಾವದಿಂದ ಸಲ್ಲೇಖನಾ (ಸಮಾಧಿ) ಧಾರಣೆ ಮಾಡಲಾಗುತ್ತದೆ. ಕ್ಷಮೆಯ ಅರ್ಥ ಸಹಿಸುವುದಾಗಿದೆ. ಶಕ್ತಿವಂತರೇ ಸಹಿಸಲು ಸಾಧ್ಯ ಆದ್ದರಿಂದ ಕ್ಷಮಾವಣಿ ಅಂತರಂಗವನ್ನು ನಿರ್ಮಲಗೊಳಿಸುವ ಪಾವನ ಪವಿತ್ರ ಪ್ರಕ್ರಿಯೆಯಾಗಿದೆ.

ದಶಧರ್ಮಗಳ ಉತ್ತಮ ಆರಾಧನೆಯ ನಂತರ ಕ್ಷಮಾವಾಣಿ ಮಹಾಪರ್ವ ಬರುತ್ತದೆ. ಆಚಾರ್ಯ ಉಮಾಸ್ವಾಮಿಗಳು ಸಹ ತತ್ವಾರ್ಥಸೂತ್ರದಲ್ಲಿ ಮುನಿ ಧರ್ಮದ ಪಾವನ ಪ್ರಸಂಗದಲ್ಲಿ ಇದರ ಚರ್ಚೆ ಮಾಡಿದ್ದಾರೆ. ದಶಧರ್ಮಗಳ ಆರಾಧನೆಯ ಸಮಗ್ರ ಪ್ರತಿಫಲನವು ಯಾವ ಕ್ಷಮಾವಾಣಿಯಲ್ಲಿ ಪ್ರಸ್ಫುಟಿತವಾಗುವುದೋ ಸಹೋದರರೇ ಅದು ಮಹಾನ್ ಆಗಿರುವುದು ವಿಚಾರ ಮಾಡುವ ಸಂಗತಿಯಾಗಿದೆ. ಭೂಮಿಕಾನುಸಾರ ಹತ್ತು ಧರ್ಮಗಳು ನಮ್ಮ ಪರಿಣತಿಯಲ್ಲಿ ಪ್ರಕಟವಾಗದಿದ್ದರೆ ಅಲ್ಲಿಯವರೆಗೆ ಕ್ಷಮಾವಾಣಿಯ ವಾಸ್ತವಿಕ ಲಾಭ ದೊರಕುವುದಿಲ್ಲ. ಹಾಗೇ ನೋಡಿದಲ್ಲಿ ಕ್ಷಮೆಯು ಆತ್ಮನ ಸ್ವಾಭಾವಿಕ ಗುಣವಾಗಿದೆ. ಕ್ರೋಧ ಹಾಗೂ ಮಾನದ ತ್ಯಾಗ ಕ್ಷಮಾವಾಣಿಯಲ್ಲಿದೆ. ಕ್ಷಮಾವಾಣಿಯ ಸಂಬಂಧ ಮಾತ್ರ ಕ್ರೋಧದ ಅಭಾವರೂಪ ಕ್ಷಮಾದೊಂದಿಗೆ ಅಲ್ಲ ಬದಲಾಗಿ ಕ್ರೋಧ ಮಾನ ಇತ್ಯಾದಿ ವಿಕಾರಗಳ ಅಭಾವ ರೂಪ ಕ್ಷಮೆ ಇತ್ಯಾದಿ ದಶಧರ್ಮಗಳ ಆರಾಧನೆ ಹಾಗೂ ಅವುಗಳಿಂದ ಉತ್ಪನ್ನವಾಗುವ ನಿರ್ಮಲತೆಯೊಂದಿಗೆ ಇದೆ. ಕ್ಷಮೆ ಕೇಳುವುದರಿಂದ ಸಹೋದರರೇ, ಮಾನಕಷಾಯ ಬಾಧಕವಾಗಿದ್ದರೂ ಹಾಗೂ ಕ್ಷಮೆ ಮಾಡುವುದರಲ್ಲಿ ಕೋಪ ಕಷಾಯ ಬಾಧಕವಾಗುತ್ತದೆಂದು ಗೊತ್ತೆ? ಕಷಾಯಗಳ ಪೂರ್ಣ ಅಭಾವ ಮತ್ತು ಕ್ರೋಧ ಹಾಗೂ ಮಾನಕ್ಕೆ ಜನ್ಮ ತಾಳದಂತೆ ನೋಡಿ ಕೊಳ್ಳುವುದೇ ಕ್ಷಮಾವಾಣಿಯಾಗಿದೆ. ಬೇರೆ ಜೀವಗಳ ಮೇಲೆ ಕ್ಷಮೆ ಮಾಡುವುದು ಸಾಮಾನ್ಯ ವ್ಯವಹಾರಿಕ ರೂಪವಾಗಿದೆ, ಆದರೆ ಸರ್ವೋತ್ಕೃಷ್ಟ ಕ್ಷಮೆಯಂತೂ ತನ್ನ ಆತ್ಮನ ಮೇಲಿದೆ. ಕ್ಷಮಭಾವದ ಉತ್ಕೃಷ್ಟ ರೂಪಕ್ಕೆ ಸಂಬಂಧಿಸಿದಂತೆ ಪಂಡಿತ ದೌಲತರಾಮಜೀಯವರು ಆರು ಗುರಾಣಿಗಳ ಆರನೇ ಗುರಾಣಿಯಲ್ಲಿ ಹೀಗೆ ಬರೆದಿದ್ದಾರೆ.

**ಅರಿಮಿತ್ರ ಮಹಲಮಸಾನ ಕಂಚನ, ಕಾಂಚ ನಿಂದನ, ಥುತಿ ಕರನ।**
**ಅರ್ಘಾವತಾರನ ಅಸಿ ಪ್ರಹಾರನ, ಮೇ, ಸದಾ ಸಮತಾ ಧರನ॥6॥**

ಸಹೋದರರೇ ಈ ಅವಸ್ಥೆ ಯಾರಿಗೆ ಪ್ರಾಪ್ತವಾಗಬಲ್ಲದು? ಸಮತಾಧಾರಿ ಮುನಿ ರಾಜರಿಗೇನೇ ಈ ಅವಸ್ಥೆ ಪ್ರಾಪ್ತವಾಗಬಲ್ಲದು. ಮುನಿರಾಜರು ಪ್ರತಿದಿನ ಪ್ರತಿಕ್ರಮಣ ಮಾಡಿ ಪ್ರತಿ ಕ್ಷಣ ಕ್ಷಮಾಭಾವದಿಂದ ಪರಿಪೂರ್ಣರಾಗಿ ತಮ್ಮ ಕಷಾಯ ಜನ್ಯ ಭಾವಗಳನ್ನು ಕೊನೆಗೊಳಿಸುತ್ತಾರೆ. ಹಾಗೂ ಯಾವಾಗಲೂ ಒಂದೇ ಮಾತನ್ನು ಗಮನದಲ್ಲಿಡುತ್ತಾರೆ. **ಏ ಇಂದಿಯಾ ವೇ ಇಂದಿಯಾ, ತೇ ಇಂದಿಯಾ, ಚತುರಿಂದಿಯಾ, ಪಂಚಿಂದಿಯಾ, ಪುಢವಿಕಾಇಯಾ, ಆಲುಕಾಇಯಾ, ತೇಲುಕಾಇಯಾ, ವಾಲುಕಾಇಯಾ ವಣಪ್ಫದಿಕಾಇಯಾ, ತಸಕಾಇಯಾ ಏದೇಸಿಂ ಉದ್ಧಾವಣಂ ಪರಿದಾವಣಂ ವಿರಾಹಣಂಉವಘಾದೋ ತದೋವಾ ಕಾರಿದೋವಾ ಕೀರಂತೋ ವಾ ಸಮಣುಮಣ್ಣಿದೋ ತಸ್ಸ ಮಿಚ್ಛಾಮಿ ದುಕ್ಕಡಂ.**

ಅರ್ಥಾತ್, ಒಂದು ಇಂದ್ರಿಯ, ಎರಡು ಇಂದ್ರಿಯ, ಮೂರು ಇಂದ್ರಿಯ, ನಾಲ್ಕು ಇಂದ್ರಿಯ, ಐದು ಇಂದ್ರಿಯ, ಪೃಥ್ವಿಕಾಯಿಕ, ಜಲಕಾಯಿಕ, ಅಗ್ನಿಕಾಯಿಕ, ವಾಯುಕಾಯಿಕ, ವನಸ್ಪತಿ ಕಾಯಿಕ ಮತ್ತು ತ್ರಸ ಕಾಯಿಕ, ಈ ಜೀವಗಳಿಗೆ ಕಷ್ಟ ಅಥವಾ ದುಃಖ ನೀಡಿದ್ದರೆ, ನೀಡಿಸಿದ್ದರೆ, ನೀಡುವವರಿಗೆ ಒಳ್ಳೆಯದು ಎಂದು ಹೇಳಿದ್ದರೆ ಆ ಎಲ್ಲ ಪಾಪ ಅಥವಾ ಅಪರಾಧ(ದುಷ್ಕೃತ)ಮಿಥ್ಯಾ ಆಗಲಿ. ಅರ್ಥಾತ್ ಎಲ್ಲ ಜೀವಗಳು ನನ್ನನ್ನು ಕ್ಷಮಿಸಲಿ. ಈ ಭಾವನೆಯಿಂದ ಪಾಪವೂ ಹಗುರವಾಗುತ್ತದೆ. ಮನಸ್ಸು ಹಗುರವಾಗುತ್ತದೆ. ಪ್ರತಿಕ್ರಮಣದಲ್ಲಿ ದೋಷಗಳ ಬಗ್ಗೆ ಮಾಡಲಾಗುವ ಪಶ್ಚಾತ್ತಾಪ ಮುಂದೆ ಆಗುವ ದೋಷಗಳಿಂದ ಭಯಭೀತರಾಗುವಂತೆ ಮಾಡುತ್ತದೆ. ಕೆಟ್ಟ ಭಾವಗಳ ಪರಿಮರ್ಜನೆ ಮಾಡುತ್ತದೆ. ದೋಷ ಹತ್ತಿರಲಿ ಅಥವಾ ಹತ್ತಿರದಿರಲಿ ಎಲ್ಲ ವ್ರತಿ-ಸಾಧು ಪ್ರತಿ ದಿನ ಮೂರು ಸಾರಿ ಆವಶ್ಯಕವಾಗಿ ಪ್ರತಿಕ್ರಮಣ ಮಾಡುತ್ತಾರೆ. ವ್ರತಿ ಜೀವಗಳು 15 ದಿನಗಳಲ್ಲಿ ಒಂದು ಸಾರಿ ದೊಡ್ಡ ಪ್ರತಿಕ್ರಮಣ ಮಾಡಿ ಕ್ಷಮೆ ಕೇಳುತ್ತಾರೆ. ಸಮ್ಯಗ್ ದೃಷ್ಟಿ ಶ್ರಾವಕರು ಕಡಿಮೆ ಎಂದರೂ ಮೂರು ಷೋಡಶಕಾರಣ ಪರ್ವಗಳಲ್ಲಿಯಂತೂ ಅವಶ್ಯವಾಗಿ ಕ್ಷಮೆ ಕೇಳಿ ಪಾಪ ಕರ್ಮಗಳಿಂದ ಮುಕ್ತರಾಗಲು ಬಯಸುತ್ತಾರೆ. ಪ್ರತಿಕ್ರಮಣ ಮತ್ತು ಪ್ರಾಯಶ್ಚಿತ, ಜನ್ಮ-ಜನ್ಮಗಳಿಂದ ಗಳಿಸಿದ ಪಾಪಗಳನ್ನು, ದೋಷಗಳನ್ನು ನಾಶ ಮಾಡಿ ಆತ್ಮನನ್ನು ಪರಿಶುದ್ಧ-ನಿರ್ಮಲಗೊಳಿಸುತ್ತವೆ. ಅದರಿಂದಾಗಿ ಒಂದು ದಿನ ಅದು ಪವಿತ್ರ ಆತ್ಮನಾಗಿ ಮುಕ್ತಿ ಪಥದ ಪಥಿಕದಿಂದ ಪರಮಾತ್ಮನಾಗಿ ಸದಾಕಾಲಕ್ಕೂ ಚಿದಾನಂದ ಸುಖದಲ್ಲಿ ಲೀನನಾಗಿ ಬಿಡುತ್ತದೆ.

ಮೇಲಿಂದ ಮೇಲೆ ಕ್ಷಮೆ ಕೇಳುವುದರಲ್ಲಿ ಬಾಧೆ ಇಲ್ಲ ಏಕೇಂದ್ರಿಯದಿಂದ ಐದು ಇಂದ್ರಿಯಗಳವರೆಗಿನ ಜೀವಗಳಿಂದ ಕ್ಷಮೆ ಕೇಳಬೇಕು. ಮೂರು ಲೋಕದ ಜೀವಗಳಿಂದ ಕ್ಷಮೆ ಕೇಳುವುದು ಅವಶ್ಯವಾಗಿದೆ. ಎಲ್ಲರ ಬಗ್ಗೆ ಮೈತ್ರಿಭಾವ ಪ್ರಥಮ ಭಾವನೆಯಾಗಿದೆ ಸಾಮಾಯಿಕದಲ್ಲಿ ಕ್ಷಮಾವಾಣಿ ಇರದಿದ್ದರೆ ಮನಸ್ಸು ಸ್ಥಿರವಾಗಿರುವುದಿಲ್ಲ ನಮ್ಮೊಳಗಿರುವ ವೈರಭಾವಗಳನ್ನು ಹೊರಹಾಕಿ ಬಿಡುವಂತಹ ಭಾವನೆಗಳಿಗಾಗಿ ಕ್ಷಮೆ ಕೇಳಿ ಕ್ಷಮೆ ಮಾಡಬೆಕು. ಅದ್ದರಿಂದ ಮೊದಲು ನಿಮಗೆ ಕೆಟ್ಟ ಭಾವ ಮಾಡುವ ಭಾವನೆಗಳನ್ನು ತೆಗೆದು ಹಾಕಿ ಮತ್ತೆ ಕ್ಷಮೆ ಕೇಳುವಂತಹ ಕ್ಷಮೆಯನ್ನು ಪ್ರಕಟಗೊಳಿಸಿರಿ. ಆದರೆ ಸಹೋದರರೇ ಆಗುವುದೇನು? ತಪ್ಪಿನ ಮೇಲೆ ತಪ್ಪನ್ನು ಮಾಡುತ್ತ ಹೋಗುತ್ತೇವೆ ಹಾಗೂ ಕ್ಷಮೆಯ ಮಾತಿನ ವಿಚಾರ ಮಾಡುತ್ತೇವೆ.

ಒಬ್ಬಸಾಧು ಮಹಾರಾಜರು ಪ್ರತಿಕ್ರಮಣ ಮಾಡುತ್ತಿದ್ದರು. ಅಲ್ಲಿಯೇ ಕುಳಿತ ಒಬ್ಬ ಶ್ರಾವಕರು ಆ ಪ್ರತಿಕ್ರಮಣವನ್ನು ಕೇಳುತ್ತಿದ್ದರು. ಆ ಶ್ರಾವಕರು ಪ್ರತಿಕ್ರಮಣದ ಒಂದು ವಾಕ್ಯವನ್ನು

ನೆನಪಿನಲ್ಲಿಟ್ಟು ಕೊಂಡರು. ಅದು ಯಾವ ವಾಕ್ಯವೆಂದರೆ **"ತಸ್ಸ ಮಿಚ್ಛಾಮಿ ದುಕ್ಕಡಂ"**. ಪ್ರತಿಕ್ರಮಣ ಪೂರ್ಣವಾದಾಗ ಆ ಶ್ರಾವಕರು ಸಾಧು ಮಹಾರಾಜರಿಗೆ-ತಾವು ಈಗ ಏನು ಮಾಡುತ್ತಿದ್ದೀರಿ? ಎಂದು ಕೇಳಿದರು. ಸಾಧು ಮಹಾರಾಜರು-ನಾವು ಈಗ ಪ್ರತಿಕ್ರಮಣ ಮಾಡುತ್ತಿದ್ದೆವು ಯಾಕೆಂದರೆ ನಾವು ಪ್ರವೃತ್ತಿಯಲ್ಲಿರುವಾಗ ನಮ್ಮ ಮನ-ವಚನ-ಕಾಯಗಳ ಚೇಷ್ಠೆಗಳಿಂದ ನಿಶ್ಚಿತವಾಗಿ ಒಂದಲ್ಲ ಒಂದು ಜೀವಕ್ಕೆ ದುಃಖ ಅಥವಾ ಕಷ್ಟವನ್ನುಂಟು ಮಾಡುತ್ತವೆ. ಆದ್ದರಿಂದ ನಾವು ಅವುಗಳಿಂದ ಆ ಕಷ್ಟ ಅಥವಾ ದುಃಖದ ಬಗ್ಗೆ ಕ್ಷಮೆ ಯಾಚನೆ ಮಾಡುತ್ತೇವೆ. **ತಸ್ಸ ಮಿಚ್ಛಾಮಿ ದುಕ್ಕಡಂ** ದ ಅರ್ಥ ನನ್ನ ಆ ಅಪರಾಧ ಅಥವಾ ದುಷ್ಕೃತ ಮಿಥ್ಯಾ ಆಗಲಿ ಅಥವಾ ಆ ನನ್ನ ಅಪರಾಧ ಇಲ್ಲದಂತಾಗಲಿ, ಸಾಮಾನ್ಯ ಜನರು ಸಹ ಸಾಮಾನ್ಯವಾಗಿ ತಪ್ಪು ಆದಾಗ 'ಕ್ಷಮಿಸಿ ನನ್ನದು ತಪ್ಪಾಯಿತು' ಎನ್ನುತ್ತಾರೆ. ಈ ಪ್ರಕಾರ ಸ್ವಯಂದ ಆಲೋಚನೆ ಮಾಡುವುದರಿಂದ ನಮ್ಮ ಅಪರಾಧ ಅಥವಾ ದೋಷ ದೂರವಾಗಿ ಬಿಡುತ್ತದೆ. ಎಂದು ಹೇಳಿದರು. ಈ ಅರ್ಥವನ್ನು ಕೇಳಿ ಆ ವ್ಯಕ್ತಿಯು ಮನಸ್ಸಿನಲ್ಲಿಯೇ ತಪ್ಪುಗಳನ್ನು ದೂರ ಮಾಡಲು ಇದು ಬಹಳ ದೊಡ್ಡ ಉಪಾಯವೆಂದು ಯೋಚಿಸ ತೊಡಗಿದ ಆತನಿಗೆ ಒಂದು ಹೊಸ ಸೂತ್ರವೇ ಸಿಕ್ಕಂತಾಯಿತು. ಸಾಧು ಮಹಾರಾಜರು ಪುನಃ "ತಪ್ಪಿಗಾಗಿ ಯಾರಿಂದಲಾದರೂ ಕ್ಷಮೆ ಕೇಳುವುದು ಸರಳವಾಗಿದೆ. ಆದರೆ ಕ್ಷಮ ಮಾಡುವುದು ಕಠಿಣವಿದೆ" ಎಂದು ಹೇಳಿದರು. ಆ ವ್ಯಕ್ತಿಯು ಸಾಧು ಮಹಾರಾಜರ ಪ್ರತಿಕ್ರಮಣದ ವಾಕ್ಯವನ್ನು ನೆನಪಿನಲ್ಲಿ ಹೊಂದಿ ಅಲ್ಲಿಂದ ಹೊರಟರು ಹಾಗೂ ಹೋಗುತ್ತಾ-ಹೋಗುತ್ತಾ ಒಬ್ಬ ಕುಂಬಾರನ ಮನೆಯ ಮುಂದಿನ ಮರದ ಕೆಳಗೆ ಕಲ್ಲಿನ ಮೇಲೆ ಕುಳಿತರು.

ಕುಂಬಾರನು ಬಹಳಷ್ಟು ಮಡಿಕೆಗಳನ್ನು ಮಾಡಿದ್ದನು ಹಾಗೂ ಅವುಗಳನ್ನು ಮನೆಯ ಹೊರಗೆ ಒಣಗಿಸಲು ಇಟ್ಟಿದ್ದನು ಅದರ ನಂತರ ಆ ಮಡಿಕೆಗಳನ್ನು ಬೇಯಿಸಲು ಇಡಲಾಗುತ್ತಿದ್ದಿತು. ಕುಂಬಾರನ ಜೀವನದ ಸಾಧನೆಯಾಗಿದ್ದಿತು. ಆದ್ದರಿಂದ ಆತನು ಬಹಳ ಲಕ್ಷವಿಟ್ಟು ಪರಿಶ್ರಮದಿಂದ ತಯಾರಿಸಿದ್ದನು. ಎದುರಿಗೆ ಕುಳಿತಿದ್ದ ಆ ವ್ಯಕ್ತಿ ಮಡಿಕೆಗಳನ್ನು ನೋಡುತ್ತಾ ಇದ್ದು ಒಂದು ಕಲ್ಲನ್ನು ಎತ್ತಿ ಅದನ್ನು ಮಡಿಕೆಗಳ ಕಡೆ ಎಸೆದ. ಕಲ್ಲು ಬಡಿದಾಗ ಮಡಿಕೆ ಒಡೆದು ಹೋಯಿತು. ಯಾಕೆಂದರೆ ಮಡಿಕೆ ಇನ್ನೂ ಹಸಿಯಾಗಿದ್ದು ಒಣಗಿರಲಿಲ್ಲ. ಸರಿ ಈಗ ಆ ವ್ಯಕ್ತಿ ಕಲ್ಲನ್ನು ಜೋರಾಗಿ ಮಡಿಕೆಗಳ ಮೇಲೆ ಎಸೆಯುತ್ತಾ ಮತ್ತೆ ಕೂಡಲೇ ತಸ್ಸಮಿಚ್ಛಾಮಿ ದುಕ್ಕಡಂ ಎಂದು ಹೇಳುತ್ತಿದ್ದ ಅರ್ಥಾತ್ ನನ್ನ ದುಷ್ಕೃತ್ಯ ಮಿಥ್ಯಾ ಆಗಲಿ. ಹೀಗೆ ಆತ ಒಂದೊಂದರಂತೆ 15,20 ಮಡಿಕೆಗಳನ್ನು ಒಡೆದು ಹಾಕಿದ. ಕುಂಬಾರನು ಮಡಿಕೆಗಳು ಒಡೆದ ಸದ್ದು ಕೇಳಿ ತನ್ನ ಮನೆಯಿಂದ ಹೊರಬಂದನು. ಅಲ್ಲಿಂದಲೇ ಆತ ಒಬ್ಬ ವ್ಯಕ್ತಿ ಎದುರಿಗೆ ಕುಳಿತಿರುವುದನ್ನು ಕಲ್ಲುಗಳನ್ನು ಎತ್ತಿ ಮಡಿಕೆಗಳನ್ನು ಒಡೆಯುತ್ತಿರುವುದನ್ನು ಹಾಗೂ ಏನೇನೋ ಹೇಳುತ್ತಿರುವುದನ್ನು ನೋಡಿದ. ಕುಂಬಾರನು ಸ್ವಲ್ಪ ಮುಂದೆ ಹೋಗಿ-ಅರೇ ಸಹೋದರಾ ಇದೇನು ಮಾಡುತ್ತಿದ್ದಿಯಾ ಎಂದು ಕೇಳಿದ ಇದರಿಂದ ನಮ್ಮ ದಿನನಿತ್ಯದ ಜೀವನ ನಡೆಯುತ್ತದೆ. ನಾವು ಬಹಳ ಕಷ್ಟಪಟ್ಟು ಇವುಗಳನ್ನು ಮಾಡಿದ್ದೇವೆ ಎಂದು ಹೇಳಿದ. ಆ ವ್ಯಕ್ತಿಯು-ಸಹೋದರಾ ನಮ್ಮ ಗುರುಗಳು ಜೀವನದಲ್ಲಿ ಎಷ್ಟೇ ಪಾಪ ಅಥವಾ ದುಷಕೃತ್ಯ ಮಾಡಿದ್ದರೂ **ತಸ್ಸ ಮಿಚ್ಛಾಮಿ ದುಕ್ಕಡಂ** ಎಂದು ಹೇಳಿದ್ದಾರೆ. ಇದನ್ನು ಹೇಳಿ ಸಮಾಪ್ತಿ ಮಾಡಬಹುದೆಂದು ಹೇಳಿದ್ದಾರೆ ಎಂದು ಹೇಳಿದ. ಕುಂಬಾರನು ಆ ವ್ಯಕ್ತಿಗೆ ಬಹಳಷ್ಟು ತಿಳಿ ಹೇಳಿ ತಿಳಿಸಲು ಪ್ರಯತ್ನಿಸಿದ ಆದರೆ ಆತ ಯಾವುದೇ ರೀತಿಯಿಂದಲೂ ತಿಳಿಯದಿದ್ದಾಗ

ಆತ ಒಳೆಯದು ವಿಷಯ ಹೀಗೆದೆಯಾ ಎಂದು ಹೇಳಿ ಮನೆಗೆ ಹಿಂದಿರುಗಿದ ಒಂದು ದೊಡ್ಡ ದಪ್ಪದಾದ ಕೋಲನ್ನು ತಂದು ಪೂರ್ಣ ಶಕ್ತಿ ಹಾಕಿ ಆತ ಆ ವ್ಯಕ್ತಿಯ ತಲೆಯ ಮೇಲೆ ಜೋರಾಗಿ ಹೊಡೆದು ನಂತರ ಕೈ ಜೋಡಿಸಿ ವಿನಂತಿಯ **ಸ್ವರದಲ್ಲಿ–ತಸ್ಸ ಮಿಚ್ಛಾಮಿ ದುಕ್ಕಡಂ**–ಎಂದು ಹೇಳಿದ. ಹೊಡೆತ ಬಿದ್ದಾಗ ಆತನಿಗೆ ಕೇವಲ ಪಾಠವೊಂದೇ ಸಾಲದು ಪಾಠದೊಂದಿಗೆ ಪಶ್ಚಾತ್ತಾಪ ಹಾಗೂ ಪಾರಾಯಣ ಆಚರಣೆಯು ಇರಬೇಕು ಎಂದು ತಿಳಿಯಿತು. ಪುನರಾವೃತ್ತಿ ರೂಪದಲ್ಲಿ ಮೇಲಿಂದ ಮೇಲೆ ತಪ್ಪು ಮಾಡುವವರು ಕ್ಷಮೆ ಕೇಳಿದರೆ ಅದು ಮಾಯಾಚಾರವಾಗಿದೆ. ತಪ್ಪು ಪುನಹ ಆಗದಂತಾಗುವುದೇ ಕ್ಷಮೆಯಾಗಿದೆ. ಇಲ್ಲವಾದರೆ ಅದು ಅಪರಾಧದ ಕ್ಷಮೆಯಾಗುತ್ತದೆ. ಕ್ಷಮೆಯು ಜೀವನದ ನಿರ್ದೋಷ ಸಾಧನೆಯಾಗಿದೆ. ನಾವು ಬೇರೆಯವರನ್ನು ಸತಾಯಿಸುತ್ತೇವೆ ಮತ್ತೆ ಕ್ಷಮೆ ಮಾಡಿ ಎಂದು ಹೇಳುತ್ತೇವೆ.

ನೋಡಿ ಸಹೋದರರೇ ಜೀವನದಲ್ಲಿ ಎಲ್ಲವನ್ನು ಕಲಿತ ಮೇಲೆ ಮತ್ತೆ ತಿಳಿದು ತಿಳಿದು ತಪ್ಪು ಮಾಡಿ ಸಾರಿ, ಸಾರಿ ಎಂದು ದೊಡ್ಡದಾಗಿ ಹೇಳುತ್ತೇವೆ. ಅತಿ ಹೆಚ್ಚೆಂದರೆ ಐ ಆ್ಯಮ ಸಾರಿ ಪ್ಲೀಜ್ ಎಕ್ಸೂಜ ಮಿ ಎಂದು ಹೇಳಿ ಬಿಡುತ್ತೇವೆ. ಮೇಲೆ ಮೇಲೆ ಹೇಳುತ್ತೇವೆ. ಆದರೆ ಅಂತರಂಗದಲ್ಲಿ ಅಭಿಮಾನ ಹುಟ್ಟುತ್ತಿರುತ್ತದೆ. ಇಂದಿನ ದಿನಗಳಲ್ಲಿ ಯಾರಿಗಾದರೂ ಕಾಲು ತಗುಲಿದಾಗ, ನಾವೇನು ಮಾಡುವುದು ಎಂಬ ಜನರು ಇದ್ದಾರೆ ನಾವೇನು ತಿಳಿದು ತಿಳಿದು ತಗುಲಿಸಿದ್ದೇವೆಯೇ ಅಥವಾ ಏನನ್ನೂ ಹೇಳುವುದೂ ಇಲ್ಲ. ಮಾನ ಕಷಾಯವುಳ್ಳ ಜನರು ಏನನ್ನಾದರೂ ಹೇಳಿ ಬಿಡುತ್ತಾರೆ. ಹೊಡೆದಾಟ ಬಡಿದಾಟಕ್ಕೂ ಸಿದ್ಧರಾಗಿರುತ್ತಾರೆ. ಏನಿಲ್ಲವೆಂದರೂ ಕ್ಷಮಾ ಕೇಳುವುದರ ಬಗ್ಗೆಯೇ ಹೊಡೆದಾಡುತ್ತಾರೆ. ಮತ್ತೆ ಜೋರಾಗಿ ತಪ್ಪು ಮಾಡಿದ್ದರೆ ಏನಾಯಿತು ಎಂದು ಹೇಳಿ ಕ್ಷಮೆ ಕೇಳಿಯಾಯಿತಲ್ಲ ಮತ್ತೆ ಯಾಕೆ ಮಾತನಾಡುತ್ತಿರಾ?ಎನ್ನುತ್ತಾರೆ. ಈ ಪ್ರಕಾರ ಅನೇಕ ತರಹದ ಮಾತುಗಳನ್ನಾಡುತ್ತಾರೆ. ಅವರು ಕ್ಷಮೆ ಕೇಳಿ ಬಹಳ ಉಪಕಾರ ಮಾಡಿದ್ದಾರೆ ಹಾಗೂ ಅದಕ್ಕಾಗಿ ನೀವು ಅವರಿಗೆ ಗೌರವ ತೋರಿಸಬೇಕು. ಆಗಾಗ ಜನರು ತಪ್ಪು ಮಾಡಿದ ಮೇಲೂ ನಾನು ಏನೂ ತಪ್ಪು ಮಾಡಿಲ್ಲ ಆದರೂ ನೀವು ಒಪ್ಪದಿದ್ದರೆ ನಾವು ಕ್ಷಮೆ ಕೇಳಲು ಸಿದ್ದರಿದ್ದೇವೆ. ಆದರೆ ನಮ್ಮ ಮಾತುಗಳ ಕಡೆಗೆ ಗಮನ ಕೊಡಿ ಆಗ ಕ್ಷಮೆ ಕೇಳುತ್ತೇವೆ ಎನ್ನುವವರನ್ನು ನೋಡುತ್ತೇವೆ. ಆದರೆ ಅವರು ತಮ್ಮಿಂದ ಅಪರಾಧ ಅಥವಾ ತಪ್ಪು ಅಗಿದೆ ಎಂದು ಸ್ವೀಕಾರ ಮಾಡುವುದಿಲ್ಲ. ನೀವೇ ವಿಚಾರ ಮಾಡಿ ನಾವ್ಯಾಕೆ ತಪ್ಪು ಮಾಡುತ್ತೇವೆ. ಯಾಕೆ ಎಚ್ಚರದಿಂದ ಇರುವುದಿಲ್ಲ. ಎಚ್ಚರದಿಂದ ಇದ್ದರೆ ಇಂತಹ ಕಾರ್ಯ ಆಗುವುದಿಲ್ಲ. ನಾವು ಮುಂದೆ ಸಹಿಸುವುದಿಲ್ಲ. ಇದರಿಂದ ನಮ್ಮ ಜೀವನ ಒಳ್ಳೆಯದಾಗುವಂತಹುದಲ್ಲ.

ವಿನಯಭಾವವನ್ನು ನಾವು ಸದಾಕಾಲ ಹೊಂದಿರಬೇಕು. ತೋರಿಸಬೇಕು ಮತ್ತು ಕ್ಷಮೆ ಮಾಡಬೇಕು, ಕ್ಷಮೆ ಕೇಳಬೇಕು. ಮೃದುವಾಗಿರಬೇಕು. ಕಷಾಯಗಳ ಅಭಾವದಿಂದಲೇ ಧರ್ಮದ ಉತ್ಪತ್ತಿಯಾಗುತ್ತದೆ. ಇಲ್ಲವಾದಲ್ಲಿ ಕಷಾಯ ಭಾವನೆಯೇ ಜಗತ್ತಿನಲ್ಲಿ ವೈರಭಾವವನ್ನು ಹುಟ್ಟಿಸುತ್ತದೆ. ಅರ್ಥಾತ್ ಕಷಾಯ ಭಾವನೆಗಳೇ ಈ ಜಗತ್ತಿನಲ್ಲಿ ವೈರ ಭಾವವನ್ನು ಉತ್ಪನ್ನ ಮಾಡುತ್ತವೆ. ಆದ್ದರಿಂದ ಗಮನವಿಡಬೇಕು ಏನನ್ನು ಗಮನದಲ್ಲಿಡಬೇಕು? ಹೇಗೆ ಗಮನದಲ್ಲಿಡಬೇಕು. ಮಡಿಕೆ ಒಡೆದು 'ತಸ್ಸ ಮಿಚ್ಛಾಮಿ ದುಕ್ಕಡಂ'ದ ಉದಾಹರಣೆಯನ್ನು ಯಾವಾಗಲೂ ಗಮನದಲ್ಲಿಡಬೇಕು? ನೀವು ಇನ್ನೊಬ್ಬರಿಗೆ ಸತಾಯಿಸಿ. ಕೃಪೆಯಿಟ್ಟು ಕ್ಷಮೆ ಮಾಡಿರಿ ಎಂದು ಹೇಳಿದರೆ ಇಷ್ಟರಿಂದಲೇ

ಕಾರ್ಯವಾಗುವುದಿಲ್ಲ. ಸಹೋದರಾ. ಕರ್ಮದ ಹೊಡೆತಗಳು ಬಿದ್ದಾಗಲೇ ಅಪರಾಧದ ಫಲ ಏನಿದೆ? ಎಂದು ತಿಳಿಯುತ್ತದೆ. ನಾವು ಏನು ಅಪರಾಧ ಮಾಡಿದ್ದೇವೆ. ಅದನ್ನು ಬಿಡುವ ಭಾವನೆಯನ್ನು ತಾಳಲಿಲ್ಲ ಬದಲಾಗಿ ನಾವು ಹೀಗೆ ಹೇಳಿ ಬಿಟ್ಟರೆ ನಮ್ಮ ಈ ಅಪರಾಧ ಹೊರಟು ಹೋಯಿತೆಂದು ಯೋಚಿಸುತ್ತೇವೆ. ಹೀಗೆ ಇಲ್ಲ-ನಾವು ಇನ್ನು ಮುಂದೆ ಈ ಕಾರ್ಯ ಮಾಡುವುದಿಲ್ಲ ಇಂತಹ ತಪ್ಪನ್ನು ಇನ್ನೊಮ್ಮೆ ಮಾಡುವುದಿಲ್ಲ ಇಂತಹ ಪುನರಾವೃತ್ತಿ ಮಾಡುವುದಿಲ್ಲ ಮೇಲಿಂದ ಮೇಲೆ ಹೀಗೆ ಪಶ್ಚಾತ್ತಾಪ ಮಾಡಬೇಕು. ಪ್ರತಿಜ್ಞಾಬದ್ಧ ಅಥವಾ ಸಂಕಲ್ಪಶೀಲರಾಗದಿದ್ದರೆ ಕಡಿಮೆ ಎಂದರೂ ಪ್ರಯತ್ನ ಶೀಲರಾಗಲೇ ಬೇಕು. ಏನಾದರೂ ದಂಡವನ್ನು ಪಡೆಯಲೇ ಬೇಕು. ಆಗಲೇ ನಾವು ಸುಧಾರಿಸ ಬಹುದು, ಇಲ್ಲವಾದಲ್ಲಿ ನಮ್ಮ ಸುಧಾರಣೆಯಾಗುವುದು ಬಹಳ ಕಠಿಣವಿದೆ. ಜೈನ ಆಗಮಗಳಲ್ಲಿ-ಯಾವಾಗಲಾದರೂ ಸರಿ ಈ ಭಾವನೆಗಳನ್ನು ಹೊಂದಲೇ ಬೇಕೆಂದು ಹೇಳಿದ್ದಾರೆ. ಮುನಿ ಮಹಾರಾಜರು ಹಾಗೂ ಪ್ರತಿಮಾಧಾರಿಗಳು ಈ ಭಾವನೆಯನ್ನು ಸದಾಕಾಲ ಭಾವಿಸುತ್ತಾರೆ- ಪ್ರತಿಕ್ರಮಣದಲ್ಲಿ ಈ ಭಾವನೆಯನ್ನು ಹೇಳಿಯೂ ಇದ್ದಾರೆ-

**ಖಮ್ಮಾಮಿ ಸವ್ವ ಜೀವಾಣಂ ಸವ್ವೇ ಜೀವಾ ಖಮಂತು ಮೇ।**
**ಮಿತ್ತಿಮೇ ಸವ್ವ ಭೂದೇಸು ವೇರಂ ಮಜ್ಝಂ ಣ ಕೇಣವಿ॥**

ನಾನು ಎಲ್ಲ ಜೀವಿಗಳಿಂದ ಕ್ಷಮೆಯನ್ನು ಯಾಚಿಸುತ್ತೇನೆ, ಎಲ್ಲ ಜೀವಿಗಳು ನನ್ನನ್ನು ಕ್ಷಮಿಸಲಿ, ನನ್ನದು ಎಲ್ಲ ಜೀವಿಗಳೊಂದಿಗೆ ಮೈತ್ರಿ ಭಾವವಿದೆ, ಯಾವುದೇ ಜೀವಿಯೊಂದಿಗೆ ನನ್ನ ಯಾವುದೇ ವೈರ ಭಾವವಿಲ್ಲ ಯಾರೊಂದಿಗಾದರೂ ವೈರವನ್ನು ಹೊಂದಿದರೆ ಆ ವೈರ ಭಾವವು ಮುಂದೆ ಸಾಗಿ ಉಪ್ಪಿನ ಕಾಯಿ, ಮುರಬ್ಬಾದ ಹಾಗೇ ಬಹಳ ಹುಳಿಯಾಗಿ ಬಿಡುತ್ತದೆ ಹಾಗೂ ಮುಂದೆ ಸಾಗಿ ಅದು ನಿದಾನ ಶಲ್ಯವಾಗಿ ಜನ್ಮ-ಜನ್ಮಾಂತರಗಳ ವರೆಗೆ ಹೆಣ್ಣು ನರಿಯ ಹಾಗೆ ಅಲೆದಾಡಿಸುತ್ತದೆ. ಮುನಿ ಸುಕುಮಾರರಂತೂ ತಮ್ಮ ಸಾಧನೆಯಿಂದ ಪಾರಾದರು ಆದರೆ ಆ ಹೆಣ್ಣು ನರಿ ಪಾರಾಗಲಿಲ್ಲ. ಈ ವೈರಭಾವವನ್ನು ಎಂದಿಗೂ ಹೊಂದಬಾರದು. ವೈರದಿಂದ ಕೋಪವು ಎಂದಿಗೂ ಕೊನೆಗೊಳ್ಳುವುದಿಲ್ಲವೆಂಬುದನ್ನು ಸದಾ ಕಾಲ ಗಮನದಲ್ಲಿಡಬೇಕು. ಕ್ರೋಧವು ಹುಳಿಯ ರೂಪದಲ್ಲಿದ್ದರೆ ವೈರವು ಉಪ್ಪಿನಕಾಯಿ-ಮುರಬ್ಬಾದ ರೂಪದಲ್ಲಿದೆ. ಸಮ್ಯಕ್‌ದೃಷ್ಟಿಯು ಆರು ತಿಂಗಳುಗಳಿಗಿಂತ ಹೆಚ್ಚು ಕಾಲ ವೈರ-ಭಾವವನ್ನು ಹೊಂದಿರುವುದಿಲ್ಲ. ಅನ್ಯಥಾ ಅನಂತಾನುಬಂಧ ಕಷಾಯದಿಂದ ಮಿಥ್ಯಾತ್ವ ಬಂದು ಗುದ್ದುತ್ತದೆ ಹಾಗೂ ದುರ್ಗತಿ ನಿಶ್ಚಿತವಾಗುತ್ತದೆ.

ಕ್ಷಮಾರೂಪಂ ತಪಸ್ವಿನಾಮ್-ತಪಸ್ವಿಗಳ ರೂಪ ಕ್ಷಮೆಯಾಗಿದೆ. ಅವರು ಉಪಸರ್ಗಗಳನ್ನು ಸಹಿಸುವಲ್ಲಿ ಕ್ಷಮಾಶೀಲರಾಗಿದ್ದಾರೆ. ತಪಸ್ವಿಗಳ ಆದರ್ಶ ಪಾರ್ಶ್ವನಾಥರು ಹೇಗೆ ಕ್ಷಮೆ ಮಾಡಿದ್ದಾರೆಂದು ತಿಳಿದಿದೆಯೇ? ಕಮಠನ ಏಕಮುಖ ವೈರತ್ವ ಪಾರ್ಶ್ವನಾಥರ ಬಗ್ಗೆ ಹತ್ತು ಭವಗಳವರೆಗೆ ನಡೆಯಿತು. ಪಾರ್ಶ್ವನಾಥರು ಸದಾಕಾಲ ತಮ್ಮ ಕೊರತೆಗಳನ್ನು ದೂರಮಾಡಿಕೊಳ್ಳುವಲ್ಲಿ ತೊಡಗಿದ್ದರು ಹಾಗೂ ಮನಸ್ಸಿನಲ್ಲಿ ಕ್ಷಮಾ ಭಾವವನ್ನೇ ಧಾರಣೆ ಮಾಡುತ್ತಲಿದ್ದರು. ಪಾರ್ಶ್ವನಾಥರಂತೂ ಸುಗತಿಯಲ್ಲಿಯೇ ಸಾಗುತ್ತಿದ್ದರು ಹಾಗೂ ಉಪಸರ್ಗ ನೀಡುತ್ತಿದ್ದ ಕಮಠನು ದುರ್ಗತಿ ಪಡೆಯುತ್ತಲಿದ್ದ, ಕಮಠನು ಅವರ ಬಗ್ಗೆ ತನ್ನ ಮನಸ್ಸಿನಲ್ಲಿ ಹುಳಿ ಮಾಡಿಕೊಳ್ಳುತ್ತಿದ್ದರೆ ಪಾರ್ಶ್ವನಾಥರು ಆತನ ಕಲ್ಯಾಣದ ಭಾವನೆಯನ್ನೇ ತಾಳುತ್ತಿದ್ದರು. ಇದು ಬಹಳ ದೊಡ್ಡ ಸಂಗತಿಯಾಗಿದ್ದು ಮಹಾನ್ ಜನರ ಜೀವನದ ಆಚರಣೆಯಲ್ಲಿ ಮಾತ್ರ ಕಂಡು ಬರುತ್ತದೆ. ಪಾರ್ಶ್ವನಾಥರಿಗಂತೂ ಸಂಸಾರದಿಂದ ಸದಾ-

ಸದಾಕಾಲಕ್ಕೂ ಬಿಡುಗಡೆ ದೊರಕಿತು. ನೋಡಿ ಸಹೋದರರೇ ಅಂತಿಮ ಪರಿಣಾಮದ ರೂಪದಲ್ಲಿ ಮುನಿ ಪಾರ್ಶ್ವನಾಥರಿಗೆ ಉಪಸರ್ಗದ ಸಮಯದಲ್ಲಿ ಕಮಠನ ಮೇಲೆ ಕ್ಷಮೆ ಮಾಡುತ್ತಾ ಕೇವಲ ಜ್ಞಾನದೊಂದಿಗೆ ಭಗವಂತತ್ವದ ಪ್ರಾಪ್ತಿಯಾಯಿತು. ಅಷ್ಟೆ ಅಲ್ಲ ಕಮಠನ ಕಲ್ಯಾಣದ ಭಾವನೆಯ ಕಾರಣ ಕಮಠನಿಗೂ ಸಮ್ಯಗ್ ದರ್ಶನವಾಯಿತು. ಸಹೋದರರೇ ಮಹಾ ಪುರುಷರ ಕ್ಷಮೆಯಲ್ಲಿ ಇವೆಲ್ಲಾ ಆಗುತ್ತವೆ.

ನಮ್ಮ ಬಗ್ಗೆ ಯಾರಾದರೂ ಕಲುಷಿತ ಭಾವ ಹೊಂದಿದ್ದರೂ ನಮ್ಮ ಆಚರಣೆಯಿಂದ ಅದು ಸಹ ನಿಷ್ಕಲ್ಮಷವಾಗುತ್ತದೆ. ನಮ್ಮ ನಿರ್ಮಲತೆಯು ಅವರ ಕಲುಷತೆಯನ್ನು ದೂರಮಾಡಲು ಕಾರಣವಾಗುತ್ತದೆ. ನಮ್ಮ ಕ್ಷಮಾ ಭಾವ ಅವರ ಶತ್ರುತ್ವ-ವೈರಭಾವವನ್ನು ನಷ್ಟ ಮಾಡುತ್ತದೆ. ಕ್ಷಮಾವಾಣಿಯನ್ನು ಮುನಿರಾಜ ಪಾರ್ಶ್ವನಾಥರ ಉಪಸರ್ಗಾವಸ್ಥೆಯಲ್ಲಿ ಚೆನ್ನಾಗಿ ನೋಡಬಹುದಾಗಿದೆ. ಉಪಸರ್ಗ ಮಾಡಿದ ಕಮಠನು ಹಾಗೂ ಆ ಉಪಸರ್ಗ ಧರಣೇಂದ್ರನ ಮೂಲಕ ನಿವಾರಣೆಯಾಗುತ್ತಲಿದ್ದಿತು ಆದರೆ ಪಾರ್ಶ್ವನಾಥ ಮುನಿರಾಜರು ಅವರಿಬ್ಬರ ಬಗ್ಗೆಯೂ ಸಮಭಾವ ಹೊಂದಿದ್ದರು-ಹೀಗೆಯೂ ಹೇಳಿದ್ದಾರೆ-

**ಕಮಠೇ ಧರಣೇಂದ್ರೇ ಚ ಸ್ವೋ ಚಿತಂ ಕರ್ಮ ಕುರ್ವತಿ।**
**ಪ್ರಭುಸ್ತುಲ್ಯ ಮನೋ ವೃತ್ತಿಃ ಪಾರ್ಶ್ವನಾಥಃ ಜಿನೋಸ್ತು ನಃ॥**

ಇದೇ ಪ್ರಕಾರ ಯಶೋಧರ ಮುನಿರಾಜರ ಜೀವನ ಚರಿತ್ರೆಯಲ್ಲಿ ಕ್ಷಮೆಯನ್ನು ತಿಳಿಯಬಹುದು. 'ಅವರ ಕೊರಳಿನಲ್ಲಿ ಇದು ಕ್ಷಮೆಯ ವಾಸ್ತವಿಕ ಪೌರಾಣಿಕ ರೂಪವಾಗಿದೆಯಾದರೆ ಇಂತಹ ಕ್ಷಮೆಯು ನಮಗೆ ಶಿಕ್ಷಣವನ್ನು ನೀಡಬೇಕು ಹಾಗೂ ಇನ್ನೂ ಇಂತಹ ಬಹಳಷ್ಟು ದೃಷ್ಟಾಂತಗಳಿದ್ದು ಕ್ಷಮೆಯ ಬಗ್ಗೆ ತಾವು ತಿಳಿಯ ಬೇಕು.

ಮಹಾನ್ ಜನರು ಪಾಪವನ್ನು ದ್ವೇಷಿಸಿ ಪಾಪಿಯನ್ನಲ್ಲ ಯಾಕೆಂದರೆ ಪಾಪಗಳನ್ನು ಬಿಟ್ಟು ಪಾಪಿಯು ಸಹ ಪವಿತ್ರನಾಗುತ್ತಾನೆ. ನೋಡಿ ಸಹೋದರರೇ ಶ್ರೀರಾಮನು ಮಾತೆ ಕೈಕೆಯಿಗೆ ಅವಳ ಕೃತ್ಯಕ್ಕಾಗಿ ಕ್ಷಮೆ ಧಾರಣೆ ಮಾಡಿದನು ಅವರ ಮೂಲಕ ಕೊಡಲ್ಪಟ್ಟ 14 ವರ್ಷಗಳ ವನವಾಸವನ್ನು ಸಹ ಪೂರ್ಣ ಮಾಡಿದನು. ಪರಿಣಾಮವಾಗಿ ವನವಾಸದ ನಂತರ ಅವರಿಗೆ ತಮ್ಮ ರಾಜ್ಯದಲ್ಲಿ ರಾಜ್ಯಪದದ ಪ್ರಾಪ್ತವಾಯಿತು. ಧೈರ್ಯ ಮತ್ತು ಕ್ಷಮೆಗಳ ಫಲ ಬಹಳ ಸಿಹಿಯಾಗಿರುತ್ತದೆ. ಋಷಭ ದೇವರ ಮಗ ಭರತನ ಮೂಲಕ ತಮ್ಮ ಬಾಹುಬಲಿಯ ಮೇಲೆ ಚಕ್ರ ಬೀಸಿದಾಗ ಬಾಹುಬಲಿಯ ಕ್ಷಮೆ ಹಾಗೂ ಒಂದು ವರ್ಷದ ಕಠಿಣ ತಪದ ಸಾಧನೆಯ ಪ್ರಭಾವದಿಂದ ಭರತನಿಗೆ ಬಾಹುಬಲಿಯ ಚರಣಗಳಲ್ಲಿ ಯಾಚನೆ ಮಾಡಬೇಕಾಯಿತು ಹಾಗೂ ಕ್ಷಮಹ ಕೋಪ ಬಾಹುಬಲಿ ಮುನೀಶ್ವರರಿಗೆ ಶುಕ್ಲ ಧ್ಯಾನದ ಮಾಧ್ಯಮದಿಂದ ಕೇವಲ ಜ್ಞಾನ ರೂಪದ ಭಗವಾನ ಅರಿಹಂತ ಪದದ ಪ್ರಾಪ್ತವಾಯಿತು ಕ್ಷಮೆಯ ಯಾಚನೆ ಅಥವಾ ಕ್ಷಮೆ ಮಾಡುವುದು ಒಂದು ಮಹಾನ್ ಕಾರ್ಯವಾಗಿದ್ದು, ಪವಿತ್ರ ಧರ್ಮವೂ ಆಗಿದ್ದು ಜೀವದ ಜೀವನವೇ ಬದಲಾಗಬಹುದು. ಬದಲಾಗುವುದೇನು? ಸರಿಯಾದ ಅರ್ಥದಲ್ಲಿ ಕ್ಷಮಾಭಾವದಿಂದ ಆತ್ಮನಿಂದ ಪರಮಾತ್ಮಾ ಲೋಕ ಪೂಜ್ಯ ಸಿದ್ಧರಾಗಬಹುದು.

ಮನಸ್ಸಿನಲ್ಲಿ ಇತರರ ಬಗ್ಗೆ ಕಲುಷತೆ ಇರುವವರೆಗೆ, ಅವರು ನಮ್ಮ ಬಗ್ಗೆ ನಿರ್ಮಲತೆಯ

ಅಪೇಕ್ಷೆಯನ್ನು ಇಡಲಾರರು. ಕ್ಷಮಾಶೀಲ ಜನರೇ ಇದನ್ನು ತಿಳಿದಿದ್ದು ಕ್ರೋಧದಿಂದ ಕ್ರೋಧವನ್ನು ಅಳಿಸಲಾಗದು, ಬೆಂಕಿಯಿಂದ ಬೆಂಕಿಯನ್ನು ಆರಿಸಲಾಗದು, ಕೆಸರಿನಿಂದ ಕೆಸರನ್ನು ಸ್ವಚ್ಛಮಾಡಲಾಗದು, ವೈರದಿಂದ ವೈರವನ್ನು ಸಮಾಪ್ತಗೊಳಿಸಲಾಗದು, ಬದಲಾಗಿ ಮೈತ್ರಿ–ಭಾವ, ಪ್ರೇಮ–ಸೌಹಾರ್ದ, ಕ್ಷಮೆಯಿಂದಲೇ ಸಮಸ್ತ ಕಾರ್ಯಗಳು ಸಂಪನ್ನವಾಗುತ್ತವೆಂದು ಅರಿತಿರುತ್ತಾರೆ. ಕ್ಷಮಾ ಭಾವದಿಂದ ನಮ್ಮ ಶತ್ರು ಸಹ ಇಲ್ಲದಂತಾಗುತ್ತಾನೆ ಹಾಗೂ ನಮ್ಮ ಉಪಕಾರ ಅನೇಕ ಜನ್ಮಗಳವರೆಗೆ ಮರೆಯಲಾಗದು. ವಾಸ್ತವಿಕವಾಗಿ ಶಾಂತಿ ಭಾವನೆಯ ಆಶ್ರಯ ಪಡೆಯುವವರು ಮಹಾಮುನಿಗಳನ್ನು ನೋಡಿ ಜನ್ಮ ಜಾತ ವೈರತ್ವ ಭಾವವಿರುವ ಪಶು ಸಮೂಹ ಸಹ ತಮ್ಮ ಕ್ರೂರತೆಯನ್ನು ಬಿಟ್ಟು ಬಿಡುತ್ತವೆ. ಜ್ಞಾನಾರ್ಣವ ಗ್ರಂಥದಲ್ಲಿ ಆಚಾರ್ಯ ಶುಭಚಂದ್ರರು ಹೀಗೆ ಬರೆದಿದ್ದಾರೆ–

**ಸಾರಂಗಿ ಸಿಂಹಶಾವಂ ಸ್ಪೃಶತಿ ಸುತಧಿಯಾ ನಂದಿನಿ, ವ್ಯಾಘ್ರ ಪೋತಂ।**
**ಮಾರ್ಜಾರೀ ಹಂಸಬಾಲಂ ಪ್ರಣಯ ಪರವಶಾ ಕೇಕಿಕಾಂತಾ ಭುಜಂಗಮ್॥**
**ವೈರಾಣ್ಯಾ ಜನ್ಮಾಜಾತಾನ್ಯಪಿ ಗಲಿತ ಮದಾ ಜಂತವ್ಯೋನ್ಯೇ ತ್ಯಜಂತಿ।**
**ಶ್ರೀತ್ವಾ ಸಾಮ್ಯೈಕಸರೂಢಂ ಪ್ರಶಮಿತ ಕಲುಷಂ ಯೋಗಿನಂ ಕ್ಷೀಣ ಮೋಹಂ॥**

(ಸರ್ಗ 24, ಶ್ಲೋಕ 26)

ಜಿಂಕೆ ಸಿಂಹದ ಮಗುವನ್ನು ತನ್ನ ಮಗನೆಂಬ ಬುದ್ಧಿಯಿಂದ ಸ್ಪರ್ಶಮಾಡುತ್ತದೆ. ಹಸುವು ಹುಲಿಯ ಮರಿಗೆ ಹಾಲು ಕುಡಿಸುತ್ತದೆ. ಬೆಕ್ಕು ಹಂಸದ ಮಕ್ಕಳನ್ನು ಪ್ರೀತಿಯಿಂದ ಲಾಲನೆ ಮಾಡುತ್ತದೆ ಹಾಗೂ ನವಿಲು ಹಾವುಗಳನ್ನು ಪ್ರೀತಿಸ ತೊಡಗುತ್ತದೆ ಹೀಗೆ ಜನ್ಮಜಾತ ವೈರಿಗಳು ಸಹ ವೈರತ್ವವನ್ನು ಕ್ರೂರ ಜಂತುಗಳು ಸಹ ಬಿಟ್ಟು ಬಿಡುತ್ತವೆ. ಯಾವಾಗ ಬಿಡುತ್ತವೆ? ಅವು ಪಾಪಗಳನ್ನು ಶಾಂತಗೊಳಿಸುವ ಮೋಹ ರಹಿತ ಮತ್ತು ಸಮತಾ ಭಾವದಲ್ಲಿ ಪರಿಣಿತರಾದ ಯೋಗಿಗಳ ಆಶ್ರಯ ಪಡೆದಾಗ ಅರ್ಥಾತ್ ಅಂತಹ ಮಹಾಮುನಿಗಳ ಪ್ರಭಾವದಿಂದ ಹಿಂಸಕ ಪಶುಗಳು ತಮ್ಮ ದ್ವೇಷ ಭಾವನೆಯನ್ನು ಬಿಟ್ಟು ಪರಸ್ಪರರಲ್ಲಿ ಪ್ರೀತಿ ಮಾಡತೊಡಗುತ್ತವೆ. ಇಂತಹ ಶಾಂತ ಭಾವನೆಯ ಅಭ್ಯಾಸವು ಈ ಕ್ಷಮೆಯ ಅವಲಂಬನೆಯಿಂದಲೇ ಆಗುತ್ತದೆ.

ಕ್ಷಮೆ ಕೇಳುವುದರಿಂದ ನಮ್ಮ ತಪ್ಪಿನ ಸ್ವೀಕಾರವಾಗುತ್ತದೆ. ಪುನರಾವೃತ್ತಿಯ ಅಭಾವವಾಗುತ್ತದೆ. ಆದರೆ ಮಾನವನ ಎಲ್ಲಕ್ಕಿಂತ ದೊಡ್ಡ ದೌರ್ಬಲ್ಯವನ್ನು ನೀವು ತಿಳಿದಿದ್ದಿರಾ? ಅರೇ ಸಹೋದರರೇ, ಮಾನವ ತನ್ನ ತಪ್ಪನ್ನು ತಪ್ಪೆಂದು ಭಾವಿಸುವುದೇ ತನ್ನ ಅಪಮಾನವೆಂದು ತಿಳಿಯುತ್ತಾನೆ ಹಾಗೂ ಒಂದು ವೇಳೆ ಆ ತಪ್ಪು(ಅಪರಾಧ ಅಥವಾ ದುಷ್ಕೃತ್ಯ ಬೇರೆ ಯಾರಾದರೂ ಮಾಡಿದ್ದರೆ ಅವರನ್ನು ಯಾವುದೇ ರೀತಿಯಲ್ಲಿಯೂ ಬಿಡುವುದಿಲ್ಲ. ಅವರನ್ನು ಎಲ್ಲ ಸ್ಥಾನಗಳಲ್ಲಿ ತಮಾಷೆ ಮಾಡಿಬಿಡುತ್ತಾನೆ, ಪ್ರತಿಯೊಬ್ಬರ ಮುಂದೆ ಅಪಹಾಸ್ಯ ಮಾಡುತ್ತಾನೆ. ಅವರ ಮೇಲೆ ದೀರ್ಘವಾದ ವ್ಯಂಗ್ಯೋಕ್ತಿಗಳನ್ನಾಡುತ್ತಾನೆ, ಇದೆಲ್ಲವೂ ವೈರಭಾವ, ವೈಮನಸ್ಸು, ದ್ವಂದ್ವ, ದ್ವೇಷ, ವಿರೋಧ ಹೆಚ್ಚಿಸಲು ಕಾರಣವಾಗುತ್ತವೆ. ಆದ್ದರಿಂದಲೇ ಮಾನವ ಕೊರತೆಗಳ ಗೊಂಬೆಯಾಗುತ್ತಾನೆ ಯಾವುದಾದರೊಂದು ವಿಷಯದಲ್ಲಿ ಜೀವನದಲ್ಲಿ ಮತಭೇದ ಮನಸ್ತಾಪ, ಹೊಡೆದಾಟವಾದರೂ ಸಹ, ಪರಿವಾರದಲ್ಲಿ ಒಡಕು ಉಂಟಾಗಿ ಕೋರ್ಟು–ಕಛೇರಿ ನ್ಯಾಯಾಲಯಗಳಿಗೆ ಹೋಗುವ

ಪ್ರಸಂಗ, ಪರಸ್ಪರ ಹಣದ ನಾಶ. ಒಬ್ಬರು ಇನ್ನೊಬ್ಬರ ಮೇಲೆ ಕೆಸರನ್ನು ಎರಚಾಡುವುದು. ಒಬ್ಬರು ಇನ್ನೊಬ್ಬರನ್ನು ಕೀಳಾಗಿ ಕಾಣುವುದು ಇವೆಲ್ಲ ಆಗುವ ಮುನ್ನ ಕ್ಷಮಾವಾಣಿ ಪರ್ವವನ್ನು ಸ್ವೀಕರಿಸಿ ಹೃದ್ಯಂಗಮ ಮಾಡಿಕೊಳ್ಳುವುದು ಶ್ರೇಷ್ಠವಾಗಿದೆ. ಸಹೋದರರೇ ಅ ಸಮಯದಲ್ಲಿ ನಾನು ತಪ್ಪು/ ಅಪರಾಧದ ಬಗ್ಗೆ ಕ್ಷಮೆ ಕೇಳಿಕೊಂಡರೆ ಜನರು ನನ್ನನ್ನು ಅಂಜುಬುರುಕನೆಂದ ಭಾವಿಸುತ್ತಾರೆಂದು ಎಂದಿಗೂ ಚಿಂತಿಸಬಾರದು. ಹೇಡಿ ಎನ್ನುತ್ತಾರೆ. ಅಥವಾ ಜನರು ಏನೆಂದಾರು, ಬೇರೆಯವರ ಮೇಲೆ ಯಾವ ಪ್ರಭಾವ ಉಂಟಾದೀತು? ಜನರ ದೃಷ್ಟಿಯಲ್ಲಿ ನಾವು ಸದಾಕಾಲಕ್ಕೂ ಕೀಳಾಗಿ ಬಿಡುತ್ತವೆ. ನಮ್ಮ ಮಾನ ಮರ್ಯಾದೆ ಎಲ್ಲವೂ ಧೂಳಿ ಪಟವಾಯಿತು. ನಾವು ಎಲ್ಲಿಯೂ ಮುಖ ತೋರಿಸುವ ಹಾಗಿಲ್ಲ ಇತ್ಯಾದಿ, ಇತ್ಯಾದಿ ಅನೇಕ ವಿಪರೀತ ವ್ಯರ್ಥವಾದ ಮಾತುಗಳೇ ಪತನದ ಕಡೆಗೆ ಕೊಂಡೊಯ್ಯತ್ತವೆ ಹಾಗೂ ಹಗಲು ರಾತ್ರಿ ವೈರ–ವಿರೋಧ ಅಸೂಯೆ–ದ್ವೇಷಗಳು ಹೆಚ್ಚಾಗುತ್ತವೆ. ಆದ್ದರಿಂದ ಸಹೋದರರೇ, ತಪ್ಪನ್ನು ಒಪ್ಪಿಕೊಂಡು ಕ್ಷಮೆ ಕೇಳಿ ನಮ್ಮ ಭವಿಷ್ಯದ ಜೀವನವನ್ನು ಸುರಕ್ಷಿತ ಮಾಡಿಕೊಳ್ಳುವುದೇ ಬುದ್ಧಿವಂತಿಕೆಯಾಗಿದೆ. ತಪ್ಪು ಮಾಡುವುದು ಮನುಷ್ಯನ ಸ್ವಭಾವ ಒಪ್ಪಿಕೊಳ್ಳುವುದು, ಭಗವಂತನ ಸ್ವರೂಪ ಅದು ದಿವ್ಯತೆಯಾಗಿದೆ (error is human, to confess is devine).

ಜೀವನದಲ್ಲಿ ನಾವು ಅನೇಕ ಬಾರಿ ವಿಪರೀತ ವೃತ್ತಿಯುಳ್ಳವರಿಂದ ಕ್ಷಮೆ ಕೇಳಬೇಕಾದ ಪ್ರಸಂಗ ಬರುತದ್ತೆ. ಆದರೆ ಅದು ಈ ಮಾನಸಿಕ ಅವಸ್ಥೆಯಲ್ಲಿ ಆಗುವುದೇ ಇಲ್ಲ ಅಂತಹ ಪ್ರಸಂಗದಲ್ಲಿ ಅವರು ತಮ್ಮ ಭಾವಗಳನ್ನು ಅರಿಯದೇ ತಮ್ಮ ಮನಸ್ಸನ್ನು ಇನ್ನೂ ಹೆಚ್ಚು ಕಲುಷಿತ ಮಾಡಿಕೊಳ್ಳುತ್ತಾರೆ. ಇಂತಹ ವಿಪರೀತ ಪರಿಸ್ಥಿತಿಯಲ್ಲಿ ನಾವು ದೂರದಿಂದಲೇ ಮನಸ್ಸಿನಲ್ಲಿಯೇ ಕ್ಷಮಾ ಭಾವ ಧಾರಣೆ ಮಾಡುವುದು ಒಳ್ಳೆಯದು. ಮುನಿರಾಜರು ಪ್ರತಿದಿನ ಮೂರು ಕಾಲದಲ್ಲಿ ಎಲ್ಲಾ ಪ್ರಾಣಿಗಳ ಬಗ್ಗೆ ಕ್ಷಮಾಭಾವವನ್ನು ಧರಿಸಲು ಪ್ರತಿಕ್ರಮಣ ಸಾಮಾಯಿಕ ಮಾಡುತ್ತಾರೆ. ಅವರು ಎಲ್ಲರ ಬಳಿ ಕ್ಷಮೆ ಕೇಳಲು ಹೋಗುವುದಿಲ್ಲ. ಆದರೆ ತಮ್ಮ ಮನಸ್ಸಿನಲ್ಲಿ ಎಲ್ಲರ ಬಗ್ಗೆ ಕ್ಷಮಾಭಾವವನ್ನು ತಾಳುತ್ತಾರೆ. ಒಂದು ವೇಳೆ ಯಾರ ಬಗ್ಗೆಯಾದರೂ ನಮ್ಮ ಮನಸ್ಸಿನಲ್ಲಿ ಕಲುಷಿತ ಭಾವನೆ ಬಂದಿದ್ದರೂ ಸಹ, ಮನಸ್ಸು ಯಾರ ಬಗ್ಗೆಯಾದರೂ ಮಲೀನವಾಗಿದ್ದರೆ ನಮ್ಮ ಕಡೆಯಿಂದ ಅವುಗಳನ್ನು ತೆಗೆದು ಬಿಡಬೇಕು, ನಮ್ಮ ಮನಸ್ಸಿನ ಗಂಟುಗಳನ್ನು ಬಿಚ್ಚಿ ಬಿಡಬೇಕು. ಎರಡನೇದಾಗಿ ನಮ್ಮ ಮನಸ್ಸನ್ನು ಶುಭ್ರಗೊಳಿಸಿದರೆ ಸರಿ ಅವರು ತಮ್ಮ ಗಂಟುಗಳನ್ನು ಬಿಚ್ಚಿದಾಗ ಬಿಚ್ಚಲಿ. ಆದರೆ ನಾವಂತೂ ನಮ್ಮ ಕರ್ತವ್ಯವನ್ನು ಸ್ವಯಂ ಪೂರ್ಣಗೊಳಿಸೋಣ, ಬೇರೆಯವರು ಮಾಡಲಿ ಅಥವಾ ಮಾಡದಿರಲಿ ಅದು ಅವರ ಸ್ವಯಂದ ರುಚಿಯಾಗಿದೆ. ಅವರ ಅವರದೇ ಆದ ದಾಯಿತ್ವವಿದೆ. ಆದರೆ ನಾವು ನಮ್ಮ ಕಡೆಯಿಂದ ಕ್ಷಮಾಭಾವವನ್ನು ಹೊಂದಿ ವೈರಭಾವ, ಕಲುಷತೆಗಳಿಂದ ರಹಿತರಾಗಿದ್ದರೆ ಕ್ಷಮಾ ಪರ್ವವನ್ನು ಆಚರಿಸಿದ್ದರ ಸಾರ್ಥಕತೆ ಇದೆ. ಧರ್ಮಭಾವನಾ ಶತಕದಲ್ಲಿ ಒಂದು ಕವಿತೆ ಬರೆಯಲಾಗಿದೆ ಅದರ ಆಳವಾದ ಚಿಂತನೆಯನ್ನು ಮಾಡಿರಿ.

**ಕ್ಷಮಾ ಭಾವದ ಪರ್ವದ ಮಾಡಲು, ಮೊದಲು ಎಲ್ಲರನು ಕ್ಷಮಿಸಿರಿ।**
**ಮತ್ತೆ ಎಲ್ಲರ ಕ್ಷಮೆಯಾಚಿಸಿ, ಮನದಲಿ ನಿರ್ಮಲ ಭಾವವ ಧರಿಸಿರಿ॥**

**ಶತ್ರುವಿನ ಕ್ಷಮಾ ಮಾಡದಿರೆ, ಕರೆಯಲಾಗದು ಕ್ಷಮೆಯೆಂದು।**
**ಈ ಜಗದಲಿ ಕಷಾಯ ಭಾವನೆಯಂ ಜನಿಪುದು ವೈರಭಾವವು॥**

ಸಹೋದರರೇ ಕ್ಷಮಾವಾಣಿ ಮಾಡುವುದರಿಂದ ನಮ್ಮ ಭಾವಗಳಲ್ಲಿ ನಿರ್ಮಲತೆ ಬರುತ್ತದೆ. ಮನಸ್ಸು ಹಗುರವೆನಿಸುತ್ತದೆ ಹಾಗೂ ಪರಸ್ಪರರಲ್ಲಿ ವಾತ್ಸಲ್ಯದ ಮಕರಂದ ಉಕ್ಕಿ ಹರಿಯುತ್ತದೆ. 'ಕ್ಷಮಾ ವೀರಸ್ಯ ಭೂಷಣಂ' ಕ್ಷಮೆಯು ವೀರರಿಗೆ ಆಭರಣವಾಗಿದೆ. ಇದೇ ನಮ್ಮ ಪರಮ ಮಿತ್ರನಾಗಿದೆ ಹಾಗೂ ಸಂಸಾರ ಸಮುದ್ರದಿಂದ ಪಾರು ಮಾಡುವ ಪರಮ ನಾವೆ ಆಗಿದೆ. ಆದ್ದರಿಂದ ನಾವು ಸ್ವಲ್ಪ ತಪ್ಪಾಗಿದ್ದರೂ ನಮ್ಮ ಜೀವನದಲ್ಲಿ ಶಿಷ್ಟಾಚಾರವನ್ನು ಅವಶ್ಯವಾಗಿ ಕಲಿಯಬೇಕು ಹಾಗೂ ನನ್ನನ್ನು ಕ್ಷಮಿಸಿ ಎಂದು ಹೇಳಬೇಕು. ಸಾಕು, ನಮ್ಮ ಜೀವನ ಮಂಗಲಮಯ ವಾಗುತ್ತದೆ. ಈ ಕವಿತೆಯ ಮೇಲೆ ಅವಶ್ಯವಾಗಿ ಆಳವಾಗಿ ವಿಚಾರ ಮಾಡಿ ಅದನ್ನು ನಿಮಗೆ ಕೇಳಿಸಿ ನಾನು ನನ್ನ ವಾಣಿಗೆ ವಿರಾಮ ನೀಡುತ್ತಿದ್ದೇನೆ.

**ಕೇವಲ ಕ್ಷಮೆ ಎಂದರೆ ಪ್ರಾಣಿ, ಆಗದು ಕ್ಷಮಾವಾಣಿ।**
**ವೈರ ಎಂದಿಗೂ ಇಡೆವು ನಾವು, ಆಗಿದೆ ಇದುವೆ ಧರ್ಮದ ರೀತಿ॥**
**ಸಕಲ ಜಗದಲಿ ಹರಡಲಿ ಪ್ರೇಮ, ಯಾರಲ್ಲಿಯೂ ಇರದಿರಲಿ ಭೇದ।**
**ಎಲ್ಲ ಧರ್ಮದ ಜನರೆಲ್ಲಾ ಸುಖವಾಗಿರಲಿ ಯಾರಿಗೂ ಇರದಿರಲಿ ಖೇದ ॥101॥**

**ಧರ್ಮಕೆ ಹೇಳ್ವರು ದಶಲಕ್ಷಣವೆಂದು, ಪರಮ ಪೂಜ್ಯವೆಂದು ಭಾವಿಪರು।**
**ಪಾಲನೆ ಮಾಡುವವರಿಗೆ ಜಗದಲಿ ಆಗದು ಭ್ರಮೆಯು॥**
**ಜಗದಲಿ ಧರ್ಮಿಗಳಾಗಿ ನಾವು, ಸಫಲ ಮಾಡುವ ನರಭವವ।**
**ತ್ಯಜಿಸಿ ಅಸತ್ಯ ವೈಭವವ, ಪಡೆವೆವು ಆತ್ಮ ವೈಭವವ ॥97॥**

**॥ಮಹಾವೀರ ಭಗವಂತರಿಗೆ ಜಯವಾಗಲಿ॥**

# ಪರಮಪೂಜ್ಯ ಮುನಿಶ್ರೀ 108 ಆರ್ಜವಸಾಗರ ಮಹಾರಾಜರು
## ಜೀವನ ಪರಿಚಯ

| | | |
|---|---|---|
| ಪೂರ್ವ ಹೆಸರು | : | ಪಾರಸಚಂದ ಜೈನ್ |
| ಜನ್ಮ ದಿನಾಂಕ | : | 11.09.1967, ಭಾದ್ರ, ಶುಕ್ಲ ಅಷ್ಟಮಿ, ವೀರ ನಿರ್ವಾಣ 2493 |
| ಜನ್ಮ ಸ್ಥಳ | : | ಪುಟಿರಾಕಲ, ಮಧ್ಯ ಪ್ರದೇಶ |
| ತಂದೆ ಹೆಸರು | : | ಶ್ರೀ ಸಿಕರ್ ಚಂದ್ ಜೈನ್ |
| ತಾಯಿ ಹೆಸರು | : | ಶ್ರೀಮತಿ ಮಾಯಾದೇವಿ |
| ವೈರಾಗ್ಯಕ್ಕೆ ಕಾರಣ | : | ಆರುಗುರಾಣಿ ಗ್ರಂಥ ಪಠಣ ಮತ್ತು ಆಚಾರ್ಯ ಶ್ರೀ 108 ವಿದ್ಯಾಸಾಗರ್ ಮಹಾರಾಜರ ದರ್ಶನದಿಂದ |
| ಶಿಕ್ಷಣ | : | ಪ್ರ.ಬಿ.ಎ. |
| ಬ್ರಹ್ಮಚರ್ಯವ್ರತ | : | 19.12.1984 ಅತಿಶಯ ಕ್ಷೇತ್ರ ಪನಾಗರ (ಮಧ್ಯ ಪ್ರದೇಶ) |
| ಏಳನೇ ಪ್ರತಿಮಾಧಾರಿ | : | 1984, ಸಿದ್ಧಕ್ಷೇತ್ರ, ಆಹಾರಜೀ |
| ಕ್ಷುಲ್ಲಕ ದೀಕ್ಷೆ | : | 08.11.1985 ಸಿದ್ಧಕ್ಷೇತ್ರ ಆಹಾರಜೀ |
| ಐಲಕ ದೀಕ್ಷೆ | : | 10.07.1987 ಅತಿಶಯ ಕ್ಷೇತ್ರ ಥೂಬೋನಜೀ |
| ಮುನಿ ದೀಕ್ಷೆ | : | 31.03.1988 ಮಹಾವೀರ ಜಯಂತಿ ಸಿದ್ಧಕ್ಷೇತ್ರ ಸೋನಾಗಿರಿ. |
| ದೀಕ್ಷಾಗುರು | : | ಆಚಾರ್ಯ ಶ್ರೀ ವಿದ್ಯಾಸಾಗರ ಮಹಾರಾಜರು |
| ದೀಕ್ಷಾ ನಾಮ | : | ಮುನಿಶ್ರೀ 108 ಆರ್ಜವಸಾಗರ ಮಹಾರಾಜರು |

## ಚಾತುರ್ಮಾಸ ಧಾರಣೆ

| | | |
|---|---|---|
| 1985 | : | ಆಹಾರ್‌ಜೀ, (ಮಧ್ಯಪ್ರದೇಶ) |
| 1986 | : | ಪಪೋರ, (ಮಧ್ಯಪ್ರದೇಶ) |
| 1987 | : | ಥೂವಂಜಿ, (ಮಧ್ಯಪ್ರದೇಶ) |
| 1988 | : | ಜಬ್ಬಲ್‌ಪುರ, ಮಡಿಯಾಜಿ, (ಮಧ್ಯಪ್ರದೇಶ) |
| 1989 | : | ಕುಂಡಲಪುರ, (ಮಧ್ಯಪ್ರದೇಶ) |
| 1990 | : | ಮುಕ್ತಾಗಿರಿ ಸಿದ್ಧಕ್ಷೇತ್ರ, (ಮಹಾರಾಷ್ಟ್ರ) |
| 1991 | : | ಕೋಪರ್‌ಗಾಂವ್ (ಮಹಾರಾಷ್ಟ್ರ) |
| 1992 | : | ಸಾಂಗ್ಲಿ (ಮಹಾರಾಷ್ಟ್ರ) |
| 1993 | : | ಶ್ರವಣಬೆಳಗೊಳ, (ಕರ್ನಾಟಕ) |
| 1994 | : | ದಾವಣಗೆರೆ, (ಕರ್ನಾಟಕ) |
| 1995 | : | ಪೊನ್ನೂರ್‌ಮಲೈ, (ತಮಿಳುನಾಡು) |
| 1996 | : | ಪೊನ್ನೂರ್‌ಮಲೈ, (ತಮಿಳುನಾಡು) |
| 1997 | : | ಕನ್ನಲಂ, (ತಮಿಳುನಾಡು) |

| | | |
|---|---|---|
| 1998 | : | ಕುಂದ ಕುಂದ ನಗರ್,ವಿಷಾಕಾಚಾರ್ಯ ತಪೋಭೂಮಿ, (ತಮಿಳುನಾಡು) |
| 1999 | : | ನಲ್ಲವನ್ ಪಾಳ್ಯ, (ತಮಿಳುನಾಡು) |
| 2000 | : | ಕುಂದ ಕುಂದ ನಗರ್,ವಿಷಾಕಾಚಾರ್ಯ ತಪೋಭೂಮಿ, (ತಮಿಳುನಾಡು) |
| 2001 | : | ಪುದುಕಾಮೂರ್ ಆರಣಿ (ತಮಿಳುನಾಡು) |
| 2002 | : | ಶಿವಮೊಗ್ಗ (ಕರ್ನಾಟಕ) |
| 2003 | : | ಕೋಪರ್‌ಗಾಂವ್ (ಮಹಾರಾಷ್ಟ್ರ) |
| 2004 | : | ಟಿ.ಟಿ. ನಗರ್, ಭೂಪಾಲ್ (ಮಧ್ಯಪ್ರದೇಶ) |
| 2005 | : | ಅಶೋಕ್‌ನಗರ್, (ಮಧ್ಯಪ್ರದೇಶ) |
| 2006 | : | ರಾಂಚಿ, (ಝಾರ್‌ಖಂಡ್) |
| 2007 | : | ದಮೋಹ್, (ಮಧ್ಯಪ್ರದೇಶ) |
| 2008 | : | ಗ್ವಾಲಿಯರ್, (ಮಧ್ಯಪ್ರದೇಶ) |
| 2009 | : | ಅಜ್‌ಮೀರ್, (ರಾಜಸ್ಥಾನ) |
| 2010 | : | ಜೈಪುರ, (ರಾಜಸ್ಥಾನ) |
| 2011 | : | ರಾಮ್‌ಗಂಜ್ ಮಂಡಿ, (ರಾಜಸ್ಥಾನ) |
| 2012 | : | ಸೂರತ್, (ಗುಜರಾತ) |
| 2013 | : | ಇಂದೋರ್, (ಮಧ್ಯಪ್ರದೇಶ) |
| 2014 | : | ಖಾತೇಗಾಮವ್,(ಮಧ್ಯಪ್ರದೇಶ) |
| 2015 | : | ತಾರಂಗಾ ಸಿದ್ಧಕ್ಷೇತ್ರ, (ಗುಜರಾತ) |
| 2016 | : | ಮಂಡಿದೀಪ್, (ಭೂಪಾಲ್) |

ಕೃತಿಗಳು : ಧರ್ಮಭಾವನಾ ಶತಕ, ಜೈನಾಗಮ ಸಂಸ್ಕಾರ, ತೀರ್ಥೋದಯ ಕಾವ್ಯ, ಪರಮಾರ್ಥಸಾಧನಾ, ಬಚಪನ ಕಾ ಸಂಸ್ಕಾರ, ಸಮ್ಯಕ್ ಧ್ಯಾನ ಶತಕ, ಜೈನ ಧರ್ಮಮೇ ಕರ್ಮ ವ್ಯವಸ್ಥಾ, ನೇಕಜೀವನ, ಪರ್ಯೂಷಣ ಪೀಯೂಷ, ಸಾಮ್ಯಭಾವನಾ, ಅನೇಕ ಅಕ್ಷ್ಟಕ ಹಾಗೂ ಹಿಂದಿ, ತಮಿಳು ಕನ್ನಡ ಮುಂತಾದ ಭಾಷೆಗಳಲ್ಲಿ ಕವಿತೆಗಳು.

ಪದ್ಯಾನುವಾದ : ಗೊಮ್ಮಟೇಶ ಥುದಿ, ಬಾರಸಾಣುವೆಕ್ಖಾ, ಇಷ್ಟೋಪದೇಶ.

* ಆಚಾರ್ಯ ಪದವಿ : 21.01.2015, ಇಂದೂರ
ಆಚಾರ್ಯ ಶ್ರೀ ಶ್ರೀಮಂಧರಸಾಗರ ಮಹಾರಾಜರಿಂದ ಘೋಷಣೆ

****************************************************

# ಪರ್ಯೂಷಣಾಮೃತ

ಪರ್ಯೂಃಣಾಮೃತ ಕೃತಿಯಲ್ಲಿ ಪರಮ ಪೂಜ್ಯ ರಾಷ್ಟಸಂತ ಶಿರೋಮಣಿ ಆಚಾರ್ಯ ಪ್ರವರ ಶ್ರೀ 108 ವಿದ್ಯಾಸಾಗರ ಮಹಾರಾಜರ ಪರಮ ಶಿಷ್ಯ ಅಧ್ಯಾತ್ಮಯೋಗಿ ಮುನಿಶ್ರೀ 108 ಆರ್ಜವ ಸಾಗರಜೀ ಮಹಾರಾಜರ ಮೂಲಕ ದಶಲಕ್ಷಣ ಧರ್ಮಗಳ ಉದ್ಬೋಧನವಿದೆ. ಈ ಉದ್ಬೋಧನಗಳನ್ನು ಮುನಿಶ್ರೀಗಳು ಅಶೋಕನಗರ ಜಿಲ್ಲೆಯಲ್ಲಿ ಪರ್ಯೂಷಣ ಪರ್ವದ ಪಾವನ ಅವಸರದಲ್ಲಿ ಸರಳತೆ ಹಾಗೂ ಭಾವ ಪ್ರಣತಾ ಪೂರ್ವಕ ಪ್ರಸ್ತುತ ಪಡಿಸಿದ್ದರು. ಪ್ರಸ್ತುತ ಕೃತಿಯು ವ್ಯಕ್ತಿಗಳ ಗುಣಾತ್ಮಕ ಪರಿವರ್ತನೆ ಹಾಗೂ ದಶಧರ್ಮಗಳು ಅಮೃತಪಾನ ವ್ಯವಹಾರಿಕ ಜೀವನದಲ್ಲಿ ಅಳವಡಿಸಿ ಕೊಳ್ಳವ ಕಾರಣ ಸಾರ್ಥಕ ಹಾಗೂ ಪ್ರಬಲ ಪ್ರೇರಣಾದಾಯಿಕ ಹಾಗೂ ಮಾರ್ಗದರ್ಶಕವಾಗಿವೆ. 242 ಪುಟಗಳ ಈ ಕೃತಿಯಲ್ಲಿ ಅನೇಕ ಉದಾಹರಣೆ ವ್ಯಾಖ್ಯಾನ ಪೌರಾಣಿಕ ಸಂದರ್ಭ ಹಾಗೂ ಪ್ರಸಂಗ ಹಾಗೂ ಸೈದ್ಧಾಂತಿಕ ಚರ್ಚೆಗಳನ್ನು ಸಮಾವೇಶ ಸ್ವಾದ್ಯಾಯದ ಕಾರಣ ಪ್ರೇರಣಾದಾಯಿಕವಾಗಿದೆ.

# ಸಾಂದರ್ಭಿಕ ಗ್ರಂಥಗಳು


1. ಸ್ವಾಮಿ ಕಾರ್ತಿಕೇಯಾನು ಪ್ರೇಕ್ಷಾ
2. ಬಾರಸಾಣುವೆಕ್ಖಾ
3. ತೀರ್ಥೋದಯ ಕಾವ್ಯ
4. ಷಟ್ ಖಂಡಾಗಮ ಧವಲ ಪುಟ12
5. ಧರ್ಮಭಾವನಾ ಶತಕ
6. ಸರ್ವಾರ್ಥಸಿದ್ಧಿ
7. ರತ್ನಕರಂಡಕ ಶ್ರಾವಕಾಚಾರ
8. ಪದ್ಮಪುರಾಣ
9. ಜ್ಞಾನಾರ್ಣವ
10. ನಿಯಮಸಾರ
11. ದಶ–ಲಕ್ಷಣ–ಧರ್ಮ–ಪೂಜನ
12. ಪದ್ಮನಂದಿ ಪಂಚವಿಂಶತಿಕಾ
13. ರಾಮಚರಿತ ಮಾನಸ
14. ಸರ್ವೋಪಯೋಗಿ ಶ್ಲೋಕ ಸಂಗ್ರಹ
15. ಗೊಮ್ಮಟಸಾರ ಜೀವಕಾಂಡ
16. ತತ್ತ್ವಾರ್ಥಸೂತ್ರ
17. ಇಷ್ಟೋಪದೇಶ
18. ಭಗವತಿ–ಆರಾಧನಾ
19. ಸಮಾಧಿತಂತ್ರ
20. ಪ್ರತಿಕ್ರಮಣ ಪಾಠ
21. ಕಾತಂತ್ರ
22. ಮನುಸ್ಮೃತಿ
23. ಪಂಚ ಸಂಗ್ರಹ (ಪ್ರಾಕೃತ)
24. ಪ್ರವಚನಸಾರ
25. ಪರಮಾನಂದ ಸ್ತೋತ್ರ
26. ಮೂಲಾಚಾರ (ಪೂರ್ವಾರ್ಧ)
27. ಕ್ಷತ್ರ ಚೂಡಾಮಣಿ
28. ತತ್ತ್ವಾರ್ಥರಾಜವಾರ್ತಿಕ
29. ಸ್ವಯಂಭೂ ಸ್ತೋತ್ರ
30. ಸೋಲಹಕಾರಣ ಪೂಜಾ
31. ದ್ರವ್ಯ ಸಂಗ್ರಹ
32. ಕುರಳ್ ಕಾವ್ಯ
33. ವೈರಾಗ್ಯ ಭಾವನಾ
34. ಸಮಯಸಾರ
35. ಕಷಾಯ ಪಾಹುಡ
36. ಪುರುಷಾರ್ಥಸಿದ್ಧ್ಯುಪಾಯ
37. ಆತ್ಮಾನು ಶಾಸನ
38. ಸಾಗಾರ ಧರ್ಮಾಮೃತ
39. ಶೀಲಪಾಹುಡ
40. ಮೂಕಮಾಟಿ
41. ಯೋಗ ಶಾಸ್ತ್ರ
42. ಛಹಢಾಲಾ
43. ಪಾರ್ಶ್ವನಾಥ ಸ್ತೋತ್ರ

# ಗ್ರಂಥ ಪ್ರಕಟಣೆಗೆ ಧನಸಹಾಯ ಮಾಡಿದ ಯಾತ್ರಾ ತಂಡ

1. ಪ್ರಸನ್ನಕುಮಾರ .ಎ
2. ಲೋಲಾ ಪಿ. ಕುಮಾರ
3. ಶಶಿಕಲಾ ಸಂಪತ್ತ
4. ರೂಪಕಲಾ ಎ.ಆರ್
5. ಸುಧಾ .ಬಿ
6. ಪಾರ್ಶ್ವನಾಥ ವಿ.ಪಿ
7. ನಾಗರತ್ನಮ್ಮ
8. ಜೀವಂಧರಕುಮಾರ ಕೆ. ಹೋತಪೇಟಿ
9. ಸುನೀತಾ ಜೆ. ಕುಮಾರ
10. ಸರೋಜಾ ಹೋತಪೇಟಿ
11. ವಜ್ರಕುಮಾರ ಬಿ.
12. ಆದಿರಾಜಯ್ಯ
13. ಜೀವರತ್ನ
14. ವಸಂತಕುಮಾರ
15. ಡಾ॥ ಬ್ರಹ್ಮರಾಜ
16. ನಲಿನಾ ಸಿ.ಪಿ
17. ಪ್ರಭಾಚಂದ್ರಯ್ಯ
18. ವಸಂತಾ
19. ನಾಗಮಾಲಾ ಶ್ರೀಪಾಲ
20. ವಿಜಯಕುಮಾರ ಎಸ್.ಎ
21. ನಂದಾ ಪ್ರಭಾಕರ
22. ಅನಂತರಾಜ
23. ಶಾಂತಕುಮಾರ .ಪಿ
24. ಭಾನುಕುಮಾರ
25. ಪುಷ್ಪಲತಾ
26. ಡಾ॥ ಕಾಂತರಾಜ ಜಿ.ಎ
27. ಧರಣೇಂದ್ರಯ್ಯ ಜಿ
28. ಅನಂತರಾಜಯ್ಯ ಎಸ್.ಪಿ
29. ಅನಿತಾ ಕೆ.ಪಿ
30. ಚಂಪಾವತಿ
31. ಮನೋಹರಾ ಜಿ.ವಿ
32. ಜೀವಂಧರ ಹೆಚ್.ಎನ್
33. ಜ್ವಾಲಾಮಾಲಾ ಹೆಚ್.ಜೆ
34. ಚಂದನಾ
35. ಸಂದೀಪಕುಮಾರ
36. ಸಿದ್ದೇಶ
37. ನಿರ್ಮಲಮ್ಮ

